# ಭಾರತೀಪುರ

**ಯು ಆರ್ ಅನಂತಮೂರ್ತಿ**

ಅಕ್ಷರ ಪ್ರಕಾಶನ,

ಹೆಗ್ಗೋಡು (ಸಾಗರ)

ಆಕರ: ಕಣಜ




---

ಈ ಹೊತ್ತಗೆಯನ್ನು ಅಧ್ಯಯನ-ಪರಾಮರ್ಶೆಗಳಿಗಾಗಿ ಮಾತ್ರ ನೀಡಲಾಗಿದೆ. ಪುಸ್ತಕವನ್ನು ಕೊಂಡು ಓದಿ.

**ಕನ್ನಡ ಪುಸ್ತಕಗಳನ್ನು ಮುಕ್ತವಾಗಿ ಪಡೆದುಕೊಳ್ಳಲು ಭೇಟಿ ಕೊಡಿ**:

http://kannadanudi.wikidot.com

ಒಬ್ಬನೇ ನಡೆಯುವಾಗ ಜಗನ್ನಾಥ ಹೊಂಡಗಳನ್ನು ಬಳಸುವುದಿಲ್ಲ.... ಹಾರುತ್ತಾನೆ. ಅದೂ ಎಳೆ ಬಿಸಿಲು, ಡಿಸೆಂಬರ್ ದಿನಗಳ ಚಳಿ, ಜೋರಾಗಿ ನಡೆಯಲು ಖುಷಿ. ಬೆಳಿಗ್ಗೆ ಕಾಫಿ ತಿಂಡಿ ಮುಗಿಸಿದವನೇ ಶ್ರೀಪತಿರಾಯರನ್ನು ನೋಡಿಬರುತ್ತೇನೆಂದು ಚಿಕ್ಕಿಗೆ ಹೇಳಿ ಪೇಟೆ ಕಡೆ ಹೊರಟಿದ್ದ. ಅಕ್ಕಪಕ್ಕದ ಗಿಡಗಳ ಎಲೆ ಚಿವುಟಿ ಮೂಸುತ್ತ, ಶ್ರೀಪತಿರಾಯರಿಗೆ ತಾನು ಸುಮಾರು ಒಂದು ತಿಂಗಳಿಂದ ಹವಣಿಸುತ್ತಿರುವುದನ್ನು ಹೇಗೆ ವಿವರಿಸಬೇಕೆಂದು ಯೋಚಿಸುತ್ತಾ ವೇಗವಾಗಿ ಗುಡ್ಡ ಇಳಿಯುತ್ತಿದ್ದ ಜಗನ್ನಾಥನಿಗೆ ಬೆಳ್ತಂಗಡಿಯ ನರಹರಿರಾಯರು ಎದುರಾದರು. ತಲೆಗೆ ಮುಂಡಾಸು, ಕಿವಿಯಲ್ಲಿ ಒಂಟಿ, ಸುಕ್ಕುಬಿದ್ದ ಮುಖ – ಕಾತರದ ಕಣ್ಣುಗಳು.

'ಏನು ದೇವರ ದರ್ಶನಕ್ಕೆ ಹೊರಟಿದ್ದೊ?'

ಚೀಲ ಮತ್ತು ಕೊಡೆಯನ್ನು ಒಟ್ಟಿಗೇ ಹಿಡಿದು ನಮಸ್ಕಾರ ಮಾಡಿದರು. ನೂರು ಕಡೆ ತೇಪೆ ಹಾಕಿದ ಬೂದು ಬಣ್ಣಕ್ಕೆ ತಿರುಗಿದ ಕೊಡ, ಒಂದು ಒಂಟಿಗೆ ಹರಳಿಲ್ಲ, ಧೂಳು ತುಂಬಿದ ಕಾಲಲ್ಲಿ ಚಪ್ಪಲಿಯಿಲ್ಲ.

'ಇಲ್ಲ ಹೀಗೇ ಪೇಟೆಗೇಂತ...'

ಜಗನ್ನಾಥ ಅವರ ಮಾತಿಗೆ ಕಾದು ನಿಂತ. ನರಹರಿರಾಯರು ಪಕ್ಕದ ಕಿಸೆಗೆ ಕೈ ಹಾಕಿ ಹುಡುಕಿದರು. ಇವರನ್ನು ಮನೆಗೆ ಕರೆದುಕೊಂಡು ಹೋಗಿ ಕಾಫಿ ಕೊಟ್ಟು ಉಪಚರಿಸದೆ ನಡೆದು ಬಿಡುವುದು ಸರಿಯೆ – ಜಗನ್ನಾಥನಿಗೆ ಸಂದಿಗ್ಧವಾಯಿತು.

'ಮನೆಗೆ ಹೋಗಿ ಬಾಯಾರಿಕೇಗೆ ಏನಾದರೂ ತಗೊಳ್ಳಿ, ಮಧ್ಯಾಹ್ನದೊಳಗೆ ಬಂದು ಬಿಡುತ್ತೇನೆ.'

ಜಗನ್ನಾಥ ಪಂಚೆಯನ್ನು ಮೇಲೆತ್ತಿ ಕಟ್ಟಿ ಅವರಸರಿಂದ ನರಹರಿರಾಯರನ್ನು ನೋಡಿದ. ನರಹರಿರಾಯರು ತುಂಬ ರಗಳೆ ಮಾಡಿಕೊಳ್ಳುತ್ತ ಎರಡು ಕಿಸೆಯನ್ನೂ ಹುಡುಕುತ್ತಿದ್ದರು. ಜಗನ್ನಾಥನಿಗೆ ಏನೆಂದು ಹೊಳೆಯಲಿಲ್ಲ. ಕೊನೆಗೆ ನೂರೊಂದು ಚೀಟಿಗಳ ನಡುವಿನಿಂದ ನರಹರಿರಾಯರು ಒಂದು ಕಾಗದ ತೆಗೆದು ತೋರಿಸಿದರು. ಮಾತಾಡುವುದೇ ಅಪರಾಧವೇನೊ ಎನ್ನುವ ರೀತಿಯಲ್ಲಿ ಹೇಳಿದರು:

'ನಿಮ್ಮ ತಂದೆಯವರ ಕಾಲದಲ್ಲಿ ಮಾಡಿದ ಸಾಲ ತೀರಿಸಿಲ್ಲಾಂತ ನಿಮಗೆ ಬೇಜಾರಾಗಿ ಹೀಗೆ ಬರ್ದಿರಬಹುದು ಅನ್ನಿಸ್ತು. ನಾನೇನು ಮಾಡ್ಲಿ ಹೇಳಿ? ಐದು ಮಕ್ಕಳಿಗೆ ಮದುವೆ ಮಾಡೋದರಲ್ಲಿ ಸುಣ್ಣ ಆದೆ. ಈ ಸಾರಿ ಫಸಲು ಕೈಗೆ ಹತ್ತಿಲ್ಲ.'

ಜಗನ್ನಾಥನಿಗೆ ಕೂಡಲೇ ನರಹರಿರಾಯರ ಮುಖದಲ್ಲಿನ ಕಾತರದ ಕಾರಣ ಹೊಳೆಯಿತು. ಪ್ರಾಯಶಃ ತಾನು ನೂರೋ ನೂರೈವತ್ತೊ ಅಂಥ ಕಾಗದ ಬರೆಯುವಾಗ ಸಾಕಷ್ಟು ಸಮಾಧಾನದಿಂದ ವಿವರಿಸದೇ ಇರಬಹುದು:

'ಛೆ ಛೆ ಇಲ್ಲ ನರಹರಿರಾಯರೆ. ನೀವು ಮಾಡಿರೋ ಸಾಲಾನ್ನ ಹಿಂದಕ್ಕೆ ಕೊಡಬೇಕಾಗಿಲ್ಲಾಂತ್ಲೇ ನಾನು ಬರೆದಿರೋದು. ನಮ್ಮ ಅಪ್ಪ, ಆಮೇಲೆ ನಮ್ಮ ರೈಟರು ನಡಸ್ತಾ ಇದ್ರಲ್ಲ ಈ ಸಾಲಾ ಕೊಡೋ ವ್ಯವಹಾರ, ಆಮೇಲೆ ಬಡ್ಡಿ ವಸೂಲು ಮಾಡೋದು, ಮಂಜುನಾಥನಿಗೆ ಹುಯ್ಲು ಕೊಡೋದು ಇವೆಲ್ಲ ನನಗೆ ಇಷ್ಟವಿಲ್ಲ. ಹೀಗೇನೇ ಉಳಿದವರಿಗೂ ನಾನು ಬರ್ದಿದೀನಿ. ಮನೇಗೆ ಹೋಗಿರಿ – ಆಮೇಲೆ ಮಾತಾಡೋಣಂತೆ.'

ನರಹರಿರಾಯರ ದೈನ್ಯದಿಂದ ತುಂಬಿದ ಮುಖದಲ್ಲಿ ಜಗನ್ನಾಥನ ಮಾತಿನ ಅರ್ಥ ಆದಂತೆ ಕಾಣಲಿಲ್ಲ; ಹಲ್ಲುಗಳು ಬಿದ್ದ ಬಾಯಿ ನಗಬೇಕೆಂದು ನಕ್ಕಿತು – ಅಷ್ಟೆ. ಕೊಡೆ ಚೀಲಗಳನ್ನು ಒಟ್ಟಾಗಿ ಹಿಡಿದು ಕೈ ಮುಗಿದು ಲೋಕಾಭಿರಾಮದ ಮಾತು ಹುಡುಕುತ್ತ ಹಾಗೇ ನಿಂತರು. ಜಗನ್ನಾಥ ಮನೆಗೆ ಹೋಗಿ ವಿಶ್ರಮಿಸಿಕೊಳ್ಳಿ ಎಂದು ಉಪಚಾರ ಹೇಳಿ ಹೊರಟುಬಿಟ್ಟ. ಪ್ರಾಮಿಸರಿ ನೋಟುಗಳನ್ನೆಲ್ಲ ಹರಿದು ಹಾಕುವಾಗಲೇ ಜಗನ್ನಾಥ ಯೋಚಿಸಿದ್ದ : ಸಾಲದ ಸಂಬಂಧವನ್ನು ಕಡಿದುಹಾಕಿಕೊಳ್ಳುವಾಗ ಈ ಜನರ ಜೊತೆಗೆ ತನಗಿದ್ದ ಮುಖ್ಯ ಕೊಂಡಿಯನ್ನು ಕಿತ್ತಂತೆ. ಬೇರೆ ಏನನ್ನೊ ಸೃಷ್ಟಿಸಿಕೊಳ್ಳಬೇಕು. ಅದಕ್ಕೆ ಹುಡುಕಬೇಕು. ಚಿಕ್ಕಿ ಕೊಟ್ಟ ಕಾಫಿಯನ್ನು ಕುಡಿಯುತ್ತ ನರಹರಿರಾಯರು ತಬ್ಬಿಬ್ಬಾಗಿ ಯೋಚಿಸುತ್ತಾರೆ. ಸಾವಿರಾರು ರೂಪಾಯಿಯ ಸಾಲವನ್ನು ಜಗನ್ನಾಥ ಯಾಕೆ ಬಿಟ್ಟ ? ಮುಂದೆ ಸಾಲ ಬೇಕಾದರೆ ಏನು ಗತಿ ? ಚಿಕ್ಕಿಯೂ ಕಾತರಳಾಗುತ್ತಾಳೆ. ತನ್ನ ದಿಂಬಿನ ಕೆಳಗೆ ಗೊತ್ತಾಗದಂತೆ ಇನ್ನೊಂದು ಮಂತ್ರಿಸಿದ ತಾಯಿತ ಇಡಿಸುತ್ತಾಳೆ. ಇನ್ನಷ್ಟು ಹರಕೆ ಹೇಳಿಕೊಳ್ಳುತ್ತಾಳೆ. ತಾನು ದೇವಸ್ಥಾನದ ಧರ್ಮದಶಿತ್ವಕ್ಕೆ ರಾಜೀನಾಮೆ ಕೊಟ್ಟದ್ದು ಅವಳಿಗೆ ತಿಳಿದಿದೆ. ಊರಲ್ಲೆಲ್ಲ ಗುಸುಗುಸು ಹಬ್ಬಿದೆ. ಮಂಜುನಾಥನ ದರ್ಶನಕ್ಕೆಂದು ರಾಷ್ಟ್ರಪತಿಗಳು ಬಂದಿದ್ದಾಗ ಜಗನ್ನಾಥನಿಗೆ ಅವರನ್ನು ನೋಡಲು ಆಮಂತ್ರಣ ಹೋಯಿತು. ಚಿಕ್ಕಿಗೆ ಸಡಗರ. ಆದರೆ ತಾನು ಬರುವುದಿಲ್ಲವೆಂದು ಜಗನ್ನಾಥ ಹೇಳಿಕಳುಹಿಸಿದ್ದು ಕೇಳಿ ಅವಳು ಕಂಗಾಲಾಗಿದ್ದಳು. ಅವತ್ತೇ ಅವನು ತನ್ನ ಧರ್ಮದರ್ಶಿತ್ವಕ್ಕೆ ರಾಜೀನಾಮೆ ಕೊಟ್ಟಿದ್ದ.

ಜಗನ್ನಾಥ ವೇಗವಾಗಿ ಗುಡ್ಡ ಇಳಿದು ರಸ್ತೆ ಸೇರಿದ. ಫರ್ಲಾಂಗು ನಡೆದರೆ ಪೇಟೆ ಪ್ರಾರಂಭವಾಗುತ್ತದೆ. ಟೋಲ್‌ಗೇಟಿನಿಂದ ಬೇರೊಂದು ವಾಸನೆಯ ಪ್ರಪಂಚ. ದೋಸೆ ವಾಸನೆಯ ಹೊಗೆ ತುಂಬಿದ ಹೋಟೆಲುಗಳು. ನಡೆಯುವವರ ಮುಖಗಳನ್ನು ಉದ್ದವೊ ಅಗಲವೊ ಮಾಡುವ ನಿಲುವುಗನ್ನಡಿಗಳಿದ್ದ ಕ್ಷೌರಿಕರ ಅಂಗಡಿಗಳು. ಜಗನ್ನಾಥ ಹೆಚ್ಚಾಗಿ ಆಕಡೆ ಈಕಡೆ ನೋಡದೆ ನಡೆದ. ಯಾರಾದರೂ ಎದ್ದು ನಿಲ್ಲುತ್ತಾರೆ. ಕುಶಲ ಕೇಳುತ್ತಾರೆ. ಏನು ಕಾರು ಬಿಟ್ಟು ನಡದೇ ಬಂದಿರಲ್ಲ ಎನ್ನುತ್ತಾರೆ. ಸುಮ್ಮನೇ ನಿಲ್ಲುತ್ತಾರೆ. ಅಥವಾ ಅಷ್ಟು ದೂರ ವಿನಾಕಾರಣ ಜೊತೆಗೆ ನಡೆದು ಬರುತ್ತಾರೆ. ಇಲ್ಲವಾದರೆ ತಾನೇನು ತಿಳಿಯುತ್ತೇನೊ ಎಂದು ಸಂಕೋಚ ಪಡುತ್ತಾರೆ. ಏನು ದೇವರ ದರ್ಶನಕ್ಕೆ ಹೊರಟದ್ದೊ ಎಂದು ಎಲ್ಲರೂ ಕೇಳಿಯೇ ಕೇಳುತ್ತಾರೆ.

ಜಗನ್ನಾಥ ಒಕ್ಕಲಿಗರ ವಿದ್ಯಾರ್ಥಿನಿಲಯ ದಾಟಿ ಹೋದ. ಅದರ ಬಲಕ್ಕೆ ತಾನು ಓದಿದ ಶ್ರೀ ಮಂಜುನಾಥ ಕೃಪಾಪೋಷಿತ ಹೈಸ್ಕೂಲು. ಯಾರೋ ಹುಡುಗರು ವಾಲಿಬಾಲ್ ಆಡುತ್ತಿದ್ದರು. ಈಗಲೂ ಹೈಸ್ಕೂಲು ಬೆಳೆದಿಲ್ಲ – ಎರಡು ರೂಮು

ಹೆಚ್ಚಾಗಿರಬಹುದು ಅಷ್ಟೆ. ನಿಮ್ಮ ತಾಯಿಯ ಹೆಸರಿನಲ್ಲಿ ಒಂದು ವಿಂಗ್ ಕಟ್ಟಿಸಿಕೊಡಿ ಎಂದು ವಾರ ಹಿಂದೆ ಊರಿನ ಎಂ.ಎಲ್.ಎ. ಗುರಪ್ಪಗೌಡರು ಒತ್ತಾಯ ಮಾಡಿದರು. ಜಗನ್ನಾಥ 'ನೋಡೋಣ' ಎಂದಿದ್ದ. ಮಂಜುನಾಥನ ದರ್ಶನಕ್ಕೆ ರಾಷ್ಟ್ರಪತಿಗಳು ಬರುತ್ತಾರೆಂದು ರಸ್ತೆಯ ಮೇಲೆ ಕೆಂಪುಮಣ್ಣು ಹಾಕಿಸಲು ಮಾಡಿದ ಖರ್ಚು ದುರ್ವ್ಯಯವಲ್ಲವೇ ಎಂದು ಅವರ ಹತ್ತಿರ ವಾದಿಸಲು ಹೋಗಿ ಸುಮ್ಮನಾಗಿದ್ದ. ಹೈಸ್ಕೂಲಿನ ಮೇಲೆ ಇನ್ನೊಂದು ಗುಡ್ಡದಲ್ಲಿ ಟಿ.ಬಿ. ಹಿಂದೊಮ್ಮೆ ಗಾಂಧಿ ಬಂದಾಗ ಅಲ್ಲಿ ಇಳಿಸಲು ವ್ಯವಸ್ಥೆ ಮಾಡಿದ್ದರಂತೆ. ಆದರೆ ಗಾಂಧಿ ಬಂದವರೆ ಸೀದ ಹೊಲೆಯರ ಕೇರಿಗೆ ಹೋದರಂತೆ. ಆಗ ಜಗನ್ನಾಥನ ತಂದೆಯವರೂ ಊರಿನ ಮುಖಂಡರಾಗಿದ್ದರಿಂದ ಹೊಲೆಯರ ಕೇರಿಗೆ ಹೋಗಬೇಕಗಿ ಬಂತಂತೆ. ಆಮೇಲೆ ಪಂಚಗವ್ಯ ಮಾಡಿಸಿಕೊಂಡರಂತೆ. ಶ್ರೀಪತಿರಾಯರಿಂದ ಕೇಳಿದ ಕಥೆ, ಗಾಂಧಿಯೊಬ್ಬರು ಮಂಜುನಾಥನ ದರ್ಶನ ಮಾಡಲಿಲ್ಲ – ಅಷ್ಟೆ. ಈಗ ದೇವಸ್ಥಾನದ ಪ್ರಸಾದ ಪಡೆಯದೇ ಹೋದ ಮಂತ್ರಿಯಿಲ್ಲ.

ಇನ್ನು ಮುಂದೆ ಪೇಟೆ ನಾರುವ ನೂರು ಬೀದಿಗಳಾಗುತ್ತವೆ. ತಗ್ಗಿನ ಪ್ರದೇಶದಲ್ಲಿ ಪೇಟೆ. ಶ್ರೀ ಮಂಜುನಾಥ ಸ್ವಾಮಿಯಿಂದಾಗಿ ಹುಟ್ಟಿಕೊಂಡದ್ದು, ಅನಾಮತ್ತಾಗಿ ಎತ್ತೆತ್ತಲೋ ಬೆಳೆದದ್ದು. ಬೀದಿಗಳು ತಿರುಗುವಲ್ಲಿ ಉಚ್ಚೆಯ ವಾಸನೆ. ಗೋಡೆಗಳ ಮೇಲೆ ಅದೆಷ್ಟೋ ಕಾಲದಿಂದ ಇರುವ ಲಿವರ್‌ಕ್ಯೂರ್‌ಜಾಹೀರಾತು. ಗುರಪ್ಪ ಗೌಡರಿಗೆ ಓಟು ಕೊಡಿ ಎನ್ನುವ ಈಚಿನ ಬರಹ. ಅಂಗಡಿಗಳ ಎದುರು ಓಡಾಡುವ ರೈತರು. ದೀವರ ಹೆಂಗಸರು. ಮೊಣಕಾಲಿನ ತನಕ ಸೀರೆ, ಕಿವಿಯಲ್ಲಿ ಬುಗುಡಿ, ಮೂಗಿನಲ್ಲಿ ಮೂಗುತಿ, ಒಂದು ಹೊರೆ ಹೂ ಮುಡಿದು ಬಿಗಿಯಾಗಿ ಜಡೆ ಹಾಕಿದ ತಲೆ. ದೇವಸ್ಥಾನದಲ್ಲಿ ಮದುವೆಗೆಂದೊ, ಭೂತರಾಯನಲ್ಲಿ ನಿಮಿತ್ಯ ಕೇಳಲೆಂದೊ, ಸೀರೆ ರವಿಕೆ ಬಟ್ಟೆ ಕೊಳ್ಳಲೆಂದೂ – ಗಾಡಿಯಲ್ಲಿ ಬಂದು ಬಹಳ ಸಂಭ್ರಮದಿಂದ ಪೇಟೆ ಸುತ್ತುವ ಹಳ್ಳಿಯ ಜನ. ಉಸುರುಬುರುಡೆ ಬೇಕೂಂತ ಒಬ್ಬ ಹುಡುಗ ತಾಯಿಯನ್ನು ಕಾಡುತ್ತಿದ್ದ – ಇನ್ನೊಬ್ಬ ಹುಡುಗನ ಬಾಯಲ್ಲಿದ್ದ ಬೆಲೂನು ನೋಡಿ. ಎಲ್ಲ ಮುಗಿದ ಮೇಲೆ ಹೋಟೆಲಲ್ಲಿ ಬಜೆ ತಿಂದು ಕಾಫಿ ಕುಡಿದು, ಇನ್ನಷ್ಟು ಬಜೆ ಕಟ್ಟಿಸಿಕೊಂಡು ಹೋಗುತ್ತಾರೆ. ಇಂಗ್ಲೆಂಡಲ್ಲಿ ಐದು ವರ್ಷಗಳಿದ್ದರೂ ಜಗನ್ನಾಥನಿಗೆ ಏನೂ ಮರೆತಿಲ್ಲ. ಹಾಗಾದರೆ ಬದಲಾವಣೆಯಾಗಿಯೇ ಇಲ್ಲವೆ? ಅಥವಾ ನನಗೆ ಕಾಣಿಸುತ್ತಿಲ್ಲವೆ?

ಎಲ್ಲಿ ತಮ್ಮನ್ನು ನೋಡುವನೊ, ನೋಡಿದರೆ ಎದ್ದು ನಿಲ್ಲಬೇಕೊ ಎಂದು ಅಂಗಡಿಗಳಲ್ಲಿ ಕೂತವರಿಗೆ ಅನುಮಾನ. ಅರ್ಜೆಂಟಲ್ಲಿದ್ದಂತೆ ಜಗನ್ನಾಥ ನಡೆದ. ಅಲ್ಲೊಂದು ಇಲ್ಲೊಂದು ಟೈಟ್ ಪ್ಯಾಂಟುಗಳೂ ಕಾಣುತ್ತಾವೆ. ದೇವರ ದರ್ಶನಕ್ಕೆಂದು ಬಂದ ಯಾತ್ರಿಕರ ಮಕ್ಕಳಿರಬಹುದು. ಆದರೆ ಅಂಗಡಿಯ ಬೆಂಚಿನ ಮೇಲೆ ಕೂತ ಇವರೆಲ್ಲ ಬಲು ಹಳಬರೇ. ಬೆಳಿಗ್ಗೆ ತಿಂದ ಅವಲಕ್ಕಿಯನ್ನೊ, ದೋಸೆಯನ್ನೊ ಜೀರ್ಣಿಸಿಕೊಳ್ಳುತ್ತಾ ಕೂತವರು. ಹೊಗೆ ತುಂಬಿದ ಒಲೆಯೆದುರು ಇವರ ಹೆಂಗಸರು ಇಡೀ ದಿನ ಕೂತಿರುತ್ತಾರೆ. ಇಲ್ಲಿ ಪೇಟೆ ಬೀದಿಯಲ್ಲಿ ಪರಸ್ಪರ ಸಾನ್ನಿಧ್ಯವನ್ನು ಅನುಭವಿಸುತ್ತ ಇವರು ಮೌನವಾಗಿ ಕೂತಿರುತ್ತಾರೆ, ದೇವರ ದರ್ಶನಕ್ಕೆಂದು ನಿತ್ಯ ಬರುವ ಹೊಸ ಮುಖಗಳನ್ನು ನೋಡುತ್ತ. ಹೀಗೆ ಪ್ರತಿದಿನ ಒಬ್ಬರಿಗೊಬ್ಬರು ಹಾಜರಿ ಹಾಕಿ ಊಟದ ಹೊತ್ತಿಗೆ ಮನೆಗೆ – ಅಥವಾ ಮನೆಯಲ್ಲಿ ತೊಂದರೆಯಿದ್ದಾಗ ದೇವಸ್ಥಾನಕ್ಕೆ – ಊಟಕ್ಕೆ ಹೋಗುತ್ತಾರೆ. ಒಟ್ಟು ಮಂಜುನಾಥನನ್ನು ನಂಬಿ ಬದುಕುತ್ತಾರೆ. ಯಾವುದೋ ಹಳ್ಳಿಯಲ್ಲಿ ಇವರ ಗದ್ದೆಯಿಂದ, ಅದರ ಕೆಸರನ್ನು ತುಳಿದು ಯಾವುದೋ ರೈತ ಉಳುತ್ತಾನೆ.

ಭೂತರಾಯನಿಗೆ ಹೆದರಿ ಇವರಿಗೆ ಗೇಣಿ ಕೊಡುತ್ತಾನೆ. ಕುಂಬಳಕಾಯಿ, ಸೌತೆಕಾಯಿ, ಬಾಳೆಗೊನೆ ಕೊಡುತ್ತಾನೆ. ಹೇಗೋ

ಉದರಂಭರಣ ನಡೆಯುತ್ತದೆ. ಯಾರೋ ಹೆರುತ್ತಾರೆ, ಯಾರೋ ಸಾಯುತ್ತಾರೆ. ವರ್ಷಕ್ಕೆ ಕಡಿಮೆಯೆಂದರೆ ನಾಲ್ಕೈದು ವೃದ್ಧಿ, ನಾಲ್ಕೈದು ಸೂತಕ, ಹತ್ತಾರು ಮದುವೆ- ಅಂತೂ ಕಾಲ ಚಲಿಸುತ್ತದೆ. ಕೂದಲು ನೆರೆಯುತ್ತದೆ, ಹಲ್ಲು ಬೀಳುತ್ತದೆ.

ಜಗನ್ನಾಥನಿಗೆ ಭಯವಾಯಿತು. ಮಾರ್ಗರೆಟ್ಟಿಗೆ ಮನಸ್ಸಿನಲ್ಲೆ ಬರೆಯುತ್ತಿದ್ದ ಕಾಗದದಲ್ಲಿ ಹೇಳಿದ: Life has ceased to be creative here. ಮಂಜುನಾಥ ಸ್ವಾಮಿ ಈ ಜೀವನಕ್ರಮದ ಕ್ಯಾನ್ಸರ್. ಈ ಪೇಟೆಯೊಂದು ಅವನಿಗಾಗಿ ಬೆಳೆದ ಕ್ಯಾನ್ಸರ್.

ಶ್ರೀ ಮಂಜುನಾಥ ಬಸ್ ಸರ್ವಿಸ್ ಕಂಪನಿಯ ಫಸ್ಟ್ ಬಸ್ ಶಿವಮೊಗ್ಗದಿಂದ ಬಂದು ಧೂಳೆಬ್ಬಿಸುತ್ತ ಬೀದಿಯ ತುದಿಯಲ್ಲಿ ಹೋಗಿ ನಿಂತಿತು. ಹೀಗೆ ಪ್ರತಿ ಬೀದಿಯ ತುದಿಯಲ್ಲೂ ನಿಲ್ಲುತ್ತದೆ; ಜುಟ್ಟು ಬಿಟ್ಟು ಪಂಚೆ ಹೊದ್ದ ಬ್ರಾಹ್ಮಣ ಹುಡುಗರು ಮುತ್ತುತ್ತಾರೆ. ಯಾತ್ರಿಕರನ್ನು ಕಾಡುತ್ತಾರೆ; ನಮ್ಮ ಮನೆಗೆ ಬನ್ನಿ, ನಮ್ಮ ಮನೆಗೆ ಬನ್ನಿ. ಕನ್ನಡ ಅರ್ಥವಾಗದಂತೆ ಕಂಡ ಯಾತ್ರಿಕರಿಗೆ ಹಿಂದಿಯಲ್ಲಿ ಕಾಟ. ಯಾತ್ರಿಕರಿಗೆ ಉಳಿದುಕೊಳ್ಳಲು ಜಗನ್ನಾಥನ ತಂದೆ ಕಟ್ಟಿಸಿಕೊಟ್ಟ ಧರ್ಮಛತ್ರವಿದೆ. ಆದರೆ ಅದು ಸಾಲದಾಗುತ್ತದೆ. ಎಷ್ಟು, ಏನು, ವ್ಯವಹಾರದ ಮಾತಾದ ಮೇಲೆ ಹುಡುಗರು ಯಾತ್ರಿಕರ ಟ್ರಂಕ್ ಹೊರುತ್ತಾರೆ. ಹೊಳೆಯಲ್ಲಿ ಸ್ನಾನ, ದೇವರ ದರ್ಶನ, ಪಿತೃಗಳಿಗೆ ತರ್ಪಣ, ಪುಣ್ಯಸ್ಥಳಗಳ ದರ್ಶನ, ಗುಡ್ಡದ ಮೇಲಿನ ಭೂತರಾಯನಿಗೆ ಹರಕೆಯ ಸಲ್ಲಿಕೆ, ಹಿಂದಕ್ಕೆ ಹೋಗುವ ರಿಸರ್ವೇಶನ್ ಇಷ್ಟಕ್ಕೂ ಕಂಟ್ರಾಕ್ಟು ಹೊತ್ತು ಯಾತ್ರಿಕನನ್ನು ತಮ್ಮ ಮನೆಗೆ ಯಾರೋ ಸಾಗಿಸಿಕೊಂಡು ಹೋಗುತ್ತಾರೆ. ಖದೀಮ ಹುಡುಗರು – ಒಂದೇ ಮನೆಯವರು ಎರಡು ಮನೆಯವರಂತೆ ಪೈಪೋಟಿ ನಡೆಸಿ ಯಾತ್ರಿಕರನ್ನು ವಂಚಿಸುವುದೂ ಉಂಟು. ಹೊಗೆ ಕಟ್ಟಿದ ಮಹಡಿಯ ಮನೆಗಳಿಗೆ ಯಾತ್ರಿಕರು ಮಕ್ಕಳು ಮರಿಕಟ್ಟಿಕೊಂಡು ಹೋಗುತ್ತಾರೆ. ಒಂದೆರಡು ದಿನ ಇಳಿದುಕೊಳ್ಳುತ್ತಾರೆ. ಹೀಗೆ ಪ್ರತಿನಿತ್ಯ ಹೊಸ ಮುಖಗಳನ್ನು ನೋಡುತ್ತಲೇ ಇರುವ ಬಲು ಹಳೆಯ ಪೇಟೆ ಇದು.

‘ನಮಸ್ಕಾರ ಜಗನ್ನಾಥರಾಯರಿಗೆ, ದೇವರ ದರ್ಶನಕ್ಕೆಂದು ಸವಾರಿ ಹೊರಟಂತಿದೆ.’

ಜಗನ್ನಾಥ ಬಲಗಡೆ ತಿರುಗಿ ನೋಡಿದ. ತನ್ನನ್ನು ಹಂಗಿಸಲೆಂದು ಹೀಗೆ ಕೇಳುತ್ತಾರೊ, ಅಥವಾ ಬರಿ ಅಭ್ಯಾಸವೊ ? ಕೈ ಮುಗಿದು ನಗುತ್ತ ನಿಂತಿದ್ದವರು ಊರಿನ ಪ್ರಖ್ಯಾತ ಪಂಚಾಂಗದ ಕರ್ತೃಗಳಾದ ನಾಗರಾಜ ಜೋಯಿಸರು. ರಾಷ್ಟ್ರಪತಿಗಳು ಬಂದಾಗ ಸಂಸ್ಕೃತದಲ್ಲಿ ಅವರ ಗುಣಗಾನ ಮಾಡಿದ ಶ್ಲೋಕಗಳನ್ನು ರಚಿಸಿ ಪ್ರಿಂಟ್ ಮಾಡಿಸಿ ಕೊಟ್ಟವರು. ಅವರ ಮಗ ಶಿವಮೊಗ್ಗದಲ್ಲಿ ಲಾಯರು. ಹಳೆಯ ಕಾಲದ ರೀತಿಯಲ್ಲೆ ಲೆಖ್ಖ ಹಾಕಲು ಒಪ್ಪದೆ ಗ್ರಹಗತಿಯನ್ನು ಆಂಗ್ಲರ ಪ್ರಕಾರ ನಿರ್ಣಯ ಮಾಡಿದರೆಂದು ಅವರ ಮೇಲೆ ಹಿಂದೊಮ್ಮೆ ಮಠದ ಸ್ವಾಮಿಗಳು ಬಹಿಷ್ಕಾರ ಹಾಕಿದ್ದನ್ನು, ಅದರ ವಿರುದ್ಧ ತಾನು ಹೋರಾಡಿದ್ದನ್ನು, ಸಂಸ್ಕೃತದಲ್ಲಿ ತಾನು ಲೇವಡಿ ಮಾಡಿ ಅವರ ಮೇಲೆ ಶ್ಲೋಕ ರಚಿಸಿದ್ದನ್ನು ಅವರು ಯಾವತ್ತೂ ತನಗೆ ಹಲ್ಲು ಬಿಟ್ಟು ರಸವತ್ತಾಗಿ ವರ್ಣಿಸುತ್ತಾರೆ. ತಾನು ಆಧುನಿಕ, ಆದ್ದರಿಂದ ಇದು ಹಿಡಿಸುತ್ತದೆ ಎಂದು ಘಾಟಿ ಬುದ್ದಿಯ ಜೋಯಿಸರಿಗೆ ಗೊತ್ತು. ದೇವರಿಲ್ಲವೆಂದು ವಾದಿಸಲು ಬೇಕಾದರೂ ನಾಗರಾಜ ಜೋಯಿಸರಿಗೆ ಬರುತ್ತದೆ. ಮಂಜುನಾಥ ಸ್ವಾಮಿಯ ಮುಖ್ಯ ಪೂಜಾರಿಗಳಾದ ಸೀತಾರಾಮಯ್ಯ ಇವರ ದಾಯಾದಿಗಳು; ಹಾಗಾಗಿ ಸಹಜವಾಗಿ ಇವರಿಗೆ ಹೊಟ್ಟೆಯುರಿ.

ಒತ್ತಾಯ ಮಾಡಿ ಕರೆದರೆಂದು ಜಗನ್ನಾಥ ಅವರ ಮನೆಯ ಚಿಟ್ಟೆಯೇರಿ ಕೂತ. ನಾಗರಾಜ ಜೋಯಿಸರ ಕಿರಿಯ ಮಗ ಒಬ್ಬನೇ ಹಿಂದಕ್ಕೆ ಬಂದ. ಅವನ ಜೊತೆ ಯಾತ್ರಿಕರಿರಲಿಲ್ಲ. ಜೋಯಿಸರ ಮುಖ ಪೆಚ್ಚಾಯಿತು. ಬಳ್ಳಾರಿಯಿಂದ ಒಂದು ಕುಟುಂಬ ಬಂದದ್ದು ಉಡುಪರ ಮನೆಗೆ ಹೋಯಿತೆಂದು ಮಗ ಹೇಳಿದ. ಆಗಲಿ, ಸೆಕೆಂಡ್ ಬಸ್ಸಿಗೆ ಕಾದಿರು ಎಂದು ಜೋಯಿಸರು ಸಮಾಧಾನ ಹೇಳಿ ಜಗನ್ನಾಥನಿಗೆ ಒಳಗಿನಿಂದ ಕುರ್ಚಿ ತರಿಸುತ್ತೇನೆ ಎಂದರು. ಬೇಡ ಚಾಪೆಯೇ ಸಾಕು ಎಂದ ಜಗನ್ನಾಥ. ಕಾಫಿ ಖಂಡಿತ ಬೇಡವೆಂದ. ಶಿವಮೊಗ್ಗದಲ್ಲಿರುವ ನಿಮ್ಮ ಹಿರಿಯ ಮಗನಿಗೆ ಪ್ರಾಕ್ಟೀಸು ಹೇಗಿದೆ ಎಂದು ವಿಚಾರಿಸಿದ. ಈ ಪ್ರಾಂತದಲ್ಲೆಲ್ಲ ಭೂತರಾಯನಿಗೇ ಹುಯ್ಲು ಕೊಡೋದಲ್ವ. ಲಾಯರ್‌ಗೆ ಪ್ರಾಕ್ಟೀಸ್ ಎಲ್ಲಿಂದಾಗಬೇಕು ಎಂದು ಜೋಯಿಸರು ದೂರುವ ಸ್ವರದಲ್ಲಿ ಹೇಳಿದರು. ಹೊಳೆಯುವ ಕೆಂಪು ಒಂಟಿಗಳ, ಕೆಂಪು ಹಲ್ಲಿನ ಮುಖವನ್ನು ಹತ್ತಿರ ತಂದು ಪಕ್ಕದಲ್ಲೆ ಕೂತರು. ಬಹಳ ಆಪ್ತವಾಗಿ ಮಾತು ಪ್ರಾರಂಭಿಸಿದರು. ಇವತ್ತು ಪ್ರಶಸ್ತವಾದ ದಿನವಿರಬೇಕು; ನುಣ್ಣಗೆ ಮುಖ ತಲೆ ಬೋಳಿಸಿಕೊಂಡಿದ್ದಾರೆ. ಬಂಗಾರದಲ್ಲಿ ಕಟ್ಟಿಸಿದ ರುದ್ರಾಕ್ಷಿ ಸರ ಕೊರಳಿನಲ್ಲಿದೆ. ಯಾತ್ರಿಕರನ್ನು ಆಕರ್ಷಿಸುವ ಮುಖ್ಯ ಸಾಧನ – ಈ ಒಂಟಿ, ಈ ಬಂಗಾರ, ಈ ಮಾತಿನ ಬೆಡಗು, ಹತ್ತಿರ ಕೂತು ಮಾತಾಡುವ ಈ ಆಪ್ತತೆ.

‘ಶ್ರೀ ಮಂಜುನಾಥನನ್ನು ಪರಶುರಾಮ ಸ್ಥಾಪಿಸಿದ್ದೆಂಬುದು ನಿಜವಲ್ಲ ಜಗನ್ನಾಥರಾಯರೆ. ಯಾರಾದರೂ ಸಂಶೋಧಕರು ಲಿಂಗವನ್ನು ಕಿತ್ತು ನೋಡಿದರೆ ಗೊತ್ತಾಗುತ್ತೆ. ಈಗಲೇ ಬಿರಕು ಸಹ ಬಿಟ್ಟಿದೆ= ಇರೋದು ಮೂರೇ ಇಂಚು ಆಳ. ಯಾಕೆ ಗೊತ್ತ? ಯದುತೀರ್ಥ ಸ್ವಾಮಿಗಳು ಅದನ್ನು ಸ್ಥಾಪಿಸಿದ್ದು. ನನ್ನ ಹತ್ರ ಕೇಳಿ ಹೇಳ್ತೇನೆ; ದಾಯಾದಿ ಮತ್ಸರಾಂತ ನನ್ನ ಮಾತನ್ನು ಯಾರೂ ಒಪ್ಪದಿರಬಹುದು...’

ನಾಗರಾಜ ಜೋಯಿಸರು ಇನ್ನಷ್ಟು ಹತ್ತಿರ ಸರಿದರು. ಕಿವಿಯಲ್ಲಿ ಇನ್ನಷ್ಟು ಗುಟ್ಟಾಗಿ ಕಣ್ಣುಗಳನ್ನು ಅರಳಿಸಿ ಹೇಳಿದರು :

‘ಅಲ್ಲ ಜಗನ್ನಾಥರಾಯರೆ, ನೀವು ಓದಿರೋವ್ರು ನಿಮಗೆ ಗೊತ್ತಾಗುತ್ತೆ. ಅದ್ವೈತ ಸಿದ್ಧಾಂತದಲ್ಲಿ ಭೂತದ ಪೂಜೆಗೆ ಜಾಗ ಇದೆಯ ಹೇಳಿ? ಈಗ ನಿಜವಾಗಿ ಪೂಜೆ ಸಲ್ಲೋದು ಯಾರಿಗೆ? ನಿಜ ಹೇಳಿ.’

ಜೋಯಿಸರ ಧ್ವನಿ ಇನ್ನಷ್ಟು ತಗ್ಗಿತು, ಕಣ್ಣುಗಳು ನಿಷ್ಠುರವಾಗಿ ಜಗನ್ನಾಥನನ್ನ ನೋಡಿದುವು:

‘ಹೇಳಿ. ಜನ ಹೆದರೋದು ಯಾರಿಗೆ? ರಾಷ್ಟ್ರಪತಿಗಳ ಪೂಜೆ ಸಹ ಸಂದದ್ದು ಯಾರಿಗೆ? ಮಂಜುನಾಥನಿಗೆ ಕೊಡೋ ಹುಯ್ಲನ್ನೆಲ್ಲ ಪಂಚಾಯ್ತಿ ಮಾಡೋದು ಯಾರು?’

ಜೋಯಿಸರು ಮೌನವಾಗಿ ಒಂದು ಕ್ಷಣ ಜಗನ್ನಾಥನನ್ನು ದುರುಗುಟ್ಟಿ ನೋಡಿದರು.

‘ಮಂಜುನಾಥನ ಹೆಸರಿನಲ್ಲಿ ಈ ಪೂಜೇ ಎಲ್ಲಾ ಸಲ್ಲೋದು ಭೂತರಾಯನಿಗೆ ಹೌದೋ ಅಲ್ಲವೋ? ಅವನಿಗೆ ಕೆಂಪನ್ನದ ಬಲಿಯಾಕೆ ಕೊಡೋದು ಹೇಳಿ? ಗಣಮಗ ಕೆಂಪು ಬಟ್ಟೆ ಯಾಕೆ ಉಡ್ತಾನೆ ಹೇಳಿ? ಮಂಜುನಾಥನ ಪ್ರಸಾರಾಂತ ಭೂತರಯ

ಹಣೇಗೆ ಎದೇಗೆ ಹಚ್ಚಿಕೋತಾನಲ್ಲ ಈ ಕುಂಕುಮ ಇದು ಕೆಂಪಾಗಿರೋದಕ್ಕೆ ಅರ್ಥವೇನು ಹೇಳಿ. ವಿಭೂತಿಯಲ್ಲದೆ ಕುಂಕುಮ ಪ್ರಸಾದವಾರಿಗೋದಕ್ಕೆ ಅರ್ಥವೇನು ಹೇಳಿ.'

ಜೋಯಿಸರು ತಮ್ಮ ಹಣೆಯ ಮೇಲಿದ್ದ ಮಂಜುನಾಥ ಪ್ಲಸ್ ಭೂತರಾಯನ ಪ್ರಸಾದವಾದ ಕುಂಕುಮ ತೋರಿಸಿದರು. ಮತ್ತೆ ಮೌನವಾಗಿದ್ದು ತಾವೇ ಹೇಳಿದರು :

'ಭೂತರಾಯನಿಗೆ ಆಗ್ತಾ ಇದ್ದದ್ದು ರಕ್ತದ ಬಲಿ. ಹಾಗಾದ್ರೆ ಪ್ರಶ್ನೆ ಈ ಮಂಜುನಾಥನಿಗೂ ಈ ಭೂತರಾಯನಿಗೂ ಏನು ಸಂಬಂಧಾಂತ.'

ಈಗ ಜೋಯಿಸರು ಚಾವಡಿಯ ಗೋಡೆಗೆ ನೇತು ಹಾಕಿದ್ದ ಮಂಜುನಾಥನ ಫೋಟೋ ತೋರಿಸಿದರು. ಮುಷ್ಟಿಗಾತ್ರದ ಲಿಂಗವನ್ನು ಮುಚ್ಚಿದ ಸೌಮ್ಯವಾದ ಮುಖ. ಈ ಮುಖದ ಮೇಲೆ ಒಂದು ಗೇಣುದ್ದದ ಬಂಗಾರದ ಕಿರೀಟ.

ಜಗನ್ನಾಥ ಚಿತ್ರವನ್ನೆ ನೋಡುತ್ತಿದ್ದುದನ್ನು ಗಮನಿಸಿದ ಜೋಯಿಸರು ಕಿರೀಟವನ್ನೆ ಉದಾಹರಣೆಗೆ ತೆಗೆದುಕೊಂಡರು.

'ಈ ಕಿರೀಟಾನ್ನೆ ಉದಾಹರಣೆಗೆ ತಗೊಳ್ಳೋಣ. ನೀವು ಮಗುವಾಗಿದ್ದಾಗ ನಿಮಗೆ ಬಾಲಗ್ರಹ. ಮೂರು ದಿನ ನಿಮಗೆ ಧಾತು ತಪ್ಪಿತ್ತು. ನನ್ನ ತೊಡೆಯ ಮೇಲೇ ಮಲಗಿಸಿಕೊಂಡು ನಾನೇ ಮೃತ್ಯುಂಜಯ ಜಪ ಮಾಡಿದೆ. ಜೊತೆಗೆ ಸುಬ್ರಾಯ ಅಡಿಗರೂ ಇದ್ದರು – ಬೇಕಾದರೆ ಅವರನ್ನು ಕೇಳಿ. ಹೇಳ್ತಾರೆ. ಮೈತುಂಬ ಚಿಟಿಕಿ ಹಾಕಿದರೂ ನಿಮಗೆ ಎಚ್ಚರವಾಗಲಿಲ್ಲ. ಆಗ ನಿಮ್ಮ ತಾಯಿಗೆ ನಾನೇ ಹೇಳಿದೆ. ಮಂಜುನಾಥನಿಗೆ ಬಂಗಾರದ ಕಿರೀಟ ಮಾಡ್ಸಿಕೊಡ್ತೀನಿ ಅಂತ ಹರಕೆ ಹೇಳಿಕೊಳ್ಳಿ ಅಂತ. ದೇವಸ್ಥಾನದ ಅಭಿವೃದ್ಧಿ ಆಗಬಾರ್ದೂಂತ ಹೊಟ್ಟೆಕಿಚ್ಚು ನನಗಿದ್ದಿದ್ರೆ ಈ ಹರಕೆ ಹೇಳಿಕೊಳ್ಳಿ ಅಂತ ನಿಮ್ಮಮ್ಮನಿಗೆ ಹೇಳ್ತಿದ್ನ ನಾನು ? ಯಾಕೆ ಹೇಳಕ್ಕೆ ಹೊರಟೇಂದ್ರೆ – ಮಂಜುನಾಥನ ತಲೇ ಮೇಲೆ ಈ ಕಿರೀಟ ಬಂದ್ರೂನೂ ನಿಮ್ಮ ಪ್ರಾಣ ಉಳಿಸೋಕೆ ಪೂಜೆ ಸಂದದ್ದು ಭೂತರಾಯನಿಗೇನೆ. ಅಂದರೆ ಮಂಜುನಾಥನ ಹೆಸರಲ್ಲಿ ಕೆಲಸ ಮಾಡೋದೆಲ್ಲ ಈ ಭೂತರಾಯನೇ. ಶ್ರೋತ್ರೀಯನಾದವನು ಈ ಭೂತರಾಯನಿಗೆ ಪೂಜೆ ಮಾಡೋದು ಸರಿಯೆ ?'

ಕಿರೀಟವನ್ನೆ ಉದಾಹರಣೆಗೆ ತೆಗೆದುಕೊಂಡದ್ದರಿಂದ ಜಗನ್ನಾಥನ ತಾಯಿಯನ್ನೂ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದಂತಾಗಿ ಜೋಯಿಸರು ತಮ್ಮ ಮಾತಿನ ಭರಕ್ಕೆ ತಾವೇ ತಬ್ಬಿಬ್ಬಾದರು. ಮುಂದೇನು ಹೇಳುವುದು ಅವರಿಗೆ ತಿಳಿಯಲಿಲ್ಲ. ಏನೋ ಹೇಳ ಹೋಗಿ ಮತ್ತೇನೋ ಹೇಳಿದರು :

'ಒಟ್ಟು ಜನರ ನಂಬಿಕೆ. ಇಡೀ ಭಾರತಕ್ಕೆಲ್ಲ ಈ ನಂಬಿಕೆ ಹಬ್ಬೇ ಇದ್ರೆ ರಾಷ್ಟ್ರಪತಿಗಳೂ ಇಲ್ಲಿಗೆ ಬರ್ತಿದ್ರೇನು ? ಅವರಿಗೆ ಹೃದ್ರೋಗದ ಭಯ. ಇಲ್ಲಿಂದ ಹಿಂದಕ್ಕೆ ಹೋಗುವಾದ ಅವರ ಮುಖ ಹೇಗೆ ಅರಳಿತ್ತು ನೋಡಿದ್ರ ? ನನ್ನ ಸಂಸ್ಕೃತ ಕಾವ್ಯ ನೋಡಿ ಅವರಿಗೆ ಬಹಳ ಸಂತೋಷವಾಯ್ತು. ಕಟ್ಟು ಹಾಕಿಸಿಕೊಟ್ಟೆ. ವಿಮಾನದಲ್ಲಿ ತಗೊಂಡು ಹೋದ್ರು.'

ಜಗನ್ನಾಥನಿಗೆ ಒಳಗೊಳಗೇ ನಗು. ತಡೆದುಕೊಂಡು ಕೇಳಿದ :

‘ಮಂಜುನಾಥನಿಗೂ ಭೂತರಾಯನಿಗೂ ಏನೋ ಸಂಬಂಧ ಅಂದ್ರಲ್ಲ – ಅದೇನು ಹೇಳಿ.’

‘ಈ ಪ್ರದೇಶದ ಮೂಲನಿವಾಸಿಗಳಿದ್ದಾರಲ್ಲ – ಮಂಡೀ ಮೇಲೆ ಪಂಚೆಯುಡೋ ಜನ, ಕುರಿ ಕೋಳಿ ಕೊಯ್ದು ತಿನ್ನೋ ಜನ – ಅವರ ದೇವರು ಈ ಭೂತರಾಯ. ಬ್ರಾಹ್ಮಣ ಯತಿಗಳು ಈ ಭೂತರಾಯನ ಮೇಲೆ ಮಂಜುನಾಥನನ್ನ ಸ್ಥಾಪಿಸಿ ಈ ಪ್ರಾಂತದ ಮೂಲನಿವಾಸಿಗಳು ನಮಗೆ ನಡಕೊಳ್ಳೋ ಹಾಗೆ ಮಾಡಿದ್ರು.’

‘ಅದಕ್ಕೇ ಹಾಗಾದರೆ ಭೂತರಾಯ ಈಗ ಗೇಣಿದಾರರ ವಿರುದ್ಧಾನೇ ಎಲ್ಲಾ ತೀರ್ಪನ್ನೂ ಕೊಡೋದು ಅನ್ನಿ.’

ಜೋಯಿಸರು ಜಾಣರು; ಅವರಿಗೆ ಜಗನ್ನಾಥನ ಮಾತಿನ ಕೊಂಕು ಅರ್ಥವಾಗಿತ್ತು. ಆದರೂ ತನ್ನ ಮಾತು ಎತ್ತೆತ್ತಲೋ ಹರಿಯಿತೆಂದು ದಿಗಿಲಾಗಿ,

‘ಆದರೆ ಈ ದೇವರು ಬಲು ಕಾರ್ಣಿಕ, ಬಲು ಕಾರ್ಣಿಕ, ಪೂಜೆ ಮಾಡೋವರು ನಿಷ್ಠೆಯಿಂದ ಉಳಿಸಿಕೊಂಡು ಬರಬೇಕು ಅಷ್ಟೆ. ಮಂಜುನಾಥ ಬರೀ ನೆವ ಆಗಬಾರ್ದು ಅಂತ ನನ್ನ ಮಾತಿನ ತಾತ್ಪರ್ಯ, ಇನ್ನೇನಿಲ್ಲ.’

ಜೋಯಿಸರು ಜಾರಿಕೊಳ್ಳುತ್ತಿರುವುದನ್ನು ನೋಡಿ ಜಗನ್ನಾಥ ಎದ್ದು ನಿಂತ. ‘ಈ ಬಗ್ಗೆ ನೀವೊಂದು ಲೇಖನ ಬರೀಬೇಕು. ಶಾಸ್ತ್ರಿಗಳೇ’ ಎಂದ. ‘ಒಟ್ಟು ನಿಮ್ಮ ಪ್ರೋತ್ಸಾಹ ಬೇಕು. ನಾನು ಬರೆದ ಶ್ರೀ ಮಂಜುನಾಥ ಮಹಿಮೇನ್ನ ಪ್ರಕಟಿಸಿದವರು ನಿಮ್ಮ ತಾಯವರೆ. ಅದರದ್ದೊಂದು ಪ್ರತಿ ನಿಮಗೆ ಬೇಕೇನು – ಕೊಡಲ?’

‘ಬೇಡ, ಮನೇಲಿದೆ’ ಎಂದು ಜಗನ್ನಾಥ ಎದ್ದು ನಿಂತ. ‘ಕಾಫಿ ಕುಡೀದೇ ಹೊರಟುಬಿಟ್ರಲ್ಲ’ ಎಂದು ಜೋಯಿಸರು ಹೇಳಿದ್ದಕ್ಕೆ ‘ಛೆ ಪರವಾಗಿಲ್ಲ’ ಎಂದು ಬೀದಿಗಿಳಿದು ಮತ್ತೊಮ್ಮೆ ನಮಸ್ಕರಿಸಿ ನಡೆದ.

* * *

ಚಕ್ರವ್ಯೂಹದಂತಹ ಬೀದಿಗಳು. ಯಾವತ್ತೂ ಏನನ್ನೂ ಸೃಷ್ಟಿಸದವು. ಮಂಜುನಾಥನ ಮಹಿಮೆ ಬೆಳೆದಂತೆ ಒಂದಕ್ಕೊಂದರಂತೆ ಸೇರುತ್ತ ಬೆಳೆಯುತ್ತ ಹೋದ ಚರಂಡಿಗಳಿಲ್ಲದ ಬೀದಿಗಳು. ಹೊಲೆಯರು ಒಂದು ವಾರ ಸಾಕು, ಕುಕ್ಕೆಯಲ್ಲಿ ಹೇಲು ತುಂಬಿ ತಲೆಯ ಮೇಲೆ ಹೊರಲ್ಲ ಎನ್ನಲಿ – ಈ ಬೀದಿಗಳು ಎಷ್ಟು ನಾರಿಯಾವು ಎಂದರೆ ಮಂಜುನಾಥನ ಗರ್ಭಗುಡಿಯನ್ನೂ ದುರ್ಗಂಧ ಕವಿದೀತು. ಜಗನ್ನಾಥನ ಮೈ ಹೇಸಿಗೆಯಿಂದ ನಡುಗಿತು. ಬ್ರಾಹ್ಮಣರು, ವ್ಯಾಪಾರಿಗಳು ಇರುವ ಪೇಟೆಗಳಲ್ಲಿ ಒಂದೇ ಒಂದು ಸುಂದರವಾದ ವಸ್ತು ಸೃಷ್ಟಿಯಾಗುವುದಿಲ್ಲ – ಯಾಕೆ? ಭಾರತೀಪುರದ ಹತ್ತು ಮೈಲುಗಳಾಚೆ ಕಲ್ಲುಮರಿಗೆ ಮಾಡುವವರಿದ್ದಾರೆ. ಗಂಧದಲ್ಲಿ ವಿಗ್ರಹ ಕೆತ್ತುವವರಿದ್ದಾರೆ. ಎರಡೇ ಎರಡು ಮೈಲುಗಳಾಚೆಯ ಹಳ್ಳಿಯಲ್ಲಿ ತೊಗಲು

ಬೊಂಬೆಯಾಟ ಆಡುವವರಿದ್ದಾರೆ. ಆದರೆ ಭಾರತೀಪುರದ ಪೇಟೆಯಲ್ಲಿ ಯಾವ ಸೌಂದರ್ಯವೂ ಯಾವತ್ತೂ ಇರಲಿಲ್ಲ, ಯಾಕೆ, ಆಗೀಗ ಕಟ್ಟುವ ತೋರಣ ಬಿಟ್ಟು, ರಾಷ್ಟ್ರಪತಿಗಳು ಬಂದಾಗ ಚೆಲ್ಲಿದ ಆಮೇಲೆ ಕೆಸರಾದ ಕೆಮ್ಮಣ್ಣು ಬಿಟ್ಟು... ಜಗನ್ನಾಥ ಮಕ್ಕಳ ಹೇಲನ್ನು ತುಳಿಯದಂತೆ ಹುಷಾರಾಗಿ ನಡೆದು ಸ್ವಲ್ಪ ಅಗಲವಾಗಿದ್ದ ರಥಬೀದಿಯನ್ನು ಸೇರಿದ.

ಈ ಪೇಟೆಯ ಅತ್ಯುತ್ತಮ ಸೃಷ್ಟಿಯೆಂದರೆ ನಾಗರಾಜ ಜೋಯಿಸರ ಅನುಷ್ಟುಪ್ ಛಂದಸ್ಸಿನ ಮಂಜುನಾಥ ಮಹಿಮೆಯಿರಬೇಕು. ಜಗನ್ನಾಥನಿಗೆ ನಗುಬಂತು. ಏನೇನೋ ಮಾತಾಡಿಬಿಟ್ಟೆನೆಂದು ಪ್ರಾಣ ಒದ್ದಾಡುತ್ತಿರಬೇಕು. ತನ್ನ ತಾಯಿ ಪ್ರಕಟಿಸಿದ್ದ ಎರಡಾಣೆ ಬೆಲೆಯ ಆ ಪುಸ್ತಕದಲ್ಲಿ ಜಗನ್ನಾಥನ ಪ್ರಾಣ ಉಳಿಸಿದ ಕಿರೀಟದ ವರ್ಣನೆಯಿತ್ತು; ಈ ಕಿರೀಟಧಾರಿಯಾದ ಶ್ರೀ ಮಂಜುನಾಥ ಬಾಲಕನಿಗೆ ಆಯುರಾರೋಗ್ಯ ಭಾಗ್ಯಾದಿಗಳನ್ನು ಕರುಣಿಸಲು ಎನ್ನುವ ಶ್ಲೋಕವಿತ್ತು. ಮತ್ತೆ ಮಂಜುನಾಥನ ಆನತಿಯನ್ನೆಲ್ಲ ಶಿರಸಾವಹಿಸಿ ನಡೆಸುವ ಭೂತರಾಯನ ಪ್ರತಾಪದ ವರ್ಣನೆಯಿತ್ತು. ರಂಗವಲ್ಲಿಗಳಿಂದಲೂ, ತಳಿರು ತೋರಣಗಳಿಂದಲೂ, ಮಂದಗಮನೆಯರಿಂದಲು, ಸ್ಫುರದ್ರೂಪಿಗಳಾದ ಭೂತರಾಯ ಭಕ್ತ ಕಿರಾತ ಸ್ತ್ರೀಪುರುಷರಿಂದಲೂ, ಮಹಾತಪಸ್ವಿಗಳಿಂದಲೂ, ಅನಾಥರಕ್ಷಕಳಾದ ಜಗನ್ನಾಥನ ಮಾತೆ ಸೀತಾದೇವಿಯಿಂದಲು ಈ ವಿಶಾಲ ಪೃಥ್ವಿಗೇ ಭೂಷಣಪ್ರಾಯವಾದ ನಗರ ಭಾರತೀಪುರವೆಂಬ ಒಂದು ಇಡೀ ಅಧ್ಯಾಯ ತುಂಬಿದ ವರ್ಣನೆಯಿತ್ತು. ಆದ್ದರಿಂದಲೇ – ಇಲ್ಲಿ ಏನೂ ಸಂಭವಿಸುವುದಿಲ್ಲ ಹೊಸದೇನೂ ಆಗುವುದಿಲ್ಲ, God has made life sterile ಎಂದು ಮಾರ್ಗರೆಟ್ಟಿಗೆ ಬರೆಯುತ್ತಿದ್ದ ಕಾಗದಕ್ಕೆ ಇನ್ನೊಂದು ಪ್ಯಾರಾ ಸೇರಿಸಿದ. ಬರೆಯದೆ ಬಹಳ ದಿನವಾಯಿತು, ಅವಳಿಗೆಲ್ಲ ಬರೆದು ತಿಳಿಸಬೇಕು.

ಕೆಲವು ತಿಂಗಳ ಹಿಂದೆ ಡೆಲ್ಲಿಗೆಂದು ಹೋದೆ. ಡಿಯರ್ ಮಾರ್ಗರೆಟ್, ಹೈದರಾಬಾದ್‌ನಲ್ಲಿ ಇನ್ನೇನು ವಿಮಾನ ಹೊರಡಬೇಕು, ಅಷ್ಟುಹೊತ್ತಿಗೆ ಸರಿಯಾಗಿ ಇಡೀ ಭಾರತದಲ್ಲಿ ಖ್ಯಾತನಾದ ಶಿರ್ನಾಳಿ ಬಾಬನೆಂಬುವನೊಬ್ಬ ಹತ್ತಿದ. ಅವನ ಪಕ್ಕದಲ್ಲಿ ಖ್ಯಾತನಾದ ಒಬ್ಬ ವಿಜ್ಞಾನಿ, ಬಾಬನ ಪರಮಭಕ್ತ. ವಿಮಾನದಲ್ಲಿ ಶ್ರೀಮಂತ ವರ್ತಕರು, ಯಾವುದೋ ಕಾನ್ಫರೆನ್ಸಿಗೆಂದು ಬಂದ ಇಪ್ಪತ್ತು ವೈಸ್ ಛಾನ್ಸಲರುಗಳು ಇದ್ದರು. ಶಿರ್ನಾಳಿ ಬಾಬನ ಕ್ಯಾರಿಸ್ಮಾನ್ನ ನೀನು ನಂಬಲು ಕಣ್ಣಾರೆ ನೋಡಬೇಕು. ಭಕ್ತವಿಜ್ಞಾನಿ ಲೈಟ್ ಹಾಕಲು ಕೈ ಎತ್ತಿದರೆ ಬಾಬ ತಡೆದರು. ಸೌಜನ್ಯದ ಮೂರ್ತಿ. ನಾಲ್ಕೈದು ಅಮೆರಿಕನ್ ಹಿಪ್ಪಿ ಹುಡುಗಿಯರು ಹೋಗಿ ಕಾಲಿಗೆ ಬಿದ್ದರು. ಬಾಬನ ಮಾಯಾಜಾಲದಿಂದ ಅವರ ಕೈಯಲ್ಲಿ ವಿಭೂತಿ ಬಂತು. ಅದನ್ನವರು ತಿಂದರು. ಏರ್ ಹೋಸ್ಟೆಸ್‌ಗಳೂ ಕಾಲಿಗೆ ಬಿದ್ದರು. ಬಾಬ ಎಂತಹ ಸ್ಪಿರಿಚುಯಲ್ ಶಿವಲ್ರಿ ಬೆಳೆಸಿಕೊಂಡಿದ್ದಾನೆಂದರೆ ಭಕ್ತ ಕಾಲು ಮುಟ್ಟುವ ಮುಂಚೆ ತವಕದಿಂದ ಅವನು ಭಕ್ತನ ತಲೆ ಮುಟ್ಟುತ್ತಾನೆ. ಜೇನಿನಷ್ಟು ಸಿಹಿಯಾಗಿ ನಗುತ್ತ ಕೈಯೊಡ್ಡುತ್ತಾನೆ. ಭಕ್ತನ ಕೈಯಲ್ಲಿ ಬಂಗಾರದ ತಾಳಿಯೋ ವಿಭೂತಿಯೋ ಇರುತ್ತದೆ. ಇವನು ಎಲ್ಲ ರಾಜಭವನಗಳನ್ನೂ ಹೀಗೆ ಆಕ್ರಮಿಸಿದ್ದಾನೆ. ದೇಶಾದ್ಯಂತ ಜನರನ್ನು ಭಜನೆಗೆ ಹಚ್ಚಿದ್ದಾನೆ. ಕಡುಬಡವರಿಂದ ಹಿಡಿದು ರಾಷ್ಟ್ರಪತಿಗಳ ತನಕ ನಂಬುವ ಏಕಮಾತ್ರ ವ್ಯಕ್ತಿಯೆಂದರೆ ಈ ಬಾಬ. ಎಲ್ಲ ವರ್ಗ ವರ್ಣಭೇದಗಳನ್ನೂ ಸೀಳುವ ಸತ್ಯ ಇವನೊಬ್ಬನೇ. ಪ್ರಿಯ ಮಾರ್ಗರೆಟ್, ದೇವರನ್ನು ನಾಶ ಮಾಡದ ಹೊರತು ನಾವು ಖಂಡಿತ ಕ್ರಿಯೇಟಿವ್ ಆಗಲಾರೆವು. ನಾವೆಲ್ಲ ದೇವರ ಗರ್ಭದಲ್ಲಿ ಪಿಂಡಗಳಂತಿದ್ದೇವೆ, ಹುಟ್ಟಿಯೇ ಇಲ್ಲ. ಚರಿತ್ರೆಯ ಮಂಥನಕ್ಕೆ ಸಿಕ್ಕಿಲ್ಲ. ಸೀಳಬೇಕು.

* * *

'ಏಯ್ ವಾಸು'

ಜಗನ್ನಾಥ ಕೈಹಿಡಿದು ಜಗ್ಗಿದ. ಹತ್ತು ವರ್ಷಗಳಿಂದ ನೋಡದ ಗೆಳೆಯ. ಹೋಟೆಲಿಗೆ ನುಗ್ಗುತ್ತಿದ್ದ. ಅದೇ ದೂರ ದೂರದ ಹಲ್ಲುಗಳು. ಕೋಲು ಮುಖ. ಹಿಟ್ಲರ್‌ಮೀಸೆ. ಕೂದಲು ಉದುರಿದೆ. ಹಣೆಗೆ ಕುಂಕುಮ ಹಚ್ಚಿದ್ದಾನೆ. ನಂಬುವುದೇ ಕಷ್ಟ. ಶಿವಮೊಗ್ಗದಲ್ಲಿ ಇಂಟರ್ ಮೀಡಿಯೆಟ್ ಓದುತ್ತಿದ್ದಾಗ ಇಡೀ ರಾತ್ರೆ ಕೂತು ಇಬ್ಬರೂ ಕ್ರಾಂತಿಯ ವಿಷಯ ಮಾತಾಡುತ್ತಿದ್ದರು – ಮಸಾಲೆ ಪೂರಿ ತಿನ್ನುತ್ತ, ಕಾಕನ ಹೋಟಲಲ್ಲಿ ಟೀ ಕುಡಿಯುತ್ತ. ಎಲ್ಲ ತ್ಯಾಗಕ್ಕೂ ಸಿದ್ಧನಾಗಿ ಕುದಿಯುತ್ತಿದ್ದ ಹುಡುಗ. ಹಾಗೆ ನೋಡಿದರೆ ತಾನೇ ಪುಕ್ಕಲು, ನಲವತ್ತೆರಡರ ಚಳವಳಿಯಲ್ಲಿ ಪೊಲೀಸರು ಎಷ್ಟು ಹೊಡೆದರೂ ಟಪ್ಪಾಲು ಪೆಟ್ಟಿಗೆಯನ್ನು ಎಲ್ಲಿ ಮುಚ್ಚಿಟ್ಟಿದ್ದೇನೆಂದು ವಾಸು ಬಾಯಿ ಬಿಟ್ಟಿರಲಿಲ್ಲ. ಜಗನ್ನಾಥ ಮೈಮರೆತು ಅವನ ರಟ್ಟೆಗಳನ್ನು ಗಟ್ಟಿಯಾಗಿ ಅದುಮಿ, ಅವನ ಹಣೆಯ ಕುಂಕುಮ ನೋಡುತ್ತ,

'ಏನೋ ರ್ಯಾಸ್ಕಲ್, ಇದೇನು ಜೋಕಿಗಾಗಿ ಹಚ್ಚಿಕೊಂಡಿದಿಯಾ ಹೇಗೆ?' ಎಂದ.

ವಾಸು ಚೇತರಿಸಿಕೊಳ್ಳುತ್ತ, 'ಜಗಣ್ಣ ಅಲ್ವೇನೋ' ಎಂದ. ವಾಸು ಪ್ಯಾಂಟ್ ತೊಟ್ಟು ಬುಷ್‌ಶರ್ಟ್ ಹಾಕಿದ್ದ. 'ಮನೇಗೆ ಹೋಗೋಣ ನಡಿ' ಎಂದ ಜಗನ್ನಾಥ. ಶ್ರೀಪತಿರಾಯರನ್ನು ನೋಡಲು ತಾನು ಹೋಗುತ್ತಿದ್ದೇನೆನ್ನುವುದು ಜಗನ್ನಾಥನಿಗೆ ಮರೆತೇ ಹೋಗಿತ್ತು. 'ಯಾಕೋ ವಾಸು ಇಷ್ಟು ಬಡವಾಗಿದ್ದೀಯಾ? ಇಲ್ಲಿಗೆ ಯಾವಾಗ ಬಂದೆ? ಇರೋದೆಲ್ಲಿ? ಯಾರನ್ನ ಕೇಳಿದರೂ ನೀನೆಲ್ಲಿದ್ದೀಯ ಗೊತ್ತೇ ಇಲ್ಲ ಅಂದ್ರು...'

ವಾಸುವಿನ ಗಮನ ಮಾತ್ರ ಎಲ್ಲೋ ಇತ್ತು.

'ಸ್ವಲ್ಪ ಕೆಲಸ ಇದೆ ಕಣೊ. ಆಮೇಲೆ ನೋಡ್ತೀನಿ.'

ಜಗನ್ನಾಥನಿಗೆ ಇದ್ದಕ್ಕಿದ್ದಂತೆ ನಿರಾಸೆಯಾಯಿತು. ತನಗಾಗಿದ್ದ ಸಂತೋಷ ವಾಸುವಿಗಾದಂತೆ ಕಂಡಿರಲಿಲ್ಲ. ಅಲ್ಲದೇ ತುಂಬ ಕುಗ್ಗಿದ್ದ. ಅವನ ಹಣೆಯ ಮೇಲಿನ ಮಂಜುನಾಥನ ಪ್ರಸಾದ ಪ್ರಾಯಶಃ ಜೋಕಲ್ಲ. ಜಗನ್ನಾಥನಿಗೆ ತಮ್ಮಿಬ್ಬರ ನಡುವೆ ತಕ್ಷಣ ಒಂದು ಗೋಡೆ ಎದ್ದಂತೆನಿಸಿತು. ಆದರೂ ತೋರಗೊಡದೆ,

'ಬಾ ಕಾಫಿ ಕುಡಿಯೋಣ' ಎಂದ.

'ನೀನು ಈ ಹೋಟ್ಲಿಗೆ ಬರ್ತೀಯ?'

'ಬರದೇ ಏನು, don't be stupid.'

ಹೋಟೆಲಿನ ಯಜಮಾನ ಜಗನ್ನಾಥನನ್ನು ಕಂಡವನೆ ಎದ್ದುನಿಂತ. ಕಾಫಿ ಕುಡಿಯುತ್ತಿದ್ದ ಕೆಲವು ರೈತರೂ ಎದ್ದು ನಿಂತರು. ಜಗನ್ನಾಥನಿಗೆ ಮುಜುಗರವಾಯಿತು. ಊರಿನಲ್ಲಿ ಅವನು ಹೋಟೆಲೊಳಗೆ ಹೋದದ್ದು ಇದೇ ಮೊದಲಬಾರಿ. ಕಪ್ಪು ಕಲ್ಲಿನ ಮೇಜೊಂದನ್ನು ಒರೆಸಿ ಯಜಮಾನರೇ ಸ್ವತಃ ಇಬ್ಬರನ್ನೂ ಕುರ್ಚಿಯ ಮೇಲೆ ಕೂರಿಸಿದರು. ಜಗನ್ನಾಥನಿಗೆ ಪರಿಚಯವಿದ್ದ ಆಳುಗಳು ಒಳಗೆ ಹೋಗಿ ಕೂತರು. ವಾಸು 'ಕಾಫಿ' ಎಂದ. ಯಜಮಾನರೇ ಕಾಫಿ ತರಲು ಒಳಗೆ ಹೋದರು. 'ನೀನೆಷ್ಟು ಈ ಊರಲ್ಲಿ ದೊಡ್ಡ ಮನುಷ್ಯಾನ್ನೋದು ಈಗ್ಲಾದ್ರೂ ಗೊತ್ತಾಯ್ತ?' ವಾಸು ಚುಡಾಯಿಸುವ ಧಾಟಿಯಲ್ಲಿ ಮಾತಾಡಿದ್ದು ಕೇಳಿ ಜಗನ್ನಾಥನಿಗೆ ಖುಷಿಯಾಯಿತು.

'ಏನು ಮಾಡ್ತಾ ಇದಿ ಹೇಳು.'

ನೊರೆಯ ಟೋಪಿ ಹಾಕಿಕೊಂಡು ಬಂದ ಬೆಚ್ಚಗಿದ್ದ ಕಾಫಿಯನ್ನು ಕುಡಿಯುತ್ತ ಜಗನ್ನಾಥ ಕೇಳಿದ.

'ಬಿ.ಎ. ಮುಗಸ್ಲಿಲ್ಲ ಗೊತ್ತಲ್ಲ. ಅಪ್ಪ ಮನೆಬಿಟ್ಟು ಓಡಿಸಿದ್ರು. ಆಗ ನೀನು ಇಂಗ್ಲೆಂಡಿಗೆ ಹೋದಿ. ನಾನು ನಾಟಕ ಸೇರಿದೆ. ಆ ಮೇಲೆ ಸ್ವತಃ ಕಂಪನಿ ಮಾಡಿದೆ. ಮುವ್ವತ್ತು ಸಾವಿರ ರೂಪಾಯಿ ದುಡಿದೆ. ಆಮೇಲದನ್ನ ಕಳೆದೆ. ಪ್ರಾಹಿಬಿಶನ್ ಕಾಲ. ಕಳ್ಳಭಟ್ಟಿ ತಯಾರಿಸಿ ಮಾರಿದೆ. ದುಡ್ಡು ಮಾಡಿದೆ. ಒಬ್ಬ ಶೆಟ್ಟೇ ಹುಡುಗೀನ್ನ ರಿಜಿಸ್ಟರ್ಡ್ ಮದುವೆ ಮಾಡಿಕೊಂಡೆ. ನನ್ನ ಮುಖ ನೋಡಬೇಕಾಂತ ಅಪ್ಪ ಹೇಳಿದ. ಈಗ ಮೂರು ಮಕ್ಕಳು. ಕ್ರಾಂತೀಂತ ಎಷ್ಟು ಮಾತಾಡಿದ್ರೂ ಮನೇಗೆ ಬಂದಾಗ ಹೆಂಡತಿ ಇವತ್ತು ಅಡಿಗೇಗೆ ಅಕ್ಕಿ ಇಲ್ಲ ಅಂದ್ರೆ ಹೇಗಾಗುತ್ತೆ ಹೇಳು. ಡ್ರಗ್ ಸ್ಟೋರು ಅಂತ ಹೆಸರು ಹೇಳಿ ಒಂದಷ್ಟು ದಿನ ಬ್ರಾಂದಿ ಮಾರಿದೆ. ಆಮೇಲೆ ಬಾಂಬೆ ಶೋ ಮಾಡಿದೆ. ನನ್ನ ಕಂಪನೀಲಿದ್ದ ಹುಡುಗೀರಿಗಾಗಿ ಮರ್ಚೆಂಟ್ಸು, ಪಾಲಿಟಿಶಿಯನ್ಸು ಎಲ್ಲ ನನ್ನ ಸ್ನೇಹಿತರಾದ್ರು. ಈ ಭಂಡ ಬಾಳು ಬೇಡಾಂತ ಅದನ್ನೂ ಬಿಟ್ಟೆ. ಈಗ ಒಂದು ಕಡೆ ಇರಬೇಕೂಂತ ಅನ್ನಿಸಿದೆ. ಅದಕ್ಕೇ ಈ ಊರಿಗೆ ಬಂದೆ. ಭೂತರಾಯರು ಅಪ್ಪಣೆ ಮಾಡಿದರೆ, ಒಂದು ಸ್ವೀಟ್ ಮೀಟ್ ಸ್ಟಾಲ್ ಇಡು ಅಂತ. ಇಡ್ತಾ ಇದೀನಿ.'

'ನಿನ್ನ ಜೀವನ ಒಂದು ಪಿಕರಸ್ಕ ನಾವೆಲ್ ಆಗಬಹುದು ನೋಡು. ನಿಜವಾಗಿ ನೀನು ಭೂತರಾಯನ್ನ ನಂಬ್ತಿಯೇನೊ?'

'ಏನೋ ಒಂದು ಮಿಸ್ಟರಿ ಇದೇಂತ ನೀನೂ ನಂಬಲ್ವೇನಯ್ಯ?'

ವಾಸು ಎದ್ದು ಹೋಗುವ ಅವಸರದಲ್ಲಿದ್ದಂತೆ ಕಂಡಿತು.

'ಜೀವನಾಂದ್ರೆ ಕಷ್ಟ ನೋಡು. ನೀನೇನು ಮಾಡ್ತಿದಿ ಹೇಳು. ನೀನಿಲ್ಲಿಗೆ ಹಿಂದಕ್ಕೆ ಬಂದದ್ದು, ಜಮೀನು ಮಾಡಸ್ತ ಇರೋದು ಎಲ್ಲಾ ತಿಳೀತು. ಅದೇನೋ ಒಂದು ಇಂಗ್ಲಿಷ್ ಹುಡುಗೀನ ಮದುವೆ ಮಾಡಿಕೊಂಡಿದೀಂತ ಇಲ್ಲೆಲ್ಲ ಸುದ್ದಿ. ನಿಜವೇ?'

ವಾಸು ಕಾಪಿ ಮುಗಿಸಿ ಸಿಗರೇಟ್ ಹಚ್ಚಿ ಕುತೂಹಲವಿಲ್ಲದೆ ತನ್ನ ಮಾತಿಗೆ ಕಾದ.

‘ಒಬ್ಬ ಹುಡುಗಿ ಜೊತೆ ಇದ್ದದ್ದು ನಿಜ. ಆದರೆ ನಾನವಳನ್ನ ಮದುವೆಯಾಗಿಲ್ಲ.’

‘Good. ಜಾಣ ಕಣಯ್ಯ, ಅಂತೂ ಇಂಗ್ಲೆಂಡಲ್ಲಿ ಮಜ ಮಾಡ್ದಿ ಅನ್ನು.’

ವಾಸುವಿನ ಬಾಯಲ್ಲಿ ‘ಮಜ’ ಎನ್ನುವ ಮಾತು ಕೇಳಿ ಜಗನ್ನಾಥನ ಭಾವನೆಗಳೆಲ್ಲ ಕುಸಿದುಬಿಟ್ಟವು. ಒಂದು ಕಾಲದಲ್ಲಿ ಎಷ್ಟೊಂದು ಆಪ್ತನಾಗಿದ್ದ ಆ ವಾಸು ಯಾರೋ, ಇವನು ಯಾರೋ, ತಾನು ಯಾರೊ. ಪರಸ್ಪರ ಮಾತು ಸಾಧ್ಯವೇ ಇಲ್ಲ. ತಾನು ಮತ್ತು ಮಾರ್ಗರೆಟ್ ಗಂಡ ಹೆಂಡಿರಂತೆ ಬದುಕಿದ್ದು ನಿಜ; ಮದುವೆಯಾಗದೇ ಇದ್ದುದು ನಿಜ – ಆದರೆ ಇದು ಬರಿ ಮಜಕ್ಕಲ್ಲ, ಬರಿ ಜಾಣತನ ಅಲ್ಲ, ಇನ್ನೇನೊ – ಹೇಗೆ ವಾಸುವಿಗೆ ಹೇಳುವುದ? ಅವನಿಗೆ ತಾನೀಗ ಬೇಕಿಲ್ಲ. ಕುಗ್ಗಿದ್ದಾನೆ.

‘ಬಿಡುವಾದಾಗ ಮನೆಗೆ ಬಾರಯ್ಯ’ ಎಂದು ಜಗನ್ನಾಥ ಎದ್ದ. ಹೋಟೆಲ್ ಯಜಮಾನ ದುಡ್ಡು ತಗೊಳ್ಳಲಿಲ್ಲ. ಹೊರಗೆ ಬಂದು ವಾಸು ಕೈಕುಲುಕಿ ಹೊರಟು ಹೋದ. ಜಗನ್ನಾಥ ಶ್ರೀಪತಿರಾಯರ ಮನೆ ಕಡೆ ನಡೆದ. ಹೊಸ ಕೊಂಡಿಗಳನ್ನು ಹುಡುಕಬೇಕು. ಈ ಪೇಟೆಯಲ್ಲಿ ಸಫಲನಾಗಬೇಕು. ಬೇರೆ ಗತಿಯಿಲ್ಲ. ಮತ್ತೆ ಮಂಕು ಕವಿಯುತ್ತಿದೆ. ಇಲ್ಲಿ ಕ್ರಿಯೆ ಸಾಧ್ಯವೆ? ಚರಿತ್ರೆಗೆ ಸೇರುವ, ಸೇರಿಸುವ ಕ್ರಿಯೆ. ಸೀಳಿ ಹೊರಕ್ಕೆ ಬರುವ, ಕಾಲಕ್ಕೆ ಜವಾಬ್ದಾರನಾಗುವ ಕ್ರಿಯೆ. ಮತ್ತೆ ಎಳೆ ಬಿಸಿಲಿನಲ್ಲಿ ಹೊಸಬನಾಗುವ, ಹೂವಾಗುವ, ಮಿಡಿಯಾಗುವ ಕ್ರಿಯೆ. ಈ ಮಾವಿನ ಮರದಂತೆ ಚಿಗುರುತ್ತಲೇ ಇರುವ ಕ್ರಿಯೆ. ಜಗನ್ನಾಥನಿಗೆ ಸ್ಪಷ್ಟವಾಗದ ಕತ್ತಿಲಿನಲ್ಲಿ ಕಪ್ಪು ಮುಖಗಳು, ಕೆದರಿದ ಕೂದಲುಗಳು, ಹೇಲಿನ ಕುಕ್ಕೆ ಹೊತ್ತು ನಡೆಯುವ ತಲೆಗಳು ಇದ್ದುವು.  ಎದುರು ಮಂಜುನಾಥ ದೇವಾಲಯದ ಹೊಳೆಯುವ ಶಿಖರ.  ಅದರ ಹಿಂದೆ ಸದಾ ಹರಿಯುವ ಶುಭ್ರವಾದ ನೀರು. ಪೇಟೆಯ ಕೊಳಕನ್ನೆಲ್ಲ ಮರೆಸುವ ಬಿಳಿ ಮರಳಿನ ರಾಶಿ, ಬಂಡೆಗಳು. ತನ್ನ ಎಳೆಯ ಕಾಲುಗಳಿಗೆ ಜಿಗಿಯುವುದನ್ನು ಕಲಿಸಿದ ಬಂಡೆಗಳು, ದೇವಸ್ಥಾನದ ಮೇಲಿನ ಗುಡ್ಡದಲ್ಲಿ ಕೆದರಿದ ಒದ್ದೆ ತಲೆಯ, ಕುಂಕುಮ ಬಳಿದುಕೊಂಡು ಕೈಯಲ್ಲಿ ಸಿಂಗಾರ ಹಿಡಿದು ಥತ್ತರ ನಡುಗುತ್ತ ಕುಣಿಯುವ ಭೂತರಾಯ, ಗರ್ಭಗುಡಿಯೊಳಗೆ ಕಿರೀಟ ಹೊತ್ತ ಶ್ರೀ ಮಂಜುನಾಥ. ಇಡೀ ಊರನ್ನು ತನ್ನ ನಾದದಿಂದ ತುಂಬುವ ತನ್ನ ಹಿರಿಯರು ಮಾಡಿಸಿಕೊಟ್ಟ ಗಂಟೆ. ಇವೆಲ್ಲ ಕಲಸಿಕೊಂಡು ಸ್ಪಷ್ಟವಾದೊಂದು ವಿಚಾರ ಸೀಳಿ ಹೊರಬರಲು ಹವಣಿಸುತ್ತಿತ್ತು. ಮತ್ತೆ ಮತ್ತೆ ಈ ವಿಚಾರವನ್ನು ಜಗನ್ನಾತ ಅನೇಕ ಮಗ್ಗುಲಿನಿಂದ ನೋಡಲು ಯತ್ನಿಸಿದ್ದಾನೆ. ಶ್ರೀಪತಿರಾಯರಿಗೆಲ್ಲ ಹೇಳಿಕೊಳ್ಳುವುದೆಂದು, ತೆರೆದ ಬಾಗಿಲಿನ ಒಳಗೆ ಹೋಗಿ ಕತ್ತಲೆಯ ನಡುಮನೆಯಲ್ಲಿ ನಿಂತು,

‘ರಾಯರು ಇದ್ದಾರಾ?’ ಎಂದ.

ಶ್ರೀಪತಿರಾಯರು ಜಗನ್ನಾಥನ ತಂದೆ ಆನಂದರಾಯರ ಬಾಲ್ಯಮಿತ್ರರು; ತಂದೆ ಸತ್ತ ಮೇಲೆ ತಾಯಿ ಸೀತಾದೇವಿಗೂ ಆಪ್ತರಾಗಿದ್ದವರು. ಜಗನ್ನಾಥ ಮೈಸೂರಿನಲ್ಲಿ ಓದಲು ಹೋಗುವ ಹೊತ್ತಿಗೆ ತಾಯಿಗೆ ಆಪ್ತರಾಗಿದ್ದ ರೈಟರ್ ಕೃಷ್ಣಯ್ಯನವರೂ ಸತ್ತದ್ದರಿಂದ ಶ್ರೀಪತಿರಾಯರ ಅಭಿಪ್ರಾಯ ತಿಳಿಯದೆ ತಾಯಿ ಏನನ್ನೂ ಮಾಡುತ್ತಿರಲಿಲ್ಲ. ಬಿ.ಎ. ಮುಗಿಸಿದ ಮೇಲೆ

ಜಗನ್ನಾಥ ಮುಂದಕ್ಕೆ ಓದಲು ಇಂಗ್ಲೆಂಡಿಗೆ ಹೋಗಲು ಸಹ ಶ್ರೀಪತಿರಾಯರೇ ಕಾರಣ. ತಾಯಿಗೆ ಒಬ್ಬನೇ ಮಗ, ದೇಶ ಬಿಟ್ಟು ಹೋಗುವುದು ಸರಿಯೇ ಎಂದು ಜಗನ್ನಾಥ ಅನುಮಾನಿಸುತ್ತಿದ್ದಾಗ (ಜೊತೆಗೇ ತನ್ನ ಅನುಭವಗಳನ್ನು ವಿಸ್ತರಿಸಕೊಳ್ಳಬೇಕೆಂದು ಆಸೆಪಡುತ್ತಿದ್ದಾಗ), ಶ್ರೀಪತಿರಾಯರು ತಾಯಿಯ ಜೊತೆ ತನ್ನ ಜೊತೆ ಸಮಾಲೋಚಿಸಿ ಇಂಗ್ಲೆಂಡಿಗೆ ಹೋಗುವುದೇ ಸರಿಯೆಂದು ನಿರ್ಧರಿಸಿದ್ದರು. ಮನಸ್ಸಿನ ನೆಮ್ಮದಿಯನ್ನೂ ಕ್ರಿಯಾಶೀಲತೆಯನ್ನೂ ಕೆಡಿಸುವಷ್ಟು ಆಸ್ತಿ ಜಗನ್ನಾಥನಿಗೆ ಇತ್ತಾದ್ದರಿಂದ, ಈ ಸಂಪತ್ತನ್ನು ಬೆಳೆಸುವ ಪ್ರಯತ್ನಕಷ್ಟೇ ನಿನ್ನ ವ್ಯಕ್ತಿತ್ವ ಸೀಮಿತವಾಗುವುದು ಬೇಡ ಎಂದು ಶ್ರೀಪತಿರಾಯರು ಹೇಳಿದ್ದರು. ತಾಯಿಯೂ ಇದನ್ನು ಒಪ್ಪಿದ್ದರು.

ಬದುಕುವ ಕಲೆ ತಿಳಿದಿದ್ದ ತಾಯಿ ಯಾವುದನ್ನೂ ತೀರಾ ಹಚ್ಚಿಕೊಳ್ಳದಿದ್ದರು ಮುತುವರ್ಜಿಯಿಂದ ತಾನಿಲ್ಲದಿದ್ದಾಗ ಮನೆಯ ನಿರ್ವಹಣೆ ಮಾಡಿದ್ದರು. ರೈಟರ್ ಕೃಷ್ಣಯ್ಯ ಸತ್ತ ಮೇಲೆ ಶ್ರೀಪತಿರಾಯರು ಈ ಭಾರವನ್ನು ಹಗುರಾಗಿ ಹೊರಲು ತಾಯಿಗೆ ಯಾವಾಗಲೂ ನೆರವಾಗಿದ್ದರು. ತಾಯಿ ಇದ್ದಕ್ಕಿದ್ದಂತೆ ಸತ್ತಾಗಲೂ ಅಷ್ಟೇ. ಇಂಗ್ಲೆಂಡಲ್ಲಿ ಓದುತ್ತಿದ್ದ ಜಗನ್ನಾಥ ಸುದ್ದಿ ಕೇಳಿದವನೇ ಹೊರಟುಬಂದ. ಮುಂದೇನು ಮಾಡಬೇಕು ಅವನಿಗೆ ತಿಳಿಯದು. ಆದರೆ ಶ್ರೀಪತಿರಾಯರು ಜಗನ್ನಾಥನನ್ನು ಇಂಗ್ಲೆಂಡಿಗೆ ಹಿಂದಕ್ಕೆ ಕಳುಹಿಸಿದ್ದರು. ಓದು ಮುಗಿಸಿ ಬಾ, ಇಲ್ಲಿನ ಯೋಚನೆ ಬೇಡ ಅಂದಿದ್ದರು. ನೀನು ಹುಟ್ಟಿದಾಗ ನಿಮ್ಮ ಮನೆ ಸೇರಿದ ಚಿಕ್ಕಿ ಇಲ್ಲವೆ? ಬಾಲವಿಧವೆಯಾದ ಅವರಿಗೆ ಅಕ್ಕನ ಮಗ ಸ್ವಂತ ಮಗನಿದ್ದಂತೆಯೇ ಅಲ್ಲವೆ? ಮನೇಲಿ ಶಾನುಭೋಗ ಇದ್ದಾನೆ, ನಾನಿದ್ದೇನೆ, ನಿನಗೆ ಯಾಕೆ ಯೋಚನೆ – ಹೋಗು ಎಂದಿದ್ದರು. ಚಿಕ್ಕಿಯೂ ಒಪ್ಪಿದ್ದರು.

ಇಷ್ಟೇ ಅಲ್ಲ – ಈಗ ತಾನು ಮಾನಸಿಕವಾಗಿ ಏನಾಗಿದ್ದೇನೊ ಅದಕ್ಕೂ ಶ್ರೀಪತಿರಾಯರು ಅನೇಕ ವಿಧದಲ್ಲಿ ಕಾರಣರು. ನಲವತ್ತೆರಡರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಜಗನ್ನಾಥ ಮೆಟ್ರಿಕ್ ಓದುತ್ತಿದ್ದ- ಶ್ರೀ ಮಂಜುನಾಥ ಕೃಪಾಪೋಷಿತ ಹೈಸ್ಕೂಲಲ್ಲಿ. (ಈ ಹೈಸ್ಕೂಲನ್ನು ದೇವಸ್ಥಾನದ ಖರ್ಚಿನಿಂದ ಸ್ಥಾಪಿಸುವಂತೆ ಮಾಡಿದವರೂ ಶ್ರೀಪತಿರಾಯರು). ಈ ಪ್ರಾಂತಕ್ಕೆಲ್ಲ ಕಾಂಗ್ರೆಸ್ ನಾಯಕರಾಗಿದ್ದ ಶ್ರೀಪತಿರಾಯರು ತಾಲ್ಲೂಕು ಕಛೇರಿ ಎದುರು ಮುಷ್ಕರ ನಡೆಸಿದ್ದು ಜಗನ್ನಾಥನಿಗೆ ಕಣ್ಣಿಗೆ ಕಟ್ಟಿದಂತಿದೆ. ತಾನೂ ಖಾದಿ ಟೋಪಿ, ಖಾದಿ ಅಂಗಿ ಹಾಕಿ, ಜೈ ಎಂದು ಎರಡು ದಿನ ಜೈಲಿಗೆ ಹೋಗಿದ್ದ, ಗಂಧದ ಮರ ಕಡಿದಿದ್ದ, ಸರಾಯಿ ಅಂಗಡಿ ಎದುರು ಸತ್ಯಾಗ್ರಹ ಮಾಡಿದ್ದ. ಇಂಗರ್‌ಸಾಲ್, ಶಾ, ರಸೆಲ್ ಓದಿದ್ದ ಶ್ರೀಪತಿರಾಯರು ತನ್ನ ಮನಸ್ಸಿನಲ್ಲಿ ಅನುಮಾನದ ಬೀಜಗಳನ್ನು ನೆಟ್ಟಿದ್ದರು. ಶ್ರೀಪತಿರಾಯರ ನೆರಳಿನಲ್ಲಿ ಅಲ್ಲವೆ? – ಆದ್ದರಿಂದ ತಾಯಿಯ ಸಮ್ಮತಿ ಸಹ ಇತ್ತು. ತಂದೆ ಹೇಗೂ ಖಾದಿ ಹಾಕುತ್ತಿದ್ದರು; ಈಗ ತಾಯಿ ಸಹ ಬಿಳಿ ಖಾದಿ ಸೀರೆ ಉಟ್ಟರು. ಮನೆಗೆ ಹರಿಜನ ಪತ್ರಿಕೆ ತರಿಸಿದರು. ಸಾಯಂಕಾಲ ಶ್ರೀಪತಿರಾಯರು ಮನೆಗೆ ಬಂದು ಹರಿಜನ ಪತ್ರಿಕೆ ಓದಿ ಅರ್ಥ ಹೇಳುವುದು. ತಾಯಿ, ಚಿಕ್ಕಿ, ರೈಟರ್ ಕೃಷ್ಣಯ್ಯ, ತಾನು ಕೂತು ಕೇಳಿಸಿಕೊಳ್ಳುವುದು.

ಶ್ರೀಪತಿರಾಯರಲ್ಲದಿದ್ದರೆ ಮಂಜುನಾಥಸ್ವಾಮಿಗೆ ಹೊರತಾದ ಇನ್ನೊಂದು ಲೋಕ ಈ ಮಧ್ಯಯುಗದ ಭಾರತೀಪುರದಲ್ಲಿ ಜಗನ್ನಾಥನಿಗೆ ಸಿಗುತ್ತಿರಲಿಲ್ಲ; ಬಾಲ್ಯದಲ್ಲಂತೂ ಖಂಡಿತ ಸಿಗುತ್ತಿರಲಿಲ್ಲ. ಮೈಸೂರು ದೇಶದ ಕಾಂಗ್ರೆಸ್ ವಲಯದಲ್ಲೆಲ್ಲ ಹಿರಯರಲ್ಲೊಬ್ಬರಾದ ಶ್ರೀಪತಿರಾಯರು ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮ ಆಸ್ತಿಪಾಸ್ತಿಯನ್ನೆಲ್ಲ ಕಳೆದುಕೊಂಡು ಸ್ವಾತಂತ್ರ್ಯ ಬಂದ ಮೇಲೆ ಮೂಲೆಗುಂಪಾದವರು ಕೂಡ. ಆದ್ದರಿಂದಲೇ ಹೊಸದೊಂದು ವಿಚಾರ ಹೊಕ್ಕು ಚಡಪಡಿಸುತ್ತಿದ್ದ ಜಗನ್ನಾಥ ಬಹಳ ದಿನ ಯೋಚಿಸಿ ಈಗ ಶ್ರೀಪತಿರಾಯರ ಹತ್ತಿರ ಮಾತಾಡಬೇಕೆಂದು ಬಂದದ್ದು. ಗಾಂಧಿಯ ಕರೆಗೆ ಸಾವಿರಾರು

ರೂಪಾಯಿಯ ಜವಳಿಯನ್ನು ಬೀದಿಯಲ್ಲಿ ರಾಶಿ ಹಾಕಿ ಬೆಂಕಿಕೊಟ್ಟ ಶ್ರೀಪತಿರಾಯರಿಗೆ ಮಾತ್ರ ತನ್ನ ಒಳಗುದಿ ಅರ್ಥವಾದೀತೆಂದು ಜಗನ್ನಾಥನಿಗೆ ಆಸೆ.

ಅಡಿಗೆ ಮನೆಯಲ್ಲಿ ಗಂಡ ಹೆಂಡಿರ ನಡುವೆ ಬಿರುಸಿನ ಮಾತುಕತೆ ನಡೆದಿದ್ದಂತೆ ಕಂಡಿತು. ಜಗನ್ನಾಥನಿಗೆ ಮುಜುಗರವಾಗಿ 'ರಾಯರೇ' ಎಂದು ಇನ್ನೊಮ್ಮೆ ಕರೆದ. ಕತ್ತಲಿನ ನಡುಮನೆ ಕಣ್ಣಿಗೆ ನಿಧಾನವಾಗಿ ಒಗ್ಗಿ ಅದರ ಅಸ್ತವ್ಯಸ್ತ ಪ್ರಪಂಚವನ್ನು ನಿಧಾನವಾಗಿ ಕಣ್ಣೆದುರು ಬಿಚ್ಚಿಕೊಂಡಿತು. ಬಲಗಡೆ ಗೋಡೆಗೆ ಒರಗಿದಂತೆ ಬೆಂಚು. ಅದರ ಮೇಲೆ ಸುತ್ತಿಟ್ಟ ಹಾಸಿಗೆಗಳು, ಮಾಸಲು ಬಣ್ಣಕ್ಕೆ ತಿರುಗಿದ, ಪ್ರಾಯಶಃ ಮಲಗಲು ಕಲ್ಲಾದ ಹಾಸಿಗೆಗಳು. ಧೂಳು ಕೂತು ಕೊಳೆಯಾದ ಖಾದಿ ನೂಲಿನ ಸರ ಹಾಕಿದ ಗಾಂಧಿ, ನೆಹರೂ, ಸುಭಾಷ್ಚಂದ್ರ ಬೋಸ್‌ರ ಪಟಗಳು. ಇನ್ನೊಂದು ಗೋಡೆಯ ಮೇಲೆ ಮಂಜುನಾಥಸ್ವಾಮಿಯ ಪಟ. ಅವನಿಗೆ ಮಾತ್ರ ಪ್ರಾಯಶಃ ರಾಯರ ಹೆಂಡತಿ ಭಾಗ್ಯಮ್ಮ ಮಾಡಿದ ಹತ್ತಿಯ ಗೆಜ್ಜೆವಸ್ತ್ರದ ಸರ. ಗೋಡೆಗಳ ತುಂಬ ಮೊಳೆಗಳು. ಅವುಗಳ ಮೇರೆ ರಾಯರ ನಾಲ್ಕೈದು ಮಕ್ಕಳ ಶರ್ಟುಗಳು. ಕೆಂಪು ಬಣ್ಣದ ಹೊಸಲಿನ ಮೇಲೆ ಹಿಟ್ಟಿನ ರಂಗೋಲೆ, ನಾಲ್ಕು ಗೋಡೆಯ ಅಂಚಿಗೂ ಕಪ್ಪು ನೆಲದ ಮೇಲೆ ಹಿಟ್ಟಿನ ಬಿಳಿ ರಂಗೋಲೆ – ಪ್ರಾಯಶಃ ರಾಯರ ದೊಡ್ಡ ಮಗಳು ಸಾವಿತ್ರಿ ಹಾಕಿದ್ದು. ನಾಜೂಕಾಗಿ ನಯವಾಗಿ ಬಿಟ್ಟ ರಂಗೋಲೆ. ಮತ್ತೆ ಕಣ್ಣಿನಲ್ಲಿ ನೀರು ಬರಿಸುವ ಹೊಗೆ. ಅಪ್ರಯತ್ನವಾಗಿ ಕಣ್ಣುಗಳನ್ನು ಅರ್ಧ ಮುಚ್ಚಿಕೊಂಡು, ಹೊಗೆ ಬರುವ ದಿಕ್ಕಿನಿಂದ ಮುಖವನ್ನು ಸದಾ ವಾರೆ ಮಾಡಿಕೊಂಡಿರಲು ಪ್ರಯತ್ನಿಸುತ್ತ ಮನೆಯ ಒಳಗೆ ಓಡಾಡಬೇಕು. ಒದ್ದೆ ಪಾಣಿಪಂಚೆಯಲ್ಲಿ, ತೊಟ್ಟ ಅಂಗಿಯಲ್ಲಿ, ಹೊದಿಯುವ ಕಂಬಳಿಯಲ್ಲಿ ಈ ಹೊಗೆಯ ನಿರಂತರವಾದ ವಾಸನೆ. ರಾಯರ ಹೆಂಡತಿ ಏನೋ ಗೊಣಗುತ್ತಿದ್ದರು. ರಾಯರು ಏನೋ ಕೂಗಾಡುತ್ತಿದ್ದರು. ಥಟ್ಟನೇ ಮೌನ. ಊದುಗೊಳವೆಯಲ್ಲಿ ರಾಯರ ಹೆಂಡತಿ ಒಲೆಯನ್ನು ಊದುವ ಸದ್ದು. ಕಬ್ಬಿಣದ ಕೊಳವೆಯನ್ನು ರಗಳೆಯಾಗಿ ನೆಲದ ಮೇಲೆ ಕುಕ್ಕಿದ ಸದ್ದು. ಹೊಗೆ ತುಂಬಿದ ಗಂಟಲಿನ ಕೆಮ್ಮು.

'ರಾಯರೇ' ಎಂದು ಜಗನ್ನಾಥ ಮತ್ತೆ ಕೂಗಿದ. ಇನ್ನಷ್ಟು ಹೊಗೆ ತುಂಬಿ ಜಗನ್ನಾಥನ ಕಣ್ಣು ಮಂಜಾಗಿದ್ದವು. ನಡುಮನೆಗೆ ಸರಸರನೆ ನಡೆದು ಬಂದವಳು ರಾಯರ ಹಿರಿಮಗಳು ಸಾವಿತ್ರಿಯಿರಬೇಕು. ಒಳಗವಳು ಓಡಿದ ಸದ್ದು, ನಡುಮನೆಯನ್ನು ಹೊಗೆ ತುಂಬದಿರಲೆಂದು ಬಾಗಿಲು ಹಾಕಿದ ಸದ್ದು.

'ಯಾರು ಜಗಣ್ಣನೆ?' ಮೈಮೇಲಿನ ವಸ್ತ್ರದಿಂದ ಕಣ್ಣುಜ್ಜಿಕೊಳ್ಳುತ್ತ ರಾಯರು ಬಂದರು. 'ಹಾಳು ಹೊಗೆ. ಮೇಲೆ ಹೋಗೋಣ ಬಾ' ಎಂದು ಮಹಡಿಯ ಮೇಲೆ ಕರೆದುಕೊಂಡು ಹೋದರು.

ಮಹಡಿಯ ಮೇಲೆ ಹೊಗೆ ತುಂಬಿದ್ದರೂ ಹೆಚ್ಚು ಬೆಳಕಿತ್ತು. ರಾಯರು ಬಾಗಿಲು ಹಾಕಿಕೊಂಡರು. ಮುಚ್ಚಿದ್ದ ಕೆಲವು ಕಿಟಕಿಗಳ ಬಾಗಿಲು ತೆರೆದರು. ಮಂಚದ ಮೇಲಿದ್ದ ಬಟ್ಟೆಗಳನ್ನು ಸರಿಸಿ ಕೂತುಕೋ ಎಂದರು. ಮಂಚದ ಬಳಿಯಿದ್ದ ಪುಟ್ಟ ಕಪಾಟಿನಲ್ಲಿ ಬಾಲ್ಯದಿಂದ ತನಗೆ ಪರಿಚಿತವಾಗಿದ್ದ ರಾಯರ ಕೆಲವು ಪುಸ್ತಕಗಳನ್ನು ನೋಡಿದ; ಅತ್ಯಂತ ಸಣ್ಣ ಪ್ರಿಂಟಿನಲ್ಲಿ ಎರಡು ಕಾಲಂಗಳಲ್ಲಿ ಅಚ್ಚಾದ ರೆನಾಲ್ಡ್ಸಿನ ಕಾದಂಬರಿಗಳು, ಸ್ಕಾಟಿನ ಕಾದಂಬರಿಗಳು, ಗೋಲ್ಡ್‌ಸ್ಮಿತ್‌ನ ವಿಕಾರ್ ಆಫ್ ದಿ ವೇಕ್‌ಫೀಲ್ಡ್, ಲೈಟ್ ಆಫ್ ಏಶ್ಯ, ಶಾನ ನಾಟಕಗಳು.ಗೋಡೆಯ ಮೇಲೆ ಜಗನ್ನಾಥನ ತಾಯಿಯ ಫೋಟೋ, ಮದುವೆಯಾದ ಹೊಸದರಲ್ಲಿ ಜಾತ್ರೆಯ ಸಮಯದಲ್ಲಿ ತೆಗೆದದ್ದಿರಬೇಕು. ಬಿಸಿಲಿಗಿಟ್ಟು ಡೆವಲಪ್ ಮಾಡಿದ್ದ ಬಣ್ಣದ

ಫೋಟೋ. ಕ್ರಮೇಣ ಬಣ್ಣವನ್ನು ಕಳೆದುಕೊಂಡು ಮಾಸಿತ್ತು. ಹಾಗಾಗಿ ಮೊದಲೇ ಮೃದುವಾಗಿದ್ದ ಅವರ ಗುಂಡು ಮುಖ ಇನ್ನಷ್ಟು ಮೃದುವಾಗಿ ಕಂಡಿತು. ಧಾರಾವಳವಾಗಿ ಬೆಳೆದಿದ್ದ ಕಪ್ಪು ಕೂದಲನ್ನ ನಡುವಿಗೆ ಬೈತಲೆ ತೆಗೆದು ಅಮ್ಮ ಎಷ್ಟು ಬಿಗಿಯಾಗಿ ಕಟ್ಟುತ್ತಿದ್ದರು.

ರಾಯರು ಮಾತಾಡಲಿಲ್ಲ. ಸಾಮಾನ್ಯವಾಗಿ ಜಗನ್ನಾಥನನ್ನು ಭೆಟ್ಟಿಯಾದಾಗ ರಾಯರು ಮಾತಾಡುವುದಿಲ್ಲ, ಜಗನ್ನಾಥನೂ ಮಾತಾಡುವುದಿಲ್ಲ. ಸುಮ್ಮನೆ ಒಟ್ಟಿಗಿದ್ದರೂ ಸಾಕು ಇಬ್ಬರಿಗೂ ತೃಪ್ತಿಯಾಗುತ್ತದೆ. ರಾಯರು ಎಲೆಯಡಿಕೆ ಹಾಕಿಕೊಂಡು ತನ್ನಷ್ಟಕ್ಕೆ ನಗುತ್ತ ಏನೋ ಒಂದು ಅರ್ಥಗರ್ಭಿತವಾದ ಮಾತಾಡುತ್ತಾರೆ. ಹತ್ತಾರು ವಾಕ್ಯಗಳನ್ನೆಲ್ಲ ಒಂದು ಮಾತಿಗೆ ಸೂಚ್ಯವಾಗಿ ಭಟ್ಟಿಯಿಳಿಸಿದ ಆ ಮಾತು ಜಗನ್ನಾಥನಿಗೆ ಕುಡಲೇ ಅರ್ಥವಾಗುತ್ತದೆ. 'ಅಲ್ಲ ಗಾಂಧಿ ಹೇಳಿದ್ದೇನು ? ಒಳ್ಳೇ ನೆಹರು...' ಎಂದು ರಾಯರು ಹೇಳಿದರೆ ಸಾಕು, ಪ್ರಸ್ತುತ ಅರ್ಥನೀತಿ ಇತ್ಯಾದಿಗಳ ಬಗ್ಗೆಯೆಲ್ಲ ರಾಯರು ಜಗನ್ನಾಥನಿಗೆ ಹೇಳಿದಂತೆ. 'Emotionally ನಾವೆಲ್ಲ ಭಾರತೀಯರು. ಆದರೆ ವಿಚಾರದಲ್ಲಿ ಮಾತ್ರ ಪಾಶ್ಚಾತ್ಯ ಪ್ರಭಾವವಿದೆಯಲ್ಲ...' ಎಂದು ಜಗನ್ನಾಥ ಮಾತು ಪ್ರಾರಂಭಿಸಿ ಅರ್ಧಕ್ಕೆ ಬಿಟ್ಟುಬಿಡುತ್ತಾನೆ. ಈ ತುಣುಕು ರಾಯರ ಮನಸ್ಸಿನಲ್ಲಿ ಇಡೀ ದಿನ ಕೆಲಸ ಮಾಡಿ ಮಾರನೇ ದಿನ ಇನ್ನಷ್ಟು ವಿಚಾರಗಳನ್ನು ಅಂಟಿಸಿಕೊಂಡು ಹೊರಬರುತ್ತದೆ.

ಈ ದಿನ ರಾಯರು ಮಾತಾಡದೇ ಇರೋದಕ್ಕೆ ಅದರ ಮನಸ್ಸಿನ ವ್ಯಗ್ರತೆಯೂ ಕಾರಣವಿರಬೇಕೆಂದು ಜಗನ್ನಾಥ ಊಹಿಸಿದ. ಖಾದಿಯ ಚೀಲದಿಂದ ಎಲೆಯಡಿಕೆ ತೆಗೆದು, ಅಡಿಕೆಯನ್ನು ಬಾಯಿಗೆ ಹಾಕಿ ಎಲೆಗೆ ಸುಣ್ಣ ಹಚ್ಚುತ್ತ ಅವರು ಕೂತರು. ಜಗನ್ನಾಥ ಸಿಗರೇಟು ಹಚ್ಚಿ ಬೂದಿ ಹಾಕಲು ಒಂದು ಡಬ್ಬಿ ಹುಡುಕಿದ, ಮೂಲೆಯಲ್ಲಿ ಹಳೆಯದೊಂದು ನಸ್ಯದ ಡಬ್ಬಿ ಸಿಕ್ಕಿತು. ರಾಯರ ಹೆಂಡತಿಗೆ ಹೊರಗಿನವರಿಗೆ ತಿಳಿಯದಂತೆ, ಗಂಡನಿಗೂ ಪ್ರತ್ಯಕ್ಷವಾಗಿ ಕಾಣದಂತೆ ನಸ್ಯ ಹಾಕುವ ಅಭ್ಯಾಸವಿರುವುದು ಎಲ್ಲರಿಗೂ ತಿಳಿದ ವಿಷಯ. ತಿಂಗಳಿಗೊಂದು ನಸ್ಯದ ಡಬ್ಬಿ ತಂದು ಹೆಂಡತಿಗೆ ಸಿಗುವ ಜಾಗದಲ್ಲಿ ಇಡುವವರು ಕೂಡ ರಾಯರೆ. ರಾಯರು ಜೈಲಿನಲ್ಲಿದ್ದಾಗ ನಸ್ಯದ ಸರಬರಾಜಿನ ಗುಪ್ತ ಜವಾಬ್ದಾರಿಯನ್ನು ಹೊತ್ತಿದ್ದವನು ಜಗನ್ನಾಥ. ಪ್ರಾಯಶಃ ಈಗ ಮಗ ಬೆಳೆದಿದ್ದಾನಾದ್ದರಿಂದ, ಸಾವಿತ್ರಿ ಮಿಡ್‌ಲ್‌ಸ್ಕೂಲ್‌ಮೇಡಂ ಆಗಿ ದುಡಿಯುತ್ತಿರೋದರಿಂದ ರಾಯರು ಹೆಂಡತಿಗೆ ನಸ್ಯ ತಂದುಕೊಡಬೇಕಾಗಿಲ್ಲ.

ಸಣ್ಣಗೆ ಕತ್ತರಿಸಿ ಬಿಳಿ ಕೂದಲು. ಎರಡು ಪೊದೆ ಹುಬ್ಬುಗಳ ಕೆಳಗೆ ಈಗಲೂ ಹುಡುಗಾಟಿಕೆಯಿಂದ ತುಂಟಾಗುವ ಕಣ್ಣುಗಳು, ಕಿವಿಗಳ ತುಂಬ ರೋಮ – ಕುಳ್ಳಗೆ, ತೆಳ್ಳಗೆ, ಚುರುಕಾಗಿ ಓಡಾಡುವ ವ್ಯಕ್ತಿ ಶ್ರೀಪತಿರಾಯರು. ಕುರ್ಚಿಯ ಮೇಲೆ ಬೇಕಾದರೆ ಕೂತಿರಲಿ, ಹುಮ್ಮಸ್ಸು ಬಂದದ್ದೆ ಕಾಲುಗಳನ್ನೆತ್ತಿ ಸರಕ್ಕನೆ ಚಕ್ಕಳಮಕ್ಕಳೆ ಹಾಕಿ ಕೂರುತ್ತಾರೆ, ಇಲ್ಲವೇ ಎದ್ದು ನಡೆದಾಡಲು ಪ್ರಾರಂಭಿಸುತ್ತಾರೆ. ಆದರೆ ಮಾತ್ರ ಮನೆಯಲ್ಲವರನ್ನು ನೋಡಬಾರದು. ಸದಾ ಮಂಕಾಗಿರುತ್ತಾರೆ. ಜಗನ್ನಾಥನಿಗೆ ಇದರ ಕಾರಣ ಗೊತ್ತಿದ್ದರಿಂದ 'ಹೋಗೋನ ಬನ್ನಿ ರಾಯರೆ' ಎಂದ.

'ಸ್ವಲ್ಪ ಇರು' ಎಂದರು.

ಬಾಗಿಲು ತೆರೆಯಿತು. ರಾಯರ ಹೆಂಡತಿ ಭಾಗ್ಯಮ್ಮ ಎರಡು ಹಿತ್ತಾಳೆಯ ಬಟ್ಟಲಲ್ಲಿ ಕಾಫಿ ತಂದರು. ರಾಯರ

ಮನೆಯಲ್ಲಿನ್ನೂ ಸ್ಟೈನ್‌ಲೆಸ್ ಸ್ಟೀಲ್ ಯುಗ ಕಾಲಿಟ್ಟಿರಲಿಲ್ಲ. ಅದ್ಯಾವುದೋ ಕಾಲದ ಸೊಟ್ಟಗಾದ ಬಟ್ಟಲು, ಕೊಳೆ ಶೇಖರವಾಗುವಂತೆ ಮಡಿಸಿದ ಅಂಚು, ಲೋಟವನ್ನು ಬಿಸಿ ಮಾಡಿ ತಾನು ತಣ್ಣಗಾಗುವ ಬೆಲ್ಲದ ಕಾಫಿ.

'ಹೇಗಿದೀರಿ ?' ಜಗನ್ನಾಥ ಕಾಫಿ ಕುಡಿಯುತ್ತ ಕೇಳಿದ.

'ಇರೋದಪ್ಪ ಒಟ್ಟಾರೆ. ಹತ್ತು ಹದಿನೈದು ದಿವಸದಿಂದ ಏನು ನೀನು ಕಾಣಲೇ ಇಲ್ಲ.'

ಭಾಗ್ಯಮ್ಮ ಸೆರಗಿನಿಂದ ಮೂಗುಬಟ್ಟನ್ನು ಉಜ್ಜಿಕೊಳ್ಳುತ್ತ ಬೇಸರದಲ್ಲಿ ಮಾತಾಡಿದರು. ಭಾಗ್ಯಮ್ಮ ತೋರವಾದ ಹೆಂಗಸು. ಸಣ್ಣ ಹಣೆ, ಸಣ್ಣ ಕಣ್ಣುಗಳು – ಅವರು ನಗುತ್ತ ಖುಷಿಯಾಗಿದ್ದನ್ನು ನೋಡಿದವರೇ ಇಲ್ಲ. ಚಿಕ್ಕ ಪ್ರಾಯದಲ್ಲಿದ್ದಿರಬಹುದಾದ ಜೀವನ ಸಂತೋಷ ಹೊಗೆ ತುಂಬಿದ ಒಲೆ ಎದುರು ಕೂತುಕೂತು ಮಕ್ಕಳನ್ನು ಹೆತ್ತು ಹೆತ್ತು ಕಳೆದಿರಬಹುದೆ ? ಶ್ರೀಪತಿ ರಾಯರು ಮಾತ್ರ ಇನ್ನೂ ಹುಣಿಸೆ ನಾರಿನಂತೆ ಹುರಿಯಾಗಿ ಬಿಗಿಯಾಗಿ ಹೇಗೆ ಉಳಿದರು ? ಒಬ್ಬರನ್ನೊಬ್ಬರು ನಾಶ ಮಾಡುವ ಶೀರ ಯುದ್ಧ ಮನೆಯಲ್ಲಿ ಎಷ್ಟೋ ವರ್ಷಗಳಿಂದ ನಡೆದಿರಬೇಕು – ಅದಕ್ಕೆ ರಾಯರು ಹೊರಗೆ ಕಾಲಿಟ್ಟೊಡನೆಯೇ ಚಿಗುರಿಬಿಡುತ್ತಾರೆ. ಸಾಂಸಾರಿಕ ಜೀವನ ವಿಫಲವಾದದ್ದನ್ನು ತಾನು ಕಂಡದ್ದೇ ಹೆಚ್ಚಲ್ಲವೇ ? ಎಂದು ಯೋಚಿಸುತ್ತ ಜಗನ್ನಾಥ ಭಾಗ್ಯಮ್ಮನನ್ನು ನೋಡಿದ. ಏನೋ ಮಾತಾಡಲು ಹವಣಿಸುತ್ತ ಭಾಗ್ಯಮ್ಮ ಕಂಬಕ್ಕೆ ಒರಗಿ ನಿಂತಿದ್ದರು; ಶ್ರೀಪತಿರಾಯರು ಕೂತಲ್ಲೆ ಚಡಪಡಿಸುತ್ತಿದ್ದರು. ಜಗನ್ನಾಥನ ಊಹೆ ನಿಜವಾಯಿತು.

'ನನಗಂತೂ ತಲೆ ಚಚ್ಚಿಕೊಂಡು ಸಾಕಾಯ್ತು ಜಗಣ್ಣ, ಸ್ವಲ್ಪ ನೀನಾದ್ರೂ ಹೇಳು, ಮಾತಾಡೋಕೆ ಹೋದ್ರೆ ಒಳ್ಳೆ ಹುಲಿ ಹಾಗೆ ಮೈಮೇಲೆ ಬರ್ತಾರೆ, ಸಾವಿತ್ರೀನ ಶಿವಮೊಗ್ಗಕ್ಕೆ ವರ್ಗ ಮಾಡಿದಾರೆ. ಊರಿನವರ ಕೆಲಸಾನೆಲ್ಲ ಮಾಡಿಕೊಡೋ ಇವರೀಗೆ ಸ್ವಲ್ಪ ಡಿ.ಇ.ಓ.ಗೆ ಹೇಳಿ ಮಗಳನ್ನು ಇಲ್ಲೇ ಇರಿಸಿಕೊಳ್ಳೋಕಾಗಲ್ವ ? ವಿದ್ಯಾಮಂತ್ರಿಗಳು ಜೈಲ್‌ನಲ್ಲಿ ಇವರ ಜೊತೆ ಇದ್ದವರು. ಎಲ್ರೂ ಬೇಕಾದ್ದು ಮಾಡಿಕೊಂಡ್ರು. ನಮ್ಮನ್ನ ಕೇಳೋವ್ರ ಗತಿ ಇಲ್ಲ. ನಮ್ಮಪ್ಪ ಕೊಟ್ಟ ನಾಲ್ಕು ರೇಷ್ಮೆ ಸೀರೇನ್ನೂ ಆಗ ಇವರ ಮಾತು ಕಟ್ಟಿಕೊಂಡು ಬೆಂಕಿಗೆ ಹಾಕಿ ಆಯ್ತು. ಏನೇ ಹೇಳ್ಲಿ- ಮಂಕು ಬಡಿದವರಂತೆ ಸುಮ್ನೆ ಕೂತಿರುತ್ತಾರೆ.'

ಚಡಪಡಿಸುತ್ತ ಕೂತಿದ್ದ ಶ್ರೀಪತಿರಾಯರು.

'ಸಾಕಿನ್ನು. ಒಳಗೆ ಹೋಗು.' ಎಂದರು.

'ಹೋದ ಸಾರಿ ಮುನಿಸಿಪಾಲ್ಟಿ ಎಲೆಕ್ಷನ್‌ಗೆ ನಿಂತಿದ್ರಲ್ಲ ಏನಯ್ತು ಕೇಳಿದೀಯ ? ಯಾರೂ ಒಂದು ಚೂರೂ ಗೌರವ ಕೊಡ್ದಿದ್ದ ಮೇಲೆ ಯಾಕಿವ್ರಿಗೆ ಊರಿನ ವ್ಯವಹಾರ ಹೇಳು. ಸ್ವಂತ ಮಗಳನ್ನ ಊರಿನ ಸ್ಕೂಲಲ್ಲಿ ಉಳಿಸಿಕೊಳ್ಳೋ ಯೋಗ್ಯತೆ ಇಲ್ದೇ ಇದ್ದ ಮೇಲೆ...'

'ಏನಾದ್ರೂ ಮಾಡೋಣ ಅಮ್ಮ. ನಂಗೆ ಈ ವಿಷಯ ಗೊತ್ತೇ ಇರಲಿಲ್ಲ.' ಜಗನ್ನಾಥ ಸಮಾಧಾನ ಮಾಡಲು ಹೇಳಿದ.

‘ಇಲ್ನೋಡ್ಲೀ ಜಗಣ್ಣ. ಲಂಚ ಕೊಡದೆ ಡಿ.ಇ.ಓ. ಹತ್ತರ ಆಗಲ್ಲ. ಐದು ಆರು ವರ್ಷ ಒಂದೇ ಕಡೆ ಇದ್ದವರನ್ನ ವರ್ಗ ಮಾಡಬೇಕು ಅಂತ ಇರೋ ಸರ್ಕಾರೀ ಆರ್ಡರನ್ನ ಅವನು ತೋರಿಸಿದ್ರೆ ನಾನೇನು ಹೇಳ್ಲಿ ಹೇಳು.’

ಭಾಗ್ಯಮ್ಮ ಇದ್ದಕ್ಕಿದ್ದಂತೆ ಧ್ವನ ಎತ್ತರಿಸಿದರು.

‘ಬೆಳೆದು ನಿಂತ ಮಗಳಿಗೆ ಮದುವೆ ಮಾಡ್ಲಿಲ್ಲ. ಇವರು ಜೈಲಿಗೆ ಹೋದ್ರು ಅಂತಲೋ ಮನೇಲಿ ನೇಮನಿಷ್ಠೆ ಇಲ್ಲ ಅಂತಲೋ – ಅಂತೂ ಯಾರೂ ಮದ್ವೆಯಾಗಕ್ಕೆ ಬರ್ಲಿಲ್ಲ. ಅವಳು ದುಡೀದೇ ಇದ್ರೆ ಇಲ್ಲಿ ಪಥ ಸಾಗಬೇಕಲ್ಲ – ಹೇಳಿ. ಲಂಚ ಕೊಡಬೇಕಾಗಿ ಬಂದ್ರೆ ಕೊಡ್ಲೇಬೇಕು. ಮಗಳ ಹತ್ರ ದುಡಿಸಿಕೊಂಡು ತಿನ್ನಕ್ಕೆ ನಾಚಿಕೆಯಾಗಲ್ವ?’

ರಾಯರು ಕೋಪದಿಂದ ನಿಸ್ಸಹಾಯಕವಾಗಿ ಉರಿಯುತ್ತಿದ್ದುದು ನೋಡಿ ಜಗನ್ನಾಥನಿಗೆ ಕಷ್ಟವಾಯಿತು. ಎದ್ದು ಹೊರಡುವುದು ಉತ್ತಮ ಅನ್ನಿಸಿತು. ಸಮಾಧಾನದಿಂದ ಹೇಳಿದ :

‘ಏನಾದ್ರೂ ಮಾಡೋಣ ಅಮ್ಮ. ನಾನೇ ಶಿವಮೊಗ್ಗಕ್ಕೆ ಹೋಗಿಬರ್ತೀನಿ ಬೇಕಾದ್ರೆ...’

ಜಗನ್ನಾಥನ ಮಾತು ಭಾಗ್ಯಮ್ಮನ ಕಿವಿಗೆ ಬಿದ್ದಂತೆ ಕಾಣಲಿಲ್ಲ. ಅವರು ಒಂದೇ ಸಮನೆ ಕೂಗಾಡಲು ಪ್ರಾರಂಭಿಸಿದರು – ಹಿಸ್ಟೀರಿಯಾದ ಚಿಹ್ನೆಗಳನ್ನು ಇಳಿ ವಯಸ್ಸಿನ ಹೆಂಗಸಿನಲ್ಲಿ ಕಂಡು ಜಗನ್ನಾಥನಿಗೆ ಪಾಪ ಎನ್ನಿಸಿತು :

‘ತಿನ್ನಲಿಕ್ಕೆ ಗತಿ ಇಲ್ಲದವನು ಧಿಮಾಕು ಮಾಡಿದರೆ ಯಾರು ಕೇಳ್ತಾರೆ? ಬಡವನ ಸಿಟ್ಟು ದವಡೆಗೆ ಮೂಲ ಅಂತ. ಮಗ ಹೈಸ್ಕೂಲು ಮುಗಿಸಿದಾನೆ, ಅವನಿಗೇನಾದ್ರೂ ಕೆಲಸಕ್ಕೆ ದಾರಿ ಮಾಡಿದಾರ? ಬೇರೆ ಹುಡುಗರು ಮಾಡಲ್ವ, ಹಾಗೇನೇ ಬಸ್ ಹತ್ತಿರ ಹೋಗಿ ಯಾರಾದ್ರೂ ಯಾತ್ರಿಕರನ್ನ ಮನೇಗೆ ಕರ್ಕೊಂಡು ಬಾ ಅಂತ ನಾನು ಅವನನ್ನ ಮೊನ್ನೆ ಕಳಿಸಿದ್ದು ನಿಜ. ಕೈಯಲ್ಲಿ ಕಾಸಿಲ್ಲದೆ ಜೀವನ ಹೇಗೆ ಮಾಡಬೇಕು? ರಂಗಣ್ಣ ಹೋಗಿ ಒಂದು ಕುಟುಂಬಾನ್ನ ಕರ್ಕೊಂಡು ಬಂದ, ಪೂಜೆ ಗೀಜೆ ಮಾಡಿಸಕ್ಕೇಂತ ದೇವಸ್ಥಾನಕ್ಕೆ ಕರ್ಕೊಂಡು ಹೋದ. ಇವರು ಮನೆಗೆ ಬಂದವ್ರೆ ಒಳ್ಳೆ ಭೂತ ಮೈಮೇಲೆ ಬಂದ ಹಾಗೆ ಹೇಗೆ ಕುಣಿದ್ರು ಅಂತಿ – ಹೊಟ್ಟೆ ಪಾಡಿಗೇಂತ ನಾನು ಮಾಡಿದ್ದು ತಪ್ಪ? ಇಷ್ಟು ವರ್ಷ ಬಾಯಿಮುಚ್ಚಿಕೊಂಡು ಸೇವೆ ಮಾಡಿದ ನನ್ನ ಹೇಗೆ ಇವರು ಹೊಡೆದರು ಅಂತ ಜಗಣ್ಣ, ನನ್ನ ಅಪ್ಪ ಅಮ್ಮ ಸತ್ತು ಹೋಗಿದಾರೆ ಅಂತ ಇವರ ಜೋರು ಅಲ್ಲವ? ಪೂಜೆ ಮುಗಿಸಿ ಬಂದ ಅವರನ್ನ, ಚಿತ್ರದುರ್ಗದಿಂದ ಬಂದವ್ರು ಪಾಪ, ಹೊರಗೆ ಅಟ್ಟಿದ್ರು. ಅವರಿಗಾಗಿ ಮಾಡಿಟ್ಟ ಅಡಿಗೇನ್ನ ಗೊಬ್ಬರದ ಗುಂಡಿಗೆ ಸುರಿದ್ರು, ರಂಗಣ್ಣನ್ನ ಯದ್ವಾತದ್ವ ಚಚ್ಚಿದರು...’

ಭಾಗ್ಯಮ್ಮ ಗೋಳೋ ಎಂದು ಅಳುತ್ತ ನೆಲಕ್ಕೆ ಕುಸಿದರು. ಬಾಗಿಲ ಮರೆಯಲ್ಲಿ ನಿಂತು ಒದ್ದಾಡುತ್ತಿದ್ದ ಸಾವಿತ್ರಿ ತಾಯಿಯ ರಟ್ಟೆ ಹಿಡಿದೆಳೆದಳು. ಶ್ರೀಪತಿರಾಯರು ಮಂಕಾಗಿ ‘ಹೋಗೋಣಯ್ಯ’ ಎಂದು ಎದ್ದರು. ಏನು ಮಾತಾಡಲೂ ತೋಚದೆ ಜಗನ್ನಾಥನೂ ಹೊರಟ. ಬೀದಿಗೆ ಇಳಿದಿದ್ದೆ ಉಸಿರು ಬಂದಂತಾಯಿತು. ಎದುರು ದೇವಸ್ಥಾನ, ಸ್ವಲ್ಪ ದೂರದಲ್ಲೆ

ಹರಿಯುತ್ತಿದ್ದ ಹೊಳೆಯ ಶಬ್ದ ಕೇಳಿ, 'ಹೊಳೆಯ ಕಡೆ ಹೋಗೋಣವ ರಾಯರೆ' ಎಂದ. ರಾಯರ ಮುಖ ನೋಡುವುದು ಕೂಡ ಜಗನ್ನಾಥನಿಗೆ ಕಷ್ಟವಾಗಿತ್ತು. ಆದರೆ ಅವರನ್ನು ಒಂಟಿಯಾಗಿ ಬಿಟ್ಟು ಹೋಗುವುದು ಸಹ ಸರಿಯಲ್ಲವೆನಿಸಿತು.

ಒಂದಷ್ಟು ದೂರ ಇಬ್ಬರೂ ಮಾತಾಡದೆ ನಡೆದರು. ಹೊಳೆಯ ದಂಡೆಯ ಮೇಲೆ ನಿಂತರು. ಉಚ್ಚೆ ಹೇಲಿನ ವಾಸನೆಯಿಂದ ಜಗನ್ನಾಥನಿಗೆ ಹೇಸಿಗೆಯಾಗಿ ಮೈ ನಡುಗಿತು. ಬಂಡೆಗಳ ಮೇಲೆ ಬಿಳಿ ಮರಳಿನ ಮೇಲೆ ಸುಡುವ ಬಿಸಿಲು, ಕಣ್ಣಿಗೆ ತಂಪಾಗಿ ಹರಿಯುವ ಶುಭ್ರವಾದ ನೀರು. ಬಂಡೆಗಳಿಂದ ನೀರು ಧುಮುಕವಲ್ಲಿ ನೊರೆ, ಸಡಗರ. ಅಲ್ಲಿ ಸ್ನಾನ ಮಾಡುತ್ತಿರುವ ಹುಡುಗರ ಉಲ್ಲಾಸ. ಜೋಕೆಯಾಗಿ ನೀರಿಗಿಳಿಯುವ ಯಾತ್ರಿಕರು. ಅವರಿಗೆ ಮಂತ್ರ ಹೇಳುತ್ತ ಧೈರ್ಯ ಹೇಳುವ, ಮುಳುಗು ಹಾಕಲು ಪ್ರೋತ್ಸಾಹಿಸುವ ಪುರೋಹಿತರು. ಹೊಳೆಯ ಆಚೆ ಹನುಮಂತನ ಗುಡಿ, ದಂಡೆಯುದ್ದಕ್ಕೂ ಮಾವಿನ, ಹಲಸಿ, ಮುತ್ತುಗದ ಮರಗಳು. ನೆರಳಿದ್ದಲ್ಲೆಲ್ಲ ಉಚ್ಚೆ ಹೇಲಿನ ದುರ್ಗಂಧ. ಸಹಿಸಲಾರದೆ 'ಅಂಗಡಿಗೆ ಹೋಗೋಣ ರಾಯರೆ' ಎಂದ. 'ನಡಿ' ಎಂದರು. ಶ್ರೀಪತಿರಾಯರು.

'ನಿಮ್ಮನ್ನು ನೋಡಿ ಸುಮಾರು ಎರಡು ಮೂರು ವಾರವಾಯ್ತಲ್ಲ ?' ಎಂದು ಜಗನ್ನಾತ ಮಾತಿಗೆ ಶುರುಮಾಡಿದ.

'ಈ ಎರಡು ಮೂರು ವಾರ ನರಕಯಾತನೆ ಅನುಭವಿಸಿದ. ಕೆಲವು ಸಾರಿ ಯಾಕೆ ನೀರಿಗೆ ಬಿದ್ದು ಸಾಯಬಾರ್ದು ಅಂತಲೂ ಅನ್ನಿಸಿದ್ದಿದೆ ಮಾರಾಯ.'

ಶ್ರೀಪತಿರಾಯರ ಬಾಯಿಂದ ಇಂತಹ ಮಾತನ್ನು ಕೇಳುವುದೇ ಜಗನ್ನಾಥನಿಗೆ ಇಷ್ಟವಿರಲಿಲ್ಲ. ಭಾಗ್ಯಮ್ಮ ತನ್ನೆದುರು ರಂಪ ಮಾಡದಿದ್ದರೆ ರಾಯರು ಹೀಗೆ ಮಾತಾಡುವಷ್ಟು ಕುಗ್ಗುತ್ತಲೇ ಇರಲಿಲ್ಲವೆನ್ನಿಸಿ ಜಗನ್ನಾಥನಿಗೆ ದುಃಖವಾಯಿತು. ಮಾತು ಬದಲಾಯಿಸಲು ಹೇಳಿದ :

ಮೊನ್ನೆ ಏನಾಯ್ತು ಅಂತೀರಿ ? ಕನ್ನಡಾ ಜಿಲ್ಲೇಲಿ ನಮ್ಮ ವೈವಾಟು ನೋಡಿಕೊಳ್ಳೋ ರಾಜಣ್ಣ ಇದಾರಲ್ಲ – ಅವರು ತುಂಬ ಖಾಹಿಲೇಂತ ಇಲ್ಲಿಗೆ ಬಂದರು. ಡಾಕ್ಟರನ್ನ ನೋಡೋಕಲ್ಲ; ಮಂಜುನಾಥನಿಗೆ ಹರಕೆ ಸಲ್ಲಿಸಲಿಕ್ಕೆ. ಕೈಯಲ್ಲಿದ್ದ ಐದುನೂರು ರೂಪಾಯನ್ನೂ ಕುಂಕುಮಾರ್ಚನೆ ಅದೂ ಇದೂಂತ ಚೆಲ್ಲಿದರು. ನಾನು ಉಪಾಯಮಾಡಿ ಅವರನ್ನ ಡಾಕ್ಟರಿಗೆ ತೋರಿಸಿದೆ. ಕ್ಯಾನ್ಸರ್‌ಇರಬಹುದೂಂತ ಅನುಮಾನ ಪಟ್ಟರು. ಆದರೆ ಅವರಿಗೆ ಬೆಂಗಳೂರಿಗೆ ಹೋಗಕ್ಕೆ ಕೈಯಲ್ಲಿ ಕಾಸಿಲ್ಲ. ನಾನು ಕೊಡಬೇಕಾಯ್ತು. ಮಂಜುನಾಥನಿಗೆ ಇರೋ ದುಡ್ಡನ್ನೆಲ್ಲ ಚೆಲ್ಲಬೇಡಿ ಅಂತ ಸಾಯ್ತಿರೋ ಆ ಮನುಷ್ಯನಿಗೆ ಹೇಳಲಿಕ್ಕೆ ನನಗೆ ಧೈರ್ಯಾನೇ ಬರಲಿಲ್ಲ'.

'ನೋಡು ಜಗಣ್ಣ, ನನ್ನ ಮಗ ರಂಗ ಬಸ್ಸಿಗೆ ಹೋಗಿ ಯಾತ್ರಿಕರನ್ನ ಕರ್ಕೊಂಡು ಬಂದಾಗ ನನ್ನ ಮಗಳನ್ನ ಸೂಳೆಗಾರಿಕೇಗೆ ಬಿಟ್ಟಷ್ಟೆ ಹೇಸಿಗೆಯಾಯ್ತು ಮಾರಾಯ. ಎಂದೂ ಕೈಯೆತ್ತದೇ ಇರೋವನು ಅವತ್ತು ನನ್ನ ಹೆಂಡತೀನ ಹೊಡೆದೆ. ಸಾವಿತ್ರೀ ತಡೀದೇ ಇದ್ರಿದ್ರೆ ಅವಳನ್ನ ನಾನು ಸಾಯಿಸಿ ಬಿಡ್ತಿದ್ದೇಂತ ಕಾಣುತ್ತೆ. ನನ್ನಲ್ಲಿ ಅಂಥ ರೋಷ ಇದೇಂತ ನಾನು ತಿಳಿದೇ ಇರಲಿಲ್ಲ. ಹೇಗೇ ಈ ದೇವರು ನಿರ್ಬಲನಾಗಿದ್ದಾಗ ನನ್ನನ್ನ ಕಬಳಿಸಕ್ಕೆ ನೋಡ್ದ ನೋಡು.'

ಕೊನೆಯ ಮಾತಾಡುವಾಗ ಶ್ರೀಪತಿರಾಯರು ನಕ್ಕಿದ್ದರು ತಾವಿಬ್ಬರೂ ಒಂದೇ ವಿಚಾರನ್ನ ಮುಟ್ಟಿದಂತೆನ್ನಿಸಿ ಜಗನ್ನಾಥನಿಗೆ ಖುಷಿಯಾಯಿತು. ಆದರೂ ರಾಯರು ಸಂಕಟದಲ್ಲಿದ್ದಾಗ ತನ್ನ ಯೋಜನೆಗಳನ್ನು ಅವರ ಹತ್ತಿರ ಹೇಳಿಕೊಳ್ಳುವುದು ಕ್ಷುಲ್ಲಕವೆನ್ನಿಸಿತು. ಯಾರಿಗೂ ಸೇರದ ಒಣಕಲು ಮಾತುಗಳನ್ನಾಡುವುದೇ ಸರಿಯೆನ್ನಿಸಿ,

'ಈ ಭೂತರಾಯನ ವಿಷಯ ಗೊತ್ತ ನಿಮಗೆ ರಾಯರೆ?' ಎಂದ.

'ಯಾವುಯಾವುದೋ ಭೂತಗಳಿವೆ ಮಾರಾಯ. ಪಂಜುರ್ಲಿ, ಜುಮಾದಿ, ಬೈದೆರ್, ಕಲ್ಕುಡ, ಬೊಬ್ಬರ್ಯ, ಜಟ್ಟಿಗ- ಹೀಗೆ, ಶೂದ್ರರ ಭೂತಗಳು ಇವು. ಹೊಲೆಯರ ಭೂತವೂ ಒಂದಿದೆ – ಕೋರ್ದಬ್ಬುಸಂಧಿ ಅಂತಲೋ ಏನೋ. ಅದರ ಮೇಲೊಂದು ಪಾಡ್ದನವಿದೆಯಂತೆ. ಈ ಭೂತಗಳಿಗೆಲ್ಲ ಒಡೆಯ ಭೂತರಾಯ. ಈ ಭೂತರಾಯನ ಒಡೆಯ ಮಂಜುನಾಥ. ಹಿಂದೂ ಧರ್ಮ ಅಂದರೆ ಏನೂಂತ ತಿಳೀಬೇಕಾದರೆ ನಮ್ಮ ಈ ದೇವಸ್ಥಾನಕ್ಕೆ ಬರ್ಬೇಕು.'

'ಅಲ್ಲ – ಶೂದ್ರರ ಈ ಭೂತರಾಯನ್ನ ಈಗ ಗೇಣೀದಾರರನ್ನ ಹದ್‌ಬಸ್ತಿನಲ್ಲಿ ಇಡೋದಕ್ಕೆ ನಾವು ದುಡಿಸ್ತ ಇದೀವಲ್ಲ – ಆ ನಮ್ಮ ಜಾಣತನ ನೋಡಿ.'

ಶ್ರೀಪತಿರಾಯರು ನಕ್ಕರು. ನಾಗರಾಜ ಜೋಯಿಸರನ್ನು ನೋಡಿದಿಯಾ? ಎಂದು ಸೂಚ್ಯವಾಗಿ ಕೇಳಿದರು. ತನ್ನ ಯೋಜನೆ ರಾಯರ ಕಿವಿಯನ್ನಿನ್ನೂ ಮುಟ್ಟಿಲ್ಲ. ತಿಳಿದರೆ, ಒಂದು ಕಾಲದಲ್ಲಿ ತನ್ನ ಸರ್ವಸ್ವವನ್ನೂ ಸುಟ್ಟು ಚಳುವಳಿಗೆ ಸೇರಿದ ಮನುಷ್ಯ ಹೆದರಲಿಕ್ಕಿಲ್ಲ. ಈಗ ಸದ್ಯ ಇವರ ಮಗಳಿಗಾದ ವರ್ಗವನ್ನ ಕ್ಯಾನ್ಸಲ್ ಮಾಡಿಸಬೇಕು; ಮಗನಿಗೆ ತನ್ನ ಆಫೀಸಲ್ಲೆ ಕೆಲಸ ಕೊಡಬೇಕು. ಇಲ್ಲದಿದ್ದರೆ ಭಾಗ್ಯಮ್ಮ ಮತ್ತೆ ಅವನನ್ನ ಯಾತ್ರಿಕರನ್ನ ಮನೆಗೆ ತರಲು ಅಟ್ಟಿಯೇ ಅಟ್ಟುತ್ತಾರೆ. ಹಾಗೇ ದುಡ್ಡು ಕೊಟ್ಟರೆ ರಾಯರು ತೆಗೆದುಕೊಳ್ಳುವವರಲ್ಲ. 'ಆಮೇಲೆ ಕೊಡುವಿರಂತೆ' ಎಂದು ಹೇಳಿ ಜಗನ್ನಾಥನಿಗೆ ಅವರಿಗೆ ಬೇಕಾದಷ್ಟು ಹಣ ಕೊಡುವ ಆಸೆ; ಆದರೆ ಧೈರ್ಯ ಸಾಲದು.

ಪೇಟೆಯ ಚೌಕದಲ್ಲಿದ್ದ ಖಾದಿ ಅಂಗಡಿಗೆ ಬಂದರು. ರಂಗ ಮಳಿಗೆಯ ಬಾಗಿಲು ತೆರೆದು ಕೂತಿದ್ದ. ಅಂಗಡಿಯಲ್ಲಿ ವ್ಯಾಪಾರವಾಗದ ಧೂಳು ತುಂಬಿದ ಥಾನು ಥಾನು ಖಾದಿ ವಸ್ತ್ರಗಳು; ತೂಗು ಹಾಕಿದ ಬಿಳಿ ಟೋಪಿಗಳು. ಮುರಿದ ಚರಕ. ಹಲ್ಲಿಲ್ಲದ ನಗುವಿನ ಗಾಂಧಿಯ ಫೋಟೋ. ಗಾಂಧಿ ಮುಖದ ಪ್ರಿಂಟಿದ್ದ ಖಾದಿ ಚೀಲಗಳು. 'ಕೂತುಕೋ' ಎಂದರು. ದಿಂಬಿಗೊರಗಿ ಜಗನ್ನಾಥ ಕೂತ.

ಈ ಅಂಗಡಿಯಲ್ಲೆ ಕೂತು ರಾಯರು ಚಳುವಳಿ ನಡೆಸಿದ್ದು; ಹೊಸ ವಿಚಾರವನ್ನು ತನ್ನಂತಹ ಯುವಕರ ಹತ್ತಿರ ಉತ್ಸಾಹದಿಂದ ಹಂಚಿಕೊಂಡದ್ದು. ಎಲೆಯಡಿಕೆ ಚೀಲ ಬಿಚ್ಚಿ ಎಲೆಗೆ ಸುಣ್ಣ ಹಚ್ಚುತ್ತಿದ್ದಂತೆಯೇ ರಾಯರು ಮನೆಯಲ್ಲಾದ ಘಟನೆಯನ್ನು ಮರೆಯುತ್ತಿರುವಂತೆ ಅನ್ನಿಸಿತು. ಅವರ ಮಾತಿನ ಧ್ವನಿಯಲ್ಲಿ ಮತ್ತೆ ಉತ್ಸಾಹ, ಹಾಸ್ಯ, ತುಂಟತನ ಮೂಡುವ ಚಿಹ್ನೆಗಳು ಅವರ ಪೊದೆ ಪೊದೆ ಹುಬ್ಬುಗಳ ಕೆಳಗೆ ಮಿನುಗುವ ಕಣ್ಣುಗಳಲ್ಲಿ ತೋರಿದವು. ಯಾವತ್ತೂ ಪಳಗಿಸಲಾರದ ಈ

ಪ್ರಾಣಿಯನ್ನು ಭಾಗ್ಯಮ್ಮ ದ್ವೇಷಿಸುವುದು ಸಹಜವೇ.

ಪೇಟೆಗೆ ಬಂದಿದ್ದ ಶೂದ್ರರೆಲ್ಲ ಅವಸರವಾಗಿ ದೇವಸ್ಥಾನದ ಕಡೆ ನಡೆಯುತ್ತಿದ್ದರು. ಅವರನ್ನು ನೋಡುತ್ತಿದ್ದ ಜಗನ್ನಾಥನಿಗೆ ರಾಯರು ಹೇಳಿದರು :

'ಇವಕ್ಕೆಲ್ಲ ಹೊರಪಂಕ್ತಿ, ಕೆಂಪಕ್ಕಿ ಅನ್ನ ಹುರುಳಿ ಸಾರು. ಒಳಗಡೆ ಬ್ರಾಹ್ಮಣರಿಗೆ ಊಟ. ಸಾರು, ಹುಳಿ, ಪಲ್ಯ, ಪಾಯಸ. ನಿಮ್ಮನೇಂದಲೂ ಎಂಟು ಹತ್ತು ಪಲ್ಲ ಅಕ್ಕಿ ದೇವಸ್ಥಾನಕ್ಕೆ ಸಂದಾಯವಾಗುತ್ತೇಂತ ಕಾಣುತ್ತೆ.'

ಜಗನ್ನಾಥ ಹೌದೆಂದು ತಲೆಹಾಕಿದ.

'ನನ್ನ ಮಕ್ಕಳು, ಹೆಂಡತಿ ನಿತ್ಯಥಾಲೀ ಹಿಡಿದು ದೇವಸ್ಥಾನಕ್ಕೆ ಊಟಕ್ಕೆ ಹೋಗ್ದೇ ಇರೋ ಹಾಗೆ ಏನಾದ್ರೂ ಮಾಡಬೇಕು ಮಾರಾಯ.'

ರಾಯರ ಲೇವಡಿಯಲ್ಲಿ ನೋವಿತ್ತು. Dearest Margaret, we can restore dignity to man only by destroying this God. Otherwise –

'ನಾವು ಚರಿತ್ರೇಲಿ ಒಳಗಾಗಿ, creative ಆಗೇ ಇಲ್ಲ ನೋಡಿ ರಾಯರೆ.'

'ಈ ಮಂಜುನಾಥನ ಅಧ್ಯಕ್ಷತೇಲಿ ಜೀವನಾನ್ನೋದು ಕಾಲಾತೀತದಲ್ಲಿ ನಡೆಯೋ ಸಂಭ್ರಮಾಪ್ಪ – ಅಲ್ವೇನೊ ಗಣೇಶ? ನಿಮ್ಮಪ್ಪ ಹೇಳೋದು ಇದೇ ಅಲ್ವೇನೋ?'

ರಾಯರು ಅಂಗಡಿಯ ಬಾಗಿಲಲ್ಲಿ ನಿಂತಿದ್ದ ಯುವಕನನ್ನು ತಮಾಷೆಯಾಗಿ ಕೇಳಿದರು. ಕೈಯಲ್ಲಿ ಔಷಧಿಯ ಬಾಟ್ಲು, ಕಿವಿಗಳೆಲ್ಲ ಮಡಚಿ ಮಾಸಲಾದ ಯಾವುದೋ ಕಾದಂಬರಿ ಹಿಡಿದು ನಿಂತಿದ್ದ ಗಣೇಶ ಪೆಚ್ಚಾಗಿ ನಕ್ಕ. ಸುಮಾರು ಇಪ್ಪತ್ತೈದು ವರ್ಷವೆಂದು ಮುಖದ ಎಲುಬುಗಳು ಹೇಳಿದರೂ, ಹುಡುಗನ ಗಾತ್ರದ ಗಣೇಶನನ್ನು, ಜಗನ್ನಾಥ ಕುತೂಹಲದಿಂದ ನೋಡಿದ. ಪಿಳಿಜುಟ್ಟನ್ನು ಮುಚ್ಚುದ ಕೂದಲು, ಪಂಚೆ, ಧೋತ್ರ, ಹಣೆಯಲ್ಲಿ ವಿಭೂತಿ, ಕಿವಿಗಳಲ್ಲಿ ದೊಡ್ಡ ಹರಳಿನ ಒಂಟಿ- ಇವನನ್ನು ಮುಂಚೆ ನಾನು ನೋಡಿದ್ದೀನ? ಜಗನ್ನಾಥನಿಗೆ ತಿಳಿಯಲಿಲ್ಲ.

'ತಂಗೀಗೆ ಹುಷಾರಿಲ್ವೇನೊ? ಅಂತೋಣಿ ಡಾಕ್ಟ್ರ ಹತ್ತಿರ ಬಂದಿದ್ಯ?' ಜಗನ್ನಾಥನ ಕಡೆಗೆ ತಿರುಗಿ 'ಇವನು ಯಾರು ಗೊತ್ತಾಗ್ಲಿಲ್ವ ಜಗಣ್ಣ? ದೇವಸ್ಥಾನದ ಮುಖ್ಯ ಪೂಜಾರಿಗಳಿದಾರಲ್ಲ ಸೀತಾರಾಮಯ್ಯ – ಅವರ ಹಿರೀಮಗ' ಎಂದರು.

'ಓಹೋ' ಎಂದ ಜಗನ್ನಾತ. 'ಹೋಗಿ ಬರ್ತೀನಿ' ಎಂದು ಗಣೇಶ ನಮಸ್ಕಾರ ಮಾಡಿದ. 'ಆಗ್ಲಿ. ನಮಸ್ಕಾರ' ಎಂದು

ಜಗನ್ನಾಥ, ರಾಯರಿಗೆ ಹೇಳಿದ :

‘ನಮ್ಮನೇಲೇ ಊಟ ಮಾಡೋಣ ಬನ್ನಿ’.

‘ಅಂಗಡೀನ್ನ ನೋಡಿಕೊಂಡಿರೊ’ ಎಂದು ರಂಗನಿಗೆ ಹೇಳಿ ರಾಯರು ಎಲೆಯಡಿಕೆ ಚೀಲ ಹೊತ್ತು ಎದ್ದರು. ಅಷ್ಟರಲ್ಲಿ ವಾಸುವೂ ಅಲ್ಲಿಗೆ ಬಂದ. ‘ಮನೇಗೆ ಹೋಗೋಣ ನಡಿ’ ಎಂದು ಜಗನ್ನಾಥ ಕರೆದ. ಜೊತೆಗೆ ಹೊರಟ ವಾಸು, ‘ಏನಯ್ಯ ನಾಗರಾಜ ಜೋಯಿಸರ ಮನೆಗೆ ಹೋಗಿದ್ದಿಯಂತೆ. ಊರಿನ ಸಾಹುಕಾರ್ರು ಬಂದ್ರೂಂತ ಅವರ ಸಂಭ್ರಮ ನೋಡಬೇಕು. ಕೊಚ್ಚಿದ್ದೇ ಕೊಚ್ಚಿದ್ದು. ಅವರನ್ನ ಮಾತ್ರ ನೀನು ನಂಬಬೇಡ, ಬೇಕಾದ್ರೆ ರಾಯ್ರನ್ನ ಕೇಳು. ವಯಸ್ಸಾದ್ರೂ ಮುದುಕನಿಗೆ ಚಪಲ ಬಿಡಲಿಲ್ಲ. ಹೆಂಡತೀನ ಸತಾಯಿಸಿ ಕೊಂದು ಈಗ ಸೊಸೇನ್ನ ಇಟ್ಟುಕೊಂಡಿದೆ ಪ್ರಾಣಿ. ಪಾಪ ಮಗ ಶಿವಮೊಗ್ಗದಲ್ಲಿ ದುಡೀತಾ ಇದಾನೆ. ಸೊಸೇನ್ನ ಯಾಕೆ ಮಗನ ಹತ್ರ ಕಳಿಸಬಾರದು? ಮನೇಲಿ ಬರೋಪ್ರಿಗೆ ಹೋಗೋಪ್ರಿಗೆ ಮಾಡಿಹಾಕಕ್ಕೆ ಯಾರಿದಾರೆ ಅಂತ ನೆವ ಹೇಳ್ತಾನೆ. ನಾನು ರಾಜಾರೋಷ ರಿಜಿಸ್ಟರ್ ಮದುವೆ ಮಾಡಿಕೊಂಡೆ; ಬೇಕೂನ್ನಿಸಿದರೆ ದುಡ್ಡು ಕೊಟ್ಟು ಹೋಗ್ತೀನಿ. ಮಡೀಪಂಚ ಮುಸುಕಲ್ಲಿ ಈ ಗೊಡ್ಡುಗಳ ಹಾಗೆ ವ್ಯಭಿಚಾರ ಮಾಡಲ್ಲ. ದೇವಸ್ಥಾನದ ಪೂಜೆ ಹಕ್ಕು ತನಗೇ ಸೇರಿದ್ದು ಅಂತ ಕೇಸು ಹಾಕತ್ತಂತೆ. ಈ ಪ್ರಾಂತದ ಒಂದೇ ಒಂದು ಕೇಸನ್ನು ಕೋರ್ಟಿಗೆ ಹೋಗಲಿಕ್ಕೆ ಭೂತರಾಯ ಬಿಡದೇ ಇರೋವಾಗ ಊರು ಹಾಳುಮಾಡೋ ಬುದ್ದಿ ಯಾಕೆ ಈ ಪ್ರಾಣಿಗೇಂತ? ಬೇರೆಯವರ ಉದ್ಧಾರ ನೋಡಿ ಸಹಿಸದ ಸೂಳೇಮಕ್ಕಳೆ ಈ ಊರಲ್ಲಿ. ಹೊಲಗೇರಿ ಬೇಕು, ಈ ಬ್ರಾಹ್ಮಣರಿರೋ ಪೇಟೆಗಳು ಬೇಡ. ಪಂಚಪಾತ್ರೆ ಹಿಡಿದ, ದೇವಸ್ಥಾನಕ್ಕೆ ಊಟಕ್ಕೆ ಹೋದ – ಆಯಿತು. ಮೈಬಗ್ಗಿ ಕೆಲಸ ಮಾಡೋದು ಅಂದ್ರೇನು ಅಂತ ತಿಳಿದಿದ್ರೆ ತಾನೆ ಇವಕ್ಕೆ?’

ವಿನಾಕಾರಣ ವಾಸು ರೋಷದಿಂದ ಕುದೀತ ಇದಾನೆ. ಎಲ್ಲೆಲ್ಲೂ ವ್ಯಕ್ತವಾಗಲು ಕಾದಿರುವ ಹಿಂಸೆ. ಲಾಠಿ ಏಟಿಗೂ ಜಗ್ಗದ ಅವನು ಯಾರೋ ಇವನು ಯಾರೋ. ಬದುಕುವ ಕ್ರಿಯೆಯಲ್ಲಿ ವಿಕಾರವಾಗದೇ ಉಳಿಯುವುದು ಸಾಧ್ಯವೆ ಮಾರ್ಗರೆಟ್? ರಾಯರ ಮನೆಯಲ್ಲಿ ನಡೆದ ರಂಪ, ಹಿಂಸೆ. ನಿತ್ಯ ಜೀವನದ ಸುಖ ದುಃಖಗಳಲ್ಲಿ ತೊಡಗಿದ್ದೂ ಇತಿಹಾಸದ ಚಕ್ರ ಚಲಿಸುವಂತೆ ಮಾಡುವ ಕ್ರಿಯೆ ಮುಖ್ಯವೆನ್ನಿಸಿಕೊಳ್ಳುವುದು ಹೇಗೆ? ಈಗಿನ ಮನಃಸ್ಥಿತಿಯಲ್ಲಿ ಶ್ರೀಪತಿರಾಯರಿಗೆ pure action ಮುಖ್ಯವೆನ್ನಿಸುವಂತೆ ನಾನು ಮಾಡಬಲ್ಲೆನೆ? ನನ್ನ ವಿಚಾರ ಗಟ್ಟಿಯೆ? ಎಷ್ಟು? – ಇವೆಲ್ಲವನ್ನೂ ಕೂತು ಆಳವಾಗಿ ಯೋಚಿಸಬೇಕು. ಅದಕ್ಕೆ ಏಕಾಂತ ಬೇಕು, ಮುಖವಿಲ್ಲದ ಹೆಸರಿಲ್ಲದ ಅವುಗಳು ಬೇಕು. ಯಾರು ಪಿಳ್ಳ, ಯಾರು ಕರಿಯ, ಯಾರು ಮಾದ. ಭೂತರಾಯನ ಹಕ್ಕುದಾರರಾದ ಈ ಪೂರ್ವಿಕರು. ಹಳಬರಾದ ರಾಯರ ಸಮ್ಮತಿಯಿಲ್ಲದೆ, ವಿವೇಕವಿಲ್ಲದೆ ನನ್ನ ನಿಶ್ಚಯ ಗಟ್ಟಿಯಾದೀತೆ. ಅವರಿಗೆ ಹೇಗೆ ಸರಿಯೆನ್ನಿಸುವಂತೆ ಹೇಳಲಿ? ಶತಮಾನಗಳ ಕೊಳೆ ಸೇರಿ ಸೇರಿ ಈ ಪೇಟೆ. ಅವಶ್ಯವಾದರೆ ಕ್ರೌರ್ಯದಲ್ಲೂ ಕೊಚ್ಚಬೇಕು, ನುಗ್ಗಿಸಬೇಕು, ಬಿಡಿಸಬೇಕು, ಅಭಯದಲ್ಲಿ ಮತ್ತೆಲ್ಲ ಅರಳಿಸಬೇಕು. ಶ್ರೀಮಂಜುನಾತ ರೈಸ್ ಮಿಲ್ ಕಡೆ ಹೋಗುತ್ತಿರುವ ಈ ಮೂಟೆ ತುಂಬಿದ ಗಾಡಿಗಳು. ‘ನಮಸ್ಕಾರ’, ‘ದೇವರ ದರ್ಶನ ಮುಗಿಸಿ ಬರುತ್ತಿರೋದೋ?’, ‘ಈ ಸಾರಿ ಒಳ್ಳೆ ಮಾವಿನ ಫಸಲಾದೀತು’, ‘ಹೇಳಕ್ಕಾಗಲ್ಲ. ಅಮಾಸೆ ಹೊತ್ತಿಗೆ ಚಳಿ ಹೆಚ್ಚಾಗಿ ಹೂವೆಲ್ಲ ಉದುರಿದರೂ ಉದುರೀತೆ’. ಬಾವಿಕಟ್ಟೆ ಬಳಿ ಬಟ್ಟೆ ಹಿಂಡುತ್ತ ಎತ್ತಲೋ ನೋಡುವ ಹುಡುಗಿ, ಮೂತಿಯನ್ನು ಚೂಪುಮಾಡಿ ತಿರುಗಿಸುತ್ತ ಹಿಂಡುತ್ತಾಳೆ. ಕೆಳತುಟಿಯನ್ನು ಕಚ್ಚಿ ಕೊಡವಿ, ಹರವುತ್ತಾಳೆ. ಭೂತರಾಯ ಕುಂಕುಮ ಬಳಿದು, ಕೆಂಪು ಮಡಿಯುಟ್ಟು ತಲೆಗೆದರಿ ಕುಣಿಯುತ್ತಾನೆ. ಯಾವುದಕ್ಕಾಗಿ ಕುಣಿಯುತ್ತಾನೆ ನೋಡು. ಒಂದಲ್ಲ ಒಂದು ದಿನ

ಸಾಯಲೇಬೇಕಾದ್ದರಿಂದ ಈ ಮಣ್ಣನ್ನು ಮಗುಚುತ್ತಲೇ ಇರಬೇಕು. ಒತ್ತಿ, ನೆಟ್ಟು, ಹೊರಳಿಸಿ, ಪಿಳ್ಳ, ಮಾದ, ಕರಿಯ, ತಲೆಯೆತ್ತಿದರೆ ಮಾತ್ರ. ಒಳಗೊಂದು ಮೊದಲನೇ ಹೆಜ್ಜೆಯಿಟ್ಟರೆ ಮಾತ್ರ. ಶತಮಾನಗಳನ್ನು ಹೆಜ್ಜೆಯೊಂದರಲ್ಲಿ ಅಲ್ಲಗಳೆದು ಚಕ್ರವನ್ನು ಮತ್ತೆ ತಿರುಗಿಸಿದರೆ ಮಾತ್ರ. ಇದು ಮುಖ್ಯವೆಂದು ರಾಯರಿಗೆ ಹೇಗೆ ಮುಟ್ಟಿಸಲಿ. ಕೆಸರು ತುಳಿದು ಉಳುವವನು ಯಾರೊ, ಇಲ್ಲಿ ತಿನ್ನುವವನು ಯಾರೊ. ಮಂಜುನಾಥನ ದಾಸೋಹದ ಜಿಡ್ಡಿನಲ್ಲಿ ತೆಪ್ಪಗಾದ ಪ್ರಾಣಶಕ್ತಿ. ಈ ವ್ಯವಸ್ಥೆಯನ್ನು ಕಾಯಲೆಂದು ಕಟ್ಟಿಹಾಕಿದ ಭೂತರಾಯ ಕುಣಿಯುತ್ತಾನೆ, ಸುಮ್ಮನೆ.

ಇಗೋ ದೊಡ್ಡ ಗಂಟೆ ಬಾರಿಸುತ್ತಿದೆ. ನನ್ನ ಹಿರಿಯರು ದಾನ ಮಾಡಿದ ಗಂಟೆ. ಅದರ ನಾದ ಆಕ್ಟೊಪಸ್ ಬೀದಿಗಳ ಪೇಟೆಯನ್ನು ತುಂಬುತ್ತಿದೆ. ಭೂತರಾಯ ಕುಣಿಯುತ್ತಿದ್ದಾನೆ. ಸಿಂಗಾರ ಹಿಡಿದು. ಹಸಿರಾದ ಚಿಗುರಾದ ಪತ್ರೆಗಳನ್ನು ಹೊದ್ದ ಮಂಜುನಾಥನಿಗೆ ಮಹಾ ಮಂಗಳಾರತಿ. ಹೊಟ್ಟೆಪಾಡಿಗೆಂದು ಮಾತ್ರ ತುಳಿಯುವ ಈ ಬೀದಿಗಳಲ್ಲೂ ಗಂಟೆಯ ನಾದ ಕೇಳಿ ಎಂತಹ ಸೂಕ್ಷ್ಮ ಬದಲಾವಣೆ. ಕೊಳ್ಳುತ್ತಿರುವ ಬಕೀಟಿನಲ್ಲಿ ತೂತು ಇದೆಯೊ ಎಂದು ಪರೀಕ್ಷಿಸುತ್ತಿರುವ ಈ ಹಳ್ಳಿಗ ಬಕೀಟನ್ನು ಅಲ್ಲೇ ಇಟ್ಟು ಕ್ಷಣ ಸ್ತಬ್ಧನಾದ. ಆದರೆ ಈ ಗಂಟೆಯ ನಾದದಲ್ಲಿ ಹೊರಳಿಕೊಳ್ಳುವ ಭ್ರಮೆ ಮಾತ್ರ. ಮಧ್ಯಾಹ್ನದ ಊಟಕ್ಕಾಗಿ ಹಸಿವಾಗುತ್ತಿದೆ ಎಂಬುದರ ನೆನಪಾಗುವುದು ಮಾತ್ರ. ಜಡಗಡು ಬಿಡಿಸುವ ದೇವರೆ, ಗೇಣಿ ಕೊಡಿಸುವ ದೇವರೆ, ಹೃದ್ರೋಗಿ ರಾಷ್ಟ್ರಾಧ್ಯಕ್ಷನಿಗೆ ಶತಾಯು ಭರವಸೆ ಕೊಡುವ ದೇವರೆ, ನನ್ನ ಪ್ರಾಣರಕ್ಷಣೆಯ ಕುಂಕುಮವಾದ ದೇವರೆ, ನೂರಾರು ಎಲೆಗಳ ಮೇಲೆ ಕೆಂಪಕ್ಕಿ ಅನ್ನವಾಗಿ, ಬಿಳಿಯನ್ನವಾಗಿ ನಿತ್ಯ ಬೀಳುವ ಹೊಟ್ಟೆಬಾಕರ ದೇವರ, ಹೊಟ್ಟೆ ಹೊರೆಯುವ ದೇವರೆ- ಜಗನ್ನಾಥನ ಮುಖದಲ್ಲೊಂದು ನಗು ಅರಳಿತು. ಬಿರುಸಿನಿಂದ ನಡೆಯುತ್ತಿದ್ದ ರಾಯರು ತಂಬಾಕನ್ನು ತುಪ್ಪಿದರು. ಒಳಗೊಂದು ಹೆಜ್ಜೆಯಿಡಿಸಿ, ತನ್ಮೂಲಕ ಹರಿದು, ಮಗಚಿ, ಪುನಃ ನಿನ್ನನ್ನು ಪಡೆದು, ಪಿಳ್ಳ, ಮಾದ, ಕರಿಯ, ಜೊತೆಗೆ ನೀನು, ಬಿಡಿಸಿ, ಪಡೆದು, ಜೊತೆಗೆ ಈ ತಂಗಳಾದ ಪೇಟೆ ಸೀಳಿ, ಜೊತೆಗೆ ಈ ಮಂಕು ಬಡಿದ ಜನಕ್ಕೆ ಕುಂಡೆಗೊದ್ದಂತಾಗಿ ಅವಾಕ್ಕಾಗಿ, ಬೆಚ್ಚಿ, ಬೀದಿ ಬೀದಿಯಲ್ಲೂ ಭೂತರಾಯ ಕುಣಿದಂತಾಗಿ... ಆದರೆ ಯಾರು ಮಾದ, ಯಾರು ಕರಿಯ, ಯಾರು ಪಿಳ್ಳ – ಬಿಳುಚಿದ ಮಾತುಗಳ ನನಗೆ ಅವರ ಜೊತೆ ಕೊಂಡಿಗಳೆಲ್ಲಿ ? ಯಾವ ಕ್ರಿಯೆಯ ಮೂಲಕ ? ಇಗೋ – ಅಂಜುತ್ತ ಒಡ್ಡಿರುವುದಷ್ಟೆ, ಒಳಗಿನಿಂದ ಮಾತುಗಳನ್ನು ಕುದಿಸುತ್ತ ಕಾದಿರುವುದಷ್ಟೆ.

ಮತ್ತೊಂದು ಬಸ್ ಬಂದು ಟೋಲ್‌ಗೇಟಿನ ಹತ್ತಿರ ನಿಂತಿತು. ಯಾತ್ರಿಕರಿಗಾಗಿ ಬ್ರಾಹ್ಮಣ ಹುಡುಗರು ಮುತ್ತಿದರು. ‘ಆರಾಮಾದ ಕೆಲಸ ಅಂದ್ರೆ ಇದೊಂದೇ’ ಎಂದ ವಾಸು. ಬಸ್ಸಿನಿಂದಿಳಿದ ಎಂ.ಎಲ್.ಎ. ಗುರುಪ್ಪಗೌಡರು ‘ನಮಸ್ಕಾರ ಸೌಕಾರ್ರಿಗೆ, ನಮಸ್ಕಾರ ರಾಯರಿಗೆ’ ಎಂದರು. ಕಚ್ಚೆ ಪಂಚೆ, ಜುಬ್ಬ, ಪುಟ್ಟ ಹೊಟ್ಟೆ – ಕಾಂಗ್ರೆಸ್ ನಾಯಕನ ಠೀವಿಯೆಲ್ಲ ಗೌಡರಲ್ಲಿತ್ತು. ಅವರ ಹಣೆಯ ಮೇಲೆ ಮಂಜುನಾಥನ ಪ್ರಸಾದ ಕುಂಕುಮವಿತ್ತು.

‘ಜಸ್ಟೀಸ್ ಪಾರ್ಟೀಲಿ ಇದ್ದು ಬ್ರಿಟೀಷರ ಪರವಾಗಿದ್ದ ಈ ಜನ ಈಗ ಕಾಂಗ್ರೆಸ್ ಎಂ.ಎಲ್.ಎ.ಗಳು’ ಎಂದು ಗೌಡರು ಕಣ್ಮರೆಯಾಗುತ್ತಿದ್ದಂತೆ ರಾಯರು ಕಹಿಯಾಗಿ ಹೇಳಿದರು. ಇಂತಹ ಮಾತು ಹೇಗೆ ಕ್ರಮೇಣ ಬ್ರಾಹ್ಮಣಪರ ಶೂದ್ರವಿರೋಧಿ ರಾಜಕೀಯವಾಗಿ ಅರ್ಥಹೀನವಾಗುತ್ತದೆಂದು ತಿಳಿದಿದ್ದ ಜಗನ್ನಾಥ ಸುಮ್ಮನಾದ. ಪ್ರಸ್ತುತದ ಹೊಲಸು ರಾಜಕೀಯದಿಂದ ಬೇಸತ್ತ ರಾಯರ ಮನಸ್ಸು ಸೂಕ್ಷ್ಮವಾಗಿ ಹೇಗೆ ಜಾತೀಯವಾದಿಯಾಗುತ್ತಿದೆ ಎನ್ನುವುದನ್ನು ಗಮನಿಸಿದ್ದ ಜಗನ್ನಾಥನಿಗೆ ರಾಯರಂಥವರನ್ನು ರಿನ್ಯೂ ಮಾಡಲು ತಾನು ಯೋಜಿಸಿದ್ದ ಕ್ರಿಯೆಯೇ ಸರಿಯೆನ್ನಿಸಿ ಹುಮ್ಮಸ್ಸಿನಿಂದ ನಡೆದ. ಗುಡ್ಡ ಹತ್ತಿ

ಮನೆ ಸೇರುವಷ್ಟು ಹೊತ್ತಿಗೆ ಎಲೆ ಹಾಕಿಯಾಗಿತ್ತು, ಹಸಿವೂ ಆಗಿತ್ತು. ಎಂದಿನಂತೆಯೇ ಪೇಟೆಗೆಂದು ಬಂದವರು, ದೇವರ ದರ್ಶನಕ್ಕೆಂದು ಬಂದವರು ಎಂದು ಸುಮಾರು ಇಪ್ಪತ್ತು ಜನ ಊಟಕ್ಕಿದ್ದರು. ರಾಯರನ್ನು ಊಟಕ್ಕೆ ಕರೆದು ತಂದದ್ದು ನೋಡಿ ಚಿಕ್ಕಿಗೆ ತುಂಬ ಹರ್ಷವಾಯಿತು. 'ಏನು ಒಂದು ತಿಂಗಳಾಯ್ತು ಈ ಕಡೆಗೆ ನೀವು ಬಂದು' ಎಂದು ಚಿಕ್ಕಿ ರಾಯರಿಗೆ ಟವಲ್ ಕೊಟ್ಟರು.

ಜಗನ್ನಾಥ ಹಾಸಿಗೆಯ ಮೇಲೆ ಕಾಲುಚಾಚಿ ಲಾಂದ್ರದ ದೀಪವನ್ನು ಸಣ್ಣ ಮಾಡಿದ. ಕೈಕಾಲುಗಳನ್ನು ಚಾಚುವುದೇ ದೊಡ್ಡ ಸುಖವೆನಿಸುವಷ್ಟು ಸುಸ್ತಾಗಿತ್ತು. ಮಧ್ಯಾಹ್ನದ ಊಟವಾದ ಮೇಲೆ ಶ್ರೀಪತಿರಾಯರಿಗೆ ತನ್ನ ನಿರ್ಧಾರವನ್ನು ಹೇಳಲು ಹೊರಟು, ಅವರು ಅನ್ಯಮನಸ್ಕ ರಾಗಿದ್ದನ್ನು ಕಂಡು ಸುಮ್ಮನಾಗಿದ್ದ. ಸಂಜೆ ಯಥಾಪ್ರಕಾರ ಹೊಲೆಯರು ಬಂದಿದ್ದರು. ಆದರೆ ಹತ್ತು ಜನ ಯುವಕರಲ್ಲಿ ಒಬ್ಬನಿಗಾದರೂ ತಾನು ಹೇಳಿದ್ದು ಅರ್ಥವಾಗಿತ್ತೆ? ಅವರ ಮನಸ್ಸಿನಲ್ಲಿ ಏನು ನಡೆಯುತ್ತಿದೆ ತನಗೆ ತಿಳಿಯುವುದಿಲ್ಲ. ಅಂಗಳದಲ್ಲಿ ದೂರ ನಿಲ್ಲುತ್ತಿದ್ದವರು ಅಂಗಳದ ಅಂಚಿನ ತನಕ ಬರುವಂತೆ ಮಾಡಲು ವಾರ ಬೇಕಾಯಿತು. ಆದರೆ ಅಂಗಳ ಹತ್ತಿ ಚಾಪೆಯ ಮೇಲೆ ಕೂರಲು ಪ್ರಾಯಶಃ ಅವರು ಯಾವತ್ತೂ ಒಲ್ಲರು. ತಾನು ಹುಡುಗನಾಗಿದ್ದಾಗ ಈ ಪಿಳ್ಳನ ಅಪ್ಪ ಭರ್ಮ ದಾರಿಯಲ್ಲೆಲ್ಲಾದರೂ ಎದುರಾದರೆ ಥಟ್ಟನೆ ಸರಿದು, ಮರದ ಹಿಂದೆ ಅವಿತು, ತೊಟ್ಟಿದ್ದ ಕಪ್ಪು ಅಂಗಿಯನ್ನು ಬಿಚ್ಚಿ, ಕಣ್ಣಿಗೆ ಬೀಳುವುದೇ ತಪ್ಪೇನೊ ಎನ್ನುವಂತೆ ದಾರಿಯಂಚಿನಲ್ಲಿ ನಿಂತು ಬಾಗಿ ನಮಸ್ಕರಿಸಿ ತಾನು ಕಣ್ಮರೆಯಾದ ಮೇಲೆ ತೋಳಿಲ್ಲದ ಕಾಲರಿಲ್ಲದ ಕಪ್ಪು ಅಂಗಿಯನ್ನು ಮತ್ತೆ ಹಾಕಿಕೊಳ್ಳುತ್ತಿದ್ದ. ಇಲ್ಲ, ಒಡೆಯನೆಂಬ ಕಾರಣದಿಂದ ನನ್ನ ಒತ್ತಾಯಕ್ಕೆ ಅವರು ಒಪ್ಪಿದರೆ ಸಾಲದು. ನನ್ನ ಕ್ರಿಯೆ ಅವರ ಮೇಲೆ ನಿಂತಿದೆ. ರಾತ್ರೆ ಊಟವಾದ ಮೇಲೆ ಮೇಜಿನೆದುರು ಪೆನ್ ಹಿಡಿದು ಕೂತ.

ಮೊದಲು ಪೇಪರುಗಳಿಗೆ ನನ್ನ ಉದ್ದೇಶವನ್ನು ಬರೆದು ತಿಳಿಸುವುದು. ರಾಯರಿಗೆ ಹಾಗೇ ಗೊತ್ತಾಗಲಿ. ನಾನಾಗಿ ಅವರ ಮೇಲೆ ಹೇರುವುದು ಬೇಡ. ಊರಲ್ಲಿ ನಿಷ್ಠುರವಾಗುವ ಧೈರ್ಯ ಮಾಡಲಾರರು; ಅಲ್ಲದೆ ನಾನು ಹೇಳಿದರೆ ದಾಕ್ಷಿಣ್ಯ ಮಾಡಿಕೊಂಡಾರು. ವೈಯಕ್ತಿಕವಾಗಿ ನನಗೆ ಸಾಧ್ಯವಾದ್ದನ್ನ ಶುರುಮಾಡಿಬಿಡುವುದು. ಸೇರುವವರು ಸೇರಲಿ. ಜಗನ್ನಾಥ ಹೀಗೆ ನಿರ್ಧರಿಸಿ ಪೇಪರುಗಳಿಗೆ ಕಳುಹಿಸಲೆಂದು ಒಂದು ಪುಟ್ಟ ಲೇಖನವನ್ನು ಬರೆದ. ಮೂರು ಸಾರಿ ಬರೆದು ಹರಿದು ಹಾಕಿದ. ಮಾತಿನಲ್ಲಿ ಮೂಡಿಸಲು ಪ್ರಯತ್ನಪಟ್ಟಾಗ ರೊಮಾಂಟಿಕ್ ಆದರ್ಶವಾದಂತೆ ಕಾಣಿಸುತ್ತದೆ. ಭ್ರಾಮಕ ಜಗತ್ತಿನಲ್ಲಿ ಬದುಕುತ್ತಿರುವ ಐಲು ಮನುಷ್ಯರಂತೆ ತಾನು ಕಾಣುತ್ತೇನೆ. 'ಹೊಲೆಯರು ಮಂಜುನಾಥನ ದೇವಸ್ಥಾನವನ್ನು ಪ್ರವೇಶಿಸಿದಲ್ಲಿ ರಕ್ತಕಾರಿ ಸಾಯುತ್ತಾರೆಂದು ಜನರೆಲ್ಲರ ನಂಬಿಕೆ. ಭೂತರಾಯ ಅವರ ಕಾಲು ಹಿಡಿದು ಎಳೆದು ರಕ್ತ ಕಾರಿಸುತ್ತಾನೆಂದು ಪ್ರತೀತಿ. ರಾಷ್ಟ್ರಾಧ್ಯಕ್ಷರೂ ನಂಬುವ ಈ ದೇವರ ಮಹಿಮೆಗೆ ಆಘಾತವಾಗದ ಹೊರತು ಇಂಡಿಯಾದ ಜನತೆ ತಮ್ಮ ಜೀವನಕ್ಕೆ ತಾವು ಜವಾಬ್ದಾರರಾಗಲರರು. ದೇವರಲ್ಲಿ ನಂಬಿಕೆ ಹೋದ ಮೇಲೆ ಉಂಟಾಗುವ ಸಂಕಟದಲ್ಲಿ ಮಾತ್ರ ನಾವು ಸೃಷ್ಟಿಶೀಲ ಜನರಾದೇವು. ಶೂದ್ರರ ದೇವರಾದ ಭೂತರಾಯ ಈಗ ಶೂದ್ರರ ವಿರುದ್ಧವೇ ದುಡಿಯುವಂತೆ ಮಾಡಿದ ಮಂಜುನಾಥನನ್ನು...'

ಬರೆದದ್ದು ಸರಿಯಲ್ಲವೆನ್ನಿಸಿ ಹರಿದು ಹಾಕಿದ. ಮತ್ತೊಂದು ಬರೆದ. 'ಈ ದೇವಸ್ಥಾನ ವೈಜ್ಞಾನಿಕ ದೃಷ್ಟಿಯ ಪರಮ ವೈರಿ. ಜಕಣಿ ಬಿಡಿಸುವವನು ಭೂತರಾಯ. ಜಮೀಂದಾರರಿಗೆ ಕರಾರುವಾಕ್ಕಾಗಿ ಗೇಣಿ ಕೊಡಿಸುವವನು ಭೂತರಾಯ; ಈ

ಭೂತರಾಯನನ್ನು ಆಳುವವ ಶ್ರೀಮಂಜುನಾಥ. ನಮ್ಮ ಬದುಕು ಸೃಷ್ಟಿಶೀಲವಾಗದಂತೆ, ನಾವು ಇತಿಯಾಸದಲ್ಲಿ ಪಾಲ್ಗೊಳ್ಳ ದಂತೆ ನಮ್ಮನ್ನು ಬಂಧಿಸಿಟ್ಟಿರುವ ಈ ದೇವರ ಕಾರ್ಣಿಕವನ್ನು ನಾಶಮಾಡದ ಹೊರತು ಏನೂ ಸಾಧ್ಯವಿಲ್ಲ. ದೇವರನ್ನು ನಾಶಮಾಡುವುದೆಂದರೆ ನಿಜವಾಗಿಯೂ ಜೇನುಗೂಡಿಗೆ ಕೈಹಾಕಿದಂತೆ. ಈ ಭಾರತದಲ್ಲಿ ಸಮಾಜವನ್ನು ಅರ್ಥಪೂರ್ಣವಾಗಿಸುವಂತಹ ಕ್ರಿಯೆಯನ್ನು ಅಸಾಧ್ಯ ಮಾಡಿರು ವವನು ಮಂಜುನಾಥ. ಇಲ್ಲಿ ಕ್ರಿಯೆ ಅಸಾಧ್ಯವಾದದ್ದರಿಂದ ಸಾಮಾಜಿಕ ಜೀವನಕ್ಕೆ ಅರ್ಥವೇ ಇಲ್ಲದಂತಾಗಿದೆ. ಈ ಲೌಕಿಕ ಸತ್ಯವನ್ನು ಮಾಯೆಯೆಂದು ಜರಿಯುವುದರ ಮೂಲಕ ನಾವು ಆತ್ಮವಂಚನೆಯಲ್ಲಿ ಬದುಕುತ್ತಿದ್ದೇವೆ. ಆದ್ದರಿಂದ ದೊಡ್ಡದೊಂದು ಕ್ರಾಂತಿಯಾಗಬೇಕಾದರೆ ನಮ್ಮಲ್ಲಿರುವ ಅತ್ಯಂತ ಹೀನ ಜನರಾದ ಹೊಲೆಯರು ತಲೆಯೆತ್ತಿ ನಿಲ್ಲಬೇಕು. ಅವರು ಮುಂದೆ ಇಡಬಹುದಾದ ಒಂದು ಹೆಜ್ಜೆ ಮಾತ್ರ ನಿಜವಾದುದು. ಶತಮಾನಗಳ ಸತ್ಯವನ್ನು ಒಂದೇ ಒಂದು ಹೆಜ್ಜೆಯ ಮೂಲಕ ಬದಲಿಸಬಲ್ಲವರು ಈ ಹೊಲೆಯರು. ಉತ್ತಮ ಜಾತಿಯವರು ಎಷ್ಟೇ ಮೇಲೆ ಬರಲಿ ನಾವು ಪ್ರಗತಿಯ ಭ್ರಮೆಯಲ್ಲೆ ಬದುಕುತ್ತಿರುತ್ತೇವೇ ಹೊರತು...'

ಜಗನ್ನಾಥ ಮತ್ತೆ ಹರಿದು ಹಾಕಿದ. ಕ್ರಿಯೆಯ ಬಗ್ಗೆ ಮಾತ್ರ ಬರೆಯಬೇಕು. ಮಾತಿನಲ್ಲಿ ಏನು ಹೇಳಿದರೂ ತಾನು ಐಲು ಮನುಷ್ಯನಂತೆ ಕಂಡೇನು. ನನ್ನಲ್ಲಿರುವ ಸುಳ್ಳುಗಳನ್ನೆಲ್ಲ ಕಳೆದುಕೊಂಡು ನಿಜವಾದ ಗಟ್ಟಿ ಮನುಷ್ಯನಾಗಲೆಂದು ಈ ಕ್ರಿಯೆಗೆ ಕೈ ಹಾಕಿದ ನಾನು ಮತ್ತೆ ಮಾತಿನ ಗೋಪುರ ಕಟ್ಟಕೂಡದು. ಹೀಗೆ ನಿರ್ಧರಿಸಿ ಜಗನ್ನಾಥ ತಾನು ಉದ್ದೇಶಿಸಿದ ಕ್ರಿಯೆಯನ್ನು ಮಾತ್ರ ಹೇಳುವ ಪುಟ್ಟ ಕಾಗದವನ್ನು ಬರೆದ. 'ಸ್ವಾಮಿ, ಇಡೀ ಭಾರತದಲ್ಲಿ ಹೆಸರುವಾಸಿಯಾದ ಶ್ರೀ ಮಂಜುನಾಥ ದೇವಾಲಯಕ್ಕೆ ಹರಿಜನ ಪ್ರವೇಶ ಮಾಡಿಸಬೇಕೆಂದು ನಾನು ನಿರ್ಧರಿಸಿದ್ದೇನೆ. ಇದಕ್ಕೆ ಅಮಾವಾಸ್ಯೆಯ ಮೂರನೇ ಜಾತ್ರೆಯ ದಿನ ಸರಿಯಾದ್ದೆಂದು ನನ್ನ ಅಭಿಪ್ರಾಯ. ಯಾಕೆಂದರೆ ಭಾರತಾದ್ಯಂತ ಭಕ್ತರು ಭಾರತೀಪುರಕ್ಕೆ ಆ ದಿನ ಬಂದಿರುತ್ತಾರೆ. ಅವರ ಕಣ್ಣೆದುರಲ್ಲೆ ದೇವಸ್ಥಾನದೊಳಕ್ಕೆ ಹೋಗುವ ಹೊಲೆಯರು ರಕ್ತಕಾರಿ ಸಾಯುತ್ತಾರೆಂಬುದು ಸುಳ್ಳೆಂದು ರುಜುವಾತು ಮಾಡಿ ತೋರಿಸಿದ್ದೇ ಆದಲ್ಲಿ ಜನಮನದಲ್ಲಿ ಹೊಸ ವಿಚಾರ ಮೂಡೀತೆಂದು ನನ್ನ ಭರವಸೆ. ಇದಕ್ಕೆ ಪ್ರಗತಿಶೀಲರೆಲ್ಲರ ಬೆಂಬಲವನ್ನು ಈ ಮೂಲಕ ಕೋರುತ್ತೇನೆ. ಜಗನ್ನಾಥ, ಭಾರತೀಪುರ.'

ಇಂಗ್ಲಿಷಿನಲ್ಲೊಂದು ಕನ್ನಡದಲ್ಲೊಂದು ಹೀಗೆ ಕಾಗದ ಬರೆದು ಬೆಂಗಳೂರಿನ ಎರಡು ವೃತ್ತ ಪತ್ರಿಕೆಗಳ ವಿಳಾಸ ಬರೆದ ಲಕೋಟೆಯಲ್ಲಿಟ್ಟು ರಾತ್ರೆಯೇ ಮನೆಯಿಂದ ಹೊರಗೆ ಹೊರಟ. ಟಾರ್ಚಿನ ಬೆಳಕಲ್ಲಿ ಗುಡ್ಡ ಇಳಿದು ಪೋಸ್ಟಾಫೀಸಿಗೆ ಹೋಗಿ ಡಬ್ಬಿಯಲ್ಲಿ ಕಾಗದವನ್ನು ಹಾಕಿದ್ದೇ ಜಗನ್ನಾಥನಿಗೆ ಅತ್ಯಂತ ಸಂತೋಷವಾಯಿತು. ಬಹಳ ಗೆಲುವಿನಿಂದ ಹಿಂದಕ್ಕೆ ನಡೆದು ಬಂದು ಮನೆ ಸೇರಿ, ಮಹಡಿಯನ್ನು ಓಡುತ್ತೋಡುತ್ತಾ ಹತ್ತಿ ಹಾಸಿಗೆಯ ಮೇಲೆ ಬಿದ್ದ. ಚಳಿಯಲ್ಲು  ಮೈ ಬಿಸಿಯಾಗಿ ಬೆವತಿತ್ತು.

* * *

ನಿದ್ದೆ ಬರಲಿಲ್ಲ. ಮನಸ್ಸು ತೀರಾ ಪ್ರಚೋದಿತವಾಗಿತ್ತು. ಹೊರಗೆ ಗಾಢವಾದ ಕತ್ತಲು. ದೀಪವನ್ನು ದೊಡ್ಡ ಮಾಡಿ ಮಾರ್ಗರೆಟ್‌ಗೆ ಬರೆಯುತ್ತಿದ್ದ ಕಾಗದವನ್ನು ಮುಂದುವರೆಸಿದ. Then I thought that we all live in the womb of God and we will not begin to live unless we act and make our

existence in society meaningful. ಬರೆದ ವಾಕ್ಯ pompous ಎನ್ನಿಸಿ ಹೊಡೆದು ಹಾಕಿದ. ನಿಜವಾದ್ದನ್ನ ಹೇಳಬೇಕಾದರೆ Dear Margaret I have failed you also because I am not yet a man ಎಂದು ಬರೆಯಬೇಕು. ಹೊಲೆಯರ ಮೂಲಕ ಈ ಕ್ರಿಯೆಯಲ್ಲಿ ನಾನು ಮತ್ತೆ ಮನುಷ್ಯನಾಗಿ – ಇಲ್ಲ ಹಾಗೆ ಬರೆದರೂ ನಿಜವಲ್ಲ. ವಿಪರೀತ ಆತ್ಮಪರೀಕ್ಷೆಯ ರೋಗದಿಂದ ನಾನು ಇನ್ನೂ ಹುಷಾರಾಗಿಲ್ಲ. ಸಾಂಕೇತಿಕವಾಗಿ ಹೇಳುವುದಾದರೆ ಮಾರ್ಗರೆಟ್, ಇಲ್ಲಿಯವರೆಗೂ ಕನ್ನಡಿಯೆದುರೇ ನಿಂತು ನನ್ನನ್ನು ನಾನು ರಮಿಸಿಕೊಳ್ಳುತ್ತ ಹೋದೆ. ಕನ್ನಡಿಯಿಲ್ಲದೇ ನನಗೇ ನಾನು ನಿಜವಾಗಿರಲಾರೆ. ಮೈಸೂರಿನಲ್ಲಿ ಬಿ.ಎ. ಓದುವಾಗ ನೆಹರೂ ಆದರ್ಶವಾದ ಕನ್ನಡಿಯಾಯ್ತು. ನನ್ನ ಮಾತಿನ ಕ್ರಮ, ನನ್ನ ಗತ್ತು, ನನ್ನ ಭಂಗಿ – ಎಲ್ಲ ಆಕರ್ಷಕವಾಗಿ ಕಾಣುವ ಉಪಾಯಗಳಾಯ್ತು. ಆತ್ಮಪರೀಕ್ಷೆಯ ಗೀಳು ಕನ್ನಡಿಗಳ ನಡುವೆ ನನ್ನ ರೂಪವನ್ನು ನಿರಂತರವಾಗಿ ಸೃಷ್ಟಿಸಿದುವು. ನನ್ನ ಎತ್ತರ, ನನ್ನ ಉದ್ದನೆಯ ನುಣುಪು ಕೂದಲು, ನನ್ನ ವಿಶಾಲವಾದ wistful ಕಣ್ಣುಗಳು, ಎಲ್ಲರನ್ನೂ ಒಲಿಸಿಕೊಳ್ಳಬಲ್ಲ ನನ್ನ ಮತು, ತತ್ಪರವಾಗುವ ನನ್ನ ಸ್ವಭಾವ – ಎಲ್ಲ ಕೂಡಿ ನಾನು ಸುಳ್ಳಾಗುತ್ತ ಜಳ್ಳಾಗುತ್ತ ಮೃದುವಾಗುತ್ತ ಹೋದೆ.

ಕಾಗದದಲ್ಲಿ ಇವೆಲ್ಲವನ್ನೂ ಬರೆಯಲಾರದೆ ಜಗನ್ನಾಥ ಎದ್ದು ನಿಂತು ರೂಮಿನಿಂದ ಹೊರಗೆ ಬಂದು ಮಹಡಿಯ ವಿಶಾಲವಾದ ಹಜಾರದಲ್ಲಿ ಅಡ್ಡಾಡಿದ. ಗುಡ್ಡದ ಮೇಲಿನ ವಿಶಾಲವಾದ ಮನೆ, ಆಗರ್ಭ ಶ್ರೀಮಂತಿಕೆ, ಮರ್ಯಾದೆ, ಧೀರವಾದ ಎತ್ತರವಾದ ರೂಪ – ಈ ಭೂತ ಕನ್ನಡಿಗಳ ಎದುರು ನಿಂತೇ ಬೆಳೆದೆ. ಇನ್ನೊಬ್ಬರ ಕಣ್ಣಲ್ಲಿ ಪ್ರತಿಫಲಿತನಾಗದೆ ನಾನು ಇದ್ದೇನೆ ಎಂದು ಅನ್ನಿಸುವುದೇ ಇಲ್ಲ. ನನ್ನ ಸ್ವಭಾವದಲ್ಲಿರುವ ದ್ರೋಹ ನಿನಗೆ ಗೊತ್ತಿಲ್ಲ ಮಾರ್ಗರೆಟ್. ಆತ್ಮಪರೀಕ್ಷೆಯಲ್ಲಿ ಬಾತುಕೊಳ್ಳುತ್ತ ಹೋಗಿ ಕ್ರಿಯೆ ಎದುರಾದೊಡನೆ ನಿರ್ವಿಣ್ಣನಾಗಿ ಬಿಡುತ್ತೇನೆ. ಆ ಕ್ಷಣದಲ್ಲಿ ಪ್ರಿಯನಾಗಲು ಏನಾದರೂ ಮಾಡಬಲ್ಲ ಮಿಂಡನ ವ್ಯಕ್ತಿತ್ವ ನಂದೆಂದು ಯಾವ ದಿನ ನನಗೆ ಹೊಳೆದುಬಿಟ್ಟಿತು, ಅಂದಿನಿಂದ ಮನಸ್ಸಿಗೆ ಶಾಂತಿಯಿಲ್ಲವಾಯ್ತು. ನನ್ನನ್ನು ಉಜ್ಜಿ ಬಿಗಿದು ಜಿಡ್ಡನ್ನೆಲ್ಲ ಕರಗಿಸಿ, ಹೊತ್ತಿಸಿ, ಉರಿಸಬಲ್ಲ ಕ್ರಿಯೆಯಲ್ಲಿ ಈ ತನಕ ನಾನು ತೊಡಗಿಯೇ ಇಲ್ಲ ಮಾರ್ಗರೆಟ್.

ಈಗ ನನಗೆ ನಿಜವಾಗಿ ಅನ್ನಿಸುತ್ತಿರುವುದು ಭಯ. ಕಾಗದ ಪ್ರಕಟವಾಗುತ್ತದೆ, ಅದನ್ನೋದಿ ಭಾರತೀಪುರದವರೆಲ್ಲ ನನ್ನನ್ನು ನಾಯಿಯಂತೆ ಕಾಣುತ್ತಾರೆಂಬ ದಿಗಿಲು. ಟಪ್ಪಾಲು ಪೆಟ್ಟಿಗೆಯಲ್ಲಿ ಕಾಗದವನ್ನು ಹಾಕಿದಾಗಿದ್ದ ಹುಮ್ಮಸ್ಸು ಇಳಿದು ಹೋದಂತೆ ಅತಂತ್ರನಾಗುತ್ತಿರುವ ಅನುಭವ. ಆದರೆ ಏನೂ ಮಾಡದೆ ಇರುವುದು ಕೂಡ ಅಸಹನೀಯವಾಗಿತ್ತಲ್ಲವೆ ನನಗೆ- ಜಗನ್ನಾಥ ತನ್ನ ಮನಸ್ಸನ್ನು ಅಮೂಲಾಗ್ರ ಶೋಧಿಸಿಕೊಳ್ಳಬೇಕೆಂದು ನಿಶ್ಚಯಿಸಿ ಬರೆಯುತ್ತಿದ್ದ ಕಾಗದದ ಎದುರು ಹೋಗಿ ಮತ್ತೆ ಕುತ. ಕಿಟಕಿ ಹೊರಗೆ ಗೊಡ್ಡಗಳಾಚೆ ಗೆರೆ ಚಂದ್ರ. ಹುಳುಗಳ ಜಿರ್ರೆನುವ ಕರಕರೆ. ಚಳಿ.

ಇಂಗ್ಲೆಂಡಿನಲ್ಲಿ ಆರು ವರ್ಷ ಏನು ಮಾಡಿದ? ಬಹಳ ಸೂಕ್ಷ್ಮವಾದ ದ್ರೋಹದ ಮೂಲಕ ಬಿಳಿಯರಿಗೂ ಕರಿಯರಿಗೂ ಪ್ರಿಯನಾಗಿ ಬದುಕಿದೆ. ಅಂದರೆ ಎಂ.ಎ. ಪಾಸ್ ಮಾಡಿದಾಗ ನನ್ನ ಪ್ರೊಫೆಸರ್ the most charming and honest young man that i have met for year ಎಂದು ಹೇಳುವುದು ಸಾಧ್ಯವಾಗುವಂತೆ ಬದುಕಿದೆ. ವೈಯಕ್ತಿಕ ಜೀವನವೊಂದೇ ನಿಜವೆಂದು ವಾದಿಸಿ ಅಸ್ತಿತ್ವವಾದಿಯಾಗಿ ಆಕರ್ಷಕನಾದೆ. ನನ್ನ ಕಪ್ಪು ಕಣ್ಣು, ಕಪ್ಪು ಕೂದಲು, ಇಟಾಲಿಯನ್ನರ ಮೈ ಬಣ್ಣ, ಮಾತಿನ ಗತ್ತು – ಎಲ್ಲವನ್ನೂ ಸೂಕ್ಷ್ಮವಾಗಿ ಉಪಯೋಗಿಸಿಕೊಂಡೆ. ಲಿಬರಲ್ ಆದೆ,

ಗಾರ್ಡಿಯನ್ ಓದಿದೆ. ಕಾರಣ ನನ್ನ ಗೊತ್ತುಗುರಿಯಿಲ್ಲದ ಸಡಿಲವಾದ ಜೀವನ ಕ್ರಮವನ್ನು ಲಿಬರಲ್ ಧೋರಣೆಯ ಮೂಲಕ ಸಮರ್ಥಿಸಿಕೊಳ್ಳುವುದು ಸಾಧ್ಯವಾಗಿತ್ತು. ಯಾವಳೊಬ್ಬಳಿಗೂ ಸಂಪೂರ್ಣ ಗಂಟು ಬೀಳದಂತೆ ಹಲವಾರು ಹುಡುಗಿಯರ ಸಖ್ಯ ಬೇಕೆನ್ನಿಸಿದ್ದರಿಂದ, ಆದರೆ ಅದು ಸಾಧ್ಯವಾಗದ್ದರಿಂದ, ಕಾಮಸ್ವಾತಂತ್ರ್ಯದ ವಾದಿಯಾದೆ; ಇಂಗ್ಲಿಷರ ಪ್ಯೂರಿಟನ್ ಮನೋವೃತ್ತಿಯ ಉಗ್ರವಿರೋಧಿಯಾದೆ; ಫ್ರೆಂಚರ ಜೀವನ ಸಂತೋಷವನ್ನು ಕೊಂಡಾಡಿದೆ. ನನಗೆ ಸ್ವೇಚ್ಛೆಯಾಗಿರುವುದು ಬೇಕಿತ್ತು; ಆದ್ದರಿಂದ ಬದುಕೇ ಅಸಂಗತ ಎಂದೆ. ಹುಡುಗಿಯರನ್ನು ಸೆಡ್ಯೂಸ್ ಮಾಡುವ ವಿವಿಧ ಘಟ್ಟಗಳಲ್ಲಿ ತತ್ಪರರಾಗಿದ್ದ ಗೆಳೆಯರಿಗೆ ಹೀರೋ ಆದೆ. ಇಂಗ್ಲಿಷ್ ಹುಡುಗಿ ತನ್ನನ್ನು ತಿರಸ್ಕರಿಸಿದಳೆಂದು ನೋಯುತ್ತಿದ್ದ ಭಾರತೀಯರ ಗೆಳೆಯ ನನ್ನ ಐರೋಪ್ಯ ಸಂಸ್ಕೃತಿಯ ಖಂಡನೆಯನ್ನು ಮನಸಾರೆ ಮೆಚ್ಚಿದ; ಹಾಗೆಯೇ ಮಧ್ಯಮ ವರ್ಗದ ಮರ್ಯಾದೆಯಲ್ಲಿ ಸಿಕ್ಕಿಬಿದ್ದ ಇಂಗ್ಲಿಷರವನೂ ಮೆಚ್ಚಿದ. ಒಳಗಿನ ಗುಪ್ತ ಆಸೆಗಳಿಗೆ ಹೀಗೆ ವಿಚಾರದ ಬಹಿರಂಗ ವೇಷಗಳು. ಒಟ್ಟಿನಲ್ಲಿ ಸದಾ ವೇಷಧಾರಿಯಾದ ಮಿಂಡನ ಬದುಕು.

ಒಂದು ದಿನ ಲಂಡನ್ ಯೂನಿವರ್ಸಿಟಿ ಯೂನಿಯನ್ನಿನ ಪಬ್ಬಿನಲ್ಲಿ ಮಾರ್ಗರೆಟ್ಟಳ ಪರಿಚಯವಾದದ್ದನ್ನು ಜಗನ್ನಾಥ ನೆನಪಿಸಿಕೊಂಡ. ಜೊತೆಗೆ  ಚಂದ್ರಶೇಖರನಿದ್ದ. ಬೆಂಗಳೂರಿನ ಮಧ್ಯಮ ವರ್ಗದ ಜೀವನಕ್ಕೆ ಬೇಸತ್ತು ಲಂಡನ್ನಿಗೆ ಬಂದವ. ಸ್ಲಮ್ ಸ್ಕೂಲುಗಳಲ್ಲಿ ಸಪ್ಲೈ ಟೀಚಿಂಗ್, ಸಾಯಂಕಾಲದ ಕಾಲೇಜುಗಳಲ್ಲಿ ಅಭ್ಯಾಸ, ಏಕಾಂಗಿತನ ಸಹಿಸಲಾರದೆ ಪಬ್ ಮುಚ್ಚುವ ತನಕ ಡ್ರಾಫ್ಟ್‌ಬಿಯರಿನ ಪಾನ. ಬೆಂಗಳೂರಲ್ಲಿ ಬ್ರಾಹ್ಮಣವಾದಿ; ಲಂಡನ್ನಿನಲ್ಲಿ ಉಗ್ರ ಸಾಮ್ಯವಾದಿ. ಬ್ರಿಟಿಷರ ವರ್ಣನೀತಿಯನ್ನು ಖಂಡಿಸಲು ಏನಾದರೂ ಮಾಡಲೇಬೇಕು. PROTEST ಎನ್ನುವ ಮಾಸಿಕ ತಂದರೆ ಹೇಗೆ – ಎಂದು ನಿತ್ಯ ಚರ್ಚಿಸುವಾಗ ರೂಬೆನ್ಸ್ ಎನ್ನುವ ಜ್ಯೂ ಗೆಳೆಯನೂ ಜೊತೆಗಿರುತ್ತಿದ್ದ. ಆದರೆ ಅವತ್ತು ಅವನಿರಲಿಲ್ಲ. ಫಾರ್‌ಸ್ಟರ್ ಮೇಲಿನ ಥೀಸಿಸ್‌ಗೆ ಒಂದು ಸ್ಪಷ್ಟರೂಪ ಕೊಡಲು ಹೆಣಗುತ್ತಿದ್ದ ಜಗನ್ನಾಥನಿಗೆ ಲೈಬ್ರರಿಯಿಂದ ಹೊರಗೆ ಬರುವಾಗ ತನಗೆ ಸ್ವಂತ ಹೇಳುವುದು ಏನೂ ಇಲ್ಲವೆನಿಸಿದ್ದರಿಂದ ಅತ್ಯಂತ ಖಿನ್ನನಾಗಿ ಕೂತಿದ್ದ. ತನ್ನ ಜೊತೆಯ ಬ್ರಿಟಿಷ್ ಉಪಾಧ್ಯಾಯರ ಅಸಡ್ಡೆಯಿಂದ ಕ್ರುದ್ಧನಾಗಿದ್ದ ಚಂದ್ರಶೇಖರ ಇಂಡಿಯನ್ ಜೀನಿಯಸ್ ಎಷ್ಟು ಹಿರಿದಾದ್ದು, ಈ ಸ್ಲಮ್ ಮಕ್ಕಳು ಹೇಗೆ ಅನ್‌ಟೀಚಬಲ್, ನಮ್ಮ ಪ್ರತಿಭೆಯನ್ನು ನಿಯೋ ಕಲೋನಿಯಲಿಸಂ ಹೇಗೆ ಕುಗ್ಗಿಸಿದೆ ಎಂದು ಲೆಕ್ಚರ್ ಕೊಡುತ್ತಿದ್ದ. ಜಗನ್ನಾಥನಿಗೆ ಅವನ ಮಾತು ಅವತ್ತು ಬೇಡಿತ್ತು. ಎದ್ದು ಹೋಗಿ ಇನ್ನೊಂದರ್ಧ ಪೈಂಟ್ ಬಿಯರನ್ನೂ, ಚೀಸ್ ಅಂಡ್ ಆನಿಯನ್ ಫ್ಲೇವರ್‌ಡ್‌ಕ್ರಿಸ್ಟ್‌ನ್ನೂ ಕೊಂಡುತಂದ. ಪೈಪ್ ಹಚ್ಚಿದ. ಚಂದ್ರಶೇಖರ ಮಾತಾಡುತ್ತಲೇ ಇದ್ದ. ಜಗನ್ನಾಥನಿಗೆ ಇದ್ದಕ್ಕಿದ್ದಂತೆ ತಾನು ಯಾವತ್ತು ಒರಿಜಿನಲ್ ಆಗಲಾರೆ, ತಾನೊಂದು ಬರಿ ನಕಲು ಪ್ರತಿ ಎನ್ನಿಸಿತು. ಆಡುವ ಮಾತು ಎಂಜಲು, ವಿಚಾರ ಎಂಜಲು. ಫಾರ್‌ಸ್ಟರ್ ಬಗ್ಗೆ ಹೇಳಲು ಒಂದೇ ಒಂದು ಹೊಸ ಮಾತು ಹೊಳೆದಿರಲಿಲ್ಲ. ಆಕರ್ಷಕವಾದ ಬಂಡಾಯದ ಮಾತಾಡುತ್ತ, ಎಲ್ಲರನ್ನೂ ಒಲಿಸಿಕೊಳ್ಳುವ ವಿನಯದಿಂದ ವರ್ತಿಸುತ್ತ, ವಿಚಾರದಲ್ಲಿ ಮುಳ್ಳುಹಂದಿಯಾಗಿ, ಆಚಾರದಲ್ಲಿ ಬೆಚ್ಚಗಿರುವ ಮೂಲೆ ಹುಡುಕುವ ಬೆಕ್ಕಾಗಿ ಏರುತ್ತ, ಒಳಗೇನು ಸತ್ಯವಿಲ್ಲದಿದ್ದರೂ ಮೇಲಕ್ಕೇರುತ್ತ, ನುಣ್ಣಗಾಗುತ್ತ – ಥತ್‌ನನ್ನ ಎನ್ನಿಸಿತು. ಈಲ್ ತರಹದ ಪ್ರಾಣಿ. ವಿಚಾರದ ವೇಷ ಧರಿಸಿದ ಮಾತುಗಳೆಲ್ಲ ಸುಳ್ಳು, ಮನಸ್ಸಿನ ತುಂಬ ಅರೆಹೊರೆದ ಬಯಕೆಗಳಿವೆಯೆಂಬುದು ಮಾತ್ರ ಸತ್ಯ. ಶ್ರೀಮಂತನಾಗಿ ಹುಟ್ಟಿದ ನನಗೆ ಗೊತ್ತಿಲ್ಲ ಗುರಿಯಿಲ್ಲ. ನಾನಿದ್ದೇನೆ ಎಂಬುದನ್ನು ಗುರುತಿಸಿಕೊಳ್ಳಲು ಈ ಬಂಡಾಯ, ಈ ಕ್ರಾಂತಿ, ಈ ಸಾಹಿತ್ಯದ ಜಾಣ ಚರ್ಚೆ, ಈ ಬಗೆಬಗೆಯ ಕನ್ನಡಿಗಳು – ಒಳಗೆ ಮಾತ್ರ ಯಾವ ನಂಬಿಕೆಯೂ ಇಲ್ಲ. ನನ್ನ ಮಾತು ನನಗೆ ನಿಜವೆನ್ನಿಸಲು ಆಡಿಯನ್ಸ್‌ಹುಡುಕುತ್ತಿರುವುದೇ ನನ್ನ ಪಾಲಿನ ಸತ್ಯ.

ಹೀಗೆ ಜಗನ್ನಾಥ ತನ್ನ ಬಗ್ಗೆ ಹೇಸುತ್ತ ಕೂತಿದ್ದಾಗ ಮಾರ್ಗರೆಟ್‌ಸೀದ ತಾನಿದ್ದ ಕಡೆಗೆ ಬಂದಿದ್ದಳು. ಕೈಯಲ್ಲಿ ಬಿಯರ್ ಹಿಡಿದು 'May I join you' ಎಂದು ಕುರ್ಚಿ ಎಳೆದು ಪಕ್ಕದಲ್ಲಿ ಕೂತಳು. ಕೆನ್ನೆಯ ಮೇಲೆ ಚೆಲ್ಲಿದ ಕಪ್ಪು ಕೂದಲು, ಕಪ್ಪು ಕಣ್ಣು, ಖುಷಿಯ ಜೀವ ಎನ್ನಿಸುವಂತೆ ಸ್ವಲ್ಪ ತೋರವಾದ ಮೈಕಟ್ಟು, ಮುದ್ದಾದ ತುಟಿಗಳು – ಎದ್ದುನಿಂತು ಕೋಟ್ ಬಿಚ್ಚಿ ಇನ್ನೊಂದು ಕುರ್ಚಿಯ ಮೇಲೆ ಎಸೆದಳು. ಕುತ್ತಿಗೆಯಲ್ಲಿ ದಪ್ಪ ರುದ್ರಾಕ್ಷಿ ಸರವಿತ್ತು. ತಿಳಿಯಾದ ನೀಲಿಯ ಡ್ರೆಸ್ ಹಾಕಿದ್ದಳು. ಕೂದಲನ್ನು ಕೆನ್ನೆಯಿಂದ ತಳ್ಳುತ್ತ, ಉಲ್ಲಾಸದಿಂದ ನಗುತ್ತ, 'I am Margaret' ಎಂದು ಕೈಯೊಡ್ಡಿದ್ದಳು. ತನ್ನನ್ನು ಪರಿಚಯ ಮಾಡಿಕೊಳ್ಳಲು ಹೊರಟ ಜಗನ್ನಾಥನಿಗೆ 'I have seen you' ಎಂದರು. ಬ್ರಿಟನ್‌ನಲ್ಲಿ ಭಾರತೀಯನಾಗಿರುವುದು ಎಂದರೆ ಏನು ಎನ್ನುವ ಬಗ್ಗೆ ಯೂನಿಯನ್ನಿನಲ್ಲಿ ನೀನು ಮಾಡಿದ ಸ್ಪೀಚ್‌ತುಂಬ ಸಿನ್ಸಿಯರ್ ಅಂಡ್ ಮೂವಿಂಗ್ ಆಗಿ ಇತ್ತು ಎಂದಳು.

ಬಿಳಿಯರು ಮತ್ತು ಕರಿಯರ ನಡುವೆ ಬದುಕುವ ಭಾರತೀಯ ಹೇಗೆ ಸೂಕ್ಷ್ಮ ದ್ರೋಹ ಮಾಡುತ್ತಾನೆಂದೂ, ಸ್ವದೇಶದಲ್ಲಿ ಜಾತಿಪದ್ಧತಿಗೆ ಬಗ್ಗಿ ನಡೆಯುವ ಭಾರತೀಯ ಇಂಗ್ಲೆಂಡಲ್ಲಿ ಬಂಡಾಯಗಾರನಾಗುವುದರ ಸೈಕಾಲಜಿ ಯಾವುದೆಂದು ಜಗನ್ನಾಥ ಮಾತಾಡಿದ್ದ. ನೆಹರೂ ಯಾಕೆ ಭಾವುಕವಾಗಿ ಭಾರತೀಯನಾದರೂ ವಿಚಾರದಲ್ಲಿ ಮಾತ್ರ ಪಾಶ್ಚಾತ್ಯ ಎಂಬುದನ್ನು ವಿವರಿಸಿದ್ದ. ಯಥಾಪ್ರಕಾರ ತಾನು ಅವತ್ತು ನಿಂತು ಕೈಗಳನ್ನು ಬೀಸುತ್ತ ಮಾತಾಡಿದ ಗತ್ತು, ಯೋಚಿಸುವುದೂ ಭರ್ಜರಿಯಾದ ಕ್ರಿಯೆಯೆಂದು ಸೂಚಿಸುವಂತಿತ್ತು. ಪರೋಕ್ಷವಾಗಿ ತನ್ನ ವ್ಯಕ್ತಿತ್ವದ ಸೂಕ್ಷ್ಮ ವಿದ್ರೋಹವನ್ನೆ ವಿಶ್ಲೇಷಿಸಿಕೊಂಡು ಆಡಿದ ಮಾತುಗಳು. ತನ್ನ ಒಳಗುದಿಗೆ ಕಾರಣವಾದದ್ದರ ಪ್ರಾಮಾಣಿಕ ಶೋಧನೆ ಕೂಡ ಕೊನೆಯಲ್ಲಿ ತನ್ನ ಕೀರ್ತಿಗೇ ಕಾರಣವಾದದ್ದನ್ನು ಜಗನ್ನಾಥ ಮಾರ್ಗರೆಟ್ಟಿನ ಮೆಚ್ಚಿಗೆಯಲ್ಲಿ ಕಂಡ. ಸುಲಭವಾಗಿ ಮೆಚ್ಚುವವಳು ಇವಳಲ್ಲ ಎನ್ನುವುದು ಸ್ವತಂತ್ರ ವಿಚಾರಕ್ಕೆ ದ್ಯೋತಕವಾದ ಅವಳ ಮಾಡ್‌ಡ್ರೆಸ್ಸಿನಲ್ಲಿ, ಬೆನ್ನಿನ ತನಕ ಚೆಲ್ಲಿದ ಕೂದಲಿನಲ್ಲಿ ವ್ಯಕ್ತವಾದ್ದರಿಂದ, ಅವಳ ಭಾಷೆಯಲ್ಲಿ ವ್ಯಂಗ್ಯದ ಒಗರು ಕಂಡದ್ದರಿಂದ ಜಗನ್ನಾಥನಿಗೆ ಅವಳ ಮೆಚ್ಚಿಗೆಯಿಂದ ಸುಖವಾಯಿತು. ತನ್ನ ನಿಜವಾದ ಪೂರ್ವಿಕರು ಬೈರನ್ ಮತ್ತು ನೆಹರೂ ಎಂದು ತನ್ನನ್ನು ಹೀಯಾಳಿಸಿಕೊಂಡರೂ ಮಾರ್ಗರೆಟ್ಟಿನ ವಿಮರ್ಶಾತ್ಮಕ ಕಣ್ಣಿನಲ್ಲಿ ತಾನು ಇನ್ನಷ್ಟು ಆಕರ್ಷಕನಾದೇನು. ಚಂದ್ರಶೇಖರ್‌ನನ್ನು ಪರಿಚಯ ಮಾಡಿಕೊಟ್ಟ. ಮಾರ್ಗರೆಟ್ ತಾನು ಟೀಚರ್ ಆಗಿರುವುದಾಗಿಯೂ, ಬಿಡುವಿನಲ್ಲಿ ಲಂಡನ್‌ಯೂನಿವರ್ಸಿಟಿಯ ಇತಿಹಾಸದ ಎಂ.ಎ.ಗೆ ಕೆಲಸ ಮಾಡುತ್ತಿರುವುದಾಗಿಯೂ ಹೇಳಿಕೊಂಡಳು. Oh, how thirsty I am ಎಂದು ಗಟಗಟನೆ ಅರ್ಧ ಪೈಂಟ್ ಬಿಯರನ್ನು ಕುಡಿದು ಕೈಯಿಂದ ಬಾಯಿ ಒರೆಸಿಕೊಂಡಳು. ನಿನ್ನ ಗಮನಕ್ಕಾಗಿ ನಾನು ಕಾತರಳೆಂದೂ, ಜೊತೆಗೇ ನಾನು ಸ್ವತಂತ್ರಳೆಂದೂ ಒಟ್ಟಿಗೇ ಸೂಚಿಸುತ್ತಿದ್ದ ಹುಡುಗಿಯ ವ್ಯಕ್ತಿತ್ವದಿಂದ ಜಗನ್ನಾಥನ ಮೈ ಮನಸ್ಸುಗಳೆರಡೂ ಜಾಗೃತವಾದವು. ಖಾಲಿಯಾದ ಮೂರು ಗ್ಲಾಸುಗಳನ್ನು ಎತ್ತಿಕೊಂಡು ಜಗನ್ನಾಥ ಎದ್ದ. ಮಾರ್ಗರೆಟ್ಟಳೂ ಎದ್ದು, 'ನಾನು ದುಡಿಯುತ್ತಿದ್ದೇನೆ, ನಾನೇ ಕೊಡುವೆ' ಎಂದಳು. ಜಗನ್ನಾಥ ಬೇಡ ಎಂದು ಕೌಂಟರ್‌ಗೆ ಹೋದ. ತುಂಬಿದ ಗ್ಲಾಸುಗಳನ್ನು ತಟ್ಟೆಯ ಮೇಲಿಟ್ಟು ತರುವಾಗ, At least let me help ಎಂದು ಮಾರ್ಗರೆಟ್ ಎದ್ದು ಬಂದಳು. ಸಿಗರೇಟ್ ಕೊಂಡು ತಂದಳು. ಜಗನ್ನಾಥ ಲವಲವಿಕೆಯಿಂದ ಅವಳ ಸಿಗರೇಟ್ ಹಚ್ಚಿ ಮಾತಿಗೆ ಶುರುಮಾಡಿದ. ಹೊಸಬಳೊಬ್ಬಳ ಪರಿಚಯವಾದೊಡನೆ ಅವಳ ಮನಸ್ಸನ್ನು ಆಕ್ರಮಿಸಿ ಅಲ್ಲಿ ನಿಜವಾಗಲು ತಾನು ತೋರಿಸುತ್ತಿದ್ದ ಬೇಟೆಗಾರನ ಚಾಕಚಾಕ್ಯತೆಯನ್ನು ತಕ್ಷಣ ಗಮನಿಸಿಕೊಂಡ. ಕೆಲವೇ ನಿಮಿಷಗಳ ಕೆಳಗೆ ಎಷ್ಟೊಂದು ಖಿನ್ನನಾಗಿದ್ದೆ. ಆದರೆ ತನ್ನ ಬಾಗಿನ ಕತ್ತು, ಪರೀಕ್ಷಕ ನೋಟ, ಉತ್ಕಟ ಮಾತು,

ಹಾವಭಾವಗಳ ಹೃತ್ಪೂರ್ವಕತೆ ಮಾರ್ಗರೆಟ್ಟಿನ ಅಂತರಂಗದಲ್ಲಿ ತನ್ನನ್ನು ಊರಿಬಿಡಲು ಹವಣಿಸುತ್ತಿದ್ದುವು. ಸಮ್ಮತಿ, ವಿರೋಧ, ಆತ್ಮವಿಮರ್ಶೆ- ಎಲ್ಲವೂ ಬೇಟೆಯ ಸಾಧನಗಳಾದವು. ಕೆನ್ನೆ ಮೇಲೆ ಬಿದ್ದ ಕೂದಲನ್ನು ತಳ್ಳುತ್ತ, ಮೈಕೈಗಳನ್ನು ಆರಾಮಾಗಿ ಸಡಲಿಸಿಕೊಳ್ಳುತ್ತ, ನಿಸ್ಸಂಕೋಚದ ತನ್ನ ಮೈ ಮನಸ್ಸುಗಳನ್ನು ಜಗನ್ನಾಥನ ಗಮನಕ್ಕೆ ಒಡ್ಡಿ, ಈಗ ಒಪ್ಪುತ್ತ, ಮರುಕ್ಷಣ ಅನುಮಾನಿಸುತ್ತ ಮಾತಿನಲ್ಲಿ ಒಬ್ಬರನ್ನೊಬ್ಬರು ಸುಖವಾಗಿ ಬರೆದರು. ಚಂದ್ರಶೇಖರ್‌ಅಸೂಯೆ ತಡೆಯಲಾರದೆ ಐರೋಪ್ಯದ ಲಿಬರಲ್ ವಿಚಾರವೆಲ್ಲ ಷಂಡತನವೆಂದೂ, ಮೋಸವೆಂದೂ, ಚೆಗೆವಾರನ ಹಾಗೇ ಕ್ರಿಯೆಯಲ್ಲಿ ತೊಡಗಿದಾಗ ಮಾತ್ರ ಈ ಐರೋಪ್ಯ ಲಿಬರಲ್ ಮೋಸ ಬಯಲಾಗುತ್ತದೆಂದೂ ಉಗ್ರವಾಗಿ ವಾದಿಸಿದ. ಮನುಷ್ಯನ ಜೀವನದ ಅಂತಿಮ ಶೂನ್ಯತೆ ಬಗ್ಗೆ ಮಾತಾಡೋದು, ನಮ್ಮ ನ್ಯೂನತೆಗಳೇನೂಂತ ವಿಶ್ಲೇಷಿಸಿಕೋತಾ ಹೋಗೋದು ಡಿಕಡೆಂಟ್ ಜನ ಆಡೋ ಗೇಮ್ ಎಂದು ವಾದಿಸಿದ. ನೀವಿಬ್ಬರು ಹೇಗೆ ಆರಾಮಾಗಿ ಕೂತು ಎಷ್ಟು ಕ್ರೂರವಾಗಿ ಆಕರ್ಷಕವಾಗಿ ಮನುಷ್ಯನ ಚರ್ಚಿಸುತ್ತಿದೀರಲ್ಲ, ಇದು ಲುಮುಂಬಾನ ಆಫ್ರಿಕಾದಲ್ಲಿ ಸಾಧ್ಯವಿತ್ತೆ, ಕಾಡುಬಿದ್ದ ಚೆಗೆವಾರನಿಗೆ ಸಾಧ್ಯವಿತ್ತೇ – ಸಾಮಾನ್ಯ ಜನ ಎದ್ದು ನಿಲ್ಲಬೇಕು. ನಿಮ್ಮ ಭ್ರಾಮಕ ಪ್ರಪಂಚ ಹರಿದು ಹೋಗುತ್ತೆ ಎಂದು ಹಾಸ್ಯ ಮಾಡಿದ. ಬಿಯರ್ ತಲೆಗೇರಿರಬೇಕು, ಅಥವಾ ತಡಿಯಲಾರದಷ್ಟು ಹೊಟ್ಟೆಕಿಚ್ಚಾಗಿರಬೇಕು – ಯಾಕೆಂದರೆ ಚಂದ್ರಶೇಖರ್ ಹೇಳ್ತಾ ಇದ್ದದ್ದನ್ನೇ ಹೆಚ್ಚು ಕಡಮೆ ಜಗನ್ನಾಥ ಮತ್ತು ಮಾರ್ಗರೆಟ್ ಸಹ ಮಾತಾಡ್ತ ಇದ್ದರು. ಮಾರ್ಗರೆಟ್ ತನ್ನ ತಂದೆಯೂ ಭಾರತೀಯ, ಗುಜರಾತಿಂದ ಬಂದವರು, ತಾಯಿ ಇಂಗ್ಲಿಷರವಳು, ಆದರೆ ತಂದೆಯೆಂದ್ರೆ ತನಗೆ ಹೆಚ್ಚು ಇಷ್ಟ ಎಂದಳು. ನೀನು ಹೇಳೋದನ್ನೆಲ್ಲ ನಾನೂ ಒಪ್ತೀನಿ ಎಂದಳು. ಪಬ್ಬಿನಲ್ಲಿ ಕೂತು ಒಪ್ಪೋದು ಸುಲಭ, ಜಗನ್ನಾಥ ಹೀಗೇ ಮಾತಾಡ್ತಾ ಇದ್ದರೆ ನೆಹರೂ ಸರ್ಕಾರದಲ್ಲಿ ಅಂಬಾಸಡರ್ ಆಗ್ತಾನೆ ಎಂದು ಚಂದ್ರಶೇಖರ್ ಅಣಕಿಸಿದ. ಜಗನ್ನಾಥನಂತಹ ವಾಕ್ಪಟುಗಳು ಬಹಳ ಬೇಗ ಇಂಡಿಯಾದಲ್ಲಿ ಮೇಲಕ್ಕೆ ಬರ್ತಾರೆ; ನೆಹರೂ, ಕೃಷ್ಣಮೆನನ್ ಸಕ್ಸೆಸ್ ಗುಟ್ಟು ಮತ್ತೇನು ಎಂದ. ಕ್ಷಣದ ಹಿಂದೆ ಜಗನ್ನಾಥ ಕೂಡ ಇದೇ ಮಾತಾಡಿದ್ದ. ಪಬ್ ಮುಚ್ಚಿದ ಮೇಲೇ ಅವರು ಎದ್ದದ್ದು. 'ಬೈ' ಎಂದು ಚಂದ್ರಶೇಖರ ಎದ್ದು ಹೋದ. ಹೋಗುವಾಗ ಸ್ವೀಟಾಗಿ ವರ್ತಿಸಲು ಪ್ರಯತ್ನಿಸಿದ್ದ. ನಿನ್ನ ರೋಷಾನ್ನ ನಾನು ಮೆಚ್ತೇನೆ ಎಂದು ಮಾರ್ಗರೆಟ್‌ಹೇಳಿ ಅವನ ಕೈಕುಲುಕಿದ್ದಳು. ಜಗನ್ನಾಥನಿಗೆ ಚಂದ್ರಶೇಖರನ ವ್ಯಂಗ್ಯದಲ್ಲೂ ಅಸೂಯೆಯಲ್ಲೂ ವ್ಯಕ್ತವಾಗಿದ್ದ ಪ್ರಾಣಶಕ್ತಿ ಕಂಡು ಕಸಿವಿಸಿಯಾಗಿತ್ತು. ಅವನ ಕಹಿಯಾದ ಮಾತು, ಅಸೂಯೆಯಲ್ಲಿ ಉರಿದ ದುರ್ಬಲತೆ ಮಾರ್ಗರೆಟ್ಟಳ ಹೆಣ್ತನವನ್ನು ಪ್ರಚೋದಿಸಿದಂತೆ ಕಂಡಿತು. ಚಂದ್ರಶೇಖರ್ ಹೋದೊಡನೆಯೇ ಹೇಳಿದ :

'ಮಾತಾಡ್ತಾನೆ ಅಷ್ಟೆ, ಆದರೆ ಪೌಂಡನ್ನ ಬ್ಲಾಕ್‌ನಲ್ಲಿ ಮಾರಿ ಬೆಂಗಳೂರಿನ ಜಯನಗರ ಬಡಾವಣೇಲಿ ಮಹಡಿ ಮನೆ ಕಟ್ಟಿಸ್ತಾ ಇದಾನೆ.'

ಮಾರ್ಗರೆಟ್ಟಿನ ಕಣ್ಣಲ್ಲಿ ಒಂದು ಕ್ಷಣದಲ್ಲೆ ಚಂದ್ರಶೇಖರ್‌ಹೆಣವಾಗಿರಬಹುದು.

ಆದರೆ ತನ್ನ ಈ ಗೆಲುವಿನಿಂದ ನಾಚಿಕೆಯಾಗಿ ಹೇಳಿದ :

'ಚಂದ್ರಶೇಖರ್ ಬಡವ, ಹಲ್ಕ. ಆದ್ದರಿಂದ ಅವನಿಗೆ ಅರ್ಥವಾಗೋ ಸಂಕಟಗಳು ನನಗೆ ಆಗಲ್ಲ.'

ಹೀಗೆ ಮಾತಾಡಿ ಪ್ರಾಯಶಃ ತಾನು ಮಾರ್ಗರೆಟ್ ಕಣ್ಣಲ್ಲಿ ಇನ್ನಷ್ಟು ದೊಡ್ಡವನಾಗಿದ್ದೆ. ‘Oh, I know the type’ ಎಂದಳು.

ಇಬ್ಬರೂ ಬ್ಲೂಮ್ಸ್‌ಬರಿಯಲ್ಲಿದ್ದ ಮಾರ್ಗರೆಟ್ಟಿನ ಫ್ಲ್ಯಾಟಿನ ತನಕ ನಡೆದರು. I will fix something for you to eat, ಬಾ, ಎಂದು ಮಾರ್ಗರೆಟ್ ಕರೆದಳು. ಬಾಗಿಲು ತೆರೆಯುತ್ತ, ನನ್ನ ಲ್ಯಾಂಡ್‌ಲೇಡಿಗೆ ತುಂಬ ಸಂಶಯದ ಪ್ರಕೃತಿ, ಮೆತ್ತಗೆ ಹತ್ತಿ ಬಾ ಎಂದು ಕೈ ಹಿಡಿದು ಕತ್ತಲಿನಲ್ಲಿ ಮಹಡಿ ಹತ್ತಿಸಿದಳು. ರಿಲ್ಯಾಕ್ಸ್ ಎಂದು ಸೋಫಾ ಕಂ ಬೆಡ್ಡನ್ನು ತೋರಿಸಿ ಕೋಟನ್ನು ತೆಗೆಯಲು ಸಹಾಯ ಮಾಡಿದಳು. ರವಿಶಂಕರನ ಸಿತಾರ್‌ಮುದ್ರಿಕೆಯನ್ನು ಹಾಕಿ ‘I won’t be a minute’ ಎಂದು ಅಡಿಗೆ ಮನೆಗೆ ಹೋದಳು.

ಜಗನ್ನಾಥ ಮಾರ್ಗರೆಟ್ಟಿನ ಬೆಡ್‌ಸಿಟಿಂಗ್ ರೂಮನ್ನು ಕುತೂಹಲದಿಂದ ಪರೀಕ್ಷಿಸಿದ. ಅವಳ ರೂಮಿನಲ್ಲಿ ಉಪಯೋಗಿಸಿದ್ದ ಅಲಂಕಾರದ ವಸ್ತುಗಳಲ್ಲಿ ಹೆಚ್ಚು ಪಾಲು ನೀಲಿ ವರ್ಣವಾಗಿದ್ದುವು. ಅವಳ ಮೇಜಿನ ಮೇಲೆ ಜೋತ ಮೊಲೆಗಳ ಬರಿ ಮೈಯಲ್ಲಿ ಕೈಗಳನ್ನೆತ್ತಿ ನಿಂತಿದ್ದ ಪರಮಹಂಸರ ಫೋಟೋ ಇತ್ತು. ಗೋಡೆಯ ಮೇಲೆ ಗೋಗೇನ್ನನ ಚಿತ್ರ. ಮೂಲೆಯಲ್ಲಿ ಹಳೆಯದಾದ ರೇಡಿಯೋ ಗ್ರಾಂ. ಊಟದ ಟೇಬಲ್ಲಿನ ಮೇಲೆ ಹಾಗೇ ಬಿಟ್ಟ ತಟ್ಟೆಗಳು, ಜರ್ನಲ್‌ಗಳು. ಒಳ್ಳೆಯ ಅಭಿರುಚಿಯ ಜೊತೆಗೆ ಸೋಮಾರಿತನದ ಚಿಹ್ನೆಗಳು. ತನಗೆ ಒಳ್ಳೆಯ ರುಚಿಯಿದೆ, ಆದರೆ ಬೂರ್ಜ್ವಾ ಅಲ್ಲ ಎಂಬುದನ್ನು ವ್ಯಕ್ತಪಡಿಸುವ ಪಾಪ್ ಚಿತ್ರಗಳು. ವಿಯಟ್ನಾಂ ಯುದ್ಧದ ಭೀಕರತೆಯನ್ನು ಹೇಳುವ ಚಿತ್ರದ ಕಟಿಂಗ್‌ಗಳು. ಬಾಗಿಲಿನ ಸ್ಟಾಂಡಿನ ಮೇಲೆ ಅವಳು ಬಿಚ್ಚಿಟ್ಟ ಡಫಲ್ ಕೋಟು. ನೋಡಲು ಸರಳವಾದ ಆದರೆ ತುಂಬ ಮೆತ್ತಗೆ ಹಿತವಾಗಿದ್ದ ಸೋಫಾಗಳು. ಜಗನ್ನಾಥ ಗ್ಯಾಸ್ ಒಲೆಯ ಎದುರು ಕೈ ಕಾಯಿಸಿಕೊಳ್ಳುತ್ತ ಕೂತ. ಒಳಗಿನಿಂದ ಮಾರ್ಗರೆಟ್ ಅಲ್ಲೆ ವ್ಹಿಸ್ಕಿಯಿದೆ ತಗೊ ಎಂದಳು. ಪುಸ್ತಕದ ಕಪಾಟಿನ ಮೇಲಿದ್ದ ವ್ಹಿಸ್ಕಿಯನ್ನು ಸುರಿದುಕೊಂಡು ‘ನಿನಗೆ?’ ಎಂದ. ಬೇಡ ಎದಂದಳು. ಜಗನ್ನಾಥ ಅಡಿಗೆ ಮನೆ ಒಳಗೆ ಹೋಗಿ ಫ್ರಿಜ್ ತೆರೆದು ಐಸ್ ಹಾಕಿಕೊಂಡ. ಸಾಸೇಜುಗಳನ್ನು ಫ್ರೈಮಾಡುತ್ತಿದ್ದ ಮಾರ್ಗರೆಟ್‌ಗೆ ತೊಂದರೆ ತಗೋಬೇಡ ಎಂದ. ‘ಒಂದು ನಿಮಿಷ ಕೂತಿರು’ ಎಂದಳು. ‘ನಿನಗೆ ಪರಮಹಂಸರು ಇಷ್ಟವೇ?’ ಎಂದ. ‘ಹೌದು. ನೀನು ಇಶರ್‌ವುಡ್ ಓದಿದೀಯ, ನನಗೆ ಪ್ರಿಯನಾದ ಲೇಖಕ ಅವನು’ ಎಂದಳು. ಫಾರ್‌ಸ್ಟರ್ ತರಹದ ಲೇಖಕ ಅಲ್ಲವೆ?’ ಎಂದ. ‘ಹೌದು, ಪರಮಹಂಸ, ವ್ಹಿಟ್‌ಮನ್ ಎಲ್ಲವದನ್ನೂ ಒಪ್ಪಿಕೋತಾರೆ, ಏನನ್ನೂ ನಿರಾಕರಿಸಲ್ಲ. ಸೃಷ್ಟಿಯಲ್ಲಿರೋ ಎಲ್ಲಾ ಸಂಕೀರ್ಣತೇನ್ನೂ ಒಳಗೊಳ್ಳೊ ವ್ಯಕ್ತಿತ್ವಗಳು’ ಎಂದಳು. ‘ಏನನ್ನಾದರೂ ತುಂಬಬಲ್ಲ ಬ್ಯಾಗುಗಳು. ಅವರ ವ್ಯಕ್ತಿತ್ವ ಪಾಯಸ ಇದ್ದ ಹಾಗೆ’ ಎಂದ. ‘ನಾನು ಒಪ್ಪಲ್ಲ’ ಎಂದು ಮಾರ್ಗರೆಟ್ ನಗುತ್ತ, ಬ್ರೆಡ್, ಚೀಸ್, ಸಾಸೇಜುಗಳನ್ನು ಮೇಜಿಗೆ ತಂದಳು.

ತಿಂದಾದ ಮೇಲೆ ಕಪ್ಪು ಕಾಫಿ ಕುಡಿದರು. ನಾಳೆ ತೊಳದೆರಾಯಿತು ಎಂದರೂ ಒಪ್ಪದೆ ಮಾರ್ಗರೆಟ್ ತಟ್ಟೆಗಳನ್ನು ತೊಳೆಯಲು ಜಗನ್ನಾಥ ಸಹಾಯ ಮಾಡಿದ. ‘ನನ್ನ ತಾಯಿ ನ್ನ ತಂದೇನ್ನ ನಿರ್ವೀರ್ಯನನ್ನಾಗಿ ಮಾಡಿದಾಳೆ. ನಾನವಳನ್ನ ಹೇಟ್ ಮಾಡ್ತೀನಿ’ ಎಂದಳು. ಹೊರಡುವಾಗ ‘ನಾಳೆ ಭಾನುವಾರ, ಲಂಚ್‌ಗೆ ಬಾ. ನನ್ನ ತಂದೇನ್ನ ಹೋಗಿ ನೋಡಿ ಬರಬಹುದು. ಇಲ್ಲೇ ಇದಾರೆ’ ಎಂದಳು. ಜಗನ್ನಾಥ ಹುರುಪಿನಿಂದ ತನ್ನ ಫ್ಲ್ಯಾಟಿಗೆ ಹಿಂದಿರುಗಿದ. ತಾನು ಪ್ರೀತಿಸಿದ್ದ ಹುಡುಗಿಯರಲ್ಲೆಲ್ಲ ಮಾರ್ಗರೆಟ್ ತುಂಬ ನಿಜವಾದ ಹೆಣ್ಣಲ್ಲವೆ, ಅವಳ ಜೊತೆಗಿದ್ದಾಗ ತನ್ನ ವ್ಯಕ್ತಿತ್ವ ನಿರಂಬಳತೆಯನ್ನೂ

ಗಟ್ಟಿತನವನ್ನೂ ಪಡೆಯುತ್ತದೆ ಎನ್ನಿಸಿತು.

* * *

ಮಾರನೇ ದಿನ ಭಾನುವಾರ; ಬೆಳಗಿನಿಂದ ಮಳೆ, ಕೆಸರು, ಚಳಿ. ಜಗನ್ನಾಥ ಬಸ್ ಹತ್ತಿ ಮಾರ್ಗರೆಟ್ ಇದ್ದಲ್ಲಿಗೆ ಹೋದ. ಆಗ ತಾನೇ ಸ್ನಾನ ಮುಗಿಸಿದ್ದಳು. ರೂಮು ಬೆಚ್ಚಗೆ ಹಿತವಾಗಿತ್ತು. ಗ್ಯಾಸ್ ಅಗ್ಗಿಷ್ಟಿಕೆಯ ಎದುರು ಕೂತ. ಕಾಫಿಯೇ ಟೀಯೋ ಎಂದಳು. ನಾನು ಮಾಡ್ತೇನೆ ಎಂದು ಮಾರ್ಗರೇಟ್ ಜೊತೆ ಕಿಚನ್ನಿಗೆ ಹೋದ. ತಾನು ಬರುತ್ತೇನೆಂದು ರೂಮನ್ನು ಮಾರ್ಗರೆಟ್ ಸ್ವಚ್ಛವಾಗಿ ಇಟ್ಟದ್ದು ನೋಡಿ ಜಗನ್ನಾಥನಿಗೆ ಖುಷಿಯಾಯಿತು. ಟೀ ಪಾಟ್‌ಗೆ ಬಿಸಿ ನೀರು ಹೊಯ್ಯುವಾಗ ಅವಳ ಹತ್ತಿರ ನಿಂತಿದ್ದ. ಶಾಮಪೂ ಮಾಡಿದ ಅವಳ ಕೂದಲಿನ ವಾಸನೆ ಹಿತವೆನ್ನಿಸಿತು. 'ಈಗಲೇ ಜಡೆ ಹಾಕುವಷ್ಟು ಉದ್ದ ಕೂದಲಿದೆ' ಎಂದು ಅವಳ ಕೂದಲನ್ನು ಕೈಯಿಂದ ಎತ್ತಿದ. ಅಂಚಿನಲ್ಲಿದ್ದ ನವಿಲುಗಳಿದ್ದ ಸಡಿಲವಾದ ಲಂಗ ಮತ್ತು ಬ್ಲೌಸ್ ಧರಿಸಿದ್ದಳು. ಅವಳ ಮೈಗೆ ಮೈ ತಾಗುವಂತೆ ನಿಂತಿದ್ದ. ಅವಳ ಭುಜದ ಮೇಲೆ ಕೈಯಿಟ್ಟು ತಾನು ಬರೆಯಲು ಒದ್ದಾಡುತ್ತಿದ್ದ ಥೀಸಿಸ್ ವಿಷಯ ಮಾತಾಡಿದ. ಟೀ ಕುಡಿಯುತ್ತ ತಾಯಿ, ಭಾರತೀಪುರದ ವಿಷಯ ಹೇಳಿದ. ಶ್ರೀಪತಿರಾಯರು ತನಗೆ ಶಾ, ಇಂಗರ್‌ಸಾಲರನ್ನು ಓದಿಸಿದ್ದು ಹೇಳಿದ. 'ಯಾರು ಇಂಗರ್‌ಸಾಲ?' ಎಂದು ಕುತೂಹಲದಿಂದ ಕೇಳಿದ್ದಳು. ಸಂಪೂರ್ಣ ರಿಲ್ಯಾಕ್ಸ್ ಆಗಿದ್ದಳು. ಇಡೀ ಒಂದು ಬಾಟ್ಲಿ ವೈನ್ ಕುಡಿದು ಮಾತಾಡಿದರು. ಊಟಕ್ಕೆ ಚಿಕನ್ ಕರಿ ಅನ್ನ ಮಾಡಿದ್ದಳು. ನನಗೆ ವೆಜಿಟೇರಿಯನ್ ಆಹಾರವೇ ನಿಜವಾಗಿ ಸೇರೋದು ಎಂದು ತನ್ನ ಉಪನಯನ ಇತ್ಯಾದಿ ವಿವರಿಸಿದ. ಊಟ ಮುಗಿಸಿ ಫಿನ್‌ಸ್‌ಬರಿಯಲ್ಲಿದ್ದ ಮಾರ್ಗರೆಟ್ ತಂದೆಯ ಮನೆಗೆ ಹೋದರು. ಡಾಕ್ಟರಾಗಿದ್ದ ದೇಸಾಯರು ನೋಡಲು ಮಗಳನ್ನು ಹೋಲುತ್ತಿದ್ದರು. ಹಿಂದಿಯಲ್ಲಿ ಜಗನ್ನಾಥನನ್ನು ಮಾತಾಡಿಸಿದರು. ನನಗೆ ಹಿಂದಿ ಬರಲ್ಲ ಎಂದ ಜಗನ್ನಾಥ. ದೇಸಾಯಿ ತಿದ್ದಿದ ಮೂಗು, ದುಂಡು ಮುಖ, ಮಂಕಾದ ಕಣ್ಣುಗಳ ತೋರ ಶರೀರದ ವ್ಯಕ್ತಿ. ಬೋಳು ತಲೆಯನ್ನು ಉಜ್ಜಿಕೊಳ್ಳುತ್ತ ಇಂಡಿಯಾದ ವಿಷಯ ಕೇಳಿದರು. ಬೆಂಗಳೂರನ್ನು ನಾನು ನೋಡಿದ್ದೇನೆ ಅಂದರು. ಅವರ ಇಂಗ್ಲಿಷಿನಲ್ಲಿ ತನಗಿಂತ ಹೆಚ್ಚಾದ ಆಕ್ಸೆಂಟ್ ಇತ್ತು. ನಿಮಗೆ ಗುಜರಾತಿ ಮಾತನಾಡಲು ಯಾರೂ ಸಿಗಲ್ವೆ ಎಂದು ಜಗನ್ನಾಥ ಕೇಳಿದ. ಸಿಗುತ್ತಾರೆ ಎಂದು ಅವರು ಮೌನವಾದರು. ಒಳಗಿನಿಂದ ಟೀ ಟ್ರಾಲಿಯನ್ನು ತಳ್ಳಿಕೊಂಡು ಮಾರ್ಗರೆಟ್ ತಾಯಿಯ ಜೊತೆ ಬಂದಳು. ಅವಳ ತಾಯಿ ನಿಷ್ಠುರವಾದ ಮಾತಿನ ನೀಲ ಕಣ್ಣಿನ ಬ್ಲಾಂಡ್ ಕೂದಲಿನ ಹೆಂಗಸು. ಅವಲ ಸುಕ್ಕು ಬಿದ್ದ ಮುಖದಲ್ಲಿ ದೇಸಾಯಿಗಿಂತ ಹೆಚ್ಚು ವಯಸ್ಸು ಕಾಣುತ್ತಿತ್ತು. ಮನೆಯಲ್ಲಿ ಐದು ಜನ ಭಾರತೀಯ ವಿದ್ಯಾರ್ಥಿಗಳನ್ನು ಬೆಡ್ ಆಂಡ್ ಬ್ರೇಕ್‌ಫಾಸ್ಟಿಗೆ ಇಟ್ಟುಕೊಂಡಿದ್ದ ಅವಳು ಭಾರತೀಯ ವಿದ್ಯಾರ್ಥಿಗಳ dirty habits ಬಗ್ಗೆ ಹೇಳಿದಳು; ಇಂಡಿಯಾ God ridden country ಎಂದಳು. ತಾಯಿಗೂ ಮಗಳೀಗೂ ವಾಗ್ವಾದವಾಯಿತು. ತಂದೆ ಸುಮ್ಮನೆ ಕೂತಿದ್ದರು. ಇದು ಪರೋಕ್ಷವಾಗಿ ಗಂಡನ ಬಗ್ಗೆ ಅತೃಪ್ತಿಯನ್ನು ವ್ಯಕ್ತಪಡಿಸುವ ರೀತಿಯೆಂದು ತಿಳಿದ ಜಗನ್ನಾಥ ಸುಮ್ಮನೇ ಕೂತ. ಭಾರತದ ದಾರಿದ್‌ರ್ಯಕ್ಕೆ ಬ್ರಿಟಿಷರೇ ಕಾರಣವೆಂದು ಮಾರ್ಗರೆಟ್ ವಾದಿಸಿದಳು. ಬ್ರಿಟಿಷರಿಲ್ಲದಿದ್ದರೆ ಭಾರತೀಯರಲ್ಲಿ ಇಷ್ಟೂ ವೈಜ್ಞಾನಿಕ ದೃಷ್ಟಿಯಿರುತ್ತಿರಲಿಲ್ಲೆಂದೂ, ಇಂಗ್ಲಿಷ್ ಮನೆಗಳಲ್ಲಿ ಇಂಡಿಯನ್ ಕರಿ ತಯಾರಿಸಿ ಎಲ್ಲ ಕಡೆಯೂ ಮಸಾಲೆ ವಾಸನೆಯನ್ನು ಭಾರತೀಯರು ಹರಡುತ್ತಾರೆಂದೂ, ಕರ್ಟನ್‌ಗಳನ್ನು ಸದಾ ಹಾಕಿಯೇ ಇರುತ್ತಾರೆಂದೂ ಅಸಂಬದ್ಧವಾಗಿ ತಾಯಿ ಮಾತಾಡಿದರು. ಆಮೇಲೆ ಕೆಲಸವಿದೆಯೆಂದು ಒಳಗೆ ಹೋದರು. ತಾಯಿಯ ಜೊತೆ ಅಡಿಗೆ ಮನೆಯಲ್ಲಿ ಪ್ರಾಯಶಃ ಕಹಿಯಾದ ಮಾತಾಡಿ ರಚ್ಚು ತೀರಿಸಿಕೊಳ್ಳಲೆಂದು ಮಾರ್ಗರೆಟ್ಟೂ ಹೋದಳು. ದೇಸಾಯಿ ಎದ್ದು ನಿಂತು ನಿಟ್ಟುಸಿರುಬಿಟ್ಟು, I

am very unhappy ಎಂದರು. ಬೇಕಾದರೆ ನನ್ನ ಮಗಳನ್ನು ಕೇಳು, ಹೇಳುತ್ತಾಳೆ ಎಂದರು. ತನ್ನ ಸಹಾನುಭೂತಿಯನ್ನು ದೇಸಾಯಿ ಬೇಡುವ ಕ್ರಮ ನೋಡಿ ಜಗನ್ನಾಥನಿಗೆ ಮುಜುಗರವಾಯಿತು. 'ಹೆಚ್ಚುದಿನ ಇಲ್ಲಿರಬೇಡ. ಇಂಡಿಯಾಕ್ಕೆ ಹೋಗು. ನನ್ನ area ಬಿಟ್ಟು ಹೊರಗೆ ಹೋದರೆ ನಾನು ಯಾರು ? ಡಾಕ್ಟರೆಂದು ಯಾರು ಗುರುತಿಸುತ್ತಾರೆ ? ಪ್ರಾಯಶಃ ಒಬ್ಬ ಇಂಡಿಯನ್ ಕಂಡಕ್ಟರ್‌ಎಂದುಕೊಳ್ಳುತ್ತಾರೆ' ಎಂದು ಗೊಣಗುತ್ತ ರೂಮಿನಲ್ಲಿ ಸುತ್ತಾಡಿದರು. ಹೊರಗೆ ಬಂದ ಮಾರ್ಗರೆಟ್ಟಿಗೂ ನೀರೊಡೆಯುವಂತಿದ್ದ ಕಣ್ಣುಗಳಲ್ಲಿ ಸಿಟ್ಟಿತ್ತು. 'ರೆಚಡ್ ಕಂಟ್ರಿ, ರೆಚಡ್ ಪೀಪಲ್' ಎಂದು ಜಗನ್ನಾಥನ ಕೈ ಹಿಡಿದು ನಡೆದಳು. ಅವಳನ್ನಲ್ಲೆ ಅಪ್ಪಿಕೊಂಡು ಸಂತೈಸಬೇಕೆನ್ನಿಸಿತು. ಬಸ್ ಹಿಡಿದು ನಡೆದಳು. ಬಸ್ ಹಿಡಿದು ಅವಳ ಫ್ಲ್ಯಾಟಿಗೆ ಬರುವ ತನಕ ಇಬ್ಬರೂ ಮಾತಾಡಲಿಲ್ಲ. ಸಂಜೆಯಾಗಿತ್ತು. ಬಾಗಿಲು ಹಾಕಿದ್ದ ಜಗನ್ನಾಥ ಮಾರ್ಗರೆಟ್ಟನ್ನು ತಬ್ಬಿ ಹಿಡಿದುಕೊಂಡು ಮುತ್ತಿಟ್ಟ. ಅವಳ ಕಣ್ಣುಗಳಲ್ಲಿ ನೀರಾಡಿ ಹರಿಯಿತು. ಎದೆಯ ಮೇಲೆ ತಲೆಯಿಟ್ಟು ಬಿಕ್ಕಿದಳು. ನಾನು ಈ ರಾತ್ರೆ ಇಲ್ಲೆ ಇರಲೆ ಎಂದ. ಅವಳು ಒಪ್ಪಿಗೆಯಲ್ಲಿ ತಲೆಯಾಡಿಸಿದಳು.

ಮಾರ್ಗರೆಟ್ ಅತ್ಯಂತ ಏಕಾಗ್ರತೆಯಿಂದ ಜಗನ್ನಾಥನನ್ನು ಅವತ್ತು ರಾತ್ರೆ ಪ್ರೀತಿಸಿದ್ದಳು. ಅವಳ ದುಃಖದ ಬಾಲ್ಯ, ಅವಳ ಕೊರತೆ, ಅವಳ ಕಾರ, ಅವಳ ಮೈಸಂದಿಗಳಲ್ಲಿ ಅಡಗಿದ್ದ ಸಂತೋಷ – ಎಲ್ಲವನ್ನೂ ಜಗನ್ನಾಥ ಸ್ವೀಕರಿಸಿದ. ತನ್ನ ತೋಳುಗಳಲ್ಲಿ ನಿದ್ದೆ ಹೋದ ಮಾರ್ಗರೆಟ್ಟಿನ ಬೆಚ್ಚಗಿನ ಬೆತ್ತಲೆ ದೇಹವನ್ನು ತಡವುತ್ತ ಗಡಿಯಾರ ನೋಡಿದ. ಎರಡು ಗಂಟೆಯಾಗಿತ್ತು. ಬೆಳಿಗ್ಗೆ ಬೇಗ ಎದ್ದು ಟೀ ಮಾಡಿ ಮಾರ್ಗರೆಟ್ ಎಬ್ಬಿಸಿದಳು. ಲ್ಯಾಂಡ್ ಲೇಡಿಗೆ ತಿಳಿಯದಂತೆ ನೀನು ಇಲ್ಲಿಂದ ಜಾರಬೇಕೆಂದಳು. ಡ್ರೆಸಿಂಗ್ ಗೌನ್ ಹಾಕಿದ್ದ ಮಾರ್ಗರೆಟ್ಟನ್ನು ಎರಡು ಕೈಗಳಲ್ಲೂ ಎತ್ತಿ ಮುದ್ದಿಟ್ಟ. ಗಿರಗಿರನೆ ಸುತ್ತಿಸಿದ. 'ನನಗೆ ಸ್ಕೂಲಿಗೆ ಹೊತ್ತಾಗುತ್ತೆ. ನೀನಿನ್ನು ಹೊರಡು' ಎಂದು ಅವಳು ನಕ್ಕಳು. ಹೇಗೆ ತುಂಟ ಹುಡುಗಿಯಂತೆ ಪಕಪಕನೆ ನಕ್ಕಳು.

* * *

ಮಾರ್ಗರೆಟ್ಟಿನ ಅಂತರಂಗದಲ್ಲಿ ಬೇರೂರಿ ಅರಳಿದ. 'ಮದುವೆ ಮಾಡಿಕೊಳ್ಳೋಣ' ಎಂದರೆ. ನನಗೆ ಮದುವೆಯಲ್ಲಿ ನಂಬಿಕೆಯಿಲ್ಲವೆಂದಳು. 'ನೋಡು ನನ್ನ ತಂದೆಯನ್ನ ತಾಯಿ ಹೇಗೆ ಮಾಡಿಟ್ಟಿದಾಳೆ. ತಂದೆಗೆ dignity ಇಲ್ಲ' ಎಂದಳು. ಜಗನ್ನಾಥನಿಗೂ ನಿಜವಾಗಿ ಮದುವೆ ಬೇಕಿರಲಿಲ್ಲ. ಮಾರ್ಗರೆಟ್ಟನ್ನು ಕಳೆದುಕೊಂಡುಬಿಡಬಹುದೆಂಬ ಭಯ ಅವನಿಂದ ಮದುವೆಯ ವಿಷಯ ಮಾತಾಡಿಸಿತ್ತು. ತಾನು ಒಂದಲ್ಲ ಒಂದು ದಿನ ಭಾರತೀಪುರಕ್ಕೆ ಹೋಗಲೇಬೇಕೆಂದು, ಹಾಗೆ ಮಾತ್ರ ನಿಜವಾಗಬೇಕೆಂದು ಅವನಿಗೆ ಅಸ್ಪಷ್ಟವಾಗಿ ಅನ್ನಿಸಿತ್ತು. ಭಾರತೀಪುರದಲ್ಲಿ ಮಾರ್ಗರೆಟ್ ಜೊತೆ ಇರಲಾರೆ. ಅಬ್ಸೆಂಟೀ ಲ್ಯಾಂಡ್‌ಲಾರ್ಡಾಗಿ ಬೆಂಗಳೂರಲ್ಲಿ ಮನೆ ಮಾಡಿಕೊಂಡಿರಬೇಕಾಗುತ್ತೆ. ಇಂಗ್ಲಿಷ್ ಭಾಷೆಯಲ್ಲಿ ರ್ಯಾಡಿಕಲ್ ಮಾತಾಡುತ್ತ, ಪಾರ್ಟಿಗಳನ್ನು ಕೊಡುತ್ತ, ಎಲ್ಲೋ ಕಂಟೋನ್ಮೆಂಟಲ್ಲಿ, ತಮ್ಮಂತಹ ಬೇರಿಲ್ಲದ ಇತರರ ಜೊತೆಗೆ ರವಿಶಂಕರನ ಸಂಗೀತ, ಕೊನರಕದ ಶಿಲ್ಪ, ಫೋಕ್ ಹಾಡುಗಳು – ಈ ಕೊಂಡಿಗಳಿಗೆ ಜೋತುಬಿದ್ದ ಭಾರತೀಯತೆ. ಪಾರ್ಟಿಗಳಲ್ಲಿ ಲಖನೋ ಜುಬ್ಬ ರೇಷ್ಮೆ ಸೀರೆ. ಡ್ರಾಯಿಂಗ್ ರೂಮಿನಲ್ಲಿ ದೀಪವಿಲ್ಲದ ಕಂಚಿನ ಕಾಲುದೀಪ, ನಟರಾಜ, ಕಥಕ್ಕಳಿಯ ವಿಗ್ರಹ, ನಾಜೂಕಾದ ಆಶ್ ಟ್ರೇಗಳು. ಕೂದಲು ಬೋಳಿಸಿದ ಕಂಕುಳಿನ ಬಾಬ್‌ತಲೆಯ ಸೀರೆಯುಟ್ಟ ಹೆಂಗಸರು. ಐ.ಎ.ಎಸ್. ಆಫೀಸರರ ನಾದಿನಿಯರು ಅಥವಾ ಮಿಲಿಟರಿ ಆಫೀಸರರನ್ನು ಮದುವೆಯಾಗಲು ಕಾದವರು.

ಸ್ವಲ್ಪ ತಗೊಳ್ಳಿ. ಬೇಡವೆ? ಯಾಕೆ? Are you dieting?

ಮಾರ್ಗರೆಟ್ ಆ ತರಹದವಳಲ್ಲ. ಆದರೆ ಭಾರತಕ್ಕೆ ಬಂದರೆ ಹಾಗಾಗದೆ ವಿಧಿಯಿಲ್ಲ. ಆದರೂ ಮದುವೆಯಾಗೋಣೆಂದು ಕಾಡಿಸಿದ್ದ. ಪ್ರಣಯದ ಮಗ್ನಸ್ಥಿತಿ ಕರಗುತ್ತಿದ್ದಂತೆ ಕ್ರಮೇಣ ಪ್ರೀತಿಯಲ್ಲಿ ಮೊದಲಿನ ಏಕಾಗ್ರತೆ ಉಳಿದಿರಲಿಲ್ಲ. ತೋಳಿನಲ್ಲಿದ್ದ ಮಾರ್ಗರೆಟ್ ಏನೋ ಯೋಚಿಸುತ್ತಿದ್ದಳು; ಅಥವಾ ಜಗನ್ನಾಥ ಅವಳ ಆಲಸ್ಯವನ್ನು, ತೊಳೆಯದಿದ್ದ ಕಪ್ಪುಗಳನ್ನು, ಬಿಸಾಡಿದ ಬಟ್ಟೆಗಳನ್ನು ಜರಿಯುತ್ತಿದ್ದ. ಸಿಕ್ಕಿದವರನ್ನೆಲ್ಲ ಪ್ಲೀಸ್ ಮಾಡಲು ನೀನು ಯಾಕೆ ಪ್ರಯತ್ನಿಸುತ್ತಿ ಎಂದವಳು ಹೀಯಾಳಿಸುತ್ತಿದ್ದಳು. ಹಾಗವಳು ಹೇಳಿದಾಗ ಜಗನ್ನಾಥನಿಗೆ ತುಂಬ ನೋವಾಗುತ್ತಿತ್ತು. ಯಾವಾಗಲೂ ಕ್ರೂರವಾಗಿ ಹೊಟ್ಟೆಯುರಿಯಿಂದ ವರ್ತಿಸುತ್ತಿದ್ದ ಚಂದ್ರಶೇಖರನನ್ನು ಮಾರ್ಗರೆಟ್ ಮೆಚ್ಚಿ ಮಾತಾಡಿದಾಗಲಂತೂ ತನಗೆ ತುಂಬ ಇರಿಟೇಟ್ ಆಗುತ್ತಿತ್ತು. ಆದರೆ ತಾನು ಹೆಚ್ಚು ತೀವ್ರವಾಗಿ ಅವಳನ್ನು ಸಂಭೋಗಿಸುವಂತೆ ಕೆರಳಿಸಲೆಂದು ಹೀಗೆ ಮಾರ್ಗರೆಟ್ ಚಂದ್ರಶೇಖರನನ್ನು ಉಪಯೋಗಿಸುತ್ತಿದ್ದಾಳೆಂಬುದು ಜಗನ್ನಾಥನಿಗೆ ಪತ್ತೆಯಾಯಿತು. ಆಮೇಲೆ ಬೇಕೆಂದೇ ಜಗನ್ನಾಥ ಚಂದ್ರಶೇಖರನಿಗೆ ಹೆಚ್ಚು ಪ್ರಿಯವಾಗಿ ನಡೆದುಕೊಳ್ಳಲು ಪ್ರಾರಂಭಿಸಿದ. ಅವನನ್ನು ಹೊಗಳಲು ಶುರುಮಾಡಿದ. ಮಾರ್ಗರೆಟ್ಟಿಗೆ ಸಿಟ್ಟು ಬಂತು: 'ಅವನು ಅಂದದ್ದನ್ನೆಲ್ಲ ಅನ್ನಿಸಿಕೊಳ್ಳುತ್ತೀಯಲ್ಲ? ನಿಮಗೆ ಗಂಡಸುತನ ಇಲ್ಲವೆ?' ಎಂದು ಮೂದಲಿಸಿದಳು. ತನ್ನ ಸೇವೆಯಲ್ಲಿ ಅವಳ ಅಂಗಾಂಗಗಳು ಕ್ರಮೇಣ ಲಂಪಟವಾಗುತ್ತಿರುವುದನ್ನು ಕಂಡು ರೇಗಿದ. ಅವಳಿಗೆ ತೃಪ್ತಿ ತರಿಸಿ ನಿದ್ದೆ ಬರಿಸುವ ಬರಿಯೊಂದು ಸಾಧನವಾಗಿದ್ದ; ತನ್ನಲ್ಲಿದ್ದ ಮಿಂಡತನದ ಸಾಧ್ಯತೆಗಳನ್ನೆಲ್ಲ ಅವಳು ದುಡಿಸಿಕೊಳ್ಳತೊಡಗಿದ್ದಳು. ಸುಲಭವಾಗಿ ಬಿಚ್ಚಿಕೊಳ್ಳುವ ಅವಳ ಮೈಯಲ್ಲಿದ್ದ ಆಸಕ್ತಿ ತನಗೆ ಕಡಿಮೆಯಾಯಿತು. ಅರ್ಧ ನಿದ್ರೆಯಲ್ಲಿ ಅವಳ ಕಯ ತನ್ನ ಮೈಗೆ ಮಾಡುತ್ತಿದ್ದ ಅಭ್ಯಾಸಗತ ಉಪಚಾರಗಳನ್ನು ರಗಳೆಯಾಗಿ ತಳ್ಳುತ್ತಿದ್ದ. ಜಗನ್ನಾಥನ ಉಮೇದುಗಳನ್ನು, ಮಾನಸಿಕ ತುಮುಲಗಳನ್ನು, ತೀವ್ರತೆಗಳನ್ನು ಮಾರ್ಗರೆಟ್ ಆಲಸ್ಯದಿಂದ ಕಾಣಲು ಪ್ರಾರಂಭಿಸಿದಳು.

ಭಾನುವಾರದ ಒಂದು ಪ್ರಾತಃಕಾಲ ಬಿಸಿಲಿತ್ತು. ಹಿತ್ತಲಿನ ತೋಟದಲ್ಲಿ ಸೇಬಿನ ಮರದ ಬುಡದಲ್ಲಿ ಮಲಗಿದ್ದಳು. ಮೈಗೆ ಆಲಿವ್ ಆಯಿಲ್ ಸವರಿಕೊಂಡು, ಬರಿಯೊಂದು ಚಡ್ಡಿ ಬ್ರಾಸಿಯರ್ಸ್ ಧರಿಸಿ, ಜಮಖಾನದ ಮೇಲೆ. ಜಗನ್ನಾಥನ ಶರ್ಟುಪ್ಯಾಂಟು ಹಾಕಿ ಈಸಿ ಚೇರಿನಲ್ಲಿ ನನ್ನ ಬ್ರಾಸಿಯರ್ರಿನ ಹುಕ್ ತೆಗಿ' ಎಂದಳು. ಜಗನ್ನಾಥ ಎದ್ದು ಹೋಗಿ ತೆಗೆದ. ಏನೋ ಯೋಚಿಸುತ್ತ ಕೂತಿದ್ದ. ಏನು ಈಗ ಮರೆತಿದೆ. ಬೇಸಿಗೆಯ ಬಿಸಲು ಬಲು ಹಿತವಾಗಿತ್ತು. ಭಾನುವಾರದ ಮೌನ. ಇದ್ದಕ್ಕಿದ್ದಂತೆ ಮುಖ ಅಡಿಯಾಗಿ ಮಲಗಿದ ಮಾರ್ಗರೆಟ್ ಹೇಳಿದಳು. ಅವಳ ಧ್ವನಿಯಲ್ಲಿ ಕ್ರೌರ್ಯವಿರಲಿಲ್ಲ : ಜಗನ್‍ನಿನ್ನ ನೊಬಿಲಿಟಿಗಿಂತ ಚಂದರ್‌ನ ಅಸೂಯೆಯೇ ಹೆಚ್ಚು ನಿಜ ಅನ್ನಿಸುತ್ತೆ. One can't really feel that you are there. ನಿನ್ನ ಅಪೂರ್ಣತೆಯ ಯಾತನಹೆ ನಾಟಕ ಅಂತ ಅನ್ನಿಸಬಹುದು; ಆದರೆ ಚಂದರ್ ಹೆಚ್ಚು ಸಫರ್ ಮಾಡ್ತಾನೆ. ನೋಡು ಅವನ ಕ್ರೌರ್ಯ ಇದೆಯಲ್ಲ, ಅದರಿಂದ ಅವ ನಿಜ ಆಗ್ತಾನೆ. Even his meanness... But you are ot enough of a man.

ನೆನಪಿದೆ : ಸೇಬಿನ ಗಿಡ. ಬಿಸಿಲು. ಹಸಿರು ಹುಲ್ಲು. ಬ್ರಾಸಿಯರ್ಸ್ ಕಟ್ಟಿದಷ್ಟು ಜಾಗ ಬಿಳುಚಿದ ಮಾರ್ಗರೆಟ್ಟಿನ ಬೆನ್ನು, ಮಾತಾಡಿದಳು. ಯಾವ ಭಾವನೆಯೂ ಇಲ್ಲದೆ. ನನ್ನ ಮುಖ ನೋಡಲೇ ಇಲ್ಲ. ನಾನು ಸಿಗರೇಟ್ ಹಚ್ಚಿದೆ. ಆ ಘಳಿತ ನಾನು ಯಾತನೆ ಪಟ್ಟಷ್ಟು, ಎಂದೂ ಪಟ್ಟಿರಲಿಕ್ಕಿಲ್ಲ. ಹುಲ್ಲನ್ನು ನೋಡುತ್ತ ಕೂತೆ; ಬಿಸಿಲಿಗೆ ಹೊಳೆಯುತ್ತಿದ್ದ ಅವಳ

ಬ್ರಾಸಿಯರ್ರಿನ ಹುಕ್ಕನ್ನು ನೋಡುತ್ತಲೇ ಕೂತೆ; ಹೀಗೇ ನೋಡುತ್ತ ನನ್ನ ಪ್ರಾಣವನ್ನು ವಿಸರ್ಜಿಸಿಕೊಂಡು ಬಿಡಬೇಕೆನ್ನಿಸಿತು. ಆದರೆ ಮಾರ್ಗರೆಟ್ ತಲೆ ಎತ್ತಲಿಲ್ಲ. ಕೆದರಿದ ಕಪ್ಪು ಕೂದಲಿನ ಮೇಲೆ ಬೆನ್ನಿನ ಮೇಲೆ ಸೂರ್ಯನನ್ನು ಹೊದ್ದುಕೊಂಡು ಕೈಕಾಲುಗಳನ್ನು ಚೆಲ್ಲಿ ನಿರಂಬಳ ಮಲಗಿದ್ದಳು. ಅವಳ ಪಕ್ಕದಲ್ಲಿ ಕಯಯೂರಿ ಕೂತ ನನಗೆ ಅವಳು ಈ ಸ್ಥಿತಿಯಲ್ಲಿ ನನ್ನನ್ನು ನೋಡುವುದು ಬೇಡವೆನ್ನಿಸಿತು. ಎಷ್ಟೋ ಹೊತ್ತಾದ ಮೇಲೆ ಅವಳು ತಲೆ ಎತ್ತಿದಳು. ನನ್ನನ್ನು ನೋಡಿದಳು, ನನ್ನ ಕಣ್ಣಲ್ಲಾಗ ನೀರಿತ್ತೆ? ತುಟಿ ಬಾಯಿ ಗಂಟಲು ಒಣಗಿದ್ದುವು. ಅವಳು ಎದ್ದು ಬಂದಳು. ಮಾತಾಡದೆ ನನ್ನನ್ನು ಅಪ್ಪಿದಳು. ತಬ್ಬಿ ಹೊರಳಿದಳು. ನಾನು ಬೇಕೆನ್ನಲಿಲ್ಲ, ಬೇಡವೆನ್ನಲಿಲ್ಲ. ಮುತ್ತಿಟ್ಟು ನನ್ನ ತುಟಿಗಳನ್ನು ಒದ್ದೆ ಮಾಡಿದಳು; ನಾನು ಮೈಯೊಳಗೆ ಒಣಗಿ ಹೋಗಿದ್ದೆ. ಅಮುಗಿಯನ್ನು ಬಿಚ್ಚಿ ಕತ್ತಿನ ಮೇಲೆ ಎದೆಯ ಮೇಲೆ ಮುತ್ತಿಟ್ಟಳು. ನನ್ನ ಕಣ್ಣುಗಳು ತೆರೆದೇ ಇದ್ದವು, ಮುತ್ತಿಡುತ್ತ ಮುಚ್ಚುವಂತೆ ಒತ್ತಾಯ ಮಾಡಿದಳು. ಮಾತುಗಳೆಲ್ಲ ಇಂಗಿದ್ದುವು. ಹೀಗೇ ಸೂರ್ಯ, ಹುಲ್ಲು, ಹೆಣ್ಣಿನ ಮೈಗಳಲ್ಲಿ ಏನನ್ನೂ ತಳ್ಳದೇ ಏನನ್ನೂ ಬೇಡದೆ ಬಹಳ ಹೊತ್ತು ಇದ್ದೆ.

ಮಾರನೆ ದಿನ ಪ್ರೊಫೆಸರ್ ಹತ್ತಿರ ಹೋಗಿ, 'ಹತ್ತು ಪುಟಗಳಿಗಿಂತ ಹೆಚ್ಚು ನಾನು ಫಾರ್‌ಸ್ಟರ್‌ಮೇಲೆ ಹೇಳುವಂಥದ್ದು ಇಲ್ಲ. ನನ್ನದೊಂದು ಲೇಖನ Essays in criticism ನಲ್ಲಿ ಅಚ್ಚಾಗ್ತಾ ಇದೆ. ಅಷ್ಟೇ ಸಾಕು. ಡಿಗ್ರಿ ಬೇಡ' ಎಂದೆ. ಅವರು ನನ್ನನ್ನು ಕೂರಿಸಿದರು. 'ನೀನು ಹೀಗೆ ಭಾವಿಸುವುದು ಅನವಶ್ಯಕ, ನನ್ನ ವಿದ್ಯಾರ್ಥಿಗಳಲ್ಲಿ ನೀನು ಒಬ್ಬ ಪ್ರತಿಭಾಶಾಲಿ' ಎಂದರು. ನಾನು 'ಥ್ಯಾಂಕ್ಸ್' ಎಂದು ಹೊರಗೆ ಬಂದೆ. ಒಂದು ವಾರದೊಳಗೆ ಗಂಟು ಮುಟೆ ಕಟ್ಟಿ ಸೀದ ಭಾರತೀಪುರಕ್ಕೆ ಹೊರಟೆ.

* * *

ಎರಡು ಗಂಟೆಯಾಗಿತ್ತು. ಹೊರಗೆ ನಿಶ್ಯಬ್ದ. ಜಗನ್ನಾಥ ಮಾರ್ಗರೆಟ್ಟಿಗೆ ಬರೆಯುತ್ತಿದ್ದ ಕಾಗದವನ್ನು ಹರಿದುಹಾಕಿದ. ಇನ್ನಷ್ಟು ಗಟ್ಟಿಯಾದ ಮೇಲೆ ಬರೆಯುವುದು. ನಾನು ಗಟ್ಟಿಯಾಗಲು ಪಶುಪಕ್ಷಿಗಳಂತೆ ಬದುಕುವ ಹೊಲೆಯರು ಒಂದೇ ಒಂದು ಹೆಜ್ಜೆ ಒಳಗಿಡುವ ಧೈರ್ಯ ಮಾಡಬೇಕು. ಅವರ ಬಂಡಾಯದ ಮೂಲಕ ಮಾತ್ರ ನನ್ನ ಸಫಲತೆ. ಅವರ ಮನಸ್ಸಿನ ಜೊತೆ ಗುದ್ದಾಡಬೇಕು; ಜೊತೆಗೇ ಮಂಜುನಾಥನ ಜೊತೆ ಗುದ್ದಾಡಬೇಕು. ಈ ಮುಲಕ ಮಾತ್ರ ನನ್ನ ವ್ಯಕ್ತಿತ್ವಕ್ಕೆ ನಿಶ್ಚಿತ ರೂಪ ಬರುತ್ತದೆ. ಜಿಡ್ಡು ಕರಗುತ್ತದೆ. ಇಲ್ಲಿ ಹೀಗೆ ಸೃಷ್ಟಿಯನ್ನು ಸಾಧ್ಯ ಮಾಡಿಕೊಳ್ಳುತ್ತೇನೆ, ಮತ್ತೆ ನಿನಗೆ ಬರೆಯುತ್ತೇನೆ.

ದೀಪವನ್ನು ಆರಿಸಿ ಶಾಲು ಹೊದ್ದು ಮಲಗಿದ. ಚಿಕ್ಕ ಹಾಸಿಗೆಯಡಿಯಲ್ಲಿ ಅಡಗಿಸಿಟ್ಟ ಮಂಜುನಾಥ ಭಂಟ ಭೂತರಾಯನ ತಾಯಿತವನ್ನು ನೆನೆದು ನಕ್ಕು. ಚಳಿಯೆಂದು ಮೇಲೊಂದು ರಗ್ಗು ಹೊದ್ದ. ನಿದ್ದೆ ಬರಲಿಲ್ಲ. ಮತ್ತೆ ಯಾವಾಗ ನಿದ್ರೆ ಹತ್ತಿತೊ. ಬಹಳ ಕೆಟ್ಟ ಕನಸು ಬಿತ್ತು. ಭಾಗ್ಯಮ್ಮ ತಲೆಗೆದರಿ ಸಿಂಗಾರ ಹಿಡಿದು ನಿಂತಿದ್ದಾರೆ. ರಂಗಣ್ಣನಿಗೆ ಹೊಡೆಯುತ್ತಿದ್ದಾರೆ. ರಂಗಣ್ಣ ವಿಲವಿಲ ಒದ್ದಾಡುತ್ತಾನೆ. ಭಾಗ್ಯಮ್ಮ ಹೊಡೆಯುವುದನ್ನು ನಿಲ್ಲಿಸುವುದೇ ಇಲ್ಲ. ಶ್ರೀಪತಿರಾರು ನಿರ್ವಿಣ್ಣರಾಗಿ ಗರಬಡಿದವರಂತೆ ಕೂತಿದ್ದಾರೆ. ಭಾಗ್ಯಮ್ಮ ಚಚ್ಚುತ್ತ ಚಚ್ಚುತ್ತ ರಂಗಣ್ಣನಿಗೆ ಧ್ಯಾಸ ತಪ್ಪುತ್ತದೆ. ಆ ಮೇಲೆ ಅವಲಕ್ಕಿ ಕುಟ್ಟುವವರಂತೆ ನಿರ್ವಿಕಾರದಿಂದ ಭಾಗ್ಯಮ್ಮ ರಂಗಣ್ಣನನ್ನು ಚಚ್ಚುತ್ತ ಕೂರುತ್ತಾರೆ. ಹುಡುಗನಿಗೆ ಮೂಗಿಂದ ಬಾಯಿಯಿಂದ ರಕ್ತ ಬರುತ್ತದೆ. ಹಿಂಡಿಟ್ಟ ಬಟ್ಟೆಯನ್ನು ಎತ್ತುವಂತೆ ಭಾಗ್ಯಮ್ಮ ರಂಗಣ್ಣನನ್ನು ಎತ್ತಲು ಹೋಗುತ್ತಾರೆ. ರಂಗಣ್ಣನ ಕತ್ತು

ಮುರಿದುಹೋಗಿದೆ. ಇದ್ದಕ್ಕಿದ್ದಂತೆ ಭಾಗ್ಯಮ್ಮ ಇವಕ್ಕೆಲ್ಲ ನೀವೇ ಕಾರಣವೆಂದು ಶ್ರೀಪತಿರಾಯರನ್ನು ಬಯ್ಯುತ್ತ ಅಳುತ್ತಾರೆ. ಇದನ್ನೆಲ್ಲ ನೋಡುತ್ತ ನಿಂತಿರುವ ತನ್ನ ಕೈಗಳಲ್ಲಿ ಸಿಂಗಾರವಿದೆ ಎಂದು ಆಶ್ಚರ್ಯವಾಗುತ್ತದೆ.

ಜಗನ್ನಾಥನಿಗೆ ಎಚ್ಚರವಾಯಿತು. ಮೈ ಬೆವತಿತ್ತು.

ಇಂಗ್ಲೆಂಡಿನಿಂದ ಜಗನ್ನಾಥ ಭಾರತೀಪುರಕ್ಕೆ ಹಿಂದಕ್ಕೆ ಬಂದದ್ದು ಸುಮಾರು ಆರು ತಿಂಗಳು ಕೆಳಗೆ. ತನ್ನನ್ನು ಶಿವಮೊಗ್ಗ ರೈಲ್ವೆ ಸ್ಟೇಷನ್ನಿನಿಂದ ಕರೆದು ತರಲು ಚಿಕ್ಕಿ ಕಾರು ಕಳಿಸಿದ್ದರು. ಡ್ರೈವರ್ ಬುಡನ್ ಬಹಳ ಸಡಗರದಿಂದ ತನ್ನ ಬ್ಯಾಗುಗಳನ್ನೆತ್ತಿ ಕಾರಿಗಿಡುತ್ತ ನೀವು ಇಂಗ್ಲೆಂಡಿನಿಂದ ಹೊಸ ಕಾರು ತರ್ತೀರಂತ ತಿಳ್ದಿದ್ದೆ ಸಾರ್ ಎಂದು ಬರಿಗೈಯಲ್ಲಿ ಬಂದದ್ದಕ್ಕೆ ದುಃಖಪಟ್ಟಿದ್ದ. ನಿಮ್ಮ ತಾಯಿ ತೀರಿದ ಮೇಲೆ ಈ ಕಾರು ಶೆಡ್ಡಿಂದ ಹೊರಗೆ ಬರೋದೇ ಇಲ್ಲ ಸಾರ್, ಚಿಕ್ಕಮ್ಮ ಸದಾ ಮನೇಲೇ ಇರ್ತಾರೆ ಸಾರ್ ಎಂದು ಮನೆಯ ವಿಷಯವನ್ನೆಲ್ಲ ದಾರಿಯುದ್ದಕ್ಕೂ ಸಾದರಪಡಿಸಿದ್ದ. ಭಾರತೀಪುರವನ್ನು ಪ್ರವೇಶ ಮಾಡುವಲ್ಲಿ ಮಾವಿನ ತೋರಣ ಕಟ್ಟಿತ್ತು. ದೇವಸ್ಥಾನದ ಮುಖ್ಯ ಅರ್ಚಕರರಾದ ಸೀತಾರಾಮಯ್ಯ, ಊರಿನ ಶ್ರೀಮಂತ ವ್ಯಾಪಾರಿಗಳಾದ ಪ್ರಭುಗಳು, ಎಂ.ಎಲ್.ಎ. ಗುರಪ್ಪ ಗೌಡರು, ಶ್ರೀಪತಿರಾಯರು, ಮನೆಯ ಶಾನುಭೋಗ ವಿಶ್ವನಾಥಶಾಸ್ತ್ರೀ, ಬಿಳಿಯಂಗಿ ಖಾಕಿಚಡ್ಡಿ ಹಾಕಿದ ಊರಿನ ಹೈಸ್ಕೂಲ್ ಹುಡುಗರು, ದೊಗಳೆ ಪ್ಯಾಂಟ್ ಅಂಗಾರ ಅಕ್ಷತೆ ತೊಟ್ಟ ಮುಖ್ಯೋಪಾಧ್ಯಾಯರು-ಹೀಗೇ ಎಷ್ಟೋ ಜನ ತೋರಣದ ಬುಡದಲ್ಲಿ ತನ್ನನ್ನು ಸ್ವಾಗತಿಸಲು ಕಾದು ನಿಂತಿದ್ದು ನೋಡಿ ತುಂಬ ಮುಜುಗರವಾಗಿತ್ತು. ಜಗನ್ನಾಥನ ಕಣ್ಣುಗಳು ಎಲ್ಲೋ ಹಿಂದೆ ನಿಂತಿದ್ದ ಶ್ರೀಪತಿರಾಯರನ್ನು ಹುಡುಕುತ್ತಿರುವಂತೆಯೇ ತಲೆಯ ಮೇಲೆ ಮಂತ್ರಾಕ್ಷತೆ ಬಿತ್ತು. ಹಣೆಯ ಮೇಲೆ ಕುಂಕುಮ ಬಂತು. ಸೀತಾರಾಮಯ್ಯನವರ ಬಾಯಿಯಿಂದ ಆಶೀರ್ವಚನ ಮಂತ್ರ ಧಾರಾಕಾರವಾಗಿ ಸುರಿಯಿತು. ಭೂತರಾಯನ ಪ್ರಸಾದ ಸಿಂಗಾರವನ್ನು ಸೀತಾರಾಮಯ್ಯನವರೇ ಇರಬೇಕು ಕೈಯಲ್ಲಿ ಇಟ್ಟಿದ್ದರು. ಹೀಗೆ ಎರಗಿದ ಮಂಜುನಾಥನಿಂದ ಚೇತರಿಸಿಕೊಳ್ಳುವುದರೊಳಗೆ ಗುರಪ್ಪಗೌಡರು ಕೈಯಲ್ಲಿ ಲಿಂಬೆಹಣ್ಣು ಕೊಟ್ಟು ಹಾರ ಹಾಕಿದ್ದರು: ಕೈಮುಗಿದು ಊರಿನ ಸೌಭಾಗ್ಯ ಮಂಜುನಾಥನ ಕೃಪೆ ಇತ್ಯಾದಿ ಪುಟ್ಟ ಭಾಷಣ ಬಿಗಿದಿದ್ದರು. ಹೀಗೆ ಮೊದಲೇ ನಿಗದಿಯಾಗಿದ್ದ ತನ್ನ ಸ್ಥಾನ, ಮಾನ, ಕರ್ತವ್ಯಗಳ ಲೋಕದಲ್ಲಿ ನೀರಿಗೆ ಬಿದ್ದ ಕಡಲೆಯಂತೆ ತಾನು ಉಬ್ಬಿಕೊಳ್ಳಬಹುದಾದ ಸಾಧ್ಯತೆ ಕಂಡು ಜಗನ್ನಾಥನಿಗೆ ಗಾಬರಿಯಾಗಿತ್ತು. ಪ್ರಾಯಶಃ ಈ ಜನರ ಮನಸ್ಸಿನಲ್ಲಿ ನಿಜವಾಗಿ ತೊಡಗಬೇಕೆಂದರೆ ಮಂಜುನಾಥನನ್ನು ಮೊದಲು ತಿರಸ್ಕರಿಸಬೇಕು, ಅಂದರೆ ಅವನನ್ನು ನಂಬುವ ಜಾಗದಲ್ಲಿ ಇವರನ್ನು ನೋಯಿಸಬೇಕು ಎಂದು ಅಸ್ಪಷ್ಟವಾಗಿ ಜಗನ್ನಾಥನಿಗೆ ತಲೆಯ ಮೇಲೆ ಮಂತ್ರಾಕ್ಷತೆ ಅನಾಮತ್ತಾಗಿ ಬಿದ್ದ ಮರುಕ್ಷಣ ಅನ್ನಿಸಿತು.

ಶ್ರೀಪತಿರಾಯರು ಬಾಯಲ್ಲಿ ಕವಳ ತುಂಬಿಕೊಂಡು, ಪಂಚೆಯ ಅಂಚನ್ನು ಕೈಯಲ್ಲಿ ಹಿಡಿದು ಹಿಂದುಗಡೆಯೆಲ್ಲೋ ಮುಗುಳು ನಗುತ್ತ ನಿಂತಿದ್ದರು. ಅವರ ನಗುವಿನ ಅರ್ಥ ಜಗನ್ನಾಥನಿಗೆ ಆಗಿತ್ತು. ನೀನು ಪ್ರಧಾನ ಧರ್ಮದರ್ಶಿಯಾದ್ದರಿಂದ ನಿನ್ನ ನಿರೀಶ್ವರವಾದವನ್ನು ನುಂಗಿಕೊಂಡು ಬದುಕು, ಇಗೋ ನಾನು ಬದುಕುತ್ತಿಲ್ಲವೇ ಹಾಗಿ, ಅವರವರ ನಂಬಿಕೆ ಅವರವರಿಗೇಂತ ತಿಳಿದು- ಎನ್ನುವ ವಿಚಾರವನ್ನು ಅವರ ಪೊದೆ ಹುಬ್ಬಿನ ಕೆಳಗಿನ ಕಣ್ಣುಗಳು ಸೂಚಿಸುವಂತೆ ನಗುತ್ತಿದ್ದವು. ಬಾಯಲ್ಲಿದ್ದ ಕವಳವನ್ನುಗಿದು ಕೈಯೊಡ್ಡಿ ಬಂದರು; ಅಪ್ಪಿಕೊಂಡು ಬೆನ್ನು ತಟ್ಟಿದರು. ಗುರುಪ್ಪಗೌಡರ ಜೊತೆ, ಆಯಾಸವಾಗಿರಬೇಕಲ್ಲವೆ ಇತ್ಯಾದಿ ಲೋಕಾಭಿರಾಮ ಮಾತಿನಲ್ಲಿ ದನಿಗೂಡಿಸಿದರು. ಮನುಷ್ಯ ಹೇಗೆ ವಯಸ್ಸಾಗುತ್ತ

ನಿರ್ಬಲವಾಗಿ ಜೀವನವನ್ನು ಸಹ್ಯಮಾಡಿಕೊಳ್ಳಲೆಂದು ಲಿಬರಲ್ ಹ್ಯಾಪತನ ಹೇಗೆ ಒಂದಲ್ಲ ಒಂದು ದಿನ ಕಟ್ಟಿಟ್ಟದ್ದು ಎಂದು ಜಗನ್ನಾಥನಿಗೆ ಬಹಳ ಹೆದರಿಕೆಯಾಗಿತ್ತು. ಈ ಮುಗುಳು ನಗುವಿನ ಸೋಲಿನ ಒಪ್ಪಿಗೆಯ ಆಚೆ ಇನ್ನೂ ಯಾವುದಾದರೂ ಜರೂರು ಈ ವ್ಯಕ್ತಿಯಲ್ಲಿ ಉಳಿದಿದೆಯೇ ಎಂದು ಜಗನ್ನಾಥ ಅವತ್ತಿನಿಂದ ಇವತ್ತಿನವರೆಗೂ ರಾಯರಲ್ಲಿ ಹುಡುಕುತ್ತಲೇ ಇದ್ದಾನೆ. ನಲವತ್ತೆರಡರ ಚಳುವಳಿಯಲ್ಲಿ ಒಬ್ಬಂಟಿಯಾಗಿ ಕಛೇರಿ ಎದುರು ಉಪವಾಸ ಮಲಗಿ, ಅದಕ್ಕೂ ಹಿಂದೆ ಗಾಂಧಿಯ ಕರೆಗೆ ಜವಳಿ ಅಂಗಡಿಗೆ ಬೆಂಕಿಯಿಕ್ಕಿ- ಈಗ ಮುಗುಳು ನಗುವಿನ ಸೌಮ್ಯನಾಗ ಬೇಕಾಯಿತೇ ಈ ಪೊದೆ ಹುಬ್ಬಿನವ ಎಂದು ಭಾರತದಲ್ಲಿ ನಮ್ಮನ್ನು ಹಣ್ಣು ಮಾಡುವ ಪರಿಸರದ ಬಗ್ಗೆ ಜಗನ್ನಾಥ ತುಂಬ ಯೋಚಿಸಿದ್ದ.

ಎಲ್ಲರನ್ನೂ ಬಿಟ್ಟು ರಾಯರ ಜೊತೆ ಮನೆಗೆ ಬಂದಿದ್ದ. ಚಿಕ್ಕ ಸಕೇಶಿಯಾದ್ದರಿಂದ ಮುಖ ತೋರಿಸಿರಲಿಲ್ಲ. ಯಾರ ಮನೆಯದೋ ಹುಡುಗಿಯರು ಮನೆಯ ಹೊಸಿಲು ದಾಟುವ ಮುಂಚೆ ಓಕುಳಿ ಸುಳಿದು ಚೆಲ್ಲಿದ್ದರು. ನಡುಮನೆಯಲ್ಲಿ ಹಓಗಿ ರಾಯರ ಹತ್ತಿರ ಮಾತಾಡುತ್ತ ಕೂತ. ಅವನಿಗೆ ಗೊತ್ತು: ಮನೆ ದೇವರಿಗೆ ತಾನು ಮೊದಲು ನಮಸ್ಕಾರ ಮಾಡಿ ಆಮೇಲೆ ಚಿಕ್ಕಿಯಿಂದ ತಂಪಾದ ಹಾಲನ್ನು ಪಡೆದು ಕುಡಿಯಬೇಕೆಂದು ಚಿಕ್ಕಿ ಕಾದಿದ್ದಾರೆ. ಈ ನರಸಿಂಹ ಶಾಲಿಗ್ರಾಮ ಸಾವಿರ ವರ್ಷದಿಂದ ಮನೆಯಲ್ಲಿ ಪೂಜೆ ಮಾಡಿಸಿಕೊಂಡಿದ್ದೆಂದು ಪ್ರತೀತಿ. ಹಣೆಯ ಮೇಲೆ ಇಷ್ಟಗಲ್ಲ ಕುಂಕುಮವಿಟ್ಟಿದ್ದ ಶಾನುಭೋಗ ಟೋಪಿಯನ್ನು ಕಂಕುಳಲ್ಲಿ ಅದುಮಿಕೊಂಡು ಒಳಗಿನಿಂದ ಹೊರಗೆ ಹೊರಗಿನಿಂದ ಒಳಗೆ ಸುತ್ತಾಡಿದ್ದ. ದೇವರಿಗೆ ನಮಸ್ಕರಿಸಿ ಬಾ ಎಂದು ಹೇಳಲು ಯಾರಿಗೂ ಧೈರ್ಯವಿಲ್ಲ. ಜಗನ್ನಾತ 'ಚಿಕ್ಕೀ' ಎಂದು ಕರೆದ. ಚಿಕ್ಕಿ ನಡುಮನೆಗೆ ಬಂದು ಹಾಲು ಕೊಟ್ಟಿದ್ದರು. ಪ್ರೀತಿಯಿಂದ ಅವರನ್ನು ನೋಡಿದ. ಮಾತಿನ ಅವಶ್ಯಕತೆಯಿರಲಿಲ್ಲ. ಆದರೆ ಅವರು ಕೇಳಿದ್ದರೆ ಹೇಳಲೇಬೇಕಾಗುತ್ತಿತ್ತು. ಕ್ಷಮಿಸಿ. ದೇವರನ್ನು ನಂಬಿದರೆ ಇಲ್ಲಿಗೆ ತೀರಾ ಒಳಗಿನವನಾಗಿ ನಿರಾಕಾರನಾಗಿ ಬಿಡುತ್ತೇನೆಂದು ನನಗೆ ಭಯ. ದೇವರ ವಿಷಯದಲ್ಲಿ ಹೊರಗುಳಿಯದೆ ನಾನು ನಿಜವಾಗಿ ಈ ಊರಿನಲ್ಲಿ ತೊಡಗಲಾರೆ. ಇಗೋ ಚಿಕ್ಕಿ ತೊಡಗುವುದಕ್ಕೆಂದು ನಾನು ಬಂದಿದ್ದೇನೆ, ನಿಜ ಆಗುವುದಕ್ಕೆ, ಗಟ್ಟಿಯಾಗುವುದಕ್ಕೆ. ಹೊಕ್ಕಾಗ ಸಿಗುವುದಕ್ಕೆ. ಆದರೆ ಮಾತಾಡದೆ ಅವರನ್ನು ಪ್ರೀತಿಯಿಂದ ನೋಡುತ್ತ ಹಾಲು ಕುಡಿದಿದ್ದ. ನೋಡಲು ಅಮ್ಮನ ಹಾಗಿ. ಆದರೆ ಕೂದಲು ಕಮ್ಮಿ. ಸ್ವಲ್ಪ ಸಣ್ಣ ಹಣೆ. ಮುಖವನ್ನು ಸ್ವಲ್ಪ ಓರೆ ಮಾಡಿ ಮಾತಾಡುವುದಂತೂ ಅಮ್ಮನಂತೆಯೇ. ಬಿಳೀ ಸೀರೆ ಬಿಳಿ ಕುಪ್ಪಸ. ತನಗಿದ್ದ ಆಸ್ತಿಯನ್ನು ಈ ಮನೆಗೇ ಸೇರಿಸಿ ಬಾಲವಿಧವೆಯಾದಾಗಿನಿಂದ ಇಲ್ಲೇ ಬೆಳೆದವಳು. ತನ್ನನ್ನು ಬೆಳಸಿದವಳು. ದೂರಕ್ಕೆ ಭಾರತೀಪುರದವರೆಲ್ಲ ಮಂಜುನಾಥನ ಒಕ್ಕಲೆಂದು ಕಂಡರೂ ಹತ್ತಿರದಿಂದ ನೋಡಿದಾಗ ಒಬ್ಬೊಬ್ಬರೂ ಪ್ರತ್ಯೇಕ. ಆದರೆ ಮಂಜುನಾಥ ಆಳುವುದು ಏನನ್ನ, ಇವರ ಅಜ್ಞಾನವನ್ನೇ, ಅಥವಾ-ಜಗನ್ನಾಥನಿಗೆ ಯೋಚಿಸುವುದು ಕಷ್ಟವಾಯಿತು.

ರಾಯರು ಊರಿನ ರಾಜಕೀಯದ ಬಗ್ಗೆ ಖುಷಿಯಾಗಿ ಮಾತಾಡಲು ಪ್ರಾರಂಭಿಸಿದರು, ರಾಜಕೀಯವೆಂದರೆ ರಾಯರಿಗೆ ಹುರಿಗಾಳು ಇದ್ದಹಾಗೆ. 'ಈ ಗುರಪ್ಪಗೌಡ ಹೇಗೆ ಗೆದ್ದದ್ದು ಅಂತಿ. ಮೊದಲು ಇವ ಜಸ್ಟೀಸ್ ಪಾರ್ಟಿ ಅಲ್ಲವೆ? ಆಮೇಲೆ ಕಾಂಗ್ರೆಸ್ ಸೇರಿದ. ಈ ಸಾರಿ ಚುನಾವಣೇಲಿ ತಟ್ಟೆ ತುಂಬ ಮಂಜುನಾಥನ ಪ್ರಸಾದ ಕುಂಕುಮವನ್ನ ತಗೊಂಡು ಹಳ್ಳಿಲಿ ಮನೆ ಮನೆಗೆ ಹೋದ. ಪ್ರಸಾದನ್ನ ಮುಟ್ಟಿಸಿ ಆಣೆ ಹಾಕಿಸಿಕೊಂಡ, ನಿಮಗೇ ಓಟುಕೊಡ್ತೀನಿ ಅಂತ. ಮೊದಲೇ ಗೌಡರ ಮಕ್ಕಳು ಅಲ್ವ? ಜೊತೆಗೇ...'

ಜಗನ್ನಾಥನಿಗೆ ಪ್ರಯಾಣದಿಂದ ಆಯಾಸವಾಗಿತ್ತು, ಸ್ನಾನಮಾಡಲೆಂದು ಎದ್ದು ನಿಂತ. ರಾಯರಿಗೆ ಹೇಳಬೇಕೆನ್ನಿಸಿತು:

ಚುನಾವಣೇ ವಿಷಯ ಬೇಡ. ಈ ಚಿಲ್ಲರೆ ರಾಜಕೀಯ ಬಿಟ್ಟುಬಿಡಿ. ಈ ಭಾರತೀಪುರದಲ್ಲಿ ಮೂಲಭೂತವಾದ ಕ್ರಿಯೆ ಸಾಧ್ಯವೇಂತ ಯೋಚಿಸೋಣ.

'ಸ್ನಾನಕ್ಕೆ ಏಳಿ' ಎಂದ. 'ಇಲ್ಲ ನನ್ನ ಸ್ನಾನವಾಗಿದೆ' ಎಂದರು ರಾಯರು. 'ಊಟಕ್ಕೆ ಇಲ್ಲೇ ಇರಿ' ಎಂದರು ಚಿಕ್ಕಿ. ರಾಯರು ತಾನು ಯಾಕೆ ಈ ಸಾರಿ ಮುನಿಸಿಪಲ್ ಚುನಾವಣೆಗೆ ನಿಲ್ಲಲಿಲ್ಲ, ನಿಂತಿದ್ದರೂ ಹಿಂದಿನಂತೆ ಸೋಲೋದು ಖಂಡಿತವಾಗಿತ್ತು ಇತ್ಯಾದಿ ಮಾತಿಗೆ ಪ್ರಾರಂಭಿಸಿದರು. ಗಾಂಧಿಯನ್ನು ಒಂದು ಕಾಲದಲ್ಲಿ  ಹಿಂಬಾಲಿಸಿದ ಈ ಮಂದಿಯ ಬಗ್ಗೆಯೇ ಜಗನ್ನಾಥನಿಗೆ ಬೇಸರವಾಯಿತು. ಆದರೆ ಇಂಗ್ಲೆಂಡಿನ ಪಬ್ಬುಗಳ ಹಿತಕರವಾದ ವಾತಾವರಣದಲ್ಲಿ ಬೆಳೆದ ಮಾರ್ಕ್ಸ್‌ವಾದದಿಂದ ರಾಯರನ್ನು ತಾನು ಅಳೆಯುವುದು ಸರಿಯಲ್ಲವೆಂದುಕೊಂಡು ಬಚ್ಚಲಿಗೆ ಹೋಗಿ ಸ್ನಾನ ಮಾಡಿದ. ಟಬ್ಬಿನಲ್ಲಿ ಮಲಗಿ ಸ್ನಾನ ಮಾಡಿ ಬಂದವನಿಗೆ ಮುಖಕ್ಕೆ ಸೋಪು ಹಚ್ಚಿಕೊಂಡು ಚೊಂಬಿಗಾಗಿ ತಡಕಾಡುವುದು, ಧಾರಾಳವಾಗಿ ಮೈಮೇಲೆ ನೀರು ಸುರಿದುಕೊಳ್ಳುವುದು ಬಹಳ ಖುಷಿಯೆನ್ನಿಸಿತು. ಈ ಹೊಳೆಯುವ ತಾಮ್ರದ ಚೊಂಬು, ಬೋಗುಣಿಯಲ್ಲಿ ನೆನೆಯಿಸಿ ಇಟ್ಟ ಮತ್ತಿಯ ಲೋಳಿ, ಮನೆಯಲ್ಲಿ ಕುಟ್ಟಿಸಿ ಪುಡಿ ಮಾಡಿದ ಸೀಗೇ ಪುಡಿ – ಮತ್ತೆ ಈ ಗಂಧದ ಸೋಪು ಬಾಲ್ಯವನ್ನು ನೆನಪಿಗೆ ತಂದವು. ಎಷ್ಟು ಒರೆಸಿಕೊಂಡರೂ ಮೈಬೆವರುತ್ತಲೇ ಇರುವಷ್ಟು ಸ್ನಾನ ಮಾಡಿ ಬಂದು ರಾಯರ ಜೊತೆ ಊಟ ಮಾಡಿದ ನನ್ನ ಬದಲಿಗೆ ಪ್ರಭುಗಳು ಈ ತನಕ ಧರ್ಮದರ್ಶಿಗಳಾಗಿರುವುದಲ್ಲವೆ, ಅವರೇ ಮುಂದುವರಿಯಲಿ ಎಂದ. ಒಳಗಿನಿಂದ ಈ ಮಾತು ಕೇಳಿಸಿಕೊಂಡ ಚಿಕ್ಕಿ ಅದು ಹೇಗಾಗುತ್ತೋ ಎಂದರು. ರಾಯರು ಅರ್ಥಪೂರ್ಣವಾಗಿ ತನ್ನನ್ನು ನೋಡಿ ನಕ್ಕರು.

ಊರಿಗೆ ಬಂದ ಮಾರನೇ ದಿನದಿಂದಲೇ ತನಗೂ ಭಾರತೀಪುರಕ್ಕೂ ನಡುವೆ ಹೊಸ ಸಂಬಂಧವನ್ನು ಸೃಷ್ಟಿಸಿಕೊಳ್ಳಲು ಪ್ರಯತ್ನಿಸಿದ್ದ. ಹೈಸ್ಕೂಲಿನ ಸಭಾಂಗಣದಲ್ಲಿ ತನ್ನನ್ನು ಸತ್ಕರಿಸಲು ಸೇರಿದ ಜನರಿಗೆ ರಸೆಲ್ಲನ ವಿಚಾರ ಕುರಿತು ಮಾತನಾಡಿದ್ದರಿಂದ ಕಿಂಚಿತ್ತೂ ಪ್ರಯೋಜನವಾಗಲಿಲ್ಲವೆನ್ನುವುದು ಜನ ತನ್ನ ಮಾತಿಗೆ ತಲೆದೂಗುತ್ತ ಮೆಚ್ಚುತ್ತಿದ್ದ ಕ್ರಮದಿಂದಲೇ ತಿಳಿದಿತ್ತು. ನಾಗರಾಜ ಶಾಸ್ತ್ರೀಗಳಂತೂ ತನ್ನ ಜ್ಞಾನವನ್ನು ಕೊಂಡಾಡಿದ್ದರು. 'ಇದೆಲ್ಲ ನಮಗೇನು ಹೊಸೆ? ಲೋಕಾಯುತ ಮಾರ್ಗದಲ್ಲಿ ಆಗಲೇ ಬಂದು ಹೋದದ್ದಲ್ಲವೆ?" ಎಂದಿದ್ದರು.

ಯಾವ ಮಾರ್ಗದಿಂದ ನಾನು ಇಲ್ಲಿ ನಿಜವಾದೇನು? ಊರು ಸೃಷ್ಟಿಶೀಲವಾದೀತು? ಕ್ರಮ ಯಾವುದು? – ಎಂದು ಜಗನ್ನಾಥ ಬಹಳ ಯೋಚಿಸಿದ. ಮೊದಲನೇ ಅಗತ್ಯ ಜನ ಹೇಗೆ ಬದುಕುತ್ತಾರೆ ಎಂದು ತಿಳಿಯುವುಉದ ಎನ್ನಿಸಿತು. ಶಿವಮೊಗ್ಗದಿಂದ ಬರುವಾಗ ದಾರಿಯಲ್ಲಿ ಅವನನ್ನು ಈ ಪ್ರಶ್ನೆ ಬಾಧಿಸಿತ್ತು. ಬ್ರಾಹಣನಾಗಿ ಶ್ರೀಮಂತನಾಗಿ ಹುಟ್ಟಿ ಬೆಳೆದ ತನಗೆ ಈ ನೆಲದ ವಿಷಯ ಹೆಚ್ಚು ತಿಳಿಯದು. ಫಲ ಕೊಡುವ ನಾಲ್ಕಾರು ಮರಗಳನ್ನು ಗುರುತಿಸಬಲ್ಲೆ; ಕೆಲವು ಹಕ್ಕಿಗಳ ಹೆಸರು ಹೇಳಬಲ್ಲೆ; ಭಾರತೀಪುರದಿಂದ ತನ್ನ ಒಕ್ಕಲುಗಳಿದ್ದ ಹಳ್ಳಿಗಳಿಗೆ ಹೋಗುವ ಒಂದೆರಡು ಒಳದಾರಿಗಳನ್ನು ನೆನಪುಮಾಡಿಕೊಳ್ಳಬಲ್ಲೆ – ಬಿಟ್ಟರೆ ಇನ್ನೇನೂ ತಿಳಿಯದು. ತಾನು ಧಣಿಯಾದ್ದರಿಂದ ಓಡಾಡುವಾಗ ಸರಿದು ನಿಲ್ಲುತ್ತಾರೆ, ನೆಲ ನೋಡುತ್ತಾರೆ, ಕಣ್ಣಿಗೆ ಬೀಳುವುದೇ ತಪ್ಪೇನೋ ಎನ್ನುವಂತೆ ನಟಿಸುತ್ತಾರೆ – ಆದರೆ ಯಾರಿಗೂ ತಾನು ನಿಜವಲ್ಲ. ತನ್ನ ಬೆನ್ನು ತಿರುಗಿದಾಕ್ಷಣವೇ ಅವರ ಮುಖಗಳಲ್ಲಿ ಬದಲಾವಣೆಯಾಗುತ್ತದೆ. ಇಷ್ಟು ದೈನ್ಯದಿಂದ ತನ್ನೆದುರು ಸುಳಿದಾಡುವ ಶೂದ್ರರು ಕಣ್ಣುಕಟ್ಟಿ ಬಿಟ್ಟರೂ ವಾಸನೆ ಸ್ಪರ್ಶಗಳಿಂದಲೇ ಭಾರತೀಪುರದ ಸುತ್ತುಮುತ್ತಲಿನ ಕಾಡುಗುಡ್ಡಗಳನ್ನೆಲ್ಲ ಓಡಾಡಿ

ಬರಬಲ್ಲರೆಂದು ಅವನಿಗೆ ಗೊತ್ತಿತ್ತು. ಅವರು ತನ್ನನ್ನು ಒಪ್ಪಿಕೊಳ್ಳಲು ಬೇಟೆಯಾಡಬೇಕು, ಕಳ್ಳು ಕುಡಿಯಬೇಕು, ಕವಳ ಹಾಕಬೇಕು, ಖದೀಮನಾಗಬೇಕು – ಆದರೆ ಈ ಬಗೆಯ ಪರಿವರ್ತನೆಗೆ ಕೊನೆಯಿಲ್ಲವೇನೋ!

ಉದಾತ್ತವಾಗಿ ನಡೆದುಕೊಂಡರೆ ತಾನು ಆಕರ್ಷಕ ವ್ಯಕ್ತಿಯಾಗುತ್ತೇನೆಂದು ಭಾವಿಸಿ ಆದರ್ಶದ ಬೆನ್ನು ಬಿದ್ದ ವಯಸ್ಸು ಕಳೆದಿತ್ತು. ಮುವ್ವತ್ತು ದಾಟಿದೆ: ಈಗ ತಾನು ಗಟ್ಟಿಯಾಗದೇ ಹೋದರೆ, ಆದರೆ ಹೇಗೆ – ಎಂದು ಮತ್ತೆ ಮತ್ತೆ ಜಗನ್ನಾಥ ಯೋಚಿಸಿದ. ಯೋಚನೆಯಿಂದ ಬಗೆಯರಿಯುವ ಪ್ರಶ್ನೆಯೇ ಅಲ್ಲ ಇದು ಎಂದು ಅವನಿಗೆ ತಿಳಿಯಿತು. ಯಾಕೆಂದರೆ ಯೋಚಿಸುವುದೆಂದರೆ ತಳವೇ ಇರದ ಕೂಪದಲ್ಲಿ ಕಂತುತ್ತಾ ಹೋದಂತೆ. ತನ್ನ ಗೊಡವೆಯಿಲ್ಲದಂತೆ ತನ್ನ ಸುತ್ತ ಜೀವನ ಮೌನವಾಗಿ ರೂಪವಾಗುತ್ತಿತ್ತು. ಮದುವೆಗೆ ಸಾಲ, ಬೇಸಾಯಕ್ಕೆ ಸಾಲ, ಮದ್ದಿಗೆ ಸಾಲ – ಆತಂಕದಲ್ಲಿ ಮಾತ್ರ ತನಗೂ ಸಾಮಾನ್ಯ ಜನರಿಗೂ ಸಂಬಂಧ. ತಾನು ನಿಜವಾಗಿ ಏನು ಎಂಬುದು ಯಾವತ್ತೂ ತಿಳಿಯಲಾರದಂತಹ ಗೌರವದ ರಕ್ಷೆ. ಮಂಜುನಾಥರ ರಕ್ಷೆ. ಇವನ ಅಂಕೆಯಲ್ಲಿರುವ ಭೂತರಾಯರ ಭಯದ ರಕ್ಷೆ. ಕೈಯಲ್ಲಿ ಸಿಂಗಾರ ಹಿಡಿದು ಥತ್ತರ ನಡುಗುತ್ತ ಮೈಮೇಲೆ ಬಂದ ಭೂತರಾಯ ಕೇಳುತ್ತಾನೆ: ಈ ಸ್ಥಳದಲ್ಲಿ ಧರ್ಮ ಸಾಂಗವಾಗಿ ನಡೆಯುತ್ತಿದೆಯಾ? ಧರ್ಮದರ್ಶಿ ಅದಕ್ಕೆ ಉತ್ತರಿಸಬೇಕು: ನಡೆಯುತ್ತಿದೆ. ಸಾಲಾಗಿ ನಿಂತ ಆರ್ತರು ಒಬ್ಬನಾದ ಮೇಲೆ ಇನ್ನೊಬ್ಬ ಎದುರು ಬಂದು ಕೈಮುಗಿದು ನಿಲ್ಲುತ್ತಾನೆ. ಕೇಳಿಕೊಳ್ಳುತ್ತಾನೆ. ಸರಿ. ಐದು ರೂಪಾಯಿ ಹಾಕ್, ಪ್ರಸಾದ ತಗೊ. ಹತ್ತು ರೂಪಾಯಿ ಹಾಕ್, ಪ್ರಸಾದ ತಗೊ. ಇಂತಹ ನ್ಯಾಯದ ಇತ್ಯರ್ಥದಲ್ಲಿ ತನ್ನಂಥವರಿಗೆ ರಕ್ಷೆ. ಈ ಜಗನ್ನಾಥನ ಬದಲು ಅವನ ಹೆಸರಿನಲ್ಲೆ ಪ್ರಭುಗಳು ಧರ್ಮದರ್ಶಿಗಳಾಗಿದ್ದರು – ಜಗನ್ನಾಥ ರಾಷ್ಟ್ರಪತಿಗಳು ಬಂದಾಗ ಧೈರ್ಯಮಾಡಿ ರಾಜೀನಾಮೆ ಕೊಟ್ಟ ಮೇಲೆ ಪ್ರಭುಗಳಿಗೇ ಆ ಪಟ್ಟ ಹೋಯಿತು. ದಾಕ್ಷಿಣ್ಯದ ಬಂಧನಗಳನ್ನೆಲ್ಲ ಮುರಿದು ಹೊರಬರುವ ತನಕ ಈ ಊರಿನಲ್ಲಿ ತನಗೊಂದು ಸ್ಪಷ್ಟ ಆಕಾರವಿರಲಿಲ್ಲ. ಮಂಜುನಾಥನೊಬ್ಬ ನಿರಾಕಾರಿ; ತಾನೊಬ್ಬ ನಿರಾಕಾರಿ – ಏತನ್ಮಧ್ಯೆ ಕಟ್ಟಿ ಹಾಕಿದ ಭೂತರಾಯನಾದರೂ ನಿಜವೆ?

ಇಂಗ್ಲೆಂಡಿನಲ್ಲಿದ್ದಾಗ ಉದ್ದ ಕೂದಲಿನ ಸ್ನೇಹಿತರ ಜೊತೆ ಆರಾಮಾಗಿ ಪಬ್ಬುಗಳಲ್ಲಿ ನಿರಾತಂಕವಾಗಿ ನಡೆಸಿದ ಚರ್ಚೆಗಳು: ಜೀವನಕ್ಕೆ ಅರ್ಥವಿಲ್ಲ. ಮನುಷ್ಯ ಮನಸ್ಸಿನಲ್ಲಿ ಮಾತ್ರ ಸ್ವತಂತ್ರ. ಯಾವ ಸಾಮಾಜಿಕ ರಾಜಕೀಯ ಬದಲಾವಣೆಯಿಂದಲೂ ಮನುಷ್ಯನ existential reality ಬದಲಾಗಲಾರದು – ಇತ್ಯಾದಿ. ಮಂಜುನಾಥನ ಕೂಪವಾದ ಭಾರತೀಪುರದಲ್ಲಿ ಈ ವಾದಗಳೆಲ್ಲ ತಮಾಷೆಯಾಗಿ ಕಂಡಿದ್ದವು. ಪ್ರತಿ ಮಧ್ಯಾಹ್ನವೂ ದೊಡ್ಡ ಘಂಟೆಯನ್ನು ಬಾರಿಸಿಕೊಳ್ಳುತ್ತ ಕಾಲ ಇಲ್ಲಿ ಸ್ಥಗಿತವಾಗಿತ್ತು, ಹುಟ್ಟಿನಿಂದ ಸಾವಿನ ತನಕ ಜೀವನ ಮೊದಲೇ ನಿಗದಿಯಾದಂತೆ ನಡೆಯುತ್ತಿತ್ತು.

ಜನರನ್ನು ತಿಳಿಯುವುದೆಂದರೇನು? ಅವರ ಜೊತೆ ತೊಡಗುವುದೆಂದರೇನು? ಆಸ್ತಿಯಿಂದಾಗಿ ಜಗನ್ನಾಥನಿಗೆ ಮೊದಲೇ ನಿಗದಿಯಾದ ಒಂದು ಸಂಬಂಧವಿತ್ತು. ಎಷ್ಟು ಮಿಸುಕಾಡಿದರೂ ಈ ಸಂಬಂಧದಲ್ಲಿ ಕಿಂಚಿತ್ತಾದರೂ ವ್ಯತ್ಯಾಸ ಮಾಡಿಕೊಳ್ಳುವುದು ಅಸಾಧ್ಯವೆಂದು ಅವನಿಗೆ ತಿಳಿಯತೊಡಗಿತು. ಭಾರತೀಪುರಕ್ಕೆ ಬಂದವನೆ ಬಿಳಿಯ ಅಂಗಿ ಅಡ್ಡ ಪಂಚೆ ಉಡಲು ಪ್ರಾರಂಭಿಸಿದ, ಸಾಹುಕಾರ್ರು ಎಷ್ಟು ಸರಳ ವ್ಯಕ್ತಿ ಎಂದು ಜನ ಹೊಗಳಿದರು. ಶಾನುಭೋಗರೇ ಸಾಹುಕಾರ್ರ ಹಾಗೆ ಕಾಣ್ತಾರೆ ಎಂದು ಆಡಿಕೊಂಡರು. ಜನರ ಮನಸ್ಸಿನಲ್ಲಿ ತನ್ನನ್ನು ನಾಟಿಸಿಕೊಳ್ಳುವುದು ಹೇಗೆ? ಏನಾದರೂ ಮಾಡಲಾರದೇ ಹೋದಲ್ಲಿ ಆತ್ಮಹತ್ಯೆ ಮಾಡಿಕೊಂಡೇನು ಎನ್ನಿಸಿತು. ಬೆಳಿಗ್ಗೆ ಏಳುವುದು; ಲೆಖ್ಖಪತ್ರ ನೋಡುವುದು; ಸಾಲ ಕೊಡುವುದು;

ಊಟ ಮಾಡುವುದು; ಅಡಿಕೆ ಧಾರಣೆ ಚರ್ಚಿಸುವುದು; ಹೊಸ ಸಸಿಗಳನ್ನು ನೆಡಿಸುವುದು – ಎಂಥ ಅರ್ಥಹೀನ ಜೀವನ. ಒಳಗೆ ಇನ್ನಷ್ಟು ಲಡ್ಡಾಗುತ್ತ ಹೋಗುತ್ತಿದ್ದೇನೆ ಎಂದು ಭಯವಾಗಿತ್ತು. ಷಂಡನಾದಷ್ಟೂ, ಅಜಾತಶತ್ರುವಾದಷ್ಟೂ, ಹಸನ್ಮುಖಿಯಾದಷ್ಟೂ, ವ್ಯವಸ್ಥೆಗೆ ಇವನಿಂದ ಯಾವ ಅಪಾಯವೂ ಇಲ್ಲವೆನಿಸಿಷ್ಟೂ – ತಾನು ಗುಣ್ಯವ್ಯಕ್ತಿಯಾಗುತ್ತಾ, ಚೂರು ಚೂರೇ ಕೊಳೆಯುತ್ತಾ, ಮಂಜುನಾಥನ ಮಹಿಮೆಗೆ ಗೊಬ್ಬರವಾಗುತ್ತಾ ಹೋಗುತ್ತೇನೆಂಬುದು ಜಗನ್ನಾಥನಿಗೆ ಸ್ಪಷ್ಟವಾಯಿತು.

ಶಾನುಭೋಗ ವಿಶ್ವನಾಥ ಶಾಸ್ತ್ರಿ ತಮ್ಮ ದೃಷ್ಟಿಯ ಉಯ್ಯಾಲೆಯಲ್ಲಿ ತನ್ನನ್ನು ಸುಖವಾಗಿ ಕೂರಿಸಿ ತೂಗುತ್ತಿದ್ದುದನ್ನು ತಾನು ಸಹಿಸಿಕೊಳ್ಳುವ ಕ್ರಮದಲ್ಲೇ ತನ್ನ ಜೀವನಕ್ರಮದ ಹೇಯತೆಯೆಲ್ಲ ಜಗನ್ನಾಥನಿಗೆ ಭಟ್ಟಿ ಇಳಿದಂತಿತ್ತು. ರೈಟರ್ ಕೃಷ್ಣಯ್ಯ ತೀರಿ ಹೋದ ಮೇಲೆ ಮನೆಯ ವೈವಾಟನ್ನು ನೋಡಿಕೊಳ್ಳಲು ವಿಶ್ವನಾಥಶಾಸ್ತ್ರಿ ಎನ್ನುವ ಶಾನುಭೋಗನೊಬ್ಬನಿದ್ದ. ಜಗನ್ನಾಥ ಇಂಗ್ಲೆಂಡಲ್ಲಿದ್ದಾಗ ಮೊದಲು ತಾಯಿಯ ಮೇಲ್ವಿಚಾರಣೆಯಲ್ಲಿ, ಅವರು ಸತ್ತ ಮೇಲೆ ಚಿಕ್ಕಿಯ ಮೇಲ್ವಿಚಾರಣೆಯಲ್ಲಿ ಈ ಶಾನುಭೋಗ ಹೆಗ್ಗಣವಾಗಿದ್ದ.

ವಿಶ್ವನಾಥ ಶಾಸ್ತ್ರಿಯ ವಾಸ ರೈಟರ್ ಕೃಷ್ಣಯ್ಯ ಇದ್ದಲ್ಲೇ. ಮನೆಯ ಉತ್ತರದ ಪಕ್ಕಕ್ಕೆ ಅಫೀಸು (ಶಾಸ್ತ್ರೀಯ ಭಾಷೆಯಲ್ಲಿ 'ಎಸ್ಟೇಟು ಆಫೀಸು'). ಅದಕ್ಕೆ ಅಂಟಿಕೊಂಡಂತೆ ಒಂದು ಮನೆ. ಆರು ಚಿಳ್ಳೆಪಿಳ್ಳೆ ಮಕ್ಕಳು, ಹೆಂಡತಿ, ವಿಧವೆಯಾದ ಅತ್ತೆ – ಇಷ್ಟು ಶಾಸ್ತ್ರೀಯ ಸಂಸಾರ. ರೈಟರ್ ಕೃಷ್ಣಯ್ಯ ತೀರುವುದರ ಮುಂಚೆಯೇ ಅವರ ಹೆಂಡತಿ ಸತ್ತದ್ದರಿಂದ, ಅವರ ಒಬ್ಬನೇ ಮಗ ಗೋಪಾಲನನ್ನು ತನ್ನ ತಾಯಿಯ ಇಷ್ಟದಂತೆ ಜಗನ್ನಾಥನೇ ಓದಿಸುತ್ತಿದ್ದುದರಿಂದ ಕೃಷ್ಣಯ್ಯನ ಅಧಿಕಾರ, ಮನೆ, ಮೆತ್ತೆ ಹಾಕಿದ ಕುರ್ಚಿ, ಕಪ್ಪು ಆಯಿಲ್ ಕ್ಲಾತನ್ನು ಹೊದಿಸಿದ ಮೇಜು ಇತ್ಯಾದಿಗಳೆಲ್ಲ ವಿಶ್ವನಾಥ ಶಾಸ್ತ್ರಿಗೆ ಅನಿವಾರ್ಯವಾಗಿ ವರ್ಗವಾಗಿದ್ದವು.

ಶಾಸ್ತ್ರಿಯನ್ನು ಕಂಡರೆ ಜಗನ್ನಾಥನಿಗೆ ಗೋಡೆಗೆ ಅಂಟಿಕೊಂಡ ಹಸಿ ಹಸಿ ಮೈಯ ಹಲ್ಲಿಯ ನೆನಪಾಗುತ್ತಿತ್ತು. ಬೆಕ್ಕು ಕಣ್ಣಿನ ಬಿಳಿಯ. ಎಲ್ಲರೂ ಹುಬ್ಬುಗಳು ಕೂಡುವಲ್ಲಿ ಮಾತ್ರ ಮಂಜುನಾಥನ ಪ್ರಸಾದ ಹಚ್ಚಿಕೊಂಡರೆ ಶಾಸ್ತ್ರಿ ಮಾತ್ರ ಹಳೆಯ ಕಾಲದ ಮುತ್ತೈದೆಯರ ಹಾಗೆ ಹಣೆಯ ಮೇಲೆ ಇಷ್ಟಗಲ ಕುಂಕುಮವಿಟ್ಟುಕೊಳ್ಳುತ್ತಿದ್ದ. ಎಷ್ಟಗಲದ ಕುಂಕುಮ ಅದೆಂದರೆ – ಜಗನ್ನಾಥ ಒಮ್ಮೆ ರಾಯರೆದುರು ತಮಾಷೆ ಮಾಡಿದ್ದ – ಮಂಜುನಾಥನ ಮಹಿಮೆಯನ್ನು ಅಬ್ಬರಿಸಿ ಕಣ್ಣಿರಿಗೆರಚುವಷ್ಟು; ರಾಷ್ಟ್ರಪತಿಗಳ ಹೆಂಡತಿಯ ಹಣೆಯಿಂದ ಹಿಡಿದು ತರಕಾರಿ ಮಾರುವ ಬೆಂಗಳೂರಿನ ಹೆಂಗಸಿನ ಹಣೆಯ ತನಕ ಈ ಕುಂಕುಮ ಪ್ರಸಾದ ಪ್ರಸಿದ್ಧವಾದುದರಿಂದ ಈ ವ್ಯಕ್ತಿ ಭಾರತೀಪುರದವನೇ ಎಂಬುದನ್ನು ಬೆಂಗಳೂರಿನ ಮಹಾತ್ಮಾಗಾಂಧಿ ರಸ್ತೆಯಲ್ಲೂ ಸಾರುವಷ್ಟು. ಸಾಲದ್ದಕ್ಕೆ ರೈಟರ್ ಕೃಷ್ಣಯ್ಯನ ಸ್ಥಾನಕ್ಕೆ ಬಂದವನು ತಾನಾದ್ದರಿಂದ ಈ ಕುಂಕುಮದ ಜೊತೆಗೇ ಕಚ್ಚೆಪಂಚೆ, ಅದರೊಳಕ್ಕೆ ತೂರಿಸಿದ ಶರ್ಟು, ಟೈ, ಗ್ಯಾಬರ್ಡೀನ್ ಕೋಟು, ಕರಿ ಟೊಪ್ಪಿ (ಶಿವಮೊಗ್ಗಕ್ಕೆ ಹೋಗುವಾಗ ಜರಿಪೇಟ) ಇಲ್ಲದೆ ಅವನು ಜನರ ಕಣ್ಣಿಗೆ ಬೀಳುತ್ತಿರಲಿಲ್ಲ. (ಟೋಪಿ ಮತ್ತು ಟೈಗಳಿಲ್ಲದೆ ಜಗನ್ನಾಥನ ಕಣ್ಣಿಗೆ ಅವನು ಬಿದ್ದಿದ್ದೆಂದರೆ ಒಂದು ದಿನ ಇಳಿಹೊತ್ತಿನಲ್ಲಿ ತೋಟದೊಳಗೆ ವೆಂಕಪ್ಪನೆಂಬ ಆಳಿನ ಹೆಂಡತಿಗೆ ಐದು ರೂಪಾಯಿ ನೋಟನ್ನು ತೋರಿಸುತ್ತ ಕಾಮಾತುರದ ಆರ್ತಭಂಗಿಯಲ್ಲಿ ಆತ ನಿಂತಿದ್ದಾಗ. ಒಂದು ಕಾಲನ್ನು ಧರೆಯ ಮೇಲಿಟ್ಟು, ಇನ್ನೊಂದನ್ನು ತಗ್ಗಿನಲ್ಲಿಟ್ಟು ಅವಳಿಗೆ ಹತ್ತಿರವಾಗಲೆಂದು ಮೊಳಕಾಲೆತ್ತರದ ಧರೆಯನ್ನು ಹತ್ತಲು ಹವಣಿಸುತ್ತ, ಸುತ್ತಮುತ್ತ ನೋಡುತ್ತ, ಇಗೊ ಎನ್ನುವಷ್ಟರಲ್ಲಿ

ಹತ್ತಿಬಿಟ್ಟು ವಯ್ಯಾರದಲ್ಲಿ ಒಲ್ಲದ ಅವಳ ಮೈಯನ್ನು ಒಳಚಿದಾಗ ಮಾತ್ರ ಶಾಸ್ತ್ರಿ ಟೋಪಿ ಹಾಕಿರಲಿಲ್ಲ. ಟೈ ಕಟ್ಟಿರಲಿಲ್ಲ)

ಮಾತಿನಲ್ಲಿ ಶಾನುಭೋಗ ಶಾಸ್ತ್ರಿ ಬಲು ನಿಪುಣ. ಸಮಯಕ್ಕೆ ಸರಿಯಾದ ಮಾತು ಬರದೇ ಅವನು ತಬ್ಬಿಬ್ಬಾದ್ದನ್ನು ಜಗನ್ನಾಥ ಕಂಡದ್ದೇ ಇಲ್ಲ. ಉಪಚಾರ, ಘಾಟಿತನ, ನಯವಿನಯ ಗಳಿಂದ ನೊರೆಗರೆಯುವ ಅವನ ಮಾತುಗಳಿಂದ ಸಾರಾಂಶ ರೂಪವಾಗಿ 'ಆಗಬಹುದು' ಅಥವಾ 'ಆಗಲ್ಲ' ಎನ್ನುವ ಅಭಿಪ್ರಾಯವನ್ನು ಕಡೆದು ತೆಗೆಯುವುದು ಯಾರಿಗೂ ಸಾಧ್ಯವಿರಲಿಲ್ಲ. ಕೆಲವು ಮಾತುಗಳಲ್ಲಿ ಬಿಗಿಯುತ್ತ, ಇನ್ನು ಕೆಲವು ಮಾತುಗಳಲ್ಲಿ ಸಡಿಲಿಸುತ್ತ, ಈಗ ಬೆಕ್ಕಾಗುತ್ತ, ಈಗ ಪೇಚಿಗೆ ಸಿಕ್ಕ ಇಲಿಯಾಗುತ್ತ, ನೀಡುತ್ತಿದ್ದಾನೆ ಎನ್ನುವಷ್ಟರಲ್ಲೆ ನಿಗ್ರಹಿಸುತ್ತ ಶಾಸ್ತ್ರಿ ನೇಯುತ್ತಿದ್ದ ಮಾತಿನ ಜಾಲದ ಸಂಪೂರ್ಣ ಅನುಭವವಾಗುತ್ತಿದ್ದುದು ಸಾಲ ಕೇಳಲು ಬರುತ್ತಿದ್ದವರಿಗೆ.

ಜಗನ್ನಾಥನಿಗೆ ಏಕಾದಶಿ ದಿನ ಮಾತ್ರ ಶಾಸ್ತ್ರಿಯ ಮುಖ ನೋಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ; ಮಂಜುನಾಥನ ಕುಂಕುಮ ಪ್ರಸಾದವಿಲ್ಲದ ಅವನ ಬೋಳುಹಣೆ ಬಿಕೋ ಎಂದು ಹಾಳು ಸುತಿಯುವಂತಿರುತ್ತಿತ್ತು. ಹೀಗೆ ಹಣೆಯಲ್ಲಿ ಮಂಜುನಾಥನ ಪ್ರಸಾದದ ಇರುವಿಕೆ, ಅಥವಾ ಇಲ್ಲದಿರುವಿಕೆಯಿಂದಲೇ ಜನರ ಮೂಡಿನ ಮೇಲೇ ಶಾಸ್ತ್ರಿ ಪ್ರಭಾವ ಬೀರುತ್ತಿದ್ದುದರಿಂದಲೋ ಏನೋ ಭಾರತೀಪುರದವರೆಲ್ಲ ಆತನನ್ನು ಕುಂಕುಮದ ಶಾಸ್ತ್ರಿಗಳೆಂದು ಕರೆಯುವುದು ಬಹಳ ಸಮರ್ಪಕವೆನ್ನಿಸುತ್ತಿತ್ತು.

ಈ ಶಾಸ್ತ್ರಿ ಜಗನ್ನಾಥನನ್ನು ನಿಸ್ಸಹಾಯಗೊಳಿಸುವಷ್ಟು ಅವನ ಸುತ್ತ ಮಾತಿನ ಬೆಣ್ಣೆಯ ಕೋಟೆಯನ್ನೇ ಕಟ್ಟಿದ್ದ. ಇಂಗ್ಲೆಂಡಿಂದ ಬಂದಾಗ ಜಗನ್ನಾಥನಿಗೆ ಇದ್ದ ಜನಸಂಪರ್ಕದ ಏಕಮಾತ್ರ ಮಾಧ್ಯಮವೆಂದರೆ ಅವನಿಗಿದ್ದ ಆಸ್ತಿ. ಆದರೆ ಜಗನ್ನಾಥ ಯಾವುದರಲ್ಲೂ ತನ್ನನ್ನೂ ಮೀರಿಹೋಗದಂತಹ ವ್ಯವಸ್ಥೆಯನ್ನು ಶಾಸ್ತ್ರಿ ನಿರ್ಮಿಸಿದ್ದ. ತನ್ನ ಕಿವಿಗೆ ಬೀಳುವಂತೆ ಶಾಸ್ತ್ರಿ ಗಟ್ಟಿಯಾಗಿ ಜನರ ಹತ್ತಿರ ತನ್ನನ್ನು ಹೊಗಳುತ್ತಿದ್ದ ವೈಖರಿ ಜಗನ್ನಾಥನನ್ನು ತುಸುತುಸುವೇ ನಿರ್ಬಲನನ್ನಾಗಿ ಮಾಡಿತ್ತು. ತನಗಿದ್ದಂತೆಯೇ ಶಾಸ್ತ್ರಿಗೂ ಎಲ್ಲರೂ ತನ್ನನ್ನು ಪ್ರೀತಿಸಬೇಕೆಂಬ, ಯಾರೂ ತನ್ನನ್ನು ದ್ವೇಷಿಸಬಾರದೆಂಬ ಆಸೆಯಿದ್ದುದನ್ನು ಕಂಡು ಜಗನ್ನಾಥನಿಗೆ ತನ್ನ ಬಗ್ಗೆ ಹೇಸಿಗೆ ಹೆಚ್ಚಾಗಿತ್ತು. ತನಗಿರುವ ದೌರ್ಬಲ್ಯ ಶಾಸ್ತ್ರಿಗೆ ತಿಳಿದಿದಿಯೆಂದು ಈ ದೌರ್ಬಲ್ಯವನ್ನು ಬಳಸಿಕೊಂಡು ಅವನು ಗಟ್ಟಿಯಾಗುತ್ತಿದ್ದಾನೆಂದು ಇನ್ನಷ್ಟು ತನ್ನ ಬಗ್ಗೆ ಜುಗುಪ್ಸೆ ಹುಟ್ಟಿತ್ತು. ತನ್ನ ವ್ಯಕ್ತಿತ್ವದ ವಿಕಾರದ ಇನ್ನೊಂದು ರೂಪವಾದ ಈ ಶಾಸ್ತ್ರಿ ಹಿತವಾದ ಪ್ರತಿಬಿಂಬವನ್ನು ಮೂಡಿಸಿಕೊಳ್ಳಲು ಹೇಗೆ ಮಾತಿನ ಜಾಲವನ್ನು ಕಟ್ಟುತ್ತಾನೆಂದು ಕಂಡು ಗಾಬರಿಯಾಯಿತು. ಈ ನುಣ್ಣನೆಂದು ಹಸಿಹಸಿ ಮೈಯ ಜಂತುವನ್ನು ನಾನು ನೋಯಿಸಬಲ್ಲೆನಾದರೆ ನನ್ನ ದೌರ್ಬಲ್ಯವನ್ನೆ ಮೀರಲು ಪ್ರಾರಂಭಿಸಿದಂತೆ ಎಂದು ಅನ್ನಿಸತೊಡಗಿತು.

ವೆಂಕಪ್ಪನ ಹೆಂಡತಿಯ ಜೊತೆಗೆ ಶಾಸ್ತ್ರಿ ನಿಂತಿದ್ದ ದೃಶ್ಯ ಕಂಡಂದಿನಿಂದ ತನಗೆ ಈ ಶಾಸ್ತ್ರಿ ಅಭೇದ್ಯನಲ್ಲ ಎಂದು ಯಾಕೆ ಧೈರ್ಯ ಹುಟ್ಟಿತೋ ತಿಳಿಯದು. ಅವತ್ತು ವಯ್ಯಾರದಲ್ಲಿ ಒಲ್ಲದ ಆ ಹೆಣ್ಣನ್ನು ಅವನು ಬಳಚುತ್ತಿದ್ದುದನ್ನು ನೋಡಿದಾಗ ಮಾತಿನಲ್ಲೂ ಈತ ನನ್ನನ್ನು ಹೀಗೆ ಬಳಚುತ್ತಿದ್ದಾನಲ್ಲವೆ ಎನ್ನಿಸಿ ಅತಿ ಹೇಸಿಗೆಯಾಗಿ ಸೀದಾ ಆಫೀಸಿಗೆ ಬಂದಿದ್ದ. ಅಲ್ಲಿ ಕೂತು ಶಾಸ್ತ್ರಿಗಾಗಿ ಕಾದ. ಹಣೆಯ ತುಂಬ ಕುಂಕುಮ ನಗುತ್ತ ಗ್ಯಾಸ್‌ಲೈಟ್ ಹಚ್ಚಿಟ್ಟು ಆಫೀಸಿಗೆ ಶಾಸ್ತ್ರಿ ಬಂದ. ಟೈ ಇರಲಿಲ್ಲ; ಆದರೆ ಟೋಪಿಯಿತ್ತು.

‘ಏನು ಶಾಸ್ತ್ರಿಗಳೆ ನಿಮ್ಮನ್ನೊಂದು ವಿಷಯ ಕೇಳಬೇಕೆಂದಿದ್ದೆ. ಯಾರ್ಯಾರು ಈ ಸಾರಿ ಗೇಣಿ ಬಾಕಿ ಮಾಡಿಕೊಂಡಿದ್ದಾರೆ ನೋಡಬೇಕು. ಪುಸ್ತಕ ತನ್ನಿ.’

ಶಾಸ್ತ್ರಿ ಸುಳ್ಳು ಲೆಖ್ಖ ಬರೆಯುತ್ತಿದ್ದಾನೆಂದು ಜಗನ್ನಾಥನಿಗೆ ಗುಮಾನಿಯಿತ್ತು. ಹಿಡಿದರೆ ಶಾಸ್ತ್ರಿ ತಣ್ಣಗಾಗುತ್ತಾನೆ; ತನ್ನನ್ನು ಬಳಚುವುದನ್ನು ಬಿಡುತ್ತಾನೆ – ಎಂದು ಭಾವಿಸಿ ಜಗನ್ನಾತ ಸ್ವಲ್ಪ ಜೋರಿನಲ್ಲಿಯೇ ಕೇಳಿದ.

‘ಅಯ್ಯೋ ಪಾಪ. ಯಾಕೆ ಕಣ್ಣು ಹಾಳುಮಾಡಿಕೋತೀರಿ ರಾತ್ರೀಲಿ ಆ ಪುಸ್ತಕ ನೋಡಿ, ನಾಳೆ ಖುದ್ದು ನಾನೇ ನಿಮಗೆ ಓದಿ ಹೇಳ್ತೇನೆ. ತವು ಇಂಥ ವಿಷಯಕ್ಕೆಲ್ಲ ಯಾಕೆ ಶ್ರಮ ತಗೋಬೇಕು’. ಶಾಸ್ತ್ರಿಗಳು ಕತ್ತು ಬಳುಕಿಸುತ್ತ ಹೇಳಿದರು.

ಜಗನ್ನಾಥ ನಿಷ್ಠುರವಾಗಿ ಗಟ್ಟಿಯಾಗಿ ಕೇಳಿದ:

‘ಇಲ್ಲ. ಏನು ಉತ್ಪತ್ತಿಯಿದೆ ಏನು ಖರ್ಚಿದೆ ಎಲ್ಲ ನಾನು ಖುದ್ದು ಪರೀಕ್ಷೆ ಮಾಡಬೇಕೂಂತಿದೀನಿ. ನಾನು ಕೇಳಿದ ಪುಸ್ತಕ ಕೊಡಿ. ರೂಮಿಗೆ ತಗೊಂಡು ಹೋಗ್ತಾ ಇದೇನೆ.’

ಶಾಸ್ತ್ರಿ ಪೆಚ್ಚಾಗಿದ್ದರೂ ತೋರಗೊಡದೆ ಒಂದು ಖಾತೆ ಪುಸ್ತಕ ಎತ್ತಿಕೊಟ್ಟಿದೆ. ಇಷ್ಟೊಂದು ಉದಾತ್ತರಾದ ನೀವು ಸಣ್ಣ ವಿಷಯದಲ್ಲಿ ಮನಸ್ಸು ಕೆಡಿಸಿಕೊಳ್ಳಬೇಕೇ ಎಂಬ ಪಶ್ಚಾತ್ತಾಪದ ಧಾಟಿಯಿತ್ತು – ಪುಸ್ತಕದ ಧೂಳು ಹೊಡೆದು, ಊದಿ ಬಹಳ ನಾಜೂಕಾಗಿ ಕೈಗೆತ್ತಿಕೊಟ್ಟ ಅವನ ಕ್ರಮದಲ್ಲಿ, ಜಗನ್ನಾಥ ಥಟ್ಟನೇ ಅಳುಕದ್ದ. ಅಳುಕಿದೆನಲ್ಲ ಎಂದು ಸಿಟ್ಟಾಗಿದ್ದ. ಈ ಶಾಸ್ತ್ರಿಯ ಮೋಸವನ್ನೆಲ್ಲಾದರೂ ಪತ್ತೆಮಾಡಲಾರದೆ ಹೋದರೆ ಎಂದು ಹೆದರಿದ್ದ. ತೋಟದಲ್ಲಿ ನಡೆದ ದೃಶ್ಯ ನೆನೆದು ಧೈರ್ಯ ತಂದುಕೊಂಡಿದ್ದ.

ಮಾರನೇ ದಿನ ಬೆಳಿಗ್ಗೆ ಶಾಸ್ತ್ರಿಯನ್ನು ಕರೆದು ಹೇಳಿದ:

‘ಇದೇನು ಶಾಸ್ತ್ರಿಗಳೇ ಸುಮಾರು ಮುವ್ವತ್ತು ಜನ ಅಡಿಕೆ ಬಾಕಿ ಮಾಡಿಕೊಂಡಿದ್ದಾರೆ. ಹೋಗಿ ಅವರನ್ನು ನೋಡಿ ಮಾತಾಡಬೇಕು. ಬುಡನ್ನಿಗೆ ಹೇಳಿ – ಇಬ್ಬರೂ ಹೋಗೋಣ.’

ಶಾಸ್ತ್ರಿ ಜಗ್ಗಿದಂತೆ ಕಾಣಲಿಲ್ಲ.

‘ಅವರಿಗೇ ಹೇಳಿಕಳಿಸಿದರೆ ಆಯ್ತಲ್ಲ ಸಾರ್. ಅವರ ಮನೇ ಬಾಗಿಲಿಗೆ ನಾವು ಯಾಕೆ ಹೋಗಬೇಕು ? ಅವರಿಗೂ ಪಾಪ ಸಂಕೋಚವಾಗತ್ತೆ – ಏನು ಇಷ್ಟು ಸಣ್ಣ ವಿಷಯಕ್ಕೆ ಖುದ್ದು ಸಾಹುಕಾರ್ರೇ ಬಂದ್ರಲ್ಲ ಅಂತ.’

‘ಆಗಲಿ ಶಾಸ್ತ್ರಿಗಳೇ ಪರವಾಗಿಲ್ಲ. ನಾವು ಹೋಗಿ ಬರೋಣ’.

‘ಬೇಡ ನಾನೇ ಹೋಗಿ ಬರ್ತೀನಿ. ಇವತ್ತು ಸ್ವಲ್ಪ ಕೆಲಸವಿದೆ, ಔಷಧಿ ಹೊಡೆಯೋದಕ್ಕೆ ಜನಾನ್ನ ಕರ್ಕೊಂಬಾ ಅಂತ ಜನಾರ್ಧನ ಸೆಟ್ಟಿಗೆ ಹೇಳಿದೀನಿ.’

‘ಸುಮ್ಮನೇ ಮುಂದೆ ಹಾಕೋದು ಬೇಡ ಶಾಸ್ತ್ರಿಗಳೆ. ಹೊರಡಿ. ಏಯ್ ಬುಡನ್ನಿಗೆ ಹೇಳೊ. ಕಾರನ್ನ ಹೊರಗೆ ತಂದು ನಿಲ್ಲಿಸಲಿಕ್ಕೆ.’

ಜಗನ್ನಾಥ ಆಳನ್ನ ಕರೆದು ಹೇಳಿದ. ವಿವರ್ಣವಾಗಿದ್ದ ಶಾಸ್ತ್ರಿಯ ಮುಖ ಕಂಡು ಅವನಿಗೆ ಧೈರ್ಯ ಬಂದಿತ್ತು, ಒಳಗಿನಿಂದ ಶಕ್ತಿ ಉಕ್ಕಿ ಬಂದಂತಿತ್ತು.

ಶಾಸ್ತ್ರಿ ರೂಮಿನ ಬಾಗಿಲು ಹಾಕಿದ. ಕೈಮುಗಿದು ನಿಂತು ಕಣ್ಣು ಮುಚ್ಚಿ ಹೇಳಿದ.

‘ಮಕ್ಕಳೊಂದಿಗ. ಕಾಪಾಡಬೇಕು. ಲೆಖ್ಖ ಬರೆಯೋದರಲ್ಲಿ ಸ್ವಲ್ಪ ತಪ್ಪಾಗಿದೆ. ಆಮೇಲಿಂದ ಅವರು ಉಳಿದ ಗೇಣಿ ತಂದು ಕೊಟ್ಟಿದ್ದಾರೆ. ಈ ಪುಸ್ತಕದಲ್ಲಿ ಅದನ್ನು ಬರೆದಿಲ್ಲ ಅಷ್ಟೆ. ಬೇಕಾದರೆ ಮಂಡಿ ಲೆಖ್ಖ ತರಿಸಿ ನೋಡಿ. ಅಲ್ಲಿ ಅಡಿಕೇನೆಲ್ಲ ತಮ್ಮ ಹೆಸರಲ್ಲಿ ತುಂಬಿಲ್ಲವಾ ಅಂತ.’

ಏಷ್ಟಾದರೂ ಶಾಸ್ತ್ರಿ ಸೋತಿರಲಿಲ್ಲ. ಜಗನ್ನಾತ ನೇರವಾಗಿ ಮಾತಾಡಿದ.

‘ಶಾಸ್ತ್ರಿಗಳೇ ನಿಮಗೆ ಸಂಬಳ ಇಲ್ಲಿ ಇನ್ನೂರ ಐವತ್ತು ಅಲ್ಲವೆ? ಬಹಳ ಕಮ್ಮಿಯಾಯಿತು. ಇವತ್ತಿನಿಂದ ನಿಮ್ಮ ಸಂಬಳಾನ್ನ ನಾನೂರಕ್ಕೆ ಏರಿಸಿದೀನಿ. ನೀವು ನಿಮ್ಮ ಸ್ವಂತ ಲೆಖ್ಖಕ್ಕೆ ಹಾಕಿಕೊಂಡ ಅಡಿಕೇನೆಲ್ಲ ಕೊಟ್ಟುಬಿಡಿ. ಹೀಗೆ ಮೋಸ ಮಾಡೋದನ್ನ ಬೆಣ್ಣೇಲಿ ಕೂದಲು ತೆಗೆದ ಹಾಗೆ ಮಾತಾಡೋದನ್ನ ದಯಮಾಡಿ ನಿಲ್ಲಿಸಿ. ಕೂಡಲೇ ರೂಮಿಂದ ಹೊರಗೆ ಹೋಗಿ ನಾನು ಹೇಳಿದಷ್ಟು ಮಾಡಿ.’

ಪ್ರಪ್ರಥಮ ಬಾರಿಗೆ ಶಾಸ್ತ್ರಿ ಮಾತು ಕಳೆದುಕೊಂಡು ನಿಂತಿದ್ದು ನೋಡಿ ಜಗನ್ನಾಥನಿಗೆ ಸಂತೋಷವಾಯಿತು. ತನ್ನ ಬಗ್ಗೆ ಅವನು ಒಳಗಿಂದೊಳಗೆ ದ್ವೇಷ ಕಾರುತ್ತಿರಬಹುದಲ್ಲವೇ? ಗೆದ್ದೆ ಎನ್ನಿಸಿತು. ‘ಹೋಗಿ’ ಎಂದು ಮತ್ತೆ ಹೇಳಿದ. ಶಾಸ್ತ್ರಿ ಯಾಂತ್ರಿಕವಾಗಿ ಹೋದ. ಟೋಪಿಯನ್ನು ಕಂಕುಳಲ್ಲವಚಿಕೊಂಡು ಹೋದ ಶಾಸ್ತ್ರಿಯನ್ನು ಕಂಡು ಅನ್ನಿಸಿದ ಪಶ್ಚಾತ್ತಾಪವನ್ನು ಜಗನ್ನಾಥ ತೋರಿಸಿಕೊಳ್ಳಲಿಲ್ಲ.

* * *

ಈ ಘಟನೆಯಾದ ಮೇಲಿಂದ ಜಗನ್ನಾಥನಿಗೆ ಏನೋ ನೆಲೆಸಿಕ್ಕ ಅನುಭವವಾಗಿತ್ತು. ಜನರ ಜೊತೆ ಒಂದಾಗಬೇಕೆಂಬ ಅಸ್ಪಷ್ಟವಾದ ಆಸೆ ಪ್ರಬಲವಾಯಿತು. ಪ್ರತಿನಿತ್ಯ ಬೆಳಿಗ್ಗೆ ಬೇಗ ಎದ್ದು ಬಿಳಿಯಂಗಿ ಮುಂಡು ತೊಟ್ಟು ಆಳುಗಳು ಕೆಲಸ ಮಾಡುವಲ್ಲಿಗೆ ಹೋಗಲು ಶುರುಮಾಡಿದ. ಜನ ಏನು ಯೋಚಿಸ್ತಾರೆ, ಏನು ಕನಸು ಕಾಣ್ತಾರೆ, ಯಾವುದರಿಂದ ಅವರಿಗೆ ನೋವಾಗುತ್ತೆ, ಸುಖವಾಗುತ್ತೆ ಎಂದು ತಿಳಿಯಲು ಪ್ರಯತ್ನಪಟ್ಟ. ತನ್ನ ಎದುರಿಗೆ ಅತ್ಯಂತ ದೈನ್ಯದಿಂದ ವರ್ತಿಸುವ ಇವರು ನನ್ನನ್ನು ನಿಜವಾಗಿ ಗೌರವಿಸುವುದಿಲ್ಲವೆಂಬುದು ಅವನಿಗೆ ಖಾತ್ರಿಯಾಯಿತು. ಆಪ್ತವಾಗಿ ಮಾತಾಡಿಸಲು ಹೋದರೆ ಸಂಶಯಪಟ್ಟಾರು. ಜೊತೆಗೆ ಕೆಲಸ ಮಾಡಲು ಹೋದರೆ ಧಣಿಯರಿಗೆ ದುಡ್ಡಿನ ಮೇಲೆ ಆಸೆ, ಆಳುಗಳು ಕೆಲಸ ಕದಿಯುತ್ತಾರೆಂದು ಅನುಮಾನ ಇತ್ಯಾದಿ ಆಡಿಕೊಂಡಾರು. ಧಾರಾಳಿಯಾಗಿ ನಡೆದುಕೊಂಡರೆ ಒಡೆಯ ಅಪಕ್ವ ಯುವಕನೆಂದು ಸದರವಾಗಿ ಕಂಡರು. ಜಗನ್ನಾಥನಿಗೆ ಏನು ಮಾಡುವುದೆಂದು ತಿಳಿಯಲಿಲ್ಲ.

ತೋಟದಲ್ಲಿ ಬಾಳೆಗೊನೆ. ಮೆಣಸು, ಅಡಿಕೆಗೊನೆ ಕಳುವಾಗುತ್ತೆಂದು ಜಗನ್ನಾಥನಿಗೆ ಅನುಮಾನವಿತ್ತು. ಕತ್ತಲಾದ ಮೇಲೆ ಯಾರಿಗೂ ತಿಳಿಯದಂತೆ ಒಂದು ದಿನ ತೋಟದಲ್ಲಿ ಬಚ್ಚಿ ಕೂತ. ಯಾರಿಗೂ ತಿಳಿಯದಂತೆ ತಾನಿಲ್ಲ ಕದ್ದು ಕೂತಿದ್ದೇನೆಂಬುದೇ ಅವನಿಗೆ ತೀವ್ರವಾಗಿ ಸುಖವನನು ಕೊಟ್ಟಿತು. ಈ ರಾತ್ರಿ ಕಳ್ಳರು ಬರದೇ ಹೋದರೆ ಎಂದು ಚಡಪಡಿಸತೊಡಗಿದ. ಪ್ರೇಮಾತುರದಲ್ಲಿ ಕಾಯುವವನಂತೆ ಕಳ್ಳನನ್ನು ಪತ್ತೆ ಮಾಡಲು ಕಾದ. ಮಧ್ಯರಾತ್ರಿಯ ಹೊತ್ತಿನಲ್ಲಿ ಹೆಜ್ಜೆ ಸಪ್ಪಳ ಕೇಳಿ ರೋಮಾಂಚವಾಯಿತು. ಗಾಢವಾದ ಕತ್ತಲಲ್ಲೂ ಕಣ್ಣುಗಳು ಇಬ್ಬರನ್ನು ಗುರುತಿಸಿದುವು. ವಯಸ್ಸಾದವನೊಬ್ಬ, ಕಿರಿಯ ಇನ್ನೊಬ್ಬ. ಉಸಿರು ಬಿಗಿಹಿಡಿದು ಕಾದ. ಹತ್ತಿರವೇ ಬಂದರು. ತಾನಿದ್ದೇನೆಂಬುದು ಗೊತ್ತಿಲ್ಲ್ಲೆ, ಆದರೆ ತನಗೆ ಪ್ರತ್ಯಕ್ಷ ತಿಳಿಯುವಂತೆ ಇಬ್ಬರು ತೋಟದಲ್ಲಿ ಕದಿಯುತ್ತಿದ್ದಾರೆಂಬುದು ತನ್ನೊಳಗೆ ಅಪಾರವಾದ ಶಕ್ತಿಯನ್ನು ಉತ್ಪತ್ತಿಮಾಡಿತ್ತು. ತನ್ನ ತೋಟದ ಬಾಳೆಗೊನೆಗಳನ್ನು ಅಡಿಕೆಗೊನೆಗಳನ್ನು ಹಿರಿಯ ಕತ್ತರಿಸಿ ಕಿರಿಯನಿಗೆ ಕೊಡುವುದನ್ನು ಕಂಡು ತನ್ನೊಳಗಿನ ಅತ್ಯಂತ ಆಪ್ತವಾದ ಆಸೆಯೇ ಸಫಲವಾದಂತೆನ್ನಿಸಿತು. ಹಿರಿಯ ಅಡಿಕೆ ಮರ ಹತ್ತುವಾಗ ಅವನು ಬೀಳಬಾರದೆಂದು ತಾನೇ ಹತ್ತುತ್ತಿರುವೆನೋ ಎಂಬಂತೆ ಉಸಿರು ಬಿಗಿ ಹಿಡಿದು ಮುಂದಿನದನ್ನು ನಿರೀಕ್ಷಿಸಿದ. ಅವನು ಕತ್ತರಿಸಿ ಕೆಳಗೆ ಬೀಳಿಸಿದ ಅಡಿಕೆಗೊನೆ ತೋಟ ಕಾಯುವವನನ್ನು ಎಚ್ಚರಿಸದಿರಲೆಂದು ಪ್ರಾರ್ಥಿಸಿದ. ಕಿರಿಯ ಎಲ್ಲವನ್ನೂ ಚೀಲದಲ್ಲಿ ಸುತ್ತಿಕೊಂಡಾದ ಮೇಲೆ ಇಬ್ಬರೂ ತಲೆಯ ಮೇಲೆ ಚೀಲಗಳನ್ನು ಹೊತ್ತಿಕೊಂಡು ಹೊರಟುರ. ಇಬ್ಬರೂ ಅಷ್ಟು ದೂರ ಹೋಗುತ್ತಿದ್ದಂತೆ ಅವರು ಯಾರಿರಬಹುದೆಂದು ತಿಳಿಯುವ ಆಸೆ ಹುಟ್ಟಿತು. ಮೆಲ್ಲ ಮೆಲ್ಲನೆ ಅವರ ಹಿಂದೆ ನಡೆದ. ತೋಟದಿಂದ ಗುಡ್ಡಕ್ಕೆ ಒಯ್ಯುವ ಈ ಕಳ್ಳ ದಾರಿಯೊಂದು ಇದೆ ಎಂಬುದೇ ಜಗನ್ನಾಥ ತಿಳಿದಿರಲಿಲ್ಲ. ಶೂದ್ರರಿಗೆ ಮಾತ್ರ ತಿಳಿದ ಇನ್ನೆಷ್ಟು ಒಳದಾರಿಗಳಿವೆಯೋ ಅವೆಲ್ಲವನ್ನೂ ತಿಳಿಯಬೇಕೆಂದು ಅತ್ಯಂತ ಕುತೂಹಲ ಹುಟ್ಟಿತು. ಗುಡ್ಡದ ನೆತ್ತಿಗೇರುವ ತನಕ ಬೆಕ್ಕಿನಂತೆ ಅವರನ್ನು ಹಿಂಬಾಲಿಸಿದ. ನೆತ್ತಿಯನ್ನು ಇನ್ನೇನು ತಲ್ಪಬೇಕುನ್ನುವ ಹೊತ್ತಿನಲ್ಲಿ ಓಡಿ ಹೋಗಿ ಹಿರಿಯನ ಕೈ ಹಿಡಿದ. ಟಾರ್ಚ್ ಹಾಕಿದ.

ಹಿರಿಯ ಅತ್ಯಂತ ಸಂಪನ್ನನಂತೆ ತನ್ನ ಹತ್ತಿರ ನಡೆದುಕೊಳ್ಳುತ್ತಿದ್ದ ಶೀನಪ್ಪನಾಗಿದ್ದ. ಸುಮಾರು ನಲವತ್ತೈದು ವರ್ಷದ ಗಟ್ಟಿಮುಟ್ಟಾದ ಮೈಯ ಈ ಆಳು ತನ್ನ ಕಿರಿಮಗ ಗಂಗಪ್ಪನ ಜೊತೆ ಕದಿಯಲು ಬಂದಿದ್ದು ನೋಡಿ ಜಗನ್ನಾಥನಿಗೆ ಇನ್ನಷ್ಟು ಶಕ್ತಿ ಉಕ್ಕಿದಂತಾಗಿತ್ತು. ಕಾಲಿಗೆ ಬಿದ್ದು ಹೊರಳಲು ಹೋದ ಶೀನಪ್ಪನಿಗೆ 'ಏಳು' ಎಂದ. ಓಡಲು ಹೋದ ಗಂಗಪ್ಪನನ್ನು 'ನಿಲ್ಲು' ಎಂದ. 'ಇನ್ನು ಮುಂದೆ ಕದಿಯಬೇಡಿ – ಅಷ್ಟೆ. ಈ ಸಾರಿಗೆ ನಿಮ್ಮನ್ನು ಬಿಟ್ಟಿದ್ದೇನೆ' ಎಂದು ಸಮಾಧಾನದಿಂದ

ಹೇಳಿದ. ನಾನು ನಿಮಗೆ ಸರಿಸಮನಾದೆನಲ್ಲವೆ ಎಂಬ ಉತ್ಸಾಹ ಅವನ ಮಾತಿನಲ್ಲಿತ್ತು.

'ಭೂತರಾಯನಿಗೆ ತಪ್ಪು ಕಟ್ತೀನಿ ಒಡೇರೆ, ನನ್ನನ್ನು ಬಿಟ್ಟುಬಿಡಿ'

ಎನ್ನುತ್ತ ಗೋಗರೆದ ಶೀನಪ್ಪನಿಗೆ ತಾನು ಹೇಳಿದ್ದನ್ನು ನಂಬುವುದೇ ಕಷ್ಟವೆನಿಸಿರಬೇಕು. ಇನ್ನು ಈ ಶೀನಪ್ಪನ ಪ್ರಜ್ಞೆಯಲ್ಲಿ ನಾನೊಬ್ಬ ನಿಜವಾದ ಮನುಷ್ಯನಾದೆ ಎನ್ನುವ ಖುಷಿಯಿಂದ ಜಗನ್ನಾಥ,

'ಒಂದು ಬಾಳೆಗೊನೆ ತಗೊಂಡು ಹೋಗು. ಉಳಿದದ್ದನ್ನ ಮನೆಗೆ ತಂದು ಹಾಕು. ನಿನಗೇನಾದರೂ ದುಡ್ಡು ಬೇಕಾಗಿದ್ದರೆ ಕೇಳು – ಕೊಡ್ತೀನಿ' ಎಂದು ಹಿಂದಕ್ಕೆ ಹೊರಟ. ನಡುಗುತ್ತಿದ್ದ ಶೀನಪ್ಪ,

'ಮನೇತನಕ ನಿಮ್ಮನ್ನು ಬಿಟ್ಟು ಬರ್ತೀನಿ ಒಡೇರೇ' ಎಂದು ದಾರಿಯುದ್ದಕ್ಕೂ ಇನ್ನೂ ಯಾರ್ಯಾರು ಹೀಗೆ ಕದೀತಾರೆ, ಅವರನ್ನೆಲ್ಲ ತಾನು ಹಿಡಿದು ಪತ್ತೆ ಮಾಡ್ತೇನೆ ಇತ್ಯಾದಿ ಹೇಳುತ್ತ ಜೊತೆಗೆ ಬಂದು ಬಿಟ್ಟು ಹೋದ. ವಿನಯಕ್ಕಿಂತ ಧೂರ್ತತನದಲ್ಲೆ ನೀನು ಗಟ್ಟಿಯಾಗಿರುವುದು ಎಂಬುದನ್ನು ಸೂಚಿಸಲು ಜಗನ್ನಾಥ ಒಂದು ಮಾತೂ ಆಡದೆ ಅವನು ಹೇಳಿದ್ದನ್ನೆಲ್ಲ ಕೇಳಿಸಿಕೊಂಡ.

ಈ ಸುದ್ದಿ ಹಬ್ಬಿದೆ ತನ್ನ ವರ್ಚಸ್ಸು ಆಳುಗಳ ನಡುವೆ ಬೆಳೆದದ್ದನ್ನು ಜಗನ್ನಾಥ ಗಮನಿಸಿದ. ಭಯದಲ್ಲಿ ಮಾತ್ರ ತೋಟದ ಕೆಲಸ ಸಾಧ್ಯವೆಂಬುದನ್ನು ಅರಿತು ಜಗನ್ನಾಥ ಇನ್ನೊಂದು ಗೊಂದಲಕ್ಕೆ ಒಳಗಾದ. ಆಸ್ತಿಯನ್ನು ಊರ್ಜಿತಗೊಳಿಸಿಗೊಳ್ಳುತ್ತ ಹೋಗುವ ಆಸೆಯೇ ತನ್ನ ಇಡೀ ಮನಸ್ಸನ್ನು ಆವರಿಸಿಕೊಂಡುಬಿಟ್ಟೀತಲ್ಲವೆ? ಸಂಪತ್ತಿನ ಮೇಲೆ ನಿಜವಾದ ಆಸೆಯಿಲ್ಲದಿದ್ದರೂ. ತನಗೂ ಉಳಿದವರಿಗೂ ನಡುವೆ ಆಸ್ತಿಯಿರುವ ತನಕ ಸಂಪೂರ್ಣ ಮಾನವೀಯ ಸಂಬಂಧ ಅಸಾಧ್ಯ. ಹಾಗೆಯೇ ಆಸ್ತಿಯಿಲ್ಲದಿದ್ದಲ್ಲಿ ಯಾವ ಸಂಬಂಧವೂ ಸಾಧ್ಯವಿಲ್ಲ. ಆಸ್ತಿಯನ್ನು ಸಮಾನವಾಗಿ ಹಂಚುವುದರಿಂದ ಕೂಡ ಈ ಸಂಬಂಧದ ಪ್ರಶ್ನೆಯನ್ನು ಬಗೆಹರಿಸುವಂತಿಲ್ಲ. ಯಾಕೆಂದೆ ಭಾರತೀಪುರದಲ್ಲಿ ಆಸ್ತಿಯ ಮೂಲಕವೇ ಎಲ್ಲ ರೀತಿಯ ಸಂಬಂಧಗಳೂ ಏರ್ಪಟ್ಟಿದ್ದವು. ಒಂದೋ ಒಡೆಯನಾಗಿರಬೇಕು; ಅಥವಾ ಒಕ್ಕಲಾಗಿರಬೇಕು; ಅಥವಾ ವರ್ತಕನಾಗಿರಬೇಕು; ಅಥವಾ ಮಂಜುನಾಥನ ದಳ್ಳಾಳಿಗಳಾಬೇಕು; ಅಥವಾ ಎಲ್ಲವನ್ನೂ ಬಿಟ್ಟು ಅವಧೂತನಾಗಬೇಕು. ಕೊನೆಯ ಸಾಧ್ಯತೆ ಬಿಟ್ಟರೆ ಉಳಿದೆಲ್ಲದರಲ್ಲೂ ಆಸ್ತಿಯ ಮೂಲಕ ಮಾತ್ರ ಸಂಬಂಧಗಳು ಏರ್ಪಡುತ್ತಿದ್ದುವು. ಜಮೀಂದಾರನಾಗಿ ಮಾನವೀಯತೆ ಕಳೆದುಕೊಳ್ಳಬೇಕು; ಅಥವಾ ಗೇಣಿದಾರನಾಗಿ ಅರೆಜೀವದ ಬದುಕು ನಡೆಸಬೇಕು. ಅಥವಾ ವರ್ತಕನಾಗಿ ವಂಚನೆಮಾಡಬೇಕು. ಎಲ್ಲ ಸಂಬಂಧಗಳ ಮೂಲದಲ್ಲೂ ಇದ್ದದ್ದು ಆಸ್ತಿ; ಇದನ್ನು ಕಾಪಾಡುವ ಮಂಜುನಾಥನ ಭಂಟ ಭೂತರಾಯ. ಈ ಚಕ್ರವ್ಯೂಹದಿಂದ ಬಿಡುಗಡೆಯೇ ಇಲ್ಲವೆನ್ನಿಸಿ ಜಗನ್ನಾಥ ಇನ್ನಷ್ಟು ಆಳವಾಗಿ ಈ ಪ್ರಶ್ನೆಯನ್ನು ಹೊಕ್ಕು ನೋಡಲು ನಿರ್ಧರಿಸಿದ.

ಜನರ ಒಳಗಿನ ಬಾಳು ಹೇಗಿರುತ್ತದೆ ಎಂದು ತಿಳಿಯಬೇಕೆನ್ನಿಸಿತು. ಶೀನಪ್ಪನಂತಹ ತೋರಿಕೆಗೆ ಸಂಪನ್ನನಾಗಿದ್ದವನೂ ಕದಿಯುತ್ತಾನೆಂಬುದು, ಸಿಕ್ಕಿಬಿದ್ದ ಮೇಲೂ ಅವನು ತನ್ನೊಳಗೆ ನಿಜವಾಗಿ ನಿರ್ಬಲನಾಗಲಿಲ್ಲವೆನ್ನುವುದು, ಈ

ಭಾರತೀಪುರದಲ್ಲಿ ನಿಶಾಸಂಚಾರಿ ಶೂದ್ರರಿಗೆ ಮಾತ್ರ ತಿಳಿದಿದ್ದ ಅನೇಕ ಗುಪ್ತದಾರಿಗಳಿವೆಯೆಂಬುದು, ಭೂತರಾಯನ ಅಂಕೆಗೆ ಹೆದರುವ ಈ ಜನರೂ ಪತ್ತೆಯಾಗದ ಮಾರ್ಗಗಳನ್ನು ನೀತಿನಿಯಮಕ್ಕೆ ಅತೀತವಾಗಿ ಹುಡುಕಿಕೊಳ್ಳುತ್ತಾರೆಂಬುದು ಜಗನ್ನಾಥನ ಯೋಚನಾಕ್ರಮಕ್ಕೆ ಹೊಸ ಆಯಾಮವನ್ನು ಕೊಟ್ಟಿತ್ತು. ತೋರಿಕೆಗೆ ಅತ್ಯಂತ ದೀನರಾದ ಈ ಜನರಲ್ಲಿ ಯಾವುದರಿಂದಲೂ ನಾಶವಾಗಲಾರದ ಬದುಕಿನ ವಾಂಛಲ್ಯವಿದೆಯೆನ್ನಿಸಿ ಅದನ್ನು ತಿಳಿಯಬೇಕೆಂಬ ಮನಸ್ಸಾಯಿತು. ಮಂಜುನಾಥ, ಭೂತರಾಯ, ಜಮೀಂದಾರ, ವತ್ಕ, ಅನುಭಾವಿ – ಯಾರೂ ಮುಟ್ಟದ ಒಂದು ಗೂಢವಾದ ಒಳ ಪ್ರಪಂಚದಲ್ಲಿ ತಮಗೇ ತಿಳಿಯದಂತೆ ಈ ಜನ ಬದುಕುವ ಶಕ್ತಿಯನ್ನು ಪಡೆಯುತ್ತಾರೆ ಎನ್ನಿಸಿತು. ಈ ನೀತಿ ನಿಯಮಗಳನ್ನೆಲ್ಲ ದಾಟಿದ ಅವರ ಒಳಪ್ರಪಂಚದ ಧೂರ್ತತೆಯನ್ನು ಗಣನೆಗೆ ತಂದುಕೊಳ್ಳದೆ ಸಾಮಾನ್ಯರ ಬಗ್ಗೆ ಆದರ್ಶವಾದಿಯಾಗಿ ಮಾತಾಡಿದರೆ ತಾನು ಪೊಳ್ಳಾಗುತ್ತೇನೆ ಎಂದು ಅರಿವಾಯಿತು.

ಆಳುಗಳಿಗೆಲ್ಲ ಮೇಸ್ತ್ರಿಯಾಗಿದ್ದ ಜನಾರ್ಧನ ಸೆಟ್ಟಿಯೆಂಬ ಸೊಗಸುಗಾರ ಯುವಕನೊಬ್ಬನಿದ್ದ. ತನು ಸೇರೆಗಾರನಾದ್ದರಿಂದ ಸ್ವಂತ ಕೈಯಲ್ಲಿ ಕೆಲಸ ಮಾಡುವವನಲ್ಲ ಎಂಬುದನ್ನು ಸ್ಥಾಪಿಸಲೆಂಬಂತೆ ಆತ ಬಲಗೈಗೇ ವಾಚು ಕಟ್ಟಿಕೊಳ್ಳುತ್ತಿದ್ದ. ಖಾಕಿ ಪ್ಯಾಂಟು, ಹೊಳೆಯುವ ಟೆರಿಲೀನ್ ಅಂಗಿ, ಜೇಬಿಬಲ್ಲಿ ಪೆನ್ನು ಸಿಗರೇಟು ಬೆಂಕಿಪೊಟ್ಟಣ, ಓರಣವಾಗಿ ಬಾಚಿದ ತಲೆ, ಬೊಂಬಾಯಿ ನಗರವನ್ನು ಅವನು ವರ್ಣಿಸುವ ವೈಖರಿ, ತನ್ನನ್ನು ಮೆಚ್ಚಿಸಲು ಹೆಣ್ಣಾಳುಗಳಲ್ಲಿ ಅವನು ಪ್ರೋತ್ಸಾಹಿಸುತ್ತಿದ್ದ ಪೈಪೋಟಿ – ಇವುಗಳಿಂದ ದಕ್ಷ ಸೇರೆಗಾರನೆಂದು ಅವನು ಹೆಸರು ಮಾಡಿದ್ದ. ವೇಷಭೂಷಣ, ಮಾತಿನ ಮರ್ಜಿಗಳಲ್ಲಿ ಎಷ್ಟು ಪೇಟೆಯವನಂತೆ ಅವನು ಕಾಣಿಸಿಕೊಂಡರೂ ಹಣೆಯ ಮೇಲಿದ್ದ ಅಳಿಸಲಾರದ ಮಚ್ಚೆ ಅವನು ಕನ್ನಡ ಜಿಲ್ಲೆಯ ಹಳ್ಳಿಯವನೆಂಬುದನ್ನು ಮುಚ್ಚಿಡಲಾರದಂತೆ ಸಾರುತ್ತಿತ್ತು.

ಒಂದು ದಿನ ಜಗನ್ನಾಥನಿಗೆ ತನ್ನ ವಾರಿಗೆಯ ಈ ಯುವಕನನ್ನು ಮಾತಾಡಿಸಬೇಕೆನ್ನಿಸಿತು. ಆಳುಗಳಿಗೆ ಕೆಲಸ ಹೇಳುತ್ತ ನಿಂತಿದ್ದ ಅವನನ್ನು 'ಬನ್ನಿ' ಎಂದು ಕರೆದ. ಧಣಿಯರು ಕೂಗಿದುದು ಕೇಳಿ ಸೇದುತ್ತಿದ್ದ ಸಿಗರೇಟನ್ನು ಬಿಸಾಡಿ ಬಂದ ಸೆಟ್ಟಿಗೆ,

'ಕೂರಿ' ಎಂದು ತಾನು ಕೂತಿದ್ದ ಮರದ ತುಂಡಿನ ಪಕ್ಕದಲ್ಲಿದ್ದ ಇನ್ನೊಂದು ತುಂಡನ್ನು ತೋರಿಸಿದ.

'ಬೇಡ ಸಾರ್'

ಸೆಟ್ಟಿ ವಿನಯದಿಂದ ನಿಂತೇ ಇದ್ದ. ತಮ್ಮಿಬ್ಬರ ನಡುವಿನ ಗೋಡೆಯನ್ನು ಹೇಗೆ ಒಡೆಯುವುದೆಂದು ತಿಳಿಯದೆ ಜಗನ್ನಾಥ,

'ಪರವಾಗಿಲ್ಲ ಕೂರಿ' ಎಂದ. ಸೆಟ್ಟಿ ಕೂರಲೇ ಇಲ್ಲ.

'ನೀವು ಕೆಲಸ ಹೇಳ್ತಿದ್ದರಲ್ಲ ಶೀನಪ್ಪ – ಅವನಿಗೆಷ್ಟು ಮಕ್ಕಳು ?'

ಶೀನಪ್ಪನನ್ನು ತಾನು ಹಿಡಿದದ್ದು ಸೆಟ್ಟಿಗೆ ತಿಳಿದಿರಬೇಕು. ತನ್ನ ಕಡೆಯ ಆಳು ಸಿಕ್ಕಿಬಿದ್ದನೆಂದು ಅವನಿಗೆ ಭಯವಾಗಿರಬೇಕು.

ತಾನು ಕೇಳಿದ ಪ್ರಶ್ನೆ ಪ್ರಾಯಶಃ ಸರಿಯಲ್ಲವೆನಿಸಿ ಮಾತು ಬದಲಾಯಿಸುವುದರೊಳಗೆ ಸೆಟ್ಟಿ ಹೇಳಿದ:

'ನನ್ನನ್ನ ಏಕವಚನದಲ್ಲೆ ಕರೀರಿ ಸಾರ್.'

'ಏನು ಓದಿದೀರಿ ?'

'ಮಿಡ್ಲ್ ಸ್ಕೂಲು ಮುಗಿಸಿದೀನಿ ಸಾರ್.'

ಜಗನ್ನಾಥ ಮಾತು ಮುಂದುವರಿಸುವುದು ಹೇಗೆ ತಿಳಿಯದೆ ಸುಮ್ಮನಾಗಿದ್ದ. ಸೆಟ್ಟಿಯೇ ಅಂಜುತ್ತ ಹೇಳಿದ್ದ.

'ಶೀನಪ್ಪನಿಗೆ ನಾನೂ ಹೆದರಿಸಿದೀನಿ ಸಾರ್. ಅವನಿಗೆಷ್ಟು ಮಕ್ಕಳೂಂತ ಕೇಳಿದಿರಿ ಸಾರ್. ಮೂರು ಹೆಣ್ಣು ಮೂರು ಗಂಡು. ಮೊದಲನೇಯವಳು ಇಲ್ಲೇ ಕೆಲಸಮಾಡ್ತಾಳೆ, ಗಂಡನನ್ನು ಬಿಟ್ಟು ಬಂದಿದ್ದಾಳೆ. ಎರಡನೇಯವಳು ತೋಟಕ್ಕೆ ಸೊಪ್ಪು ತರತಾಳಲ್ಲ ಕಾವೇರಿ ಅಂತ – ಅವಳು. ಮೂರನೇಯವಳೂ ಇಲ್ಲೆ ಕೆಲಸ ಮಾಡ್ತಾಳೆ. ಗಂಗಪ್ಪನನ್ನ ಬಿಟ್ಟರೆ ಉಳಿದ ಎರಡು ಗಂಡು ಮಕ್ಕಳೂ ಚಿಕ್ಕವು. ಪಾಪ – ಮಕ್ಕಳೊಂದಿಗ, ನೀವಲ್ದೆ ಇದ್ರೆ ಸಾರ್, ಕೆಲಸ ಕಳ್ಕೊಳ್ತಿದ್ದ.'

ಸೆಟ್ಟಿಗೆ ಜಗನ್ನಾಥನ ಕುತೂಹಲ ಸಮಸ್ಯೆಯಾಗಿರಬೇಕು. ಆದರೆ ಶೀನಪ್ಪನ ಸಾಂಸಾರಿಕ ಜೀವನದ ಬಗ್ಗೆ ತಿಳಿಯಬೇಕೆನ್ನುವ ಜಗನ್ನಾಥನ ಉದ್ದೇಶಕ್ಕೆ ಅಪಾರ್ಥ ಕಲ್ಪಿಸಿಕೊಂಡ ಮೇಲೆಯೇ ದೂರವಿದ್ದ ಸೆಟ್ಟಿ ಹತ್ತಿರವಾದ್ದು. ಅವನು ಹತ್ತಿರವಾಗುತ್ತಿದ್ದ ಕ್ರಮ ಜಗನ್ನಾಥನ ಮುಜುಗರಕ್ಕೆ ಕಾರಣವಾದರೂ ಸೆಟ್ಟಿಯ ನಾಲಗೆ ಸಡಿಲವಾಗಲಿ ಎಂದು ಕೌತುಕದಿಂದ ಜಗನ್ನಾಥ ಕಾದ. ಶೀನಪ್ಪನ ಕೌಟುಂಬಿಕ ಜೀವನದ ವಿವರಗಳನ್ನೆಲ್ಲ ಜಗನ್ನಾಥನಿಗೆ ಪ್ರಚೋದಕವಾಗುವಂತೆ ಸೆಟ್ಟಿ ಬಣ್ಣಿಸತೊಡಗಿದ.

ಈ ಶೀನಪ್ಪ ಇರಲಿ. ಇವನ ಅಣ್ಣನೊಬ್ಬ ಸೊಸೆ ಮೇಲೆ ಕಣ್ಣು ಹಾಕಿ ಮನೆ ಬಿಟ್ಟು ಓಡಿಸಿದ್ದನಂತೆ. ಸೊಸೆಯೂ ಅಂಥವಳೆ – ಯಾರಿಗಾದರೂ ಕಾಲೆತ್ತುವ ಪೈಕಿ. ಹೀಗೆ ಸೆಟ್ಟಿ ವರ್ಣಿಸುವಾಗ ತನಗೆ ಮುಜುಗರವಾಗಿಲ್ಲವೆಂದು ತೋರಿಸಿಕೊಳ್ಳಲು 'ಅಯ್ಯೋ ಅಂಥವರು ಬಹಳ ಜನ ಇರ್ತಾರೆ' ಎಂದು ಜಗನ್ನಾಥ ಹೇಳಿದ್ದ. ಸೆಟ್ಟಿಯ ಉತ್ಸಾಹ ಇದರಿಂದ ಹೆಚ್ಚಿತ್ತು. 'ಅದೇನು ಬಿಡಿ ಸಾರ್. ಈ ಶೀನಪ್ಪನ ವಿಷಯ ಕೇಳಿದರೆ ನೀವು ನನ್ನ ಮಾತನ್ನ ಖಂಡಿತ ನಂಬಲ್ಲ. ಅವನು ತನ್ನ ಹಿರೇಮಗಳನ್ನೇ ಇಟ್ಟುಕೊಂಡಿದಾನೆ ಗೊತ್ತ ? ಇಲ್ದೆ ಇದ್ರೆ ಗಂಡನ ಮನೇಂದ ಮಗಳನ್ನು ಯಾಕೆ ಬಿಡಿಸುತ್ತಿದ್ದ ಹೇಳಿ.'

ಹೀಗೆ ಹೇಳಿ ಸೆಟ್ಟಿ ಸಿಗರೇಟು ಹಚ್ಚಿದ್ದ. 'ನೀವು ಯಾಕೆ ಎಳೆಯೋದಿಲ್ಲ ಸಾರ್' ಎಂದಿದ್ದ. ಸೆಟ್ಟಿ ಹೇಳಿದ ವಿಷಯದಿಂದ ತಾನು ಗಾಬರಿಯಾಗಿಲ್ಲವೆಂದು ತೋರಿಸಿಕೊಳ್ಳಲು ಜಗನ್ನಾಥ ಏನೋ ಕೇಳಹೋಗಿ ಇನ್ನೇನೋ ಕೇಳಿದ್ದ:

'ಎರಡನೇ ಮಗಳಿದಾಳಲ್ಲ ಕಾವೇರಿ – ಅವಳಿಗಿನ್ನೂ ಯಾಕೆ ಶೀನಪ್ಪ ಮದುವೆ ಮಾಡಿಲ್ಲ ?'

ಸೆಟ್ಟಿ ನಕ್ಕು ಹೇಳಿದ್ದ, 'ಶೀನಪ್ಪನಿಗೆ ಅತಿ ದುರಾಸೆ ಸಾರ್. ಐನೂರು ರೂಪಾಯಿ ತೆರ ಕೊಡದ ಹಣ್ಣು ಕೊಡಲ್ಲ ಅಂತಾನೆ. ದುಡೀತಾ ಇರೋ ಮಗಳು. ಅಲ್ದೆ ಚೆನ್ನಾಗಿದಾಳೆ. ಗರ್ವ ಸೂಳೇಮಗನಿಗೆ – ಅಷ್ಟೆ.'

ಸೆಟ್ಟಿ ಇಷ್ಟೆ ಸಾಕೆನ್ನುವಂತೆ ಇನ್ನಷ್ಟು ಆಪ್ತನಾಗಿದ್ದ.

'ಒಟ್ಟಿನಲ್ಲಿ ಜನರ ನಡತೆ ಸರಿಯಿಲ್ಲ ಸಾರ್. ದೂರದ ಬೆಟ್ಟ ನುಣ್ಣಗೇಂತ ಅಂತಾರಲ್ಲ ಅದು ನಿಜ ಸಾರ್, ಹತ್ತಿರದಿಂದ ನೋಡಿದ್ರೆ ಗೊತ್ತಾಗತ್ತೆ. ವಿದ್ಯಾ ಬುದ್ಧಿಯಿಲ್ಲದ ಈ ಮುಂಡೇಮಕ್ಳಿಗೆ ಚೂರೂ ಶೀಲ ಅನ್ನೋದೇ ಇಲ್ಲ. ಸ್ವಂತ ಮಗಳನ್ನೆ ಇಟ್ಕೋತಾವೆ. ಸೊಸೇನ್ನ ಇಟ್ಕೋತಾವೆ. ಇನ್ನೊಬ್ಬನ ಹೆಂಡತಿ ಅನ್ನೋ ಧರ್ಮ ಕರ್ಮ ಇಲ್ಲ.'

ಶಾಸ್ತ್ರಿಗೆ ತಾನು ಮಾನಭಂಗ ಮಾಡಿದ್ದ ವಿಷಯಾನ್ನ ಸೆಟ್ಟಿ ಕೇಳಿರಬೇಕು. ಹೇಗೆ ಸುದ್ದಿ ಭಾರತೀಪುರದಲ್ಲಿ ಕಿವಿಯಿಂದ ಕಿವಿಗೆ ದಾಟುತ್ತದೊ ತಿಳಿಯುವುದಿಲ್ಲ. ಶಾಸ್ತ್ರಿಯನ್ನು ಗದರಿಸಿದಾಗ ಹೊರಗೆ ನಿಂತು ಒಬ್ಬ ಆಳು ಆಲಿಸಿರಲಿಕ್ಕೆ ಸಾಕು. ಸೆಟ್ಟಿ ಬಲು ಆಪ್ತಧಾಟಿಯಲ್ಲಿ ಹೇಳಿದ:

'ಶಾಸ್ತ್ರಿಗಳಿಗೆ ಸರಿಯಾದ ಶಾಸ್ತ್ರಿ ಮಾಡಿದ್ರಿ ಸಾರ್. ನೀವು ಬರೋಕೆ ಮುಂಚೆ ಅವರ ಹಾರಾಟ ನೋಡಬೇಕಿತ್ತು. ಅವರೇನು ಕಮ್ಮಿ ಅಂತ ತಿಳ್ಕೊಂಡಿದೀರ ಸಾರ್. ಆ ಅಮ್ಮ ಹೆಸರಿಗೆ ಹೆಂಡತಿ ಅಷ್ಟೆ. ಸ್ವಂತ ಅತ್ತೇನ್ನೆ ಅವರು ಇಟ್ಕೊಂಡಿದಾರೆ ಅಂತ ಊರಲ್ಲೆಲ್ಲ ಮಾತಾಡ್ತಾರೆ. ಹಿರೇಮಗ ಅತ್ತೇಗೇ ಹುಟ್ಟಿದ್ದಂತೆ. ಮಗಳು ಪಾಪ ಬಾಯಿ ಮುಚ್ಚಿಕೊಂಡು ಸಹಿಸ್ಕೊಂಡಿದಾರೆ. ಇನ್ನೇನು ಮಾಡಕ್ಕಾಗುತ್ತೆ ಹೇಳಿ.'

ಜಗನ್ನಾಥ ಸಮಾಧಾನದಿಂದ ಎಲ್ಲವನ್ನೂ ತಾಳಿಕೊಂಡು ಮನೆಗೆ ಬಂದವನೇ ತಲೆ ಕೆಟ್ಟಂತಾಗಿ ಸುಮ್ಮನೇ ಕೂತುಬಿಟ್ಟಿದ್ದ. ಒಳಜೀವನ ನೋಡಹೋದರೆ ಎಲ್ಲರ ಬಾಳೂ ಎಷ್ಟು ಗಂಟು ಗೋಜಲು! ಮಂಜುನಾಥನ ಗರ್ಭದಲ್ಲಿ ಎಷ್ಟೊಂದು ತಾಳಿ ಉಳಿದಿದೆ! ಜೀವನದ ಸಫಲತೆಗೆ ಎಷ್ಟೊಂದು ಒಳದಾರಿಗಳು ಕಳ್ಳದಾರಿಗಳು ಇವೆ!

ಸೆಟ್ಟಿ ಜೊತೆಯ ಆಪ್ತತೆಯಿಂದಾಗಿ ಜಗನ್ನಾಥ ಇನ್ನೊಂದು ಸಂದಿಗ್ಧಕ್ಕೆ ಒಳಗಾದ. ಈ ಮಾತುಗಳನ್ನಾಡಿದ ಮಾರನೇ ದಿನ ತನ್ನ ರೂಮು ಗುಡಿಸಲು ತಿಮ್ಮಿಯ ಬದಲು ಶೀನಪ್ಪನ ಎರಡನೇ ಮಗಳು ಕಾವೇರಿ ಬಂದಿದ್ದಳು. ಮೈಕೈ ತುಂಬಿದ ಹುಡುಗಿ ತೊಡೆಗಳು ಕಾಣುವಂತೆ ತುಂಡುಟ್ಟು ತಲೆಯ ಗಂಟಿನಲ್ಲಿ ಗುಲಾಬಿ ಮುಡಿದಿದ್ದಳು. ವಯ್ಯಾರದಿಂದ ಬಗ್ಗಿ ಮಂಚದ ಬುಡದಲ್ಲಿ ಗುಡಿಸಿದ್ದಳು. ತೋಟದ ಕೆಲಸ ನೋಡುತ್ತಿದ್ದಾಗ ಅದೇ ಬೆಡಗಿನಲ್ಲಿ ಜೊತೆಗಾರ್ತಿಯರ ಹತ್ತಿರ ಮಾತಾಡುತ್ತ ಅನಾವಶ್ಯಕವಾಗಿ ಸೆರಗು ಸರಿಪಡಿಸಿಕೊಂಡಿದ್ದಳು.

ಜಗನ್ನಾಥನಿಗೆ ಅವಳ ಬಗ್ಗೆ ಆಸೆಯಾಗಿತ್ತು ಆದರೆ ತನ್ನ ವರ್ಗದವಳೊಬ್ಬಳ ಬಗ್ಗೆ ಆಸೆಯಾಗಿದ್ದೆ ಹೇಗೆ ವರ್ತಿಸಬೇಕೆಂದು ಗೊತ್ತಿದ್ದಂತೆ ಈಗ ತಿಳಿದಿರಲಿಲ್ಲ. ಅವಳ ಜೊತೆ ಕ್ಷಣಿಕವಾದ ಮೈಸಂಬಂಧಕ್ಕಿಂತ ಆಚಿನದೇನೂ ಸಾಧ್ಯವಿರಲಿಲ್ಲ. ಆದರೆ ಕಾಮಕ್ಕೆ ಉಪಯೋಗಿಸುವ ಬರಿಯೊಂದು ವಸ್ತುವಿಗಿಂತ ಹೆಚ್ಚಿನ ವಾಸ್ತವತೆ ತಮ್ಮ ನಡುವೆ ಹುಟ್ಟಲಾರದು; ತಾನು

ಕಾವೇರಿಯನ್ನು ಕೂಡಿದರೆ ಅದು ಮಾನವೀಯ ಸಂಬಂಧವಾಗಲಾರದು. ಇಷ್ಟೊಂದು ಆಸೆ ಹುಟ್ಟಿಸಬಲ್ಲ ಮೈ ಹೇಗೆ ತನಗೆ ನಿಜವಾಗಿಯೂ ಅತೀತವಾದ್ದೆಂಬುದು ವರ್ಗಭೇದದ ದುರಂತವನ್ನು ಅವನಿಗೆ ಮನದಟ್ಟು ಮಾಡಿಸಿತು. ಆದರೂ ಅವಳು ರೂಮಿಗೆ ಕಸಗುಡಿಸಲು ಬಂದಾಗಲೆಲ್ಲ ಮೈ ಬೆಚ್ಚಗಾಗಿ ಹೆದರಿಕೆಯಾಗುತ್ತಿತ್ತು.

ಒಂದು ದಿನ ಅವಳು ರೂಮಿಗೆ ಬಂದಾಗ ಜಗನ್ನಾಥ ಕನ್ನಡಿಯೆದುರು ಕೂತು ಕ್ಷೌರ ಮಾಡಿಕೊಳ್ಳುತ್ತಿದ್ದ. ಅವನ ಹಿಂದುಗಡೆ ಟ್ರಂಕಿನ ಮೆಲೆ ಹತ್ತುರೂಪಾಯಿಯ ನೋಟಿತ್ತು. ಕನ್ನಡಿಯಲ್ಲಿ ಅದು ಕಾಣಿಸುತ್ತಿತ್ತು. ಬಹಳ ಸಡಗರದಿಂದ ಕಸಗುಡಿಸುತ್ತಿದ್ದ ಕಾವೇರಿ ನೋಟಿನ ಹತ್ತಿರ ಹೋಗಿ ಎರಡು ಸಾರಿ ಕ್ಷಣ ನಿಂತು ಆಮೇಲೆ ಟ್ರಂಕಿನ ಸುತ್ತ ಗುಡಿಸಿದ ಜಾಗವನ್ನೆ ಮತ್ತೆ ಗುಡಿಸಿದ್ದನ್ನು ನೋಡಿದ. ಜಗನ್ನಾಥ ಪರವಶನಾಗಿ ಅವಳೇನು ಮುಂದೆ ಮಾಡುತ್ತಾಳೆಂಬುದನ್ನು ನಿರೀಕ್ಷಿಸುತ್ತ ಮುಖಕ್ಕೆ ಸೋಪುಹಚ್ಚಿಕೊಂಡ. ಕಾವೇರಿ ಮೂರನೇ ಸಾರಿ ಬಗ್ಗಿದಳು. ಕನ್ನಡಿ ಕಡೆ ನೋಡಿದಳು. ತನ್ನ ಗುಪ್ತ ಸಮ್ಮತಿಯನ್ನು, ಅವಳು ಕಲುಷಿತಳಾಗುವುದನ್ನು ನೋಡಲು ತನಗಿದ್ದ ಆಸೆಯನ್ನು ಕನ್ನಡಿಯಲ್ಲಿ ಕಂಡ ತನ್ನ ಮುಖದಿಂದ ಅವಳು ಊಹಿಸಿದಳೆ ? ಖಂಡಿತ ಅವಳಿಗೆ ತಾನೆಲ್ಲವನ್ನು ನೋಡುತ್ತಿದ್ದೇನೆಂಬುದು ತಿಳಿದಿರಲೇಬೇಕು. ಕೈ ಮುಖಕ್ಕೆ ಸೋಪುಹಚ್ಚುತ್ತಿದ್ದರೂ ತನ್ನ ಕಣ್ಣುಗಳು ಪರವಶವಾಗಿ ಅವಳ ಕೈಗಳನ್ನೇ ನೋಡುತ್ತಿದ್ದುದು ಅವಳಿಗೆ ಕಾಣಿಸಿರಲೇಬೇಕು. ನೋಟನ್ನೆತ್ತಿಕೊಂಡು ಬಹಳ ಸರಾಗವಾಗಿ ಸೊಂಟಕ್ಕೆ ಸಿಕ್ಕಿಸಿಕೊಂಡಳು. ಹಾಗೆ ಸಿಕ್ಕಿಸಿಕೊಳ್ಳುವಾಗ ಸೆರಗನ್ನು ಸಂಪೂರ್ಣ ಜಾರಲು ಬಿಟ್ಟು ಮೊಲೆಗಳನ್ನು ತೋರಿಸಿದಳು. ಸೆರಗನ್ನು ಹಾಗೆಯೇ ಇಳಿಬಿಟ್ಟು ಗುಡಿಸುತ್ತ ಹತ್ತಿರ ಬಂದಳು. ತಾನು ಕೂತಿದ್ದ ಕುರ್ಚಿಯ ಕೆಳಗಗೆ ಗುಡಿಸುವ ನೆವದಲ್ಲಿ ಎಡಭಾಗದ ಮೊಲೆಯನ್ನು ತನ್ನ ತೊಡೆಗೆ ಒತ್ತಿದಳು. ನಂತರ ತಾನು ಕನ್ನಡಿಯಿಟ್ಟ ಕಿಟಕಿಯ ಧೂಳು ಹೊಡೆಯುವ ನೆವದಲ್ಲಿ ತನ್ನ ಬೆನ್ನಿನ ಹಿಂದೆ ನಿಂತು ಮೈ ತಾಕುವಂತೆ ಬಗ್ಗಿದಳು. ಪುಷ್ಟವಾದ ಮೊಲೆ ಕೆನ್ನೆಯನ್ನು ಒತ್ತಿತು.

ಜಗನ್ನಾಥ ಸುಮ್ಮನೇ ಕೂತು. ಈಗ ಬಿರಿದುಕೊಂಡುಬಿಡಬಹುದಾದ ಮುಹೂರ್ತ ಭವಿಷ್ಯದಲ್ಲಿ ಬರಿ ಶೂನ್ಯವಾಗಿ ಕೊನೆಯಾಗುತ್ತದೆಂಬ ಜ್ಞಾನ ಅವನನ್ನು ನಿರ್ವೀರ್ಯನನ್ನಾಗಿ ಮಾಡಿತು. ಕಾಮದ ಆಸ್ಫೋಟ ಮುಚ್ಚಲಾರದ ಅಂತರ ನಮ್ಮ ನಡುವಿದೆ, ಕ್ಷಮಿಸು ಎಂದು ಹೇಳಬೇಕೆನ್ನಿಸಿ, ಆದರೆ ಹೇಳಲಾರದೆ, ಬೆವರುತ್ತ ಕೂತ. ಮತ್ತೊಮ್ಮೆ ಮಾರ್ಗರೆಟ್ ಜೊತೆ ಸೇಬಿನ ಮರದ ಕೆಳಗೆ ಅನ್ನಿಸುತ್ತಿದ್ದಂತೆಯೇ ಸೋತೆ ಎನ್ನಿಸಿತು. ನಾನು ನಿಜವಲ್ಲ ಎನ್ನಿಸಿತು. ಕಾವೇರಿ ಹಾಗೇ ವಯ್ಯಾರದಲ್ಲಿ ನಡೆಯುತ್ತ ರೂಮಿನಿಂದ ಹೊರಗೆ ಹೋಗಿಬಿಟ್ಟಿದ್ದಳು. ಜಗನ್ನಾಥ ಚೇತರಿಸಿಕೊಂಡು ಎದ್ದು ನಿಂತು ಸೀದಾ ಸ್ನಾನದ ಮನೆಗೆ ಹೋಗಿ ಮುಖ ತೊಳೆದುಕೊಂಡಿದ್ದ.

ಮಾರಬೇ ದಿನದಿಂದ ಕಾವೇರಿ ಕಸ ಗುಡಿಸಲು ಬರುವಾಗ ಜಗನ್ನಾಥ ರೂಮಿನಲ್ಲಿರುತ್ತಿರಲಿಲ್ಲ. ತನ್ನನ್ನು ಮಾತಾಡಿಸಲು ಬರುತ್ತಿದ್ದ ಸೆಟ್ಟಿಯಿಂದ ದೂರವಿರಲು ಪ್ರಯತ್ನಿಸಿದ. ಜನರನ್ನು ತಿಳಿಯಲು ಹೊರಡುವುದೆಂದರೆ ಅವರ ಸಂಬಂಧಗಳ ಗೋಜಲುಗಳಲ್ಲೆಲ್ಲ ಸಿಕ್ಕಿಹಾಕಿಕೊಂಡಂತೆ. ಅವರನ್ನು ಅತ್ಯಂತ ಮೂರ್ತವಾಗಿ ಗ್ರಹಿಸಲು ಹೋದರೆ, ದುರ್ಬೀನಿನಲ್ಲಿ ಚರ್ಮವನ್ನು ನೋಡಿದಂತೆನಿಸಿ ಏನೇನೋ ಕಾಣಲು ಶುರುವಾಗಿ ಮುಷ್ಟಿಗ್ರಾಹ್ಯವಾದ್ದೇನೂ ತಿಳಿಯದಂತಾಗಿಬಿಡುತ್ತದೆ. ಅವರನ್ನು ದೂರದಿಂದ ನೋಡಿ ಗ್ರಹಿಸಿದಾಗ ಮಾಡಲೇ ಬೇಕೆನ್ನಿಸುವ ರಾಜಕೀಯ ಕ್ರಿಯೆ, ಹತ್ತಿರದಿಂದ ನೋಡಿದಾಗ ಸಾಧ್ಯವಿಲ್ಲವೆನ್ನಿಸಿ, ಅಥವಾ ನಿಷ್ಪ್ರಯೋಜಕವೆನ್ನಿಸಿ ದಿಗ್ಭ್ರಾಂತರಾಗಿಬಿಡುತ್ತೇವೆ. ಮಗಳನ್ನು ಇಟ್ಟುಕೊಂಡ ಅಪ್ಪ, ಸೊಸೆಯನ್ನಿಟ್ಟುಕೊಂಡ ಮಾವ, ಅತ್ತೆ ಜೊತೆ ಮಲಗುವ ಅಳಿಯ, ಹೆಂಡತಿಯನ್ನು ಬಡಿಯುವ ಗಂಡ, ಈ ದೌರ್ಬಲ್ಯ, ಈ

ರೋಷ, ಈ ಸಣ್ಣತನ, ಈ ದಿನನಿತ್ಯದ ಸುಖದುಃಖ- ಇವುಗಳನ್ನೆಲ್ಲ ನೋಡಿದಾಗ ಐತಿಹಾಸಿಕ ಪರಿವರ್ತನೆಗಳೆಲ್ಲ ಮೇಲು ಮೇಲಿನ ಘಟನೆಗಳೆನ್ನಿಸಿ ಆಳದಲ್ಲಿ ಏನೂ ಯಾವತ್ತೂ ಬದಲಾಗುವುದಿಲ್ಲವೆನ್ನಿಸಿಬಿಡುತ್ತದೆ. ನಿತ್ಯದ ಬದುಕಿನಲ್ಲಿ ನಾವು ಪಡುವ ಸುಖದುಃಖಗಳ ಸ್ವರೂಪ ಸರ್ವಕಾಲಕ್ಕೂ ಹೀಗೇ ಉಳಿಯುವಂಥದ್ದಾದರೆ, ಈ ಹಗಲು ರಾತ್ರೆಯ ಭ್ರಮಣ ಹೀಗೇ ಸಾಗಿದರೆ ಏನು ಮಾಡಿ ಏನು ಸಾಧಿಸಿದ ಹಾಗಾದೀತು ? ನನ್ನಲ್ಲಿ ಆಸೆಯನ್ನು ಕೊರೆದು ನನ್ನನ್ನು ನಿರ್ವಿಣ್ಣನಾಗಿ ಮಾಡಿಹೋದ ಕಾವೇರಿಯಂಥವರ ಬದುಕನ್ನು ಬದಲಾವಣೆಯ ಮೂಲಕ ಉತ್ತಮಪಡಿಸಬಲ್ಲೆನೆಂದು ನಾನು ಯಾಕೆ ತಿಳಿಯಲಿ ?

ಬಹಳ ದಿನ ಮತ್ತೆ ಜಗನ್ನಾಥ ದಿಕ್ಕು ತೋರದೆ ಯೋಚಿಸಿದ. ತೋಟವನ್ನು ಊರ್ಜಿತಗೊಳಿಸಿಸುವ ಕೆಲಸದಲ್ಲಿ ಆಸಕ್ತಿ ಮಾಯವಾಯಿತು. ಜನರ ಒಳ ಜೀವನವನ್ನು ತಿಳಿಯುವ ಕುತೂಹಲ ತನ್ನನ್ನೆಲ್ಲೆಲ್ಲೋ ಕೊಂಡೊಯ್ಯುತ್ತಿದೆ ಎಂದು ಗಾಬರಿಯಾಯಿತು. ಜೀವನ ಒಟ್ಟಿನಲ್ಲಿ ನಿರರ್ಥಕ, ಈ ನಿರರ್ಥಕತೆಯನ್ನು ಅರಿಯುವುದಷ್ಟೆ ನಾವು ಮಾಡಬಹುದಾದ್ದು ಎನ್ನುವ ತನ್ನ ಹಿಂದಿನ ಆಲಸ್ಯದ ಜೀವನದ ನೆನಪಾಗಿ ಮತ್ತೆ ತಾನು ಅದೇ ತೀರ್ಮಾನಕ್ಕೆ ಬರುತ್ತಿದ್ದೇನೆನ್ನಿಸಿ ಇನ್ನಷ್ಟು ಗಾಬರಿಯಾಯಿತು. ಸಮಾಜದ ಒಳಗಿದ್ದೇ ಈ ವಾಸ್ತವವನ್ನು ಮೂಲಭೂತವಾಗಿ ಬದಲಾಯಿಸಬಲ್ಲ ಕ್ರಿಯೆಯಲ್ಲಿ ನಾನು ತೊಡಗದಿದ್ದಲ್ಲಿ ಸತ್ತರೂ ಒಂದೆ ಇದ್ದರೂ ಒಂದೆ ಎಂಬ ಭಾವನೆ ದೃಢವಾಯಿತು.

ಒಂದು ಸಂಜೆ ದೇವಸ್ಥಾನದ ಹಿಂದಿದ್ದ ಕಲ್ಲುಬಂಡೆಗಳ ಮೇಲೆ ಕೂತಿದ್ದ. ಸಂಜೆಯ ಹೊತ್ತು. ರಾಷ್ಟ್ರಪತಿಗಳು ಬಂದು ಹೋಗಿಯಾಗಿತ್ತು. ಇದ್ದಕ್ಕಿದ್ದಂತೆ ಸಾಯಂಕಾಲದ ಪೂಜೆಯ ಗಂಟೆಯ ಶಬ್ದಗಳು ಕೇಳಿಸಿದುವು. ಆಗ ಥಟ್ಟನೇ ಜಗನ್ನಾಥನಿಗೆ ಅನ್ನಿಸಿತು. ಹೊಲೆಯರನ್ನು ಒಳಗೆ ಕರೆದುಕೊಂಡು ಹೋಗಬೇಕು. ಶತಮಾನದ ವಾಸ್ತವವನ್ನು ಹೆಜ್ಜೆಯಲ್ಲಿ ಬದಲಿಸಬೇಕು. ಮಂಜುನಾಥನನ್ನು ಮುರಿಯಬೇಕು. ತಮ್ಮ ಜೀವನಕ್ಕೆ ತಾವು ಜವಾಬ್ದಾರರಾಗುವಂತಹ ಸಂಕಟಕ್ಕೆ ಜನರನ್ನು ಒಳಪಡಿಸಬೇಕು.

ಎದ್ದು ಸೀದ ಮನೆಗೆ ವೇಗವಾಗಿ ನಡೆದುಬಂದಿದ್ದ. ಹತ್ತು ಹೊಲೆಯರ ಯುವಕರನ್ನು ಆರಿಸಿ ಅವರ ಜೊತೆ ನಿಧಾನವಾಗಿ ಮಾತಾಡಲು ಪ್ರಾರಂಭಿಸಿದ್ದ.

* * *

ಆವತ್ತಿನಿಂದ ಪ್ರತಿ ಸಂಜೆ ದೂರದಲ್ಲಿ ನೆರಳುಗಳು ಕಾಣಿಸುವುವು; ಹತ್ತಿರವಾಗುವುವು; ಒಡೇರೇ ಎನ್ನುವುವು. ಜಗನ್ನಾಥ ಬನ್ನಿ ಎನ್ನುವನು. ಅವು ಅಂಗಳದಂಚಿಗಷ್ಟೇ ಬಂದು ನಿಲ್ಲುವುವು. ಜಗನ್ನಾಥ ಮಾತಾಡುವನು. ಹೇಳುವನು. ಯೋಚಿಸಿ, ನಿಶ್ಚಯಿಸಿ, ಜವಾಬ್ದಾರಿಯಿಂದ ವರ್ತಿಸಿ. ಆದರೆ ಮಾತುಗಳಿನ್ನೂ ನಿಜವಾಗಿರಲಿಲ್ಲ. ಜಗನ್ನಾಥ ಹಗಲು ರಾತ್ರೆ ಒತ್ತರಿಸಿ ಯೋಚಿಸುವನು, ಹೇಗೆ ನಿಜ ಮಾಡಲಿ ? ಅವರು ಒಪ್ಪಿ ಈ ಮಾತುಗಳೆಲ್ಲ ನಿಜವಾಗುವಂತೆ, ಕ್ರಿಯೆಯಾಗುವಂತೆ ಮಾಡಲು ಏನು ಮಾಡಲಿ ? ಮಂಜುನಾಥನ ಗರ್ಭದಿಂದ ಹೇಗೆ ಸೀಳಿ ಹೊರಬರಲಿ ? ಬರಿಸಲಿ ?

ಯಥಾಪ್ರಕಾರ ಮಾರನೆ ಬೆಳಿಗ್ಗೆ ನಸುಕಿನಲ್ಲೆ ಎದ್ದು ಜಗನ್ನಾಥ ತನ್ನ ಮನೆಯ ಹಿಂದೆ ನಡೆದ, ಗುಡ್ಡದ ಮೇಲೆ ಮನೆ. ಮನೆಯ

ಹಿಂದೆ ಇನ್ನೊಂದು ಗುಡ್ಡ. ತನಗೆ ಸೇರಿದ ಗೇರುತೋಟವಿರುವ ಗುಡ್ಡ. ಅರ್ಧಕ್ಕರ್ಧ ಗೇರು ಬೀಜ ಕಳುವಾಗುತ್ತಿತ್ತೆಂದು ಜಗನ್ನಾಥನಿಗೆ ಗೊತ್ತು.

ಗೇರುಗುಡ್ಡದ ನೆತ್ತಿಗೇರಿ ಬೆಳಗಿನ ಹೊತ್ತು ಭಾರತೀಪುರ ನೋಡುವುದೆಂದರೆ ಅವನಿಗೆ ಖುಷಿ. ದಟ್ಟ ಹಸಿರಿನ ಹಲಸಿನ ಮರಗಳು, ಈ ಕಾಲದಲ್ಲೂ ಹೂ ಬಿಡುವ ಮಾವಿನ ಮರಗಳು, ಕಣಿವೆಗಳಲ್ಲಿ ಓಲಾಡುತ್ತ ನಿಂತಿರುವ ಅಡಿಕೆ ತೋಟಗಳ, ಈ ಮಧ್ಯೆ ಹೆಂಚಿನ ಮನೆಗಳು. ಹಳ್ಳಿಯೂ ಅಲ್ಲ ಪಟ್ಟಣವೂ ಅಲ್ಲದ ಊರು. ಪೂರ್ವದಿಕ್ಕಿಗೆ ಸರ್ಪದಂತೆ ವಕ್ರವಾಗಿ ಹರಿಯುವ ಹೊಳೆ, ಪಕ್ಕಕ್ಕೆ ಮಂಜುನಾಥನ ಗುಡಿಯ ಗೋಪುರ. ಯಾವ ಎತ್ತರದ ಪ್ರದೇಶದಿಂದಲೂ ಕಾಣುತ್ತದೆ. ಬಿಸಿಲು ಮಳೆಯಲ್ಲಿ ಸೋಕಿ, ಹಕ್ಕಿಗಳಿಗೆ ಗೂಡಾಗಿ ಹಳೆಯದಾದ್ದು. ಗುಡಿಯ ಪಕ್ಕಕ್ಕೇ ಭೂತರಾಯನ ಗುಡ್ಡ – ಮುಟ್ಟುನಿಲ್ಲದ ಹೆಂಗಸು ಈ ಗುಡ್ಡ ಹತ್ತಿ ಭೂತರಾಯನ ಗುಡಿಗೆ ಹೋಗುವಂತಿಲ್ಲ.

ಅಮಾವಾಸ್ಯೆ ಜಾತ್ರೆಗೆ ಸುಮಾರು ಇನ್ನೊಂದು ತಿಂಗಳಿದೆ. ಅಷ್ಟರಲ್ಲಿ ತಾನೂ ಹೊಲೆಯರೂ ಸಿದ್ಧರಾಗಿರಬೇಕು. ಇಡೀ ದೇಶದಿಂದ ಭಕ್ತರು ಬಂದಿರುತ್ತಾರೆ. ನಾಳೆ ನಾಡಿದ್ದರಲ್ಲಿ ಪತ್ರಿಕೆಗಳಲ್ಲಿ ನನ್ನ ಕಾಗದ ಬರುತ್ತೆ; ರಾಯರಿಗೆ ಇವತ್ತೇ ತಿಳಿಸಿಬಿಡುವುದು.

ಜಗನ್ನಾಥ ಗುಡ್ಡದ ನೆತ್ತಿಯ ಮೇಲೆ ಓಡಾಡಿದ. ಚಳಿಯೆಂದು ಕತ್ತು ಮುಚ್ಚುವ ಕಂದು ಬಣ್ಣದ ಸ್ವೆಟರ್ ಹಾಕಿದ್ದ. ಮಾರ್ಗರೆಟ್ ಕೊಂಡುಕೊಟ್ಟ ಸ್ವೆಟರ್. ಇಡೀ ಭಾರತೀಪುರವನ್ನೇ ಕವಿದಿದ್ದ ಹಿಮ ಬೆಳಗಿನ ಸೂರ್ಯನ ಶಾಖಕ್ಕೆ ಕರಗುತ್ತಿತ್ತು. ಗೇರು ಗುಡ್ಡದ ನೆತ್ತಿಯಿಂದ ಊರು ಸುಂದರವಾಗಿ ಕಾಣುತ್ತದೆ. ಹೊಳೆಯುವ ಹೆಂಚಿನ ಮನೆಗಳು, ಹಸಿರು, ಬಿಸಿಲು ಬಿದ್ದಲ್ಲಿ ಕನ್ನಡಿಯಾದ ಹೊಳೆ. ಗುಡ್ಡದ ಮೇಲೆ ಹಸಿರುಹುಲ್ಲುಗಳಲ್ಲಿ ಕಟ್ಟಿಕೊಂಡ ಪುಟಾಣಿ ಜೇಡರ ಬಲೆಗಳ ಮೇಲೆ ಮಂಜಿನ ತುಂತುರು; ಬಿಸಿಲಿನ ಕೋಲಿಗೆ ಒಡ್ಡಿಕೊಂಡ ಕೋನಗಳಲ್ಲಿ ಈ ತುಂತುರು ಹೊಳೆಯುವ ರತ್ನಗಳು; ಗುಡ್ಡ ಇಳಿದು ಬೀದಿಯಲ್ಲಿ ನಡೆದಾಗ ಮಾತ್ರ ಮಂಜುನಾಥನ ದಾಸೋಹದಲ್ಲಿ ಹೊಟ್ಟೆ ಮಾತ್ರ ಬೆಳೆದ ಬಡಕಲು ಜನ; ಬಸ್ ಬಂದರೂ ಬೀದಿ ಬಿಟ್ಟೇಳದ ಪುಷ್ಟ ನಾಯಿಗಳು, ದೇವಸ್ಥಾನದ ಅಶ್ವತ್ಥಮರದಲ್ಲಿ ಕೈಯಿಂದ ನಿರ್ಭಯವಾಗಿ ಬಾಳೆಹಣ್ಣನ್ನು ಇಸಕೊಳ್ಳುವ ಕೋತಿಗಳು. ಆಕಾಶದಲ್ಲಿ ಮಾತ್ರ ಸದಾ ಆರೋಗ್ಯ ತುಂಬಿದ ಪಕ್ಷಿಗಳು. ಮೇಲಿನಿಂದ ನೋಡಿದಾಗ ಕಾಣುವುದೇ ಬೇರೆ; ಮೂತ್ರದ ವಾಸನೆ ಬರುವ ಬೀದಿಗಳಲ್ಲಿ ನಡೆದಾಗ ಅನ್ನಿಸುವುದೇ ಬೇರೆ.

ಗುಡ್ಡ ಇಳಿದು ಬರುವಾಗ ಪ್ರಭುಗಳೂ ನಡೆಸುತ್ತಿದ್ದ ಮಂಜುನಾಥ್ ಬಸ್ ಸರ್ವಿಸ್ಸಿನ ಮೊದಲನೇ ಬಸ್ಸು ಶಿವಮೊಗ್ಗಕ್ಕೆ ಹೋಗುತ್ತಿರುವುದು ಕಾಣಿಸಿತು. ಓಡುತ್ತೋಡುತ್ತ ಗುಡ್ಡ ಇಳಿದ. ಮೈ ಬೆಚ್ಚಗಾಗಿತ್ತು. ಸ್ನಾನ ಮಾಡಿ ಊಟದ ಮನೆಗೆ ಬಂದ. ಸುಮಾರು ಇಪ್ಪತ್ತು ಬಾಳೆಲೆಗಳು ಎದುರು ಕೆಲವು ಪರಿಚಿತರು ಹಲವು ಅಪರಿಚಿತರು ಕೂತಿದ್ದರು. ಮಂಜುನಾಥನ ದರ್ಶನಕ್ಕೆ ಎಲ್ಲೆಲ್ಲಿಂದಲೋ ಹಾಜರಾದ ಜನ. ಬಡವರೆಲ್ಲ ಬರುವುದು ತನ್ನ ಮನೆಗೆ, ಅಥವಾ ತನ್ನ ಹಿರಿಯರು ಕಟ್ಟಿಸಿದ ಛತ್ರಕ್ಕೆ. ದುಡ್ಡಿರುವ ಜನರನ್ನು ದಾರಿಯ ಮೇಲೇ ಊರಿನ ಬ್ರಾಹ್ಮಣರು ಬುಕ್ ಮಾಡಿರುತ್ತಾರೆ.

ಅವಲಕ್ಕಿ ಉಪ್ಪಿಟ್ಟು ತಿಂದು ಕಾಫಿಕುಡಿದು ಜಗನ್ನಾಥ ಪೇಟೆಗೆ ಹೊರಟ. ರಾಯರನ್ನು ನೋಡಿ ಹೇಳಿಯೇ ಬಿಡುವುದೆಂದು.

ನೀವು ಕುಗ್ಗಿದ್ದೀರಿ. ಈ ಮೂಲಕ ನಿಮಗೂ ಚೈತನ್ಯ ಬಂದೀತು. ಊರಿಗೂ ಹೊಸ ಜೀವ ಬಂದೀತು. ಹೊಲೆಯರು ಇಡಬಹುದಾದ ಮೊದಲನೇ ಹೆಜ್ಜೆಯಲ್ಲಿ ನಾವೆಲ್ಲ ಸತ್ತು ಹುಟ್ಟುತ್ತೇವೆ. ಇಲ್ಲವಾದರೆ ಮಂಜುನಾಥನ ಕೂಪದಲ್ಲಿ ಹೀಗೇ ಕಂತುತ್ತಲೇ ಇರುತ್ತೇವೆ. ಊರು ಶತಮಾನಗಳಿಂದ ಕೊಳೀತಿದೆ ಎಂದು ನಿಮಗನ್ನಿಸುವುದಿಲ್ಲವೆ ರಾಯರೆ. ಇಷ್ಟಕ್ಕೆಲ್ಲ ಮಂಜುನಾಥನೇ ಹೇಗೆ ಕಾರಣ ಎಂದು ವಾದದಲ್ಲಿ ನಾನು ಒಪ್ಪಿಸಲಾರೆ; ಕ್ರಿಯೆಯಿಂದ ಮಾತ್ರ ನಮಗಿದು ಸಿದ್ಧವಾಗಿಬೇಕು. ಸಮಾಜ ಜೀವನ ಅರ್ಥಹೀನವಾಗಿದೆ; ಯಾಕೆಂದರೆ ಸಮಾಜದ ಒಳಗೆ ಕ್ರಿಯೆಯೇ ಸಾಧ್ಯವಾಗಿಲ್ಲ -ಉಣ್ಣುವುದು, ಸಂಭೋಗಿಸುವುದು, ಸಾಯುವುದು ಬಿಟ್ಟು, ಚಕ್ರಕ್ಕೆ ಕೈ ಹಚ್ಚಿ; ತಿರುಗಿಸೋಣ; ರಥೋತ್ಸವದ ದಿನವೆ.

ಈಚೆಗೆ ತನಗೇ ತಾನು ತುಂಬ ಮಾತಾಡಿಕೊಳ್ಳುತ್ತಿದ್ದೇನೆ ಎನ್ನಿಸಿತು ಜಗನ್ನಾಥನಿಗೆ. ಹೊಲೆಯರ ಹತ್ತಿರ ಮಾತಾಡುವುದು ಸಾಧ್ಯವಾದರೆ ಇದು ನಿಂತೀತು. ದಾರಿಯುದ್ದಕ್ಕೂ ಯಾಂತ್ರಿಕವಾಗಿ ನಮಸ್ಕಾರ ಮಾಡುತ್ತ ನಡೆದ. ಚಾವಡಿಯಲ್ಲಿ ಕೂತಿದ್ದ ನಾಗರಾಜ ಜೋಯಿಸರನ್ನು ನೋಡಿದರೂ ನೋಡದಂತೆ ಮುಂದೆ ಹೋದ. ಸೀದ ರಥ ಬೀದಿಯಲ್ಲಿದ್ದ ರಾಯರ ಮನೆ ಕಡೆಗೆ.

ರಥಬೀದಿಗೆ ತಿರುಗುವಲ್ಲಿ ತರಕಾರಿ ಅಂಗಡಿ, ಅಂದರೆ ಬರೀ ಬಣ್ಣದ ಸೌತೇಕಾಯಿ, ಕುಂಬಳಕಾಯಿ, ಚೀನೀಕಾಯಿ, ತೆಂಗು, ವಾಟಬಾಳೆ, ಕರಿಬಾಳೆ, ತೊಂಡಕಾಯಿ, ಕಲ್ಯಾಣ ಬಾಳೆ ಕಾಯಿ ಮಾರುವ ಅಂಗಡಿ. ಜಗನ್ನಾಥನಿಗೆ ಊರಿಗೆ ಬಂದಾಗಿನಿಂದ ಅನ್ನಿಸಿದೆ. ಈ ನೆಲದಲ್ಲಿ ಇನ್ನೇನು ಬೆಳೆದೀತೆಂದು ಯಾರೂ ಪ್ರಯತ್ನಿಸಿಲ್ಲ. ಅಡಿಕೆ ಧಾರಣೆ ಏರಿದ್ದೇ ಭತ್ತದ ಗದ್ದೆಗಳನ್ನೂ ಅಡಿಕೆ ತೋಟವಾಗಿ ಪರಿವರ್ತಿಸಲು ಶುರುಮಾಡಿದರು. ನೆಲದ ಸಾರ ಸರ್ವಸ್ವವೆಲ್ಲ ಗೋಟೂ ಅಡಿಕೆಗಳಾದವು. ಒಂದು ಕಡೆ ಮಂಜುನಾಥ, ಇನ್ನೊಂದು ಕಡೆ ಅಡಿಕೆ – ಇನ್ನೇನೂ ಅರಳದ ನೆಲ. ಆಶ್ಚರ್ಯವೆಂದರೆ ತರಕಾರಿಯಂಗಡಿಯಲ್ಲಿ ಒಂದು ಒಣಗುತ್ತಿದ್ದ ಕಾಲಿಫ್ಲವರ್ ಇತ್ತು. ಜಗನ್ನಾಥ ಕುತೂಹಲದಿಂದ ಅಂಗಡಿಯ ಬ್ಯಾರಿಯನ್ನು ಕೇಳಿದ : ಎಲ್ಲಿ ಬೆಳೆದದ್ದು ಇದು ? ಬಣ್ಣದ ಮುಂಡು ಉಟ್ಟಿದ್ದ ಬ್ಯಾರಿ ಗೌರವದಿಂದ ಎದ್ದು ನಿಂತು ಎಲೆಯಡಿಕೆ ಉಗುಳಿ ಬಂದು, ತಲೆಗೆ ಸುತ್ತಿದ್ದ ವಸ್ತ್ರವನ್ನು ಹೆಗಲಿಗೆ ಹಾಕಿಕೊಂಡು ತಬ್ಬಿಬ್ಬಾದ. ಕೂಡಲು ಬೆಂಚು ತೋರಿಸುವುದು ಸರಿಯೆ ಎಂದು ತಿಳಿಯದೆ ನಿಂತ ಬ್ಯಾರಿಗೆ ಜಗನ್ನಾಥ ನಸುನಗುತ್ತ,

'ಈ ಕಾಲಿಫ್ಲವರ್ ಭಾರತೀಪುರಕ್ಕೆ ಹೇಗೆ ಬಂತು ಅಂತ ಕೇಳಿದೆ' ಎಂದು ಮತ್ತೆ ಹೇಳಿದ.

'ಶಿವಮೊಗ್ಗದಿಂದ ಒಂದೊಂದು ಸಾರಿ ತರಿಸ್ತೀನಿ ಧಣಿಯರೆ, ಇದು, ಬಟಾಣಿ, ಕ್ಯಾರೇಟ್ – ಪುರಾಣಿಕರ ಪೈಕಿ ಜನ ಕೊಳ್ಳೋದು ಉಂಟೆ ಶಿವಾಯಿ ಬೇರೆ ಯಾರೂ ಇವನ್ನ ತಿನ್ನಲ್ಲ.'

ಜಗನ್ನಾಥನ ಮುಖದಲ್ಲಿ ನಗು ಅರಳಿತ್ತು. 'ಆಗಲಿ. ಒಳ್ಳೇದು' ಎಂದು ಮುಂದೆ ನಡೆದ. ಬ್ಯಾರಿ ಅಂಗಡಿಯ ಮಹಡಿ ಮೇಲೆ 'ಶ್ರೀ ಮಂಜುನಾಥನ ಪ್ರಸನ್ನ, ಬ್ರಾಹ್ಮಣ ಯುವಜನ ಸಭಾ' ಎಂದು ಬೋರ್ಡು ಹಾಕಿತ್ತು. ಇಂಗ್ಲೆಂಡಿನಿಂದ ಬಂದ ಶುರುವಿನಲ್ಲಿ ಕುತೂಹಲದಿಂದ ಈ ಸಭೆಯಲ್ಲಿ ಏನು ನಡೆಯುತ್ತದೆ ಎಂದು ತಿಳಿಯಲು ಪ್ರಯತ್ನಿಸಿದ್ದ. ಅಲ್ಪ ಸ್ವಲ್ಪ ಶ್ರೀಮಂತರಾದರವರ ನಿರುದ್ಯೋಗಿ ಮಕ್ಕಳು ಅಲ್ಲಿ ಸೇರುತ್ತಾರೆ. ಇಸ್ಪೀಟು ಆಡುತ್ತಾರೆ. ತಿಂಡಿಯಾದ ಮೇಲೆ ಇಡೀ

ಮಧ್ಯಾಹ್ನ. ಹೆಸರಿಗೆ ಕೇರಂ ಬೋರ್ಡಿದೆ – ಆಡುವವರಿಲ್ಲ. ಒಂದಿಪ್ಪತ್ತೈದು ರಟ್ಟು ಹರಿದ ಕಾದಂಬರಿಗಳಿವೆ – ಅಷ್ಟೆ. ಜಾಯಿಕಾಯಿ ಪೆಟ್ಟಿಗೆಯಲ್ಲಿ ಈ ಪುಸ್ತಕಗಳು, ಪೆಟ್ಟಿಗೆಯ ಮೇಲೆ ಕೇರಂಬೋರ್ಡು, ರೂಮಿನ ನಡುವೆ ಕಸಗುಡಿಸದ ನೆಲದ ಮೇಲೆ ಈಚಲು ಚಾಪೆ. ಅದರ ಮೇಲೆ ಇಸ್ಪೀಟಾಡುವ ಹುಡುಗರು. ಗೋಡೆಯ ಮೇಲೆ ಯಥಾಪ್ರಕಾರ ಕಿರೀಟ ಹೊತ್ತ ಮಂಜುನಾಥನ ಪಟ, ಇಂಡಿಯಾದ ಭೂಪಟದೊಳಗೆ ತಲೆಗೂದಲನ್ನು ಹಿಮಾಲಯ ಪರ್ವತವಾಗಿ ಹರಡಿ ನಿಂತ ಭಾರತಮಾತೆ, ನೂಲು ತೆಗೆಯುವ ಗಾಂಧಿ.

ಚರಂಡಿ ನಾರುತ್ತಿದ್ದರೂ ರಥಬೀದಿಯಲ್ಲಿ ಮಾತ್ರ ಪ್ರತಿ ಬೆಳಿಗ್ಗೆ ಮತ್ತು ಸಂಜೆ ಬೀದಿಗೆ ಸಗಣಿನೀರು ಚಿಮುಕಿಸಿ, ರಂಗೋಲೆ ಹಾಕಿರುತ್ತಾರೆ ಹೆಂಗಸರು. ಕಾರಣ ಒಮ್ಮೊಮ್ಮೆ ಪಲ್ಲಕ್ಕಿಯ ಮೇಲೆ ಮಂಜುನಾಥಸ್ವಾಮಿ ಆಗಮಿಸುತ್ತಾನೆ. ಕೆಲವು ಮನೆಗಳ ಎದುರು ಅಡಿಕೆಗೊನೆ, ಭತ್ತದ ಗೊಂಚಲುಗಳ ಸೌಂದರ್ಯದ ಪ್ರಯತ್ನ. ಅಮಾವಾಸ್ಯೆಯ ಜಾತ್ರೆ ಹತ್ತಿರವಾಗುತ್ತಿರುವುದರಿಂದ, ಉಜ್ಜಿದ ಕಪ್ಪು ಚಾವಡಿಗಳು, ಹಿಟ್ಟಿನ ಬಿಳಿರಂಗೋಲೆ, ಸುಣ್ಣ ತೊಡಿಸಿದ ಗೋಡೆಗಳು. ಓದಿದ ಹುಡುಗರಿದ್ದ ಮನೆಗಳಲ್ಲಿರಬೇಕುಉ – ಅಲ್ಲೊಂದು ಇಲ್ಲೊಂದು ನೆಹರು ಜೊತೆ ನಿಂತ ಕೆನಡಿ, ನಗುತ್ತಿರುವ ಪುಷ್ಟವಾದ ಮುಖದ ಕೆನಡಿ. ಸಾಮಾನ್ಯವಾಗಿ ಮನೆಯ ಹಿರಿಮಗ ಮಲಗುವ ಚಾವಡಿಯ ಪಕ್ಕದಲ್ಲಿರುವ ಈ ರೂಮುಗಳಲ್ಲಿ ಈ ಕೆನಡಿಯ ಜೊತೆಗೇ ಕ್ಯಾಲೆಂಡರಿನ ಮಧುಬಾಲ, ಅಥವಾ ಒದ್ದೆ ಮುಂಡುಟ್ಟ ಹುಡುಗಿಯ ಚಿತ್ರ. ಚೂರ್ಣಗಳ ವಾಸನೆ ಬರುವ ಆಯುರ್ವೇದ ಪಂಡಿತರ ಅಂಗಡಿಯ ಬೆಂಚಿನ ಮೇಲೆ ಕೆಲವು ಮುದುಕರು. ಶ್ಯಾಮ ಪಂಡಿತರು ಎದ್ದು ನಮಸ್ಕಾರ ಮಾಡಿದರು. ಇದ್ದಕ್ಕಿದ್ದಂತೆ ಗೋಡೆಯೊಂದರ ಮೇಲೆ 'ಕೀರ್ತಿಗೊಬ್ಬ ಮಗ ಆರತಿಗೊಬ್ಬ ಮಗಳು' ಎನ್ನುವ ಜಾಹೀರಾತು. ಕೋನದಾಕೃತಿಯಲ್ಲಿ ಬೀಡಕಟ್ಟಿಟ್ಟ ಪೆಟ್ಟಿಗೆಯಂಗಡಿಯೊಂದರಲ್ಲಿ ಸಾಲಾಗಿ ಜೋಡಿಸಿಟ್ಟ ನಿರೋಧ್ ಪೊಟ್ಟಣಗಳು. ವಿಪರ್ಯಾಸವೆಂದರೆ ಭಾರತೀಪುರದಲ್ಲಿನ್ನೂ ವಿದ್ಯುದ್ದೀಪವಿಲ್ಲ. ಊರಿಗೆ ಏಕಮಾತ್ರ ಜೈನನಾದ ಅಗಲವಾದ ಮುಖದ ಜಿನೇಂದ್ರನ ಅಂಗಡಿಯಲ್ಲಿ ಒಂದರ ಮೇಲೊಂದು ಪೇರಿಸಿಟ್ಟ ತಾಮ್ರದ ಪಾತ್ರೆಗಳು, ಸ್ಟೈನ್‌ಲೆಸ್ ಲೋಟ ತಟ್ಟೆಗಳು.

ಜಗನ್ನಾಥ ಪ್ರತಿಸಲ ಈ ರಥಬೀದಿಯಲ್ಲಿ ನಡೆಯುವಾಗಲೂ ಏನಾದರೂ ಹೊಸದು ಕಂಡಿತೇ ಎಂದು ಹುಡುಕುತ್ತಾನೆ. ಈ ಸಾರಿ ಪ್ರತಿ ಅಂಗಡಿಯಲ್ಲೂ ಅವನ ಕಣ್ಣಿಗೆ ಬಿದ್ದ ಒಂದು ಚಿತ್ರವೆಂದರೆ ಆರ್ಟ್ ಪೇಪರಿನ ಮೇಲೆ ಅಚ್ಚು ಮಾಡಿದ್ದ ರಾಷ್ಟ್ರಪತಿಗಳು ಬರಿಮೈಯಲ್ಲಿ ಮಂಜುನಾಥ ಸ್ವಾಮಿಗೆ ಕೈಮುಗಿದು ನಿಂತ ಫೋಟೊ. ಬೆಲೆ ಎಪ್ಪತ್ತು ಪೈಸೆ. ದೇವಸ್ಥಾನದ ಕಮಿಟಿಯವರೇ ಬೆಂಗಳೂರಿಂದ ಮಾಡಿಸಿ ತರಿಸಿದ್ದು.

ನೇರವಾಗಿ ಹೊಳೆಯನ್ನು ಹೋಗಿ ಮುಟ್ಟುವ ಬೀದಿಯಲ್ಲಿ ಜಗನ್ನಾಥ ರಾಯರನ್ನು ನೋಡುವ ತವಕದಲ್ಲಿ ಬೇಗ ಬೇಗನೆ ನಡೆದು ಹೋಗಿ ರಾಯರ ಮನೆ ಎದುರು ನಿಂತ. ರಾಯರು ಚೌಕದಲ್ಲಿರುವ ತಮ್ಮ ಖಾದಿ ಅಂಗಡಿಗಿನ್ನೂ ಹೋಗಿರಲಿಕ್ಕಿಲ್ಲ. ಇನ್ನೂ ಒಂಬತ್ತು ಗಂಟೆಯಾಗಿರಲಿಲ್ಲ. ಕತ್ತಲಿನ ನಡುಮನೆಯಲ್ಲಿ ನಿಂತು ರಾಯರೇ ಎಂದು ಕೂಗಿದ. ಇನ್ನೂ ಅಡಿಗೆಗೆ ಇಟ್ಟಿರಲಿಕ್ಕಿಲ್ಲವಾದ್ದರಿಂದ ಹೊಗೆಯಿರಲಿಲ್ಲ. ಊಟದ ಮನೆಯಿಂದ ಬಾಯಿ ಒರೆಸಿಕೊಳ್ಳುತ್ತ ರಾಯರ ಬದಲು ಇನ್ನು ಯಾರೋ ಬಂದರು. ಮಧ್ಯ ವಯಸ್ಸಿನ ಕ್ರಾಪು ತಲೆಯ ಧಡೂತಿ ಮನುಷ್ಯ. ಜರಿಯ ವಸ್ತ್ರ ಹೆಗಲಿನ ಮೇಲೆ. ಕರ್ಚೀಫಿನಿಂದ ಬಾಯಿ ಒರೆಸಿಕೊಳ್ಳುತ್ತ ಬಂದ ಅವರ ಜೊತೆ ಟೆರಿಲೀನ್ ಸೀರೆಯುಟ್ಟಿದ್ದ ಹುಡುಗಿಯೊಬ್ಬಳಿದ್ದಳು. ಹೊಟ್ಟೆ ಕಾಣುವಂತೆ ರವಿಕೆ ತೊಟ್ಟಿದ್ದ ಆಕೆ ಭಾರತೀಪುರದವಳೆಂದು ಅನ್ನಿಸಲಿಲ್ಲ. ರಾಯರ ಮಗ ರಂಗಣ್ಣನ ಜೊತೆ ಅವರಿಬ್ಬರೂ ತನ್ನನ್ನು

ಗಮನಿಸದೆ ಹೊರಗೆ ಹೋದರೆ. ಅಡಿಗೆ ಮನೆಯಿಂದಲೇ ಭಾಗ್ಯಮ್ಮ, 'ಉಡುಪರು ಸಿಗ್ದೇ ಹೋದ್ರೆ, ರಾಮ ಜೋಯಿಸರಿಗೆ ನಾನು ಹೇಳಿದೀನೀಂತ ಹೇಳು. ಅವರೇ ತರ್ಪಣ, ಸ್ನಾನ, ದೇವರ ದರ್ಶನ ಎಲ್ಲ ಮಾಡಿಸ್ತಾರೆ – ನಾನು ಹೇಳಿದೀನೀಂತ ಹೇಳು' ಎಂದು ಗಟ್ಟಿಯಾಗಿ ಹೇಳುತ್ತ ಹೊರಗೆ ಬಂದು ಜಗನ್ನಾಥನನ್ನು ನೋಡಿ ಹೆದರಿದಂತೆ ನಿಂತರು. ಕೂತುಕೊ ಎಂದು ಒಳಗೆ ಹೋಗಿ ಕಂಚಿನ ಲೋಟದಲ್ಲಿ ಕಾಫಿ ತಂದು ಕೊಟ್ಟರು. ಒಂದು ನಿಮಿಷ ಇಬ್ಬರೂ ಮಾತಾಡಲಿಲ್ಲ. ಭಾಗ್ಯಮ್ಮನೇ ಮಾತಿಗೆ ಶುರುಮಾಡಿದರು.

'ಬೆಳಿಗ್ಗೆ ಬಸ್ನಲ್ಲಿ ಶಿವಮೊಗ್ಗಕ್ಕೆ ಹೋದ್ರು, ನಾಳೆ ಸಾಯಂಕಾಲ ಬರ್ತಾರೆ.'

ಜಗನ್ನಾಥ ಬೆಲ್ಲದ ಸಿಹಿಕಾಫಿಯನ್ನು ಕುಡಿಯುತ್ತ ಮಣೆಯ ಮೇಲೆ ಕೂತಿದ್ದವನು ಮಾತಾಡಲಿಲ್ಲ.

'ಅದೇನೋ ಹೇಳಿದ್ರಪ್ಪ, ಒಂದು ವರ್ಷ ಇವಳು ಶಿವಮೊಗ್ಗದಲ್ಲೆ ಮೇಡಂ ಆಗಿ ಇರ್ಲಿ. ಅಲ್ಲಿ ಸ್ನೇಹಿತರ ಮನೇಲಿ ಇರಲಿಕ್ಕೆ ಏರ್ಪಾಟು ಮಾಡಿ ಬರ್ತೀನೀಂತ. ಏನಾದ್ರೂ ಅವರಿಗೆ ಕೊಡದೆ ಊಟ ಮಾಡಿಕೊಂಡಿರ್ಕೆ ಸಾಧ್ಯವ ? ಹಾಗಾದ್ರೆ ಅವಳ ಸಂಬಳದಲ್ಲಿ ಏನು ಉಳಿದೀತು. ಅಂದರೆ ಇವರು ನನಗೆ ಜವಾಬೇ ಕೊಡಲಿಲ್ಲ. ಒಂದು ಮಾತು ಡಿ.ಓ.ಗೆ ಹೇಳಿದ್ರೆ ಏನಾಗತ್ತೆ ಅಂದರೆ ಮೈಮೇಲೆ ಬರ್ತಾರೆ. ವಿದ್ಯಾಮಂತ್ರಿಯಾಗಿರೋವು ತನ್ನ ಜೊತೆ ಜೈಲಿನಲ್ಲಿದ್ರು ಅಂತ ಅವರೇ ಹೇಳಿಕೋತಾರೆ. ಏನಾಗಿ ಏನು ಪ್ರಯೋಜನ ಹೇಳು. ಇವರು ಹೇಳ್ದಂಗೆ ಕುಣಿದೂ ಕುಣಿದೂ ನಂಗಂತೂ ಸಾಕಾಯ್ತು ಜಗಣ್ಣ. ನಿಮ್ಮಮ್ಮ ಬದುಕಿದ್ರೆ ಅವರೇ ನಿಂಗೆ ಹೇಳ್ತಿದ್ರು. ಇವರು ತನ್ನ ಜವಳಿ ಅಂಗಡೀಗೆ ಬೆಂಕಿಹಾಕಿದಾಗ ನನ್ನ ತವರಿನಲ್ಲಿ ಕೊಟ್ಟು ನಾಲ್ಕು ರೇಷ್ಮೆ ಸೀರೇನ್ನು ಇವರ ಮಾತು ಕೇಳಿ ನಾನು ಬೆಂಕಿಗೆ ಹಾಕ್ಲಿಲ್ವಾಂತ ಯಾರನ್ನಾದರೂ ಕೇಳು. ಈಗ ಮಗಳು ಸಂಬಳವಿಲ್ದೆ ಮನೇಲಿ ಕೂತಿದಾಳೆ. ಪಥ ಸಾಗಬೇಕಲ್ಲ – ಏನು ಮಾಡೋದು ಹೇಳು. ನಾನು ನಿತ್ಯ ಹೇಳ್ತೀನಿ, ಇವರಿಗೆ : ಒಂದು ಎಮ್ಮೇನಾದ್ರೂ ತೆಗೆಸಿಕೊಡಿ, ಹಾಲು ಮಾರಿ ಜೀವನ ಮಾಡ್ತೀನಿ. ನಮ್ಮ ಅಂತಸ್ತು ನಮ್ಮ ಮರ್ಯಾದೆ ಅಂತ ಇದ್ರೆ ಹೊಟ್ಟೆ ಮೇಲೆ ಒದ್ದೆಬಟ್ಟೆ ಹಾಕ್ಕೋಳ್ಳಬೇಕಾಗುತ್ತೆ. ಆದ್ರೆ ಕಿವಿ ಮೇಲೆ ಹಾಕಿಕೊಳ್ಳಬೇಕಲ್ಲ ಇವರು. ನಂಗಂತೂ ಜೀವನ ಸಾಕು ಸಾಕಾಗಿದೆ ಜಗಣ್ಣ. ಮಾರಾಯ ಈಗ ನೀನು ನನ್ನ ಮಾನ ಉಳಿಸಬೇಕು. ಚಿಕ್ಕ ವಯಸ್ಸಿನಿಂದ ನಿನ್ನನ್ನ ನಾನು ನೋಡಿದ್ದಲ್ಲ – ಅದಕ್ಕೇ ಮರ್ಯಾದೆ ಬಿಟ್ಟು ನಿನ್ನನ್ನ ಕೇಳ್ತಿದೀನಿ. ಈಗ ಬಂದಿದ್ರಲ್ಲ ಅವರು ಚಿಕ್ಕಮಗಳೂರಿನವರು. ನನ್ನ ತಾಯಿ ತಮ್ಮನ ಸ್ನೇಹಿತರು. ಅದಕ್ಕೇ ಮನೆಗೆ ಬಂದ್ರು. ಹೆಚ್ಚೂಂದ್ರೆ ನಾನೊಂದು ಹತ್ತು ರೂಪಾಯಿ ಸಂಪಾದಿಸಬಹುದು ಅಷ್ಟೆ. ನಿನ್ನಾಣೆ – ನಾನು ರಂಗಣ್ಣನ್ನ ಇವರನ್ನ ಕರ್ಕೊಂಬರಕ್ಕೆ ಬಸ್ಸಿಗೆ ಕಳಿಸಲಿಲ್ಲ. ಅವರಿಗೆ ಮೋಸ ಮಾಡಬೇಕೂಂತ ನಾನು ಕನಸು ಮನಸಲ್ಲಿ ಎಣಿಸಿಲ್ಲ ಮಾರಾಯ. ಅದ್ರೇನು ಮಾಡ್ಲಿ ಹೇಳು.'

ಭಾಗ್ಯಮ್ಮ ಮಂಡಿ ಮಡಿಸಿ ಕೂತು ಎಡಗೈ ಮೇಲೆ ತಲೆಯಿಟ್ಟು ತನ್ನ ಮನಸ್ಸನ್ನು ಒಲಿಸಿಕೊಳ್ಳಲು ಮಾಡುತ್ತಿದ್ದ ಹಾವಭಾವಗಳನ್ನು ನೋಡುತ್ತ ಜಗನ್ನಾಥನಿಗೆ ಬಹಳ ಕಷ್ಟವಾಯಿತು. ಒಳಗೆ ನಿಂತ ಸಾವಿತ್ರಿ ಬಾಗಿಲ ಮರೆಯಿಂದ ತಾಯಿಗೆ ಸನ್ನೆ ಮಾಡುತ್ತ ಪೇಚಾಡುತ್ತಿದ್ದುನ್ನು ನೋಡಿ ಜಗನ್ನಾಥ ಮಾತು ಬದಲಾಯಿಸಲು ಹೇಳಿದ.

'ನಾನು ಯಾಕೆ ಬಂದೇಂದ್ರೆ ಭಾಗ್ಯಮ್ಮ, ನಮ್ಮ ಆಫೀಸ್‌ನಲ್ಲಿ ಲೆಖ್ಖ ಬರೆಯೋಕೊಬ್ಬ ಹುಡುಗ ಬೇಕು. ನಿಮ್ಮ ರಂಗಣ್ಣ

ಹೈಸ್ಕೂಲ್ ಮುಗಿಸಿ ಮನೇಲೆ ಇದಾನಲ್ಲ ಅವನಿಗ್ಯಾಕೆ ಕೆಲಸ ಕೊಡಬಾರ್ದು ಅಂತ ಅನ್ನಿಸಿ ಇಲ್ಲಿಗೆ ನಿಮ್ಮನ್ನೇ ಕೇಳೋಣಾಂತ ಬಂದೆ. ನಾಳೆಯಿಂದ್ಲೇ ಕಳಿಸಿಕೊಡಿ. ಅಡ್ವಾನ್ಸ್ ಸಂಬಳ ಬೇಕಾದ್ರೆ ಇನ್ನೂರು ಕೊಟ್ಟಿರ್ತೀನಿ. ನನಗೂ ಒಬ್ಬ ನಂಬಿಗಸ್ತ ಹುಡುಗ ಬೇಕು ನೋಡಿ. ಹೊತ್ತಾಗುತ್ತೆ ಹೋಗ್ತೀನಿ' ಎಂದು ಎದ್ದು ನಿಂತ. ಕೃತಜ್ಞತೆಯಿಂದ ಅರಳಿದ ಭಾಗ್ಯಮ್ಮನ ಮುಖ ನೋಡುವುದಕ್ಕೆ ಜಗನ್ನಾಥನಿಗೆ ತುಂಬ ಮುಜುಗರವಾಗಿತ್ತು. 'ಕೂಡ್ಲೆ ಕಳಿಸಿ. ನನಗೂ ಅರ್ಜೆಂಟಾಗಿ ಕೆಲಸಕ್ಕೆ ಬೇಕು' ಎಂದು ಪ್ರಯತ್ನಪೂರ್ವಕವಾಗಿ ವ್ಯಾವಹಾರಿಕ ಧ್ವನಿಯಲ್ಲಿ ಮಾತಾಡಿ ಅಲ್ಲಿ ನಿಲ್ಲದೆ ನಡೆದುಬಿಟ್ಟ. ಮೂಲೆಯಲ್ಲಿ ಕೂತು ಭಾಗ್ಯಮ್ಮ ತನ್ನನ್ನು ಒಲಿಸಿಕೊಳ್ಳಲು ಮಾಡಿದ ಹಾವಭಾವ, ಅವರ ಮಾತುಗಳು ಜಿನಗುತ್ತಿದ್ದ ಅಸಹನೀಯವಾದ ಕೃತಕ ನಯ, ನಡುನಡುವೆ ಅವರು ಪ್ರಯತ್ನಿಸುತ್ತಿದ್ದ ಅಭಿಮಾನ- ಇವುಗಳ ಹಿಂದಿದ್ದ ದುರಂತದಿಂದ ಅವನ ಮನಸ್ಸು ಭಾರವಾಗಿತ್ತು. 'ಅವರಿಗೆ ಈ ವಿಷಯ ತಿಳಿಸಬೇಡ' ಎಂದು ಭಾಗ್ಯಮ್ಮನಿಗೆ ತನ್ನನ್ನು ಬೇಡಿಕೊಳ್ಳಬೇಕಾಗಿ ಬಂದಿತಲ್ಲ. ಎಲ್ಲಿ ಹಾಗೆ ಬಾಯಾರೆ ಬೇಡಿಕೊಳ್ಳುವರೋ ಎಂದು ಒದ್ದಾಡುತ್ತ ಕೂತಿದ್ದ ಜಗನ್ನಾಥ ಹೊರಬಂದವನೆ ನಿಟ್ಟುಸಿರಿಟ್ಟ.

ಇದ್ದಕ್ಕಿದ್ದಂತೆ ಜಗನ್ನಾಥನಿಗೆ ಮಂಕು ಕವಿದಿತ್ತು. ಬದುಕುವ ಕ್ರಿಯೆಯಲ್ಲಿ ಕನಸುಗಳೆಲ್ಲ ಹೇಗೆ ಸವೆದು ಹೋಗುತ್ತವೆ ಎನ್ನಿಸಿತು. ಏನೇ ಮಾಡಲಿ ಎಲ್ಲವೂ ಇರುವಂತೆಯೇ ಇರುತ್ತದೇನೊ. ಪ್ರಾಯಶಃ ಏನೂ ಹೂಬಿಡಲಾರದ ನೆಲ ಇದು. ಭೂತರಾಯನ ಪ್ರಸಾದವಾದ ಸಿಂಗಾರವನ್ನು ಕಿವಿಯಲ್ಲಿ ಸಿಕ್ಕಿಸಿಕೊಂಡ ದೀವರ ಗುಂಪೊಂದು ಗುಡ್ಡ ಇಳಿದು ಎದುರಾಯಿತು. ಅಡಿಕೆ ಮಾತ್ರ ಇಲ್ಲಿ ಹೂಬಿಡುತ್ತದೆ. ಕೈಯಲ್ಲಿ, ಕಿವಿಗಳ ಮೇಲೆ, ತಲೆಯ ಮೇಲೆ, ತೂಗುವ ನೀಳವಾದ ಮರಗಳ ಮೇಲೆ. ದೇವಸ್ಥಾನಕ್ಕೆಂದು ಶುಭ್ರರಾಗಿ ಬಂದ ದೀವಜನಾಂಗದ ಗಂಡಸರ ಮುಖಗಳ ಪ್ರಸನ್ನವಾಗಿದ್ದವು. ನಾನು ಯೋಚಿಸಿದಂತೆ ಅವರು ಮಂಜುನಾಥನ ಬಗ್ಗೆ ಯೋಚಿಸುವುದೇ ಇಲ್ಲ. ಮಳೆ ಬಂದ ವಿಷಯ, ಬರದ ವಿಷಯ, ಎಮ್ಮೆ ಕರುಹಾಕಿದ ವಿಷಯ, ಗೇಣಿ ಬಾಕಿಯಾದ ವಿಷಯ ಮಾತಾಡುತ್ತಾರೆ. ಮರೆಯುತ್ತಾರೆ. ಜಗಳವಾಡುತ್ತಾರೆ. ಹರಕೆ ಹೊರುತ್ತಾರೆ. ಇದು ಸಾಲದು ಎಂದು ಯಾತನೆಯಲ್ಲಿ, ಆತಂಕದಲ್ಲಿ ಅವರು ಎಚ್ಚರರಾಗಬೇಕೆಂದು ನಾನು ಚಕ್ರಕ್ಕೆ ಕೈಹಚ್ಚಿದ್ದೇನೆ. ತಲೆಯ ಮೇಲೆ ಹೇಲುಹೊರುವ ಕರಿ ಮೈಯವರೂ ಕೈ ಹಚ್ಚುವರೆ ನನ್ನ ಜೊತೆ- ಎಂದು ಕಾದಿದ್ದೇನೆ.

ಜಗನ್ನಾಥ ವಿಚಾರಕ್ಕೆ ಬೆಚ್ಚಗಾಗುತ್ತ ಕೈ ಬೀಸಿ ನಡೆದ. ಚೌಕ ತಲ್ಪಿದ ಮೇಲೆ ಸಂದಿಗೊಂದಿಗಳಾದ ಬೀದಿಗಳ ಮೂಲಕ ಮನೆಯ ಕಡೆ ನಡೆದ. ದಾರಿಲ್ಲಿ ಮತ್ತೆ ನಾಗರಾಜ ಜೋಯಿಸರ ಮನೆ. ಕವಳ ಉಗಿದು ಮೈ ಮೇಲಿನ ಧೋತ್ರವನ್ನು ಸರಿಯಾಗಿ ಹೊದ್ದುಕೊಳ್ಳುತ್ತ ಕರದೇಬಿಟ್ಟರು. ಜಗನ್ನಾಥ ಅವರ ಚಾವಡಿಯನ್ನೇರಿ 'ಹೋಗಬೇಕು' ಎಂದ. 'ಒಂದು ನಿಮಿಷ ದಯಮಾಡಿ' ಎಂದು ಚಾವಡಿಯಲ್ಲಿ ಚಾಪೆ ಮೇಲೆ ಕೂರಿಸಿ ತಾನು ಇನ್ನೊಂದು ತುದಿಯಲ್ಲಿ ಕೂತು ಎಲೆಯಡಿಕೆ ತಟ್ಟೆಯನ್ನು ನಡುವೆ ಇಟ್ಟರು. ಬಂಗಾರದಲ್ಲಿ ಕಟ್ಟಿದ ರುದ್ರಾಕ್ಷಿಸರವನ್ನು ಒಳಗಿನಿಂದೆತ್ತಿ ಹೊದ್ದ ಧೋತ್ರದ ಮೇಲೆ ಹಾಕಿಕೊಂಡರು. ಎಲೆಯೊಂದನ್ನೆತ್ತಿ ತೊಟ್ಟು ಕೊಯ್ಯುತ್ತ ನವಿರಾಗಿ ಸುಲಿಯುತ್ತ ಮಾತಿಗೆ ಸನ್ನದ್ಧರಾದರು.

'ಅವತ್ತು ನೀವು ಹೈಸ್ಕೂಲಲ್ಲಿ ರಸೆಲ್ ವಿಷಯ ಹೇಳಿದ್ರಲ್ಲ-ಅದನ್ನೇ ಯೋಚಿಸ್ತ ಇದ್ದೆ. ನಮ್ಮಲ್ಲಿ ಈ ದೇವಸ್ಥಾನಗಳು, ಈ ಮೂಢನಂಬಿಕೆಗಳು ವೇದಗಳ ಕಾಲದಲ್ಲಿ ಇರಲೇ ಇಲ್ಲ ಅಂತ ನನ್ನ ಎಣಿಕೆ. ಅರ್ಥಾತ್ ನನ್ನ ಮಾತಿನ ತಾತ್ಪರ್ಯ ಏನೆಂದರೆ ಪೂರ್ವಾಭಿಮುಖನಾಗಿ ನಿಂತು ಸವಿತೃದೇವನನ್ನು ನಮಗೆಲ್ಲರಿಗೂ ಧೀಶಕ್ತಿಯನ್ನು ದಯಪಾಲಿಸು ಎಂದು ಒಂಟಿಯಾಗಿ ನಿಂತು ಪ್ರಾರ್ಥಿಸೋ ನಮ್ಮ ಸಂಪ್ರದಾಯದಲ್ಲಿ ದೇವಸ್ಥಾನ, ಪೂಜೆ, ವ್ರತಗಳಿಗೆ ಖಂಡಿತ ಜಾಗ ಇಲ್ಲ. ನೀವು

ಧರ್ಮದರ್ಶಿತ್ವಕ್ಕೆ ರಾಜೀನಾಮೆ ಕೊಟ್ಟಿದ್ದೀರಿ-ನಿಮಗೆ ನನ್ನ ಮಾತು ಅರ್ಥವಾಗುತ್ತೆ – ಅದಕ್ಕೆ ಹೇಳ್ತೀನಿ – ನಾವು ಸವಿತೃವನ್ನು ಪ್ರಾರ್ಥಿಸೋದು ನನ್ನಲ್ಲಿ ಧೀಶಕ್ತಿಯನ್ನು ಪ್ರಚೋದಿಸು ಅಂತಲ್ಲ – ನಮ್ಮಲ್ಲಿ ಪ್ರಚೋದಿಸು ಅಂತ – ಅರ್ಥಾತ್ ಇಡೀ ಮಾನವ ಕುಟುಂಬದಲ್ಲಿ ಅಂತ. ಧೀಶಕ್ತಿ ಎಂದರೆ ಏನು ? – ವೈಜ್ಞಾನಿಕ ತಿಳುವಳಿಕೆ. ನಿಮ್ಮ ರಸೆಲ್ ಹೇಳ್ತಾನಲ್ಲ – ಅದೇ.'

ಕಾವಿಗೆ ಕೂತ ಕೋಳಿಯಂತೆ ತನ್ನ ವಿಚಾರವನ್ನೇ ಚಿಂತಿಸುತ್ತಿದ್ದ ಜಗನ್ನಾಥನಿಗೆ ಅನ್ನಿಸಿತು, ಇಷ್ಟು ಮಾತಾಡುತ್ತಾರಲ್ಲ ಈ ಜೋಯಿಸರಿಗೆ ಹೇಳುವುದು; ಇವರ ಮನಸ್ಸಿನಲ್ಲಿ ಹೇಗೆ ತಾನು ಯೋಜಿಸಿದ ಕ್ರಿಯೆ ಸ್ಫೋಟವಾಗುತ್ತದೆ ನೋಡುವುದು.

'ಮೂಢನಂಬಿಕೆಗಳೆಲ್ಲ ತಪ್ಪೂಂತ ಅನ್ನಿಸಿದರೆ ಇದಕ್ಕೆ ವಿರುದ್ಧವಾಗಿ ನಮ್ಮ ನಿಮ್ಮಂಥವರು ಏನಾದರೂ ಮಾಡಬೇಕಲ್ಲವೆ ಜೋಯಿಸರೆ ? ಕ್ರಿಯೆ, ಮಾತಲ್ಲ.'

ಇನ್ನೇನೋ ಥಟ್ಟನೆ ನೆನಪಾಯಿತು ಜೋಯಿಸರಿಗೆ.

'ಛೆ ನಿನ್ನೆ ನಿಮ್ಮನ್ನ ಕಾಫೀನೂ ಕೊಡದೆ ಕಳಿಸಿದೆ. ನಾಗಮಣೀ, ನಾಗಮಣೀ, ಎಂದು ಕೂಗಿದರೂ. ನಡುಮನೆಯೊಳಗೆ ಮೃದುವಾದ ಬಳೆಯ ಸದ್ದಾಯಿತು.

'ಸಾಹುಕಾರ್ರು ಬಂದಿದಾರೆ, ನಿನ್ನೆ ಅವರನ್ನ ಹಾಗೆ ಕಳಿಸಿದಾಯ್ತು' ಎಂದರು. ಜಗನ್ನಾಥನ ಕಡೆ ತಿರುಗಿ, 'ನಾಗಮಣಿ ನನ್ನ ಸೊಸೆ. ಶಿವಮೊಗ್ಗದಲ್ಲಿ ಲಾಯರ್ ಆಗಿದಾನಲ್ಲ ನನ್ನ ಮಗ ಅವನ ಹೆಂಡತಿ. ಶಿವಮೊಗ್ಗದಲ್ಲಿ ಬಾಡಿಗೆ ಹೆಚ್ಚು. ಸಂಪಾದನೆ ಸಾಲದು. ಇಲ್ಲಿ ಮನೇಲಿ ನನ್ನ ಹೆಂಡತಿ ತೀರಿಹೋದಮೇಲೆ ಬರೋವ್ರಿಗೆ ಹೋಗೋವ್ರಿಗೆ ಮಾಡಿಹಾಕೋರು ಇಲ್ಲ. ನನ್ನ ಕಿರೇಮಗಳಿಗಿನ್ನೂ ಹತ್ತು ವರ್ಷ. ಆದ್ರಿಂದ ನಾಗಮಣಿ ಇಲ್ಲೆ ಇದ್ದಾಳೆ. ಏನು ಮಾಡೋದು ಹೇಳಿ. ನಮ್ಮದು ಪ್ರಖ್ಯಾತ ಶ್ರೋತ್ರೀಯ ಮನೆತನಾಂತ ಜನ ಹುಡುಕಿಕೊಂಡು ಇಲ್ಲಿಗೆ ಬರ್ತಾರೆ. ಒಂದೊಂದು ಸಾರಿ ಮನೇಲಿ ಹದಿನೈದು ಇಪ್ಪತ್ತು ಜನ ಯಾತ್ರಿಕರಿರ್ತಾರೆ. ಹಿರೇ ಮಗನ್ನ ಲೌಕಿಕಕ್ಕೆ ಬಿಟ್ಟಿದ್ದೇನೆ. ಇನ್ನೊಬ್ಬನ ವೈದಿಕ ಧರ್ಮಕ್ಕೆ ಹಚ್ಚಿದೇನೆ. ಶಂಕರನಿಗೆ ಎಲ್ಲ ಗೊತ್ತು – ಜ್ಯೋತಿಷ್ಯ, ವೇದ, ಪೂಜಾವಿಧಿಗಳ ಎಲ್ಲ. ಪ್ರಾಚೀನವಾಗಿ ಬಂದದ್ದನ್ನ ಕೈಬಿಡಲಿಕ್ಕೆ ಆಗಲ್ವಲ್ಲ ಹೇಳಿ. ಅವನಿಗೆ ಮುಂದಿನ ಸಾರಿ ಮದುವೆ ಮಾಡಿದ ಮೇಲೆ ನಾಗಮಣಿನ್ನ ಅವಳ ಗಂಡನ ಹತ್ರ ಶಿವಮೊಗ್ಗಕ್ಕೆ ಕಳಿಸ್ತೇನೆ.'

ಜಗನ್ನಾಥ ಆಕಳಿಕೆಯನ್ನು ಕಷ್ಟಪಟ್ಟು ತಡೆದುಕೊಂಡ. ಜೋಯಿಸರ ಹತ್ತಿರ ಮಾತಾಡಿ ಪ್ರಯೋಜನವಿಲ್ಲ. ಜಡ್ಡಾದ ಜಾಗಗಳನ್ನು ಉತ್ತಲು ಕ್ರಿಯೆಯಿಮದ ಮಾತ್ರ ಸಾಧ್ಯ. ಜೋಯಿಸರು ಪೇಪರನ್ನೆತ್ತಿ ತನಗೇನೋ ತೋರಿಸಲು ಹುಡುಕುತ್ತಿದ್ದರು. ಸಾಹುಕಾರ್ರು ತನ್ನ ಮನೆಗೆ ಬರುತ್ತಾರೆ ಎನ್ನುವುದನ್ನು ಜಾಹೀರಾತು ಮಾಡಲು ಚಾವಡಿಯ ಮೇಲೇ ತನ್ನನ್ನು ಕೂರಿಸಿಕೊಂಡಿದ್ದಾನೆ. ಈ ಜನರ ಜೊತೆಗೆಲ್ಲ ಇರುವ ದಾಕ್ಷಿಣ್ಯದ ಸಂಬಂಧದಲ್ಲೆ ತನ್ನ ದೌರ್ಬಲ್ಯವಡಗಿದೆ. ಕ್ರಿಯೆಯ ಮುಖಾಂತರ ಮಾತ್ರ ನನ್ನ ಸ್ಪಷ್ಟ ರೂಪ ಈ ಜನರ ಪ್ರಜ್ಞೆಯಲ್ಲಿ ಮೂಡೀತು.

ನಾಗಮಣಿ ಎರಡು ಬಾಳೆಲೆಗಳ ಚೂರನ್ನು ತನ್ನ ಮತ್ತು ಮಾವನ ಎದುರಿಗಿಡಲು ಬಗ್ಗಿದಳು. ತನ್ನೆದುರಿಗೆ ಬಗ್ಗಿದ ಪ್ರಾಯದ ಹುಡುಗಿಯಲ್ಲಿ ಜಗನ್ನಾಥನ ಮನಸ್ಸು ನೆಟ್ಟಿತು. ಆರೋಗ್ಯ ತುಳುಕುವ ಇಂತಹ ಹೆಣ್ಣೊಂದು ಈ ಮನೆಯಲ್ಲಿದೆ ಎಂದು ಊಹಿಸುವುದೇ ಕಷ್ಟ. ತುಂಬಿದ ಎದೆಯನ್ನು ಮುಚ್ಚಿದ ಚೌಕುಳಿ ಬಟ್ಟೆಯ ರವಿಕೆ, ಸಣ್ಣ ಸೊಂಟ, ಕಂದು ಬಣ್ಣದ ಸಾದಾ ಸೀರೆಯಲ್ಲಿ ಕೊರೆದು ತೆಗೆದಿಟ್ಟಂತಹ ಆಕೃತಿ, ಎಣ್ಣೆಗೆಂಪು ಬಣ್ಣ, ಮಧ್ಯ ಬೈತಲೆ ತೆಗೆದು ಕೂದಲನ್ನು ಗಟ್ಟಿಯಾಗಿ ಬಿಗಿದು ಜಡೆಹಾಕಿದ್ದಳು. ಹಣೆಯ ಮೇಲೆ ಉದ್ದನೆಯ ಕುಂಕುಮ. ತಾಳಿಯೊಂದು ಬಿಟ್ಟರೆ ಅವಳ ಮೈಮೇಲೆ ಇನ್ನೇನೂ ಆಭರಣವಿರಲಿಲ್ಲ. ಎಲೆಯ ಮೇಲೆ ಚಕ್ಕುಲಿಬಡಿಸಿ ಅವಳು ಮೇಲೇಳುವಾಗ ಬ್ರಾಸಿಯರ್ಸ್ ತೊಡದ ಅವಳ ಮೊಲೆಗಳು ರವಿಕೆಯಲ್ಲಿ ಉಬ್ಬಿ ಅಲ್ಲಾಡಿದುವು. ಆದರೆ ತಾನು ಎಷ್ಟು ಆಕರ್ಷಕಳೆಂಬ ಪರಿಜ್ಞಾನವೇ ಅವಳಿಗಿಲ್ಲವೆನ್ನುವುದು ಅವಳ ಪ್ರತಿಯೊಂದು ಭಂಗಿಯಲ್ಲೂ ವ್ಯಕ್ತವಾಗುತ್ತಿತ್ತು. ಅವಳು ಬಗ್ಗುವುದು, ನಿಲ್ಲುವುದು, ನಡೆಯುವುದು, ಕಣ್ಣಾಡಿಸುವುದು, ಬಾಗಿಲಿನ ಹತ್ತಿರ ಕಾದುನಿಲ್ಲುವದು- ಎಲ್ಲವೂ ನಿತ್ಯದ ದುಡಿಮೆಯ ವಿವಿಧ ಭಂಗಿಗಳಾಗಿದ್ದುವೇ ವಿನಾ ಅವಳ ಸೌಂದರ್ಯದ ಅಭಿವ್ಯಕ್ತಿಗಳಾಗಿರಲಿಲ್ಲ. ಕಾವೇರಿ ಮಾತ್ರ ಸೊಪ್ಪು ಹೊತ್ತು ನಡೆಯುವುದನ್ನೂ ತನ್ನ ನಿತಂಬಗಳಾಡುವ ಚೆಲುವಿಗೆ ಉಪಯೋಗಿಸುತ್ತಿದ್ದಳು. ಸೀರಿಯಸ್ಸಾಗಿ ಮಾತಾಡುವಾಗ ಮಾರ್ಗರೆಟ್ ಅರ್ಧಕಣ್ಣು ಮುಚ್ಚಿ ಸಿಗರೇಟ್ ಎಳೆಯುವುದಾಗಲೀ, ಕೆನ್ನೆಯ ಮೇಲಿನ ಕೂದಲಿನ ಸಮೃದ್ಧಿಯನ್ನು ಹಿಂದಕ್ಕೆ ತಳ್ಳಿ ಮುಖವನ್ನು ಮೇಲಕ್ಕೆತ್ತುವುದಾಗಲೀ ಇನ್ನೊಂದು ಬಗೆಯ ಸೊಗಸು. ಬಾಗಿಲ ಬುಡದಲ್ಲಿ ತನಗೆ ಎದುರಾಗಿ ನಿಂತಿದ್ದ ನಾಗಮಣಿಯ ತ್ರಿಭಂಗಿಯಲ್ಲಿಲಿ ಅಡಿಗೆಯೊಲೆ ಹತ್ತಿಸಲು ಪಟ್ಟ ಸುಸ್ತಿನ ಪರಿಹಾರವೊ, ಅಥವಾ ಬಾವಿಯಿಂದ ನೀರು ಸೇದಿದ ಆಯಾಸದ ಶಮನದ ಉಪಾಯವೊ ಇತ್ತು – ಅಷ್ಟೆ. ಗಂಡಸರೆದುರು ಕೂರುವಂತಿಲ್ಲವಾದ್ದರಿಂದ ಬಾಗಿಲಿಗೊರಗಿ ಹೀಗೆ ತ್ರಿಭಂಗಿಯಲ್ಲಿ ನಿಂತಿದ್ದಾಳೆ. ಮೈಯಲ್ಲಿ ಅರಳುತ್ತಿರುವ ಸೌಂದರ್ಯದ ಪರಿವೆ ಸದಾ ಅಡಿಗೆ ಮನೆಯಲ್ಲಿರುವ ನಾಗಮಣಿಗೆ ಇಲ್ಲ. ರುಚಿಯಾದ ಕೂಳೂ ಬೇಯಿಸಲೆಂದೇ ಬದುಕುವ ಈ ಹೆಂಗಸರು; ಹೊಟ್ಟೆ ಸೇರಿದ ಈ ಕೂಳು ಪಾಯಿಖಾನೆಯಾದ್ದನ್ನು ಎತ್ತಲೆಂದೇ ಬದುಕುವ ಹೊಲೆಯರು; ಏತನ್ಮಧ್ಯೆ ಆಹಾರವನ್ನು ಜೀರ್ಣಿಸಿಕೊಳ್ಳುತ್ತ ಚಾವಡಿಯ ಮೇಲೆ ಕೂರುವ ಭಾರತೀಪುರದ ಪೌರರು – ಜಗನ್ನಾಥನ ಮೈಯಲ್ಲಿ ರೋಷದ ಚಲನೆಯಾಯಿತು.

ಬಾಗಿಲ ಬಡುದಲ್ಲಿ ಚಕ್ಕುಲಿ ಡಬ್ಬ ಹಿಡಿದು ನಿಂತಿದ್ದ ನಾಗಮಣಿಯ ಮುಖವನ್ನು ನೋಡಿದ. ಬೆಳಕನ್ನು ಕೆನ್ನೆಯ ಮೇಲಂಚಿನಲ್ಲಿ ಹೊಳೆಯಿಸುವ ನುಣುಪಾದ, ಮೃದುವಾದ ಚರ್ಮ. ತುಂಬಿದ ತುಟಿಗಳು, ಸ್ವಲ್ಪ ದೊಡ್ಡವೇನೋ ಅನ್ನಿಸುವ ಕಿವಿಗಳು. ತನ್ನ ಕಣ್ಣು ಅವಳ ದೊಡ್ಡ ದೊಡ್ಡ ಕಣ್ಣುಗಳನ್ನು ಹುಡುಕಿದಾಗ ತನಗೆ ಇನ್ನೊಂದು ಚಕ್ಕುಲಿಯನ್ನು ಮುಗಿಸಿದ ಮೇಲೆ ಬಡಿಸುವ ನಿರೀಕ್ಷೆಯಲ್ಲದೆ ಇನ್ನೇನೂ ಕಾಣಿಸಲಿಲ್ಲ. ಅವಳ ಆಳದಲ್ಲಿರುವ ದುಃಖವನ್ನು ಬಗೆಯುವವನಂತೆ ಇನ್ನಷ್ಟು ನೆಟ್ಟು ನೋಡಿದ. ಆದರೆ ಅವಳು ಶೂನ್ಯವನ್ನು ನೋಡುವವಳಂತೆ ಅವನನ್ನು ನೋಡುತ್ತ ನಿಂತಳೂ. ನಾಗರಾಜ ಜೋಯಿಸರು ಪೇಪರ್ ಓದುತ್ತ 'ನೋಡಿ ಏಲಕ್ಕಿ ಬೆಳೆದರೆ ಅಡಕೆ ಬೆಳೆಗೆ ಒಳ್ಳೆಯದಲ್ಲ ಅಂತ ಯಾರೋ ಬರೆದಿದ್ದಾರೆ' ಎಂದರು. ಜಗನ್ನಾಥ ಹೂಗುಟ್ಟಿ ನಾಗಮಣಿಯ ದುಃಖದಲ್ಲಿ ಪಾಲಾಗಲು, ಅವಳ ನಿರಪೇಕ್ಷವಾದ ಸೌಂದರ್ಯವನ್ನು ಅರ್ಚಿಸುವವನಂತೆ ನೋಡಿದ. ಆದರೆ ಕಣ್ಣು ಮಿಟುಕಿಸುವ ಕಲ್ಲಿನಂತೆ ಅವಳು ನಿಂತಿದ್ದಳು. ತನ್ನ ಆರ್ತತೆ ಎಂದೂ ಅವಳ ಮನಸ್ಸನ್ನು ತಾಗಲಾರದು ಎನ್ನಿಸಿತು. ಯಾವ ವೈಯಕ್ತಿಕ ಆಪೇಕ್ಷೆಯೂ ಇಲ್ಲದ ತನ್ನ ಪ್ರೇಮದಿಂದಲೂ ಅವಳಲ್ಲಿ ಜಡ್ಡುಗಟ್ಟಿಹೋದ ಜೀವನದ ಶಕ್ತಿಯನ್ನು ಅರಳಿಸುವುದು ಸಾಧ್ಯವಿಲ್ಲವೆನಿಸಿ ಜಗನ್ನಾಥ ಇದ್ದಕ್ಕಿದ್ದಂತೆ ನಿರ್ವಿಣ್ಣನಾದ. ಇವಳಂಥವರು ಅರಳಲಾರದೇ ಹೋದರೆ ತನ್ನ ಯೋಜಿತ ಕ್ರಿಯೆ ನಿಷ್ಫಲವೆನ್ನಿಸಿತು. ಆದರೆ ಯಾಕೆ ಅವಳ

ಅಂಗಾಂಗಗಳು ಇಷ್ಟೊಂದು ಹುಚ್ಚು ಸೊಗಸಿನಿಂದ ಅರಳಿ ನಿಂತಿವೆ? 'ಯಾಲಕ್ಕಿಯ ವಾಸನೆ ನೆಲದ ಸತ್ವವನ್ನೆಲ್ಲ ಹೀರಿಬಿಡುತ್ತದೆ ಎಂದು ಕಾಣಿಸತ್ತೆ. ಅದಕ್ಕೇ ಅದು ಅಡಿಕೆಗೆ ಒಳ್ಳೆಯದಲ್ಲವೋ  ಏನೊ. ಏನೂಂತೀರಿ?' ಎಂದು ಜೋಯಿಸರು ಕೇಳಿದರು. ಜಗನ್ನಾಥ ಗೊತ್ತಿಲ್ಲ ಎಂದ.

'ನನಗಿನ್ನು ಚಕ್ಕುಲಿ ಬೇಡ' ಎಂದು ಸ್ನೇಹದಿಂದ ನಾಗಮಣಿಯನ್ನು ನೋಡುತ್ತಲೇ ಹೇಳಿದ. 'ಇನ್ನೊಂದು ಹಾಕಿಕೊಳ್ಳಿ' ಎಂದು ಜೋಯಿಸರು ಒತ್ತಾಯ ಮಾಡಿದರು. ನಾಗಮಣಿ ಕಾಫಿ ತರಲು ಒಳಗೆ ಹೋದಳು. ಜಗನ್ನಾಥನಿಗೆ ಎಷ್ಟು ಉತ್ಕಟವಾಗಿ ಪ್ರಯತ್ನಿಸಿದರೂ ಇನ್ನೊಬ್ಬರ ದುಃಖ ತನ್ನದಾಗುವುದು ಸಾಧ್ಯವಿಲ್ಲವೆನ್ನಿಸಿತು. ಮತ್ತೆ ಕಾಫಿ ತಂದು ಬಗ್ಗಿ ನೆಲದ ಮೇಲಿಟ್ಟಳು. ಇವಳ ಪಾಲಿಗೆ ತಾನು ಎಂದೂ ಯಾರೂ ಆಗಲಾರೆ. ಇಡೀ ಊರು ಜೀವಂತವಾದರೆ ಇವಳು ಆಸ್ಫೋಟಿಸಿಯಾಳು ಎಂದು ಬಯಸುವುದಷ್ಟೆ ಕನಸುವುದಷ್ಟೆ ನನ್ನ ಪಾಲಿಗೆ. ನಾಗಮಣಿ ಹೊರಟು ಹೋದಳು. ಜೋಯಿಸರು ಏಳಲು ಬಿಡಲಿಲ್ಲ. ಕೊರೆಯತ್ತ ಕೂತರು.

ಮತ್ತೆ ದೇವಸ್ಥಾನದ ವಿಷಯ. ಸವಿತೃವಿಗೆ ಅಭಿಮುಖನಾಗಿ ನಿಂತು ಪ್ರಾರ್ಥಿಸುವವನಿಗೆ ಪ್ರತಿಮಾರ್ಚನೆ ಸಲ್ಲದು. ಜೋಯಿಸರು, ಈಗಿನ ಅರ್ಚಕರಾದ ಸೀತಾರಾಮಯ್ಯನವರು ಒಂದೇ ಕುಟುಂಬದವರು. ಜೋಯಿಸರ ತಂದೆಯ ತಂದೆ, ಸೀತಾರಾಮಯ್ಯನವರ ಸಾಕುತಂದೆಯ ತಂದೆ ಸ್ವಂತ ಅಣ್ಣ ತಮ್ಮಂದಿರು. ಸೀತಾರಾಮಯ್ಯ ದತ್ತು ಮಗ. ಶಾಸ್ತ್ರೋಕ್ತವಾಗಿ ದತ್ತಾಗಲಿಲ್ಲ ಎನ್ನುವುದಕ್ಕೆ ತನ್ನ ಹತ್ತಿರ ರೆಕಾರ್ಡ್‌ಗಳು ಇದ್ದಾವೆ. ಆದ್ದರಿಂದ ಮಂಜುನಾಥನ ಪೂಜೆಯ ಹಕ್ಕು ನಿಜವಾಗಿ ಇರೋದು ತನಗೇ ಹೊರತು ಸೀತಾರಾಮಯ್ಯನಿಗಲ್ಲ. ಅಲ್ಲದೆ ಸೀತಾರಾಮಯ್ಯನ ಮಗನಿಗೆ ಮಡಿಯಿಲ್ಲ, ಮೈಲಿಗೆಯಿಲ್ಲ. ಒಂದು ಸಾರಿ ಆ ಗಣೇಶನಿಗೆ ಹೆಚ್ಚು ಬೇರೆ ಹಿಡಿದಿತ್ತು. ಆದರೆ ತನ್ನ ಮಗ ಹಾಗಲ್ಲ. ಇಡೀ ವೇದ ಅವನ ಬಾಯಲ್ಲಿದೆ. ಜೋಯಿಸರು ಕೇಸ್ ಹಾಕಬೇಕೆಂದಿದ್ದಾರೆ.

ಅಟ್ಟದಲ್ಲಿ ಏಣಿ ಬಿದ್ದ ಶಬ್ಧವಾಯಿತು. ನಡುಮನೆಯಲ್ಲಿ ಜೋಯಿಸರ ಮಗಳು ಇನ್ನೊಂದು ಹುಡುಗಿಯ ಜೊತೆ ಪಗಡೆಯಾಡುತ್ತಿದ್ದಳು. ಜೋಯಿಸರ ಮಗ ಓಡಿ ಬಂದು ಹೇಳಿದ : 'ಅವರೆಲ್ಲ ಇವತ್ತು ದೇವಸ್ಥಾನದಲ್ಲೇ ಊಟ ಮಾಡುತ್ತಾರಂತೆ, ಸಾಯಂಕಾಲ ನಮ್ಮಲ್ಲಂತೆ. ಸ್ನಾನ ಪೂಜೆ ಎಲ್ಲ ಮಾಡಿಸಿದೆ. ಊರು ತೋರಿಸಿ ಬರ್ತೇನೆ.' ಮತ್ತೆ ದಾರಿಯಲ್ಲಿ ನಿಂತ ಯಾತ್ರಿಕರ ಜೊತೆ ಸೇರಿ ನಡೆದ. ಜೋಯಿಸರು ಬಿಡಲೇ ಇಲ್ಲ, ಎಡಗೈ ನೆಲಕ್ಕೂರಿ ಬಲಗೈಯಲ್ಲಿ ಮುಷ್ಟಿ ಕಟ್ಟಿ, ಬಿಚ್ಚಿ, ಆರ್ತವಾಗಿ ಎದೆ ಮುಟ್ಟಿಕೊಳ್ಳುತ್ತ, ಹತ್ತಿರ ಸರಿಯುತ್ತ ಮಾತಾಡಿದರು:

'ನೀವು ಧರ್ಮದರ್ಶಿಗಳಾಗಿದ್ದರೆ ಏನಾದರೊಂದು ಇತ್ಯರ್ಥ ಮಾಡಬಹುದಿತ್ತು. ಆದರೆ ಇಲ್ಲವಲ್ಲ? ಈಗ ನಾನೇನು ಮಾಡಬಹುದು ಹೇಳಿ? ಭಾರತೀಪುರದವರು ಕೋರ್ಟಿಗೆ ಹೋಗಬಾರದು. ಮಂಜುನಾಥನೇ ಎಲ್ಲ ನಿರ್ಣಯ ಮಾಡ್ತಾನೇಂತ ಹೇಳ್ತಾರೆ. ಆದರೆ ಇದನ್ನ ನಾನು ನಂಬಿಕೊಂಡು ಕೂರಲ? ನನ್ನ ಮಗನಿಗೆ ಹೇಳಿದೆ: ಕಾನೂನು ಹೇಗಿದೆ ತಿಳ್ಕೊ – ಕೇಸ್ ಹಾಕಣ ಅಂತ. ನಾನು ಕೇಳೋದು ಇಷ್ಟೊಂದು ಹೆಸರಾದ ದೇವಸ್ಥಾನದಲ್ಲಿ ವಿಧ್ಯುಕ್ತವಾದ ಪೂಜೆ ಪುನಸ್ಕಾರ ನಡೀಬೇಕೋ ಬೇಡವೊ – ಅಂತ. ಪ್ರಭುಗಳು ನನ್ನ ಮಾತನ್ನ ಕಿವಿಗೆ ಹಾಕ್ಕೊಳ್ಳಲ್ಲ. ಕೊಂಕಣಿ – ಅವನಿಗೇನಾಗಬೇಕು ಹೇಳಿ. ರಾಷ್ಟ್ರಪತಿಗಳಿಗೆ ನಾನೊಂದು ಕಾಗದ ಬರ್ದಿಟ್ಟಿದೀನಿ. ಅದನ್ನ ದಯಮಾಡಿ ನೀವು ಇಂಗ್ಲೀಷಿಗೆ ಮಾಡಿಕೊಡಬೇಕು.'

ಜಗನ್ನಾಥ ಹೂ ಎನ್ನಲಿಲ್ಲ. ಊಹು ಎನ್ನಲಿಲ್ಲ. ಜೋಯಿಸರಿಗೆ ನಿಷ್ಠುರವಾಗಿ ಹೇಳಿಬಿಡಬೇಕೆಂದು ಕಾದ. ಆದರೆ ಅವರ ಮನಸ್ಸಿನ ಜೌಗಿನಲ್ಲಿ ಏನನ್ನು ನೆಡುವುದೂ ಅಸಾಧ್ಯ. ಒಂದೇ ಮಾತಾಡುತ್ತಲೇ ಇರುತ್ತಾರೆ. ನಾಗಮಣಿ ಅರಳುವುದಿಲ್ಲ. ಯಾರೂ ಪ್ರಾಯಶಃ ಅರಳುವುದಿಲ್ಲ ಇವರ ಮಾತು ಕೇಳುತ್ತ ನಾನು ಇನ್ನಷ್ಟು ಸಡಿಲವಾದೇನು ಅಷ್ಟೆ. ನಿಧಾನವಾಗಿ ಮಂಜುನಾಥ ನನ್ನನ್ನೂ ಕವಿದುಬಿಡುತ್ತಾನೆ. ಕಾವೇರಿಗಿದ್ದಂತೆ ನಾಗಮಣಿಗೆ ಯಾಕೆ ಒಳಮಾರ್ಗಗಳು ಇಲ್ಲ. ಯಾವ ಭಾವನೆಯೂ ಇಲ್ಲದೆ ನನ್ನನ್ನು ನೋಡಿದಳು. ತಾನು ಹೆಣ್ಣೆಂಬ ಪರಿವೆಯೂ ಅವಳಿಗಿಲ್ಲವೆ? ಸುಮ್ಮನೇ ನೋಡಿದಳು ಚಕ್ಕುಲಿ ಬಡಿಸಲು ಕಾಯುತ್ತ. ನನ್ನ ನೋಟ ಅವಳ ಒಳಗೇನೂ ಹೊತ್ತಿಸಲಿಲ್ಲ. ಅವಳ ದೊಡ್ಡ ಕಣ್ಣುಗಳಲ್ಲಿ ಶೂನ್ಯ ಮಾತ್ರ ಇತ್ತು. ನೀಳವಾದ ರೆಪ್ಪೆಗಳು ಮುಚ್ಚುತ್ತ ತೆರೆಯುತ್ತ ಇದ್ದವು. ನೋಡುವಾಗಲೂ ನಾನಿದ್ದೇನೆ ಎಂಬ ಪರಿವೆ ಅವಳಿಗಿರಲಿಲ್ಲ. ಹೀಗೆ ನೂರು ಯಾತ್ರಿಕರು ಬಂದು ತಿಂದು ಹೋಗುತ್ತಾರೆ. ಅವಳನ್ನು ನೋಡುತ್ತಾರೆ. ಮತ್ತೆ ಅವರಿಗೆ ಬಡಿಸಬೇಕಾದ ಕ್ಷಣಕ್ಕಾಗಿ ನಿರೀಕ್ಷಿಸುತ್ತ ಅವರ ಎಲೆ, ಅವರ ಕೈ, ಅವರ ಬಾಯಿ, ತಿನ್ನುತ್ತ ತೃಪ್ತಿ ಪಡುವ ಅವರ ಕಣ್ಣುಗಳನ್ನು ನೊಡುತ್ತಾ ನಿಲ್ಲುತ್ತಾಳೆ, ತ್ರಿಭಂಗಿಯಲ್ಲಿ ಆಯಾಸ ಪರಿಹರಿಸಿಕೊಳ್ಳುತ್ತ. ಅವಳ ಚಕ್ಕುಲಿ ತಿಂದ ನೂರರಲ್ಲಿ ಇನ್ನೊಬ್ಬ ನಾನು ಅಷ್ಟೆ. ಮಾಂಸದಿಂದ ತುಂಬಿದ ಅವಳ ಬೆಚ್ಚಗಿನ ಮೊಲೆಗಳು, ಬೆಚ್ಚಗಿನ ಸಂದಿಗಳು ಎಂದೂ ಅವಳನ್ನು ಹೊರಳಿಸುವುದಿಲ್ಲ. ಶಿವಮೊಗ್ಗಕ್ಕೆ ಹೋಗಿ ಗಂಡನ ಜೊತೆಗಿದ್ದರೆ ಮುಟ್ಟು ನಿಂತು ಬಸುರಾಗುತ್ತಾಳೆ. ಹೆರುತ್ತಾಳೆ. ಅಷ್ಟೆ. ಹೆತ್ತು ಹೆತ್ತು ಹೊಟ್ಟೆ ಸುಕ್ಕಾಗುತ್ತದೆ ಮೊಲೆ ಜೋತುಬೀಳುತ್ತದೆ -ಅಷ್ಟೆ.

'ಈ ಸೀತಾರಾಮಯ್ಯ ಮಾಡಿರೋ ಮೋಸ ಒಂದೋ ಎರಡೋ? ನಿಮ್ಮ ತಾಯಿ ಬಂಗಾರದ ಕಿರೀಟಾನ್ನ ಮಂಜುನಾಥನಿಗೆ ನಿಮ್ಮ ಹೆಸರಲ್ಲಿ ಮಾಡಿಕೊಟ್ಟರಲ್ಲ ಅವರು ಕೊಟ್ಟ ಬಂಗಾರ ಎಲ್ಲ ದೇವರ ತಲೇ ಮೇಲೆ ಇದೆ ಅಂತ ನೀವು ತಿಳಿದಿರ? ಹುಚ್ಚು ಅಷ್ಟೆ. ಮಗನಿಗೆ ನೇವಳ ಮಗಳು ಹೆಂಡತಿಗೆ ಸರ ಬಳೆ ಬೆಂಡೋಲೆ -ಇದಕ್ಕೆಲ್ಲ ಬಂಗಾರ ಎಲ್ಲಿಂದ ಬಂತೂಂತ ತಿಳ್ದೀರಿ?'

ಜೋಯಿಸರು ಆಪ್ತವಾಗಿ ಮಾತಾಡುತ್ತ ಸರಿದು ಸರಿದು ತನ್ನ ಹತ್ತಿರವೇ ಕೂತಿದ್ದರು. ತನ್ನ ಕಿವಿಯ ಹತ್ತಿರ ಮಾತಾಡುತ್ತಿದ್ದರು. ಅವರ ಕೆಂಪು ಹಲ್ಲುಗಳನ್ನು ಕೆಂಪು ಕಲ್ಲಿನ ಒಂಟಿಯನ್ನು ಜಗನ್ನಾಥ ದುರುಗಟ್ಟಿ ನೋಡಿದ. ಇವರಿಗೆ ಹೇಳಿಕೊಂಡು ಖಂಡಿತ ಪ್ರಯೋಜನವಿಲ್ಲವೆನ್ನಿಸಿ ತುಂಬ ಬೇಸರವಾಯಿತು.

'ಹೊತ್ತಾಗ್ತ ಇದೆ ಹೋಗಬೇಕು' ಎಂದು ಎದ್ದು ನಿಂತ. ಈ ಕ್ಷಣ ಯಾವಾಗಲೂ ನೆನಪಾಗುತ್ತದೆ: ಮಧ್ಯಾಹ್ನ ಶೂನ್ಯವಾದ ಬೀದಿ, ಮಹಾಮಂಗಳಾರತಿಗೆ ಬಾರಿಸುವ ದೊಡ್ಡ ಗಂಟೆಯ ಶಬ್ದ. ಬೇಸರದಿಂದ ಮೈ ಮುರಿಯುತ್ತ ಹೊರಡಲು ಅನುವಾಗಿ ನಿಂತಿದ್ದಾಗ ಮಹಡಿ ಮೆಟ್ಟಲನ್ನು ದಡದಡನೆ ಇಳಿಯುತ್ತ ಜೋಯಿಸರ ಮಗಳು ಕಿರುಚಿದ್ದಳು :

'ಅಪ್ಪಯ್ಯಾ ಅಪ್ಪಯ್ಯಾ ಬನ್ನಿ, ಅತ್ತಿಗೆ. ಅತ್ತಿಗೆ...'

ಜೋಯಿಸರು ಒಳಗೆ ಓಡಿದರು. ಜಗನ್ನಾಥನೂ ಓಡಿ ಮೆಟ್ಟಲು ಹತ್ತಿದ. ಬಣ್ಣದ ಸೌತೆಕಾಯಿಗಳನ್ನು ಬಾಳೆಯ ನಾರಿನಲ್ಲಿ

ತೂಗಿದ್ದ. ಮಡಿಬಟ್ಟೆಗಳನ್ನು ಹರವಿದ್ದ ಮಹಡಿಯಲ್ಲಿ ಮೇಲ್ಛಾವಣಿಯ ತೊಲೆಗೆ ಇಳಿಬಿಟ್ಟ ಹಗ್ಗಕ್ಕೆ ನಾಗಮಣಿ ನೇತು ಬಿದ್ದಿದ್ದಳು. ಕೆಳಗೊಂದು ಏಣಿಬಿದ್ದಿತ್ತು.

ಜಗನ್ನಾಥ ಸೂರಿನ ತೊಲೆಗೆ ಏಣಿಯನ್ನಿಟ್ಟು ಸರ ಸರನೇ ಹತ್ತಿದ, ನಾಗಮಣಿಯನ್ನು ಮೇಲಕ್ಕೆತ್ತಿ ಮೈಗವಚಿಕೊಂಡು 'ಕತ್ತಿ ಕೊಡಿ' ಎಂದು ಅರಚಿದ. ಜೋಯಿಸರು ಧೋತ್ರವನ್ನೆಸೆದು ಓಡಿಹೋಗಿ ಕತ್ತಿ ತಂದುಕೊಟ್ಟರು. ಹಗ್ಗವನ್ನು ಕತ್ತರಿಸಿ ಜಗನ್ನಾಥ ಮೆಲ್ಲನೆ ನಾಗಮಣಿಯನ್ನು ಕೆಳಗಿಳಿಸಿ ನೆಲದ ಮೇಲೆ ಮಲಗಿಸಿದ. ಕತ್ತಿಗೆ ಬಿಗಿದಿದ್ದ ಕುಣಿಕೆ ಬಿಚ್ಚಿದ.

'ಓಡಿಹೋಗಿ ಡಾಕ್ಟರನ್ನು ಕರೆದು ತನ್ನಿ' ಎಂದ. ಜೋಯಿಸರು ಮತ್ತೆ ಓಡಿದರು. ಜಗನ್ನಾಥ ನಾಗಮಣಿಯ ಮೈಮುಟ್ಟಿ ನೋಡಿದ. ಬೆಚ್ಚಗಿದೆ ಎನ್ನಿಸಿತು. ಅಥವಾ ತನ್ನ ಭ್ರಮೆಯೊ? ಅವಳ ಕತ್ತು ಮುರಿದು ಮೂಗೂ ಬಾಯಿಂದ ರಕ್ತ ಹರಿದಿತ್ತು. ಅವಳ ಕಣ್ಣುಗುಡ್ಡೆಗಳು ಮೇಲೆ ಸಿಕ್ಕಿದ್ದುವು. ಅವಳನ್ನು ಉಸಿರಾಡಿಸಲು ತನಗೆ ಗೊತ್ತಿದ್ದು ಉಪಾಯಗಳನ್ನೆಲ್ಲ ಮಾಡಿದ. ಮುಖ ಅಡಿಯಾಗಿ ಮಲಗಿಸಿ ಬೆನ್ನನ್ನು ಒತ್ತಿದ. ಬಾಯಿಗೆ ಬಾಯಿ ಕೊಟ್ಟು ಉಸಿರಾಡಿದ. ಎದೆಯನ್ನು ಉಜ್ಜಿದ. ವಿಕಾರವಾಗಿದ್ದ ಅವಳ ಕಣ್ಣುಗಳನ್ನು ಮುಚ್ಚಿದ. ಹುಡುಗಿಯ ಕೈಯಲ್ಲಿ ನೀರು ತರಿಸಿ ಅವಳ ಮುಖವನ್ನು ತೊಳೆದ.

ಸೈಕಲ್ ಮೇಲೆ ಬಂದ ಡಾಕ್ಟರರು ಪರೀಕ್ಷಿಸಿ 'ಪ್ರಾಣ ಹೋಗಿದೆ' ಎಂದರು. ಜೋಯಿಸರು ತಲೆಯ ಮೇಲೆ ಕೈಹೊತ್ತು ಕೂತರು. ಅವಾಕ್ಕಾಗಿ ಮಾತಿಲ್ಲದೆ ಕೂತ ಜೋಯಿಸರಿಗೆ ಏನು ಹೇಳುವುದು ತೋರದೆ ಜಗನ್ನಾಥ ನಿಂತ. ಆ ವರ್ಷ ತಾನೇ ಪಾಸುಮಾಡಿ ಬಂದಿದ್ದ ಯುವಕ ಡಾಕ್ಟರ್:

'ಸೂಯಿಸೈಡ್ ಆದ್ದರಿಂದ ಪೊಲೀಸರಿಗೆ ತಿಳಿಸಬೇಕು. ಪೋಸ್ಟ್‌ಮಾರ್ಟಂ ಮಾಡಬೇಕು. ಸಾರಿ, ನಾನು ಹೋಗ್ತೇನೆ' ಎಂದು ಹೊರಟು ಹೋದರು. ಗದ್ದಲವಾದ್ದರಿಂದ ಜೋಯಿಸರ ಮನೆ ತುಂಬ ಜನ ನೆರೆದರು. 'ಅಯ್ಯೋ ಎಷ್ಟು ಒಳ್ಳೇ ಹುಡುಗಿ. ಒಂದೂ ಮಾತಾಡ್ದೆ ಎಲ್ಲಾ ಕೆಲಸ ಮಾಡಿಕೊಂಡು ಹೋಗ್ತಿದ್ಳು.' ಎಂದು ಕೆಲವು ಹೆಂಗಸರು ಹೇಳಿಕೊಂಡು ಅಳಲು ಪ್ರಾರಂಭಿಸಿದರು. ಜಗನ್ನಾಥ ನಾಗಮಣಿಯ ಗಂಡನ ಅಡ್ರೆಸ್ಸನ್ನು ಕೇಳಿ ಪಡೆದ. ಅವಳ ತಂದೆಯ ಅಡ್ರೆಸ್ ಕೇಳಿದಾಗ ತಂದೆ ತಾಯಿ ಇಬ್ಬರೂ ಇಲ್ಲವೆಂದು ತಿಳಿಯಿತು. ಹಾಸನದಲ್ಲಿ ಅಣ್ಣ ಹೋಟೆಲೊಂದರಲ್ಲಿ ಅಡಿಗೆಗಿದ್ದಾನೆಂದು ಯಾರೋ ಹೇಳಿದರು. ಅವಳ ಗಂಡನಿಗೆ ಬರುವಂತೆ ಟೆಲಿಗ್ರಾಂ ಕಳಿಸುತ್ತೇನೆಂದು ಜೋಯಿಸರಿಗೆ ಹೇಳಿ ಜಗನ್ನಾಥ ಹೊರಟ. ಮನೆಯ ತುಂಬ ಬೀದಿಯ ತುಂಬ ಸೇರಿದ್ದ ಜನರನ್ನು ನೊಡಿ ಅವನಿಗೆ ವಾಕರಿಕೆಯಾಯಿತು. ದೇವಸ್ಥಾನದ ಊಟ ಮುಗಿಸಿ ಕೈಯಲ್ಲಿ ಲೋಟ ಹಿಡಿದು ನಿಂತಿದ್ದವರು ಹಲವರು. ಎರಡು ಮೂರು ನಿಮಿಷಕ್ಕೊಮ್ಮೆ ಅವನ ಮೈ ಅಸಹನೀಯವಾಗಿ ನಡುಗತೊಡಗಿತು. ಒಣಗಿದ ಗಂಟಲನ್ನು ಒದ್ದೆಮಾಡಿಕೊಳ್ಳಲು ಯತ್ನಿಸುತ್ತ, ಆದರೆ ಉಗುಳು ನುಂಗಲು ಅಸಹ್ಯಪಡುತ್ತ ಸೀದ ಪೋಸ್ಟಾಫೀಸಿಗೆ ಹೋಗಿ, ಟೆಲಿಗ್ರಾಂ ಕೊಟ್ಟು ತನ್ನ ಮನೆಗೆ ಹೋದ, ಊಟ ಬೇಡವೆಂದು ಹೇಳಿ ರೂಮಿಗೆ ಹೋಗಿ ಹಾಸಿಗೆಯ ಮೇಲೆ ಮಲಗಿದ. ಅಳಬೇಕೆನ್ನಿಸಿತು. ಆದರೆ ಆಗಲಿಲ್ಲ. ನಿಟ್ಟುಸಿರಿಡುತ್ತ ಏನೂ ತಿಳಿಯದಂತಾಗಿ ಚಡಪಡಿಸುತ್ತ ಸಾಯಂಕಾಲವಾಗುವುದನ್ನು ಕಾದ. ದೂರದಿಂದ ಹೊಲೆಯರು ಬರುವುದು ಕಾಣಿಸಿತು. ಬರಿ ಲಂಗೋಟಿ ಉಟ್ಟ ಕಪ್ಪು ಮೈಗಳು, ಕೆದರಿದ ತಲೆಗಳು, ಏನನ್ನೂ ನಿರೀಕ್ಷಿಸದ ಕಣ್ಣುಗಳು. ಇವತ್ತು ಬೇಡವೆಂದು ಅವರಿಗೆ ಹೋಗಿ ಹೇಳಿದ. ನಾಗಮಣಿಯ ಸಾವನಿಂದ ತಾನು ಸಂಕಟಪಡುತ್ತಿದ್ದೇನೆಂಬುದು ಚಿಕ್ಕಿಗೆ ತಿಳಿದಿರಬೇಕು. ರೂಮಿಗೆ ಕಾಫಿಯನ್ನು ತಂದು

ಮೇಜಿನ ಮೇಲಿಟ್ಟು ಜಗನ್ನಾಥನ ಸುಡುವ ಹಣೆ ಮುಟ್ಟಿ ನೋಡಿ ಕೆಳಗೆ ಹೋದರು. ಜಗನ್ನಾಥ ಬಾಲಕನಾಗಿದ್ದಾಗ ಮನಸ್ಸಿಗೆ ಕ್ಷೋಭೆಯಾದಾಗೆಲ್ಲ ಅವನಿಗೆ ಹೇಗೆ ಜ್ವರ ಬರುತ್ತಿತ್ತೆಂಬುದನ್ನು ತಿಳಿದ ಅವರು ಸುಮ್ಮನೇ ಹೊರಟು ಹೋದದ್ದನ್ನು ನೋಡಿ ಜಗನ್ನಾಥ ಕೃತಜ್ಞತೆಯಿಂದ ಕಣ್ಣು ಮುಚ್ಚಿ ಮಲಗಿದ. ಇದ್ದಕ್ಕಿದ್ದಂತೆ ರಾತ್ರೆ ಎಚ್ಚರವಾದಾಗ ಬೆಳದಿಂಗಳಿತ್ತು. ಜಗನ್ನಾಥನಿಗೆ ಕಿರಿಕಿರಿಯಾಗಿ ಕಿಟಕಿ ಮುಚ್ಚಿದ. ಮತ್ತೆ ಶೂನ್ಯವಾದ ಮನಸ್ಸಿನಿಂದ ಥಟ್ಟನೇ ಏನು ವಿಚಾರ ಮೂಡಿತು ? ಎಲ್ಲವುದಕ್ಕೂ ನಿಶ್ಚಯಿಸು, ನುಗ್ಗು, ಹೆದರುವುದು ಅನಗತ್ಯ, ಯಾಕೆಂದರೆ ಕ್ರಿಯೆ ಸಾಧ್ಯವಾಗದಿದ್ದಲ್ಲಿ – ತನ್ನ ವಿಚಾರವನ್ನು ಮಾತಿನಲ್ಲಿ ಸ್ಪಷ್ಟಮಾಡಿಕೊಳ್ಳಲಾರದೆ ಜಗನ್ನಾಥ ಸುಮ್ಮನಾದ. ಈಗ ಬದುಕಿದ್ದು ಈಗ ಸತ್ತಿದ್ದ ನಾಗಮಣಿಯನ್ನು ಒಳಹೋಗಲು ಮತ್ತೆ ಮತ್ತೆ ಯತ್ನಿಸಲು ಸುಸ್ತಾಗಿ ನಿದ್ದೆ ಹೋದ.

ತನ್ನನ್ನು ಕವಿದಿದ್ದ ಮಂಕನ್ನು ಹರಿದುಕೊಳ್ಳಲು ಬೆಳಿಗ್ಗೆ ಎದ್ದವನೇ ಜಗನ್ನಾಥ ಗೇರುಗುಡ್ಡ ಹತ್ತಿಹೋದ. ಮಾರ್ಗರೆಟ್‌ಗೆ ಬರೆಯಬೇಕೆಂದಿದ್ದ ಕಾಗದದ ಮಾತಿನ ತುಣುಕುಗಳು ಮನಸ್ಸಿಗೆ ಬರತೊಡಗಿದವು; ಡೆಸ್ಪರೇಟ್ ಆಗಿ ನಾನು ಕ್ರಿಯೆಗೆ ತೊಡಗಿದ್ದೇನೆ. ಹೊಲೆಯರ ಜೊತೆ ಸಾಧ್ಯವಾಗುವ ಮಾತುಗಳಲ್ಲಿ ಮತ್ತೆ ನಾನು ಕುಡಿಯೊಡೆದು ಚಿಗುರಿಯೇನು, ಊರು ಚಿಗುರೀತು. ಚಾವಡಿಯ ಮೇಲೆ ಪಟ್ಟಂಗೆ ಹರಟುತ್ತಿದಾಗ ನಾಗಮಣಿ ತನ್ನ ಪಾಡಿಗೆ ತಾನು ನಿಶ್ಚಯಿಸಿಬಿಟ್ಟಿದ್ದು ನೋಡಿದರೆ -

ಆದರೆ ನಾಗಮಣಿಯ ಕ್ರಿಯೆಯ ಅರ್ಥ ಜಗನ್ನಾಥನಿಗೆ ಸಂಪೂರ್ಣ ಹೊಳೆಯುವುದಿಲ್ಲ. ತುಂಬ ಆರ್ತನಾಗಿ ತಾನು ಒಡ್ಡಿಕೊಂಡು ನಿಂತಂತೆ, ಈ ಒಡ್ಡಿ ಕೊಂಡಿರುವ ದಿಕ್ಕಿನಲ್ಲಿ ಪ್ರಾಯಶಃ ಏನೂ ಇಲ್ಲವೆನ್ನಿಸಿ ಹಾಸ್ಯಾಸ್ಪದವಾದಂತೆ. ಅದೂ ಅಲ್ಲ. ಮತ್ತೆ? ನಿಂತಳು. ಬಗ್ಗಿದಳು. ಬಡಿಸಿದಳು. ಹತ್ತಿದಲು. ಹಗ್ಗಕ್ಕೆ ಕುಣಿಕೆ ಹಾಕಿ ಏಣಿಯನ್ನೊದ್ದಳು. ಸತ್ತಳು. ಯಾರಿಗೂ ತಿಳಿಯದಂತೆ ಉರಿಯುತ್ತಿದ್ದಳು. ಹಾಗೆಯೇ ನಂದಿಬಿಟ್ಟಳು. ಉರಿಯುತ್ತಿದ್ದವಳು ನಂದಿಬಿಡುವ ನಿಶ್ಚಯ ಮಾಡಿದ್ದು ನೋಡಿದರೆ ನಾನು ಯೋಜಿಸಿರುವ ಕ್ರಿಯೆ ಅಸಂಗತ ಅನ್ನಿಸತ್ತೆ, ನನ್ನ ಒಡ್ಡಿ ಕೊಂಡಿರುವ ಈ ಆರ್ತತೆ ಹಾಸ್ಯಾಸ್ಪದ ಅನ್ನಿಸತ್ತೆ, ನಾನು ವಿಫಲನಾಗುವ ಸಾಧ್ಯತೆ ಕಂಡ ಮಾರ್ಗರೆಟ್ ನೀನು ಹೇಳು. ಈ ಮಂಜುನಾಥ ಲೋಳೆ, ಜೋಯಿಸರು ಲೋಳೆ, ಶಾಸ್ತ್ರಿ ಲೋಳೆ; ಕಾವೇರಿ ನಾಗಮಣಿ ನೀವು ಕೀರಿದಿರಿ, ಹೊಲೆಯರು ಪ್ರಾಯಶಃ ಕೀರುವರು. ಬಿಸಿಲು, ಒಡ್ಡಿದ ಬೆನ್ನು, ಸೇಬಿನ ಮರ, ಬೇಸಿಗೆಯ ಪ್ರಶಾಂತ ಭಾನುವಾರ ನನ್ನನ್ನು ತಿರಸ್ಕರಿಸಿದಾಗ, ಮತ್ತೆ ನಾಗಮಣಿ ನಿನ್ನೆ ನನ್ನನ್ನು ತಿರಸ್ಕರಿಸಿದಾಗ – ನಡೆಯುತ್ತಿದ್ದ ಜಗನ್ನಾಥ ನಿಂತ. ನೆತ್ತಿಯ ಹತ್ತಿರ ಗುಡ್ಡ ಕಡಿದಾಗಿತ್ತು. ಭಾವವಶನಾಗಿ ಮಾಡು ಹುಡುಕುತ್ತ ಯೋಚಿಸುವಾಗ ಮತ್ತೆ ನಾನು ಲೋಳೆ ಲೋಳೆಯಾಗುತ್ತೇನೆ. ಲೋಳೆಯಾದ್ದು ಕೊಕ್ಕು ಪುಕ್ಕ ಗರಿ ಉಗುರುಗಳಾಗುತ್ತವೆಂದು ಆಶಿಸುತ್ತ ಕಾದು ಕೂರುತ್ತೇನೆ. ಬೇನೆಯಾದ್ದು ಮತ್ತೆ ಮತ್ತೆ ಮುಕ್ಕುತ್ತೇನೆ. ನಾನು ಮುಕ್ಕುತ್ತಿದ್ದಾಗ ನಾಗಮಣಿ ಮಹಡಿ ಹತ್ತಿದಳು. ಏಣಿಯನ್ನೊದ್ದು ಸತ್ತಳು. ಬೆಚ್ಚಗಿನ ಸಂದಿಗಳಲ್ಲಿ ಕೂದಲಾಗಿ ಒಡೆಯ ಸುಖ ನಿರೀಕ್ಷಿಸುವ ಯೌವನವನ್ನು ಉಪದ್ರವೆಂದು ನಂದಿಸಿದಳು. ಮಧ್ಯಾಹ್ನ ಮತ್ತೆ ನಾನು ತಿರಸ್ಕೃತನಾದೆ. ಹೀಗೆ ಆರ್ತತೆಯಲ್ಲಿ ಜಿನುಗುತ್ತಿದ್ದರೂ ಲೋಳೆಯಾಗುತ್ತೇನೆ. ಮಂಜುನಾಥನನ್ನು ಎದುರು ಹಾಕಿಕೊಂಡು ನಿಲ್ಲದ ಹೊರ್ತು. ಚರಿತ್ರೆಯಲ್ಲಿ ಇನ್ನೂ ಪದಾರ್ಪಣ ಮಾಡದಿರುವ ಹೊಲೆಯರ ಮನಸ್ಸಿನಲ್ಲಿ ಈ ಜಿನುಗುವ ಮಾತುಗಳು ಬೀಜಗಳಾಗದ ಹೊರ್ತು.

ಜಗನ್ನಾಥ ಗುಡ್ಡದ ನೆತ್ತಿಯ ಮೇಲೆ ನಿಂತು ಭಾರತೀಪುರವನ್ನು ನೋಡಿದ. ಅರ್ಧ ಸ್ವಪ್ನದಲ್ಲಿರುವಂತೆ ಹಿಮವನ್ನು ಹೊದ್ದಿರುವ ಪೇಟೆ. ಈ ಪೇಟೆಯ ಮೇಲೆ ಕಾವು ಕೂತಿರುವ ನನ್ನ ಆರ್ತತೆ ಅರ್ಥಹೀನವಾದ್ದು ಎಂದು ಅನ್ನಿಸತ್ತೆ

ಮಾರ್ಗರೆಟ್. ಲೋಳೆಯಾದ ನನ್ನಲ್ಲಿ ನೀನು ಉಗುರು ಕೊಕ್ಕುಗಳನ್ನು ಅಪೇಕ್ಷಿಸಿದ್ದರಿಂದ ನಿನಗೆಲ್ಲ ಹೇಳುತ್ತೇನೆ ಮಾರ್ಗರೆಟ್, ನೀನೂ ಪ್ರಾಯಶಃ ಅರಳುವವಳಲ್ಲ. ಕೂದಲನ್ನು ಕೆನ್ನೆಯಿಂದ ತಳ್ಳಿ ಯಾವುದೋ ಭಯಂಕರ ಸತ್ಯಕ್ಕೆ ಸನ್ನದ್ಧಳಾಗುವಂತೆ ನೀನು ಕೂರುತ್ತೀಯಲ್ಲ, ವಾದದಲ್ಲಿ ಬಿಲ್ವವೃಕ್ಷದಂತೆ ಮುಳ್ಳು ಮುಳ್ಳಾಗುತ್ತೀಯಲ್ಲ – ಇವೆಲ್ಲ ಒಂದು ದಿನ ನಿನಗೂ ಸುಳ್ಳೆನಿಸುತ್ತೆ. ಹೆದರಿಕೆಯಾಗುತ್ತೆ. ಸೂರ್ಯ ನಿನ್ನನ್ನು ತಿರಸ್ಕರಿಸುತ್ತಾನೆ.

ಜಗನ್ನಾಥ ಗುಡ್ಡವಿಳಿದು ಬಂದ. ಮುಖ ತೊಳೆದು ಕಾಫಿ ಕುಡಿದು ಮತ್ತೆ ಮಲಗಿದ. ಯಾರೋ ಬಂದರೆಂದು ಕೆಳಗಿಳಿದು ಹೋದ. ರಾಯರ ಮಗ ರಂಗಣ್ಣ ಬಂದಿದ್ದ. ಅವನ ಕೈಯಲ್ಲಿ ಇನ್ನೂರು ರೂಪಾಯಿ ಕೊಟ್ಟು 'ಅಮ್ಮನಿಗೆ ಕೊಡು. ಇವತ್ತನಿಂದಲೇ ಕೆಲಸಕ್ಕೆ ಬಾ' ಎಂದ. ಇನ್ನೊಬ್ಬರು ಕಾದಿದ್ದರು. ಯಾರೋ ರಾಮಕೃಷ್ಣಯ್ಯ, ಬಡಕಲು ಮನುಷ್ಯ. ಎಂಟು ಮಕ್ಕಳಂತೆ. ದೇವಸ್ಥಾನದವರು ಗೇಣಿ ಕೊಡಲಿಲ್ಲವೆಂದು ತೋಟ ಬಿಡಿಸಿದರಂತೆ. ಮನೆ ಜಪ್ತಿ ಮಾಡಿದರಂತೆ. ಜಗನ್ನಾಥ ಕೋರ್ಟಿಗೆ ಹೋಗಿ ಎಂದ. ರಾಮಕೃಷ್ಣಯ್ಯ ನರಪೇತಲನಂತೆ ಮಾತಾಡದೆ ಕೂತ. ನಾನೇನು ಮಾಡಬಲ್ಲೆ ಎಂದ ಜಗನ್ನಾಥ. ಪ್ರಭುಗಳಿಗೆ ಹೇಳಿ ಎಂದು ರಾಮಕೃಷ್ಣಯ್ಯ ಅಂಗಲಾಚಿದ. ಸುಕ್ಕುಬಿದ್ದ ಮುಖ, ಒಂಟಿ, ಕೆದರಿದ ಕ್ರಾಪು, ಗೊಗ್ಗರು ಧ್ವನಿ – ಜಗನ್ನಾಥನಿಗೆ ರಗಳೆಯಾಯಿತು. ಕೇಸು ಹಾಕುವುದಾದರೆ ದುಡ್ಡು ಕೊಡುತ್ತೇನೆ ಎಂದ. ರಾಮಕೃಷ್ಣಯ್ಯ ಉತ್ತರಕೊಡಲಿಲ್ಲ. 'ಮಕ್ಕಳೊಂದಿಗೆ, ಕೈಬಿಡಬಾರದು' ಎಂದ. 'ತಾಕತ್ತಿದ್ದರೆ ಕೋರ್ಟಿಗೆ ಹೋಗಬೇಕು ರಾಮಕೃಷ್ಣಯ್ಯ' ಎಂದು ಜಗನ್ನಾಥ ರೇಗಿದ. ದೇವಸ್ಥಾನದಲ್ಲಿ ನಿತ್ಯ ಸಿಗುವ ಅನ್ನವೂ ತಪ್ಪೀತೆಂದು ರಾಮಕೃಷ್ಣಯ್ಯ ನಿಟ್ಟುಸಿರಿಟ್ಟ. ಜಗನ್ನಾಥ ತಬ್ಬಿಬ್ಬಾದ. 'ನನ್ನ ಹತ್ತಿರ ಗೇಣಿಗೆ ಕೊಡುವ ತೋಟವಿಲ್ಲ, ಸಾಗುವಳಿಯಾಗದ ಗದ್ದೆಯಿದೆ. ಕೊಡುತ್ತೇನೆ. ಅಲ್ಪ ಸ್ವಲ್ಪ ಸಹಾಯಮಾಡಬಲ್ಲೆ. ನಾಳೆಯೋ ನಾಡಿದ್ದೋ ಬನ್ನಿ. ನನ್ನದೊಂದು ಕಾಗದ ಪೇಪರಲ್ಲಿ ಬರತ್ತೆ. ಅದನ್ನು ಓದಿ ಬನ್ನಿ' ಎಂದ. ರಾಮಕೃಷ್ಣಯ್ಯ ಆಗಲಿ ಎಂದು ಕೈಮುಗಿದು ಹೊರಟ. 'ಊಟ ಮಾಡಿಕೊಂಡು ಹೋಗಿ' ಎಂದ. 'ಆಗಬಹುದು' ಎಂದು ರಾಮಕೃಷ್ಣಯ್ಯ ನಿಂತ. ಜಗನ್ನಾಥ ಮಹಡಿ ಹತ್ತಿ ಯೋಚಿಸಿದ. ಪೇಪರಿನ ವಿಷಯ ರಾಮಕೃಷ್ಣಯ್ಯನಿಗೆ ಯಾಕೆ ಹೇಳಿದೆ? ಅವನಿಗೆ ಸಿಟ್ಟು ಬರುವಂತೆ ನಾನು ಮಾಡಬಲ್ಲೆನೆ? We live in apathy margaret. ನಮ್ಮ ಕನಸುಗಳೆಲ್ಲ ಗೋಟಡಕೆಯ ರಾಶಿಗಳಾಗುತ್ತವೆ. ಚೀಲದಲ್ಲಿ ತುಂಬಿ ಮಂಡಿ ಸೇರುತ್ತವೆ. ಕೆಲವೊಮ್ಮೆ ಅಡಿಕೆಗೆ ಕೊಳೆ ಹಿಡಿದು ಕನಸು ವಿಫಲವಾಗುತ್ತದೆ. ಮುದಿಮರಗಳ ತೋಟಕ್ಕಾದರೂ ರಾಮಕೃಷ್ಣಯ್ಯ ಹಾತೊರೆಯುತ್ತಾನೆ.

ರಾಮಕೃಷ್ಣಯ್ಯನನ್ನು ನೋಯಿಸುವುದಾಗಲೀ ರೇಗಿಸುವುದಾಗಲೀ ಸಾಧ್ಯವೇ ಇಲ್ಲವೆನ್ನಿಸಿತು. ಈ ಪ್ರದೇಶದಲ್ಲಿ ಅಡಿಕೆತೋಟ ಮಾಡುವ ಕನಸನ್ನು ಯಾವತ್ತೂ ಕಾಣದವರೆಂದರೆ ಹೊಲೆಯರು ಮಾತ್ರ. ಈ ನೆಲದಲ್ಲಿ ತಮಗಾಗಿ ಯಾವುದನ್ನೂ ನೆಟ್ಟುಕೊಳ್ಳದೆ, ಸಗಣಿ ಬಾಚಿ ಹೇಲೆತ್ತುವ ಹೊಲೆಯರು ಮಾತ್ರ ಮಂಜುನಾಥನನ್ನು ತಿರಸ್ಕರಿಸಬಲ್ಲರೆನ್ನಿಸಿ ಜಗನ್ನಾಥನಿಗೆ ಮತ್ತೆ ಉತ್ಸಾಹ ಹುಟ್ಟಿತು.

ಮೇಜಿನ ಎದುರು ಜಗನ್ನಾಥ ಬರೆಯಲೆಂದು ಕೂತ.

* * *

ಮಧ್ಯಾಹ್ನ ಯಾತ್ರಿಕರು, ಔಷಧಿಗೆಂದು ಬಂದವರು, ರಾಮಕೃಷ್ಣಯ್ಯ ಇತ್ಯಾದಿ ಜನರ ಜೊತೆ ಕೂತು ಊಟ ಮಾಡಿದ. ಮಹಡಿ ಹತ್ತಿ ತನ್ನ ರೂಮಿಗೆ ಹೋದ. ಹಾಸಿಗೆಯಡಿಯಲ್ಲಿ ಹೊಸ ಸಿಂಗಾರ, ಭೂತರಾಯನ ತಾಯಿತ, ಪೊಟ್ಟಣದಲ್ಲಿ ಮಂಜುನಾಥನ ಕುಂಕುಮ. ನಿತ್ಯ ತಾನು ಹೊಲೆಯರ ಯುವಕರಿಗೆ ಮರಳಿನಲ್ಲಿ ಅಕ್ಷರಾಭ್ಯಾಸ ಮಾಡಿಸುವುದನ್ನು ನೋಡಿ ದಿಗಿಲಾದ ಚಿಕ್ಕಿಯ ಮಸಲತ್ತಿಗೆ ನಗು ಬಂತು. ದೇವರು ತನ್ನ ಮೇಲೆ ಪರಿಣಾಮವನ್ನು ಮಾಡಲಾರ ಎಂಬುದನ್ನು ಚಿಕ್ಕಿಗೆ ಮನದಟ್ಟು ಮಾಡಲೆಂದು ಪ್ರಸಾದ ತಾಯಿತಗಳನ್ನು ಹಾಸಿಗೆಯಡಿಯಲ್ಲೇ ಬಿಟ್ಟ. ಹೊಲೆಯರಿಗಿನ್ನೂ ಜಗನ್ನಾಥ ದೇವಸ್ಥಾನದ ಪ್ರವೇಶದ ಬಗ್ಗೆ ಹೇಳಿಲ್ಲ. ಅವರಿನ್ನೂ ತನಗೆ ನಿಜವಾಗಿಲ್ಲ. ಆತ್ಮೀಯವಾಗಿ ಅದೂ ಇದೂ ಮಾತಾಡಲು ಪ್ರಯತ್ನಿಸುತ್ತ ಅವರಿಗೆ ಅಕ್ಷರ ಕಲಿಸುತ್ತಿದ್ದಾನೆ ಅಷ್ಟೆ. ಮರಳಿನ ಮೇಲೆ ಬೆರಳಿನಲ್ಲಿ ತಿದ್ದುತ್ತಾರೆ. ಧಣಿಯ ಅಪ್ಪಣೆ ನಡೆಸುತ್ತಾರೆ. ಬೆಚ್ಚಿ ಕಂಗಾಲಾಗಿ. ಅಷ್ಟೆ. ಇಷ್ಟಕ್ಕೇ ಚಿಕ್ಕಿ ಹೆದರಿದ್ದಾರೆ. ತನ್ನ ಮನೋಗತ ಸಂಪೂರ್ಣ ತಿಳಿದ ಮೇಲೆ? ಜಗನ್ನಾಥನಿಗೆ ದಿಗಿಲಾಯಿತು.

ಮಧ್ಯಾಹ್ನದ ಮೇಲೆ ಹೊಲೆಯರ ಯುವಕರು ಬಂದವು. ಇವುಗಳ ಹೆಸರುಗಳೇ ಮರೆತುಹೋಗುತ್ತವೆ. ಯಾರು ಪಿಳ್ಳ, ಯಾರು ಕರಿಯ, ಯಾರು ಮುದ್ದ. ಚ, ಜ, ಟ ಅಕ್ಷರಗಳು ಬರುವ ಶಬ್ದಗಳನ್ನು ಮರಳಲ್ಲಿ ಬರೆದುಕೊಟ್ಟು ತಿದ್ದುವಂತೆ ಹೇಳಿದ. ಎಷ್ಟೊಂದು ಸರಾಗವಾಗಿ ಸೌದೆ ಒಡೆಯಬಲ್ಲ ಹುಡುಗರು ಮರಳಿನ ಎದುರು ಬಗ್ಗಿ ಕೂತು ಅಕ್ಷರ ತಿದ್ದುವಾಗ ಹೇಗೆ ಮುಕ್ಕುತ್ತಾವೆ. ಬಾಯಲ್ಲಿ ಅಕ್ಷರವನ್ನು ಉಚ್ಚರಿಸುತ್ತ ಅವುಗಳ ಬೆರಳು ಅಕ್ಷರದ ಮೈಮೇಲೆ ಆಡುವಾಗ ಬರಿ ಮೈಯ ಮಾಂಸಖಂಡಗಳೆಲ್ಲವೂ ಯಾತನೆಯಲ್ಲಿ ತಿರುಪಿಕೊಂಡಂತೆ ಕಾಣುತ್ತವೆ. ಕತ್ತಿನ ನರಗಳು ಉಬ್ಬಿಕೊಳ್ಳುತ್ತವೆ. ಸ್ವಲ್ಪ ಹೊತ್ತಿಗೇ ಕಾಲುಗಳು ಜುಂಗುಟ್ಟಿ, ಎದ್ದಮೇಲೆ ಮರಳಿನ ಚೀಲಗಳನ್ನು ಕಾಲಿಗೆ ಕಟ್ಟಿಕೊಂಡವರಂತೆ ನಡೆಯುತ್ತಾವೆ. ಅಕ್ಷರ ತಿದ್ದುವಾಗ ಅವುಗಳ ಕಣ್ಣುಗಳಲ್ಲಿ ಮೂಡುತ್ತಿದ್ದ ದಿಗಿಲು ಕಂಡು ಜಗನ್ನಾಥನಿಗೆ ಕೆಲವೊಮ್ಮೆ ತೀವ್ರ ನಿರಾಶೆಯಾಗುತ್ತಿತ್ತು. ಕೆಲಸದ ಆಳುಗಳು ದೂರ ದೂರ ನಿಂತು ತನ್ನ ಈ ಕ್ರಿಯೆಯನ್ನು ಕೌತುಕದಿಂದ ನೋಡುವಾಗಲಂತೂ ಜಗನ್ನಾಥನಿಗೆ ಮುಜುಗರವಾಗುತ್ತಿತ್ತು. ಮಾಟ ಮಂತ್ರದಂತಹ ನಿಷಿದ್ಧವಾದ ವಿಧ್ಯುಕ್ತ ಕ್ರಿಯೆಯೊಂದರಲ್ಲಿ ತಾನು ತೊಡಗಿರುವಂತೆ ಅವನಿಗೆ ಅನ್ನಿಸುತ್ತಿತ್ತು.

ಒಂದು ಗಂಟೆ ಒಂದು ಯುಗವಾಗಿ ಹೊಲೆಯರಿಗೆ ಕಂಡಿರಬೇಕು. ನಾಳೆಯಿಂದ ಇವರಿಗೆ ತನ್ನ ಮನಸ್ಸಿನಲ್ಲಿರುವುದನ್ನು ಮೆಲ್ಲ ಮೆಲ್ಲನೆ ಹೇಳಬೇಕೆಂದುಕೊಂಡ. ಅವು ಕಾಲಿನ ಮೇಲೆ ದೊಡ್ಡ ಭಾರ ಹೊತ್ತವರಂತೆ ಎದ್ದು ನಿಂತವು. ಜಗನ್ನಾಥ ತಮ್ಮ ನಡುವೆ ಏನೋ ಹುಟ್ಟೀತೆಂದು ಆಶಿಸುತ್ತ ನಿಂತಿದ್ದ. ಸೊಪ್ಪು ಹೊತ್ತ ಕಾವೇರಿ ವಾರೆಗಣ್ಣು ಮಾಡಿ ಮುಗುಳ್ನಗುತ್ತ ಅಂಡುಗಳನ್ನು ಆಡಿಸುತ್ತ ನಡೆದುಹೋದಳು. 'ಬಾಯಿಗೆ ಕೊಡಿ ಒಡೆಯಾ' ಎಂದು ಒಬ್ಬ ಹೊಲೆಯಕೇಳಿದ. ಜಗನ್ನಾಥ ಚೀಲದಲ್ಲಿ ತಂದಿಟ್ಟಿದ್ದ ಅಡಿಕೆ ಹೊಗೆಸೊಪ್ಪನ್ನು ಅವಕ್ಕೆ ಹಂಚಿದ. ನಾಳೆಯಿಂದ ಅಕ್ಷರ ತಿದ್ದಲು ಕೂತಾಗಲೇ ಅವಕ್ಕೆ ಬಾಯಿಗೆ ಕೊಟ್ಟರೆ ಒಳ್ಳೆಯದೆನ್ನಿಸಿತು. ಆರಾಮವಾಗಿ ತಿದ್ದಿಯಾವು. ಬಿಗು ಕಳೆದು ಕಲಿಯಲು ಪ್ರಾರಂಭಿಸಿಯಾವು. ಮೆಲ್ಲಮೆಲ್ಲನೆ ತೆರೆದುಕೊಂಡಾವು. ಹೊಲೆಯರು ಹೋದ ಮೇಲೆ ಅಂಗಳ ದಾಟಿ ಒಳಗೆ ಬರುವಾಗ ದನ ಕರುಗಳು ಕೊಟ್ಟಿಗೆ ಸೇರುವುದನ್ನು ನಿರೀಕ್ಷಿಸುತ್ತ ಚಿಕ್ಕಿ ನಿಂತದ್ದು ಕಾಣಿಸಿತು. ತನ್ನನ್ನು ಆಪಾದಿಸುವಂತೆ ನೋಡಿ ಮತ್ತೆ ಕಟ್ಟು ಬಾಯ್‌ಕಟ್ಟು ಬಾಯ್‌ಎಂದು ದನವನ್ನು ಕರೆದರು. ಶಾಸ್ತ್ರಿ ಆಫೀಸಿನ ಹೊರಗೆ ನಿಂತು ರಂಗಣ್ಣನ ಪ್ರಶ್ನೆಗಳಿಗೆ ಉತ್ತರ ಕೊಡುತ್ತಿದ್ದ. ರಂಗಣ್ಣ ಆಫೀಸಿಗೆ ಬಂದಿರುವುದು ಅವನಿಗೆ ಇಷ್ಟವಾಗಿಲ್ಲವೆಂದು ಜಗನ್ನಾಥ ಊಹಿಸಿದ.

ಆಳುಗಳು ದೀಪ ಹತ್ತಿಸುತ್ತಿದ್ದರು. ಒಳಗೆ ಹೋಗಬೇಕೆನ್ನಿಸುವಷ್ಟರಲ್ಲೆ ರಾಯರು ಬರುತ್ತಿರುವುದನ್ನು ಕಂಡು ಜಗನ್ನಾಥ ನಿಂತ. ಶಿವಮೊಗ್ಗದಿಂದ ಬಂದ ರಾಯರು ಸೀದಾ ಜಗನ್ನಾಥನ ಮನೆಗೆ ಬಂದಿದ್ದರು. ಒಳಗೆ ಬಂದು ಕೂತವರೆ ಹೇಳಿದರು:

'ಜಗಣ್ಣ ನಮ್ಮ ರಂಗನಿಗೆ ಏನೂ ವ್ಯವಹಾರ ಜ್ಞಾನವಿಲ್ಲ. ಅವನ್ನ ಯಾಕೆ ಕೆಲಸಕ್ಕೆ ಇಟ್ಟುಕೊಂಡಿದಿ?'

'ಕಲ್ತಕೋತಾನೆ. ನಂಗೊಂದು ನಂಬಿಕಸ್ತ ಜನ ಬೇಕಿತ್ತು.'

'ಅದೆಲ್ಲ ಸುಳ್ಳು, ನನ್ನ ಹೆಂಡತಿ ಹತ್ರ ಜಗಳವಾಡಿ ಬಂದೆ – ಅವಳು ನಿನ್ನನ್ನ ಪೀಡಿಸಿರಬೇಕು.'

'ಇಲ್ಲ ರಾಯರೆ, ನಿಮ್ಮ ಮಗನಿಂದ ಕೆಲಸ ತಗಳ್ಳೋದನ್ನ ನನಗೆ ಬಿಡಿ. ನೀವು ಸುಮ್ಮನಿರಿ. ನಿಮಗೊಂದು ವಿಷಯ ಹೇಳ್ಬೇಕೂಂತಿದೀನಿ.'

ಕತ್ತಲಾಗಿತ್ತು. ರಾಯರನ್ನು ತನ್ನ ರೂಮಿಗೆ ಕರೆದುಕೊಂಡು ಹೋಗಿ ಬಾಗಿಲು ಹಾಕಿಕೊಂಡ. ಗ್ಯಾಸ್‌ಲೈಟ್ ಬೆಳಕಲ್ಲಿ ಎದುರು ಬದುರಾಗಿ ಇಬ್ಬರೂ ಕೂತರು. ಬೆತ್ತದ ಕುರ್ಚಿಯ ಮೇಲೆ ಕಾಲು ಮಡಿಸಿ ಕೂತ ರಾಯರು ಎಲೆಯಡಿಕೆ ಚೀಲವನ್ನು ಬಿಚ್ಚಿ 'ಏನು?' ಅಂದರು.

ಜಗನ್ನಾಥನಿಗೆ ದಿಗಿಲಾಯಿತು. ಆದರೂ ಒರಟು ಒರಟಾಗಿ ಹೇಳಿಬಿಟ್ಟ :

'ಅಮಾವಾಸ್ಯೆ ಜಾತ್ರೆದಿನ ದೇವಸ್ಥಾನದೊಳಗೆ ಹೊಲೆಯರನ್ನು ಕರ್ಕೊಂಡು ಹೋಗಬೇಕಂತ ಇದೀನಿ. ಹಾಗೇಂತ ಪೇಪರುಗಳಿಗೂ ಬರ್ದಿದೀನಿ, ನಾಳೆ ಬರಬಹುದು.'

ಅವನ ಗಂಟಲು ಒಣಗಿತ್ತು. ರಾಯ ಮುಖ ಭಯದಲ್ಲಿ ಬಿಳುಚಿಕೊಂಡಿತು. ದಂಗು ಬಡಿದಂತೆ ಮಾತನಾಡಲಾರದೆ ಕೂತ ರಾಯರನ್ನು ಕಂಡು ಜಗನ್ನಾಥನಿಗೆ ಸಂತೋಷವಾಯಿತು. ಹಾಗಾದರೆ ನನ್ನ ಕ್ರಿಯೆಗೆ ಅರ್ಥವಿದೆ. ಇಂತಹ ರಾಯರೇ ಬೆಚ್ಚಿದ ಮೇಲೆ? ರಾಯರು ಮಾತು ಹುಡುಕುತ್ತಿದ್ದರು : ಭಯವನ್ನು ಕೃತಕವಾದ ನಗುಮುಖದಿಂದ ಮುಚ್ಚಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಜಗನ್ನಾಥ ಮಾತಿಗೆ ಸನ್ನದ್ಧನಾಗಿ ಕೂತ.

'ಪ್ರಯೋಜನವಾಗಲ್ಲ ಜಗನ್ನಾಥ. ನಮ್ಮ ಆರೋಗ್ಯಮಂತ್ರಿ ಹರಿಜನರವನು, ಶಿವಮೊಗ್ಗದಲ್ಲಿ ಡಿ.ಸಿ. ಹರಿಜನರವನು. ಏನು ಪ್ರಯೋಜನ ಆಯ್ತು ಹೇಳು?'

ಜಗನ್ನಾಥ ಇನ್ನಷ್ಟು ಒರಟಾಗಿ ಕೇಳಿದ :

‘ಈಗ ನಿಮಗ್ಯಾಕೆ ಭಯವಾಗ್ತಿದೆ ಹೇಳಿ. ನನಗೆ ಯಾಕೆ ಭಯವಾಗ್ತಿದೆ ಹೇಳಿ.’

‘ಭಯದ ಪ್ರಶ್ನೆಯಲ್ಲ ಜಗನ್ನಾಥ. ಜನ ನಂಬಿ ಬದುಕಿದಾರೆ. ಅವರ ನಂಬಿಕೇನ್ನ ನಾಶಮಾಡಕ್ಕೆ ನಮಗೇನು ಅಧಿಕಾರ ಅಂತ. ದೇವರಲ್ಲಿರೊ ನಂಬಿಕೆ ಕಳಕೊಂಡು ಈ ಮಂತ್ರಿ ಮಂಡಲಾನ್ನ ನಂಬಿ ಬದುಕಿ ಅಂತ ಹೇಳಕ್ಕಾಗತ್ತ?’

‘ನೀವು ಸೋತಿದೀರಿ. ಅದಕ್ಕೆ ಹೀಗೆ ಲಿಬರಲ್‌ನಂತೆ ಮಾತಾಡ್ತ ಇದೀರಿ. ಮಂಜುನಾಥನ ಮಹಿಮೇನ್ನ ನಾಶಮಾಡದ ಹೊರ್ತು ಈ ಊರು creative ಆಗಲ್ಲ. ಹೊಲೆರಿಗೆ ಮಾತ್ರ ಅದು ಸಾಧ್ಯ. ನೋಡಿ ನೀವೇ ಎಷ್ಟು ಭಯಪಡ್ತ ಇದೀರಿ.’

ಜಗನ್ನಾಥನಿಗೆ ಇನ್ನೂ ಇನ್ನೂ ಕ್ರೂರವಾಗಿ ಮಾತಾಡಬೇಕೆನ್ನಿಸಿತು. ರಾಯರು ಪಡುತ್ತಿದ್ದ ದಿಗಿಲಿನಲ್ಲಿಯೆ ತನ್ನ ಕ್ರಿಯೆ ಸಫಲವಾಗಬಹುದಾದ ಸಾಧ್ಯತೆ ಕಂಡಿದ್ದರಿಂದ ಅವನು ಉತ್ತೇಜಿತನಾಗಿ ತನ್ನ ಯೋಜನೆಗಳನ್ನೆಲ್ಲ ರೋಷದಿಂದ ಹೇಳಿಕೊಂಡ. ರಾಯರು ಸುಸ್ತಾದ ಧ್ವನಿಯಲ್ಲಿ ಮಾತಾಡಿದರು :

‘ಮನಸ್ಸಲ್ಲಿ ದ್ವೇಷವಿರಕೂಡದು, ಪರಿಶುದ್ಧವಾಗಿರಬೇಕು ಅಂತ ಗಾಂಧೀಜಿ ಹೇಳ್ತಿದ್ದರು. ಕ್ರಾಂತಿ ಮಾಡಲು ಹೊರಟಾಗ ಯಾವ ಸ್ವಾರ್ಥ ಚಿಂತನೆಯೂ ಇರಕೂಡದು.’

ರಾಯರಿಗೆ ತನಗಾದ ಭಯವನ್ನು ಎದುರಿಸುವುದು ಕಷ್ಟವಾಗಿದೆಯೆಂದು ಜಗನ್ನಾಥನಿಗೆ ಅನ್ನಿಸಿತು. ಪಶ್ಚಾತ್ತಾಪದಿಂದ ಹೇಳಿದ :

‘ನಮಗೆ ಐತಿಹಾಸಿಕ ಪ್ರಜ್ಞೆಯಿಲ್ಲ ರಾಯರೆ. ನೀವು ಸುಸ್ತಾದವರಂತೆ ಮಾತಾಡ್ತ ಇದೀರಿ. ಆದರೆ ನೀವು ಹಿಂದೆ ಜವಳಿ ಅಂಗಡಿಗೆ ಬೆಂಕಿ ಹಾಕಿ ತಾಲ್ಲೂ ಕಛೇರಿ ಎದುರು ಮುಷ್ಕರ ಮಾಡಿದ್ರಲ್ಲ – ಅದರಿಂದಾಗಿ ನನಗಿವತ್ತು ಈ ಕೆಲಸ ಮಾಡಬೇಕಂತ ಅನ್ನಿಸಿದೆ. ನನ್ನನ್ನು ಸೃಷ್ಟಿಸೋಕೆ ನೀವು ಕಾರಣರು. ನೀವು ಈಗ ಸರಿದು ನಿಂತ ಹಾಗೆ ನಾನೂ ನಾಳೆ ಹೆದರಬಹುದು. ಸರಿದುನಿಲ್ಲಬಹುದು. ಆದರೆ ಚರಿತ್ರೆ ನಮ್ಮನ್ನೆಲ್ಲ ದುಡಿಸಿಕೊಳ್ಳುತ್ತೆ, ನಿರ್ದಯವಾಗಿ ದುಡಿಸಿಕೊಳ್ಳುತ್ತೆ.’

ರಾಯರು ಎಲೆಗೆ ಸುಣ್ಣ ಹಚ್ಚುತ್ತ ಚೇತರಿಸಿಕೊಂಡು ಹೇಳಿದರು. ಉಡಾಫೆ ಮಾತಲ್ಲಿ ಅವರು ಸಣ್ಣಗಾಗುತ್ತ ತಾನೂ ಸಣ್ಣಗಾಗುತ್ತಿದ್ದೇನೆ ಎನ್ನಿಸಿತು ಜಗನ್ನಾಥನಿಗೆ :

‘ಈ ಹೊಲೇರಿಗೆ ಬೇಕಾಗಿರೋದು ಹೆಂಡ. ದೇವರ ದರ್ಶನವಲ್ಲ. ನಿನ್ನ ಗುಲಾಮರು ಅವರು. ಆದ್ರಿಂದ ನೀನು ಹೇಳಿದ ಹಾಗೆ ಕೇಳಿಯಾರು. ನೀನು ಸುಮ್ಮನೇ ಅವರನ್ನ ಸತಾಯಿಸ್ತ ಇದೀಯ ಅಷ್ಟೆ.’

ಜಗನ್ನಾಥ ಮಾತಾಡಲಿಲ್ಲ. ರಾಯರು ಏನೇನೋ ಮಾತಾಡಲು ಪ್ರಾರಂಭಿಸಿದ್ದು ಕಂಡು ಅವನಿಗೆ ಬೇಸರವಾಯಿತು.

'ಊರಿಗೆ ಕಳಂಕ ತರ್ತಿದಾನೆ ಅಂತ ಅಪವಾದಕ್ಕೆ ಯಾಕೆ ಗುರಿಯಾಗ್ತೀಯ? ರಾಜಕೀಯ ತುಂಬ ಹೊಲಸಾಗಿದೆ. ನೀನು ಯಾಕೆ ನಿನ್ನ ಕೈಯನ್ನ ಕೊಳೆ ಮಾಡಿಕೋಬೇಕು ಹೇಳು. ಈ ದೇಶದಲ್ಲಿ ಏನು ಮಾಡಿಯೂ ಏನೂ ಪ್ರಯೋಜನವಿಲ್ಲ. ಅಲ್ಲದೆ ನೀನು ಬ್ರಾಹ್ಮಣನಾಗಿ ಹುಟ್ಟೋ ತಪ್ಪು ಬೇರೆ ಮಾಡಿದಿ. ಒಂದೊಂದು ಸಾರಿ ಮಿಲಿಟರಿ ಡಿಕ್ಟೇಟರ್‌ಶಿಪ್ಪಿಗೇ ಈ ಜನ ಬಗ್ಗೋದು ಅನ್ನಿಸುತ್ತೆ.'

ಜಗನ್ನಾಥ ಥಟ್ಟನೇ ಕೇಳಿದ :

'ನಾಗಮಣಿ ಸತ್ತದ್ದು ಗೊತ್ತಾಯ್ತ?'

ರಾಯರು ಉತ್ತರ ಕೊಡುವುದರೊಳಗೇ ಎದ್ದುನಿಂತು ಕಿಟಕಿಯ ಹತ್ತಿರ ಹೋದ. ಅವರಿಗೆ ಬೆನ್ನು ಹಾಕಿ ಹೇಳಿದ :

'ಸೋಲ್ತೀನೋ ಗೆಲ್ತೀನೋ ಮುಖ್ಯವಲ್ಲ ರಾಯರೆ. ಏನಾದರೂ ಮೂಲಭೂತವಾಗಿ ಮಾಡೋದು ಸಾಧ್ಯವಾಗದೇ ಹೋದ್ರೆ ನಾನು ಆತ್ಮಹತ್ಯೆ ಮಾಡಿಕೊಳ್ಳಬೇಕಾಗುತ್ತೆ – ಅಷ್ಟೆ.'

ಆಡಿದ ಮೇಲೆ ತಾನು ನಾಟಕೀಯವಾಗಿ ವರ್ತಿಸಿದೆನೋ ಎಂದು ಜಗನ್ನಾಥನಿಗೆ ಮುಜುಗರವಾಯಿತು. ತಿರುಗಿ ಕುರ್ಚಿಯ ಮೇಲೆ ಬಂದು ಕೂತ. ರಾಯರ ಮುಖ ಗಂಭೀರವಾದ್ದು ಕಂಡು ಸಮಾಧಾನವಾಯಿತು. ತನ್ನ ತೀವ್ರತೆಯನ್ನು ಅವರು ಒಪ್ಪಿಕೊಳ್ಳುವುದರ ಮೂಲಕ ನಿಜಮಾಡಿದರೆಂದು ಕೃತಜ್ಞನಾದ. ರಾಯರು ಹೇಳಿದರು :

'ಎಷ್ಟೋ ದೇವಸ್ಥಾನಗಳಲ್ಲಿ ಹರಿಜನ ಪ್ರವೇಶವಾದ್ರೂ ಏನೂ ಪ್ರಯೋಜನ ಆಗ್ಲಿಲ್ಲಾಂತ ನಿನಗೂ ಗೊತ್ತಿದೆ. ಆದ್ರೆ ನಿನ್ನ ಉದ್ದೇಶ ಬೇರೆ. ಅರ್ಥವಾಯ್ತು. ನನ್ನ ಭಯ ಅಂದ್ರೆ ಹೊಲೇರು ಒಳಗೆ ಹೋಗ್ತಾರೆ, ಪೇಪರಲ್ಲಿ ಸುದ್ದಿ ಬರತ್ತೆ, ಮತ್ತೆಲ್ಲ ತಣ್ಣಗಾಗುತ್ತೆ.'

ಜಗನ್ನಾಥನಿಗೆ ಮತ್ತೆ ಕಸಿವಿಸಿಯಾಯಿತು. ರಾಯರು ತನ್ನ ಅಂತರಂಗದಲ್ಲಿರುವುದನ್ನು ಕಣ್ಣುಬಿಟ್ಟು ನೋಡುತ್ತಿಲ್ಲವೆನ್ನಿಸಿತು. ಭಯಪಟ್ಟಾಗ ಅವರು ನಿಜವಾಗಿದ್ದಷ್ಟು ವಾದದಲ್ಲಿ ಅವರು ನಿಜವಾಗಿರಲಿಲ್ಲ. ಜಗನ್ನಾಥ ಸುಮ್ಮನೇ ಕೂತ. ನೀವು ಲೋಳೆಯಾಗಿದ್ದೀರಿ ರಾಯರೇ ಎಂದು ಹೇಳಬೇಕೆನ್ನಿಸಿತು. ರಾಯರು ಎದ್ದು ನಿಂತು ಹೇಳಿದರು:

'ನೈತಿಕ ಬಲಕ್ಕೂ ತಾಕತ್ತಿರಬೇಕು ಜಗನ್ನಾಥ. ನನ್ನ ಹಾಗೆ ಸೋತವನು ನೀತಿವಂತ ಕೂಡ ಆಗಿರಲಾರ.'

ಜಗನ್ನಾಥ ಅವರ ಮಾತಿನಿಂದ ಬೆಚ್ಚಿದ. ಏನೋ ಅರಳಬಹುದೆಂಬ ಭರವಸೆ ಮತ್ತೆ ಅವನಲ್ಲಿ ಮೂಡಿತು. ರಾಯರ ಜೊತೆ ಗುಡ್ಡವಿಳಿದು ರಸ್ತೆಯ ತನಕ ನಡೆದು ಹಿಂದಕ್ಕೆ ಬಂದ. ನಾಳೆ ಪೇಪರಿನಲ್ಲಿ ತನ್ನ ಕಾಗದ ಬರುವುದನ್ನು ನಿರೀಕ್ಷಿಸುತ್ತ

ರಾತ್ರೆಯನ್ನು ಕಳೆದ.

ಫಸ್ಟ ಬಸ್ಸಿಗೆ ಕಾದ. ಅದರಲ್ಲಿ ಬಂದ ದಿನಪತ್ರಿಕೆಯನ್ನು ಆತಂಕದಿಂದ ಓದಿದ. ಮೊದಲನೇ ಪೇಜಿನಲ್ಲಿ ತನ್ನ ಪತ್ರವನ್ನು ಸುದ್ದಿಯಾಗಿ ಹಾಕಿದ್ದರು. ನೋಡಿದೊಡನೆಯೇ ಭಯವಾಯಿತು; ಇನ್ನು ಹೆಜ್ಜೆ ಹಿಂದಿಡುವಂತಿಲ್ಲವೆಂದು ಸಂತೋಷವಾಯಿತು. ಚಿಕ್ಕಿಯೂ ಪೇಪರನ್ನು ಓದಿ ತಿಳಿದುಕೊಳ್ಳಲಿ ಎಂದು ನಡುಮನೆಯಲ್ಲೆ ಪೇಪರನ್ನು ಬಿಟ್ಟು ಗೇರು ಗುಡ್ಡ ಹತ್ತಿನಡೆದ. ವೇಗವಾಗಿ ಗುಡ್ಡವನ್ನು ಹತ್ತಿ ನೆತ್ತಿಯ ಮೇಲೆ ನಿಂತ. ಇಷ್ಟರಲ್ಲೆ ಭಾರತೀಪುರದವರೆಲ್ಲ ಪೇಪರನ್ನು ಓದಿರುತ್ತಾರೆ. ಸ್ವೆಟರಿನ ಒಳಗೆ ಮೈ ಬೆಚ್ಚಗಾಗಿತ್ತು; ಬಿಸಿಯಾದ ಮುಖದ ಮೇಲೆ ಶೀತಗಾಳಿ ಬೀಸುತ್ತಿತ್ತು. ಹಿಮ ಕರಗಿ ಊರು ಬಿಸಿಲಿನಲ್ಲಿ ತೊಯ್ದಿತ್ತು.

ಇನ್ನು ಹದಿನೈದು ದಿನಗಳಲ್ಲಿ ಜಾತ್ರೆ. ಹೊಲೆಯರನ್ನ ಅಷ್ಟರಲ್ಲಿ ತಯಾರು ಮಾಡಿರಬೇಕು. ಏಕಾಗ್ರತೆಯಿಂದ ಪ್ರತಿ ಗಳಿಗೆಯೂ ಪ್ರಯತ್ನಿಸಬೇಕು.

ದೇವಸ್ಥಾನದ ಶಿಖರ ನೋಡುತ್ತ ನೆನಪಾಯಿತು. ಅಮಾವಾಸ್ಯೆ ದಿನ ಸಹಸ್ರಾರು ಜನ ಹೊಳೆಯಲ್ಲಿ ಸ್ನಾನ ಮಾಡುತ್ತಾರೆ. ಮಾರನೇ ದಿನ ರಥೋತ್ಸವ. ಹುಡುಗನಾಗಿದ್ದಾಗ ಸೂರ್ಯೋದಯಕ್ಕೆ ಮೊದಲೇ ಎದ್ದು ತಾಯಿಯ ಜೊತೆ ಸ್ನಾನಕ್ಕೆಂದು ಹೋಗುತ್ತಿದ್ದ. ಅವರ ಹಿಂದೆ ನಾನು ಚಳಿಯಲ್ಲಿ ಕುಣಿಯುತ್ತ, ನೂಕು ನುಗ್ಗಲಲ್ಲೂ ಜನ ನಮಗೆ ದಾರಿ ಬಿಡುತ್ತಿದ್ದರು. ಮೈ ನಡುಗಿಸುವ ಚಳಿಯಲ್ಲಿ ಅಂಗಿ ಚಡ್ಡಿ ಬಿಚ್ಚಿ ದುಂಡಗೆ ನಿಂತು ನೀರನ್ನು ನೋಡುತ್ತಿದ್ದೆ. ಆಗಲೇ ಮುಳುಗು ಹಾಕಿ ಎದ್ದ ತಾಯಿ ಬೆನ್ನಿನ ಮೇಲೆ ಎದೆಯ ಮೇಲೆ ಒದ್ದೆಯಾದ ಕೂದಲನ್ನು ಚೆಲ್ಲಿ ಕೊಂಡು 'ಬಾ ಮುಳುಗು' ಎಂದು ನಗುತ್ತಿದ್ದಳು. ಉಹು ಹುಹು ಚಳಿ ಎಂದು ನಾನು ಹಬೆ ಏಳುವ ನೀರನ್ನು ಆಸೆಯಿಂದ ಭಯದಿಂದ ನೋಡುತ್ತಿದ್ದೆ. 'ನೀರು ಬೆಚ್ಚಗಿದೆ ಬಾ' ಎನ್ನುತ್ತಿದ್ದರು ಅಮ್ಮ. ಕೈಹಿಡಿದು ಎಳೆಯುತ್ತಿದ್ದರು. ನಗುತ್ತ ಮುಳುಗಿಸುತ್ತಿದ್ದರು. ರೋಮಾಂಚನವಾಗಿ ಬೆಚ್ಚಗಿನ ನೀರಿನಲ್ಲಿ ಕೈಕಾಲುಗಳನ್ನು ಬಡಿಯುತ್ತ ತಾಯಿಯ ಸುತ್ತ ನೀರಿನ ತುಂತುರಿನ ಕೋಲಾಹಲ ಮಾಡುತ್ತಿದ್ದೆ. ಇಳಿದಾದ ಮೇಲೆ ಏಳಿಸುವದೇ ಅಮ್ಮನಿಗೆ ದೊಡ್ಡ ಕಷ್ಟವಾಗು ತ್ತಿತ್ತು. ಸೀತವಾಗಂತೆ ಕೂದಲ್ಲನು ಚೆನ್ನಾಗಿ ಒರೆಸುತ್ತಿದ್ದರು. ಅವರ ದೀರ್ಘ ಕೂದಲಿನ ರಾಶಿಯಿಂದ ಮಾತ್ರ ನೀರು ತೊಟ್ಟಿಕ್ಕುತ್ತಿರುತ್ತಿತ್ತು. ಅಲ್ಲಿಂದ ಸೀದ ದೇವಸ್ಥಾನಕ್ಕೆ. ದೇವಸ್ಥಾನದ ಎದುರಿಗಿದ್ದ ಅಶ್ವತ್ಥಕ್ಕೆ ಪ್ರದಕ್ಷಿಣತೆ. ಅಮ್ಮ ಮೂರು ಪ್ರದಕ್ಷಿಣೆ ಹಾಕುವಷ್ಟರಲ್ಲೆ ನಾನು ಹತ್ತು ಪ್ರದಕ್ಷಿಣೆ ಹಾಕಿ ಮೈಕೈಯೆಲ್ಲ ಬೆಚ್ಚಗಾಗಿರುತ್ತಿತ್ತು. ಅಶ್ವತ್ಥದ ಮೇಲೆ ಮಂಗಗಳು. ಎಷ್ಟು ಧೈರ್ಯದಿಂದ ಹಲ್ಲು ಕಿರಿಯುವ, ಮರಿಗಳ ಹೇನು ಹುಡುಕುವ ಮಂಗಗಳು. ಅಣಕಿಸಿದರೆ ಅಟ್ಟಿಕೊಂಡು ಬರುತ್ತಾವೆ. ಕೈಯಲ್ಲಿರುವ ಬಾಳೆಹಣ್ಣು ಕಸಿದು ತಿನ್ನುತ್ತಾವೆ. ಕೆಮ್ಮಣ್ಣು ಜೇಡಿಮಣ್ಣು ಬಳಿದ ಪಾಗಾರದಾಟಿ ಬಂದರೆ ಆಲದಮರ. ಸಾಮಾನ್ಯವಾಗಿ ಅದರ ಕೆಳಗೆ ರಾಮನೆಂಬ ಕ್ಷೌರಿಕ. ಮಕ್ಕಳ ತಲೆಯನ್ನು ತನ್ನ ತೊಡೆಗಳಿಗೆ ಸಿಕ್ಕಿಸಿ ಹೆರೆಯುವನು. ಅಲ್ಲಾಡಿದರೆ ಬೈಯುವನು. ದೊಡ್ಡವರಾದರೆ ಮಾತ್ರ ಗೌರವದ ದ್ಯೋತಕವಾಗಿ ಅವರ ಬೆನ್ನ ಹಿಂದೆ ಕೂತು ತಲೆಯ ಹಿಂದೆಸೆಯನ್ನು ಹೆರೆಯುವನು. ಉಳಿದವರೆಲ್ಲ ಕತ್ತು ನೋಯುವಷ್ಟು ಬಗ್ಗಿಸಿ ಕೂರಬೇಕು. ಅವನ ಕತ್ತಿಯಾಡುವ ಜಾಗಕ್ಕೆ ತಮ್ಮ ಇಡೀ ತಲೆಯನ್ನು ಬಗ್ಗಿಸಿಯೋ ವಾರೆ ಮಾಡಿಯೋ ಒಡ್ಡುತ್ತ ಅವನು ಹೇಳಿದಂತೆ ಕೇಳಿ ಸಹಿಸಬೇಕು. ಇಲ್ಲ - ಅಮಾವಾಸ್ಯೆ ದಿನ ಅವನು ಅಲ್ಲಿರುತ್ತಿರಲಿಲ್ಲ. ಬಟ್ಟೆಯ ಗಂಟು ಬಿಚ್ಚುತ್ತಲೋ ಪೇಟ ಸುತ್ತುತ್ತಲೊ ಕೂತ ಹಾವಾಡಿಗರು ಅಲ್ಲಿರುತ್ತಿದ್ದರು. ಅಥವಾ ಫೋಟೋ ತೆಗೆಯುವವರು.

ಬಿಸಿಲಿಗಿಟ್ಟು ಪ್ರಿಂಟ್ ಮಾಡುವ ಫೋಟೋಗಳು. ಇನ್ನೊಂದು ಅಮಾವಾಸ್ಯೆ ಜಾತ್ರೆಯ ತನಕ ಉಳಿದು ಕ್ರಮೇಣ ಮಾಸಿಹೋಗುವ ಬಣ್ಣದ ಫೋಟೋಗಳು. ರಥಬೀದಿಯ ತುಂಬ ಜಾತ್ರೆಗೆಂದು ಬಂದ ಅಂಗಡಿಗಳು. ರಥ ಸಿದ್ಧವಾಗಿ ನಿಂತಿರುತ್ತಿತ್ತು. ರಥದ ಗೋಪುರದ ಸುತ್ತ ಮೇಷ, ವೃಷಭ, ಮಿಥನು, ಕರ್ಕಾಟಕ ಇತ್ಯಾದಿ ರಾಶಿಗಳ ಚಿತ್ರಗಳು. ರಥದ ಎದುರು ಬೆಳಗಿನ ಹಿಮಕ್ಕೆ ತೊಯ್ದು ಎರಡು ದಪ್ಪ ದಪ್ಪ ಮಿಣೆಗಳು ಹೆಬ್ಬಾವಿನಂತೆ ಬಿದ್ದಿರುತ್ತಿದ್ದವು. ನಾನು ಮಿಣೆಗಳಿಗೆ ಹತ್ತಿರವಾಗಿ, ಆದರೆ ತುಳಿಯಂತೆ ಎಚ್ಚರವಹಿಸಿ ಅಂಕುಡೊಂಕಾಗಿ ನಡೆಯುತ್ತ ಅಮ್ಮನನ್ನು ಹಿಂಬಾಲಿಸುತ್ತಿದ್ದೆ.

ಹಾಗೆ ನೋಡಿದರೆ ತನ್ನ ದಟ್ಟ ನೆನಪುಗಳಿಗೆಲ್ಲ ಕೇಂದ್ರವಾಗಿದ್ದವರು ತಾಯಿ ಮತ್ತು ಮಂಜುನಾಥ. ಮಹಡಿ ಮೆಟ್ಟಲು ತಿರುಗುವ ಮೂಲೆಗಳಲ್ಲಿ ಭಯವಾದರೆ ಭೂತರಾಯ. ಸಮೃದ್ಧವಾದ ಕಪ್ಪು ಕೂದಲಿನ, ಎತ್ತರವಾದ ಬೋಳು ಹಣೆಯ, ಬಿಳಿಸೀರೆ ಕುಪ್ಪಸ ತೊಟ್ಟ ತಾಯಿ; ತನ್ನ ಪ್ರಾಣ ರಕ್ಷಣೆಯ ನೆನಪನ್ನು ಬಂಗಾರದ ಕಿರೀಟವಾಗಿ ಏರಿಸಿಕೊಂಡು ರಥದ ಮೇಲೆ ಕೂತು ಊರೆಲ್ಲ ಸುತ್ತಿ ಸಾಯಂಕಾಲ ಗುಡಿಗೆ ಸೇರುತ್ತಿದ್ದ ಮಂಜುನಾಥ.

ಮನಸ್ಸು ಆರ್ದ್ರವಾಗಿ ತನ್ನ ಕ್ರಿಯೆಯಿಂದ ವಿಮುಖನಾಗುತ್ತಿದ್ದೇನೆಂದು ಬೆಚ್ಚಿ ಜಗನ್ನಾಥ ಹಲಸಿನ ಮರಕ್ಕೊರಗಿ ನಿಂತ. ವ್ಯಾಮೋಹ ಬಿಡದೆ ಮಂಜುನಾಥನನ್ನು ತಿರಸ್ಕರಿಸಲಾರೆ ಎಂದುಕೊಂಡು ಗುಡ್ಡ ಇಳಿದು ಬಂದ. ಪೇಪರಿನಲ್ಲಿ ಸುದ್ದಿಯನ್ನು ಓದಿರುವ ಚಿಕ್ಕಿಯನ್ನು ಎದುರಿಸಲು ತಯ್ಯಾರಾಗುತ್ತ ನಿಧಾನವಾಗಿ ನಡೆದ.

ಸೀದ ರೂಮಿಗೆ ಹೋಗಿ ಸ್ವೆಟರನ್ನು ಬಿಚ್ಚಿ ಸ್ನಾನ ಮಾಡಲು ಮಹಡಿ ಇಳಿಯುತ್ತಿದ್ದಾಗ ಚಿಕ್ಕಿ ಎದುರಾದರು. ಹೆಣದಂತೆ ಅವರ ಮುಖ ಬಿಳುಚಿಕೊಂಡಿತ್ತು. ನಿಂತರು, ಅವರ ತುಟಿಗಳು ಅದುರಿದವು – ಆದರೆ ಮಾತು ಹೊರಡಲಿಲ್ಲ. ಜಗನ್ನಾಥನ ಎದೆ ಹೊಡೆದುಕೊಳ್ಳತೊಡಗಿತು. ಚಿಕ್ಕಿ ದೊಡ್ಡದೊಂದು ಕಂಬಕ್ಕೊರಗಿ ನಿಂತಿದ್ದರು. ಜಗನ್ನಾಥ ಅವರನ್ನು ದುರುಗುಟ್ಟಿ ನೋಡುತ್ತ ಅವರ ಭಯದ ಕಂಪನವನ್ನು ತಾನೂ ಅನುಭವಿಸಿದ. ಅವ್ಯಕ್ತಕ್ಕೆ ಹೆಜ್ಜೆಯನ್ನಿಡುವ ಮುನ್ನದ ಈ ದಿಗಿಲಿನಿಂದಾಗಿ ಹೊಸ ಸೃಷ್ಟಿ ಸಾಧ್ಯವಾಗುವ ಭರವಸೆ ಮೂಡಿತು. ತಾನು ಇರುವುದು ನಿಜ, ಮಾಡುತ್ತಿರುವುದು ನಿಜ. ಸುಳ್ಳುಗಳ ವಿಸರ್ಜನೆಯ ಪ್ರಾರಂಭ ಇದು ಎನ್ನಿಸಿತು. ಚಿಕ್ಕಿ ಮಾತಾಡಲೇ ಇಲ್ಲ. ಆಳು ಬರುವಂತೆ ಅವರ ಮುಖ ವಿಕಾರವಾಯಿತು. ಈ ಕ್ಷಣದಲ್ಲಿ ಮಾತಾಡಿ ಪ್ರಯೋಜನವಿಲ್ಲವೆನ್ನಿಸಿ ಜಗನ್ನಾಥ ಮುಂದೆ ಹೆಜ್ಜೆಯಿಟ್ಟ. ಮತ್ತೇನೋ ಅನ್ನಿಸಿ ನಿಂತ. ನಾಗಂದಿಗೆಯ ಮೇಲಿದ್ದ ಚನ್ನೆಮಣೆಯನ್ನು ದಿಟ್ಟಿಸಿ ನೋಡಿದ. ತಾಯಿಯ ಜೊತೆ ಕೂತು ಆಡಿದ ಮಣೆ. ಭಾರವಾದ ಮರದಲ್ಲಿ ಮಾಡಿದ್ದು.

ಚಿಕ್ಕಿ ಮಹಡಿ ಹತ್ತಿ ಹೋದರು. ಜಗನ್ನಾಥ ಸ್ನಾನ ಮಾಡಿ ಶುಭ್ರವಾದ ಬಿಳಿ ಪಂಚೆ ಶರ್ಟು ತೊಟ್ಟು ಚೌಕದಲ್ಲಿದ್ದ ರಾಯರ ಖಾದಿಯಂಗಡಿ ಕಡೆ ಹೊರಟ. ಪರಿಚಿತ ಮುಖಗಳನ್ನು ನೋಡಲು ಮತ್ತೆ ದಿಗಿಲಾಯಿತು. ಪುಸ್ತಕದಂಗಡಿ ಕಿಣಿ ತನ್ನ ಮುಖ ನೋಡಿದರೂ ನೋಡದವನಂತೆ ನಟಿಸಿದ. ಜಗನ್ನಾಥನಿಗೆ ಸಂಕಟವಾಯಿತು. ಇನ್ನು ನಾನು ಯಾರಿಗೂ ಬೇಡದವನಾಗಬೇಕು. ಪ್ರಾತಃಕಾಲದಿಂದ ನಾನು ತಿರಸ್ಕೃತನಾದೆ. ಬೇರವರ ಕಣ್ಣಿನ ಕನ್ನಡಿಯಲ್ಲಿ ಹಿಗ್ಗುತ್ತಿದ್ದ ನಾನು ಮಣ್ಣಿನೊಳಗೆ ಬಿದ್ದ ಬೀಜದಂತೆ ಕಾಯಬೇಕು. ಯಾತನೆಯಲ್ಲಿ ಬಿರಿಯಬೇಕು. ತಳ್ಳಿ ತಳ್ಳಿ ಕತ್ತಲಿಂದ ಬೆಳಕಿಗೆ ಮೊಳಕೆಯೊಡೆಯಬೇಕು. ಹೋಟೆಲಿನ ಕೃಷ್ಣಪ್ಪ ಬೀದಿ ಕಡೆ ನೋಡುತ್ತಿದ್ದವನು ತಲೆತಗ್ಗಿಸಿದ. ಮೈಲಿ ಕಜ್ಜಿಯಿಂದ ತೂತುತೂತಾಗಿ ದರಗಾಗಿ ಇದ್ದ ಅವನ ಮುಖ ಆಮೆಯ

ಚಿಪ್ಪಿನಂತೆ ಕಂಡಿತು. ಕಣ್ಣುಗಳು ಕಂತಿಹೋದ ಮುಖಗಳು. ಒಬ್ಬರೂ ನಮಸ್ಕಾರ ಎನ್ನಲಿಲ್ಲ, ತನ್ನಲ್ಲಿ ಸಾಲ ಪಡೆದ ದರ್ಜಿ ಶ್ಯಾಮನ ಹೊರತಾಗಿ. ಇಡೀ ಬೀದಿಯಿಂದ ತಿರಸ್ಕೃತನಾದೆ. ಪ್ರಾತಃಕಾಲದಿಂದ, ಕಪ್ಪು ಟೋಪಿಯವ ಅಕ್ಷರ ಬರದವನಿರಬೇಕು, ನಮಸ್ಕಾರ ಎಂದು ಕೈಮುಗಿದು ನಿಂತ. ತಾನು ಸಾಗಿದ ಮೇಲೆ ನಡೆದ. ಅಮಾವಾಸ್ಯೆ ಜಾತ್ರೆಗೆಂದು ಹೊಸ ಸುಣ್ಣ ತೊಟ್ಟು ಮನೆಗಳು, ಅಂಗಡಿಗಳು, ಅಸಹ್ಯ ಹಿತ್ತಲಿನ ಕಳೆಯೇರಿದ ಮುಂಭಾಗಗಳಾಗಿದ್ದುವು. ನಗುವ ಮುಖ. ಆದರೆ ನಾರುವ ಅಂಡಿನ ಭಾರತೀಪುರದ ಹಿತ್ತಲಿಂದ ಹಿತ್ತಲಿಗೆ ಹೊಲೆಯರು ಕುಕ್ಕೆಯಲ್ಲಿ ಹೇಲು ಹೊತ್ತು ನಡೆಯುತ್ತಾರೆ; ಬೀದಿಯಲ್ಲವರು ಕಾಣಿಸಿಕೊಳ್ಳುವುದೇ ಇಲ್ಲ. ಈ ನೆಲದಲ್ಲಿ ಏನನ್ನೂ ನೆಡದ, ಆದರೆ ಈ ನೆಲ ಬಿಟ್ಟು ಬೇರೆ ಏನೂ ಇಲ್ಲದ ಹೊಲೆಯರ ಕಣ್ಣುಗಳಿಗಿನ್ನೂ ನಾನು ಬಿದ್ದಿಲ್ಲ – ಬೀಳುತ್ತೇನೆ. ಬಿದ್ದು ಹೊಸಬನಾಗುತ್ತೇನೆ.

ಜಗನ್ನಾಥ ಧೈರ್ಯಮಾಡಿ ರಾಯರ ಅಂಗಡಿಯೊಳಗೆ ಹೋದ. ಚಾಪೆಯ ಮೇಲೆ ಮಾಸಿದ ದಿಂಬಿತ್ತು. ಒರಗಿ ಕೂತ. ಹಲ್ಲಿಲ್ಲದ ನಗುವಿನ ಗಾಂಧಿ ಫೋಟೋವನ್ನೂ ಕಚ್ಚೆ ಪಂಚೆಯುಟ್ಟು ವೇಸ್ಟ್ ಕೋಟ್ ಧರಿಸಿದ ನೆಹರೂವಿನ ಒಂದು ಅಪೂರ್ವ ಫೋಟೋವನ್ನೂ ಕುತೂಹಲದಿಂದ ನೋಡಿದ. ಒಬ್ಬರೇ ಕೂತು ಎಲೆಯಡಿಕೆಯ ಚೀಲ ಬಿಚ್ಚುತ್ತಿದ್ದ ಶ್ರೀಪತಿರಾಯರು ಸ್ನೇಹದಿಂದ ನೋಡಿ ನಕ್ಕರು. 'ಕಾಫಿ ಕುಡಿತೀಯ?' ಎಂದರು. ಜಗನ್ನಾಥ 'ಆಗಲಿ' ಎಂದ. ರಾಯರು ಎದ್ದು ನಿಂತು ಚಪ್ಪಾಳ ತಟ್ಟಿದರು. ಎದುರಿಗಿದ್ದ ಗೋವಿಂದಯ್ಯನ ಹೋಟಲಲ್ಲಿ ಬ್ಯಾಟರಿಯಿಂದ ನಡೆಯುತ್ತಿದ್ದ ರೇಡಿಯೋದಲ್ಲಿ ಹಿಂದಿ ಹಾಡೊಂದು ಜೋರಾಗಿ ಬರುತ್ತಿದ್ದುದರಿಂದ ಯಾರಿಗೂ ಕೇಳಿಸಿರಲಿಕ್ಕಿಲ್ಲ. ಜೊತೆಗೆ ಕಾವಲಿಯನ್ನು ಕುಟ್ಟಿ ದೋಸೆ ರೆಡಿಯಾಯಿತೆಂದು ಸೂಚಿಸುವ ಶಬ್ದ. 'ತೊಂದರೆ ಬೇಡಿ' ಎಂದು ಹೇಳಿದರೂ ಕೇಳದೆ ರಾಯರು ಸ್ವತಃ ಎದ್ದುಹೋಗಿ ಕಾಫಿ ಹೇಳಿ ಬಂದು ಕೂತರು.

'ಯಾಕೋ ರಾಘವ ಪುರಾಣಿಕರು ಹೇಳಿ ಕಳಿಸಿದಾರೆ. ನೋಡಿ ಬರೋಣ ಬರ್ತೀಯಾ?' ಎಂದರು.

'ಆಗಲಿ' ಎಂದ ಜಗನ್ನಾಥ.

'ಪುರಾಣಿಕರನ್ನ ನೋಡಿದೀಯೇನು?'

'ಹುಡುಗನಾಗಿದ್ದಾಗ ಅಮ್ಮನ ಜೊತೆ ಅವರ ಮನೆಗೆ ಹೋಗಿದ್ದ ನೆನಪು. ಅವರು ಯಾರನ್ನೂ ನೋಡಲ್ವಂತಲ್ಲ.'

ರಾಯರು ಮುಗುಳ್ನಕ್ಕರು. ಏನಾದರೂ ಮಾತಾಡಬೇಕೆಂದು ಜಗನ್ನಾಥ ಹೇಳಿದ.

'ಅವರ ಕಥೆ ಕೇಳಿದೇನೆ. ೧೯೨೦ನೇ ಇಸವೀಲಿ ವಿಧವಾ ವಿವಾಹ ಮಾಡಿಕೊಂಡ್ರಂತಲ್ಲ?'

'ಅವರ ಮದುವೇಗೆ ಹೋಗಿದ್ದವರಲ್ಲಿ ನಾನೂ ಒಬ್ಬ. ಮದುವೆ ಹಿಂದಿನ ರಾತ್ರೆ ಒಂದು ಘಟನೆಯಾಯ್ತು. ಲಾರೀಲಿ ಕೆಲವರು ಮದ್ವೇಗೇಂತ ಬರ್ತಾ ಇದ್ರು. ಅವರಲ್ಲಿ ಒಬ್ಬ ಹಿಂದೆ ಕೂತಿದ್ದವ ಜೊಂಪು ಹತ್ತಿ ಕೆಳಗೆ ಬಿದ್ದು ಸತ್ತು ಹೋದ. ಎಲ್ಲ

ಏನು ಮಾತಾಡಿಕೊಂಡ್ರು ಗೊತ್ತ? ಮುಂಡೇ ಮದುವೆಗೆ ಮುನ್ನೂರು ವಿಘ್ನ ಅಂತ. ಊರಿಗೆ ಊರೇ ಪುರಾಣಿಕರಿಗೆ ಬಹಿಷ್ಕಾರ ಹಾಕ್ತು. ಆಮೇಲಿಂದ ಪುರಾಣಿಕರು ಸಂಪೂರ್ಣ ಬದಲಾಗಿ ಬಿಟ್ರು. ನೀನೇ ನೋಡು – ಅವರು ಹೇಗೆ ಬದುಕ್ತಾರೆ ಅಂತ. ನಾನು ಹೇಳಿದರೆ ಖಂಡಿತ ನೀನು ನಂಬಲ್ಲ, ಕಣ್ಣಾರೆ ನೋಡಬೇಕು.'

ರಾಯರಿಗೆ ಮುಖ್ಯ ವಿಷಯ ಮಾತಾಡಲು ಸಂಕೋಚವಾಗಿತ್ತು. ಜಗನ್ನಾಥ ಅದನ್ನು ಊಹಿಸಿ ಹೇಳಿದ :

'ನಿಜ. ಸಮಾಜಾನ್ನ ಎದುರು ಹಾಕ್ಕೊಂಡ್ರೆ ಒಂದೊಂದು ಸಾರಿ ಈ ಸಮಾಜದಲ್ಲಿ ಯಾವ ಬೇರೂ ಇಲ್ದಂಗೆ ಆಗಿಬಿಡಬಹುದು. ಅಂತರ್ಜಾತೀಯ ವಿವಾಹಗಳ ಪಾಡನ್ನ ನಾನು ಬೆಂಗಳೂರಿನಲ್ಲಿ ನೋಡಿದೇನೆ. ಇಂಗ್ಲಿಷ್ ಮಾತಾಡಿಕೋತ, ಪಾರ್ಟಿ ಕೊಟ್ಟುಕೋತ, ಅಜಂತ ಎಲ್ಲೋರಾದ ಚಿತ್ರಕಲೇನ್ನ ಅಡ್ಮೈರ್ ಮಾಡ್ತ, ಜಾನಪದ ಕಲೆಯ ವಸ್ತುಗಳನ್ನು ಸಂಗ್ರಹಿಸ್ತ, ಮಕ್ಕಳನ್ನ ಕಾನ್ವೆಂಟಿನಲ್ಲಿ ಓದಿಸ್ತ, ಕಂಟೋನ್ಮೆಂಟಲ್ಲಿ ಬದುಕ್ತಾರೆ.'

ನಿರ್ಲಿಪ್ತಸದಂತೆ ತಾನು ಯಾಕೆ ಮಾತಾಡುತ್ತಿದ್ದೇನೆಂದು ಜಗನ್ನಾಥನಿಗೆ ಆಶ್ಚರ್ಯವಾಯಿತು. ಮಾರ್ಗರೆಟ್ಟನ್ನು ಮದುವೆಯಾಗಿ ಇಂಡಿಯಾಕ್ಕೆ ಬಂದಿದ್ದರೆ ತನ್ನ ಪಾಡು ಹಾಗಾದೀತೆಂದು ಭಯವಿತ್ತಲ್ಲವೆ? ರಾಯರು ಮಾತಾಡಲಿಲ್ಲ. ಮುಖ್ಯ ವಿಷಯಕ್ಕೆ ಬರಬಹುದೆಂದು ಜಗನ್ನಾಥ ಕಾಯುತ್ತಿದ್ದಂತೆ ಅಂಗಡಿಗೆ ವೆಂಕಟರಾಯ ಪ್ರಭುಗಳು ಬಂದು 'ನಮಸ್ಕಾರ' ಎಂದರು.

ಜಗನ್ನಾಥ ರಾಯರ ಖಾದಿಯಂಗಡಿಗೆ ಬರುವುದನ್ನು ಚೌಕದಲ್ಲೇ ಇದ್ದ ದಿನಸಿ ಅಂಗಡಿಯ ವೆಂಕಟರಾಯ ಪ್ರಭುಗಳು ನೋಡಿದ್ದರು. ಪ್ರಭುಗಳು ಊರಿಗೆಲ್ಲ ದೊಡ್ಡ ವರ್ತಕರು; ಜಗನ್ನಾಥನನ್ನು ಬಿಟ್ಟರೆ ಅವರೇ ಆಸುಪಾಸಿನಲ್ಲೆಲ್ಲ ದೊಡ್ಡ ಹಣವಂತರೆಂದು ಖ್ಯಾತಿ. ಜಗನ್ನಾಥ ರಾಜೀನಾಮೆ ಕೊಟ್ಟಮೇಲೆ ಅವರೇ ದೇವಸ್ಥಾನದ ಧರ್ಮದರ್ಶಿತ್ವವನ್ನು ವಹಿಸಿಕೊಂಡಿದ್ದರು.

ಪ್ರಭುಗಳು ಭಾರತೀಪುರದ ಎಲ್ಲ ವ್ಯಾಪಾರವನ್ನೂ ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದರು; ಹಿರಿಮಗ ಅವರ ಜೊತೆಗೇ ದಿನಸಿಯಂಗಡಿಯಲ್ಲಿದ್ದ; ಎರಡನೆಯವ ಜವಳಿ ವ್ಯಾಪಾರೊ ಮೂರನೆಯವ ಮಂಜುನಾಥ ರೈಸ್ ಮಿಲ್ ಮಾಲಿಕ; ನಾಲ್ಕನೆಯವನ ಹೆಸರಿನಲ್ಲಿ ಮಂಜುನಾಥ ಲಾರಿ ಸರ್ವೀಸ್ – ಹೀಗೆ, ಶಿವಮೊಗ್ಗಕ್ಕೆ ಹೋಗಿ ಬರುವ ಮಂಜುನಾಥ ಬಸ್ ಸರ್ವಿಸ್ಸಿನ ಆರು ಬಸ್ಸುಗಳ ಮಾಲಿಕರೂ ಪ್ರಭುಗಳೇ. ಅಳಿಯಂದಿರನ್ನು ಕೂಡ ಪ್ರಭುಗಳು ಬೇರೆ ಬೇರೆ ಉದ್ಯೋಗಕ್ಕೆ ಹಚ್ಚಿದ್ದರು. ಒಬ್ಬ ಮಂಜುನಾಥ ಸೋಡಾ ಫ್ಯಾಕ್ಟರಿ ನಡೆಸುತ್ತಿದ್ದ; ಇನ್ನೊಬ್ಬ ಸೈಕಲ್ ಶಾಪ್ ಇಟ್ಟಿದ್ದ; ಮತ್ತೊಬ್ಬ ಊರಿಗೆ ದೊಡ್ಡ ಹೋಟೆಲಿನ ಯಜಮಾನ. ಒಬ್ಬನ ಮಾಲು ಇನ್ನೊಬ್ಬನಿಗೆ ಸಪ್ಲೈ; ಒಬ್ಬನನ್ನು ಕೇಳದೆ ಇನ್ನೊಬ್ಬ ಹೆಜ್ಜೆಯಿಡ.

ಪ್ರಭುಗಳ ವ್ಯವಹಾರ ಕುಶಲತೆ ಇಡೀ ಶಿವಮೊಗ್ಗ ಜಿಲ್ಲೆಯಲ್ಲೇ ಪ್ರಸಿದ್ಧವಾಗಿತ್ತು. ಎರಡನೇ ಮಹಾಯುದ್ಧದ ಸಮಯದಲ್ಲಿ ಅಕ್ಕಿ, ಸೀಮೆಎಣ್ಣೆ, ಸಕ್ಕರೆಗಳನ್ನು ಕಾಳಸಂತೆಯಲ್ಲಿ ಮಾರಿ ಚೆನ್ನಾಗಿ ಗಳಿಸಿದ್ದರೆಂಬುದು ಎಲ್ಲರಿಗೂ ಗೊತ್ತೆಂದು ಪ್ರಭುಗಳಿಗೂ ಗೊತ್ತು. ಒಂದೆರಡು ಬಾರಿ ಪೊಲೀಸ್ ಸರ್ಚ್ ಆದರೂ ಪ್ರಭುಗಳು ಜಗ್ಗಿರಲಿಲ್ಲ; ಈ ಸ್ವಾತಂತ್ರ್ಯ ಬಂದ ಮೇಲೆ ಅವರು ಖಾದಿಯನ್ನೆ ಹಾಕುತ್ತಾರೆ.

ಪ್ರಭುಗಳ ಪಾಲಿಸಿ ಇದು : ಮರ್ಯಾದೆ ಬಿಟ್ಟು ದುಡ್ಡು ಮಾಡು ; ದುಡ್ಡು ಮಾಡಿದ ಮೇಲೆ ಮರ್ಯಾದೆ ಹೇಗೂ ತಾನಾಗಿಯೇ ಬರತ್ತೆ. ಈ ಮಾತನ್ನು ಅವರೇ ತಕ್ಕಡಿ ಎದುರು ಕೂತು ಬೆಲ್ಲವನ್ನು ತೂಗುತ್ತ ಗಿರಾಕಿಗಳಿಗೆ ಆಗಾಗ ಹೇಳುವುದುಮಟು. ಊರಲ್ಲಿ ಬಹಳ ಜನರ ಲೆಖ್ಖ ಅವರ ಒಂದಲ್ಲ ಒಂದು ಅಂಗಡಿಯಲ್ಲಿ ಇರುತ್ತಿತ್ತಾದ್ದರಿಂದ, ದೇವಸ್ಥಾನದಲ್ಲಿ ನಿತ್ಯ ನಡೆಯುತ್ತಿದ್ದ ಅನ್ನ ಸಂತರ್ಪಣೆಗೆ ಅವರೇ ಕಂಟ್ರಾಕ್ಟ್ ಹಿಡಿದವರಾದ್ದರಿಂದ ಅವರು ಗಣ್ಯ ವ್ಯಕ್ತಿಗಳಾಗಿಬಿಟ್ಟಿದ್ದರು. ಹೋದ ಸಾರಿ ಮುನಸಿಪಾಲಿಟಿ ಪ್ರೆಸಿಡೆಂಟ್ ಕೂಡ.

ಭಾರತೀಪುರದ ಹೆಚ್ಚು ಪಾಲು ವ್ಯಾಪಾರ ಮಂಜುನಾಥನ ದರ್ಶನಕ್ಕಾಗಿ ಬರುವ ಭಕ್ತರು ಮಾಡುತ್ತಿದ್ದ ಖರ್ಚಿನ ಮೇಲೆ ಆಗುತ್ತಿತ್ತಾದ್ದರಿಂದ ಮಂಜುನಾಥನ ಮಹಿಮೆಯಲ್ಲಿ ಪ್ರಭುಗಳಿಗೆ ವಿಶೇಷವಾದ ಆಸಕ್ತಿಯಿರುವುದು ಸಹಜವೆಂದು ತನ್ನನ್ನು ನೋಡಲು ಪ್ರಭುಗಳು ಬರುತ್ತಿದ್ದಂತೆಯೇ ಜಗನ್ನಾಥ ಊಹಿಸಿದ.

ಪ್ರಭುಗಳು ಮಾತಿನಲ್ಲಿ ಬಹಳ ಜಾಣರು. ಬಂದವರೇ ನಾಗಮಣಿಯ ಸಾವಿಗಾಗಿ ದುಃಖಿಸಿದರು. ನಿಮಗೆ ತಿಂಡಿಕೊಟ್ಟು ಕಾಫಿ ಕೊಟ್ಟು ಹೋಯಿತಂತಲ್ಲ ಹುಡುಗಿ ಅದಕ್ಕೇನಾಗಿತ್ತಪ್ಪ ಎಂದು ಆಶ್ಚರ್ಯಪಟ್ಟರು. ಜಗನ್ನಾಥನ ಅಪತ್ಕಾಲದ ಸಹಾಯವನ್ನು ಕೊಂಡಾಡಿದರು. ಜಗನ್ನಾಥನ ಜೊತೆ ಚಾಪೆಯ ಮೇಲೇ ಕೂತರು. ರಾಯರು ತೋರಿಸಿದ ಕುರ್ಚಿ ಬೇಡವೆಂದರು. ಕಾಫಿ ಬಂತು. ರಾಯರು ಪ್ರಭುಗಳಿಗೂ ಒಂದು ಕಾಫಿ, ಎನ್ನಲು 'ಸಕ್ಕರೆಯಿಲ್ಲದ ಕಾಫಿ ಕಣಯ್ಯ' ಎಂದು ಜೇಬಿನಿಂದ ಸ್ಯಾಕ್ರೀನಿನ ಡಬ್ಬಿ ತೆಗೆದರು. ಜಗನ್ನಾಥನ ಮುಖವನ್ನು ಆಗಾಗ ನೋಡುತ್ತ ಶ್ರೀಪತಿರಾಯರನ್ನು ತನ್ನ ಸಭೆ ಮಾಡಿಕೊಂಡು ಮಾತಾಡಿದರು.

'ಗೊತ್ತ ರಾಯರೆ ? ನನ್ನ ಕಿರಿಮಗ ಸಂಜಯನಿಗೆ ಜಗನ್ನಾಥರಾಯರೆಂದರೆ ಬಹಳ ಭಕ್ತಿ. ಬಹಳ ಮಮತೆ. ಈಗಿನ ಕಾಲದ ಹುಡುಗರಿಗೆ ಬಲು ಬುದ್ಧಿ ಅನ್ನೋದಕ್ಕೆ ಹೇಳ್ತೀನಿ: ಯಾರೋ ಹೇಳಿದರು – ಯಾರು ಅಂತ ಬೇಡ ಈಗ – ಕೆಲವರ ಬಾಯಿ ಎಷ್ಟು ಕೆಟ್ಟದ್ದು ಅಂತ ನಾನು ಹೇಳೋದು ಬೇಕಿಲ್ಲವಲ್ಲ – ಒಟ್ಟು ಸಹಿಸಲ್ಲ ಜನಕ್ಕೆ – ಏನಪ್ಪಾ ಅಂದರೆ ನಮ್ಮ ಜಗನ್ನಾಥರಾಯರ ಬುದ್ಧೀನ್ನ ಒಬ್ಬಳು ಇಂಗ್ಲಿಷ್ ಹುಡುಗಿ ಕೆಡಿಸಿದಾಳೆ. ಅದಕ್ಕೇ ಇವರು ಹರಿಜನರನ್ನ ಹಿಡಕೊಂಡು – ಪಾಪ ಆ ಮನುಷ್ಯನಿಗೆ ಮಹಾತ್ಮರು ಹೇಳಿರೋದೇನೂಂತ ಗೊತ್ತೇ ಇಲ್ಲ – ಅಥವಾ ಗೊತ್ತಿಲ್ಲದೆ ಏನು ? ಅವನ ಸಿಟ್ಟಿಗೆಲ್ಲ ಮುಖ್ಯ ಕಾರಣಾಂದರೆ ಪಡುಬಿದ್ರೆಯಲ್ಲಿರೋ ಜಗನ್ನಾಥರಾಯರ ತೋಟ ತನಗೆ ಸಿಗಲಿಲ್ಲ ಅಂತ. ನನ್ನ ಮಗ ಸಂಜಯ ಆಗ ಅಂಗಡೀಲೇ ಕೂತಿದ್ದ. ಅಂದಂಗೆ ಏನೂಂದ ಗೊತ್ತ ? ಹೈಸ್ಕೂಲಲ್ಲಿ ಅವ ಎಸ್.ಎಸ್.ಎಲ್.ಸಿ. ಓದ್ತಿದಾನೆ; ಈ ವರ್ಷ ಪಬ್ಲಿಕ್ ಪರೀಕ್ಷೆಗೆ ಕೂರ್ತಾನೆ. ಅವನಿಗು ಇವರ ಹಾಗೇ ಇಂಗ್ಲೆಂಡಿಗೆ ಹೋಗಿ ಬರೋ ಆಸೆ ರಾಯರೆ. ಜಗನ್ನಾಥರಾಯರ ದಯ ಇದ್ದರೆ ಅದೂ ಯಾಕೆ ಆಗಬಾರ್ದು ಅನ್ನಿ ? ನಾನು ಏನು ಹೇಳ್ತಿದ್ದೆ ? ಹಾ. ಅವ ಏನೂಂದ ಗೊತ್ತೆ ? ಹೊಲೇರೂ ನಮ್ಮ ಹಾಗೆ ಮನುಷ್ಯರಲ್ಲವ ಅಂದ. ಅವನ ಮಾತಿಗೆ ಏನು ಜವಾಬು ಕೊಡೋದು ಹೇಳಿ.'

ಮಾಣಿ ತಂದು ಕೊಟ್ಟ ಕಾಫಿಗೆ ಸ್ಯಾಕ್ರೀನ್ ಹಾಕಿ ಕದರಿದರು. ಕಣ್ಣುಮುಚ್ಚಿ ಎರಡು ಗುಟುಕು ಕುಡಿದು ಕೆಳಗಿಟ್ಟು :

‘ಕಾಲ ಬದಲಾಯಿಸ್ತ ಇದೆ ಅನ್ನೋಕೆ ಹೇಳ್ತೀನಿ. ಶ್ರೀಪತಿರಾಯರಿಗೂ ಗೊತ್ತು ಕೇಳಿ. ಶಿವಮೊಗ್ಗಕ್ಕೆ ಬಂದಿರೊ ಡೆಪ್ಯುಟಿ ಕಮಿಷನರ್ ಇದಾರಲ್ಲ ಸತ್ಯಪ್ರಕಾಶ್ – ಅವರು ಹರಿಜನರಂತೆ. ಅಡಿಕೆ ಸೊಸೈಟಿ ಡೈರೆಕ್ಟರ್ ಆಗಿದಾರಲ್ಲ ನಮ್ಮ ಬೀಗರು – ಶ್ರೀನಿವಾಸ ಪ್ರಭುಗಳು – ಹೇಳ್ತಾ ಇದ್ದರು : ಬಹಳ ಜಾಣನಂತೆ. ವೇದ ಉಪನಿಷತ್ತೆಲ್ಲ ಓದಿಕೊಂಡಿದಾನಂತೆ. ನಮ್ಮ ನಾಗರಾಜ ಜೋಯಿಸರಿಗೇ ನಾಚಿಕೆಯಾಗಬೇಕಂತೆ – ಅಷ್ಟು ಅವರಿಗೆ ಜ್ಯೋತಿಷ್ಯ, ಪುರಾಣ ಗೊತ್ತಂತೆ. ಶಷಸಕಾರಗಳು ಸ್ವಲ್ಪ ಐಬಾದರೂ ಬಹಳ ಚೆನ್ನಾಗಿ ಮಾತಾಡ್ತಾನಂತೆ.’

ಪ್ರಭುಗಳು ಇದ್ದಕ್ಕಿದ್ದಂತೆ ದನಿ ತಗ್ಗಿಸಿದರು. ಶ್ರೀಪತಿರಾಯರ ಹತ್ತಿರ ವಾಲಿ ಗುಟ್ಟಿನಲ್ಲೆಂಬಂತೆ ಹೇಳಿದರು :

‘ಈಗ ಅವ ನಮ್ಮೂರಿಗೆ ಬಂದ ಅನ್ನಿ. ನಮ್ಮ ಮನೆಗೇ ಮಸಲು ಬಂದರು ಅನ್ನಿ. ಒಳಗೆ ಬನ್ನಿ ಅಂತ ಕರೀತೀನೊ ಇಲ್ಲವೋ ? ಕಾಫಿ ಕೊಡ್ತೀನೊ ಇಲ್ಲವೊ ? ಕರಟದಲ್ಲಿ ಕಾಫಿ ಕೊಡಕ್ಕೆ ಆಗತ್ತ ? ಬೆಳ್ಳಿ ಬಟ್ಟಲಲ್ಲೆ ಕೊಡ್ತೀನಿ ಅಲ್ಲವ ? ಕಾಲಾಯ ತಸ್ಮೈ ನಮಃ, ಅದಕ್ಕೇ ನನ್ನ ಮಗ ಹಾಗೆ ಮಾತಾಡಿದ್ದು ಕಂಡು ಪರವಾಗಿಲ್ಲ ಭೇಷ್ ಎಂದುಕೊಂಡೆ.’

ಜಗನ್ನಾಥ ಆಶ್ಚರ್ಯಪಡುತ್ತ ಕಾದ. ಮಾತಿನ ನೀರು ಪಾಯಸಕ್ಕೆ ಹೊಟ್ಟೆ ಉಬ್ಬರಿಸಿದಂತಿತ್ತು. ಇಷ್ಟೆಲ್ಲ ಮಾತಾಡಿದ ಮೇಲೆ ಈ ಪ್ರಭು ತನ್ನ ವಾದವನ್ನು ತದ್ವಿರುದ್ಧ ದಿಕ್ಕಿನಲ್ಲಿ ಹೇಗೆ ತಿರುಗಿಸಿಯಾನು ? ಅವನ ಉದ್ದೇಶ ಅದೆಂಬುದರಲ್ಲಿ ಸಂಶಯವಿರಲಿಲ್ಲ. ಪ್ರಭುಗಳ ಬೆಲೂನನ್ನು ತೂತು ಮಾಡಬೇಕೆನ್ನಿಸಿತು :

‘ಹಾಗಾದರೆ ಪ್ರಭುಗಳೆ ನೀವೂ ನನ್ನ ಜೊತೆ ಜಾತ್ರೆ ದಿನ ಹೊಲೆಯರನ್ನು ದೇವಸ್ಥಾನದೊಳಗೆ ಕರಕೊಂಡು ಹೋಗಲಿಕ್ಕೆ ಬರೋವು ಅನ್ನಿ.’

‘ಓಹೋ’ ಎಂದರು ಪ್ರಭುಗಳು. ಜಗನ್ನಾಥನಿಗೆ ದಿಗ್ಭ್ರಮೆಯಾಯಿತು. ಪ್ರಭುಗಳು ಬಿಡಲಿಲ್ಲ:

‘ಮೊದಲೇ ಹೇಳಿದೆನಲ್ಲ. ಕಾಲಾಯ ತಸ್ಮೈನಮಃ, ಕಾಲ ಪ್ರಾಪ್ತಿಯಾದಾಗ ಎಲ್ಲ ಆಗತ್ತೆ. ಅದಕ್ಕೇ ನಿಮ್ಮನ್ನ ಬಯ್ಯುತ್ತಿದ್ದವರಿಗೆ ಹೇಳಿದೆ. ಅಲ್ಲ ನಮ್ಮ ಜಗನ್ನಾಥರಾಯರಿಗೆ ಇಷ್ಟೂ ತಿಳಿದಿಲ್ಲವೆಂದು ನಿಮ್ಮ ಎಣಿಕೆಯೋ ? ನೀವು ಓದಿದ್ದೆಷ್ಟು ? ಅವರು ಓದಿದ್ದೆಷ್ಟು ? ಇಂಗ್ಲೆಂಡಿಗೆ ಹೋಗಿ ಬಂದ ಅವರಿಗೆ ನೀವು ಯಾವುದು ಸರಿ ಯಾವುದು ತಪ್ಪು ಅಂತ ಕಲಿಸಿಕೊಡ್ತೀರಿ ಅಲ್ಲ ? ಮಂಜುನಾಥನ ತಲೆಯ ಮೇಲಿರೋದು ಅವರ ಕಿರೀಟ. ದೇವಸ್ಥಾನದ ದೊಡ್ಡ ಗಂಟೆ, ಇಡೀ ಊರಿಗೆ ಕೇಳುವ ಗಂಟೆ ಮಾಡಿಸಿಕೊಟ್ಟವರು ಅವರ ಹಿರಿಯರು, ಛತ್ರ ಕಟ್ಟಿಸಿಕೊಟ್ಟವರು ಅವರ ಮನೆತನದವರು, ದೇವರ ತೀರ್ಥ ಬರದೆ ಪುಣ್ಯಾತ್ಮ ಅವರ ತಂದೆ ಊಟ ಮಾಡಿದ್ದಿಲ್ಲ. ಇಂಥ ಮನೆತನದಲ್ಲಿ ಹುಟ್ಟಿದ ಒಬ್ಬ ಸಾತ್ವಿಕರು ಸಾಕಷ್ಟು ಯೋಚನೆ ಮಾಡದೆ ಏನಾದರೂ ಕಾರ್ಯ ಮಾಡ್ತಾರೇಂತ ನೀವು ತಿಳಿದಿರ ? ಹೀಗೇ ಅಂದರೆ. ಖಂಡಿತವಾಗಿ. ಯಾರನ್ನೂ ಬೇಕಾದ್ರೂ ಕೇಳಿ. ಅಲ್ಲ – ಅವರನ್ನ ನಾನು ಕೇಳೇಬಿಟ್ಟೆ – ಈಗ ಭಾರತೀಪುರದಲ್ಲಿ ಹೈಸ್ಕೂಲು ನಡೀತಿರೋದು ದೇವಸ್ಥಾನದಿಂದ ಹಣದಿಂದ. ಈ ಊರಿನ ವ್ಯಾಪಾರದಲ್ಲಿ ಅರ್ಧಕ್ಕರ್ಧ ನಡೆಯೋದು ಮಂಜುನಾಥನ ದರ್ಶನಕ್ಕೆ ಬರೋ ಯಾತ್ರಿಕರಿಂದ. ಇಲ್ದೆ ಇದ್ರೆ ಇಲ್ಲಿರೋ ನೂರಾರು ಕುಟುಂಬಗಳ ಉದರಂಭರಣ ಹೇಗಾಗಬೇಕು ? ಮಂಜುನಾಥನ ಕೀರ್ತಿಗೆ ಧಕ್ಕೆ ಬಂದರೆ ಈ ದೇವರನ್ನೆ

ನಂಬಿಕೊಂಡು ಬದುಕೋ ನಮ್ಮಂಥ ನೂರಾರು ಜನರ ಗತಿ ಏನಾಗಬೇಕು ? ನಮ್ಮಂಥವರ ಮಕ್ಕಳೇನೋ ಶಿವಮೊಗ್ಗಕ್ಕೆ ಹೋಗಿ ಓತ್ತಾರೆ ಅನ್ನೋಣ; ಆದರೆ ದೇವಸ್ಥಾನ ನಡೆಸೋ ಹೈಸ್ಕೂಲು ಇಲ್ದಿದ್ರೆ ಬಡವರ ಮಕ್ಕಳಿಗೆ ವಿದ್ಯೆ ಎಲ್ಲಿ ಇರ್ತಿತ್ತು ? ಹೋಗ್ಲಿ. ಅಡಿಕೇ ತೋಟಾನೇ ತಗೊಳ್ಳಿ. ಈಗ ಕಳ್ಳತನ ಎಷ್ಟು ಹೆಚ್ಚಾಗಿದೆ ನಾನು ಹೇಳ್ಬೇಕಾಗಿಲ್ಲ. ಭೂತರಾಯನ ಭಯಾನೂ ಇಲ್ದೇ ಇದ್ದಿದ್ರೆ ಒಂದೇ ಒಂದು ಅಡಿಕೆನಾದ್ರೂ ನಮ್ಮ ಕೈಗೆ ದಕ್ಕತ್ತ ಹೇಳಿ ? ಇದನ್ನೆಲ್ಲ ಜಗನ್ನಾಥರಾಯರು ಯೋಚಿಸಿರಲ್ಲ ಅಂತ ನಿಮ್ಮ ಎಣಿಕೆಯೋ ಎಂದು ನಾನು ಕೇಳೇಬಿಟ್ಟೆ. ನಂಗೆ ಹಿಂದೊಂದು ಮುಂದೊಂದು ಮಾತಿಲ್ಲಾಂತ ನಿಮಗೆ ಗೊತ್ತಿಲ್ಲ ?"

ಶ್ರೀಪತಿರಾಯರು ಬೀದಿ ಕಡೆ ನೋಡುತ್ತ ಕೂತಿದ್ದರು. ಔನ್ಸ್‌ಗೆರೆಗಳಿದ್ದ ಬಿರಡೆ ಹಾಕಿದ ಔಷಧಿ ಬಾಟಲು ಹಿಡಿದು ನಿಂತಿದ್ದ ಅರ್ಚಕರ ಮಗ ಗಣೇಶನ್ನ 'ಯಾರಿಗೆ ಹುಶಾರಿಲ್ಲವೊ ?' ಎಂದು ಕೇಳಿದರು. 'ಚಿಕ್ಕಮ್ಮನಿಗೆ' ಎಂದು ಅವನು ಹೇಳಿದ. 'ನಿನ್ನ ಹೆಂಡತೀನ್ನ ಮನೆಗೆ ಸ್ವಲ್ಪ ಕಳಿಸೊ. ಇವಳು ನೋಡಬೇಕೂಂತಿದ್ದಳು' ಎಂದರು. ಗಣೇಶ ಉಗ್ಗುತ್ತ 'ಆಗಲಿ' ಎಂದ. ಅವನು ಜಗನ್ನಾಥನನ್ನು ತುಂಬ ಆಸಕ್ತಿಯಿಂದ ನೋಡುತ್ತ ನಿಂತಿದ್ದ. ಜಗನ್ನಾಥನ ಜೊತೆ ಪ್ರಭುಗಳು ಮಾತಾಡುತ್ತಿರುವುದನ್ನುನೋಡಿದ ಹಲವರು – ದಿನಸಿ ಅಂಗಡಿಗೆ ಬಂದವರು, ದೇವದರ್ಶನಕ್ಕೆ ಬಂದವರು, ಜವಳಿ ಖರೀದಿ ಮಾಡಲು ಬಂದ ಹಳ್ಳಿಯವರು – ಖಾದಿಯಂಗಡಿಯಲ್ಲಿ ನೆರೆದಿದ್ದರು. ಎಲ್ಲರೂ ಪ್ರಾಯಶಃ ತಾನು ಉದ್ದೇಶಿಸಿದ ಕ್ರಿಯೆಯ ಬಗ್ಗೆ ತಿಳಿದಿದ್ದಾರೆಂದು ಜಗನ್ನಾಥ ಊಹಿಸಿದ. ಅವನ ಮನಸ್ಸಿನ ಭಾರ ಎಷ್ಟೋ ಕಡಿಮೆಯಾಗಿತ್ತು. ಪ್ರಭುಗಳ ಜೊತೆ ಮಾತಾಡಿ ಪ್ರಯೋಜನವಿಲ್ಲವೆನ್ನಿಸಿದರೂ ಕಳಕಳಿಯಿಂದ ಅವರಿಗೆ ಹೇಳಿದ :

ಪ್ರಭುಗಳೇ ನಿಮ್ಮ ಕೊನೇ ಮಾತಿಗೆ ಉತ್ತರ ಇದು. ನಮ್ಮದಿನ್ನೂ ಮಧ್ಯಯುಗದ ಆರ್ಥಿಕ ವ್ಯವಸ್ಥೆ. ಇದರ ಕೇಂದ್ರದಲ್ಲಿರೋನು ಮಂಜುನಾಥ. ಅವನ ಮಹಿಮೆ ಕಡಿಮೆಯಾದರೆ ನಿಮ್ಮ ವ್ಯಾಪಾರವೆಲ್ಲ ಬುಡಮೇಲಾಗುತ್ತೆ ಅಂತ ನೀವು ಹೆದರೋದು ಸಹಜವೆ. ಆದ್ರೆ ನೋಡಿ ಈ ಮಂಜುನಾಥನಿಂದಾಗಿ ನಮ್ಮ ಜೀವನ ಕ್ರಮದಲ್ಲಿ ಏನೂ ಬದಲಾವಣೆ ಆಗದೆ ಹಾಗೇ ನಿಂತು ಬಿಟ್ಟಿದೆ. ನಾವು ಕೊಳೀತಾ ಇದೀವಿ. ಮಂಜುನಾಥನನ್ನ ನಾಶ ಮಾಡಿದ ಮೇಲೆ ನಾವು ನಮ್ಮ ಜೀವನಕ್ಕೆ ಜವಾಬ್ದಾರರಾಗಬೇಕಾಗತ್ತೆ. ಹೊಸ ಹೊಸ ಹಾದಿಗಳನ್ನು ಹುಡುಕಬೇಕಾಗತ್ತೆ. ಈ ಊರಲ್ಲಿ ಒಂದು ಹೆಂಚಿನ ಕಾರ್ಖಾನೆ ಹಾಕಿಸೋಣ. ಈ ಭೂಮಿ ಒಳಗೆ ತಾಮ್ರ ಇರಬಹುದೂಂತ ಕೇಳಿದೀನಿ – ಗಣಿ ತೋಡಿಸೋಣ. ಈಗ ಅಡಿಕೆ ಮಾತ್ರ ಬೆಳೀತ ಇದೀವಿ. ಇನ್ನೇನೇನ್ನೂ ಬೆಳೆಯಕ್ಕೆ ಆಗತ್ತೆ ಪ್ರಯೋಗ ಮಾಡಿ ನೋಡೋಣ. ನಾವೀಗ ಗೊಡ್ಡಾಗಿದೀವಿ. ಹೊಲೇರು ದೇವಸ್ಥಾನದೊಳಗೆ ಹೋದ್ರು ಅನ್ನಿ – ಈಗ ಭೂತರಾಯನ ಭಯ ಮಂಜುನಾಥನ ಮಹಿಮೇಲಿ ನಂಬಿಕೊಂಡಿರೋ ಇಡೀ ದೇಶದ ಮನಸ್ಸಿನಲ್ಲೆ ಚೂರಾದ್ರೂ ಬದಲಾವಣೆ ಆಗಬೇಕಾಗತ್ತೆ. ಈಗ ಚೂರು ಬಿರುಕು ಬಿಟ್ಟಿದ್ದು ನಾಳೆ ಹೆಚ್ಚು ಸಡಿಲವಾಗತ್ತೆ. ನಾವು ಸ್ವತಂತ್ರರಾಗ್ತೀವಿ. ಇದಕ್ಕೆಲ್ಲ ಮುಖ್ಯವಾದ್ದು; ಹೊಲೆಯರು ತಯಾರಾಗೋದು. ಚರಿತ್ರೇಲಿ ಅವರು ತಮ್ಮ ಮೊದಲನೇ ಹೆಜ್ಜೆ ಇಡೋ ಹಾಗೆ ಮಾಡಬೇಕು. ದೇವಸ್ಥಾನದ ಹೊಸಿಲ ಒಳಗೆ ಅವರು ಇಡೋ ಮೊದಲನೇ ಹೆಜ್ಜೆ ನೂರಾರು ವರ್ಷಗಳ ವಾಸ್ತವತೇನ್ನೆ ಬದಲಿಸಬಹುದು. ಈ ಹೊಲೆಯರ ಮೂಲಕ ನಾವೆಲ್ಲ ಮತ್ತೆ ಜೀವಂತರಾಗಬಹುದು. ಶಾಕ್ ಆಗದೇ ಏನೂ ಆಗಲ್ಲ ನೋಡಿ.'

ಜಗನ್ನಾಥ ಮೈಮರೆತು ಮಾತಾಡಿದ. ಶ್ರೀಪತಿರಾಯರು ಯಾಕೆ ಮಾತಾಡಿ ಗಂಟಲು ಒಣಗಿಸಿಕೊಳ್ಳುತ್ತಿ ಎಂದು ಸೂಚಿಸುವ

ಹಾಗೆ ಅವನ ಕಡೆ ನೋಡುತ್ತಿದ್ದರು. ಅಂಗಡಿಯಲ್ಲಿ ಸೇರಿದ್ದವರು ಅರ್ಥವಾಗದೆ ಜಗನ್ನಾಥನ ಮುಖವನ್ನು ದಿಟ್ಟಿಸಿ ನೋಡುತ್ತ ನಿಂತಿದ್ದರು. ಪ್ರಭುಗಳು ರಾಯರಿಂದ ಹೊಗೆಸೊಪ್ಪು ಪಡೆದು ಸುಣ್ಣ ಹಾಕಿ ಅದನ್ನು ತಿಕ್ಕುತ್ತ ಹೇಳಿದರು :

‘ಛೆ ಛೆ ನೀವು ತಪ್ಪು ತಿಳೀಬಾರ್ದು. ನನಗೆ ನಷ್ಟವಾಗತ್ತೇಂತ ನಾನು ಹೇಳಿದ್ದಲ್ಲಪ್ಪ. ನೀವು ನೋಡಿದ ಹಾಗೇ ನಾನು ಕುಂದಾಪುರದಿಂದ ಬರಿಯೊಂದು ತಕ್ಕಡಿ ಹಿಡಿದು ಬಂದವನು. ನನಗೆ ಆದ ಸಂಪಾದನೆಯೆಲ್ಲ ಮಂಜುನಾಥ ದೇವರ ಪ್ರಸಾದ ಅಂತ ನಾನು ತಿಳ್ದಿದೇನೆ ಶಿವಾಯಿ ನನ್ನ ಸ್ವಂತದ್ದು ಅಂತ ತಿಳಿದಿಲ್ಲ. ಈಗ್ಲೂ ನನಗೆ ಎರಡು ಗಂಜಿ ಊಟ ಸಾಕು. ನನ್ನ ಮಕ್ಳಿಗೂ ಕೂಡ. ಇರೋ ಒಂದೆ ದುಶ್ಚಟ ಅಂದ್ರೆ ಈ ಹೊಗೇಸೊಪ್ಪು ಆಯಿತ? ಇವೆಲ್ಲ ಯಾಕೆ ಹೇಳ್ಲಿಕ್ಕೆ ಬಂದೆ ಅಂದ್ರೆ ನೀವೇನೋ ಹೇಳ್ತಿದ್ರಲ್ಲ – ಅದು ಸರಿ. ಆದರೆ ತಾಮ್ರದ ಗಣಿ ಆಗೋಕೆ ಹೆಂಚಿನ ಕಾರ್ಖಾನೆಯಾಗೋಕೆ ಎಲೆಕ್ಟ್ರಿಸಿಟಿ ಬೇಕೊ ಬೇಡವೊ? ಶಿವಮೊಗ್ಗದಿಂದ ಭಾರತೀಪುರದ ತನಕ ರೈಲು ವ್ಯವಸ್ಥೆ ಆಗಬೇಕೊ ಬೇಡವೊ? ಈ ಹಾಳು ಮಣ್ಣಿನ ರಸ್ತೆಗೆ ಕಾಂಕ್ರೀಟು ಆಗಬೇಕೊ ಬೇಡವೊ? ಅಷ್ಟೆ ಅಲ್ಲ ಮಂಗಳೂರಲ್ಲಿ ಬಂದರಾಗಬೇಕು, ಇಲ್ಲಿಂದ ಮಂಗಳೂರಿಗೆ ಮತ್ತೆ ರೈಲು ವ್ಯವಸ್ತೆಯಾಗಬೇಕು. ಹೌದೊ ಅಲ್ಲವೋ ಹೇಳಿ.’

ಪ್ರಭು ತುಂಬ ಜಾಣ ಎನ್ನಿಸಿತು ಜಗನ್ನಾಥನಿಗೆ. ಮೆಚ್ಚಿಗೆಯಿಂದ ರಾಯರ ಕಡೆ ನೋಡಿದ. ರಾಯರ ಮುಖದಲ್ಲೂ ತುಂಟ ನಗೆ ಮೂಡಿತ್ತು. ಜಗನ್ನಾಥ ಪ್ರಭುಗಳ ಸವಾಲಿಗೆ ಸರಿಯಾದ ಜವಾಬು ಹುಡುಕುತ್ತ ಮಾತಾಡಿದ.

‘ಒಪ್ಪಿದೆ. ಎಲೆಕ್ಟ್ರಿಸಿಟಿಗಾಗಿ ಚಳವಳಿ ಮಾಡೋಣ. ರೈಲಿಗಾಗಿ ಕಾದಾಡೋಣ. ಜನರ ಜೀವನಾನ್ನ ಮೂಲಭೂತವಾಗಿ ಬದಲಾಯಿಸಕ್ಕೆ ಇರೋ ದಾರಿಗಳನ್ನೆಲ್ಲ ಹುಡುಕೋಣ. ಆದರೆ ಹೀಗೆ ನಮಗೆ ಹುಡುಕಬೇಕೂಂತ ಅನ್ನಿಸೋದು ಯಾವಾಗ ಅಂದ್ರೆ ನಮಗೆ ಮಂಜುನಾಥ ನಲ್ಲಿರೋ ನಂಬಿಕೆಗೆ ಏಟುಬಿದ್ದಾಗ. ಅದಕ್ಕೆ ಇಲ್ಲಿ ಯಾವ ನೆಲೇನೂ ಇಲ್ದೆ ಇರೋ ಹೊಲೇರಿದ್ದಾರಲ್ಲ ಅವರೇ ಕ್ರಾಂತೀನ್ನ ಪ್ರಾರಂಭಿಸಬೇಕು.’

ಪ್ರಭುಗಳೂ ಮಾತಿನ ಖುಷಿಯಲ್ಲಿದ್ದಂತೆ ಕಂಡಿತು. ಮಾತಿನ ಚಕಮಕಿಯಾಗಿ ಈ ಮುಖಾಮುಖಿ ಬೆಳೆಯುತ್ತಿರುವುದನ್ನು ಕಂಡು ಜಗನ್ನಾಥನಿಗೆ ಕಸಿವಿಸಿಯಾಗತೊಡಗಿತು. ಆದರೆ ದಾಕ್ಷಿಣ್ಯ ಪ್ರವೃತ್ತಿಯ ಮನುಷ್ಯನಾದ್ದರಿಂದ ಜಗನ್ನಾಥ ಸಹಿಸಿಕೊಂಡು ಕೂತ. ಪ್ರಭುಗಳು ಹೊಗೆಸೊಪ್ಪು ಉಗುಳಿಬಂದು ಹೇಳಿದರು :

‘ಎಲೆಕ್ಟ್ರಿಸಿಟಿ ಮೊದಲು ಬರಲಿ, ಮಂಜುನಾಥನ ಪ್ರಭಾವ ಕ್ರಮೇಣ ಕಡಿಮೆಯಾಗು ತ್ತೇಂತಲೂ ಕೆಲವರು ಮಸಲು ಹೇಳಿದ್ರು ಅನ್ನಿ. ಆಗ ನೀವೇನು ಹೇಳ್ತೀರಿ? ಅಲ್ಲ ವಾದಕ್ಕೆ ಹೇಳ್ದೆ ಅಷ್ಟೆ. ಈಗ ನಾವು ದೇವ್ರು ದಿಂಡ್ರು ದಯ ಕರ್ಮ ಅಂತ ಒದ್ದಾಡೋದೇ ಹೊರ್ತು ಬೊಂಬಾಯಿ ಕಲ್ಕತ್ತಾದಲ್ಲಿರೋರು ಒದ್ದಾಡ್ತಾರ?’

ಅಂಗಡಿಯ ಎದುರಿಗೆ ಅವರ ಮಗನ ಲಾರಿ ಬಂದು ನಿಂತದ್ದು ನೋಡಿ ಪ್ರಭುಗಳು ‘ಒಂದು ನಿಮಿಷ ಬಂದೆ’ ಎಂದು ಎದ್ದು ಹೋದರು. ಕೊಂಕಣಿಯಲ್ಲಿ ಏನೋ ಹೇಳಿ ಹಿಂದಕ್ಕೆ ಬಂದರು. ಹೊರಡುವ ಸನ್ನಾಹದಲ್ಲಿದ್ದ ಜಗನ್ನಾಥನಿಗೆ ಹೇಳಿದರು :

‘ನಾನು ಮೊದಲೇ ಹೇಳಿದೆನಲ್ಲ ಜಗನ್ನಾಥ ರಾಯರೆ, ನಿಮ್ಮ ಜೊತೆ ನಾನಿದೇನೆ ಅಂತ. ಒಂದು ಅರ್ಜಿ ಬರೀರಿ – ಊರಿಗೆ ಎಲೆಕ್ಟ್ರಿಸಿಟಿ ಬೇಕು ಅಂತ ನಾನು ನೀವು ವಿಧಾನಸೌಧಕ್ಕೊಂದು ಸಾರಿ ಹೋಗಿ ಬರೋಣ, ಗುರಪ್ಪ ಗೌಡರನ್ನೂ ಕರ್ಕೊಂಡು ಹೋಗೋಣ. ಶ್ರೀಪತಿರಾಯರೂ ಜೊತೆಗೆ ಬರಲಿ. ಮುಖ್ಯಮಂತ್ರಿಗಳೂ ಇವರೂ ಒಟ್ಟಾಗಿ ಜೈಲಲ್ಲಿದ್ದವರಂತಲ್ಲ. ನಿಮ್ಮಂಥ ವಿದ್ಯಾವಂತ ಯುವಕರ ಮಾತನ್ನ ನಮ್ಮ ಮುಖ್ಯಮಂತ್ರಿಗಳು ಖಂಡಿತ ತೆಗೆದು ಹಾಕಲ್ಲ. ರೈಲು ಎಲೆಕ್ಟ್ರಿಸಿಟಿ ಮೊದಲು ಮಾಡಿಕೊಳ್ಳೋಣ. ರಾಷ್ಟ್ರಪತಿಗಳು ಬಂದು ಹೋದ ಮೇಲಂತೂ ಇಡೀ ಇಂಡಿಯಾಕ್ಕೆ ಭಾರತೀಪುರದ ವಿಷಯ ಗೊತ್ತಾಗಿದೆ. ಮಂತ್ರಿಗಳು ಖಂಡಿತ ಇಲ್ಲ ಅಂತ ಅನ್ನಲ್ಲ. ನಿಮ್ಮಂಥ ಪ್ರಗತಿಶೀಲ ಯುವಕರಿದ್ದರೆ ಈ ಊರನ್ನ ನಂದನವನ ಮಾಡಬಹುದು. ಹೊತ್ತಾಗತ್ತೆ ಹೋಗ್ತೀನಿ. ಮತ್ತೆ ಮಾತಾಡೋಣ.’

ಎಂದು ಪ್ರಭುಗಳು ಹೋದದ್ದೆ ಹಲವರು ಅಲ್ಲಿಂದ ಹೋದರು. ಎಂಥ ಘಾಟಿ ವರ್ತಕ ಇವ ಎನ್ನಿಸಿತು ಜಗನ್ನಾಥನಿಗೆ. ಈಗ ಮಂಜುನಾಥನಿಂದ ಲಾಭ ಮಾಡಿಕೊಳ್ತ ಇರೋವನು ಇವನು; ನಾಳೆ ನನ್ನನ್ನ ಉಪಯೋಗಿಸಿಕೊಂಡು ತರಿಸೊ ಎಲೆಕ್ಟ್ರಿಸಿಟಿಯಿಂದಲೂ ಲಾಭ ಮಾಡಿಕೊಳ್ಳೋನೂ ಇವನೆ. ಈಗಾಗ್ಲೆ ಹೆಂಚಿನ ಕಾರ್ಖಾನೆ, ತಾಮ್ರದ ಗಣಿಗಳ ಯೋಜನೇನ್ನ ಪ್ರಭು ಹಾಕೋಕೆ ಶುರು ಮಾಡಿರಬೇಕು. ಜಗನ್ನಾಥ ನಗುತ್ತ ರಾಯರ ಕಡೆ ನೋಡಿದ. ರಾಯರಿಗೆ ತನ್ನ ಯೋಚನೆ ಅರ್ಥವಾದಂತೆನ್ನಿಸಿತು. ರಾಯರಿಗೆ ಹೇಳಿದ :

‘ನಾಳೆ ಎಲೆಕ್ಟ್ರಿಸಿಟಿಯ ನಿಜವಾದ ಬೆನಿಫಿಶರಿ ಆಗೋವ್ರೂ ಈ ಪ್ರಭುಗಳೆ. ಆಗ ಇವರ ವಿರುದ್ಧಾನೂ ಚಳುವಳಿ ಹೂಡಬೇಕಾಗುತ್ತೆ.’

ರಾಯರೂ ಅರ್ಥವಾಗಿ ಮುಗುಳ್ನಗುತ್ತ ಎದ್ದುನಿಂತರು. ಅಂಗಡಿಯನ್ನು ಹಾಗೇ ಬಿಟ್ಟು ಹೊರಟರು. ‘ಬಾಗಿಲು ಹಾಕೊಳ್ಳಲ್ವೆ ?’ ಎಂದು ಜಗನ್ನಾಥ ಕೇಳಿದ್ದಕ್ಕೆ ‘ಅಂಗಡೀಲಿ ಏನಿದೇಂತ ಬಾಗಿಲು ಹಾಕ್ಕೊಬೇಕು ?’ ಎಂದು ಗಟ್ಟಿಯಾಗಿ ನಕ್ಕರು. ಬೀದಿಯಲ್ಲಿ ನಡೆಯುತ್ತ ಹೇಳಿದರು :

‘ಅಲ್ಲ ಜಗಣ್ಣ, ನನಗೆ ಭಯವಾಗ್ತಿರೋದು ನಿಜ. ಆದ್ರೆ ನೀನು ಹೊಲೇರನ್ನ ದೇವಸ್ಥಾನದೊಳಗೆ ಕರ್‍ಕೊಂಡು ಹೋಗೋದ್ರಿಂದ ಏನೂ ಪ್ರಯೋಜನ ಆಗಲ್ಲಾಂತ್ಲೂ ನನಗೆ ಅನ್ನಿಸತ್ತೆ. ನನ್ನ ಮಾತು ಕಟ್ಟಿಕೋಬೇಡ. ನಾನು ಹಿಂದೆ ಜೈಲಿಗೆ ಹೋದದ್ದು ಪ್ರಾಯಶಃ ನನ್ನ ಹೆಂಡತಿ ಕಾಟದಿಂದ ತಪ್ಪಿಸಿಕೊಳ್ಳೋಕೆ ಇರಬಹುದು. ಒಟ್ಟು ನೀನು ದುಡುಕಿ ಊರಿನ ನಿಷ್ಠುರ ಕಟ್ಟಿಕೋಬಾರ್ದು ಅಂತ ಹೇಳ್ತಾ ಇದೀನಿ. ನಾನು ಹೇಳೋದು ತಪ್ಪಿರಬಹುದು. ನಂಗೆ ಭಯವಾಗ್ತಿದೆ ಅಂತ ಅನ್ನೋದೇನೋ ನಿಜ.’

‘ನಂಗೂ ಭಯ ಆಗ್ತಿದೆ ರಾಯರೆ. ಆದರೆ ನಿರ್ವಾಹವಿಲ್ಲ.’ ಜಗನ್ನಾಥನಿಗೆ ಇನ್ನೇನು ಹೇಳಬೇಕೆಂದು ತೋಚಲಿಲ್ಲ. ತುಂಬ ಸಮಾಧಾನದಿಂದ ರಾಯರು ಆಡಿದ ಮಾತಿನಿಂದ ಅವನಿಗೆ ಕಸಿವಿಸಿಯಾಗಿತ್ತು. ಈ ಮುಹೂರ್ತದಲ್ಲಿ ತಾನು ತಿರಸ್ಕೃತನಾಗಿದ್ದೇನೆ, ತಳವಿಲ್ಲದ ಪಾತಾಳಕ್ಕೆ ಹಾರಿದ್ದೇನೆ ಎನ್ನಿಸಿತ್ತು. ನೀನು ಮಾಡಹೊರಟ ಕ್ರಿಯೆಯಲ್ಲಿ ನಿನಗೆ ಸಂಪೂರ್ಣ ನಂಬಿಕೆಯಿದೆಯೊ ಎಂದು ರಾಯರು ಕೇಳಿದ್ದರೆ ಗೊತ್ತಿಲ್ಲ ಎಂದು ಜಗನ್ನಾಥ ಒಪ್ಪಿಕೊಳ್ಳುತ್ತಿದ್ದ. ಆದರೆ ಹೀಗೆ ಮೈಮೇಲೆ

ಹಾಕಿಕೊಳ್ಳದಿದ್ದಲ್ಲಿ ನನ್ನ ಜೀವನಕ್ಕೆ ಅರ್ಥವಿರುತ್ತಿರಲಿಲ್ಲವೆಂದೂ ಹೇಳುತ್ತಿದ್ದ. ಈ ಸಮಾಜದ ಒಳಗೆ ಮೂಲಭೂತವಾದ ಕ್ರಿಯೆ ಸಾಧ್ಯವಾಗದೇ ಹೋದದ್ದರಿಂದಲೇ ಕ್ರಮೇಣ ಸಮಾಜ ಜೀವನ ಅರ್ಥ ಹೀನವಾಗ್ತ ಹೋಗಿದೆಯಲ್ಲವೆ ರಾಯರೆ ಎಂದು ಕೇಳಬೇಕೆನ್ನಿಸಿತು. ಆದರೆ ಕ್ರಿಯೆಗೆ ಪೂರ್ವಭಾವಿಯಾದ ಮಾತುಗಳೆಲ್ಲವೂ ಅರ್ಥಹೀನ ಗದ್ದಲವೆನ್ನಿಸಿ ಸುಮ್ಮನಾದ. ತಾನು ಆಡುವ ಮಾತುಗಳನ್ನೆಲ್ಲ ಸಲೀಸಾಗಿ ಆಡಬಲ್ಲ ಹಲವರು ಭಾರತೀಪುರದಲ್ಲಿದ್ದಾರೆನ್ನಿಸಿ ಜಗನ್ನಾಥನಿಗೆ ಹೇಸಿಗೆಯಿಂದ ಮೈನಡುಗಿತು. ಕನ್ನಡಿಯಿಲ್ಲದೆ ನಿಲ್ಲಬಲ್ಲ ಸಂಕಟಕ್ಕೆ ನಾನು ತಯಾರಾಗಬೇಕಾಗಿದೆ ಎಂದು ಸಂತೋಷವಾಯ್ತು.

ಪೂರ್ವ ದಿಕ್ಕಿಗೆ ನಡೆದರೆ ಸೀಬಿನಕೆರೆ, ಅದರಾಚೆ ವಿದ್ಯಾಮಂತ್ರಿಗಳು ಉದ್ಘಾಟಿಸಿದ ಹೊಸ ಬಡಾವಣೆ ತಾಷ್ಕೆಂಟ್‌ಪುರ. ಅದಕ್ಕೆ ಮೊದಲು ಸಿಗುವ ಮಂಜುನಾಥ ರೈಮಿಲ್ಲಿನ ಹಿಂದಿದ್ದ ಗದ್ದೆಯ ಒಳದಾರಿಯಲ್ಲಿ ನಡೆದು ಹೋದರೆ ರಾಘವ ಪುರಾಣಿಕರ ಮನೆಗೆ ಹತ್ತಿರ. ಜೋರಾಗಿ ನಡೆದರೆ ಅರ್ಧ ಗಂಟೆ ಸಾಕು.

ಕಂಡವರನ್ನೆಲ್ಲ ಮಾತಾಡಿಸುತ್ತ ಯೋಗಕ್ಷೇಮ ವಿಚಾರಿಸುತ್ತ ರಾಯರು ನಡೆದರು. ಈ ಸ್ಥಳದಲ್ಲಿ ನಿಜವಾದ ಬೇರುಗಳಿರುವ ಮನುಷ್ಯನೆಂದರೆ ಅವರೆ – ನಾನಲ್ಲ. ಕೊಡೆಯನ್ನು ಕಂಕುಳಲ್ಲಿ ಸಿಕ್ಕಿಸಿ ನಡೆದಿದ್ದ ರೈತನೊಬ್ಬನನ್ನು 'ನಾನು ಬರೆದುಕೊಟ್ಟ ಅರ್ಜೀನ ಅಮಲ್ದಾರ್ರಿಗೆ ಕೊಟ್ಟೆಯ ? ಏನೆಂದರು ?' ಎಂದು ಕೇಳಿದರು. 'ಮತ್ತೆ ಯಾಕೆ ಬರಬೇಕಂತೆ ? ಕೈಬಿಸಿ ಮಾಡದೆ ಏನೂ ನಡೆಯಲ್ಲ' ಎಂದು ರೇಗಿದರು. ಒಂಟಿಗಳನ್ನು ಹಾಕಿದ್ದ ಯುವಕನೊಬ್ಬನಿಗೆ, 'ತಂದೆ ಹೇಗಿದ್ದಾರೋ ? ಅಂತೋಣಿ ಡಾಕ್ಟರನ್ನ ಮನೆಗೆ ಕರೆದುಕೊಂಡುಹೋಗಿ ತೋರಿಸಯ್ಯ' ಎಂದರು. ಕಂಡಕೂಡಲೇ ಜೋಡುಗಳನ್ನು ರಸ್ತೆಯ ಮೇಲೆ ಕಳಚಿ ಬರಿಗಾಲಲ್ಲಿ ನಿಂತುಕೈ ಮುಗಿದವನೊಬ್ಬನಿಗೆ, 'ಆಮೇಲೆ ನೋಡು, ಶಿವಮೊಗ್ಗದಲ್ಲಿ ಲಾಯರಿಗೆ ಕಾಗದ ಕೊಡ್ತೇನೆ, ಮಂಜುನಾಥನ ಹುಯ್ಲಿಗೆ ಸಾಬರೇನೂ ಜಗ್ಗಲ್ಲಾಂತ ನಿಮಗೆ ಗೊತ್ತಿಲ್ವ ?' ಎಂದು ನಕ್ಕರು. ಮಕ್ಕಳು, ಹೆಂಗಸರು ಎಲ್ಲ ಗೊತ್ತು ರಾಯರಿಗೆ. ಅವರ ಹೆಸರು, ಅವರ ಗೋತ್ರ, ಅವರ ಗುಪ್ತ ಕಾಹಿಲೆಗಳು, ಸಂಸಾರ ತಾಪತ್ರಯಗಳು – ಎಲ್ಲ. ಹೀಗೆ ಜೀವನದ ವಿವರಗಳಲ್ಲಿ ತೀರಾ ಆಪ್ತವಾಗಿ ತೊಡಗಿಬಿಟ್ಟಿದ್ದರಿಂದ ಯಾವ ಬದಲಾವಣೆಯೂ ವಿಫಲವೆನ್ನುವ ತೀರ್ಮಾನಕ್ಕೆ ರಾಯರು ಬಂದಿರಬಹುದು.

ಮುಸ್ಲಿಮರಿದ್ದ ಬೀದಿಯಲ್ಲಿ ನಡೆಯುತ್ತಿದ್ದಾಗ ಜಗನ್ನಾಥನಿಗೆ ಇನ್ನೊಂದು ಊರಿಗೇ ಬಂದಂತೆನ್ನಿಸಿತು. ಕಲಾಯ ಮಾಡುತ್ತಲೋ, ಬೀಡಿಗಳನ್ನು ಕಟ್ಟುತ್ತಲೋ ಮನೆಯ ಎದುರು ಕೂತ ಚೌಕುಳಿ ಮುಂಡುಗಳನ್ನುಟ್ಟ ಸಾಬರು ಸಲಾಂ ಸಾಬ್ ಎಂದು ಎದ್ದು ನಿಂತರು. ಚರಂಡಿಗಳಲ್ಲಿ ಕೋಳಿಗಳು; ಕೆಲವು ಮನೆಗಳ ಎದುರು ತಂತಿಯಲ್ಲಿ ಮಾಡಿದ ಬುಟ್ಟಿಯಲ್ಲಿ ತೂಗು ಹಾಕಿದ ಮೊಟ್ಟೆಗಳು. 'ನಮ್ಮ ಹುಡುಗರೂ ಈಚೆಗೆ ಕದ್ದು ಮೊಟ್ಟೆ ತಿನ್ನೋದೂ ಉಂಟು' ಎಂದು ರಾಯರು ನಕ್ಕರು.

'ಹೊಲೆಯರಿಗೆ ಅಕ್ಷರಾಭ್ಯಾಸ ಮಾಡಿಸ್ತೀದೀನಿ ಅಂದ್ಯಲ್ಲ ಜಗಣ್ಣ. ನೀನಾಗಲೀ ಅವರಾಗಲೀ ಒಂದೇ ಒಂದು ಸಾರಿಯಾದರೂ, ಗೊತ್ತಿಲ್ದೇನೇ ಆದರೂ ಮುಟ್ಟಿಕೊಂಡದ್ದಿದೆಯ ಹೇಳು ?'

ಜಗನ್ನಾಥ 'ಇಲ್ಲ' ಎಂದ.

'ಅದೇ ನಾನು ಹೇಳೋದು. ನೀನು ಅವರನ್ನ ಮುಟ್ಟುತೀಯೋ ಇಲ್ಲವೋ ಅನ್ನೋದು ಪ್ರಶ್ನೆಯಲ್ಲ. ಅವರಾಗೇ ನಿನ್ನನ್ನ ಮುಟ್ಟುತ್ತಾರೊ, ಮುಟ್ಟೋ ಆಸೆ ಅವರಿಗೆ ಹುಟ್ಟಿದೆಯೊ ಅನ್ನೋದೇ ಮುಖ್ಯ. ನಿನಗೆ ಅವರನ್ನ ಮುಟ್ಟಬೇಕೂಂತ ಅನ್ನಿಸೋದು ಸಹಜ. ನೀನು ವಿದ್ಯಾವಂತ. ನಿನ್ನ ಪ್ರಜ್ಞೆ ಬೆಳೆದಿದೆ. ಎಲ್ಲ ಸೌಭಾಗ್ಯಕ್ಕೂ ಬಾಧ್ಯನಾದ ಮೇಲೆ ನಿನಗೆ ಈ ಆದರ್ಶವಾದ ಹೊಸದೊಂದು ರುಚಿಯಾಗಿದೆ. ನಿನಗೆ ಅದು ಲಕ್ಷುರಿ, ಆದರೆ ಅವರಿಗೆ?'

ಜಗನ್ನಾಥನಿಗೆ ರಾಯರು ನಿಜವಾಗಿ ತನ್ನ ಹತ್ತಿರ ಮಾತಾಡುತ್ತಿದ್ದಾರೆಂದು ಸಂತೋಷವಾಯ್ತು.

'ನಿಜ ರಾಯರೆ. ಅವರಿಗೆ ಹಾಗೆ ಅನ್ನಿಸಿದ ದಿನ ನಾನು ನಿಜವಾಗಿ ಗೆದ್ದಂತೆ. ಅವರ ಪ್ರಜ್ಞೇಲಿ ಅಂಥ ಒಂದು ಆಸ್ಫೋಟ ಆಗಬೇಕೂಂತ್ಲೆ ನಾನು ಪ್ರಯತ್ನ ಪಡ್ತಿದೀನಿ. ಯಾಕೆಂದರೆ ಹೊಲೇರು ಒಂದು ಹೆಜ್ಜೆ ಮುಂದಿಡೋ ಧೈರ್ಯ ಮಾಡಿದ ದಿನ-'

'ಬರೀ ನಿನ್ನ ಪ್ರಯತ್ನದಿಂದ ಅದು ಸಾಧ್ಯವಾಗಲ್ಲ ಜಗಣ್ಣ.'

ಜಗನ್ನಾಥ ಮಾತಾಡಲಿಲ್ಲ. ರಾಯರು ಹುರುಪಿನಿಂದ ನಡೆಯುತ್ತ ಹೇಳಿದರು :

'ಈ ರಾಘವ ಪುರಾಣಿಕರೇ ನನಗೆ ಇಂಗರ್‌ಸಾಲ್‌ನ ಪುಸ್ತಕಗಳನ್ನ ಮೊದಲು ಕೊಟ್ಟವ್ರು'.

ಚಳಿಗಾಲದ ಬಿಸಿಲಿನಲ್ಲಿ ನಡೆಯುತ್ತ ಜಗನ್ನಾಥನಿಗೂ ಖುಷಿಯಾಯಿತು. ಮನಸ್ಸು ನಿರಂಬಳವಾಯಿತು. ಕಣ್ಣು ಹಾಯಿಸಿದಲ್ಲಿ ಹೂಬಿಟ್ಟ ಮಾವಿನ ಮರಗಳು. ತೆಂಗಿನ ಗಿಡಗಳು. ಕಾಡಿನ ಯಾವುದೋ ಗುಪ್ತ ಸಂಧಿಯಲ್ಲಿ ಘಮಘಮಿಸುತ್ತಿದ್ದ ಕೇದಗೆಯನ್ನು ಮುಡಿದು ಎದುರು ಬಂದ ಹೆಗ್ಗಡಿತಿ; ಬುಗುಡಿ, ಕೆನ್ನೆಸರಪಳಿ, ಹಚ್ಚೆ ಕುಚ್ಚಿದ ಕೈಗಳ, ಬರಿಗಾಲಿನಲ್ಲಿ ದೇವಸ್ಥಾನಕ್ಕೆ ವೇಗವಾಗಿ ನಡೆಯುತ್ತಿರುವ ಚೆಲುವೆ. ಶ್ರೀಮಂತ ಒಕ್ಕಲಿಗರ ಮನೆಗಳ ಪಾಗಾರಗಳ ಒಳಗೆ ಬೆಳೆದ ಪಾರಿಜಾತ ಸಂಪಿಗೆ ಮರಗಳು. ಶತಮಾನಗಳಿಂದ ಒಂದೇ ರೀತಿ ಹರಿಯುತ್ತಿರುವ ಜೀವನಕ್ರಮದಲ್ಲೂ ಸೂಕ್ಷ್ಮ ಕಣ್ಣಿಗೆ ದಿನದಿನವೂ ಹೊಸದು ಕಾಣಬಹುದಲ್ಲವೆ ಎಂದು ಜಗನ್ನಾಥ ಯೋಚಿಸಿದ. ಯಾರದೋ ಮನೆಯಲ್ಲಿ ಈಗೊಂದು ಮಗು ಹುಟ್ಟುತ್ತಿರಬಹುದು, ಯಾರೋ ಸತ್ತಿರಬಹುದು; ಯಾವಳೋ ಗರ್ಭಿಣಿಯ ಹೊಟ್ಟೆಯಲ್ಲಿ ಶಿಶು ಚಲಿಸುತ್ತ ಒದೆಯುತ್ತಿರಬಹುದು. ಇಲ್ಲೊಂದು ಗುಲಾಬಿ ಅರಳಿ ನಿಂತು ಗಟ್ಟಿಯಾದ ತೊಟ್ಟಿನಲ್ಲಿ ಹಗುರಾಗಿ ತೂಗುತ್ತಿದೆ. ನಾಲ್ಕು ಕಾಲುಗಳನ್ನು ಬಿಸಿಲಿಗೆತ್ತಿ ನಾಯಿ ಹುಳಿ ಹಿಡಿಯುವ ಆಟ ಆಡುತ್ತಿದೆ. ಕೋಲನ್ನು ಕಾಲಿನ ಸಂದಿಗೆ ಸಿಕ್ಕಿಸಿ ಹುಡುಗನೊಬ್ಬ ಮೋಟಾರ್ ಬಿಡುತ್ತಿದ್ದಾನೆ. ಊಟಕ್ಕೆ ಬರಲೊಲ್ಲದ ಮಗನನ್ನು ಕಿರಿಕಿರಿ ಮುಖದ ತಾಯಿ ಬಯ್ಯುತ್ತ ನಿಂತಿದ್ದಾಳೆ. ಮಾವಿನ ಹೂಗಳಿಗೆ ಜೇನು ಮುತ್ತಿವೆ. ಅಡಿಕೆ ತೋಟಕ್ಕಾಗಿ ಇನ್ನೂ ಕಡಿಯದ ಸಮೃದ್ಧ ಕಾಡುಗಳಲ್ಲಿ ಜೇನಿನ ಗೂಡುಗಳು ನೇತುಬಿದ್ದಿವೆ. ಮನುಷ್ಯನ ಕಣ್ಣಿಗೆ ಬೀಳದ ಮೂಲೆಗಳಲ್ಲಿ ತವಕದ ಕಣ್ಣಿನ ಪ್ರಾಣಿಗಳು ನೆಲ ಮೂಸುತ್ತ ನೆಗೆಯುತ್ತವೆ.

ಶ್ರೀಪತಿರಾಯರು ಮಾತಾಡದೆ ನಡೆಯುತ್ತಿದ್ದರು. ಬದಲಾವಣೆಯಲ್ಲಿ ಜೀವನದ ಸಫಲತೆಯನ್ನು ನಾನು ಹುಡುಕುತ್ತಿದ್ದೇನೆ.

ಆದರೆ ದಿನನಿತ್ಯದ ಶಾಶ್ವತದಲ್ಲೂ ಅರಳುವುದನ್ನು ಆನು ಮರೆಯಕೂಡದು. ಆದರೆ ಹೇಗೆ ಕ್ರಿಯೆ ಸಾಧ್ಯ? ನನ್ನ ಪ್ರಾಣರಕ್ಷಣೆಯ ಮೌಢ್ಯದ ಕಿರೀಟ ಹೊತ್ತ ಮಂಜುನಾಥನಿಗೆ ಪ್ರತಿನಿತ್ಯ ಪಳಪಳ ಹೊಳೆಯುವಂತೆ ಬೆಳಗಿದ ತಟ್ಟೆಗಳಲ್ಲಿ ಹೆಂಗಸರು ಹಣ್ಣುಕಾಯಿ ಒಯ್ಯುವರು – ಅವರೇ ಈ ಶಾಶ್ವತದ ನಿಜವಾದ ಬಾಧ್ಯರೋ, ಅಥವಾ ಅವರು ಮಂಜುನಾಥ ಗರ್ಭದಲ್ಲಿರುವ ಪಿಂಡಗಳೋ?

'ಇಕೋ ಅದೇ ರಾಘವ ಪುರಾಣಿಕರ ಮನೆ' ಎಂದರು ಶ್ರೀಪತಿರಾಯರು.

ಎಲ್ಲ ವರ್ಗದ ಜನರಲ್ಲೂ ಬದುಕು ಸಫಲವಾಗುವ ಒಳಮಾರ್ಗಗಳೆಷ್ಟೋ ಇರುವಾಗ, ಈ ಬಿಸಿಲಿಗೊಡ್ಡಿ ಮೌನದಲ್ಲಿ ಊರುವ, ಅರಳುವ, ಫಲಿಸುವ ಕ್ರಿಯೆ ನಡೆಯುತ್ತಿರುವಾಗ ಪುರುಷ ಪ್ರಯತ್ನದಲ್ಲಿ ನಂಬುವುದು ಬರಿ ಅಹಂಕಾರವೆ? ಈ ಕ್ರಿಯೆ ನನಗೋಸ್ಕರವೆ? ಊರಿಗೂ ಅಗತ್ಯವೆ? – ಜಗನ್ನಾಥ ಈ ಪ್ರಶ್ನೆಗಳಿಂದೆಲ್ಲ ಮತ್ತೆ ಬಾಧಿತನಾಗಿ ನೋಡಿದ. ಸುಮಾರು ಹತ್ತು ಅಡಿಗೂ ಹೆಚ್ಚು ಎತ್ತರದ ಪಾಗಾರ. ಕಬ್ಬಿಣದ ಗೇಟು, ನಾಯಿಗಳಿವೆ ಎಚ್ಚರಿಕೆ ಎನ್ನುವ ಬೋರ್ಡು.

'ನಿಮ್ಮ ಮನೆತನ ಬಿಟ್ಟರೆ ಒಂದು ಕಾಲಕ್ಕೆ ಇವರೇ ಇಲ್ಲಿಗೆ ದೊಡ್ಡ ಜಮೀಂದಾರರು. ಆದರೆ ಎಲ್ಲ ಈಗ ಕರಗಿ ಹೋಗ್ತಾ ಇದೆ. ಇವರಿಗಿಂತ ಇವರ ಶಾನುಭೋಘನೇ ಒಂದು ದಿನ ದೊಡ್ಡ ಸಾಹುಕಾರ ಆಗ್ತಾನೆ. ಆಗ್ಲೆ ಅವನೊಂದು ಲಾರಿ ಬೇರೆ ಇಟ್ಟಿದಾನೆ' ಎಂದು ಶ್ರೀಪತಿರಾಯರು ಗೇಟಿನಲ್ಲಿದ್ದ ಕಾಲಿಂಗ್ ಬೆಲ್ಲನ್ನು ಒತ್ತಿದರು. ಆಶ್ಚರ್ಯದಿಂದ ನೋಡಿದ ಜಗನ್ನಾಥನಿಗೆ.

'ಇನ್ನೂ ದೊಡ್ಡ ಆಶ್ಚರ್ಯ ನೋಡ್ತೀಯಂತೆ ಸುಮ್ಮನಿರು. ಮನೇಲಿ ವಿದ್ಯುಚ್ಛಕ್ತಿ ತಯಾರಿಸೋ ಮೋಟಾರೇ ಇಟ್ಟುಕೊಂಡಿದಾರೆ. ಮನೆಲಿರೋದು ಬಲ್ಬಿನ ದೀಪ' ಎಂದು ನಾಲ್ಕಂತಸ್ತಿನ ಮನೆ ಮೇಲೆ ಇದ್ದ ದೊಡ್ಡ ಏರಿಯಲ್ಲನ್ನು ತೋರಿಸಿದರು.

'ಈ ವಿಶ್ವದ ಮೂಲೆ ಮೂಲೆ ಜೊತೆಗೂ ಪುರಾಣಿಕರು ಕಾಂಟ್ಯಾಕ್ಸ್ ಇಟ್ಟುಕೊಂಡಿದ್ದಾರೆ' ಎಂದು ಕಣ್ಣು ಮಿಟುಕಿಸಿದರು.

ಪಾಗಾರದಿಂದ ಬಹಳ ದೂರದಲ್ಲಿ ಮನೆಯಾದ್ದರಿಂದ ಬೆಲ್ ಕೆಲಸ ಮಾಡುತ್ತಿದೆಯೋ ಇಲ್ಲವೋ ತಿಳಿಯಲಿಲ್ಲ. ಮತ್ತೆ ಬಿಲ್ ಒತ್ತಿದರು. 'ಒಂದು ಕಾಲದ ದೊಡ್ಡ ಕ್ರಾಂತಿಕಾರ. ಅರವಿಂದರು ಬಾಂಬ್ ತಯಾರಿಸ್ತಿದ ಕಾಲದವ' ಎಂದರು.

ಎರಡನೇ ಸಾರಿ ಬೆಲ್ ಮಾಡಿದ ಮೇಲೆ ಖಾಕಿ ಸಮವಸ್ತ್ರ ಧರಿಸಿದ ಘೂರ್ಕನೊಬ್ಬ ಕೀಗಳನ್ನು ತಂದ. 'ಇದು ಮೊದಲನೇ ಆಶ್ಚರ್ಯ. ಕಾದಿರು' ಎಂದರು ರಾಯರು. ಘೂರ್ಕ ಸೆಲ್ಯೂಟ್ ಮಾಡಿ ಇಬ್ಬರನ್ನೂ ಕರೆದುಕೊಂಡು ಹೋಗಿ ಎತ್ತರದ ತೇಗದ ಮರದ ಭಾವಣೆಯ ವಿಶಾಲವಾದ ಹಜಾರದಲ್ಲಿ ಕೂರಿಸಿದ.

ಹಜಾರದ ಒಂದು ಮೂಲೆಯಲ್ಲಿ ಹ್ಯಾಟ್ ಇಡುವ ಸ್ಟ್ಯಾಂಡಿತ್ತು. ಅದರಲ್ಲಿ ಒಂದು ಈವನಿಂಗ್ ಹ್ಯಾಟ್, ಒಂದು ಸಾದಾ

ಸನ್‌ಹ್ಯಾಟು, ಮೃದುವಾದ ಕೂದಲಿನ ಕಾಶ್ಮೀರದ ಟೋಪಿ, ಬಗೆಬಗೆಯ ವಾಕಿಂಗ್ ಸ್ಟಿಕ್‌ಗಳು ಇದ್ದವು. ಇನ್ನೊಂದು ಮೂಲೆಯಲ್ಲಿ ಮೂರು ಕೋವಿಗಳು ಮರದ ಸ್ಟ್ಯಾಂಡ್ ಮೇಲಿದ್ದವು. ಗೋಡೆಗಳ ಮೇಲೆ ಸುತ್ತಲೂ ಉತ್ತಮ ಅಭಿರುಚಿಯಲ್ಲಿ ಫ್ರೇಂ ಮಾಡಿದ ಪಾಶ್ಚಾತ್ಯ ಚಿತ್ರಕಾರರ ಪ್ರಿಂಟ್‌ಗಳು; ಬ್ರೂಗಲ್‌ನ ಇಕಾರಸ್; ಸೂರ್ಯ ಮಿನುಗುವ ಹಳ್ಳಿಯ, ಗೋದಿ ಗದ್ದೆಗಳ, ಹೊಳೆಯುವ ಬೆಳಕು ನೆರಳಿನ ದಾರಿಯ ಕಾನ್‌ಸ್ಟೇಬಲ್‌ನ ಚಿತ್ರ 'ದಿ ಕಾರ್ನ್‌ಫೀಲ್ಡ್'; ಸ್ಫುಟವಾದ, ಶುದ್ಧವಾದ ನೀಲಿ, ಕಂದು, ಬೂದು ಬಣ್ಣಗಳ ಮೃದುವಾದ ವಿನ್ಯಾಸದ ಜಾನ್‌ಸೆಲ್ ಕೋಟ್‌ಮನ್ನನ 'ಗ್ರೇಟಾ ಬ್ರಿಡ್ಜ್'; ಹೊಗಾರ್ತ್‌ಚಿತ್ರಿಸಿದ ಖುಷಿ ನಗುವಿನ 'ದಿ ಶ್ರಿಂಪ್‌ಗರ್ಲ್'; ಸರ್ ಜೋಶುವ ರೆನಾಲ್ಡ್‌ನ 'ಏಜ್‌ಆಫ್ ಇನ್ನೊಸೆನ್ಸ್' – ಹೆಚ್ಚು ಪಾಲು ಚಿತ್ರಗಳು ಬ್ರಿಟಿಷ್ ಚಿತ್ರಕಾರರವು ಎಂಬುದನ್ನು ಜಗನ್ನಾಥ ಕುತೂಹಲದಿಂದ ಗಮನಿಸಿದ. ತಾವು ಕುತಿದ್ದ ಕುರ್ಚಿಗಳೂ ಅಷ್ಟೆ; ಸಪುರವಾದ ಕಾಲುಗಳ ನೆಟ್ಟನೆಯ ಬೆನ್ನಿನ ವಿಕ್ಟೋರಿಯಾ ಕಾಲದವು. ಫೂರ್ಕ ತಂದುಕೊಟ್ಟ ಕಾಗದದ ಮೇಲೆ ರಾಯರು ಇಬ್ಬರ ಹೆಸರನ್ನೂ ಬರೆದುಕೊಟ್ಟರು. ಫೂರ್ಕ ಅದನ್ನು ಚಿತ್ರ ಕೆತ್ತಿದ ತಟ್ಟೆಯ ಮೇಲಿಟ್ಟುಕೊಂಡು ಮಹಡಿ ಹತ್ತಿಹೋದ.

ಜಗನ್ನಾಥ ರಾಯರನ್ನು ಆಶ್ಚರ್ಯದಲ್ಲಿ ನೋಡಿದ. ಹಜಾರದ ಒಳಗೆ ಹೊಳೆಯುವ ದೊಡ್ಡ ಹಿತ್ತಾಳೆಕುಂಡ ಒಂದರಲ್ಲಿ ಆಸ್ಪಡಿಸ್ಟ್ರಾ ತರಹದ ಒಂದು ಗಿಡ. ನಾಲ್ಕು ಗೋಡೆಯ ಸುತ್ತವೂ ಬಗೆಬಗೆಯ ಕ್ಯಾಕ್ಟಸ್‌ಗಳು. ಹೊರಗೆ ಊಟಿಯಿಂದ ತಂದಿರಬಹುದಾದ ಇಂಗ್ಲಿಷ್ ಜಾತಿಯ ಗುಲಾಬಿ ಗಿಡಗಳು. 'ಈಚೆಗೆ ಇಂಗ್ಲೆಂಡಿನಲ್ಲಿ ಮನೆಯೊಳಗೆ ಆಸ್ಪಡಿಸ್ಟ್ರಾ ಬೆಳೆಸಲ್ಲ' ಎಂದು ಜಗನ್ನಾಥ ತುಂಟು ನಗುತ್ತ ಹೇಳಿದ.

ಸ್ವಲ್ಪ ಹೊತ್ತಿಗೆ ಮಹಡಿಯಿಂದ ಒಬ್ಬರು ಇಳಿದು ಬರುತ್ತಿದ್ದ ಮೃದುವಾದ ಸಪ್ಪಳ ಕೇಳಿಸಿತು. ಮಹಡಿಯ ಮೆಟ್ಟಲುಗಳಿಗೆ ಕಾರ್ಪೆಟ್ ಹಾಕಿರಬೇಕೆಂದುಕೊಂಡು ಜಗನ್ನಾಥ ಯಜಮಾನನಿಗಾಗಿ ಕುತೂಹಲದಿಂದ ಕಾದ.

'How do you do?' ಎನ್ನುತ್ತ ಒಬ್ಬ ಸುಮಾರು ಅರವತ್ತು ವರ್ಷ ವಯಸ್ಸಿನ ವ್ಯಕ್ತಿ ಕೈಯೊಡ್ಡಿ ತುಂಬ ಚುರುಕಾಗಿ ನಡೆದು ಹಜಾರಕ್ಕೆ ಬಂದರು. ರಾಯರ ಕೈ ಕುಲುಕಿದರು. ಕಂದು ಬಣ್ಣದ ಈ ಕಾಲಕ್ಕೆ ಅಗಲವೆನ್ನಿಸುವ ಪ್ಯಾಂಟ್ ತೊಟ್ಟು, ವೇಸ್ಟ್ ಕೋಟ್‌ಹಾಕಿ ಟೈಕಾಲರ್ ಧರಿಸಿದ್ದ, ತುಂಬ ನುಣ್ಣಗೆ ಶೇವ್ ಮಾಡಿಕೊಂಡಿದ್ದರಿಂದ ಹೊಳೆಯುವ ಗಲ್ಲದ ಪುರಾಣಿಕ ತನಗೆ ಕೈಚಾಚಿದರು. ರಾಯರು ಕನ್ನಡದಲ್ಲಿ ತನ್ನ ಪರಿಚಯ ಮಾಡಕೊಟ್ಟರು – 'ಜಗನ್ನಾಥ, ಆನಂದರಾವ್ ಮಕ್ಕಳು.'

ಪುರಾಣಿಕರು ನೋಡಲು ತೆಳ್ಳಗೆ ಇದ್ದರೂ ಗಟ್ಟಿಯಾಗಿ ಕೈ ಅಮುಕಿ ಕುಲುಕಿದರು.

'Pleased to meet you. I have heard such a lot about you from Sripathi, my only friend in this blessed place. I used to know your mother, a beautiful, cultured lady. She used to play sweetly on the Veena — come in please come in' ಎಂದು ಪುರಾಣಿಕರು ನಿಂತು ಒಳಗೆ ಕೈಮಾಡಿ ತೋರಿಸಿದರು. 'After you' ಎಂದು ಮುಂದೆ ಹೋಗಲು ಜಗನ್ನಾಥನನ್ನು ಒತ್ತಾಯಿಸಿದರು. ಪುರಾಣಿಕರ ಬಾಯಲ್ಲಿ ಕೃತಕವೆನ್ನಿಸಿದ ಇಂಗ್ಲಿಷ್ ಬಿಬಿಸಿಯ ಡಿಂಬಲ್‌ಬಿಯ ಉಚ್ಚಾರಣೆಯನ್ನು ನೆನಪಿಗೆ

ತರುವಂತಿತ್ತು.

ಊಹಿಸಿದ್ದಂತೆ ಮಹಡಿ ಮೆಟ್ಟಲುಗಳಿಗೆ ಕೆಂಪು ಕಾರ್ಪೆಟ್ ಹೊದಿಸಿತ್ತು. ಚೆನ್ನಾಗಿ ಪಾಲಿಶ್ ಮಾಡಿದ ಹೊಳೆಯುವ ಹಿತ್ತಾಳೆಯ ಬ್ಯಾನಿಸ್ಟರ್ ಇದ್ದ ಮರದ ಸ್ಟೇರ್‌ಕೇಸು, ಸ್ಟೇರ್‌ಕೇಸಿನ ಪ್ರತಿ ತಿರುವಿನಲ್ಲೂ ಪ್ರಸಿದ್ಧ ಚಿತ್ರಕಾರರ ಪ್ರಿಂಟ್‌ಗಳು. ಮೂರನೇ ಮಹಡಿಯಲ್ಲಿ ಪುರಾಣಿಕರ ಸ್ಟಡಿ. ಬಾಗಿಲನ್ನು ತಳ್ಳಿ ಪುರಾಣಿಕರು ‘Please come in’ ಎಂದು ಕೈಮಾಡಿ ಒಳಗೆ ತೋರಿಸಿದರು.

ಒಳಗೆ ಬಂದವನೆ ಜಗನ್ನಾಥ ದಂಗುಬಡಿದವನಂತೆ ನಿಂತ.

“Please sit down’ ಎಂದರು ಪುರಾಣಿಕರು. ಹಣೆಯ ಮೇಲಿಳಿದ ಉದ್ದ ಬಿಳಿಗೂದಲಿನ ರಾಸಿಯನ್ನು ತಳ್ಳಿಕೊಂಡರು. ಕಾಶ್ಮೀರಿ ರತ್ನಗಂಬಳಿಯ ಮೇಲೆ ಸುತ್ತಲೂ ಸೋಫಾಗಳಿದ್ದುವು. ಮೂಲೆಯೊಂದರಲ್ಲಿ ಸುಂದರವಾಗಿ ಕೆತ್ತಿದ ಬರೆಯುವ ಬೀಟೆ ಮರದ ಮೇಜು. ಅದರೆದುರು ಮೆತ್ತೆ ಹಾಕಿದ ತಿರುಗುವ ಕುರ್ಚಿ. ಎದುರುಬದುರಾಗಿ ಗೋಡೆಗಳಿಗೆ ಒರಗಿ ನಿಂತ ಗಾಜಿನ ಕಪಾಟುಗಳಲ್ಲಿ ಪುಸ್ತಕಗಳು. ಮಧ್ಯದಲ್ಲಿ ಕೊರೆದ ಅಗ್ಗಿಷ್ಟಿಕೆ, ಬೆಳಿಗ್ಗೆ ಉರಿಯುತ್ತಿದ್ದು ಈಗ ಆರುತ್ತಿರುವ ಕೆಂಡಗಳು, ಫೈರ್‌ಪ್ಲೇಸಿನ ಮೇಲೆ ಗಾಜಿನ ಪ್ರಾಣಿಗಳು, ಜಪಾನಿ ಬೊಂಬೆಗಳು, ಬಾಯಲ್ಲಿ ಚುಟ್ಟ ಕಚ್ಚಿದ ಚರ್ಚಿಲ್‌ನ ಫ್ರೇಂ ಹಾಕಿದ ವ್ಯಂಗ್ಯಚಿತ್ರ. ಸೋಫಾ ಒಂದರ ಕೆಳಗೆ ಮೃದುವಾದ ರಗ್ಗಿನ ಮೇಲೆ ಮೈ ತುಂಬ ರೋಮದ ಜೂಲು ನಾಯಿಯೊಂದು ಕಣ್ಮುಚ್ಚಿ ಕತ್ತು ಚಾಚಿ ಹಿತವಾಗಿ ಮಲಗಿತ್ತು. ಜಗನ್ನಾಥ ಕಪಾಟಿನಲ್ಲಿದ್ದ ಪುಸ್ತಕಗಳ ಮೇಲೆ ಕಣ್ಣುಹಾಯಿಸಿದ : ರೇನಾಲ್ಡ್ಸ್‌ನ ಕಾದಂಬರಿಗಳು, ರಸೆಲ್, ಬರ್ನಾಡ್‌ಶಾ, ಕಿಪ್ಲಿಂಗ್, ಚರ್ಚಿಲ್, ಶೇಕ್ಸ್‌ಪಿಯರ್, ಟಾಲ್‌ಸ್ಟಾಯ್, ಫಾರ್‌ಸ್ಟರ್. ಫಾರ್‌ಸ್ಟರ್‌ನ ‘ಹೊವಾರ್ಡ್ಸ್ ಎಂಡ್’ ಪುಸ್ತಕವನ್ನೆಳೆದು ಪುಟ ತಿರುಗಿಸಿದ. ಪುರಾಣಿಕರು ಅದನ್ನು ಓದಿದ್ದರೆಂಬ ಕುರುಹುಗಳು ಕಂಡವು. ಕೆಂಪು ಪೆನ್ಸಿಲ್‌ನಲ್ಲಿ ಗುರುತು ಮಾಡಿ ರೈಟ್‌ಗಳನ್ನು ಹಾಕಿದ್ದ ಈ ಭಾಗ ಜಗನ್ನಾಥನ ಕಣ್ಣು ಸೆಳೆಯಿತು.

‘Miss Schlegel, the real thing’s money, and all the rest is a dream.’

‘You’re still wrong. You’ve forgotton Death.’

Leonard could not understand.

You’ve forgotton Death ಎನ್ನುವ ಮಾತಿನ ಕಡೆ ಎರಡು ಗೀರುಗಳಿದ್ದವು. ಜಗನ್ನಾಥನಿಗೆ ಪುರಾಣಿಕರ ಒಳಜೀವನದ ಬಗ್ಗೆ ಈ ಎರಡು ಗೀರುಗಳು ಕುತೂಹಲ ಹುಟ್ಟಿಸಿದುವು. ಪುಸ್ತಕಗಳನ್ನು ಬಿಟ್ಟು ಮುಂದೆ ನಡೆದ. ಸ್ಟಡಿಯ ಪೂರ್ವ ಮತ್ತು ಪಶ್ಚಿಮಕ್ಕೆ ದೊಡ್ಡ ದೊಡ್ಡ ಗಾಜಿನ ಕಿಟಕಿಗಳು; ಗೋಡೆಯ ಮುಕ್ಕಾಲದಷ್ಟು ದೊಡ್ಡದಾಗಿದ್ದ ಈ ಕಿಟಕಿಗಳಿಗೆ ನೀಲಿಬಣ್ಣದ ದಪ್ಪನೆಯ ಕರ್ಟನ್‌ಗಳು. ಕಿಟಕಿಯ ಮೂಲಕ ನೋಡಿದ. ಮರಗಳ ಮರೆಯಲ್ಲಿ ಭಾರತೀಪುರ. ಹೊಳೆ,

ಮಂಜುನಾಥ ದೇವಸ್ಥಾನದ ಬೂದು ಬಣ್ಣದ ಶಿಖರ. ಕಿಟಕಿಯ ಕೊನೆಯಲ್ಲಿ ಮೂಲೆಯ  ಮೇಜಿನ ಮೇಲಿದ್ದ ಬೃಹದಾಕಾರದ ರೇಡಿಯೋನ್ನ ಗಮನಿಸಿದ. ಪುರಾಣಿಕರೂ ಅವನ ಕುತೂಹಲವನ್ನು ಗಮನಿಸಿರಬೇಕು. ಹತ್ತಿರ ಬಂದು ಹೆಮ್ಮೆಯಿಂದ ಹೇಳಿದರು:

'I can get almost all the major short-wave stations in the world on that radio.'

ಸ್ವಲ್ಪ ಸುಮ್ಮನಿದ್ದು ಅಗ್ಗಿಷ್ಟಿಕೆಯ ಎದುರು ನಿಂತರು. ಪೈಪ್ ಹೊತ್ತಿಸುತ್ತ, ಕಣ್ಣುಗಳಲ್ಲಿ ನಗುತ್ತ ಹೇಳಿದರು:

'I am in total retreat. Sripathy must have told you.'

ಜಗನ್ನಾಥ ಮೇಜಿನ ಹತ್ತಿರವಿದ್ದ ಸೋಫಾದ ಮೇಲೆ ಕೂತ. ರೇಡಿಯೋ ಅವರಿಗೆ ಇಂಗ್ಲಿಷ್ ಕಲಿಸಿಕೊಟ್ಟಿರಬೇಕು. 'This is more comfortable. Come' ಎಂದು ಪುರಾಣಿಕರು ತನಗೆ ಹತ್ತಿರವಿದ್ದ ಬೂರುಗದ ಹತ್ತಿಯ ಕೆಂಪು ಕುಶನ್‌ಗಳಿದ್ದ ಒಂದು ಸೋಫಾ ತೋರಿಸಿದರು.

ಕೂದಲಷ್ಟೇ ಅಲ್ಲ ಪುರಾಣಿಕರ ಹುಬ್ಬುಗಳೂ ಬೆಳ್ಳಗಿದ್ದವು ಎಂಬುದನ್ನು ಜಗನ್ನಾಥ ಗಮನಿಸಿದ. ಕಿವಿಗಳ ಮೇಲೂ ಕೂದಲಿದ್ದುದರಿಂದ ಚೂಪಾದ ಮುಖದ ಹೊಳೆಯುವ ಕಣ್ಣುಗಳ ಪುರಾಣಿಕರು ಥಟ್ಟನೆ ಮೊಟ್ಟುಗಳಲ್ಲಿ ಪಿಳಿ ಪಿಳಿ ಕಣ್ಣುಬಿಡುತ್ತ ನೋಡುವ ಪ್ರಾಣಿಯಂತೆ ಕಂಡರು. ಬಿಳುಚಿದ ಮುಖ, ತೆಳುವಾದ ತುಟಿಗಳು, ನೀಳವಾದ ಮೂಗು – ಆದರೆ ಅವರ ಜೀವಂತಿಕೆಯಿದ್ದುದೆಲ್ಲ ಕಣ್ಣುಗಳಲ್ಲಿ, ಕೂದಲು ತುಂಬಿದ ಕಿವಿಗಳಲ್ಲಿ, ಪುಸ್ತಕದಿಂದ ನಿಧಾನವಾಗಿ ಓದಿದವರಂತೆ ಮತ್ತೆ ಹೇಳಿದರು :

'Yes. I am living here in exile with my books, a few friends like Sripathy, and my ailing wife. Excuse me I have been talking in a monologue without offering you anything. What will you have to drink?'

ಪುರಾಣಿಕರು ಸೈಡ್ ಟೇಬಲ್ ಒಂದರ ಗಾಜಿನ ಬಾಗಿಲನ್ನು ಸರಿಸಿದರು. ಅದರೊಳಗೆ ವಿಲಾಯಿತಿ ಬ್ರಾಂಡಿ, ವ್ಹಿಸ್ಕಿ, ಜಿನ್ ವೈನ್, ಶೆರಿ ಇದ್ದುವು. ಕಟ್‌ಗ್ಲಾಸ್‌ನ ಬಟ್ಟಲುಗಳನ್ನು ಹೊರತೆಗೆದು ಪುರಾಣಿಕರು ಪ್ರಶ್ನಾರ್ಥಕವಾಗಿ ಜಗನ್ನಾಥ ಕಡೆ ನೋಡಿದರು. ಇಂಡಿಯಾಕ್ಕೆ ಬಂದ ಮೇಲೆ ಕುಡಿಯುವುದನ್ನು ಬಿಟ್ಟಿದ್ದ ಜಗನ್ನಾಥ, ರಾಯರು ಜೊತೆಯಲ್ಲಿದ್ದಾರೆಂದು ಸಂಕೋಚಪಡುತ್ತ,

'I am not particular about any. Thanks' ಎಂದ.

‘Have some whisky. I can assure you, it is not adulterated. My friend Avdhani brings it from Bombay for me. It is awfully cold these days, you see, although we have a bright day today’ ಎಂದು ಪುರಾಣಿಕರು ಸುಂದರವಾದ ಎರಡು ಕಟ್‌ಗ್ಲಾಸ್ ಟಂಬ್ಲರ್‌ಗಳಲ್ಲಿ ವ್ಹಿಸ್ಕಿಯನ್ನು ಹೊಯ್ದರು. ಅದಕ್ಕೆ ಪ್ರಭುಗಳ ಸೋಡಾ ಫ್ಯಾಕ್ಟರಿಯ ಸೋಡವನ್ನು ಬೆರೆಸುತ್ತ,

‘Tell me when to stop. You must excuse this awful soda and sorry there is no ice’ ಎಂದರು. ಜಗನ್ನಾಥನಿಗೆ ಅವನ ಗ್ಲಾಸ್ ಕೊಟ್ಟು ರಾಯರಿಗೆ ‘The teatotaller will have a fresh lime as usual’ ಎಂದು ಬೆಲ್ ಒತ್ತಿದರು. ಬಿಳಿ ಬಟ್ಟೆ ತೊಟ್ಟ ಅಡಿಗೆಯವನು ಬಾಗಿಲ ಬಳಿ ನಿಂತ. ‘ನಾಯರ್, ಇವರಿಗೊಂದು ನಿಂಬೆಹಣ್ಣಿನ ಪಾನಕ ಮಾಡಿ ತಾ’ ಎಂದರು. ಅದು ಜಗನ್ನಾಥ ಕೇಳಿಸಿಕೊಂಡ ಪುರಾಣಿಕರ ಮೊದಲನೇ ಕನ್ನಡ ವಾಕ್ಯ; ಅವರ ಕನ್ನಡ ಇಂಗ್ಲಿಷ್‌ಗಿಂತ ಕೃತಕವಾಗಿತ್ತೆಂದು ಗಮನಿಸಿದ.

‘What have you been doing in this medieaval town?’ ಪುರಾಣಿಕರು ಪೈಪನ್ನು ರೇಡಿಯೋ ಮೇಲೆ ಬಿಟ್ಟು ವ್ಹಿಸ್ಕಿಯನ್ನು ಸವಿಯುತ್ತ ಮತ್ತೆ ಅಗ್ಗಿಷ್ಟಿಕೆ ಎದುರು ನಿಂತು ಕೇಳಿದರು. ಜಗನ್ನಾಥ ತನ್ನ ಯೋಜಿತ ಕ್ರಿಯೆಗೆ ಪುರಾಣಿಕರೇನು ಅನ್ನುತ್ತಾರೆಂಬ ಕುತೂಹಲದಿಂದ,

‘ಇವತ್ತಿನ ಪೇಪರ್‌ನೋಡಿದಿರ?’ ಎಂದು ರಾಯರ ಕಡೆ ನೋಡಿದ. ನೀವೇ ಅವರಿಗೆ ವಿವರಿಸಿ ಎಂದು ಸೂಚಿಸುವಂತಿತ್ತು ಅವನ ನೋಟ. ಅಷ್ಟರಲ್ಲಿ ಪುರಾಣಿಕರು ಇನ್ನೇನೊ ನೆನೆದು, ಪೈಪ್ ಎಳೆಯುತ್ತ,

‘Excuse me. I have a problem which only Mr. Jagannath can solve. As you perhaps know i have never been abroad. A cold climate would kill me as my lungs are weak. For nearly forty years now I have lived in this room amidst these books and my pictures. Early in the morning and in the evening I walk round my garden’ ಎಂದು ಮನೆಯ ಸುತ್ತದ ತೋಟ ತೋರಿಸಿದರು. ‘This is my world and meet nobody. Yet I inhabit a large world, thanks to my radio. Yesterday midnight I heard Swan Lake, God knows from which station and it was not a bad performance. It was perhaps midday where it was played, and doesn’t this fill you with wonder?’

ಪುರಾಣಿಕರು ತನ್ನಷ್ಟಕ್ಕೆ ಮಾತಾಡಿಕೊಳ್ಳುತ್ತ ರೂಮನ್ನು ಸುತ್ತಿದರು. ಅವರ ಬೆನ್ನು ಸ್ವಲ್ಪ ಬಾಗಿತ್ತೆಂಬುದನ್ನೂ, ಅವರ ಉಲನ್ ಟ್ರೌಜರ್ಸ್ ಅಂಡಿನ ಹತ್ತಿರ ಸವೆದು ದಾರಗಳು ಕಾಣುತ್ತಿದ್ದವೆಂಬುದನ್ನೂ ಜಗನ್ನಾಥ ಗಮನಿಸಿದ.

‘I Have never stepped out of my compound, but have mentally reconstructed all the famous places in London. Look I was about to ask you for a clarification and I began to wander.’

ಪುರಾಣಿಕರು ಬರೆಯುವ ಮೇಜಿನ ಬಳಿ ಜಗನ್ನಾಥನನ್ನು ಕರೆದರು. ಒಂದು ಶೀಟ್‌ಕಾಗದದ ಮೇಲೆ ರಸ್ತೆಗಳ ಚಿತ್ರ ಬರೆದು,

‘If you enter Fleet Street from this end, you can see the dome of St. Paul’s, can’t you? Where do you find the pub that the great Dr. Johnson inhabited? To our right or left?’

‘Right, perhaps’ ಎಂದು ಜಗನ್ನಾಥ, ‘ಹೀಗೆ ಹೋದರೆ Gough Square ಸಿಗತ್ತೆ, ಅಲ್ಲಿ ಡಿಕ್ಷನರಿ ಮಾಡುವಾಗ ಅವ ವಾಸವಾಗಿದ್ದ ಮನೆಯಿದೆ. ಈಗ ಅದು ಜಾನ್‌ಸನ್ ಮ್ಯೂಸಿಯಂ ಆಗಿದೆ’ ಎಂದು ಕಾಗದದಲ್ಲಿ ಬರೆದು ತೋರಿಸಿದ.

‘I know that. Thats a lot. Do you know many books i have read trying to locate some of these famous historical places? The book I read was vague about this pub. And I haven’t had sleep many nights trying to figure out whether it was to the right of the Street or left.’

ಪುರಾಣಿಕರ ಕಣ್ಣುಗಳು ಖುಷಿಯಿಂದ ಮಿನುಗಿದವು. ‘To the right then. Good’ ಎಂದು ತಮಗೇ ಅಂದುಕೊಂಡು ಮಗ್ನರಾದರು. ನಂತರ ಹಸನ್ಮುಖಿಯಾಗಿ ಜಗನ್ನಾಥನ ಕಡೆಗೇ ನೋಡುತ್ತ ಕೇಳಿದರು :

‘You must be tired of listening only to me. You must meet my friend. I Shall bring him here’ ಎಂದು ಅವರ ಸ್ಟಡಿಯಿಂದ ಇನ್ನೊಂದು ಕೋಣೆಗೆ ಹೋದರು.

ಜಗನ್ನಾಥ ಶ್ರೀಪತಿರಾಯರನ್ನು ನೋಡಿದ ; ಖಾದಿಯ ಅಡ್ಡಪಂಚೆಯುಟ್ಟು ಮುಂಡು ತೋಳಿನ ಅಂಗಿ ಹಾಕಿ ಸೋಫಾದ ಮೇಲೆ ಕಾಲು ಮಡಚಿ ಕೂತಿದ್ದರು. ಅಷ್ಟೇ ಅಲ್ಲ – ಎಲೆಗೆ ಸುಣ್ಣ ಹಚ್ಚುತ್ತಿದ್ದರು. ಅವರ ಮುಖದ ಮೇಲಿದ್ದ ಮುಗುಳ್ನಗು ತನ್ನನ್ನು ಕೆದಕುವಂತಿತ್ತು. ಮುಗುಳ್ನಗು ಕಾತರಕ್ಕೆ ತಿರುಗಿ ಹೇಳಿದರು:

‘ನಿಂತ ನೆಲ ಚೂರು ಚೂರೇ ಕರಗ್ತ ಇದೆ. ಎಷ್ಟೋ ವರ್ಷಗಳಿಂದ ಒಬ್ಬನೇ ಒಬ್ಬ ಗೇಣಿದಾರ ಇವರ ಮುಖ ನೋಡಿದ್ದಿಲ್ಲ; ಇವರು ಅವನ ಮುಖ ನೋಡಿದ್ದಿಲ್ಲ. ಎಲ್ಲ ಶ್ಯಾನುಭೋಗರ ಮುಖಾಂತರ ವ್ಯವಹಾರ. ಕೊಬ್ಬಿದ ಹೆಗ್ಗಣ ಆಗಿದಾನೆ ಅವ. ಮತ್ತೆ ಈ ಸ್ನೇಹಿತ ಇನ್ನೊಂದು ಹೆಗ್ಗಣ. ಇನ್ನೊಂದು ಐದಾರು ವರ್ಷದಲ್ಲಿ ಇವರ ಸೂಟೆಲ್ಲ ಹರಿದು ಹೋಗಿರುತ್ತೆ. ಈಗ್ಲೇ

ಓ.ಡಿ. ವ್ಯವಹಾರ ಶುರುವಾಗಿದೆ.’

‘My friend Avdhani’

ಕತ್ತು ಮುಚ್ಚುವ ಸ್ವೆಟರ್ ಹಾಕಿ, ದೊಗಳೆ ಪ್ಯಾಂಟ್ ತೊಟ್ಟಿದ್ದ ಅವಧಾನಿಯನ್ನು ಪುರಾಣಿಕರು ಪರಿಚಯ ಮಾಡಿಸಿದರು. ಅವಧಾನಿ ಕಾಲಿನ ಮೇಲೆ ಸಂಪೂರ್ಣ ಸ್ವಾಧೀನವಿಲ್ಲದೆ ನಡೆದು ಬಂದು ಕೂತ. ಅವನ ಗ್ಲಾಸಿನಲ್ಲಿದ್ದ ದ್ರವ ಸರಾಯಿಯಿರಬೇಕೆಂದು ಜಗನ್ನಾಥ ವಾಸನೆಯಿಂದ ಊಹಿಸಿದ. ಅವಧಾನಿಗೆ ಸುಮಾರು ನಲವತ್ತು ವರ್ಷಗಳಾಗಿದ್ದಿರಬಹುದು. ಇಂಗ್ಲೆಂಡಿನ ಸುಂದರವಾದ ಫ್ಲ್ಯಾಟನ್ನು ಹೋಲುತ್ತಿದ್ದ ಪುರಾಣಿಕರ ಸ್ಟಡಿಯಲ್ಲಿ ಅವಧಾನಿಯನ್ನು ನೋಡುತ್ತ ನೋಡುತ್ತ ಜಗನ್ನಾಥನಿಗೆ ಏನೋ ವಿಪರ್ಯಾಸದ ಅನುಭವ ತನಗಾಗುತ್ತಿದೆಯಲ್ಲ ಇದಕ್ಕೆ ಕಾರಣವೇನು ಎಂದು ಊಹಿಸುತ್ತಿದ್ದಂತೆ ಅವಧಾನಿಯ ಮುಖ ವಿಲಕ್ಷಣವಾಗಿದೆ ಎನ್ನಿಸಿತು. ಅವನ ಹಣೆಯ ಎಡಪಾರ್ಶ್ವದಲ್ಲಿ ಭೂತರಾಯನ ಹರಕೆಗಾಗಿ ಹಾಕಿದ ಬರೆಯ ಗುರ್ತಿತ್ತು. ಪುರಾಣಿಕರ ನೀಟಾಗಿ ಕ್ಷೌರ ಮಾಡಿದ ಮುಖ, ಅವರ ಸಭ್ಯ ನಿಲುವು ಗತ್ತುಗಳಿಗೆ ವಿರೋಧವಾಗಿ ಅವಧಾನಿಯ ಕಣ್ಣುಗಳಲ್ಲಿ ಗಿಬುರು, ಮುಖದ ಮೇಲೆ ಐದಾರು ದಿನಗಳ ಬಿಳಿ ಕರಿ ಕೂಳೆಗಳು ಇದ್ದುವು. ಬೆಳಿಗ್ಗೆ ಇವನು ಮುಖವನ್ನು ತೊಳೆದೇ ಇಲ್ಲವೆನಿಸಿತು.

‘Drink is the only consolation of a lonely life, you see’

ಪುರಾಣಿಕರು ನಗುತ್ತ ಸ್ನೇಹಿತನ ಅವಸ್ಥೆಯ ಮುಜುಗರ ಮುಚ್ಚಲು ಹೇಳಿದರು :

‘He does all my shopping for me. Hence you can guess how well travelled he must be within the country’.

ಅವಧಾನಿಯನ್ನು ಮಾತಾಡಲು ಪುರಾಣಿಕರು ಪ್ರಚೋದಿಸುತ್ತಿದ್ದಾರೆಂದು ಜಗನ್ನಾಥನಿಗೆ ಗೊತ್ತಾಯಿತು. ಅವಧಾನಿ ಸರಾಯನ್ನು ಗಟಗಟನೆ ಕುಡಿದು ಗ್ಲಾಸನ್ನು ಕೆಳಗಿಟ್ಟು, ಕೈಯಿಂದ ಬಾಯೊರೆಸಿಕೊಂಡು ಹೇಳಿದ :

‘Mr. Puranik is a great gentleman. He is my refuge. I run away from my home to this place everyday. My home is infected, you understand, by pilgrims.’

ಅವಧಾನಿ ಎಳೆದೆಳೆದು ಮಾತಾಡಿದ. ಪುರಾಣಿಕರು ಹೊಗಳಿಸಿಕೊಳ್ಳಲು ಮುಜುಗರ ಪಡುತ್ತ ಮಾತು ಬದಲಾಯಿಸಲು ಹೇಳಿದರು.

‘Mr. Avdhani is an agnostic, but he claims that he has psychic powers. Perhaps

he has. For myself I don’t believe in any of that kind of stuff. Mr. Avdhani claims that he was a medium once and Bhootha Raya used to speak through him. I have always laughed at this kind of nonsense. Yet I would like to do some research you know in this area.’

ಅವಧಾನಿ ಉತ್ಸಾಹಗೊಂಡ. ಎಳೆದೆಳೆದು ಮಾತಾಡುತ್ತ ಸೈಕಿಕ್ ಪವರ್ಸ್ ನಿಜವೆಂದು ವಾದಿಸಿದ. ಈ ಬರೆಯಿಂದಾಗಿ ಭೂತರಾಯನ ಅಂಶ ತನ್ನಲ್ಲಿದೆಯೆಂದು ಹೇಳಿದ. ನನ್ನ ಕಣ್ಣುಗಳನ್ನು ನೋಡುತ್ತಲೇ – ನೋಡಿ, ಈ ಕಣ್ಣುಗಳನ್ನು ನೋಡುತ್ತಲೇ ಇರಬೇಕೆಂದು ನಿಮಗನ್ನಿಸುವುದಿಲ್ಲವೆ, ನನ್ನ ಸೈಕಿಕ್ ಪವರ್ಸ್‌ನಿಂದ ಪುರಾಣಿಕರನ್ನು ಅನೇಕ ಅನಿಷ್ಟಗಳಿಂದ ಕಾಪಾಡಿದ್ದೇನೆ ಎಂದು ಕೊಚ್ಚಿಕೊಂಡ. ಯಾತ್ರಿಕರನ್ನು ಬೈದ. ಅವಳ ಸಂಬಂಧಿಗಳನ್ನೆಲ್ಲ ತಂದು ಮನೆಯಲ್ಲಿಟ್ಟುಕೊಂಡು ತನ್ನನ್ನು ಮನೆಬಿಡುವಂತೆ ಮಾಡಿದ ಗಯ್ಯಾಳಿ ಹೆಂಡತಿಯನ್ನು ದೂಷಿಸಿದ. ಅಮಲಿನಲ್ಲಿ ಭಾವಾತಿರೇಕದಿಂದ  ಮಾತಾಡುತ್ತ ಪುಟ್ಟಮ್ಮ ಮತ್ತು ಪುರಾಣಿಕರು ಎಂದೂ ತನ್ನನ್ನು ಕೈಬಿಡುವುದಿಲ್ಲವೆಂದು ಅಳಲು ಪ್ರಾರಂಭಿಸಿದ. ಹೆಂಡತಿಯ ಶೀಲದ ಬಗ್ಗೆ ತನಗೆ ಸಂಶಯವಿದೆಯೆಂದೂ, ಅವಳ ಸೋದರಮಾವ ತನ್ನ ಆಸ್ತಿಗಾಗಿ ಮಾಟ ಮಾಡಿಸಿದ್ದಾನೆಂದೂ, ತನಗಿರುವ ಸೈಕಿಕ್ ಪವರ್ಸ್‌ನಿಂದಾಗಿ ಅವನ ಪಡಪೋಶಿ ನಡೆಯುತ್ತಿಲ್ಲವೆಂದೂ, ಅವನನ್ನು ತಾನು ಮುಂದಿನ ಅಮಾವಾಸ್ಯೆಯೊಳಗಾಗಿ ಮುಗಿಸುವುದು ಖಂಡಿತವೆಂದೂ, ಭೂತರಾಯನಿಗೆ ತಾನೆಲ್ಲ ಹೇಳಿದ್ದೇನೆಂದೂ ರೇಗಾಡಿದ. ಇಂಗ್ಲಿಷ್‌ನಲ್ಲಿ ಪ್ರಾರಂಭವಾಗಿದ್ದ ಮಾತು ಗೋಳಿಗೆ, ಕೋಪಕ್ಕೆ ತಿರುಗಿದೊಡನೆಯೇ ಕನ್ನಡವಾಗಿತ್ತು. ಪುರಾಣಿಕರು ಗಂಭೀರವಾಗಿ ಅವನ ಕಡೆಯೆ ನೋಡುತ್ತ ಕರುಣೆಯಿಂದ, ಆದರೆ ನಿಷ್ಠುರವಾಗಿ ಅವನನ್ನೆಬ್ಬಿಸಿ ಒಳಗೆ ಕರೆದುಕೊಂಡು ಹೋದರು. ಸ್ವಲ್ಪ ತಡೆದು ಬಂದು ಕಳಕಳಿಯಿಂದ ವಿವರಿಸಿದರು:

‘You must pardon my friend’s misbehaviour. For Mr. Jagannath who has seen cocktail parties this may not be an unusual sight. Mr. Avdhani needs to read more of Russel. He is very sensible and helpful, but breaks down when he drinks. He is very unhappy, you see.’

ಪುರಾಣಿಕರು ತಮ್ಮ ಸ್ಥಿಮಿತವನ್ನು ಕಳೆದುಕೊಂಡಿರಲಿಲ್ಲ. ‘Let me fill you glass’ ಎಂದರು. ಜಗನ್ನಾಥ ‘ಬೇಡ, ಥ್ಯಾಂಕ್ಸ’ ಎಂದ. ಕೂಡಲೇ ಹೊರಟು ಹೋಗಬೇಕೆನ್ನಿಸಿ ಎದ್ದು ನಿಂತ. ಆದರೆ ಪುರಾಣಿಕರ ಗಮನ ಸೆಳೆಯುವುದು ಸಾಧ್ಯವಾಗಲಿಲ್ಲ; ಅವರು ಯಾವುದೋ ಗುಂಗಿನಲ್ಲಿದ್ದಂತೆ ಅನ್ನಿಸಿತು.

‘The only way is to westernise ourselves. Look at Avdhani’s. This country grabs you by the neck when you are weak.’

ಇಷ್ಟು ಹೊತ್ತೂ ಸುಮ್ಮನಿದ್ದ ರಾಯರು ಜಗನ್ನಾಥ ಚಡಪಡಿಸುತ್ತಿರುವುದನ್ನು ಗಮನಿಸಿ ಪುರಾಣಿಕರನ್ನು ಕೇಳಿದರು:

‘ಇವತ್ತಿನ ಪೇಪರ್ ನೋಡಿದಿರ?’

‘No. It if ages since I have looked at newspapers. Does anything new ever happen in this country?’

ಜಗನ್ನಾಥ ಆಶ್ಚರ್ಯದಿಂದ ರೇಡಿಯೋ ತೋರಿಸಿ ಕೇಳಬೇಕೆನ್ನುವಷ್ಟರಲ್ಲೆ ಪುರಾಣಿಕರು ಹೇಳಿದರು :

‘I abhor news. I listen only to music, and occasionaly to serious talk and poetry.’

ಇವರ ಬಿಳಿಯ ಕೂದಲನ್ನು ಕತ್ತರಿಸಲು ತಿಂಗಳಿಗೊಮ್ಮೆಯಾದರೂ ಕ್ಷೌರಿಕ ಬರುವುದಿಲ್ಲವೇ, ಅವನೂ ಇವರ ಜೊತೆ ಭಾರತೀಪುರದ ಸುದ್ದಿ ಮಾತಾಡದೆ ಹೊರಟು ಹೋಗುವನೇ ಎಂದು ಜಗನ್ನಾಥ ಆಶ್ಚರ್ಯಪಟ್ಟ. ತನ್ನ ಕ್ರಿಯೆಯ ಬಗ್ಗೆ ಶ್ರೀಪತಿರಾಯರು ಪುರಾಣಿಕರಿಗೆ ವಿವರಿಸುತ್ತಿರುವುದು ಅಸಂಗತವೆನ್ನಿಸಿತು. ರಾಯರು ತನ್ನ ಮಾತುಗಳಲ್ಲೆ ವಿವರಿಸುತ್ತಿದ್ದುದನ್ನು ಕೇಳಿದಾಗಲಂತೂ ತುಂಬ ನಾಚಿಕೆಯಾಯಿತು; ಪುರಾಣಿಕರ ಕಣ್ಣಲ್ಲಿ ತಾನೊಬ್ಬ ಮೂರ್ಖನಾಗಿ ಕಾಣಿಸುತ್ತಿರಬಹುದೆನ್ನಿಸಿತು. ಆದರೆ ಪುರಾಣಿಕರು ಗಂಭೀರವಾಗಿ ರಾಯರು ಹೇಳಿದ್ದನ್ನೆಲ್ಲ ಕೇಳಿಸಿಕೊಂಡು ಹೇಳಿದರು:

‘I wish you good luck Mr. Jagannath. I was also a rebel once, you see’ ಎಂದು ತುಸು ಸುಮ್ಮನಿದ್ದು ನಿಟ್ಟುಸಿರೆಳೆದು ಹೇಳಿದರು :

‘I am sorry to say so, but I think it is utterly futile in India. We live in the womb of God. Perhaps you can save yourself, and a few others who are like you. But collective action is impossible. Therefore I say — Westernise yourself. Stay sane. But don’t attempt to change this country. She is amorphous’

ಪುರಾಣಿಕರು ಲೆಕ್ಚರ್ ಕೊಡುವ ಧಾಟಿಯಲ್ಲಿ ಮಾತಾಡಿದರು. ತಾನು ಉಪಯೋಗಿಸುತ್ತಿದ್ದ ಮಾತಾದ ‘Womb of God’ ನ್ನು ಅವರ ಬಾಯಲ್ಲಿ ಕೇಳಿ ಜಗನ್ನಾಥನಿಗೆ ಹೆದರಿಕೆಯಾಯಿಗೆ. ‘ಹೋಗೋಣ ರಾಯರೆ’ ಎಂದ.

‘My young friend, you must excuse my pessimism, I admire your impatience; it is healthy. I also took an interest once in this town. Then I did some research on Bhootha Raya, who, according to me, is the God of passion and psychic energy.

Unlike Manjunatha who represents the intlectual and religious aspect of Indian thinking. Which is hepocritical — I needn't and that. I wrote down all the fascinating songs and tales about Bhootharaya which I collected from the peasants. I was very young man then and very impatient, like Mr. Jagannath now. In those days of bomb throwing, Bhootharaya fascinated me and I wondered why and how he came to be, to be...'

'Subjugated' ಜಗನ್ನಾಥ ಸೇರಿಸಿದ.

'Yes, subjugated to the Nirguna Brahman, the God of the hypocritic Indian liberal. The material is still with me. I shall search for it and give it to you. You can make use of it if you like.'

'ಹೋಗೋಣಲ್ಲವೆ ?' ಎಂದು ಜಗನ್ನಾಥ ಹೆಜ್ಜೆಯಿಟ್ಟ. ಯಾವ ಅವಸರವಾಗಲೀ ಉದ್ವಿಗ್ನತೆಯಾಗಲೀ ಇಲ್ಲದೆ ರಾಯರು ನಿಂತೇ ಇದ್ದರು. ಪುರಾಣಿಕರ ಹೊಳೆಯುವ ಕಪ್ಪು ಶೂಗಳು, ನುಣ್ಣನೆ ಕ್ಷೌರ ಮಾಡಿದ ಗಲ್ಲ, ಕೈಗಳನ್ನು ಹಿಂದಕ್ಕೆ ಕಟ್ಟಿ ತುಸು ಬಾಗಿ ನಿಂತ ಗತ್ತು – ಈ ಅಚ್ಚುಕಟ್ಟಿನ ಮೂಲಕ ವ್ಯಕ್ತವಾದ ಆತ್ಮ ನಂಬಿಕೆ ಕಂಡು ಜಗನ್ನಾಥ ಬೆರಗಾದ. ಅವರ ಪ್ಯಾಂಟುಗಳು ಸವೆಯುತ್ತಿವೆ. ಅವರ ಇಂಗ್ಲಿಷ್‌ನಲ್ಲಿ ಇನ್ನೂ ಕನ್ನಡದ ಛಾಯೆಯಿದೆ, ಅವರ ಆಪ್ತನಾದ ಅವಧಾನಿಗೆ ಭೂತಚೇಷ್ಟೆಗಳಲ್ಲಿ ನಂಬಿಕೆಯಿಂದೆ  – ಇತ್ಯಾದಿಗಳನ್ನು ನೆನೆಯುತ್ತ ಜಗನ್ನಾಥ ಅವರನ್ನು ಹಾಸ್ಯದಲ್ಲಿ ಮರುಕದಲ್ಲಿ ನೋಡಲು ಪ್ರಯತ್ನಿಸಿದ. ಆದರೆ ಪುರಾಣಿಕರ ಸೀರಿಯಸ್ಸಾದ ಕಣ್ಣುಗಳಲ್ಲಿ ತಿಳುವಳಿಕೆಯಿತ್ತು, ಐರನಿಯಿತ್ತು. ದುರಂತ ಪ್ರಜ್ಞೆಯಿತ್ತು. ಅಲ್ಲವೆ ? ಭಾರತೀಪುರದಲ್ಲಿದ್ದೂ ಶತಮಾನಗಳನ್ನು ಪುರಾಣಿಕರಂತೆ ಜಿಗಿಯಬಹುದಲ್ಲವೇ ? – ಎನ್ನಿಸಿತು. ಹೀಗೆ ಜಿಗಿದದ್ದು ಸುಳ್ಳೆಂದು ಪುರಾಣಿಕರಿಗೆ ಯಾವ ಮೂಲಕ ಯಾವತ್ತು ತಿಳಿದೀತೆಂದು ಜಗನ್ನಾಥ ತಬ್ಬಿಬ್ಬಾಗಿ ಯೋಚಿಸಿದ. ಪ್ರಾಯಶಃ ಪಾಪರ್ ಎದ್ದಾಗ.

ಜಗನ್ನಾಥನಿಗೆ ಈ ತನಕ ಹೊಳೆಯದಿದ್ದ ಇನ್ನೊಂದು ಪ್ರಶ್ನೆಯೆದ್ದಿತು. ಇಷ್ಟು ಹೊತ್ತು ಅವರ ಜೊತೆಗಿದ್ದರೂ, ಎಷ್ಟೊಂದು ಮಾತುಗಳಲ್ಲಿ ಅವರು ತನ್ನನ್ನು ಗಂಭೀರವಾದ ಚರ್ಚೆಗೆ ಆಹ್ವಾನಿಸಿದರೂ, 'ಪುರಾಣಿಕರೇ ನೀವೊಂದು ಭ್ರಾಮಕ ಜಗತ್ತನ್ನು ಸೃಷ್ಟಿಸಿಕೊಂಡು ಅದರಲ್ಲಿ ಬದುಕುತ್ತಿದ್ದೀರಿ' ಎಂದು ತಾನೇಕೆ ಹೇಳಲಿಲ್ಲ ? ಹಾಗಾದರೆ ತನಗೆ ತಿಳಿಯದಂತೆಯೇ ಪುರಾಣಿಕರನ್ನು ತಾನು ಮಗುವನ್ನು ಸಹಿಸಿಕೊಳ್ಳುವಂತೆ ಸಹಿಸಿದೆನೆ ? ರಾಯರು ಕೂಡ ಪುರಾಣಿಕರ ಜೊತೆ ಈ ರೀತಿಯ ಕರುಣೆಯ ಸಂಬಂಧವನ್ನೆ ಇಟ್ಟುಕೊಂಡಿದ್ದಾರೆಯೆ ? ಬೇರವರಲ್ಲಿ ತಾನು ಇಂತಹ ಭಾವನೆಯನ್ನು ಉಂಟು ಮಾಡುತ್ತೇನೆಂದು ಪುರಾಣಿಕರಿಗೆ ತಿಳಿದೇ ಇಲ್ಲವೆ ? ಇನ್ನೊಮ್ಮೆ ಬಂದು ಇವರನ್ನು ಆಳವಾಗಿ ಕೆದಕಬೇಕೆನ್ನಿಸಿತು. ನನ್ನ ಕ್ರಿಯೆ ಈ ಮನುಷ್ಯನನ್ನು ಮುಟ್ಟದಲ್ಲ ಎಂದು ವ್ಯಥೆಯಾಯಿತು. ಈ ಪರೀಕ್ಷಿತ ರಾಜನನ್ನು ಕಚ್ಚು ಕ್ರಿಮಿ ಕೋಟೆಯೊಳಗೆ ಬಂದೀತೆ ? ಹೇಗೆ ?

ಎಲ್ಲ ಯೋಚನೆಗೂ ಮೀರಿದ ವಿಚಿತ್ರವಾದ ಅಸೌಖ್ಯದ ಭಾವನೆಯಿಂದಾಗಿ ಜಗನ್ನಾಥ ಶ್ರೀಪತಿರಾಯರಿಗೆ 'ಹೋಗೋಣವೆ?" ಎಂದು ಮತ್ತೆ ಕೇಳಿದ. 'Sorry if I have bored you. It is the silence of the place whihc makes me unpleasent to meet, you see,' ಎಂದು ಪುರಾಣಿಕರು ಕೈ ನೀಡಿದರು. ಪ್ರೀತಿಯಿಂದ ತನ್ನನ್ನವರು ನೋಡಿದರು. ಜಗನ್ನಾಥನಿಗೆ ತನ್ನ ಬಗ್ಗೆ ನಾಚಿಕೆಯಾಯಿತು. ಪುರಾಣಿಕರ ಸಪುರಾದ ಕೈಯನ್ನೊತ್ತಿ ಕುಲುಕಿದ. ರಾಯರು ಹೇಳಿದರು :

'ನಿಮ್ಮ ಹೆಂಡತಿಯನ್ನು ನೋಡಬೇಕಿತ್ತು.'

'Oh yes', ಥಟ್ಟನೆ ಎಚ್ಚೆತ್ತವರಂತೆ ಪುರಾಣಿಕರು ಹೇಳಿದರು. 'You must see her. You have a very soothing effect on her.' ಜಗನ್ನಾಥನ ಕಡೆ ತಿರುಗಿದರು. 'Sorry she can't come up. If you don't mind the trouble please come down with us.' 'Not at all' ಎಂದು ಜಗನ್ನಾಥ ಅವರಿಬ್ಬರ ಜೊತೆ ಹೊರಟ.

ಜಗನ್ನಾಥನಿಗೆ ಹಜಾರ ದಾಟಿ ಒಳಗೆ ಹೋಗುತ್ತಿದ್ದಂತೆ ಬೇರೆ ಲೋಕಕ್ಕೇ ಬಂದಂತೆನ್ನಿಸಿತು. ಈ ಮನೆಯಲ್ಲೂ ತಲೆ ತಗ್ಗಿಸಿ ನಡೆಯಬೇಕಾದ ಬಾಗಿಲುಗಳು, ಕತ್ತಲೆಯ ಕೋಣೆಗಳು, ನಾಗಂದಿಗೆಗಳು, ಹೊಸಿಲಿನ ಮೇಲೆ ಹಿಟ್ಟಿನ ರಂಗೋಲೆ, ಕನ್ನಡಿಯಲ್ಲಿ ಚಿತ್ರಿಸಿದ ಕೃಷ್ಣರಾಧೆಯರು, ಒಣಗಿದ ತೋರಣ – ಇರುತ್ತವೆಂದು ಜಗನ್ನಾಥ ಊಹಿಸಿರಲಿಲ್ಲ. 'Sorry you have to walk carefully. This is an ancestral part of the house you see My eccentricity made me build the other parts of the house.' ಎಂದು ಪುರಾಣಿಕರು ಜಗನ್ನಾಥನನ್ನು ಅನಗತ್ಯವಾದ ಉಪಚಾರದಿಂದ ಕೈಹಿಡಿದು ನಡೆಸಿದರು. ಕೋಣೆಯೊಂದನ್ನು ಹೊಕ್ಕು ಮೃದುವಾಗಿ 'ಸಾವಿತ್ರಿ' ಎಂದು ಕರೆದು.

ಬಿಳುಚಿದ ಮುಖದ ಸಾವಿತ್ರಿ ಗಂಡನ ಧ್ವನಿ ಕೇಳಿ ಏಳಲು ಪ್ರಯತ್ನಿಸಿದಳು. 'Please don't bother. ಮಲಗಿರು. Sripaty has come to see you' ಎಂದು ಪುರಾಣಿಕರು ತುಂಬ ಆತಂಕದಿಂದ ಪ್ರೀತಿಯಿಂದ ಹೇಳಿದರು. ಸಾವಿತ್ರಿಯ ಮುಖ ರಾಯರನ್ನು ನೋಡಿ ಅರಳಿತು. ಅವಳ ಸೊರಗಿದ ಮುಖ ಇನ್ನೂ ಹುಡುಗಿಯೊಬ್ಬಳದು ಎನ್ನಿಸುವಂತಿತ್ತು. ರಾಯರು ಹತ್ತಿರ ಹೋಗಿ ನಿಂತು, 'ಜಗನ್ನಾಥ – ಯಾರೂಂತ ಗೊತ್ತಾಯ್ತ?' ಎಂದು ಕೇಳಿದರು. ಸಾವಿತ್ರಿ 'ಆರೋಗ್ಯವ? ಇಂಗ್ಲೆಂಡಿಂದ ಯಾವಾಗ ಬಂದಿರಿ?' ಎಂದು ತುಂಬ ಸೌಜನ್ಯದಿಂದ ಪ್ರಶ್ನಿಸಿದರು. ರಾಯರ ಕಡೆ ಮತ್ತೆ ತಿರುಗಿ 'ಪಾಪ, ಜೋಯಿಸರ ಸೊಸೆ ತೀರಿಹೋದಳಂತೆ. ತುಂಬ ಲಕ್ಷಣವಾದ ಹುಡುಗೀಂತ ಕೇಳಿದ್ದೆ' ಎಂದರು. 'ನಿಂತೇ ಇದ್ದೀರಲ್ಲ. ಕೂತುಕೊಳ್ಳಿ' ಎಂದು ತನ್ನನ್ನಾದರೂ ಎಬ್ಬಿಸಿ ಕೂರಿಸಿ ಎಂದು ಕೇಳುವಂತೆ ಗಂಡನನ್ನು ನೋಡಿದರು. 'You sleep, Don't bother about us' ಪುರಾಣಿಕರು ಹೆಂಡತಿಯ ಹಣೆಯ ಮೇಲೆ ಕೈಯಾಡಿಸಿದರು.

ಜಗನ್ನಾಥನಿಗೆ ಈ ಗಂಡ ಹೆಂಡಿರ ಅನ್ಯೋನ್ಯತೆಗಿಂತಲೂ ಹೆಚ್ಚಿನ ಆಶ್ಚರ್ಯ ಹುಟ್ಟಿಸಿದ ಸಂಗತಿಯೆಂದರೆ ಸಾವಿತ್ರಿ ಮಲಗಿದ್ದ

ರೂಮಿನಲ್ಲಿದ್ದ ಮಂಜುನಾಥನ ಫೋಟೋ. ಈ ಫೋಟೋಗೆ ಗುಲಾಬಿ ಹೂಗಳನ್ನು ಮುಡಿಸಿತ್ತು. ಅವರು ಮಲಗಿದ್ದ ಹಾಸಿಗೆಯ ಪಕ್ಕದಲ್ಲಿ ಉಡುಪಿ ಶ್ರೀಕೃಷ್ಣ ಪಂಚಾಂಗವಿತ್ತು. 'ಇನ್ನೇನು ರಥೋತ್ಸವ ಬಂದೇ ಬಿಟ್ಟಿತು' ಎಂದು ಸಾವಿತ್ರ ರಾಯರ ಕಡೆ ನೋಡಿದರು. 'ಹೌದು' ಎಂದರು ರಾಯರು.

ಆಕೆಗೆ ಸುಸ್ತಾಗದಿರಲೆಂದು ಮೂವರೂ ಹೊರಗೆ ಬಂದರು. ಹಜಾರದಲ್ಲಿ ನಿಂತು ಪುರಾಣಿಕರು ರಾಯರ ಕೈಯನ್ನು ಕುಲುಕಿದರು. Thanks for cheering up my wife' ಎಂದು ಜಗನ್ನಾಥನ ಕಡೆ ನೋಡಿ, 'I admire you, but I am also sorry for you' ಎಂದು ವ್ಯಸನದಿಂದ, ಪ್ರೀತಿಯಿಂದ ಅವನ ಕೈಕುಲುಕಿದರು. 'Come again when you want to relax' ಎಂದರು. ಜಗನ್ನಾಥ ಅವಸರಪಡುತ್ತ ರಾಯರ ಜೊತೆ ಹೊರಗೆ ಬಂದ. ಗೇಟಿನಲ್ಲಿ ನಿಂತಿದ್ದ ಘೂರ್ಕ ಸೆಲ್ಯೂಟ್ ಮಾಡಿ ಬೀಗ ಹಾಕಿಕೊಂಡ.

��!* ��#�##p�#�/u#ದೆ ಹೇಳಿ.'

'ಭಯದ ಪ್ರಶ್ನೆಯಲ್ಲ ಜಗನ್ನಾಥ. ಜನ ನಂಬಿ ಬದುಕಿದಾರೆ. ಅವರ ನಂಬಿಕೇನ್ನ ನಾಶಮಾಡಕ್ಕೆ ನಮಗೇನು ಅಧಿಕಾರ ಅಂತ. ದೇವರಲ್ಲಿರೊ ನಂಬಿಕೆ ಕಳಕೊಂಡು ಈ ಮಂತ್ರಿ ಮಂಡಲಾನ್ನ ನಂಬಿ ಬದುಕಿ ಅಂತ ಹೇಳಕ್ಕಾಗತ್ತ?'

'ನೀವು ಸೋತಿದೀರಿ. ಅದಕ್ಕೆ ಹೀಗೆ ಲಿಬರಲ್‌ನಂತೆ ಮಾತಾಡ್ತ ಇದೀರಿ. ಮಂಜುನಾಥನ ಮಹಿಮೇನ್ನ ನಾಶಮಾಡದ ಹೊರ್ತು ಈ ಊರು creative ಆಗಲ್ಲ. ಹೊಲೆರಿಗೆ ಮಾತ್ರ ಅದು ಸಾಧ್ಯ. ನೋಡಿ ನೀವೇ ಎಷ್ಟು ಭಯಪಡ್ತ ಇದೀರಿ.'

ಜಗನ್ನಾಥನಿಗೆ ಇನ್ನೂ ಇನ್ನೂ ಕ್ರೂರವಾಗಿ ಮಾತಾಡಬೇಕೆನ್ನಿಸಿತು. ರಾಯರು ಪಡುತ್ತಿದ್ದ ದಿಗಿಲಿನಲ್ಲಿಯೆ ತನ್ನ ಕ್ರಿಯೆ ಸಫಲವಾಗಬಹುದಾದ ಸಾಧ್ಯತೆ ಕಂಡಿದ್ದರಿಂದ ಅವನು ಉತ್ತೇಜಿತನಾಗಿ ತನ್ನ ಯೋಜನೆಗಳನ್ನೆಲ್ಲ ರೋಷದಿಂದ ಹೇಳಿಕೊಂಡ. ರಾಯರು ಸುಸ್ತಾದ ಧ್ವನಿಯಲ್ಲಿ ಮಾತಾಡಿದರು :

'ಮನಸ್ಸಲ್ಲಿ ದ್ವೇಷವಿರಕೂಡದು, ಪರಿಶುದ್ಧವಾಗಿರಬೇಕು ಅಂತ ಗಾಂಧೀಜಿ ಹೇಳ್ತಿದ್ದರು. ಕ್ರಾಂತಿ ಮಾಡಲು ಹೊರಟಾಗ ಯಾವ ಸ್ವಾರ್ಥ ಚಿಂತನೆಯೂ ಇರಕೂಡದು.'

ರಾಯರಿಗೆ ತನಗಾದ ಭಯವನ್ನು ಎದುರಿಸುವುದು ಕಷ್ಟವಾಗಿದೆಯೆಂದು ಜಗನ್ನಾಥನಿಗೆ ಅನ್ನಿಸಿತು. ಪಶ್ಚಾತ್ತಾಪದಿಂದ ಹೇಳಿದ :

'ನಮಗೆ ಐತಿಹಾಸಿಕ ಪ್ರಜ್ಞೆಯಿಲ್ಲ ರಾಯರೆ. ನೀವು ಸುಸ್ತಾದವರಂತೆ ಮಾತಾಡ್ತ ಇದೀರಿ. ಆದರೆ ನೀವು ಹಿಂದೆ ಜವಳಿ

ಅಂಗಡಿಗೆ ಬೆಂಕಿ ಹಾಕಿ ತಾಲ್ಲೂ ಕಛೇರಿ ಎದುರು ಮುಷ್ಕರ ಮಾಡಿದ್ರಲ್ಲ – ಅದರಿಂದಾಗಿ ನನಗಿವತ್ತು ಈ ಕೆಲಸ ಮಾಡಬೇಕಂತ ಅನ್ನಿಸಿದೆ. ನನ್ನನ್ನು ಸೃಷ್ಟಿಸೋಕೆ ನೀವು ಕಾರಣರು. ನೀವು ಈಗ ಸರಿದು ನಿಂತ ಹಾಗೆ ನಾನೂ ನಾಳೆ ಹೆದರಬಹುದು. ಸರಿದುನಿಲ್ಲಬಹುದು. ಆದರೆ ಚರಿತ್ರೆ ನಮ್ಮನ್ನೆಲ್ಲ ದುಡಿಸಿಕೊಳ್ಳುತ್ತೆ, ನಿರ್ದಯವಾಗಿ ದುಡಿಸಿಕೊಳ್ಳುತ್ತೆ.'

ರಾಯರು ಎಲೆಗೆ ಸುಣ್ಣ ಹಚ್ಚುತ್ತ ಚೇತರಿಸಿಕೊಂಡು ಹೇಳಿದರು. ಉಡಾಫೆ ಮಾತಲ್ಲಿ ಅವರು ಸಣ್ಣಗಾಗುತ್ತ ತಾನೂ ಸಣ್ಣಗಾಗುತ್ತಿದ್ದೇನೆ ಎನ್ನಿಸಿತು ಜಗನ್ನಾಥನಿಗೆ :

'ಈ ಹೊಲೇರಿಗೆ ಬೇಕಾಗಿರೋದು ಹೆಂಡ. ದೇವರ ದರ್ಶನವಲ್ಲ. ನಿನ್ನ ಗುಲಾಮರು ಅವರು. ಆದ್ರಿಂದ ನೀನು ಹೇಳಿದ ಹಾಗೆ ಕೇಳಿಯಾರು. ನೀನು ಸುಮ್ಮನೇ ಅವರನ್ನ ಸತಾಯಿಸ್ತ ಇದೀಯ ಅಷ್ಟೆ.'

ಜಗನ್ನಾಥ ಮಾತಾಡಲಿಲ್ಲ. ರಾಯರು ಏನೇನೋ ಮಾತಾಡಲು ಪ್ರಾರಂಭಿಸಿದ್ದು ಕಂಡು ಅವನಿಗೆ ಬೇಸರವಾಯಿತು.

'ಊರಿಗೆ ಕಳಂಕ ತರ್ತಿದಾನೆ ಅಂತ ಅಪವಾದಕ್ಕೆ ಯಾಕೆ ಗುರಿಯಾಗ್ತೀಯ ? ರಾಜಕೀಯ ತುಂಬ ಹೊಲಸಾಗಿದೆ. ನೀನು ಯಾಕೆ ನಿನ್ನ ಕೈಯನ್ನ ಕೊಳೆ ಮಾಡಿಕೋಬೇಕು ಹೇಳು. ಈ ದೇಶದಲ್ಲಿ ಏನು ಮಾಡಿಯೂ ಏನೂ ಪ್ರಯೋಜನವಿಲ್ಲ. ಅಲ್ಲದೆ ನೀನು ಬ್ರಾಹ್ಮಣನಾಗಿ ಹುಟ್ಟೋ ತಪ್ಪು ಬೇರೆ ಮಾಡಿದಿ. ಒಂದೊಂದು ಸಾರಿ ಮಿಲಿಟರಿ ಡಿಕ್ಟೇಟರ್‌ಶಿಪ್ಪಿಗೇ ಈ ಜನ ಬಗ್ಗೋದು ಅನ್ನಿಸುತ್ತೆ.'

ಜಗನ್ನಾಥ ಥಟ್ಟನೇ ಕೇಳಿದ :

'ನಾಗಮಣಿ ಸತ್ತದ್ದು ಗೊತ್ತಾಯ್ತ ?'

ರಾಯರು ಉತ್ತರ ಕೊಡುವುದರೊಳಗೇ ಎದ್ದುನಿಂತು ಕಿಟಕಿಯ ಹತ್ತಿರ ಹೋದ. ಅವರಿಗೆ ಬೆನ್ನು ಹಾಕಿ ಹೇಳಿದ :

'ಸೋಲ್ತೀನೋ ಗೆಲ್ತೀನೋ ಮುಖ್ಯವಲ್ಲ ರಾಯರೆ. ಏನಾದರೂ ಮೂಲಭೂತವಾಗಿ ಮಾಡೋದು ಸಾಧ್ಯವಾಗದೇ ಹೋದ್ರೆ ನಾನು ಆತ್ಮಹತ್ಯೆ ಮಾಡಿಕೊಳ್ಳಬೇಕಾಗುತ್ತೆ – ಅಷ್ಟೆ.'

ಆಡಿದ ಮೇಲೆ ತಾನು ನಾಟಕೀಯವಾಗಿ ವರ್ತಿಸಿದೆನೋ ಎಂದು ಜಗನ್ನಾಥನಿಗೆ ಮುಜುಗರವಾಯಿತು. ತಿರುಗಿ ಕುರ್ಚಿಯ ಮೇಲೆ ಬಂದು ಕೂತ. ರಾಯರ ಮುಖ ಗಂಭೀರವಾದ್ದು ಕಂಡು ಸಮಾಧಾನವಾಯಿತು. ತನ್ನ ತೀವ್ರತೆಯನ್ನು ಅವರು ಒಪ್ಪಿಕೊಳ್ಳುವುದರ ಮೂಲಕ ನಿಜಮಾಡಿದರೆಂದು ಕೃತಜ್ಞನಾದ. ರಾಯರು ಹೇಳಿದರು :

'ಎಷ್ಟೋ ದೇವಸ್ಥಾನಗಳಲ್ಲಿ ಹರಿಜನ ಪ್ರವೇಶವಾದ್ರೂ ಏನೂ ಪ್ರಯೋಜನ ಆಗ್ಲಿಲ್ಲಾಂತ ನಿನಗೂ ಗೊತ್ತಿದೆ. ಆದ್ರೆ ನಿನ್ನ

ಉದ್ದೇಶ ಬೇರೆ. ಅರ್ಥವಾಯ್ತು. ನನ್ನ ಭಯ ಅಂದ್ರೆ ಹೊಲೇರು ಒಳಗೆ ಹೋಗ್ತಾರೆ, ಪೇಪರಲ್ಲಿ ಸುದ್ದಿ ಬರತ್ತೆ, ಮತ್ತೆಲ್ಲ ತಣ್ಣಗಾಗುತ್ತೆ.'

ಜಗನ್ನಾಥನಿಗೆ ಮತ್ತೆ ಕಸಿವಿಸಿಯಾಯಿತು. ರಾಯರು ತನ್ನ ಅಂತರಂಗದಲ್ಲಿರುವುದನ್ನು ಕಣ್ಣುಬಿಟ್ಟು ನೋಡುತ್ತಿಲ್ಲವೆನ್ನಿಸಿತು. ಭಯಪಟ್ಟಾಗ ಅವರು ನಿಜವಾಗಿದ್ದಷ್ಟು ವಾದದಲ್ಲಿ ಅವರು ನಿಜವಾಗಿರಲಿಲ್ಲ. ಜಗನ್ನಾಥ ಸುಮ್ಮನೇ ಕೂತ. ನೀವು ಲೋಳೆಯಾಗಿದ್ದೀರಿ ರಾಯರೇ ಎಂದು ಹೇಳಬೇಕೆನ್ನಿಸಿತು. ರಾಯರು ಎದ್ದು ನಿಂತು ಹೇಳಿದರು:

'ನೈತಿಕ ಬಲಕ್ಕೂ ತಾಕತ್ತಿರಬೇಕು ಜಗನ್ನಾಥ. ನನ್ನ ಹಾಗೆ ಸೋತವನು ನೀತಿವಂತ ಕೂಡ ಆಗಿರಲಾರ.'

ಜಗನ್ನಾಥ ಅವರ ಮಾತಿನಿಂದ ಬೆಚ್ಚಿದ. ಏನೋ ಅರಳಬಹುದೆಂಬ ಭರವಸೆ ಮತ್ತೆ ಅವನಲ್ಲಿ ಮೂಡಿತು. ರಾಯರ ಜೊತೆ ಗುಡ್ಡವಿಳಿದು ರಸ್ತೆಯ ತನಕ ನಡೆದು ಹಿಂದಕ್ಕೆ ಬಂದ. ನಾಳೆ ಪೇಪರಿನಲ್ಲಿ ತನ್ನ ಕಾಗದ ಬರುವುದನ್ನು ನಿರೀಕ್ಷಿಸುತ್ತ ರಾತ್ರೆಯನ್ನು ಕಳೆದ.

ಪರೀಕ್ಷಿತ ರಾಜನನ್ನೂ ಕಚ್ಚುವ ಕ್ರಿಮಿಯಾಗಿ ಮಂಜುನಾಥ ಪ್ರವೇಶಿಸುತ್ತಿದ್ದಾನೆ; ಅವನು ಸರ್ವಾಂತರ್ಯಾಮಿ; ವರ್ತಮಾನದಲ್ಲೇ ಶತಮಾನಗಳನ್ನು ಜಿಗಿಯಬಲ್ಲವನ ಹೊಳೆಯುವ ಶೂಗಳ ಕೆಳಗಿನ ನೆಲ ಕರಗುತ್ತಿದೆ; ಪ್ರಭುವೇ ವಾಸಿ; ಅವನ ಜೊತೆ ಹೋರಾಡಬಹುದು; ಪುರಾಣಿಕನಂತೆ ಅವನು ಸುಳ್ಳಲ್ಲ; ಮೋಸ ಮಾಡಲಿಕ್ಕಾದರೂ ಈ ವಾಸ್ತವತೆ ಜೊತೆ ತೊಡಗೋದು ಹೆಚ್ಚು ಆರೋಗ್ಯ ಎಂದು ರಾಯರಿಗೆ ಜಗನ್ನಾಥ ಹೇಳಿದ. ದೇವರ ಗರ್ಭದೊಳಗಿರುವವರು ನಿಷ್ಕ್ರಿಯರಾದಂತೆ ಅದರ ಹೊರಗಿರುವೆನೆಂದು ಭ್ರಮಿಸುವ ಪುರಾಣಿಕರೂ ನಿಷ್ಕ್ರಿಯರಾಗಿದ್ದಾರೆ; ಲಿಬರಲ್ ಆಗ್ತಾ ಆಗ್ತಾ ನೀವೂ ನಿಷ್ಕ್ರಿಯರಾಗಿದ್ದೀರಿ ರಾಯರೆ ಎಂದ. ಇಡೀ ಭಾರತೀಪುರ ಬದಲಾವಣೆಯಲ್ಲಿ ಹೊರಳಿಕೊಳ್ಳದ ಹೊರ್ತು ಇಲ್ಲಿ ಬದುಕು ಸೃಷ್ಟಿಶೀಲವಾಗಲಾರದು ಎಂದು ವಾದಿಸಿದ.

'ಸರಿಯಯ್ಯ, ಏನತ್ಮಧ್ಯೆ ಮಕ್ಕಳನ್ನು ಹೆರಬೇಕು, ಬೆಳೆಸಬೇಕು, ರಾಮನವಮಿ, ಕೃಷ್ಣಾಷ್ಟಮಿ, ಗೌರೀಪೂಜೇಂತ ಸಡಗರ ಮಾಡಬೇಕು. ಅಂತೋಣಿ ಡಾಕ್ಟ್ರಿಂದ ಔಷಧಿ ತರಬೇಕು ಅಲ್ವ? ನಿನಗಿನ್ನೂ ಅಹಂಕಾರ, ಮಾಡ್ತೇನೆ ಎನ್ನೊ ಪೌರುಷದಲ್ಲಿ ನಂಬಿಕೆ. ಸರಿ. ನಿನ್ನಂಥೋರೂ ಅವಶ್ಯ.'

ಮಾತಿನ ಖುಷಿಗಾಗಿಯೇ ಮಾತಾಡುವ ರಾಯರ ಹತ್ತಿರ ಕೆಲವು ಸಾರಿ ವಾದ ಮಾಡಿ ಪ್ರಯೋಜನವಿಲ್ಲವೆನ್ನಿಸಿ ಜಗನ್ನಾಥ ಸುಮ್ಮನಾದ. ಸೀಬಿನಕೆರೆಯಲ್ಲಿ ನಡೆಯುವಾಗ ಹೇಳಿದರು.

'ಏಕ್‌ದಂ ತೀರಾ ದೊಡ್ಡ ಕ್ರಾಂತಿಗೆ ಕೈಹಾಕಿದರೆ ಕೊನೇಲಿ ಪುರಾನಿಕರ ಹಾಗೆ ಆಗಿಬಿಡಬಹುದು.'

ಚೌಕಕ್ಕೆ ಬಂದಿದ್ದರು. ಸಂದಿಯಲ್ಲಿ ಕೊಡೆ ರಿಪೇರಿಯವ, ಅಂಗಡಿಯೊಂದರ ಚಿಟ್ಟೆಯ ಮೇಲೆ. ಜಗನ್ನಾಥ ಸಣ್ಣ

ಹುಡುಗನಿದ್ದಾಗಲೂ ಅದೇ ಜಾಗದಲ್ಲಿ ಆ ಅಂಗಡಿ ಇತ್ತು. ಹರಿದ ಕೊಡೆ ಬಟ್ಟೆ ಹೊಲಿದು ತೇಪೆ ಹಾಕುವುದು, ಹೊಸ ತಂತಿ ಹಾಕಿ ಕಡ್ಡಿಗಳನ್ನು ಕಟ್ಟುವುದು, ಕುದುರೆಯನ್ನು ರಿಪೇರಿ ಮಾಡಿ ಕೊಡೆ ಕುಸಿಯದಂತೆ ಮಾಡುವುದು – ಇತ್ಯಾದಿ ಸೂಕ್ಷ್ಮಗಳನ್ನು ತಿಳಿದಿದ್ದ ಆ ಸ್ಥಳದ ಮಾಲಿಕನ ಹೆಸರು ರಂಗಪ್ಪ. ಕಪ್ಪು ಟೋಪಿ ಹಾಕಿ ಕನ್ನಡಕ ಧರಿಸಿ ಏಕಾಗ್ರನಾಗಿ ಕೂತಿರುತ್ತಿದ್ದ. ಈಗಲೂ ಒಂದು ಮಾಸಿದ ಕಪ್ಪು ಟೋಪಿ ಹಾಕಿ ಕೂತಿದ್ದಾನೆ. ಅವನು ಕೂತ ಜಾಗದಲ್ಲಿ ಕಂಬಕ್ಕೊಂದು ಕಟ್ಟಿದ ಬೋರ್ಡು. ಸೊಟ್ಟ ಅಕ್ಷರಗಳ ಆ ಬೋರ್ಡು ಮುಂಚಿನಿಂದಲೂ ಜಗನ್ನಾಥನಿಗೆ ತಮಾಷೆಯ ವಿಷಯ. ಯಾಕೆಂದರೆ ಬೋರ್ಡಿನಲ್ಲಿ ಹೀಗೆ ಬರೆದಿತ್ತು : ಕೊಡೆರಿ ಪೇರಿ ರಂಗಪ್ಪ. ಆಶ್ಚರ್ಯವೆಂದರೆ ಈಗಲೂ ಅದೇ ಬೋರ್ಡು ಹಾಗೇ ಇದೆ. ರಾಯರಿಗೆ ಬೋರ್ಡಿನ ವಿಷಯ ಹೇಳಿದ. 'ಅವನ ಮಗಳೊಬ್ಬಳು ಹೈಸ್ಕೂಲಲ್ಲಿ ಎಸ್.ಎಸ್.ಎಲ್.ಸಿ. ಪಾಸ್ ಮಾಡಿದಳು. ಯಾರೋ ಲಾರಿ ಡ್ರೈವರ್ ಜೊತೆ ಬೊಂಬಾಯಿಗೆ ಓಡಿ ಹೋದಳು. ಈಗ ಪಾಪ ರಂಗಪ್ಪ ಒಂಟಿಯಾಗಿದಾನೆ' ಎಂದರು ರಾಯರು.

ಇದ್ದಕ್ಕಿದ್ದಂತೆ ರಾಯರು ತಮ್ಮ ಯೋಚನೆಯ ತುದಿ ಮುಟ್ಟಿ ಹೇಳಿದರು :

'ಹೀಗೆ ಎಲ್ಲರೂ ಅಂಡು ತೊಳೆಯೋದರಲ್ಲೆ ಕಾಲ ಕಳೆಯೋದು ನಿಜವಾದ ಕ್ರಿಯೆಯಲ್ಲ ಅಂತ ನಾನೂ ಒಪ್ಪುತ್ತೀನಿ, ಕಾಲುವೆ ತೋಡಿಸಬೇಕು. ತಮ್ಮ ಅಂಡು ತಾವೇ ತೊಳ್ಕೊಳ್ಳೋದನ್ನ ಜನರಿಗೆ ಕಲಿಸಿಕೊಡಬೇಕು.

ಜಗನ್ನಾಥ ನಕ್ಕ. ಸೀಬಿನಕೆರೆಯಲ್ಲಿ ನಡೆದು ಬರುವಾಗ ನೆನಪಾಗಿತ್ತು: 'ಕಮಲ ಹೇಗಿದಾಳೆ?' ಅಂತ ಕೇಳಿದ. 'ಯಾರು ಸೀಬಿನಕೆರೆ ಕಮಲಾನ? ನಿನ್ನ ಜೊತೆ ಓತ್ತಿದ್ದವಳು? ಬೊಂಬಾಯಿಯಲ್ಲಿದಾಳಂತೆ' ರಾಯರು ಹೇಳಿದರು. 'ನಿಮ್ಮನೇಗೇ ಊಟಕ್ಕೆ ಬರ್ತೀನಿ-ನಡಿ. ಅಷ್ಟು ದಿನದಿಂದ ನಿಮ್ಮ ಚಿಕ್ಕಿ ಕರೀತಾನೆ ಇದಾರೆ' ಅಂದರು. 'ಅಲ್ಲ ರಾಯರೆ. ಪುರಾಣಿಕರನ್ನ ನೋಡಿ ನನಗೆಷ್ಟು ಭಯವಾಯ್ತೂಂದರೆ-ಪ್ರಾಯಶಃ ಅವರ ಹಾಗೆ ನನಗೂ ಇದ್ದುಬಿಡೋಕೆ ಸಾಧ್ಯ ಅನ್ನೋ ಕಾರಣಕ್ಕೋ ಏನೋ-ಅಂತೂ ನಮ್ಮ ವರ್ಗದವರಿಗೆಲ್ಲ ಹೀಗೆ ಶತಮಾನಗಳನ್ನ ಜಿಗಿದುಬಿಡೋದು ಸಾಧ್ಯ. ಈ ಜನಕ್ಕೆ ಮಾತ್ರ ಅದು ಸಾಧ್ಯವೇ ಅಲ್ಲ' ಎಂದು ಸಡಗರದಿಂದ ಪೇಟೆಯಲ್ಲಿ ಓಡಾಡುತ್ತಿದ್ದ ಶೂದ್ರ ಹೆಂಗಸರನ್ನ ತೋರಿಸಿದ. 'ನೀನು ಹೇಳೋದು ನಿಜ' ಎಂದರು ರಾಯರು. 'ಅದಕ್ಕೇ ಮಂಜುನಾಥನ ಜೊತೆ ಗುದ್ದಾಡೋದು ಸರಿ ಅನ್ನಿಸುತ್ತೆ' ರಾಯರನ್ನು ಒಪ್ಪಿಸಲು ಜಗನ್ನಾಥ ತೀವ್ರವಾದ ಧ್ವನಿಯಲ್ಲಿ ವಾದಿಸಿದ. 'ಗಾಳಿ ಜೊತೆ ಗುದ್ದಾಡಿದ ಹಾಗೇ' ಎಂದು ರಾಯರು ಕಣ್ಣು ಮಿಟುಕಿಸಿದರು. ತನ್ನೊಳಗೆ ಅನ್ನಿಸುವುದೆಲ್ಲ ರಾಯರಿಗೆ ತಿಳಿಯುವುದು ಸಾಧ್ಯವಿಲ್ಲವೆನ್ನಿಸಿ ಜಗನ್ನಾಥ ಪೆಚ್ಚಾದ. ಇವರ ಜೊತೆ ವಾದಿಸುವುದಕ್ಕಿಂತ ಹೊಲೆಯರ ಜೊತೆ ಹೆಚ್ಚು ಕಾಲ ಕಳೆಯುವುದೇ ಸರಿಯೆನ್ನಿಸಿತು.

ಕಮಲಳನ್ನು ಮತ್ತೆ ನೆನೆದ. ಪ್ರಾಯಶಃ ಈಗ ದಪ್ಪವಾಗಿದ್ದಾಳೆ. ಇದ್ದಕ್ಕಿದ್ದಂತೆ ಸುಬ್ರಾಯ ಅಡಿಗರ ನೆನಪಾಯಿತು – ನೋಡಿ ಬಹಳ ದಿನವಾಯಿತು. ನೋಡಬೇಕು. ಸುದ್ದಿ ಕೇಳಿ ಅವರು ಖಂಡಿತ ಬರುತ್ತಾರೆ. ಬಾಲ್ಯದ ಊರು, ಬಾಲ್ಯದಿಂದ ತಿಳಿದ ಜನ, ಜೊತೆಗೆ ಬೆಳೆದ ದೇವರು, ನನ್ನ ಪಾಶ್ಚಾತ್ಯ ವಿಚಾರದಿಂದ ಪ್ರಭಾವಿತವಾದ ಪ್ರಜ್ಞೆ. ನಾಗಮಣಿ, ಕಾವೇರಿ, ಮಾರ್ಗರೆಟ್, ಹೊಲೆಯರ ಹುಡುಗರು, ಈ ರಾಯರು, ಇನ್ನೊಬ್ಬರ ಕಣ್ಣಿನ ಕನ್ನಡಿಯಲ್ಲಿ ಉಬ್ಬುವ ನನ್ನ ದೌರ್ಬಲ್ಯ, ಇಲ್ಲಿ ಊರವ, ಕುಡಿಯೊಡೆಯುವ ಹೂವಾಗುವ ಹಂಬಲ-ಎಲ್ಲ ಮತ್ತೆ ಸಿಕ್ಕು ಸಿಕ್ಕಾಗಿ ಕಾಡಿತು. ಲೋಳೆ ಲೋಳೆಯಾಗಿ ಬಿಡುತ್ತದೆ. ಪುನಃ

ಪುನಃ ಕ್ರಿಯೆಯಲ್ಲಿ ಸರಳವಾಗಬೇಕು; ಗಟ್ಟಿಯಾಗಬೇಕು; ಬೇರೆ ಮಾರ್ಗವಿಲ್. 'Margaret I am desperate, ನಾಗಮಣಿ ಸತ್ತಳಲ್ಲ. ಆದ್ದರಿಂದ ಏನು ಮಾಡಿದರೂ ಸರಿ. ಮಾಡದೇ ಕೂತಿರೋದು ಸಾಧ್ಯವೇ ಇಲ್ಲ. ಹೊಲೆಯರು ನನ್ನನ್ನು ಮುಟ್ಟಲು ತಯಾರಾಗುವರೆ-ಅದೇ ಬಹಳ ಮುಖ್ಯ ಪ್ರಶ್ನೆ.

ಮನೆಗೆ ಬರುವಷ್ಟರಲ್ಲೇ ಮೈಗೆ ಚೆನ್ನಾಗಿ ವ್ಯಾಯಾಮವಾಗಿ ಹಸಿವಾಗಿತ್ತು. ಒಂದು ಘಂಟೆಗೆ ಊಟ. ಇನ್ನೂ ಹನ್ನೆರಡು. ಚಿಕ್ಕಿ ನಡುಮನೆಯಲ್ಲಿ ಕಾದಿದ್ದರು. ಅವರ ಕಣ್ಣುಗಳು ಅತ್ತು ಬಾತಿದ್ದವು. ರಾಯರು ಜೊತೆಗಿದ್ದುದರಿಂದ ಧೈರ್ಯ ಮಾಡಿ 'ಏನು ವಿಷಯ ಚಿಕ್ಕಿ ?' ಎಂದ.

ಚಿಕ್ಕಿ ಬಹಳ ಕಷ್ಟದಿಂದ ಉತ್ತರಿಸಿದರು,

'ಒಬ್ಬರೂ ಇವತ್ತು ಊಟಕ್ಕೆ ಬರೋ ಹಾಗೆ ಕಾಣಲಿಲ್ಲ'.

ತನ್ನ ಮನೆಯಲ್ಲಿ ಪ್ರಾಯಶಃ ಯಾವತ್ತೂ ಹೀಗಾದ್ದಿಲ್ಲ. ಇಪ್ಪತ್ತು ಜನರಾದರೂ ನಿತ್ಯ ಊಟಕ್ಕಿರಲೇಬೇಕು. ಆದರೆ ಇವತ್ತು ಸುದ್ದಿ ತಿಳಿದ ಮೇಲೆ ಒಂದು ನರಹುಳವೂ ಮನೆಯ ಕಡೆ ಸುಳಿದಿಲ್ಲ. ಜಗನ್ನಾಥನಿಗೆ ಏನು ಹೇಳಬೇಕೆಂದು ತಿಳಿಯಲಿಲ್ಲ. ದಿಗಿಲಾಯಿತು. ಸಂಕಟವಾಯಿತು.

'ರಾಯರು ಇವತ್ತು ಊಟಕ್ಕಿರುತ್ತಾರೆ' ಎಂದ. ಚಿಕ್ಕಿಯ ಮುಖ ಅರಳಿದ್ದು ನೋಡಿ ಸಂತೋಷವಾಯಿತು. ಚಿಕ್ಕಿಗೆ ಧೈರ್ಯ ಹೇಳಿ ಎನ್ನುವಂತೆ ಕಣ್ಣಲ್ಲೇ ಸೂಚಿಸಿ ಬೇರೇನೋ ಕೆಲಸವಿದ್ದಂತೆ ನಟಿಸಿ ಅಂಗಳಕ್ಕೆ ಬಂದ.

ಖುಷಿಯಾಯಿತು : ತಲೆಯ ಮೇಲೆ ಒಣಗಿದ ಬಾಳೆಲೆ ಕಟ್ಟನ್ನು ಹೊತ್ತು, ಎರಡು ಕೈಗಳಿಗೂ ದೊನ್ನೆಗಳ ಕಟ್ಟನ್ನು ನೇತುಹಾಕಿಕೊಂಡು ಬರಿ ಮೈಯಲ್ಲಿ ಸುಬ್ರಾಯ ಅಡಿಗರು ನಿಂತಿದ್ದರು. ಅವರ ಮುಖ ಬೆವತಿತ್ತು. ಬೆನ್ನಿನ ಮೇಲೆ ಕತ್ತಿನ ಮೇಲೆ ಅವರು ಮಂಜುನಾಥನ ವಿಭೂತಿ ಎಂದು ನಗೆಯಾಡುತ್ತಿದ್ದ ಸಿಬ್ಬ ಹಿಂದಿನ ಸಾರಿ ನೊಡಿದ್ದಕ್ಕಿಂತ ಹೆಚ್ಚು ಹರಡಿತ್ತು. ವಯಸ್ಸಾದರೂ ಗಟ್ಟಿಮುಟ್ಟಾದ ಹಲ್ಲುಗಳು. ಸಂತೋಷದಿಂದ ಜಗನ್ನಾಥ ಮಾತಾಡದೆ ನಿಂತುಬಿಟ್ಟ.

'ಇವುಗಳನ್ನು ದೇವಸ್ಥಾನಕ್ಕೆ ಕೊಟ್ಟು ಬರ್ತೀನಿ ಜಗಣ್ಣ. ಊಟಕ್ಕೆ ಬರ್ತೀನಿಂತ ಚಿಕ್ಕೀಗೆ ಹೇಳು. ಇನ್ನ ಹತ್ರಾನೂ ಬಹಳ ಮಾತಾಡೋದಿದೆ.'

ಅಡಿಗರ ಕಣ್ಣುಗಳು ಪ್ರಸನ್ನವಾಗಿದ್ದುವು. ಚೌಕದ ಮುಲಕ ಬಂದಿರುವ ಅವರಿಗೆ ಸುದ್ದಿ ಖಂಡಿತ ತಿಳಿದಿರಬೇಕು. ಆದರೂ ಅವರಿಗೆ ಭಯವಾಗಿರುವಂತೆ ಕಾಣುವುದಿಲ್ಲ. ಜಗನ್ನಾಥ 'ಬನ್ನಿ, ಅಗತ್ಯ ಮಾತಾಡೋಣ' ಎಂದು ಒಳಗೆ ಹೋಗಿ ಚಿಕ್ಕಿಗೆ ಹೇಳಿದ. ರಾಯರ ಜೊತೆ ಆಪ್ತಾಲೋಚನೆಯಲ್ಲಿದ್ದ ಚಿಕ್ಕಿ ಅಡಿಗರು ಊಟಕ್ಕೆ ಬರುವರೆಂದು ನಂಬಲಿಲ್ಲ. 'ಅವರಿಗೆ ಗೊತ್ತು. ಆದರೂ ಬರ್ತೇನೆ ಅಂದ್ರು' ಎಂದು ಜಗನ್ನಾಥ ಹೇಳಿದ. ಚಿಕ್ಕಿ ಲಗುಬಗೆಯಿಂದ ಅಡಿಗೆ ಮನೆಗೆ ಹೋದರು. ಜಗನ್ನಾಥ

ರಾಯರ ಜೊತೆ ಮಹಡಿ ಹತ್ತಿದ. ನಿಮಗೊಂದು ಕಥೆ ಹೇಳ್ತೀನೆ ಕೇಳಿ ಎಂದು ಕಾಫಿ ಕುಡಿಯುತ್ತ ಶುರು ಮಾಡಿದ. ಚಿಕ್ಕಿಯ ಕಣ್ಣೆದುರು ಥಟ್ಟನೇ ಅವನಿಗೆ ತಾನು ತಪ್ಪಿತಸ್ಥನೆಂಬ ಭಾವನೆ ಹುಟ್ಟಿಬಿಟ್ಟಿದ್ದರಿಂದ ಮಾತಾಡಿ ಎಲ್ಲವನ್ನೂ ಮರೆಯಬೇಕೆನ್ನಿಸಿತ್ತು.

ಕಾಫಿ ಮುಗಿಸಿ ರಾಯರು ಹೊಗೆಸೊಪ್ಪಿಗೆ ಸುಣ್ಣ ತಿಕ್ಕುತ್ತ ಕೂತರು. ಜಗನ್ನಾಥ ತನ್ನ ಬಾಲ್ಯದ ಕಥೆಯನ್ನು ಪ್ರಾರಂಭಿಸಿದ.

'ನನಗೂ ಅವಧೂತತನಕ್ಕೂ ನಡುವೆ ಐದು ರೂಪಾಯಿಯ ಒಂದು ಕಂದಕವಿದೆ ರಾಯರೆ. ಗೊತ್ತ ನಿಮಗೆ – ಯಾವತ್ತು ಸುಬ್ರಾಯ ಅಡಿಗರಿಗೆ ನಾನು ಅವರಿಂದ ಕದ್ದ ಐದು ರೂಪಾಯನ್ನ ಹಿಂದಕ್ಕೆ ಕೊಡ್ತೀನೋ, ಅವತ್ತೇ ನಾನು ಅನುಭಾವಿಯಾಗಿ ಮಂಜುನಾಥನ ಎದುರು ಕೈ ತಟ್ಟುತ್ತ ಕುಣೀತೇನೆಂತ ಕಾಣುತ್ತೆ.'

ಜಗನ್ನಾಥ ಮೋಜಿನಿಂದ ಮಾತಾಡಿದ. ಆದರೂ ನೆನಪು ಅವನನ್ನು ಕಲಕಿತ್ತು. ಇಂತಹ ಮನಃಸೂಕ್ಷ್ಮಗಳಲ್ಲಿ ಅಷ್ಟು ಆಸಕ್ತರಲ್ಲದ ರಾಯರೂ ಜಗನ್ನಾಥ ತೀವ್ರವಾಗಿ ಮಾತಾಡುತ್ತಿದ್ದುದರಿಂದ ಸಹಾನುಭೂತಿಯಿಂದ ಕೇಳಿಸಿಕೊಂಡರು.

ಜಗನ್ನಾಥ ಹೈಸ್ಕೂಲು ಓದುತ್ತಿದ್ದಾಗ ಸುಬ್ರಾಯ ಅಡಿಗರು ಅವನಿಗೆ ಬಹು ಪ್ರಿಯರಾದ ವ್ಯಕ್ತಿ. ಮದುವೆಯಾದ ಮೇಲೆ ಇದ್ದಕ್ಕಿದ್ದಂತೆ ವಿರಾಗಿಗಳಾಗಿ ಇಡೀ ಇಂಡಿಯಾ ದೇಶವನ್ನು ಸುತ್ತಾಡಿ ಬಂದ ಖಯಾಲಿ ಮನುಷ್ಯ ಅವರು. ಇಂಗ್ಲೀಷ್ ಹಿಂದಿ – ಎರಡು ಭಾಷೆಗಳನ್ನು ಮಾತಾಡಲು, ಓದಲು ಬಲ್ಲವರು. ತಾಯಿಗೆ ಬಹಳ ಬೇಕಾದವರು. ಅವರು ಮೀರಾ ಭಜನ್ ಹಾಡುವುದು; ತಾಯಿ ವೀಣೆ ನುಡಿಸುವುದು – ರೈಟರ್ ಕೃಷ್ಣಯ್ಯ ಕೇಳುತ್ತ ಕೂರುವುದು. ಹಿಮಾಲಯ ಹತ್ತಿ ಹೃಷಿಕೇಶ ಬದರಿಗಳನ್ನು ಸುತ್ತಾಡಿದ ಸಾಹಸ ಕಥೆ; ಅಲ್ಲಿನ ನಿಷ್ಠುರ ಸೌಂದರ್ಯದ ಬಗ್ಗೆ ಅವರ ಹಾವ ಭಾವಯುಕ್ತ ವರ್ಣನೆ – ಹುಡುಗನಿದ್ದಾಗ ಜಗನ್ನಾಥನನ್ನು ಮೈಮರೆಸುತ್ತಿತ್ತು. 'ಬಿಸಿಲಿದ್ದಾಗ ಆ ಪರ್ವತದ ಮೇಲೆ ನಿಂತು ನೋಡಿದರೆ ಜಗಣ್ಣ ಏನೂಂತೀಯಾ? ಸಾವಿರಾರು ಅಡಿ ಆಳದ ಪ್ರಪಾತ ಕೆಳಗೆ. ಆದರೆ ಎಲ್ಲ ಎಷ್ಟು ತಿಳಿ, ಎಷ್ಟು ಸ್ಪಷ್ಟ, ಎಷ್ಟು ನಿರ್ಮಲ ಅಂದರೆ ಇಗೋ ಒಂದು ಪಾವಲಿಯನ್ನು ನೀನು ಮೇಲಿಂದ ಹೀಗೆ ಎತ್ತಿ ಹಾಕಿದರೆ ಅದು ಕೆಳಗೆ ಬೀಳುವ ತನಕ ಫಳ ಫಳ ಹೊಳೆಯುತ್ತ ಸ್ಫುಟವಾಗಿ ಕಣ್ಣಿಗೆ ಕಾಣಿಸುತ್ತಿರುತ್ತೆ.' ವರ್ಣಿಸುವಾಗ ಅವರು ಡಬ್ಬಿಯಿಂದ ವಿರಾಮವಾಗಿ ಚಿಟಿಕೆ ನಸ್ಯ ತೆಗೆದು ಸೇವಿಸುತ್ತಿದ್ದರು. ಬೆಕ್ಕಸ ಬೆರಗಾದ ಕಣ್ಣುಗಳಿಂದ ತಲ್ಲೀನನಾದ ಜಗನ್ನಾಥನನ್ನು ನೋಡುತ್ತ ಮತ್ತೊಮ್ಮೆ ಆ ಸೌಂದರ್ಯವನ್ನು ಅನುಭವಿಸುತ್ತಿದ್ದರು.

ಅಡಿಗರು ಜಗನ್ನಾಥನಿಗೆ ಸಂಸ್ಕೃತ ಹೇಳಿಕೊಡಲು ನಿತ್ಯ ಬರುತ್ತಿದ್ದರು. ಎಂಥ ಹುಚ್ಚು ಅವರದ್ದೆಂದರೆ – ವಿಷ್ಣುಕ್ರಾಂತಿಯನ್ನು ಹುಲ್ಲಿನಿಂದ ಬೆರಳಿನಲ್ಲಿ ಬೇರ್ಪಡಿಸಿ ಹಿಡಿದು ನೀಲಮೇಘಶ್ಯಾಮನನ್ನು ನೆನೆಯುತ್ತ ಅವರು ಅತ್ತಿದ್ದನ್ನು ಜಗನ್ನಾಥ ನೋಡಿದ್ದಾನೆ. ಒಂದು ಸಾರಿ ಅವರು ಜಗನ್ನಾಥನನ್ನು ಭಾರತೀಪುರದಿಂದ ಬಹಳ ದೂರ ಕಾಡಿನಲ್ಲಿ ನಡೆಸಿಕೊಂಡು ಹೋಗಿ ಹಾಳುಬಿದ್ದ ಜೈನ ಬಸ್ತಿಯೊಂದರ ಬಳಿಯಲ್ಲಿದ್ದ ಕೊಳದ ದಂಡೆಯ ಮೇಲೆ ಕೂರಿಸಿದರು. ನಿರ್ಜನವಾದ ಪ್ರದೇಶ. ಸಂಜೆಯ ಹೊತ್ತು. ಅವತಾರಗಳ ಬಗ್ಗೆ ಮಾತಾಡುತ್ತ ಮಾತಾಡುತ್ತ ಮೈ ಮರೆತು ಕುಣಿದರು. ದನ ಕಾಯುವ ಹುಡುಗನೊಬ್ಬನ ಕೊಳಲಿನ ಧ್ವನಿ ಕೇಳಿಸಿತು. 'ಕೃಷ್ಣ ನೀ ಬೇಗನೆ ಬಾರೊ' ಎಂದು ಮಧುರವಾಗಿ ಹಾಡಲು ಪ್ರಾರಂಭಿಸಿದರು. ಜಗನ್ನಾಥನಿಗೆ

ಮುಜುಗರ, ನಾಚಿಕೆ. ತನ್ನನ್ನೆ ಅವರು ಶ್ರೀಕೃಷ್ಣನೆಂದು ಭಾವಿಸುತ್ತ ಹಾಡುತ್ತಿದ್ದಾರೆಂದು ತಿಳಿದ ಮೇಲಂತೂ ದಿಗಿಲು, ಆದರೆ ಅಡಿಗರ ಆವೇಶ ಬಾಲಕನಾಗಿದ್ದ ತನ್ನನ್ನು ನಿಧಾನವಾಗಿ ಆಕ್ರಮಿಸಿದ್ದರಿಂದ ಕಣ್ಣುಗಳಿಂದ ನೀರು ಹರಿದಿತ್ತು. 'ನೀನು ಸಾಮಾನ್ಯ ಹುಡುಗನಲ್ಲ, ಜಗಣ್ಣ ಶುಕಮುನಿಯಂತೆ ನೀನು ಒಬ್ಬ ದೊಡ್ಡ ಭಗವದ್ಭಕ್ತ' ಎಂದು ಅವರು ಹೇಳಿದ್ದು ಕೇಳಿ ಕೋಡುಬಳೆಗಳ ಬಗ್ಗೆ ತನಗಿದ್ದ ವಿಶೇಷವಾದ ಆಸೆಯ ಬಗ್ಗೆ ನಾಚಿಕೆ ಹುಟ್ಟಿತು.

ಅಡಿಗರದು ನಿಷ್ಕಲ್ಮಷವಾದ, ದೇವರ ಅಮಲಿನಿಂದ ಮತ್ತೇರಿದ ಜೀವನ. ಬಾಳೆಲೆ ಕೊಯ್ದು ತಂದು ಬಿಸಿಲಲ್ಲಿ ಒಣಗಿಸಿ ಅದರಿಂದ ಊಟದೆಲೆ ದೊನ್ನೆಗಳನ್ನು ಮಾಡುವುದು; ತಕಲಿಯಲ್ಲಿ ಜನಿವಾರ ತೆಗೆಯುವುದು; ಹೊಳೆಯ ದಂಡೆಗೆ ಹೋಗಿ ದರ್ಭೆ ಕೊಯ್ದು ತರುವುದು – ಇವುಗಳನ್ನು ಮಾರುವುದು. ಕರೆದಲ್ಲಿಗೆ ಹೋಗಿ ಪೌರೋಹಿತ್ಯ ಮಾಡಿ ಕೊಟ್ಟಷ್ಟನ್ನು ಸೊಂಟಕ್ಕೆ ಸಿಕ್ಕಿಸಿಕೊಂಡು ಬರುವುದು. ಹೀಗೆ ಸಂಪಾದಿಸಿದ ಹಣದಿಂದ ಗಾರ್ಹಸ್ಥ್ಯ ನಡೆಸುವುದು. ಆದರೆ ಬಂದವರಿಗೆಲ್ಲ ಊಟವಾಗಬೇಕು; ಕಾಫಿಯಾಗಬೇಕು; ತಪ್ಪಿದರೆ ಬೆಲ್ಲದ ಪಾನಕವಾದರೂ ಆಗಬೇಕು. ಯಾವುದಕ್ಕೂ ಕಮ್ಮಿಯಾಗಬಾರದು. ಮನೆ ತುಂಬ ಮಕ್ಕಳು ಬೇರೆ, ವರ್ಷಕ್ಕೊಂದರಂತೆ. ಅಲ್ಲೊಂದು ಅಳುತ್ತಿರುತ್ತೆ; ಇಲ್ಲೊಂದು ಉಚ್ಚೆ ಹೊಯ್ದು ತಟ್ಟುತ್ತಿರುತ್ತೆ; ಮಗದೊಂದು ಸಿಂಬಳ ಸುರಿಸುತ್ತ ಪನ್ನೇರಳೆ ತಿನ್ನುತ್ತಿರುತ್ತೆ – ಏತನ್ಮಧ್ಯೆ ಸುಬ್ರಾಯ ಅಡಿಗರು ತಕಲಿಯಲ್ಲಿ ನೂಲು ತೆಗೆಯುತ್ತ ದೇವರ ಮಹಿಮೆ ಕೊಂಡಾಡುತ್ತಾರೆ. ಅಥವಾ ಯಾವನೋ ಮೂರ್ಖ ಬಾಬನನ್ನೊ, ದೈವಭಕ್ತ ವಿಧವೆಯನ್ನೂ, ಉಪನಿಷತ್ತಿನ ವಾಕ್ಯವೊಂದಕ್ಕೆ ಶಂಕರ ರಾಮಾನುಜ ಮಾಧ್ವರ ಭಾಷ್ಯವನ್ನೊ ಹೊಗಳುತ್ತಾ ತಲ್ಲೀನರಾಗುತ್ತಾರೆ.

ಸುಬ್ರಾಯ ಅಡಿಗರು ಯಾರಲ್ಲೂ ದೋಷ ಕಾಣರು. ಕೆಲವರ ಹೃದಯದಲ್ಲಿ ಪರಮೇಶ್ವರನ ಸ್ವರೂಪ ಸ್ಫುಟವಾಗಿ ಕಂಡರೆ ಇನ್ನು ಕೆಲವರಲ್ಲದು ಮಸುಕಾಗಿತ್ತದೆ, ಅಹಂಕಾರದಿಂದ ಆವೃತ್ತವಾಗಿರುತ್ತದೆ ಎಂದು ಅವರ ಸಿದ್ಧಾಂತ.

ಮನೆ ತುಂಬ ಮಕ್ಕಳು. ಕೆಲವು ಸತ್ತವು. ಕೆಲವು ಬದುಕಿದವು. ನಿತ್ಯವೂ ಅವರು ಇಷ್ಟು ಅಚ್ಯುತಾನಂತ ಗೋವಿಂದಕ್ಕೆ ಇಷ್ಟು ದೂರ ನಡೆದಂತಾಯಿತೆಂದು ಲೆಖ್ಖ ಹಾಕುತ್ತ ಹಳ್ಳಿಯಿಂದ ಪೇಟೆಗೆ ದಾರಿ ಸವೆಸಿ ಬಾಳೆಲೆ ಮಾರಿ ಅಂತೋಣಿ ಡಾಕ್ಟ್ರ ಹತ್ತಿರ ಔಷಧಿ ಕೊಂಡು ಗಾರ್ಹಸ್ಥ್ಯ ನಡೆಸಿದರು. ಸತ್ತದ್ದೆಷ್ಟು, ಹುಟ್ಟಿದ್ದೆಷ್ಟು, ಯಾವುದರ ಹುಟ್ಟುಹಬ್ಬ ಯಾವತ್ತು ಲೆಖ್ಖ ಗೊತ್ತಿದ್ದ ಅವರ ಹೆಂಡತಿ ಬಾಣಂತಿಯಿದ್ದಾಗಲೇ ಸತ್ತಳು. ಪುಣ್ಯಾತಿಗಿತ್ತಿ ಅವಳೇನೋ ಕಣ್ಣು ಮುಚ್ಚಿದಳೆಂದರೆ ಮನೆ ನಡೆಯಬೇಡವೆ. ಚಿಳ್ಳೆ ಪಿಳ್ಳೆ ಮಕ್ಕಳನ್ನು ಊರೂರು ಅಲೆಯುವ ತಾನು ಆರೈಕೆ ಮಾಡುವುದು ಸಾಧ್ಯವೆ – ಆದ್ದರಿಂದ ಸತ್ತ ಹೆಂಡತಿಯ ತಂಗಿಯನ್ನೆ ಅಡಿಗರು ಮತ್ತೆ ಮದುವೆಯಾದರು. ಅವಳಿಂದ ಇನ್ನಷ್ಟು ಮಕ್ಕಳು ಹುಟ್ಟಿದವು. ಎಷ್ಟು? ಯಾಕೆ? – ಈ ದೇಹದ ದೌರ್ಬಲ್ಯ ತೀರಲು ಇನ್ನೆಷ್ಟು ಜನ್ಮವೆತ್ತಬೇಕೋ ಎಂದು ಸುಬ್ರಾಯ ಅಡಿಗರು ವ್ಯಸನದಿಂದ ನಗುತ್ತಾರೆ. ಮಂಜುನಾಥ ವಿರಾಗಿಗಳ ದೇವ ಮಾತ್ರನಲ್ಲ – ಅನುರಾಗಿಗಳ ದೇವನೂ ಕೂಡ; ಸಂಸಾರ ನಡೆಸುವ ಹರಕೆ ಹೊತ್ತವ ತಾನು ಎನ್ನುತ್ತಾರೆ. ಏತನ್ಮಧ್ಯೆ ಅವರಿಗೆ ಕೆಲವು ಕಾಲ ವೈರಾಗ್ಯ ಪ್ರಾಪ್ತವಾಗಿತ್ತು. ಕಾಲಲ್ಲಿ ತನಗೆ ಚಕ್ರವಿದೆ, ಅದಕ್ಕೇ ಈ ಪರಿಭ್ರಮಣದ ಹುಚ್ಚು ಎಂದು ಅವರು ಆಗ ಭರತವರ್ಷದ ಮೂಲೆ ಮೂಲೆ ಸುತ್ತಿ ಸಂತರನ್ನು ಮಹಿಮರನ್ನು ನೋಡಿ ಬಂದದ್ದು. ಆಗಲೇ ಅವರು ವಾರ್ಧಾದಲ್ಲಿ ಕರ್ಮಯೋಗದ ಮುಖಾಂತರ ಮೋಕ್ಷದ ದಾರಿಯಲ್ಲಿದ್ದ ಗಾಂಧೀಜಿಯ ಪ್ರಾರ್ಥನಾ ಸಭೆಗೆ ಹೋದದ್ದು; ಹರಿಜನ ಫಂಡಿಗೆ ತನ್ನ ಕಿವಿಯಲ್ಲಿದ್ದ ಒಂಡಿಗಳನ್ನೂ ಯಜ್ಞೋಪವೀತದಲ್ಲಿದ್ದ ಉಂಗುರವನ್ನೂ ಕೊಟ್ಟು ಅವರ ಕೃಪೆಗೆ ಪಾತ್ರರಾದದ್ದು.

ವೈರಾಗ್ಯದ ಬೆಂಕಿ ಆರುತ್ತಿದ್ದಂತೆ ಮನೆಯ ಕಡೆ ಕಾಲು ಎಳೆಯಿತು. ಬಂದಾಗ ನೋಡಿದ್ದೇನು ? ಬಾಲವಿಧವೆಯಾಗಿದ್ದ ತಂಗಿ ಬಸುರಾಗಿದ್ದಳು. ಯಾರಿಗೆ ಯಾಕೆ ಬಸುರಾದಳೆಂದು ಕೆದಕಲಿಲ್ಲ; ತಂಗಿಯನ್ನು ಬಯ್ಯಲಿಲ್ಲ. ಹೆಂಡತಿಯ ಕಿರಿಕಿರಿಯನ್ನು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ಹೊಟ್ಟೆ ಬೆಳೆಯಿತು. ಊರು ಮಾತಾಡಿತು, ಯಾರನ್ನೋ ಹಿಡಿದು ಗರ್ಭ ತೆಗೆಸಿಕೊಂಡಳು – ಏನು ಮಾಡಲಿಕ್ಕಾಗುತ್ತೆ ? ಅವಳ ಪ್ರಾರಬ್ಧ – ಆದರೆ ಘಟಶ್ರಾದ್ಧ ಮಾಡದೆ ಬೇರೆ ದಿಕ್ಕಿದೆಯೆ ? ಪೌರೋಹಿತ್ಯದಿಂದಲೇ ಮಕ್ಕಳ ಹೊಟ್ಟೆ ಹೊರೆಯಬೇಕಲ್ಲವೆ ? ಕರ್ಮಫಲ ತೀರಲೇಬೇಕಲ್ಲವೆ ? ಎಂದು ತಂಗಿಯನ್ನು ಜಾತಿಯಿಂದ ಹೊರಹಾಕಿದರು. ಆದರೆ ಮನೆಯಲ್ಲಿ ಅವಳನ್ನು ಇಟ್ಟುಕೊಂಡರು. ಚಾವಡಿಯಲ್ಲಿ ಮಲಗುತ್ತಾಳೆ; ಚಾವಡಿಯಲ್ಲಿ ಊಟ ಮಾಡುತ್ತಾಳೆ; ಬಾಳೆಲೆ ಕೊಯ್ದು ತರುತ್ತಾಳೆ ; ತಲೆ ಬೋಳಿಸಿಕೊಂಡೇ ಇದ್ದಾಳೆ – ಅವಳ ವೈರಾಗ್ಯ ತನ್ನದಕ್ಕಿಂತ ದೊಡ್ಡದೆಂದು ಹೊಗಳಿದರು. ದೇವಸ್ಥಾನಕ್ಕೆ ಅವಳ ಹಾಗೆ ಯಾರು ಇಡೀ ದಿನ ಸುತ್ತು ಬರುತ್ತಾರೆ ? ಒಳಗೆ ಬರುವುದಿಲ್ಲ, ಮೈಲಿಗೆ ಮಾಡುವುದಿಲ್ಲ. ಹೆಣ್ಣುಮಕ್ಕಳಿಗೆ ತಲೆ ಬಾಚುತ್ತಾಳೆ. ನಿತ್ಯ ಅಂಗಳ ಅವಳೇ ಸಾರಿಸುತ್ತಾಳೆ. ತಾವರೆ ಎಲೆಯ ಮೇಲಿನ ನೀರಿನ ಬಿಂದುವಿನಂತೆ ಅಂತೂ ಸಾರಿಸುತ್ತಾಳೆ. ತಾವರೆ ಎಲೆಯ ಮೇಲಿನ ನೀರಿನ ಬಿಂದುವಿನಂತೆ ಅಂತೂ ಬದುಕುತ್ತಾಳೆ, ಕರ್ಮ ಸವೆಸುತ್ತ. ಅಣ್ಣ ಎನ್ನುವ ಪ್ರೀತಿ ಅವಳಿಗೆ ಹೋಗಿಲ್ಲ; ತಂಗಿ ಎನ್ನುವ ಮೋಹ ತನಗೆ ಹರಿದಿಲ್ಲ. ತಪ್ಪು ಸರಿ ಮಂಜುನಾಥನಿಗೆ ಬಿಡೋಣ. ಅಡಿಗರ ಮಾತನ್ನು ಊರೂ ಒಪ್ಪಿತು – ಯಾರ ಮನೆಯ ದೋಸೆಯಲ್ಲಿ ತೂತಿಲ್ಲ ಹೇಳಿ.

ಸುಬ್ರಾಯ ಅಡಿಗರು ಜಗನ್ನಾಥನನ್ನು ಮೋಹಿಸಿದ್ದರು. ತಾಯಿಗೂ ಅವರು ಇಷ್ಟವಾದ್ದರಿಂದ ಇನ್ನಷ್ಟು ಅವರ ಮೇಲೆ ತನಗೆ ಗೌರವ. ಅಂಗಿ ಹಾಕದ ಅಡಿಗರಿಗೆ ಇಂಗ್ಲಿಷ್ ಬರುತ್ತದೆಂದು ಆಶ್ಚರ್ಯ. ಅಖಿಲ ಭಾರತ ಪರ್ಯಟನದಲ್ಲಿ ಅವರು ಹಿಂದೂ ಧರ್ಮದ ಬಗ್ಗೆ ಅನೇಕ ಇಂಗ್ಲಿಷ್ ಪುಸ್ತಕಗಳನ್ನು ಗಳಿಸಿದ್ದರು. ಹೃಷಿಕೇಶದ ಶಿವಾನಂದರು ತಮ್ಮ ಪುಸ್ತಕಗಳನ್ನು ಆಟೋಗ್ರಾಫ್ ಮಾಡಿ ಹರಸಿ ಅವರಿಗೆ ಕೊಟ್ಟಿದ್ದರು.

ಜಗನ್ನಾಥನಿಗೆ ಅವರು ತಮ್ಮ ಪುಸ್ತಕಗಳನ್ನು ಕೊಡುವರು. ಎದುರು ಕೂತು ಹಾಡುವರು. 'ಬ್ರಹ್ಮಚರ್ಯವೇ ಜೀವನ ವೀರ್ಯನಾಶವೇ ಮೃತ್ಯು' ಎನ್ನುವ ಪುಸ್ತಕ ಕೊಟ್ಟು ಈ ಕಠಿಣ ದಾರಿ ನನಗೆ ಸಾಧ್ಯವಾಗಿಲ್ಲ; ನಿನಗೆ ಸಾಧ್ಯವೋ ನೋಡು; ಹೃಷಿಕೇಶದಲ್ಲಿದ್ದಾಗಲೇ ನನಗೆ ಸ್ವಪ್ನಸ್ಖಲನವಾಯಿತೆಂದ ಮೇಲೆ ನನಗೆ ಈ ಜನ್ಮದಲ್ಲಿ ನಿವೃತ್ತಿಯಿಲ್ಲವೆಂದು ಕಂಡುಕೊಂಡೆ ಎನ್ನುವರು. ತನ್ನ ದೇಹಕ್ಕಿರುವ ಸುಖದ ಸಾಧ್ಯತೆಗಳನ್ನು ಅರಿಯತೊಡಗಿದ್ದ ಜಗನ್ನಾಥನಿಗೆ ಈ ಪುಸ್ತಕ ಓದುತ್ತ ಆದ ಅವಮಾನ ಅಷ್ಟಿಷ್ಟಲ್ಲ.

ಮೈಮೇಲಿನ ಸಿಬ್ಬವನ್ನು ವಿಭೂತಿಯೆನ್ನುವ, ಹಾಡುತ್ತ ಅಳುವ, ಅಳುತ್ತ ನಗುವ, ನಿರ್ಜನ ಪ್ರದೇಶಗಳಲ್ಲಿ ಕುಣಿಯುವ, ವರ್ಷದಲ್ಲಿ ಉಳಿದ ಗಳಿಕೆಯನ್ನೆಲ್ಲ ಕಾರ್ತೀಕ ಮಾಸದಲ್ಲಿ ಸಂತರ್ಪಣೆ ಮಾಡಿ ಕಳೆದುಕೊಂಡು ಬಿಡುವ, ಮೋಹಕವಾದ ಕಣ್ಣುಗಳ, ಇಲ್ಲಿದ್ದೂ ಎಲ್ಲೋ ಇರುವ ಈ ದೇವರ ಹುಚ್ಚನಿಗೆ ಒಂದು ಸಾರಿ ನಿಜವಾದ ಹುಚ್ಚು ಹಿಡಿದುಬಿಟ್ಟಿತು. ಉಗ್ರವಾದ ಹುಚ್ಚು. ಕಲ್ಲು ಎಸೆಯುವರು; ಹತ್ತಿರ ಹೋದರೆ ಕಚ್ಚುವರು; ಉಗಿಯುವರು; ಅರ್ಧರಾತ್ರೆ ಎದ್ದು ಗೋಳೋ ಎಂದು ಅಳುವರು; ಹೆಂಡತಿಯನ್ನು ಕಂಡರೆ ಕೆಂಡವಾಗುವರು – ಹೀಗೆ ಊರೆಲ್ಲ ಸುದ್ದಿ. ಜಗನ್ನಾಥ ಧೈರ್ಯಮಾಡಿ ಅವರನ್ನು ನೋಡಹೋದಾಗ ಮಾತ್ರ ಅಳುತ್ತ ಕೂತರು. ಇನ್ನೇನು ಅವರು ಅವಧೂತರಾಗಿಬಿಡುತ್ತಾರೆ ಎಂದು ಜಗನ್ನಾಥ ಕಾದ. ಆದರೆ

ಹುಚ್ಚು ಇಳಿದು ಮಂಕಾದರು. ಈ ಮಂಕನ್ನು ಧ್ಯಾನಸ್ಥಿತಿಯೆಂದು ಜಗನ್ನಾಥ ಬಗೆದ.

ಅಡಿಗರ ಅನುಯಾಯಿಯಾಗಿ ತನ್ನ ವರ್ತನೆಯನ್ನೆಲ್ಲ ಬದಲಿಸಿಕೊಳ್ಳುತ್ತ ಹೋದ ಮಗನನ್ನು ಕಂಡು ತಾಯಿಗೆ ದಿಗಿಲಾಗಿತ್ತು. ತಾಯಿ ಹೆದರುವುದನ್ನು ಕಂಡು ಜಗನ್ನಾಥ ತನ್ನ ವೈರಾಗ್ಯವನ್ನು ಇನ್ನೂ ಅತಿಮಾಡಿ ಬೆಳಿಗ್ಗೆ ಕಾಫಿ ತಿಂಡಿ ಬಿಟ್ಟು ತುಳಸಿ ಸೊಪ್ಪಿನ ಫಳಾರ ಪ್ರಾರಂಭಿಸಿದ್ದ. ಜಗನ್ನಾಥ ಮಾತಾಡುವಾಗ ಕೆಲವು ಬಾರಿ ಕಣ್ಣು ಮುಚ್ಚಿಕೊಳ್ಳುವುದು, ಆಮೇಲೆ ಕಣ್ಣುಗಳನ್ನು ದೊಡ್ಡದಾಗಿ ಅರಳಿಸಿ ಸುಮ್ಮನಾಗಿಬಿಡುವುದು, ನಡುನಡುವೆ ನಗುವುದು, ಎರಡು ಕೈಗಳನ್ನೂ ಎತ್ತಿ ಕತ್ತನ್ನು ಬಲಕ್ಕೆ ಬಾಗಿಸಿ ಆಶ್ಚರ್ಯದ ಮಾತಾಡುವುದು – ಎಲ್ಲವೂ ಅಡಿಗರ ಅನುಕರಣೆಯಾಗಿತ್ತು.

ಆಗ ಹೈಸ್ಕೂಲಿನಲ್ಲಿ ಅದೇ ಸೀಬಿನಕೆರೆ ಕಮಲ – ಈಗ ಬೊಂಬಾಯಿಯಲ್ಲಿರುವವಳು – ಓದುತ್ತಿದ್ದಳು. ಜಗನ್ನಾಥನ ಕ್ಲಾಸಿನಲ್ಲಿದ್ದ ಆಕೆಯ ಬಗ್ಗೆ Leaf, Lotus, Pearl, Umbrella ಶಬ್ದಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿ ನಗಾಡುವವರ ಮಧ್ಯೆ ಅಡಿಗರ ಶಿಷ್ಯನಾದ ಜಗನ್ನಾಥ ಗಂಭೀರ ಮುಖಮುದ್ರೆ ಹೊತ್ತು ಓಡಾಡುತ್ತಿದ್ದ. ಗೋಡೆಯ ಮೇಲೆ ಪೆನ್ಸಿಲ್‌ನಲ್ಲಿ ನಿತ್ಯ ಮೂಡುತ್ತಿದ್ದ ಈ ಮಾತುಗಳನ್ನು ಅಳಿಸುತ್ತಿದ್ದ. ಶರತ್‌ಚಂದ್ರರ 'ದೇವದಾಸ', 'ಶ್ರೇಷಪ್ರಶ್ನೆ' ಕಾದಂಬರಿಗಳಿಂದ ಗಾಢವಾಗಿ ಪ್ರಭಾವಿತನಾದ ಜಗನ್ನಾಥನ ಕಣ್ಣುಗಳಲ್ಲಿ ಈ ವೇಶ್ಯೆಯ ಮಗಳಾದ ಕಮಲ ಆದರ್ಶದ ಹೆಣ್ಣಾದಳು. ಜಮೀನುದಾರರ ಮಗನಾದ್ದರಿಂದ ಉಳಿದ ಹುಡುಗರು ಗೌರವಿಸುತ್ತಿದ್ದ ಜಗನ್ನಾಥನ ಗಾಂಭೀರ್ಯ ಬೆಳೆಯುತ್ತಲೇ ಹೋಯಿತು. ಅಡಿಗರ ಅನುಭಾವಪರತೆ, ಉಪಾಧ್ಯಾಯರ ಮೆಚ್ಚಿಗೆ, ಮನೆಯ ಶ್ರೀಮಂತಿಕೆ, ತಾಯಿಯ ಆದರ, ಶರತ್ ಕಾದಂಬರಿಗಳ ಭಾವುಕತೆ- ಎಲ್ಲ ಬೆರೆತು ಜಗನ್ನಾಥನಿಗೆ ನಡೆಯುವ ನೆಲ ಕಾಣದಂತಾಯಿತು.

ಒಳಗೆ ಮಾತ್ರ ಜಗನ್ನಾಥ ಬೇಯುತ್ತಿದ್ದ. ತನ್ನ ಅಂತರಂಗದ ಆರಾಧ್ಯದೇವತೆಯಾದ ಕಮಲಳ ಬಗ್ಗೆ ತನ್ನ ಪ್ರೇಮ ಪವಿತ್ರವಾದದ್ದಾದರೂ ತನ್ನ ಸಹಪಾಠಿಯೊಬ್ಬ, ಕುಂಟೆಕೋಣನಂತೆ ಬೆಳೆದಿದ್ದ ರಂಗಯ್ಯ- ಪೂಟು ಲಾಯರಿ ತಿಮ್ಮಯ್ಯ ಎನ್ನುವವನ ಮಗ- ಅವಳ ಹಾಡಿಗೆ ತಬಲ ಬಾರಿಸುತ್ತಾನೆ, ಅವಳಿಗೆ ಕರ್ಚೀಪು ಪ್ರೆಸೆಂಟ್ ಮಾಡಿದ್ದಾನೆ, ಜೊತೆಗೋದುವ ನೆವದಲ್ಲಿ ಅವಳ ಮನೆಯಲ್ಲೇ ಇರುತ್ತಾನೆ ಇತ್ಯಾದಿ ಕೇಳಿದ ದಿನದಿಂದ ಜಗನ್ನಾಥ ಬಹು ದುಃಖಿಯಾದ. ರೈಟರ್ ಕೃಷ್ಣಯ್ಯನ ಕೋಣೆಯಲ್ಲಿ ಒಮ್ಮೆ ಅಕಸ್ಮಾತ್ ತನ್ನ ಕಣ್ಣಿಗೆ ಬಿದ್ದ 'ಕಲಿಯುಗ' ಪತ್ರಿಕೆಯಲ್ಲಿ ವರ್ಣಿಸಿದ್ದಂತೆ ಕಮಲೆಯನ್ನು ರಂಗಯ್ಯ ಹಂತ ಹಂತವಾಗಿ ಬೆತ್ತಲೆ ಮಾಡುವುದು, ಅನಂತರ ಅವನೂ ಬೆತ್ತಲೆಯಾಗುವುದು ಇತ್ಯಾದಿಗಳನ್ನು ಸದಾ ಕಲ್ಪಿಸಿಕೊಳ್ಳಲಾರದೆ ಇರಲಾರದ, ಯಾರಿಗೂ ಹೇಳಿಕೊಳ್ಳಲಾರದ, ಅನಿವಾರ್ಯ ಸಂಕಟದಲ್ಲಿ ಊಟ, ನಿದ್ದೆ, ಓದು ಏನೂ ಸೇರದೆ ಇರುವಾಗ ಜಗನ್ನಾಥ ಅಡಿಗರ ಅನುಭಾವಕ್ಕೆ ಪೂರ್ಣ ಶರಣಾಗಲು ಮಾಡಿದ್ದ ಪ್ರಯತ್ನವೆಲ್ಲ ವಿಫಲವಾಗಿತ್ತು.

ಹೀಗಿರುವಾಗ ಇವತ್ತಿಗೂ ತನ್ನ ಕಣ್ಣಿಗೆ ಕಟ್ಟಿದಂತಿರುವ, ತನ್ನ ಜೀವನದ ಗಡಿ ಬದಲಾಯಿಸಿದ ಒಂದು ಘಟನೆ ನಡೆಯಿತು. ಅಡಿಗರು ಅವನಿಗೊಂದು ಪುಸ್ತಕ ಕೊಟ್ಟಿದ್ದರು. ಸಂತರ ಜೀವನದ ಬಗ್ಗೆ ಶಿವಾನಂದರು ಬರೆದದ್ದು. ಅದಕ್ಕೆ ತಾಯಿನಾಡು ಪತ್ರಿಕೆಯ ರಟ್ಟು ಹಾಕಿತ್ತು. ಆ ಪತ್ರಿಕೆಯ ಮೇಲಿದ್ದ ಹಳೆ ಸುದ್ದಿಯನ್ನೋದುವ ಕುತೂಹಲದಲ್ಲಿ ರಟ್ಟನ್ನು ಬಿಚ್ಚಿದ. ರಟ್ಟಿನೊಳಗಿಂದ ಐದು ರೂಪಾಯಿಯ ನೋಟೊಂದು ಬಿತ್ತು. ಗರಿಗರಿಯಾದ ಹೊಸ ನೋಟು. ಈ ರಟ್ಟೊಳಗೆ ಈ ದುಡ್ಡನ್ನೇಕೆ ಅಡಿಗರು ಬಚ್ಚಿಟ್ಟಿದ್ದಾರೆ? ಯಾರಿಂದ ಬಚ್ಚಿಟ್ಟಿದ್ದಾರೆ? ಯಾಕೆ? ಶಿವಾನಂದರು ಕೊಟ್ಟ ದುಡ್ಡೋ? ಆಪತ್ತಿನ

ಕಾಲಕ್ಕೆ ಒದಗಲಿ ಎಂದು ಬಚ್ಚಿಟ್ಟರೊ? ಇತ್ಯಾದಿ ಪ್ರಶ್ನೆಗಳು ಥಟ್ಟನೇ ಎದ್ದವು. ಒಟ್ಟಿನಲ್ಲಿ ಪ್ರಪಂಚದ ಯಾವ ವ್ಯವಹಾರವನ್ನೂ ಹಚ್ಚಿಕೊಳ್ಳದ ಅಡಿಗರು ಹೀಗೆ ಹಣ ಬಚ್ಚಿಟ್ಟಿದ್ದಾರೆಂಬುದು ಜಗನ್ನಾಥನಿಗೆ ಆಶ್ಚರ್ಯವೆನ್ನಿಸಿತು.

ಈಗಲೂ ಜಗನ್ನಾಥನಿಗೆ ಸಂಪೂರ್ಣ ಅರ್ಥವಾಗದ ವಿಷಯವೆಂದರೆ ಯಾಕೆ ತಾನು ಆ ಐದು ರೂಪಾಯಿಯ ನೋಟನ್ನು ರಟ್ಟೊಳಗೆ ಸೇರಿಸದೆ ತನ್ನ ಜೇಬಿಬಲ್ಲಿಟ್ಟುಕೊಂಡೆ ಎಂಬುದು. ಯಾವುದಕ್ಕೂ ಜಗನ್ನಾಥನಿಗೆ ಕೊರತೆಯಿರಲಿಲ್ಲ. ತಾಯಿ ಅವನ ಕೈಗೆ ಹಣ ಕೊಡದಿದ್ದರೂ ಅವನು ಬಯಸಿದ್ದನ್ನೆಲ್ಲ ಕೊಂಡುಕೊಡುತ್ತಿದ್ದರು. ಆದರೂ ಹೀಗೆ ಯಾವ ಯೋಚನೆ ಗೊಂದಲಗಳೂ ಇಲ್ಲದೆ ಐದು ರೂಪಾಯಿ ನೋಟನ್ನು ಜೇಬಿಗಿಳಿಬಿಟ್ಟ ಘಳಿಗೆಯಿಂದ ತನ್ನಲ್ಲಿ ಕ್ರಮೇಣ ಪರಿವರ್ತನೆಯಗಳಾದುವು. ಆದರೆ ತನು ಬದುಕುತ್ತಿದ್ದ ಲೋಕದಲ್ಲಿ ಹೊಸ ಕಿಂಡಿಗಳನ್ನು ಕೊರೆದುಬಿಟ್ಟು ಈ ಘಟನೆಯ ಅರ್ಥ ಇನ್ನೂ ಜಗನ್ನಾಥನಿಗೆ ಹೊಳೆದಿಲ್ಲ.

ನಡೆದದ್ದನ್ನು ಮಾತ್ರ ಜಗನ್ನಾಥ ಹೇಳಬಲ್ಲ. ಆ ತನಕ ತಾಯಿಯಿಂದ ಏನನ್ನೂ ಜಗನ್ನಾಥ ಮುಚ್ಚಿಟ್ಟರಲಿಲ್ಲ. ಆದರೆ ಐದು ರೂಪಾಯಿಗಳನ್ನು ಜೇಬೀಗೆ ಇಳಿಸಿದ ಮೇಲೆ ಮಾತ್ರ ಬಟ್ಟೆ ಬದಲಾಯಿಸುವಾಗ ಜೇಬಿನಿಂದ ಜೇಬಿಗೆ ಆ ಹಣವನ್ನು ತಾಯಿಗೆ ತಿಳಿಯದಂತೆ ಬದಲಾಯಿಸಿದ್ದ. ಅದಕ್ಕಾಗಿ ಯಾರೂ ಬರದ ಮನೆಯ ಮೂಲೆಗಳನ್ನು ಪತ್ತೆ ಮಾಡಿದ. ತಯಿ ಬೆನ್ನುಜ್ಜುವಾಗ, ಕೂದಲುಗಳಲ್ಲಿ ಬೆರಳಾಡಿಸುತ್ತ ಆಪ್ತವಾಗಿ ಮಾತಾಡುವಾಗ ಈ ಬಚ್ಚಿಟ್ಟ ಐದು ರೂಪಾಯಿಗಳು ತಾಯಿಯ ಮಮತೆಯನ್ನು ಸಂಪೂರ್ಣ ಅನುಭವಿಸದಂತೆ ಮಾಡಿದುವು. ತನ್ನನ್ನು ಜಗಣ್ಣ ಎಂದು ಪ್ರೇಮದಿಂದ ಕರೆಯುವ ಚಿಕ್ಕಿ, ರೈಟರ್ ಕೃಷ್ಣಯ್ಯ ಯಾರಿಗೂ ತಿಳಿಯದ ಗುಟ್ಟು ತನ್ನ ಹತ್ತಿರವಿದೆಯೆಂಬ ಅಸಹನೀಯವಾದ ಭಾವನೆ ಬೆಳೆಯುತ್ತ ತನ್ನ ಮರ್ಜಿಯಲ್ಲಿ ಸೂಕ್ಷ್ಮ ಮಾರ್ಪಾಟುಗಳಾದುವು. ಎಲ್ಲರಿಂದ ತಾನು ಪ್ರತ್ಯೇಕನಾದೆ, ಪ್ರಾಯಶಃ ತನ್ನನ್ನು ಆವರಿಸಿಕೊಂಡಿದ್ದ ಹಿರಿಯರಿಗೆ ಗೊತ್ತಾಗದಂತಹ ಒಂದು ಕತ್ತಲಿನ ಮೂಲೆ ತನ್ನ ಪ್ರಜ್ಞೆಯಲ್ಲಿದೆಯೆಂಬುದೇ ತನ್ನನ್ನು ಮೋಹಿಸಿರಬೇಕು. ಆಗ ಈ ದಿಗಿಲು ತನ್ನ ಜೀವಕ್ಕೊಂದು ಹೊಸ ರುಚಿ ತಂದಿರಬೇಕು. ಯಾರಾದರೂ ಆಪ್ತನೊಬ್ಬ ತನ್ನನ್ನು ಆಗ ಈ ಹಣ ಏನು ಮಾಡುವಿ ಎಂದು ಕೇಳಿದ್ದರೆ ಪುಸ್ತಕ ಹಿಂದಕ್ಕೆ ಕೊಡುವಾಗ ರಟ್ಟಿನೊಳಗಿಟ್ಟುಬಿಡುತ್ತೇನೆ ಎಂದು ಹೇಳುತ್ತಿದ್ದ, ನಿಜವಾಗಿ.

ಆದರೆ ಆಶ್ಚರ್ಯವೆಂದರೆ ತಾನು ಹಾಗೆ ಮಾಡಲಿಲ್ಲ. ಕಳ್ಳತನದ ಉತ್ಕಟತೆಯನ್ನು ಅನುಭವಿಸಲೇಬೇಕಾದ ಸ್ಥಿತಿಯನ್ನು ಜಗನ್ನಾಥ ಮುಟ್ಟಿದ. ಒಂದು ಭಾನುವಾರ ಬೆಳಿಗ್ಗೆ ಅಡಿಗರು ಬಂದರು; ನಸುಕಿಗೆ ಮೊದಲೇ ಎದ್ದು ಸ್ನಾನಮಾಡಿ ಮೈಗೆ ಗಂಧ ಮೆತ್ತಿಕೊಂಡು ಹಳ್ಳಿಯಿಂದ ಸರ ಸರ ನಡೆದು ಬಂದಿದ್ದ ಅವರ ಮುಖ ಮೈ ಬೆವತಿದ್ದುವು. ಅವರ ಕಣ್ಣುಗಳು ಖುಷಿಯಿಂದ ಹೊಳೆಯುತ್ತಿದ್ದುವು. ಅಂಗಳದಲ್ಲಿ ಜಗನ್ನಾಥನನ್ನು ಕಂಡವರೇ, 'ಏನೋ ಜಗಣ್ಣ, ಏನಾಯ್ತು ಅಂತಿ? ದಾರಿಯಲ್ಲಿ ಸ್ಮಶಾನ ಹಾಯ್ದು ಬಂದೆ. ಇನ್ನೂ ಕತ್ತಲು ಕತ್ತಲು. ಹೊಲೆಯನೊಬ್ಬ ಗುಂಡಿ ತೋಡುತ್ತಿದ್ದ. ಸತ್ತ ಕರುವನ್ನು ಹುಗಿಯಲಿಕ್ಕೆ ಇರಬಹುದು. ಅವನ ಕಪ್ಪು ಮೈ, ಜಡೆಗಟ್ಟಿದ ಕೂದಲು, ಪುಷ್ಟವಾದ ಮಾಂಸಖಂಡಗಳ ಭುಜ, ಅಗಿಯುವಾಗ ಅವನ ಏಕಾಗ್ರತೆ ಎಲ್ಲ ನನಗೆ ಥಟ್ಟನೆ ನೀಲಕಂಠಸ್ವಾಮಿಯ ನೆನಪು ಮಾಡಿಕೊಟ್ಟಿತು. ಹಾಗೇ ನೆನೆಯುತ್ತ ಬರುವಾಗ ಕನ್ಯಾಕುಮಾರಿ ಕ್ಷೇತ್ರದಲ್ಲಿ ಯೋಗಿಗಳೊಬ್ಬರು ಹೇಳಿದ್ದು ನೆನಪಾಯಿತು. ಈ ದೇಹ ಮೊದಲು ಶುದ್ಧವಾಗಬೇಕು, ಎಷ್ಟೆಂದರೆ ಮಲವಿಸರ್ಜನೆ ಮಾಡಿದ ನಂತರ ಶುಚಿ ಮಾಡಿಕೊಳ್ಳಬೇಕಾದ ಅಗತ್ಯ ಬೀಳಬಾರದು – ಅಷ್ಟು, ಹಾಗಾಗಬೇಕಾದಲ್ಲಿ ಎಷ್ಟು ಕಡಿಮೆ ತಿನ್ನುವುದಕ್ಕೆ ಈ ದೇಹ ಈ ಮನಸ್ಸು ಒಗ್ಗಿಕೋಬೇಕು – ನೋಡು. ಪಶುಪಕ್ಷಿಗಳಿಗೆ ಆಗ ಮನುಷ್ಯ ನಿಜವಾಗಿ

ಹತ್ತಿರವಾದಾನು. ಏನೋ ಹೇಳಹೋಗಿ ಏನೋ ಹೇಳಿದೆ. ಆ ಹೊಲೆಯನೂ ಸ್ಮಶಾನ ವಾಸಿ ಪರಮೇಶ್ವರ ಯಾಕಿರಬಾರದು ? ಹಾಗೆ ನಾನು ಭಾವಿಸುತ್ತೇನೆ ಅಷ್ಟೆ – ಇಲ್ಲಿ' ಎಂದು ತಲೆ ಮುಟ್ಟಿ ತೋರಿಸಿ, ಆಮೇಲೆ ಎದೆಯ ಮೇಲೆ ಕೈಯಿಟ್ಟು 'ಇಲ್ಲಿಯೂ ಹಾಗೆ ಅನ್ನಿಸಿದರೆ ಈ ಎಲ್ಲ ಶೃಂಖಲೆಗಳೂ ಕಳಚಿಕೊಳ್ಳುತ್ತವೆ' ಎಂದು ಜನಿವಾರವನ್ನು ತಿರಸ್ಕಾರದಿಂದ ತೋರಿಸಿ, 'ಎಲ್ಲಿ ಅಮ್ಮ ?' ಎಂದು ಒಳಗೆ ಹೋದರು.

ಜಗನ್ನಾಥನಿಗೆ ಮೈಯಲ್ಲಿ ಭಯದ ಸಂಚಾರವಾಗತೊಡಗಿತು. ತಾಯಿ ಅವರಿಗೆ ಉಪ್ಪಿಟ್ಟು ಕಾಫಿ ಕೊಟ್ಟರು. ಅಡಿಗರು 'ಒರಿಸ್ಸಾದಲ್ಲಿ ಜಯದೇವ ಕವಿಯನ್ನು ಬಲ ಸೊಗಸಾಗಿ ಹಾಡ್ತಾರೆ. ಅವನ ಜನ್ಮ ಭೂಮಿ ಅದಲ್ಲದೆ ? ನಾನು ಹಾಡುತ್ತೇನೆ, ನೀವು ವೀಣೆ ನುಡಿಸಿ, ನಾಳೆ. ಆಗಬಹುದಲ್ಲ ?' ಎಂದರು. ಜಗನ್ನಾಥ ಅಲ್ಲಿಂದ ಕಾಲುಕಿತ್ತು ಏನೋ ಕೆಲಸವಿದ್ದವನಂತೆ ಕೊಟ್ಟಿಗೆಗೆ ಹೋದ. ಕರು ಹಾಕಿದ್ದರಿಂದ ಕೊಟ್ಟಿಗೆಯಲ್ಲಿ ಕಟ್ಟಿಹಾಕಿದ್ದ ಗಂಗೆ ಸಿಟ್ಟಿನಲ್ಲಿ ದುರುಗುಟ್ಟಿ ನೋಡಿ ಹಾಯುವಂತೆ ಮಾಡಿತು. ನಡುಗುವ ಕೈಗಳಿಂದ ಜಗನ್ನಾಥ ಜೇಬಿನಲ್ಲಿದ್ದ ಐದು ರೂಪಾಯಿಯ ನೋಟನ್ನು ಅವಸರವಾಗಿ ಬನೀನೊಳಗೆ ತುರಿಸಿದ. ಜೇಬಿನಿಂದ ಜೇಬಿಗೆ ಭಯದಲ್ಲಿ ವರ್ಗಾವಣೆಯಾಗಿದ್ದ ನೋಟು ಬೆವರು ತಾಕಿ ಆಗಲೇ ಹಳೆಯದಾಗಿತ್ತು. ಬನೀನನ್ನು ಪಂಚೆಯೊಳಗೆ ತುರಿಸಿ ಕೊಟ್ಟಿಗೆಯಿಂದ ಹೊರಗೆ ಬಂದ. ಅಡಿಗರು ಕೈ ತೊಳೆಯಲು ಬಚ್ಚಲಿಗೆ ಬರುತ್ತಿದ್ದುದು ನೋಡಿ ಬಹಳ ಶಾಂತವಾಗಿ, 'ಗಂಗೆ ಕರು ಹಾಕಿದೆ. ಹೇಗೆ ಹಾಯಕ್ಕೆ ಬರತ್ತೆ ಅಂತೀರಿ ?' ಎಂದು ಮಹಡಿಯ ಮೇಲೆ ಹೋಗಿ ಏನೋ ಓದುತ್ತ ಕೂತ.

ಅಡಿಗರು ತಮ್ಮ ಸುಫರ್ದಿನಲ್ಲಿದ್ದ ನೀಲಕಂಠೇಶ್ವರನ ದೇವಸ್ಥಾನಕ್ಕೆ ಪೂಜಾರಿಗಳಾಗಿದ್ದರು. ವರ್ಷಕ್ಕೆ ಒಂದು ಚೀಲ ಅಕ್ಕಿ ಅರವತ್ತು ರೂಪಾಯಿ ಅದಕ್ಕಾಗಿ ಅವರಿಗೆ ತಮ್ಮ ಮನೆಯಿಂದ ಸಲ್ಲುವುದು. ಅಕ್ಕಿಯನ್ನು ಗಾಡಿಯಲ್ಲಿ ಕಳಿಸುತ್ತೇನೆಂದು ಅಮ್ಮ ಹೇಳಿದ್ದು ಕೇಳಿಸಿತು. ಅರವತ್ತು ರೂಪಾಯಿ ಒಟ್ಟಿಗೆ ಸಿಕ್ಕಿದ್ದೆ ಅಡಿಗರು ಯಾತ್ರೆ ಹೊರಟುಬಿಡುತ್ತಿದ್ದರು. 'ಈ ಸಾರಿ ಎಲ್ಲಿಗೆ ?' ಎಂದರು ಅಮ್ಮ. ಇಬ್ಬರೂ ಮಹಡಿ ಹತ್ತುತ್ತಿದ್ದರು. 'ಕಾಲಟಿ ಕ್ಷೇತ್ರಕ್ಕೆ ಹೋಗಿ ಮಲೆಯಾಳ ದೇಶವನ್ನು ನೋಡಿ ಬರುವ ಆಸೆ' ಎಂದು ಸುಬ್ರಾಯ ಅಡಿಗರು ಹೇಳಿದರು. ಅವರು ಮಹಡಿ ಹತ್ತಿ ಮುಗಿದಾಗಿತ್ತು. ತನ್ನ ಬಳಿಗೇ ಬರುವಂತಿತ್ತು. ಜಗನ್ನಾಥ ಬೆವರಹತ್ತಿದ, ಈಗಲೂ ತಾನು ಬೇಕಾದರೆ ಐದು ರೂಪಾಯನ್ನು ರಟ್ಟೊಳಗೆ ಇಟ್ಟುಬಿಡಬಹುದೆನ್ನಿಸಿತು. ಆದರೆ ಯಾವ ಕಾರಣದಿಂದಲೋ ಕೂತ ಜಾಗದಿಂದವನು ಜಗ್ಗಲಿಲ್ಲ. ಮೈಯೆಲ್ಲ ಬೆವರಿತು. ಬರಿದೇ ನೋಡುತ್ತಿದ್ದ. ಪುಸ್ತಕದ ಅಕ್ಷರಗಳೆಲ್ಲ ಮಂಜಾದವು. ಅಡಿಗರು ಮತ್ತು ಅಮ್ಮ ಎದುರು ಬಂದು ನಿಂತರೂ ಅವರು ಬಂದದ್ದು ತನಗೆ ತಿಳಿಯಲಿಲ್ಲವೆನ್ನುವಂತೆ ನಟಿಸಿ ಪುಸ್ತಕ ಓದುತ್ತ ಕೂತ. 'ಇಂತಹ ಏಕಾಗ್ರತೆ ಇದ್ದರೆ ದೇವರೂ ಪ್ರತ್ಯಕ್ಷನಾಗುತ್ತಾನೆ' ಎಂದ ನಗುತ್ತ ಅಡಿಗರು 'ಜಗಣ್ಣ, ಶಿವಾನಂದರ ಪುಸ್ತಕ ಓದಿ ಮುಗಿಸಿದ್ದರೆ ಕೊಡಯ್ಯ' ಎಂದರು. ಥಟ್ಟನೆ ಎಚ್ಚರಾದಂತೆ ಜಗನ್ನಾಥ ನಟಿಸಿ ಪೆಟ್ಟಿಗೆ ಮುಚ್ಚಳ ತೆರೆದು ಹುಡುಕುವ ನೆವ ಮಾಡಿ ಕಾಲ ತಳ್ಳಿದ. ಅಡಿಗರು ಬೈಂಡನ್ನು ಪುಸ್ತಕದ ರಟ್ಟಿನೊಳಗೆ ತುರಿಸಿ ಮಡಿಸುವಂತೆಯೇ ತಾನು ಮಡಿಸಿದ್ದೇನೋ ಎಂದು ಪರೀಕ್ಷಿಸಿದ್ದ. ಅಡಿಗರು ಕೊಡುವಾಗ ಬೈಂಡು ಹೇಗಿತ್ತೆಂಬುದೇ ಅನುಮಾನವಾಯಿತು. ಬೈಂಡ್ ಹಾಕಿದ ತಾಯಿನಾಡು ಪತ್ರಿಕೆಯಲ್ಲಿ ಯಾವುದೋ ಊರಿನಲ್ಲಿ ಹರತಾಳ ಎನ್ನುವ ಸುದ್ದಿಯನ್ನು ಓದುತ್ತ ಏನು ಮಾಡಬೇಕು ತೋಚದೆ ನಿಂತ. ಹಣವನ್ನು ಅಡಿಗರಿಗೆ ಹಿಂದಕ್ಕೊಪ್ಪಿಸುವುದು, ಒಪ್ಪಿಸದೇ ಇರುವುದು – ಎರಡೂ ಕಷ್ಟವಾದ ಸ್ಥಿತಿಯಲ್ಲಿ ಜಗನ್ನಾಥ ಸಿಕ್ಕಿಬಿದ್ದಿದ್ದ.

‘ಓದಿ ಮುಗಿಸಿರದೇ ಇದ್ದರೆ ಆಮೇಲೆ ಕೊಡುವಿಯಂತೆ. ಅವಸರವಿಲ್ಲ’ ಎಂದು ಅಡಿಗರು ರೂಮಿನಿಂದ ಹೊರಗೆ ಹೋದರು. ತಾಯಿ ಮೇಜಿನ ಮೇಲಿದ್ದ ತನ್ನ ಪುಸ್ತಕಗಳನ್ನು ಓರಣ ಮಾಡುತ್ತಿದ್ದಳು. ಯಾರಿಗೂ ಅನುಮಾನ ಬಂದಿರಲಿಲ್ಲ. ಪುಸ್ತಕವನ್ನು ಇನ್ನೊಂದು ದಿನ ಇಟ್ಟುಕೊಂಡು ಹಣವನ್ನು ರಟ್ಟೊಳಗೇ ಹಾಗೇ ಇಟ್ಟು ಹಿಂದಕ್ಕೆ ಕೊಡಬಹುದಿತ್ತು. ಆದರೂ ಜಗನ್ನಾಥನ ಬಾಯಿಯಿಂದ ಬಂದ ಮಾತೆಂದರೆ:

‘ಓದಿ ಆಗಿದೆ. ತಗೊಳ್ಳಿ’.

ಪುಸ್ತಕವನ್ನು ಅಡಿಗರಿಗೆ ಕೊಟ್ಟ. ಇವತ್ತಿಗೂ ಅಡಿಗರಿಗೆ ತಾನು ಹಣ ಕದ್ದ ವಿಷಯ ಗೊತ್ತಿರಲಿಕ್ಕಿಲ್ಲ. ಪ್ರಾಯಶಃ ಇಟ್ಟ ಹಣವನ್ನು ಅವರು ಮರೆತಿದ್ದರೂ ಆಶ್ಚರ್ಯವಿಲ್ಲ. ಏನೇ ಇರಲಿ ಪುಸ್ತಕವನ್ನು ಹಿಂದಕ್ಕೆ ಕೊಟ್ಟ ಘಳಿಗೆಯಲ್ಲಿ ಅವನ ಹೃದಯ ಅತಿಶಯವಾದ ಸಂತೋಷದಿಂದ ಹಿಗ್ಗಿತ್ತು. ಈ ತನಕ ಪರಿಚಯವಿಲ್ಲದಿದ್ದ ಹೊಸದೊಂದು ಸ್ವಾತಂತ್ರ್ಯವನ್ನು ಪಡೆದಂತಿತ್ತು.

ಅಡಿಗರು ಜೊತೆ ತಾಯಿಯೂ ಹೊರಟು ಹೋದರು. ಈಗ ತಾನು ಕೂತಿರುವ ರೂಮಲ್ಲೆ ಆಗ ಜಗನ್ನಾಥ ಕೂತಿದ್ದ. ಬಾಗಿಲು ಹಾಕಿಕೊಂಡು ಅಗಳಿ ಹಾಕಿದ. ಈಗ ತಾನು ಏನು ಬೇಕಾದರೂ ಮಾಡಬಹುದೆನ್ನಿಸಿತು. ಬನೀನಿನ ಒಳಗೆ ಕೈಹಾಕಿ ನೋಡಿದರೆ ಬನೀನು ಒದ್ದೆ, ನೋಟು ಒದ್ದೆ, ಜನಿವಾರ ಒದ್ದೆ, ನೋಟನ್ನು ಹೊರಗೆ ತೆಗೆದು ಜೇಬಲ್ಲಿ ಹಾಕಿಕೊಂಡ. ಮೈಗೆ ಒದ್ದೆಯಾಗಿ ಅಂಟಿಕೊಂಡ ಜನಿವಾರವನ್ನು ತೆಗೆಯಬೇಕೆನ್ನಿಸಿತು. ಯಾಕೊ? ಶಾಸ್ತ್ರೋಕ್ತವಾಗಿ ತೆಗೆಯುವುದಾದರೆ ಕಾಲುಗಳ ಮೂಲಕ ಜನಿವಾರವನ್ನು ವಿಸರ್ಜಿಸಿ ಹೊಸದು ಹಾಕಿಕೊಳ್ಳಬೇಕು. ಆದರೆ ಬಲ ಅಂಗಿಯ ತೋಳಿನ ಮುಖಾಂತರ ಜನಿವಾರವನ್ನು ತೂರಿಸಿ ಕತ್ತಿನಿಂದಲೇ ಹೊರಗೆ ತೆಗೆದ. ತೆಗೆಯಬಾರದ ಕ್ರಮದಲ್ಲಿ ಜನಿವಾರ ತೆಗೆದದ್ದರಿಂದ ಮುಖದಲ್ಲಿ ಭಯ, ನಗು ಮಿಶ್ರವಾದ್ದನ್ನು ಕನ್ನಡಿಯಲ್ಲಿ ನೋಡಿಕೊಂಡ. ಜನಿವಾರವನ್ನು ಪೆಟ್ಟಿಗೆಯೊಳಗಿಟ್ಟ. ಉಪನಯನವಾದ ಮೇಲೆ ಹೀಗೆ ಅವನು ಮೈ ಮೇಲೆ ಜನಿವಾರವಿಲ್ಲದಿದ್ದ ಘಳಿಗೆಯೇ ಇರಲಿಲ್ಲ. ಮುಚ್ಚಲು ಅಂಗಿಯಿದ್ದುದರಿಂದ ತಾನು ಯಜ್ಞೋಪವೀತವಿಲ್ಲದ ಬೋಳು ಮೈಯಲ್ಲಿದ್ದೀನೆಂದು ತಾಯಿಗೆ ಗೊತ್ತಾಗದು. ಜನಿವಾರವಿಲ್ಲದೆ ಓಡಾಡಿದರೆ ಏನೂ ಆಗುವುದಿಲ್ಲ-ಅಲ್ಲವೆ? ಇದನ್ನು ಖುದ್ದು ತಿಳಿಯಲು ಆರಾಮಾಗಿ ಕೆಳಗಿಳಿದು ಬಂದ. ದೇವರ ಮನೆ ಎದುರು ನಿಂತ. ಅರ್ಚಕರು ಗಂಧ ತೇಯುತ್ತ ಕೂತಿದ್ದರು. ಅಂಗಳಕ್ಕೆ ಹೋದ. ಕಣಜದಲ್ಲಿ ಸುತ್ತಾಡಿದ. ಕಣಜದಲ್ಲೊಂದು ಮುದಿ ಸರ್ಪವಿದೆಯಂತೆ, ಎಲ್ಲಿ, ಜನಿವಾರವಿಲ್ಲದ ನಾನು ಇಲ್ಲಿ ಓಡಾಡಿದರೆ ಮುಟ್ಟು ಚಟ್ಟಾಗಬಹುದೊ ಎಂದು ಎಳೆ ಬಿಸಿಲಿನಲ್ಲಿ ಮರದ ಪೊಟರೆ, ಹುತ್ತಗಳನ್ನು ಪರೀಕ್ಷಿಸಿದ. ಸಿಳ್ಳೆ ಹಾಕುತ್ತ ‘ಕಾಯೌ ಶ್ರೀ ಗೌರೀ ಕರುಣಾ ಲಹರೀ’ ಹಾಡಿದ. ಸಿಳ್ಳೆ ಕೇಳಿದರೆ ಹಾವುಗಳು ಹೊರಬರುತ್ತವಂತೆ, ನೋಡುವ, ಎಂದು ಸಿಳ್ಳೆ ಹಾಕುತ್ತ ಮರದಡಿ ನಿಂತ. ಓಡುತ್ತೋಡುತ್ತ ಗುಡ್ಡ ಇಳಿದು ಪೇಟೆಯ ದಾರಿ ತಲ್ಪಿದ. ಶಿವಮೊಗ್ಗಕ್ಕೆ ಹೊರಟ್ಟಿದ್ದ ಸೆಕೆಂಡ್ ಬಸ್ಸು ಏದುತ್ತ ಉಬ್ಬನ್ನು ಹತ್ತುತ್ತಿತ್ತು. ಅದನ್ನು ನೋಡುತ್ತ ನಿಂತು ಹಾಗೇ ಆರಾಮಾಗಿ ಮನಸ್ಸಿನಲ್ಲೆ ಸಿಳ್ಳೆ ಹಾಕುತ್ತ ಅಡ್ಡ ಹಾದಿಯಲ್ಲಿ ನಡೆದು ಸೀಬಿನಕೆರೆಗೆ ಹೋದ. ಓಣಿಯಲ್ಲಿ ಕಮಲಳ ಮನೆ ರಂಗಯ್ಯ ಈಗ ಅಲ್ಲಿರಬಹುದೋ? ಅಲ್ಲೆ ಮಲಗಿದ್ದು ಬಹಳ ಲೇಟಾಗಿ ಎದ್ದು ಹಲ್ಲುಜ್ಜದೆ ಕಮಲ ಕೊಟ್ಟ ಕಾಫಿ ಕುಡಿಯುತ್ತಿರಬಹುದೊ? ಹೋಟೆಲಿನಿಂದ ದೋಸೆ ತರಿಸಿರಬಹುದೊ? ಸಮಾಜವೆಂದರೆ ರಂಗಯ್ಯನ ಅಪ್ಪನಿಗೆ ಎಗ್ಗಿಲ್ಲ; ಮಗನಿಗೆ ಅಪ್ಪನ ಎಗ್ಗಿಲ್ಲ. ‘ಲಂಬೋದರ ಲಕುಮಿಕರ -ಸರಿಮಾಗರಿ ಸರಿಗರಿಸ’ -ಹಾರ್ಮೋನಿಯಂ ಬಾರಿಸುತ್ತ ಸಂಗೀತದ ಪ್ರಾಕ್ಟೀಸು ಕಮಲಳ ಮನೆಯಲ್ಲಿ ನಡೆದಿತ್ತು. ಖಂಡಿತ ರಂಗಯ್ಯ ಹಾಸಿಗೆ ಮೇಲೆ ತಲೆಗೆ ಕೈಯೂರಿ ಮಲಗಿ ಕಮಲ

ಹಾಡುವುದನ್ನು ಕೇಳಿಸಿಕೊಳ್ಳುತ್ತಿದ್ದಾನೆ. ಜಗನ್ನಾಥನಿಗೆ ಸಂಕಟವಾಯಿತು. ಬೀದಿಯಲ್ಲಿ ಯಾರೂ ಇರಲಿಲ್ಲ. ಆದರೂ ಯಾವುದೋ ಕಾರ್ಯದಲ್ಲಿ ಮಗ್ನನಾಗಿದ್ದವನಂತೆ ನಡೆದ. ಮೈ ಮತ್ತೆ ಬೆವರಿತ್ತು. ಕಿರಾಣಿ ಅಂಗಡಿ, ಎಣ್ಣೆ ಮಾರುವ ಅಂಗಡಿ, ಮೊಮ್ಮಗನ ಹತ್ತಿರ ಬೆನ್ನು ತುರಿಸಿಕೊಳ್ಳುತ್ತ ಕೂತ ಅಜ್ಜ, ಮೈಗೆ ಎಣ್ಣೆ ಹಚ್ಚಿಕೊಂಡು ತಾಯಿಯ ಕೈತಪ್ಪಿಸಿಕೊಂಡು ಓಡುವ ಬೋಳು ಮೈ ಹುಡುಗ, 'ಅಯ್ಯೋವರು ಏನು ಇಷ್ಟು ಬೆಳಿಗ್ಗೆ' ಎಂದು ಕೇಳಿದ ಮನೆಯಾಳು ಎಲ್ಲವನ್ನೂ ಗಮನಿಸುತ್ತ ತಾನು ಕಮಲಳಿಗಾಗಿ ಈ ಕಡೆ ಬಂದದ್ದಲ್ಲ ಎನ್ನುವುದನ್ನು ತನ್ನ ಧೈರ್ಯದ ನೋಟದಲ್ಲೆ ಮನದಟ್ಟು ಮಾಡಲು ಯತ್ನಿಸುತ್ತ ನಡೆದ. ಚೌಕಕ್ಕೆ ಬಂದ. ಅಂಗಡಿ ಬೀದಿ ನಡೆದ, ಆಮೇಲೆ ರಥಬೀದಿ ನಡೆದು ಸೀದ ದೇವಸ್ಥಾನಕ್ಕೆ ಹೋದ. ಜನಿವಾರವಿಲ್ಲದೆ ಬೋಳು ಮೈಯಲ್ಲಿ ಬ್ರಾಹ್ಮಣನಾದವನು ದೇವಸ್ಥಾನದೊಳಕ್ಕೆ ಹೋಗಕೂಡದೆಂಬುದು ನೆನಪಾದ್ದೆ ಹೊಸಿಲು ದಾಟಿ ಒಳಗೆ ಹೋದ.

ಜಮೀಂದಾರರ ಮಗನನ್ನು ನೋಡಿ ಎಲ್ಲರೂ ಗೌರವದಿಂದ ಒಳಗೆ ದಾರಿ ಬಿಟ್ಟರು. ಗರ್ಭಗುಡಿಯ ಬಾಗಿಲಿನ್ನೂ ತೆರೆದಿರಲಿಲ್ಲ. ಗರ್ಭಗುಡಿಯ ಕತ್ತಲಲ್ಲಿ ಉರಿಯುತ್ತಿರುವ ಎರಡು ನಂದಾದೀಪ ಕಂಡಿಯಿಂದ ಕಂಡಿತು. ಅಭ್ಯಾಸ ಬಲದಿಂದ ಕೈ ಮುಗಿದ. ಒಳ್ಳೆಣ್ಣೆ, ಊದುಬತ್ತಿ, ಲೋಭಾನ, ಕೆಂಡಸಂಪಿಗೆ ಬೆರೆತ ವಾಸನೆ.

ಮುಗಿದ ಕೈಯನ್ನು ಹಾಗೇ ಎತ್ತಿದ. ಯಾಕೆ ಗೊತ್ತಿಲ್ಲ. ಮಧ್ಯಾಹ್ನ ಮಾತ್ರ ಬಾರಿಸಬೇಕಾದ ತನ್ನ ಪೂರ್ವಿಕರು ಮಾಡಿಸಿಕೊಟ್ಟ ದೊಡ್ಡ ಗಂಟೆಯನ್ನು ಕೈ ಹುಡುಕಿತು. ಊರಿಗೆಲ್ಲ ಕೇಳಿಸುವ ಗಂಟೆಯೆಂದು ನೆನಪಾಗಿ ರೋಮಾಂಚನವಾಯಿತು. ಬೆರಳಿನ ತುದಿಗೆ ಗಂಟೆಯ ನುಣುಪಾದ ನಾಲಿಗೆಯ ತುದಿ ಸಿಕ್ಕಿತು. ಸಿಕ್ಕಿದ್ದೇ ನಿಂತಲ್ಲಿಂದಲೇ ಕುಪ್ಪಳಿಸಿ ಬಾರಿಸಿದ. ಅಲ್ಲಿದ್ದವರೆಲ್ಲ ಕಂಗಾಲಾಗಿ ತನ್ನ ಕಡೆ ನೋಡಿದರು. 'ಮಹಾ ಮಂಗಳಾರತಿಗೆ ಬಾರಿಸೋದದು' ಎಂದು ಯಾರೋ ಮೂಲೆಯಲ್ಲಿ ನಿಂತವರು ಬೆಚ್ಚಿ ಕಿರುಚಿದರು. ಆದರೆ ಜಗನ್ನಾಥ ಮೈ ಮೇಲೆ ಆಳ್ವಿಕೆ ಬಂದವನಂತೆ ನಡುಗುತ್ತಿದ್ದ. ಕಂಚಿನ ನಾದದಿಂದ ಪುಳಕಿತವಾದ ಅವನ ದೇಹ ಮತ್ತೆ ಕುಪ್ಪಳಿಸಿ ಗಂಟೆಯನ್ನು ಬಾರಿಸಿತು. ಅದರ ಘೋಷ ಗುಡ್ಡಗಳು ಸುತ್ತುವರಿದ ಇಡೀ ಭಾರತೀಪುರವನ್ನು ದಿಗ್ಭ್ರಮೆಗೊಳಿಸುತ್ತದೆಂಬ ಅರಿವಿನಿಂದ ಮತ್ತನಾಗಿ ಜಗನ್ನಾಥ ಕುಪ್ಪಳಿಸಿ ಕುಪ್ಪಳಿಸಿ ಎಷ್ಟು ಸಾರಿ ಗಂಟೆ ಬಾರಿಸಿದನೊ ಮರೆತಿದೆ.

ಯಾರೊ ಅವನನ್ನು ಹಿಡಿದುಕೊಂಡರು. ಮೈಮೇಲೆ ಗಣ ಬಂದಿದೆ ಎಂದು ಬೆನ್ನನ್ನು ಸವರಿದರು. ಸಂತೈಸಿದರು. ತೀರ್ಥ ಕುಡಿಸಿ, ತೀರ್ಥವನ್ನು ತಲೆಗೆ ತಟ್ಟಿದರು. ಭೂತರಾಯನಿಗೆ ಕೋಪವಾಗಿ ಜಗನ್ನಾಥನ ಮೈಮೇಲೆ ದರ್ಶನ ಬಂದಿರಬೇಕೆಂದು ಯಾರೋ ಹೇಳಿದ್ದನ್ನು ಎಲ್ಲರೂ ಒಪ್ಪಿದರು. ಗೌರವದಿಂದ ತನ್ನ ಹಣೆಗೆ ಕುಂಕುಮ ಮೆತ್ತಿದರು. ತಮ್ಮನ್ನು ಹೀಗೆ ಎಚ್ಚರಿಸಿದ ಭೂತರಾಯನಿಗೆ ಕೈ ಮುಗಿದರು.

ಎಲ್ಲರ ಕಣ್ಣಲ್ಲಿ ಹೀರೋ ಆಗಿ ಜಗನ್ನಾಥ ಹೊರಬಂದಿದ್ದ. ಮೌನವಾಗಿ ಮನೆಯ ಕಡೆ ನಡೆದ. ಮುಖ ಕೆಂಪಾಗಿ ಕಿವಿ ಬೆಚ್ಚಗಾಗಿತ್ತು. ಗಂಟೆಯ ಘೋಷ ಇನ್ನೂ ಅವನ ಕಿವಿಯಲ್ಲಿ ಅನುರಣಿಸುತ್ತಿತ್ತು. ಅದರ ಗುಂಗಲ್ಲೆ ನಡೆದ. ಪರಿಚಿತ ಮುಖಗಳೆಷ್ಟೋ ಎದುರಾದವು. ಯಾರಿಗೂ ತನ್ನ ಗುಟ್ಟು ಗೊತ್ತಿಲ್ಲೆಂದು ಹಿಗ್ಗಿದ.

ಥಟ್ಟನೆ ಸೀಬಿನಕೆರೆಯ ಹಾದಿಯಲ್ಲಿ ಮತ್ತೆ ತಿರುಗಿದ. ಕಾರಣ, ದೇವಸ್ಥಾನದಿಂದಲೂ ತನ್ನ ಯೋಗಕ್ಷೇಮ ಚಿಂತಕನೊಬ್ಬ ಬೆನ್ನ ಹಿಂದೆಯೇ ಬರುತ್ತಿದ್ದನೆಂಬುದು ಗೊತ್ತಾಯಿತು. ಅವನ ಕಣ್ಣಿಂದ ಹೀಗೆ ತಪ್ಪಿಸಿಕೊಂಡವನು ಸೀದ ಕಮಲ ಇದ್ದ ಓಣಿಯ ಕಡೆ ನಡೆದ.

ಓಣಿಗೆ ತಿರುಗುವ ಮೂಲೆಯಲ್ಲಿ ಬೀಡದ ಅಂಗಡಿಯೊಂದಿತ್ತು. ಹೋಟೆಲ್ ಸುಂದರಯ್ಯನ ಸೂಳೆಗೆ ಹುಟ್ಟಿದ ಮಗ ಸುಬ್ಬ ತುದಿಯಲ್ಲಿ ಚೂಪಾಗಿ ಮೇಲೆ ಅಗಲವಾಗಿದ್ದ ಉರುಟುರುಟು ಬೀಡಾಗಳನ್ನು ಕಟ್ಟಿ ಅದಕ್ಕೆ ಲವಂಗ ಚುಚ್ಚಿ ವೈರಿನಲ್ಲಿ ಮಾಡಿದ ಗಿಡದಂಥ ಸ್ಟ್ಯಾಂಡಿನಲ್ಲಿ ಸಿಕ್ಕಿಸುತ್ತಿದ್ದ. ಇನ್ನೆರಡು ಬೀಡ ಕಟ್ಟಿದರೆ ಸ್ಟ್ಯಾಂಡಿನಲ್ಲಿರುವ ಎಲ್ಲ ತೂತುಗಳಲ್ಲೂ ಸಿಕ್ಕಿಸಿದಂತಾಗುತ್ತದೆ. ಜಗನ್ನಾಥ ಗಮನಿಸುತ್ತ ನಿಂತ. ಬೆತ್ತ ಹಿಡಿದು ನಿಂತ ಪೊಲೀಸ್‌ನವನೊಬ್ಬ ನಮಸ್ಕಾರ ಮಾಡಿದ್ದೇ ಜಗನ್ನಾಥ ನಿಂತವನು ಹೊರಟ. ಪೆಟ್ಟಿಗೆ ಹಿಡಿದ ಹಜಾಮನೊಬ್ಬ ಎದುರಾದ. ಬಲ ಪಕ್ಕದ ಮನೆಯಿಂದ ದೋಸೆ ಹೊಯ್ಯುವ ಶಬ್ದ. ವಾಸನೆ. ಯಾರೋ ಜಗುಲಿಗೆ ಬಂದು ಕವಳ ತುಪ್ಪಿ ಉತ್ಸಾಹದಿಂದ ಮಾತು ಪ್ರಾರಂಭಿಸುತ್ತ ಒಳಗೆ ಹೋದರು. ಬೆಳಗಿನ ಬಿಸಿಲು ಏರುತ್ತಿತ್ತು. ಕಮಲಳ ಮನೆ ಎದುರು ಬಂದು ಜಗನ್ನಾಥ ನಿಂತ. ಹಾರ್ಮೋನಿಯಂ ಶಬ್ದವಿಲ್ಲ. ಕಿಟಕಿಯಿಂದ ಒಳಗಿನ ಬಾಗಿಲು, ಬಾಗಿಲ ಪಕ್ಕದಲ್ಲಿ ರವಿವರ್ಮನ ದಮಯಂತಿ, ಬಾಗಿಲ ಮೇಲೆ ತೋರಣವಾಗಿ ಬಳೆ ಓಡುಗಳ ಸರ ಕಂಡವು. ಸುತ್ತ ಎಲ್ಲೂ ನರಪಿಳ್ಳೆ ಕಾಣಲಿಲ್ಲ. ಚರಂಡಿಯಲ್ಲಿ ಒಂದು ಕಾಗೆ, ಒಂದು ನಾಯಿ ಮಾತ್ರ ಇದ್ದವು.

ಕಮಲಳ ಮನೆ ಜಗುಲಿ ಏರಿದ. ಕಿಟಕಿಯಿಂದ ಐದು ರೂಪಾಯಿಯ ನೋಟನ್ನು ಒಳಗೆ ತೂರಿದ. ರೋಡಿಗೆ ಹಾರಿ ಓಡಿದ. ಬೆನ್ನಿನ ಹಿಂದೆ ಊರಿನ ಕಣ್ಣುಗಳೆಲ್ಲ ಇವೆ ಎನ್ನಿಸಿ ಭಯವಾಯಿತು. ಆದರೆ ತಿರುಗಿ ನೋಡಿದರೆ ಯಾರು ಇರಲಿಲ್ಲ. ನಾಯಿ ಮಾತ್ರ ಬೊಗಳುವ ಕರ್ತವ್ಯ ಮಾಡಿ ಸುಮ್ಮನಾಗಿತ್ತು. ಓಡೋಡುತ್ತಲೆ ಮನೆಗೆ ಬಂದವನನ್ನು ತಾಯಿ ಕಾತರದಿಂದ ನೋಡಿದರು. ಆಗಲೇ ದೇವಸ್ಥಾನದಿಂದ ಯಾರೋ ಬಂದು ತನ್ನ ಮೈ ಮೇಲೆ ಭೂತರಾಯನ ದರ್ಶನ ಬಂದಿತ್ತೆಂದು ಹೇಳಿರಬೇಕು. ಆದರೆ ತಾಯಿ ಅದರ ವಿಷಯ ಮಾತಾಡಲೇ ಇಲ್ಲ. ಜಗನ್ನಾಥ ಸೀದ ರೂಮಿಗೆ ಹೋಗಿ ಅವಸರವಾಗಿ ಜನಿವಾರವನ್ನು ಹಾಕಿಕೊಂಡು ಕೆಳಗೆ ಬಂದ. ಮಾತಾಡದೆ ನಿಂತಿದ್ದ ತಾಯಿ ಜಗನ್ನಾಥನಿಗೆ ದೃಷ್ಟಿ ಸುಳಿದು ಹಾಕಿದರು.

ಜಗನ್ನಾಥನ ಕಥೆ ಮುಗಿದ ಮೇಲೆ 'ಬಾ ಚಿಕ್ಕಿ ಏನು ಮಾಡ್ತಿದಾರೊ ನೋಡೋಣ' ಎಂದು ರಾಯರು ಎದ್ದರು. ತನ್ನ ಕಥೆ ಕೇಳಿಸಿಕೊಂಡು ಅವರು ಬರೇ ನಕ್ಕಿದ್ದರು. ಚಿಕ್ಕಿ ಕೊಟ್ಟ ಮಣೆಯ ಮೇಲೆ ಕೂತರು. 'ಇನ್ನರ್ಧ ಗಂಟೆ ಹಸಿವು ತಡಕೊಳ್ಳಿ' ಎಂದು ಚಿಕ್ಕಿ 'ಅರಳು ಹಿಟ್ಟು ಕಲಸಿ ಕೊಡಲಾ?' ಎಂದರು. ರಾಯರು ಬೇಡ ಅಂದರು.

ಒಳಗೆ ಚಿಕ್ಕಿ ತಾವೇ ಸ್ವತಃ ಜಿಲೇಬಿ ಮಾಡುತ್ತಿದ್ದರು. ಅಡಿಗರಿಗೆ ಜಿಲೇಬಿ ಬಲು ಪ್ರಿಯವಾದ ತಿಂಡಿ. ಅಡಿಗರು ಊಟಕ್ಕಿರುತ್ತಾರೆಂದು ಚಿಕ್ಕಿಯ ಸಡಗರ ನೋಡಿ ಜಗನ್ನಾಥನಿಗೆ ನಗು ಬಂತು. ದೊಡ್ಡ ತಪ್ಪಲೆಯಲ್ಲಿ ಮಾಡಿದ ಅನ್ನ, ಬೋಗಣಿ ತುಂಬ ಮಾಡಿದ ಹುಳಿ ತಿನ್ನಲು ಎಂದಿನಂತೆ ಇಪ್ಪತ್ತೋ ಇಪ್ಪತ್ತೈದು ಬ್ರಾಹ್ಮಣರು ಇವತ್ತು ಇಲ್ಲವೆಂದು ಚಿಕ್ಕಿಗಾಗಿದ್ದ ದುಃಖ ಇಳಿದಂತೆ ಕಂಡಿತು. ಆಳುಗಳು ಉಣ್ಣುತ್ತಾವೆ. ಅಥವಾ ಕೊಟ್ಟಿಗೆ ಕೆಲಸದ ಹೊಲತಿಯಿದ್ದಾಳೆ ಎಂದವರು ಸಮಾಧಾನಪಟ್ಟಿರಬೇಕು.

ಚಿಕ್ಕಿಗೆ ಕೊಟ್ಟಿಗೆ ಕೆಲಸದ ಹೊಲತಿಯೆಂದರೆ ಪ್ರೀತಿ. ಹಂದಿಯ ಮರಿಗಳ ಹಾಗೆ ಅವಳಿಗೆ ಮಕ್ಕಳೆಂದು ಅವರು ಹಾಸ್ಯ ಮಾಡಿದ್ದನ್ನು ಜಗನ್ನಾಥ ಕೇಳಿದ್ದಾನೆ. ಮೈಲಿಗೆಯಲ್ಲಿದ್ದಾಗ ಅವಳ ಜೊತೆ ಚಿಕ್ಕಿಯ ಕಷ್ಟಸುಖದ ಮಾತು ನಡೆಯುವುದು. ಎಷ್ಟು ಕುರ್ದೆಗಳೇ ನಿಂಗೆ ಎಂದು ಹಾಸ್ಯದಿಂದ ಶುರುವಾದ್ದು, ಅವಳ ಗಂಡನ ಹಾದರ, ಹಿರಿಮಗನ ಕುಡಿತದ ಚಟ, ತೆರ ಬಾಕಿ ಮಾಡಿಕೊಂಡ ಅಳಿಯನ ಸಮಾಚಾರ, ಕಿರಿಮಗಳು ಮೋಸಮಾಡಿ ತೀರ್ಥಹಳ್ಳಿಯ ಹೊಲೆಯನೊಬ್ಬನ ಜೊತೆ ಓಡಿಹೋದ್ದು, ಚಿಕ್ಕಮಗಳೂರು ಕಾಫಿ ತೋಟಕ್ಕೆ ಹೋದ ಮಗನೊಬ್ಬ ಒಮ್ಮೆಯಾದರೂ ಹಿಂದಕ್ಕೆ ಬಾರದ್ದು, ಮಗುವನ್ನು ದೆಯ್ಯ ಮೆಟ್ಟಿದ್ದು-ಇತ್ಯಾದಿ ಮಾತುಗಳು ಆರಾಮಾಗಿ ಚಿಕ್ಕಿಗೆ ಸ್ನಾನದ ಹೊತ್ತಾಗುವ ತನಕ ಹರಡಿಕೊಳ್ಳುತ್ತೆ. ಹಿಟ್ಟು ಕಲಸುತ್ತಿದ್ದ ಚಿಕ್ಕಿ ಶ್ರೀಪತಿರಾಯರಿಗೆ ಹೇಳಿದಳು: 'ಅವಕ್ಕೆ ಹಾಸಕ್ಕೆ ಹೊದೆಯೋಕ್ಕೆ ಬೇಕಾದಷ್ಟು ಇರೋವಾಗ ದೇವಸ್ಥಾನದೊಳಗೆ ಹೋಗಿ ಅವಕ್ಕೇನು ಕಡೀಬೇಕಾಗಿದೆ ಹೇಳಿ'.

ಚಿಕ್ಕಿ ನೇರವಾಗಿ ವಿಷಯಕ್ಕೆ ಬಂದರೆಂದು ಜಗನ್ನಾಥನಿಗೆ ಖುಷಿಯಾಯಿತು.

'ಹಾಗಲ್ಲ ಚಿಕ್ಕಿ, ನಮ್ಮ ದೇಶದಲ್ಲಿ ಈ ಕೀಳು ಜನ ಬಂಡಾಯ ಎದ್ದಾಗಲೇ ನಮ್ಮ ಜೀವನಕ್ಕೊಂದು ಅರ್ಥ ಬರೋದು. ವಿಯಟ್ನಾಂ ದೇಶದ ಬಡ ರೈತರು ನೋಡಿ – ಅಮೇರಿಕಾದಂಥ ದೇಶಾನ್ನೇ ಎದುರು ಹಾಕ್ಕೊಂಡು ಹೋರಾಡ್ತಾ ಇದಾರಲ್ಲ. ಅದೇ ಈ ಕಾಲದ ಅದ್ಭುತ ಸಂಗತಿ. ಹಾಗೇನೇ ಅಮೇರಿಕಾದ ನೀಗ್ರೋಗಳ ಹೋರಾಟ. ಇಂಥ ಜನ ಎದ್ದು ನಿಂತಾಗ ಅವರ ಜೀವನ ಅರಳೋದು ಮಾತ್ರವಲ್ಲ ನಮ್ಮ ಜೀವನಾನೂ ಅರಳತ್ತೆ. ಅವರು ಮನುಷ್ಯರಾಗದ ಹೊರ್ತು ನಮ್ಮ ಮನುಷ್ಯತ್ವಾನೂ ಅಪೂರ್ಣವಾಗೇ ಉಳಿಯುತ್ತೇ.'

ಚಿಕ್ಕಿಯ ಮುಖದಲ್ಲಿ ಸಹನೆ ನೋಡಿ ತನ್ನ ಮಾತುಗಳೆಲ್ಲ ಬಾಷಣದಂತಾಗಿ ಬಿಟ್ಟಿತೆಂದು ಜಗನ್ನಾಥನಿಗೆ ನಾಚಿಕೆಯಾಯಿತು.

'ನಂಗೆ ನಿನ್ನ ಮಾತು ಅರ್ಥವಾಗಲ್ಲ ಜಗಣ್ಣ. ಈಗ ಹೊಲೇರು ಮಕ್ಕಳನ್ನು ಸ್ಕೂಲಿಗೆ ಕಳಿಸಿದರೆ ಅವಕ್ಕೆ ದುಡ್ಡು ಸಿಕ್ಕತ್ತಂತೆ. ಆ ದುಡ್ಡನ್ನು ಅವು ಏನು ಮಾಡ್ತಿದಾವೆ ಗೊತ್ತ? ಕುಡಿದು ಹಾಳು ಮಾಡ್ತಿದಾವೆ. ಅವಕ್ಕೆ ಉದ್ಧಾರ ಆಗಬೇಕೂಂತ ಅನ್ನಿಸ್ದ ಹೊರ್ತು ನೀನು ಮಾಡೋದೆಲ್ಲ ನೀರಿನಲ್ಲಿ ಹೋಮ ಮಾಡಿದಂತೆ'.

ಚಿಕ್ಕಿ ನಿಟ್ಟುಸಿರಿಟ್ಟು ಹೇಳಿದರು.

'ಹಾಗಲ್ಲ ಚಿಕ್ಕಿ. ನಾವು ಉಪಕಾರ ಮಾಡಿದ್ರೆ ಅವರು ಸರಿಹೋಗಲ್ಲ-ನಿಜ. ಅವರು ನಮ್ಮನ್ನು ಧಿಕ್ಕರಿಸಿ ನಿಲ್ಲಬೇಕು. ಆಗ ಅವ್ರಿಗೆ ತಾವೂ ಮನುಷ್ಯರು ಅನ್ನಿಸತ್ತೆ, ತಾವು ಕೀಳೂ ಜನ ಅನ್ನೋದನ್ನ ಅವೇ ಒಪ್ಪಿಕೊಳ್ಳೊ ಹಾಗೆ ನಾವು ಮಾಡಿದೀವಲ್ಲ, ಇದು ಭಯಂಕರ ವಿಷಯ. ಅದಕ್ಕೇ ನಾನು...'

'ಏನೇ ಮಾಡೊ ಜಗಣ್ಣ, ಮನೆತನದ ಮರ್ಯಾದೆ ಮರೀಬೇಡ. ಸೂರ್ಯನ್ನ ತಿನ್ನಕ್ಕೆ ಹೋಗಿ ಹನುಮಂತ ಮೂತಿ ಸುಟ್ಟುಕೊಂಡನಂತೆ. ರಾಯರನ್ನ ಕೇಳು ಹೇಳ್ತಾರೆ. ನೀನಿನ್ನೂ ಕೂಸು. ಮೂರು ದಿನ ನಿನಗೆ ಎಚ್ಚರಾನೇ ಬರ್ಲಿಲ್ಲ. ಅಡಿಗರು

ತೊಡೇ ಮೇಲೆ ಮಲಗಿಸಿಕೊಂಡು ಮೃತ್ಯುಂಜಯ ಜಪ ಮಾಡ್ತ ಕೂತರು. ನಿನ್ನಮ್ಮ ಎದುರು ಕೂತು ಕಣ್ಣೀರಿಡ್ತ ದೇವರನ್ನ ಬೇಡಿಕೊಂಡ್ರು: ಒಬ್ನೇ ಮಗ ಉಳಿಸು ಅಂತ – ದೇವರ ಕೋಣೆ ಎದುರು. ನಂಗಿನ್ನೂ ಕಣ್ಣಿಗೆ ಕಟ್ಟಿದ ಹಾಗಿದೆ. ಮನೇಲಿ ಎಲ್ರೂ ಉಪಾಸ. ನಿಂಗೆ ಮೈತುಂಬ ಚಿಟಿಕೆ ಹಾಕಿ ಎಷ್ಟು ಸುಟ್ಟರೂ ಧ್ಯಾಸ ಬರ್ಲಿಲ್ಲ. ಕೊನೇಗೆ ನಿನ್ನಮ್ಮ ಮಂಜುನಾಥ ಸ್ವಾಮಿಗೆ ಬಂಗಾರದ ಕಿರೀಟ ಮಾಡಿಸಿ ಕೊಡ್ತೀನಿಂತ ಹರಕೆ ಹೇಳಿಕೊಂಡ ತಕ್ಷಣ ನೀನು ಕಣ್ಣುಬಿಟ್ಟೆ. ಇದನ್ನೆಲ್ಲ ನೀನು ಈಗ ಮರೆತು ಬಿಡೋದು ಸರಿಯೊ?'

ರಾಯರು ತುಂಬ ಸಹಾನುಭೂತಿಯಿಂದ ಚಿಕ್ಕಿಯ ಕಡೆಗೆ ನೋಡುತ್ತಿದ್ದರು. ಉದ್ವೇಗದಲ್ಲಿದ್ದ ಚಿಕ್ಕಿಗೆ ಏನು ಹೇಳುವುದೂ ಸರಿಯಲ್ಲವೆನ್ನಿಸಿ ಜಗನ್ನಾಥ ಸುಮ್ಮನಾದ.

'ಯೋಚನೆ ಮಾಡಬೇಡಿಯಮ್ಮ. ಜಗಣ್ಣ ದುಡುಕ್ತಾನೇಂತ ತಿಳೀಬೇಡಿ.'

ರಾಯರ ಸಂತೈಸುವ ಮಾತಾಡಿದರು. ಇಬ್ಬರೂ ಮೆಲ್ಲನೆ ಅಲ್ಲಿಂದೆದ್ದು ಮಹಡಿಗೆ ಹೋದರು. ಗಂಟೆ ಒಂದಾಗಿತ್ತು. ಅಷ್ಟರಲ್ಲೇ ಸುಬ್ರಾಯ ಅಡಿಗರು ಬಂದರು. 'ಊಟಕ್ಕಿನ್ನೂ ಅರ್ಧಗಂಟೆಯಿದೆ. ಇಸ್ಪೀಟಾಡಲು ಅಡಿಗರ ಅಭ್ಯಂತರವಿಲ್ಲ ತಾನೆ?' ಎಂದು ರಾಯರು ನಗುತ್ತ ಕೇಳಿದರು. 'ಮೂರು ಕೈಯಾಗತ್ತೆ ಸರಿ. ಇಪ್ಪತ್ತೆಂಟರ ಆಟ ಆಡೋಣ' ಎಂದು ಅಡಿಗರು ಕೂತರು. ಉತ್ಸಾಹವಿಲ್ಲದಿದ್ದರೂ ಜಗನ್ನಾಥ ಆಗಲಿ ಎಂದ. ಎಲೆಗಳಿಗೆ ಏನು ಮಾಡೋದು? 'ಗೂಡಲ್ಲಿ ನೋಡೋ ಇದ್ದೇ ಇರತ್ತೆ' ಎಂದರು ರಾಯರು.

'ಇಸ್ಪೀಟಾಟ ಗೊತ್ತಿಲ್ಲದೆ ಇದ್ದರೆ ಜೈಲಲ್ಲಿ ಹುಚ್ಚೇ ಹಿಡಿದು ಬಿಡ್ತಿತ್ತು ಮಾರಾಯರೇ' ಎಂದು ಅಡಿಗರಿಗೆ ಹೇಳಿದರು.

'ಮಳೆಗಾಲದಲ್ಲಿ ಮತ್ತೇನು ನಮಗೆ ಕೆಲಸ ಅಂತೀರಿ. ತಕಲೀಲಿ ನೂಲು ತೆಗೆಯೋದು ಅಥವಾ ಹಲಸಿನ ಹಪ್ಪಳ ಸುತ್ತ ತಿಂತಾ ಇಸ್ಪೀಟಾಡೋದು' ಎಂದು ಸುಬ್ರಾಯ ಅಡಿಗರು ನಕ್ಕರು.

ಎಲ್ಲದಕ್ಕೂ ಸೈ ಎನ್ನುವ ಜನ. ಆದರೆ ನಾನು ಯಾಕೆ ಹಾಗಲ್ಲವೆಂದು ಯೋಚಿಸುತ್ತ ಜಗನ್ನಾಥ ಇಸ್ಪೀಟು ಹುಡುಕಿದ. ಅದೂ ನಿಜವಲ್ಲ. ರಾಯರು ಮಿಲ್ ಬಟ್ಟೆ ಸುಟ್ಟವರಲ್ಲವೆ? ಅಡಿಗರು ದೇವರ ಬಗ್ಗೆ ಹುಚ್ಚಾಗಿದ್ದಿಲ್ಲವೆ? ಎಲ್ಲೆಲ್ಲೆಂದರೆ ಅಲ್ಲಲ್ಲಿ ತೊಡಗುವ ಜನರೆಂದರೇ ಬೇರೆ. ಪ್ರಾಯಶಃ ಅಮ್ಮ ಮಾತ್ರ ಹಾಗಿದ್ದರು. ಕರಾವು, ಊಟ, ಉಪಚಾರ, ಹಬ್ಬ-ಹರಿದಿನ, ನೆಂಟರಿಷ್ಟರಿಗೆ ಉಡುಗೊರೆ, ಹಾಡು-ಹಸೆಯಲ್ಲಿ ಅವರು ತಲ್ಲೀನರು. ಪ್ರಯೋಗಕ್ಕೆ ಪೂರ್ವದಲ್ಲಿ ಧ್ಯಾನ, ಧಾರಣ, ಸ್ಮರಣ, ಮನನ, ಅಧ್ಯಯನ, ಅನುಷ್ಠಾನ, ಸಿದ್ಧಿ ಎಂಬ ಹಂತಗಳಿವೆಯೆಂದು ಅಡಿಗರು ಹೇಳುತ್ತಾರೆ. ತಾನು ಯಾವ ಹಂತದಲ್ಲಿದ್ದೇನೊ?

ಗೂಡಲ್ಲಿ ಇಸ್ಪೀಟೆಲೆ ಇಲ್ಲ. ಮಾರ್ಗರೆಟ್‌ಗೆ ರಾಜಕೀಯ ಬೇಕು. ಮ್ಯೂಸಿಯಂಗೆ ಹೋಗಬೇಕು, ಒಳ್ಳೆ ಬಟ್ಟೆ ತೊಡಬೇಕು, ಹರಟೆ ಬೇಕು, ಕುತೂಹಲದಿಂದ ವಿಂಡೋ ಶಾಪಿಂಗ್ ಮಾಡುತ್ತ ಬೀದಿ ಬೀದಿಯಲೆಯಬೇಕು. ಆದರೆ ಒಂದೇ ಒಂದು

ಉದ್ದೇಶಕ್ಕೆ ನಾನು ಈಗ ಬದ್ಧನಾಗಿದ್ದೇನೆ.

ತಾಕತ್ತಿಲ್ಲದಿದ್ದರೆ ಯೋಗಭ್ರಷ್ಟರಾಗುತ್ತಾರೆಂದು ಅಡಿಗರು ಹೇಳುತ್ತಾರೆ. ಯೋಗಃ ಚಿತ್ತವೃತ್ತಿ ನಿರೋಧಃ-ಅಡಿಗರೇ ಹೇಳಿದ್ದು. ಒಂದೇ ಒಂದು ಪಾಯಿಂಟಿನ ಸುತ್ತ ನನ್ನ ಮನಸ್ಸು ಸುತ್ತುತ್ತೆ. ಆದರೆ ಈ ಕೇಂದ್ರದಲ್ಲಿ ಹೊಲೆಯರು ಜೀವಂತ ವ್ಯಕ್ತಿಗಳಾಗಿ ಇನ್ನೂ ನನಗೆ ಕಾಣುತ್ತಿಲ್ಲ. ಇಳಿ ಸಂಜೆಯ ಹೊತ್ತು ಬರುವ ಉದ್ದ ನೆರಳುಗಳು, ದೂರದಲ್ಲೆ ನಿಂತು ಆಲಿಸುವ ಕಪ್ಪು ದೇಹಗಳು. ಮತ್ತೆ ತಮ್ಮ ತಮ್ಮ ಗುಡಿಸಲುಗಳಿಗೆ ಹೋಗತಕ್ಕವು. ಅವು ಕುಡಿಯುವಾಗ ಏನು ಮಾಡುತ್ತಾವೆ, ರಾತ್ರೆ ಹೇಗೆ ಸಂಭೋಗಿಸುತ್ತಾವೆ, ಏನು ಯೋಚಿಸ್ತಾವೆ, ಮಕ್ಕಳನ್ನು ಹೇಗೆ ಮುದ್ದಿಸುತ್ತಾವೆ, ಹೇಗೆ ಅಳುತ್ತಾವೆ – ತಿಳಿಯದು. ಹೆಸರುಗಳೇ ಮರೆಯುತ್ತವೆ. ಯಾರು ಪಿಳ್ಳ, ಯಾರು ಕರಿಯ, ಯಾರು ಮುದ್ದ...

ತನ್ನ ಹೈಸ್ಕೂಲು ಕಾಲದ ಟ್ರಂಕಲ್ಲಿ ಇಸ್ಪೀಟೆಲೆಗಳು ಇರುಬಹುದೇ ಎಂದು ಅಮ್ಮನ ಕೋಣೆಗೆ ಹೋದ. ಹಿತ್ತಾಳೆಯ ಹಳೆಯ ಕಾಲದ ಟ್ರಂಕು, ಅದರ ಮೇಲೆ ನೆಗ್ಗಾದ ಗುರುತುಗಳು, ಶಿವಮೊಗ್ಗದ ತನಕ ತನ್ನ ಜೊತೆಗಿತ್ತು, ಮುಚ್ಚಳ ತೆಗೆದ. ಹೈಸ್ಕೂಲಲ್ಲಿ ಅವನು ಬರೆಯುತ್ತಿದ್ದ ನೋಟುಪುಸ್ತಕಗಳು. ಶೆಣೈ ಅಂಗಡಿಯಿಂದ ಪೇಪರ್ ತಂದು ರಟ್ಟು ಹಾಕಿ ಹೊಲಿದು ಕೊಡುತ್ತಿದ್ದ ಕೆಲಸ ರೈಟರ್ ಕೃಷ್ಣಯ್ಯನದು. ಆ ದಿನಗಳಲ್ಲಿ ತನ್ನ ಹತ್ತಿರ ಒಂದು ಉತ್ತರಮುಖಿ ಪೆನ್ ಇತ್ತು. ಆ ಮೇಲೆ ಬ್ಲಾಕ್‌ಬರ್ಡ್. ಅಮ್ಮ ಕೊಟ್ಟ ಶಾಲಿನ ವಿಷಯ ಹೇಗೆ ಮಾರ್ಗರೆಟ್ ಹಾಸ್ಯಮಾಡುತ್ತಿದ್ದಳು, ತೇಪೆ ಹಾಕಿ ನುಣುಪಾದ ಶಾಲು, ಕಾಶಿಯಿಂದ ಅಮ್ಮ ತಂದುಕೊಟ್ಟಿದ್ದು, ಈಗಲೂ ಅದನ್ನು ಹೊದ್ದು ಮಲಗುತ್ತೇನೆ.

ಜಗನ್ನಾಥ ನೋಟ್‌ಬುಕ್‌ನ್ನು ತಿರುವಿದ: ಕ್ಲೈವ್ ಬಗ್ಗೆ, ಪೇಜಿನ ಮೇಲೆ 'ಶ್ರೀ ಮಂಜುನಾಥ ಪ್ರಸನ್ನ' ಎಂದು ಬರೆದಿದ್ದ. ಇನ್ನೊಂದು ಪುಸ್ತಕದ ಮೇಲೂ ಶ್ರೀ ಮಂಜುನಾಥ ಪ್ರಸನ್ನ, ಖಾಲಿ ಜಾಗದಲ್ಲೆಲ್ಲ ಶ್ರೀ ಮಂಜುನಾಥ ಪ್ರಸನ್ನ, ಆಗ ಎಡಗಣ್ಣು ಅದುರಿದರೆ, ಎಡಗಾಲು ಎಡವಿದರೆ, ಪ್ರಶ್ನೆ ಪತ್ರಿಕೆಗೆ ಕೈಯೊಡ್ಡುವಾಗ ಮಂಜುನಾಥನ ಸ್ಮರಣೆ. ತಮಾಷೆಯೆಂದರೆ ಈಗಲೂ ನನಗೆ ಮಂಜುನಾಥನ ಸ್ಮರಣೆ. ರೀತಿ ಬೇರೆ ಅಷ್ಟೆ. ಪೆಟ್ಟಿಗೆಯ ಸಂದಿನಲ್ಲಿ ಇಸ್ಪೀಟ್ ಪ್ಯಾಕಿತ್ತು. ಕಿವಿ ಮಡಚಿದ ಎಲೆಗಳು. ರಾಯರಿಗೆ 'ಜಾರೋದೇ ಇಲ್ಲ. ಬಹು ಹಳೆಯದು' ಎಂದು ಕೂಗಿ ಹೇಳಿದ. 'ಆಗತ್ತೆ ಬಿಡು' ಎಂದರು ರಾಯರು.

ರಾಯರೇ ಮೂವರಿಗೂ ಎಲೆ ಹಂಚಿದರು. ಅಡಿಗರ ಹೊಟ್ಟೆ ಗೊಳ್ ಎಂದು ಶಬ್ದ ಮಾಡಿತು. 'ಹಸಿವಾಗ್ತ ಇರುಬಹುದಲ್ಲ? ಎಂದ ಜಗನ್ನಾಥ. 'ಇನ್ನರ್ಧ ಗಂಟೆ ಕಾಯಬಹುದು. ಪರವಾಯಿಲ್ಲ' ಎಂದರು ಅಡಿಗರು. ರಾಯರು ಆಟ ಹೇಳಿದರು. ಜಗನ್ನಾಥ ಒಂದು ಸಂಖ್ಯೆ ಮೇಲೇರಿಸಿದ. ಅಡಿಗರು 'ಬೇಡ' ಎಂದರು. 'ಟ್ರಂಪ್' ಎಂದು ಕೇಳಿದರು. ಜಗನ್ನಾಥ 'ಡೈಮಂಡ್' ಎಂದ. 'ಡಿಪ್' ಎಂದರು ರಾಯರು. 'ಎಸ್' ಎಂದು ಜಗನ್ನಾಥ ಡಿಪ್ ತೆಗೆದು ಮುಖ ಸಿಂಡರಿಸಿದ. 'ನಿಮ್ಮದು ಇಳಿತ' ಎಂದು ಅಡಿಗರಿಗೆ ಹೇಳಿದ.

'ನಿಮ್ಮ ಹಿರೇ ಮಗ ಏನು ಮಾಡ್ತ ಇದಾನೆ ಅಡಿಗರೆ?' ಜಗನ್ನಾಥ ಕೇಳಿದ.

'ಅದೊಂದು ಕಥೆ, ಇವಳಿಗೂ ನನ್ನ ಸೊಸೆಗೂ ಎಣ್ಣೆ ಸೀಗೆ. ನಿತ್ಯರಾದ್ಯಂತ. ಮಗನಿಗೂ ಪೌರೋಹಿತ್ಯ ಸೇರದು, ನಿನ್ನ

ಇಷ್ಟದಂತೆ ಮಾಡಯ್ಯ ಎಂದೆ. ಶಿವಮೊಗ್ಗದಲ್ಲಿ ಹೋಟೆಲು ಸೇರಿದ್ದಾನೆ. ಎರಡನೆಯವಳನ್ನು ಸಾಗರಕ್ಕೆ ಕೊಟ್ಟಿದ್ದೆನಲ್ಲ-ಗಂಡ ಸತ್ತು ಈಗ ಮನೆ ಸೇರಿದ್ದಾಳೆ. ಅವಳಿಗೆ ಮೂರು ಹೆಣ್ಣು. ನಾನೇ ಮದುವೆ ಮಾಡಬೇಕು. ನನ್ನ ಮಗಳಿಗೂ ಇವಳಿಗೂ ಸರಿಯಿಲ್ಲ. ಅಂತೂ ನಡೀತಿದೆ.'

ಅಡಿಗರು ವ್ಯಸನದಿಂದ ಹೇಳಿಕೊಂಡರು. ಆದರೂ ಮುಖದಲ್ಲಿ ನಗೆಯಿತ್ತು. ನೈಲಾ ತೂರಿಸಿಬಿಟ್ಟು ಹೇಳಿದರು:

'ನನಗೂ ಈಚೆಗೆ ಮೈಯಲ್ಲಿ ಸರಿಯಿಲ್ಲ ಜಗಣ್ಣ. ಹಿಂದಿನ ಹಾಗೆ ಸರ್ಕೀಟು ಮಾಡಲಾರೆ'.

ಆಟದಲ್ಲಿ ಸೋತವನು ಜಗನ್ನಾಥನೆ. ಚಿಕ್ಕಿ ಬಂದು ಊಟಕ್ಕೆ ಕರೆದರು. ಮೂವರು ಹೋಗಿ ಊಟಕ್ಕೆ ಕೂತರು. ಮನೆಯ ಅರ್ಚಕರು, ಅಡಿಗೆಯವರು, ಅವರ ಮಕ್ಕಳು – ಎಲ್ಲರ ಊಟ ಮುಗಿದದ್ದರಿಂದ ಈಗ ಊಟಕ್ಕೆ ಮೂವರೆ ಆದರು. ಮೂರು ಜನರಿಗೂ ಚೆನ್ನಾಗಿ ಹಸಿವಾಗಿತ್ತು.

* * *

ತುಂಬ ಸುಖದಿಂದ ಸಾರಿನ ಅನ್ನ ಊಟ ಮಾಡುತ್ತ ಅಡಿಗರು ಅದೂ ಇದೂ ಮಾತಾಡಿ ಕೊನೆಗೆ,

'ನಿಜವೋ ಜಗನ್ನಾಥ ನಾನು ಕೇಳಿದ್ದು' ಎಂದರು. ಜಗನ್ನಾಥ 'ನಿಜ' ಎಂದ. ಅಡಿಗರೇ ಮುಖ್ಯ ವಿಷಯಕ್ಕೆ ಬಂದರೆಂದು ಜಗನ್ನಾಥನಿಗೆ ಸಂತೋಷವಾಯಿತು.

'ನೋಡು ಜಗನ್ನಾಥ, ನೀನು ತಿಳಿದವನು. ಅಹಂಕಾರದಿಂದ ಮುಕ್ತರಾಗದ ಹೊರತು ಇಂತಹ ಕ್ರಿಯೆಗೆ ನಾವು ಕೈ ಹಾಕೋದು ಸರಿಯಲ್ಲ. ಯಾಕೆಂದರೆ ಇಡೀ ಊರಿನ ಭವಿಷ್ಯಾನ್ನೆ ಒಳಪಡಿಸೋ ಪ್ರಶ್ನೆ ಇದು.'

ಚಿಕ್ಕಿ ಮಾತು ಕೇಳುವ ಆಸಕ್ತಿಯಿಂದ ಬೋಂಡ ಬಡಿಸಲು ಬಂದರು. ಅಡಿಗರಿಗೆ ಪ್ರಿಯವಾಗಿದ್ದ ಹೀರೇಕಾಯಿ ಬೋಂಡ ಎಲ್ಲರ ಎಲೆಗಳ ಮೇಲೂ ಯಥೇಚ್ಛ ಬಿದ್ದವು. ಚಿಕ್ಕಿಗೆ 'ಸಾಕು', 'ಸಾಕು', ಎನ್ನುವ ಗಮನ ಮೂವರಿಗೂ ಉಳಿದಿರಲಿಲ್ಲ. ನಿಷ್ಠುರವಾಗಿ ಮಾತಾಡದಿದ್ದರೆ ಅಡಿಗರಿಗೆ ಅಪಚಾರ ಮಾಡಿದಂತೆನ್ನಿಸಿ ಜಗನ್ನಾಥ ಹೇಳಿದ:

'ನಿಮ್ಮ ವಾದ ಗೊತ್ತು ಅಡಿಗರೆ. ಅವಧೂತನಾದವನಿಗೆ ಮಾತ್ರ ಈ ಸಾಮಾಜಿಕ ಕಟ್ಟಳೆಗಳನ್ನ ಧಿಕ್ಕರಿಸೋ ಅಧಿಕಾರವಿರೋದು ಅಂತ ತಾನೇ ನೀವು ಹೇಳೋದು ?'

ಅಡಿಗರು ಹುಳಿಯನ್ನ ಕಲೆಸುತ್ತ, ಬೋಂಡ ಬಾಡಿಸಿಕೊಂಡು ತಿನ್ನುತ್ತ ಒಂದು ಕ್ಷಣ ಕಣ್ಣು ಮುಚ್ಚಿದ್ದು ಆಮೇಲೆ ತುಂಬ ಖಂಡಿತವಾಗಿ ಹೇಳಿದರು:

'ಹೌದು. ಅವಧೂತನಿಗೆ ನೈವೇದ್ಯವೂ ಒಂದೆ, ಅಮೇಧ್ಯವೂ ಒಂದೆ. ಸಮದರ್ಶಿ ಅವ. ಪರಮಹಂಸರಿಗೆ ಯಜ್ಞೋಪವೀತ ಹಾಕಿಕೊಂಡಿದ್ದೇನೆಂಬ ಅಹಂಕಾರವೂ ಅಡ್ಡ ಬಂತಂತೆ, ಕಿತ್ತೊಗೆದರು. ಎಸೆದ ಎಂಜಲೆಲೆಯಿಂದ ನಾಯಿ ಕಾಗೆಗಳ ಜೊತೆ ಅನ್ನ ಹೆಕ್ಕುವನನ್ನ ಗುರುವಾಗಿ ಕಂಡರು. ಅಂಥವರಿಗೆ ಮಾತ್ರ ಹೊಲೆಯನೇನು, ಬ್ರಾಹ್ಮಣನೇನು ?'

ಈ ಪರಿಚಿತ ವಾದಗಳು ಜಗನ್ನಾಥನನ್ನು ನಿಜವಾಗಿ ಕೆಣಕಲಿಲ್ಲ. ಆದರೆ ಅಡಿಗರ ಮಾತಿನ ಹಿಂದಿದ್ದ ಆವೇಶವನ್ನು ಗೌರವದಿಂದ ಕಂಡು ಏನು ಹೇಳಿದರೆ ಈಗ ಸರಿಯಾದೀತೆಂದು ಚಿಂತಿಸಿದ.

'ಅವಧೂತನಾಗದೆ ಯಾವ ಕ್ರಿಯೇನೂ ಸಾಧ್ಯ ಇಲ್ಲ ಅಂತ ನೀವು ಹೇಳೋದಾದರೆ ಈ ಸಾಮಾಜಿಕ ಜೀವನದಲ್ಲಿ ಸಂಸಾರಿಯಾಗಿ ಇದ್ದುಕೊಂಡು ಅರ್ಥಪೂರ್ಣವಾದ ಮೂಲಭೂತ ವಾದ ಯಾವ ಕ್ರಿಯೇನೂ ಮಾಡೋಕೆ ಸಾಧ್ಯವಿಲ್ಲ ಎಂದ ಹಾಗಾಯ್ತು. ಅಲ್ಲವೆ? ಅಂದರೆ ಸಮಾಜದ ಒಳಗೆ ಏನೂ ಅರ್ಥ ಇಲ್ಲ. ಅರ್ಥ ಇರೋದೆಲ್ಲ ಈ ಸಮಾಜಾನ್ನ ಮೀರಿ ನಿಂತ ಮೇಲೇ ಎಂದ ಹಾಗಾಯ್ತು.'

ರಾಯರು ಕುತೂಹಲದಿಂದ ತನ್ನ ಮಾತು ಕೇಳುತ್ತಿದ್ದರು. ಚಿಕ್ಕ ಜಿಲೇಬಿಯನ್ನ ಬಡಿಸಿದರು. ಸಾಕೆಂದು ಅಡಿಗರು ಕೈಯಡ್ಡ ಮಾಡಿದರೂ ಕೇಳದೆ ಅವರ ಕೈಯಡ್ಡವಾಗದ ಎಲೆಯ ಮೂಲೆ ಹುಡುಕಿ 'ನಿಮಗೆ ಪ್ರಿಯವಾದ್ದಲ್ಲವೆ?' ಎಂದು ಎರಡು ಜಿಲೇಬಿ ಹಾಕಿಬಿಟ್ಟರು. ಈ ದಾಕ್ಷಿಣ್ಯ ಉಪಚಾರಗಳ ಯುದ್ಧದಲ್ಲಿ ಅಡಿಗರಿಗೆ ಜಗನ್ನಾಥನ ಮಾತು ಕೇಳಿಸಿದಂತೆ ಕಾಣಲಿಲ್ಲ. ಜಿಲೇಬಿಯನ್ನು ಬಹಳ ಇಷ್ಟಪಟ್ಟು ತಿನ್ನುತ್ತ ಹೇಳಿದರು:

'ನೋಡು ಜಗಣ್ಣ ನನಗೆ ಜನಿವಾರವಿದೆ. ಇದು ನನ್ನ ಜೀವನೋಪಾಯದ ಲಾಂಛನ ಅಷ್ಟೆ, ಇದಿರೋದರಿಂದ ಪೌರೋಹಿತ್ಯಕ್ಕೆ ಕರೀತಾರೆ, ದೇವಸ್ಥಾನದಲ್ಲಿ ಸಾಮವೇದದ ಸೇವೇಗೆ ಕರೀತಾರೆ, ನೀಲಕಂಠೇಶ್ವರನ ಅರ್ಚನೆಗೆ ನೀನೇ ನೇಮಿಸಿದೀಯ. ಆದರೆ ದೇವರ ಕೈಯಲ್ಲಿ ಬಿದ್ದರೆ ನಾನು ಮಂಗಳಾರತೀಲಿ ಇರೋ ಕರ್ಪೂರದಂತೆ ಉರಿದು ಉರಿದು ಹೋಗ್ತೀನಿ. ಕರ್ಮಕ್ಕಂಟಿಕೊಂಡಿರೋ ತನಕ, ವ್ಯಾಮೋಹಿ ಆಗಿರೋ ತನಕ ಈ ಲೋಕದ ಆಚಾರ ಎಲ್ಲ ಬೇಕಾಗುತ್ತೆ, ಕೊನೇಲಿ ಏನೂ ಇಲ್ಲ.'

ಏನೋ ಪಾಯಿಂಟ್ ಮಾಡಲು ಹೋಗಿ ಅಡಿಗರು ಇನ್ನೇನೊ ಹೇಳಿಬಿಟ್ಟರು. ಅವರ ಮಾತಿನ ಕ್ರಮವೇ ಹಾಗೆ. ಭಾವನೆ ಬೀಸಿದತ್ತ ಅಲೆಯುವ ಮಾತುಗಳು. ಜಗನ್ನಾಥ ವ್ಯಂಗ್ಯವಾಗಿ ಮಾತಾಡಿ ಅಡಿಗರ ಗಮನವನ್ನು ಸೆಳೆಯಲು ನೋಡಿದ. ಹೃತ್ಪೂರ್ವಕವಾದ ಮಾತುಗಳೆಲ್ಲ ಅಡಿಗರ ಭೋಳೆ ಮನಸ್ಸಿನಲ್ಲಿ ಜಿಲೇಬಿಯಂತೆಯೇ ಹಿತವಾಗಿ ಕರಗಿಬಿಡುತ್ತವೆ ಅನ್ನಿಸಿದ್ದರಿಂದ.

'ಪುರಾಣ ಏನು ಹೇಳುತ್ತೆ ನೋಡಿ: ಬ್ರಹ್ಮರ್ಷಿ ವಸಿಷ್ಠ ಊರ್ವಶಿ ಅನ್ನೋ ಸೂಳೆ ಮಗ. ಈ ವಸಿಷ್ಠ ಅರುಂಧತಿ ಎನ್ನುವ ಹೊಲತೀನ್ನ ಮದುವೆ ಮಾಡಿಕೊಂಡ. ಮದುವೆಯಾಗೋ ವಧೂವರರು ಈ ಹೊಲತೀ ದರ್ಶನಾ ಮಾಡ್ಲೇಬೇಕು.

ಆದ್ದರಿಂದ ಎಂಥ ಕ್ರಾಂತಿಕಾರಕ ಧರ್ಮ ನಮ್ಮದು. ಅಲ್ವ ?' ಎಂದ.

ಹೌದು ಎನ್ನುವ ಹಾಗೆ ಅಡಿಗರು ಮತ್ತು ಚಿಕ್ಕಿ ತಲೆಹಾಕಿದ್ದು ನೋಡಿ ಜಗನ್ನಾಥನಿಗೆ ರೇಗಿತು:

'ಇದನ್ನೆ ನಾನು ಆತ್ಮ ವಂಚನೆ ಅನ್ನೋದು. ಭೋಳೆತನದಷ್ಟು ಅಪಾಯ ಇನ್ನೇನೂ ಇಲ್ಲ ಅಡಿಗರೆ. ಹೀಗೆಲ್ಲ ಹೇಳೋ ಧರ್ಮ ನಮ್ಮ ದೇಶಾನ್ನ ಏನು ಮಾಡಿದೆ ನೋಡಿ. ಇಷ್ಟೆಲ್ಲ ಕ್ರಾಂತಿಕಾರಕ ಕಥೆಗಳನ್ನ ಕಟ್ಟಿರೋ ದೇಶದಲ್ಲಿ ಸಮಾಜ ನೂರಾರು ವರ್ಷಗಳಿಂದ ಇದ್ದ ಹಾಗೇ ಇದೆಯಲ್ಲ ಅದಕ್ಕೇನು ಕಾರಣ ಹೇಳಿ. ಮೇಲಿನೂರು ಮೇಲೆ, ಕೆಳಗಿನೋರು ಕೆಳಗೇ ಉಳಿಯೋ ಹಾಗೆ ಬೆಣ್ಣೆ ಹಚ್ಚೋ ಕೆಲಸ ಮಾಡ್ತಾವೆ ಈ ಪುರಾಣಗಳು, ಈ ನಂಬಿಕೆಗಳು.'

ಸುಬ್ರಾಯ ಅಡಿಗರು ಸಿಟ್ಟಾಗಲಿಲ್ಲ. ರಾಯರು ಈ ಚರ್ಚೆಯಿಂದೇನೂ ಪ್ರಯೋಜನವಿಲ್ಲವೆನ್ನುವಂತೆ ಅನುಮಾನದಿಂದ ಜಗನ್ನಾಥನನ್ನು ದಿಟ್ಟಿಸುತ್ತ ಊಟ ಮುಗಿಸಿ ಕಾದರು. ಇನ್ನೊಂದೇ ಒಂದೇ ಎಂದು ಚಿಕ್ಕಿ ಬಡಿಸಿದ ಎರಡು ಜಿಲೇಬಿಗಳಲ್ಲಿ ಒಂದನ್ನು ಅಡಿಗರು ಎತ್ತಿಕೊಂಡರು. ಸಿಹಿ ಇಷ್ಟವಿಲ್ಲದ ಜಗನ್ನಾಥ ತನ್ನ ನಾಲ್ಕು ತುತ್ತು ಊಟದ ಕೊನೆಗೆ ಬಂದು ಎಷ್ಟೋ ಹೊತ್ತಾಗಿತ್ತು. ಇತ್ತೀಚೇಗೆ ಅವನು ಆದಷ್ಟು ಕಡಿಮೆ ಊಟ ಮಾಡುವ ಪ್ರಯೋಗದಲ್ಲಿದ್ದ. ಉಳಿದವರು ಊಟದ ಕೊನೆಗೆ ಬಂದಿದ್ದಾರೆಂಬ ಪರಿವೆಯಿಲಲ್ಲದೆ ಅಡಿಗರು ನಿಧಾನವಾಗಿ ಜಿಲೇಬಿ ಮುರಿದು ಬಾಯಿಗೆ ಹಾಕಿಕೊಳ್ಳುತ್ತ ಮಾತಾಡಿದರು :

'ನಾನು ಹೇಳೋದು ಅಷ್ಟೆ ಜಗನ್ನಾಥ. ನಿನಗೆ ನಿಜವಾಗಿ ಹೊಲೇರ ಮೇಲೆ ಪ್ರೀತಿ ಇದೆಯೊ? ಅಂಥಾ ಪ್ರೀತಿ ನಿಜವಾಗಿ ಬಂದರೆ ಆಗ ನೀನು ಪಶು ಪಕ್ಷಿ ಚಾಂಡಾಳರಲ್ಲಿ ತಾದಾತ್ಮ್ಯ ಪಡೆದು ಅವಧೂತನಾಗ್ತಿ. ಆಗ ಸಂಘರ್ಷದ ಮಾತೇ ಇಲ್ಲ. ಬಂಡಾಯ ಬೇಕೇ ಇಲ್ಲ. ತನ್ಮಯನಾಗಿ ಬದುಕ್ತಿ. ನಾನು ನೀನು ಅಂಥ ಅವಸ್ಥೆ ಮುಟ್ಟಿಲ್ಲಾಂತಲೇ ನಾನು ಹೇಳೋದು.'

ಅಡಿಗರು ಆವೇಶದಿಂದ ಮಾತಾಡಲು ಪ್ರಾರಂಭಿಸಿದ್ದರು. ಕೊನೆಯ ಜಿಲೇಬಿಯನ್ನು ಎತ್ತಿಕೊಂಡು ಹಾಗೆ ಹಿಡಿದು ಮಾತಾಡಿದರು:

'ಇಪ್ಪತ್ತು ವರ್ಷಗಳ ಕೆಳಗೆ ದೇವರು ಎಲ್ಲೆಲ್ಲೂ ನಿಂತು ನನ್ನನ್ನು ಕರೀತಿದ್ದ. ಕೆಲವು ಕ್ಷಣವಾದರೂ ನನಗೆ ಅನುಭವ ಆಗಿದ್ದಿದೆ – ಅಥವಾ ಅಹಂಕಾರ ನನ್ನ ಹತ್ರ ಈಗ ಹಾಗೆ ಮಾತಾಡಿಸ್ತ ಇದೆಯೋ ನಾಕಾಣೆ. ಈಗ ನಾನು ಹಾಗಿಲ್ಲ. ಸಿಟ್ಟು ವಿಪರೀತ. ಮೂಗಿನ ಮೇಲೇ ಸಿಟ್ಟು. ಒಮ್ಮೊಮ್ಮೊ ಇವಳನ್ನ ಹೊಡೀತೀನಿ. ಮಕ್ಕಳು ಅತ್ತರೆ ರೇಗತ್ತೆ. ಮನೆಗೆ ಹೋಗೋಕೇ ಮನಸ್ಸಾಗಲ್ಲ. ಅಲೆದುಕೊಂಡಿರೋಣ ಅನ್ನಿಸುತ್ತೆ. ಆಯಿತ? ವಿಪರೀತ ಆಸೆ ಬೇರೆ. ಹೊಟ್ಟೆ ಕೆಡುತ್ತೇಂತ ಗೊತ್ತಿದ್ದರೂ ಇಕೊ ಹೇಗೆ ಈ ಜಿಲೇಬಿನ ತಿಂತಾ ಇದೀನಿ ನೋಡು. ಯಾಕೆ ಹೇಳ್ದೆ ಅಂದ್ರೆ – ಏನು ಹೇಳಲಿಕ್ಕೆ ಹೊರಟಿದ್ದ ಮರ್ತೇ ಹೋಯ್ತು – ನಾವೆಲ್ಲ ಇರೋದು ಮಂಜುನಾಥನ ಗರ್ಭದಲ್ಲಿ -ಒಳ್ಳೇವ್ರ, ಕೆಟ್ಟೋವ್ರ, ನನ್ನಂಥ ಆಸೆಬುರುಕರು, ನಿನ್ನಂಥ ಧೀರರು, ನಮ್ಮ ರಾಯರಂಥ ನಿಸ್ವಾರ್ಥ ಕರ್ಮಯೋಗಿಗಳು, ಮನೆತನಾಂತ ಹಂಬಲಿಸೋ ನಿಮ್ಮ ಚಿಕ್ಕಿ – ಎಲ್ಲ.'

ಜಗನ್ನಾಥನಿಗೆ ಕೊನೆಯ ಮಾತು ಕೇಳಿ ನಗು ಬಂತು. ನಾನು ಆಡುವ ಯಾವ ಮಾತಿನಿಂದಲೂ ಪ್ರಯೋಜನವಿಲ್ಲವೆನಿಸಿತು.

ಆಡುತ್ತ ಆಡುತ್ತ ಅಡಿಗರು ಎತ್ತೆತ್ತಲೋ ಹೋಗಿಬಿಟ್ಟರು. ಆದರೂ ಜಗನ್ನಾಥನನ್ನು ಈಗಲೂ ಅವರ ಕೆಲವು ಮಾತುಗಳು ಮೋಹಿಸುತ್ತವೆ. ನಿಜ, ಹಿಂದಿನ ಅಡಿಗರಲ್ಲ. ಸೋತಿದ್ದಾರೆ. ಸ್ವಲ್ಪ ಜಾಳಾಗಿದ್ದಾರೆ. ಅಥವಾ ಹಿಂದೆಯೂ ಹೀಗೇ ಇದ್ದರೋ ಹೇಳಲಿಕ್ಕಾಗದು. ಮೊಸರಿಗೆ ಅನ್ನ ಬಡಿಸಲಿಕ್ಕೆ ಬಂದ ಚಿಕ್ಕಿಗೆ ಬೇಡ ಎಂದ. ರಾಯರು ಎಲ್ಲೆಯಲ್ಲೆ ಇದ್ದ ತುತ್ತು ಅನ್ನ ಸಾಕೆಂದರು. ಅವರ ಕೈ ಒಣಗಿತ್ತು. ಅಡಿಗರು ಸ್ವಲ್ಪ ಅನ್ನ ಹಾಕಿಸಿಕೊಂಡರು. ಜಗನ್ನಾಥ ಹೇಳಿದ:

'ನಾನು ಕ್ರಿಯೆಯ ಸಾಧ್ಯತೇನ್ನ ಹುಡುಕುತ್ತ ಇದೀನಿ ಅಡಿಗರೆ. ಯಾಕೆ ಹೇಳ್ಲ ? ನಮ್ಮಲ್ಲಿ ಏನಾಗಿದೆ ಅಂದ್ರೆ ಸಮಾಜದ ಹೊರಗಿರೋ ಅವಧೂತರು ಮಾತ್ರ ಪರಮಕ್ರಾಂತಿಕಾರರಾಗಲು ಸಾಧ್ಯವಾದ್ದರಿಂದ, ಸಮಾಜ ಜೀವನದೊಳಗೆ-'

ಅಡಿಗರು ಮಧ್ಯೆ ಪ್ರವೇಶಿಸಿದರು :

'ನೀನೂ ಅವಧೂತನಾಗಿಬಿಡ್ತಿ. ಎಲ್ಲ ಮೋಹಾನೂ ಕಳೆದುಕೊಂಡುಬಿಡ್ತಿ. ನೋಡು ಬೇಕಾದ್ರೆ, ಹಾಗಾಗ್ಲೇಬೇಕಾಗತ್ತೆ, ಇಲ್ದಿದ್ರೆ ಈ ದೇಶದಲ್ಲಿ ಏನೂ ನಡೆಯಲ್ಲ. ಗಾಂಧೀಜಿ ಕೊನೆಗೆ ಆಗಿದ್ದೇನು ? ನನಗೊಂದು ಕಥೆ ಗೊತ್ತಿದೆ. ಆಮೇಲೆ ಹೇಳ್ತೀನಿ, ಒರಿಸ್ಸಾದಲ್ಲಿ ನಾನು ಕೇಳಿಸಿ ಕೊಂಡಿದ್ದು. ತುಂಬ ಚಲೋ ಕಥೆ.'

ಎಂದು ಖುಷಿಯಾಗಿ ಏನನ್ನೋ ಯೋಚಿಸುತ್ತ ಅನ್ನ ಮೊಸರು ಕಲಿಸಿಕೊಂಡರು. ಹಸಿವಿಲ್ಲದವನಿಗೂ ಹಸಿವಾಗಬೇಕು – ಅಷ್ಟು ರುಚಿ ಸುಖಗಳಿಂದ ಅಡಿಗರು ಊಟ ಮಾಡುತ್ತಾರೆಂಬುದನ್ನು ಜಗನ್ನಾಥ ಗಮನಿಸಿದ.

ನೀರು ಬಡಸಲೆಂದು ಹೊಳೆಯುವ ತಾಮ್ರದ ಚೊಂಬು ಹಿಡಿದು ಮೂಲೆಯಲ್ಲಿ ನಿಂತಿದ್ದ ಚಿಕ್ಕಿ ಹೇಳಿದರು:

'ಹಾಗಾದರೆ ನೀನು ಹೇಳೋದು ಏನು ಜಗಣ್ಣ ? ಪೂಜಿಸಿದರೆ ದೇವರು, ಪೋಷಿಸಿದರೆ ಮಕ್ಕಳು, ಪಾಲಿಸಿದರೆ ಪ್ರಜೆಗಳು ಅನ್ನೊ ಗಾದೆ ಸುಳ್ಳೂಂತಲ ?'

ತಾನು ಆಡುತ್ತಿದ್ದಕ್ಕೂ ಚಿಕ್ಕಿ ಹೇಳಿದ್ದಕ್ಕೂ ಸಂಬಂಧವಿಲ್ಲವೆನ್ನಿಸಿ ಜಗನ್ನಾಥ ಏನು ಹೇಳಬೇಕು ತೋಚದೆ ಸುಮ್ಮನಾದ. ಚಿಕ್ಕಿ ಮತ್ತೆ ಹೇಳಿದರು:

'ಮದುವೆ ಮಾಡಿಕೊಂಡರೆ ಎಲ್ಲ ಸರಿಹೋಗುತ್ತೆ. ನಿನ್ನ ಅಮ್ಮ ಬದುಕಿದ್ದರೆ ಇವಕ್ಕೆಲ್ಲ ಅವಕಾಶಾನೇ ಇರ್ತ ಇರಲಿಲ್ಲ' ಎಂದು ನೀರು ಬಡಿಸಿ, ಒಳಗಿನಿಂದ ಇನಷ್ಟು ಶಾವಿಗೆ ಖೀರು ತಂದರು. ಎಲ್ಲರೂ ಬೇಡ ಬೇಡ ಎಂದರೂ ಕೇಳದೆ ದೊನ್ನೆಯಲ್ಲಿ ಸ್ವಲ್ಪ ಸ್ವಲ್ಪ ಬಡಿಸಿದರು.

'ಜಗಣ್ಣ ಈಚೇಗೆ ಸರಿಯಾಗಿ ಊಟ ಮಡೋದೂ ಇಲ್ಲ ನೋಡಿ' ಎಂದು ದೂರಿದರು.

ಇಷ್ಟು ಹೊತ್ತು ಸುಮ್ಮನಿದ್ದ ರಾಯರು ಹೇಳಿದರು :

'ಚಿಕ್ಕಿ ಹೇಳಿದ್ದರಲ್ಲಿ ಸತ್ಯವಿದೆ. ಮಂಜುನಾಥನ ಕೀರ್ತಿ ಯಾಕೆ ಬೆಳ್ದಿದೆ ಅಂದ್ರೆ, ನೂರಾರು ವರ್ಷಗಳಿಂದ ಕೋಟ್ಯಾಂತರ ಜನರ ಅತ್ಯಂತ ಆಪ್ತ ಸುಖದುಃಖಾನ್ನ ಅವನು ಕೇಳಿದಾನೆ. ಅವನು ಕೇಳಿದಾನೇಂತ ನಾನು ಹೇಳೋದಲ್ಲ. ಕೇಳ್ತಾನೇಂತ ಜನ ತಿಳ್ಕೊಂಡು ಬದುಕಿದಾರೆ, ಯಾಕೇಂದ್ರೆ ನನಗೆ ನಂಬಿಕೆಯಿಲ್ಲ.'

'ಅಂಥ ನಂಬಿಕೆ ನಾಶವಾದಾಗ್ಲೇ...'

'ಅಂಥ ಒಂದು ನಂಬಿಕೆ ಅಗತ್ಯ ಮನುಷ್ಯಸ್ವಭಾವದಲ್ಲಿ ಇರೋ ತನಕಾನೂ-'

'ಅಂದರೆ ಈ ನೆಲದಲ್ಲಿರೋ ತಾಮ್ರಾನ ಅಗೆದು ತೆಗೆಯೋದ್ರಿಂದ, ಊರಿಗೆ ಎಲೆಕ್ಟ್ರಿಸಿಟಿ ಬರೋದ್ರಿಂದ, ಆಸ್ಪತ್ರೆಗೆ ಎಕ್ಸ್‌ರೇ ಪ್ಲಾಂಟ್ ತರಿಸೋದ್ರಿಂದ, ಅಂದರೆ ಕ್ರಮೇಣ ವೈಜ್ಞಾನಿಕ ದೃಷ್ಟಿ ಬೆಳೆಯೋದ್ರಿಂದ ಈ ನಂಬಿಕೆ ಅಗತ್ಯ ತನಗೆ ತಾನೇ-'

'ಹೋಗಲ್ಲ ಕಣಯ್ಯ ಜಗಣ್ಣ – ಹೋಗಲ್ಲ. ರಷ್ಯದಲ್ಲಿ ದೇವರನ್ನ ನಾಶ ಮಾಡಿದ್ರು, ಏನಾಯ್ತು? ಸ್ಟಾಲಿನ್ನೇ ದೇವರಾದ -ಅಲ್ವ?'

'ಹೀಗೆ ವಾದ ಮಾಡೋದು ಸ್ಕೂಲ್ ಡಿಬೇಟ್ ಆಗುತ್ತೆ ಅಷ್ಟೆ. ಒಂದಲ್ಲ ಒಂದು ದಿನ ಸಾಯಬೇಕಾದ ನಾವು ಏನು ಮಾಡಿ ಪ್ರಯೋಜನಾಂತ ಹೇಳಿದಂತೆ ಆಗತ್ತೆ.'

ಇಬ್ಬರ ಕೈಯೂ ಒಣಗುತ್ತಿತ್ತು. ಇನ್ನೇನು ಏಳಬೇಕೆನ್ನಿಸುವಷ್ಟರಲ್ಲಿ ಅಡಿಗರು ಮಾತಿಗೆ ಶುರುಮಾಡಿದರು :

'ನಾನು ಕೊನೇಲಿ ಹೇಳೋದು ಇಷ್ಟೆ. ತೀವ್ರತೆ ಇಲ್ದೆ ಇದ್ರೆ ಬದುಕಿದ್ದರೂ ಸತ್ತಿದ್ದ ಹಾಗೆ. ಪರಮಹಂಸರು ಪಾದದಲ್ಲಿ ಮುಟ್ಟಿದಾಗ ವಿವೇಕಾನಂದರಿಗೆ ಕಾಲಿನ ಬುಡದ ನೆಲಾನೇ ಕುಸಿಯೋ ಹಾಗಿ ಆಗಿ ಭೀತಿ ಹುಟ್ಟಿತಂತೆ. ದೇವರ ಕೈಯಲ್ಲಿ ಬಿದ್ದಾಗ ನಾವು ಹಾಗೆ ಉರೀತಾ ಇರ್ತೀವಿ, ಅಲುಗಾಡಿ ಹೋಗ್ತೀವಿ. ಅಂಥ ತಲ್ಲಣಾನ್ನ ಒಂದಲ್ಲ ಒಂದು ಸಲ ಅನುಭವಿಸದೆ ಇದ್ರೆ ಎಲ್ಲ ವ್ಯರ್ಥ. ನಿಜ – ಭಯಂಕರವಾದ ಭೀತಿ ಹುಟ್ಟತ್ತೆ. ಎಲ್ಲ ಕಳಚಿಕೋತಾ ಕಳಚಿಕೋತಾ ಹೋದ ಹಾಗೆ ಆಗತ್ತೆ, ರೋಮಹರ್ಷವಾಗತ್ತೆ. ಹೀಗೆ ಸೃಷ್ಟೀಲಿ ಕರಗಿ ಹೋಗೋವಾಗ ನಾನು ಪ್ರತ್ಯೇಕ ವಸ್ತು ಅನ್ನೋ ಭಾವನೆ ಮಾಯವಾಗಬೇಕಲ್ಲ, ಅದೇ ನೋಡಿ ಬಹಳ ಕಷ್ಟ. ಗೋವಿಂದ ಗುರುಗಳೂಂತ ಒಬ್ಬರು ಬದರಿಕಾಶ್ರಮದಲ್ಲಿ ಇದನ್ನೆ ನನಗೆ ಹೇಳಿದ್ದರು : ' ಆ ತನಕ ಹೋಗ್ತೀನೋ ಅಡಿಗ. ಆದರೆ ಆಗ ನನಗೆ ಭಯವಾಗಿಬಿಡತ್ತೆ, ಒದ್ದಾಡಿಕೋತ ಈಚೆ ದಡಕ್ಕೆ ಬಂದು ಬಿದ್ದಿರ್ತೀನಿ' ಅಂತ. ಈಗ ಜಗಣ್ಣನಿಗೆ ತೀವ್ರತೆ ಇದ್ದರೆ, ಅವನ ಮನಸನ್ನ ದ್ವೇಷದಲ್ಲಾದ್ರೂ ಮಂಜುನಾಥ ಕವಿದುಕೊಂಡಿದ್ರೆ ಅವನು ಪುಣ್ಯಶಾಲಿ ಅಂತಲೇ ನಾನು ಹೇಳೋದು. ಒಪ್ಪೋದು ಬಿಡೋದು ಮುಖ್ಯವಲ್ಲ. ಆ ದಿಗಿಲು ಆ ಸಂಕಟ ಜಗಣ್ಣನಿಗೂ ಆಗೇ ಆಗತ್ತೆ. ಅಹಂಕಾರ ನಿವೃತ್ತಿ ಆಗ್ಲೇಬೇಕಾಗತ್ತೆ.

ಜನ್ಮನಾ ಜಾಯತೇ ಶೂದ್ರಃ
ಕರ್ಮಣಾ ಜಾಯತೇ ದ್ವಿಜಃ
ವೇದಪಾರಾಯಣಾತ್ ವಿಪ್ರಃ
ಬ್ರಹ್ಮಜ್ಞಾನೇತಿ ಬ್ರಾಹ್ಮಣಃ

ಅಂತಾರಲ್ಲ ಯಾಕೆ? ಅಬ್ಬಬ್ಬ ಅಂದ್ರೆ ನಾವೆಲ್ಲ ದ್ವಿಜರು ಅಷ್ಟೆ. ಧ್ಯಾನ ಧಾರಣ ಮಾನನದಿಂದ ಜಗಣ್ಣ ವಿಪ್ರಾವಸ್ಥೆ ಮುಟ್ಟಿರಬಹುದು. ಕ್ರಿಯೆಯ ಮುಖಾಂತರ ಅವನು ಮಂಜುನಾಥನಿಗೂ ಜನರಿಗೂ ಇರೋ ಸಂಬಂಧಾನ್ನ ಬದಲಾಯಿಸಲಿಕ್ಕೆಂತ ಹೊರಟಿದಾನೆ. ಈ ಬದಲಾಯಿಸೋ ಭರಾಟೇಲಿ ಎಲ್ಲ ತಿಳಿತಾನೆ. ತಿಳಿಯಾಗ್ತಾನೆ. ಒಟ್ಟಾರೆ ಹೇಳೋದಾದ್ರೆ ಏನೋ ಬಿಡಿಸಿಕೊಂಡು ಬರೋಕೆ ಅವನ ಒಳಗಿರೋದು ಏನೋ ಒದ್ದಾಡ್ತಾ ಇದೆ. ಗರ್ಭದಲ್ಲಿರೋ ಶಿಶು ತಾಯಿ ಹೊಟ್ಟೇನ ಒಡೆಯೋ ಹಾಗೆ ಇವ ಮಂಜುನಾಥನ್ನ ಒದೀತಾ ಇದಾನೆ. ಸತ್ತ ಪಿಂಡವಲ್ಲವಲ್ಲ. ಒದೀಲಿ ಬಿಡಿ. ಮಂಜುನಾಥನಿಗೆ ಇದು ಅಂಗಾಂಗದಲ್ಲೆಲ್ಲ ಪುಳಕವಾಗೋ ಸೇವೆ. ಆಯಿತ?'

ಅಡಿಗರು ಕಣ್ಣು ಮುಚ್ಚಿ ಅಮಲಿನಿಂದ ಮಾತಾಡಲು ಶುರು ಮಾಡಿದ್ದರು. ಜೊತೆಗೆ ದ್ರಾಕ್ಷಿ ಗೋಡಂಬಿಗಳನ್ನು ಶಾವಿಗೆ ಖೀರಿನಿಂದ ಆರಿಸಿ ಬಹಳ ಸುಖದಿಂದ ತಿನ್ನುತ್ತಿದ್ದರು. ಅವರ ಕೆಲವು ಮಾತುಗಳು ಗೊಡ್ಡು ಬ್ರಾಹ್ಮಣ ಸಹ ಆಡಬಲ್ಲಂಥವು; ಇನ್ನು ಕೆಲವು ಆವೇಶದಿಂದ ಮಿಂಚುವಂಥವು. ಪ್ರೀತಿ ದಿಗಿಲುಗಳಿಂದ ಅಡಿಗರ ಮಾತು ಕೇಳುತ್ತಿದ್ದ ಜಗಣ್ಣ ಇನ್ನೇನು ಬಹಳ ಸಲೀಸಾದ ಮಾತುಗಳಲ್ಲಿ ಅಡಿಗರ ಆವೇಸವೆಲ್ಲ ದ್ರವವಾಗಿ ಬಿಡುವುದನ್ನು ಕಾದ.

'ಭ್ರಾಂತಿ. ಯಾವುದು ಭ್ರಾಂತಿ? ಯಾವುದು ನಿಜ? ಮಂಜುನಾಥನ್ನ ನಂಬಿ ಜನ ಭ್ರಾಂತೀಲಿ ಬದುಕ್ತಿದಾರೆ, ಅವರನ್ನ ಎಚ್ಚರಿಸ್ತೇನೆ, ಸಂಕಟದ ಮೂಲಕ ಅವರು ಎಚ್ಚರಾಗ್ತಾರೆ ಅಂತ ಜಗನ್ನಾಥ ಹೇಳ್ತಾನೆ. ನಿನ್ನೆ ನಿದ್ದೇಲಿ ಕಂಡ ಕನಸು ಈಗಿನ ಎಚ್ಚರದಲ್ಲಿ ಭ್ರಾಂತಿ ಅನ್ನಿಸುತ್ತೆ. ನಾಳಿನ ತಿಳುವಳಿಕೆಲಿ ಇವತ್ತಿನ ಎಚ್ಚರ ಭ್ರಾಂತಿ ಅನ್ನಿಸುತ್ತೆ. ಈ ತಿಳುವಳಿಕೆ ದಾಟಿದ ದರ್ಶನವಾದಾಗ ಯಾರು ದೇವರು, ಯಾರು ದ್ವಿಜ, ಯಾರು ಹೊಲೆಯ...'

ಮಾತು ಬದಲಾಯಿಸಲು ರಾಯರು ಹೇಳಿದರು...'

'ಚಿಕ್ಕಿ ಹೇಳಿದ್ದನ್ನ ಅಷ್ಟು ಸುಲಭವಾಗಿ ತೆಗದು ಹಾಕಬೇಡ. ಹೆಂಡತಿ ಮಕ್ಕಳು ಇದ್ದವನಿಗೆ ಜವಾಬ್ದಾರಿ ಅರ್ಥವಾಗತ್ತೆ. ಈ ಜವಾಬ್ದಾರಿ ನಿರ್ವಹಿಸುವಾಗಲೂ ನೀನು ಹೇಳೋ ಕ್ರಿಯೆ ಸಾಧ್ಯವಾದರೆ ಮಾತ್ರ ಅದಕ್ಕೆ ಅರ್ಥ. ಹೆಂಡತಿಯ ಜೊತೆ ಬದುಕೋದೂಂದ್ರೇನು, ಮಕ್ಕಳನ್ನ ಸಾಕೋದೂಂದ್ರೇನು ತಿಳೀದೇನೆ ಕ್ರಾಂತಿ ಅಂದರೆ ಪ್ರಯೋಜನವಿಲ್ಲ. ಸುಖದುಃಖದ ಪರಿಚಯವಿಲ್ದೆ ಇದ್ರೆ ಯಾರಿಗಾಗಿ ಯಾಕಾಗಿ ಕ್ರಾಂತಿ ಮಾಡಬೇಕು ಹೇಳು. ಗಾಂಧೀಜಿ ಮಾಡಿದ ಕ್ರಾಂತಿಯಿಂದ ಎಂಥ ಭ್ರಷ್ಟ ಜನರು ಅಧಿಕಾರಕ್ಕೆ ಬಂದ್ರು ನೋಡು.'

ಚರ್ಚೆ ಹೀಗೆ ಸಾಗಿದರೆ ಆಟವಾಗಿ ಬಿಡಬಹುದೆಂದು ಗಾಬರಿಯಾಗಿ ಜಗನ್ನಾಥ ಎದ್ದು ನಿಂತ. ಮೂವರೂ ಬಚ್ಚಲಿಗೆ ಹೋದರು. ಅಡಿಗರಿಗೆ ನೀರು ತುಂಬಿದೆ ಚೊಂಬು ಕೊಟ್ಟ. ಅವರು ಕೈ ತೊಳೆದು ಪಾಣಿಪಂಚೆಯಿಂದ ಒರಸಿಕೊಂಡು ಬಚ್ಚಲಿಂದ ಹೊರಬಂದು ಕಾದರು. ಅವರ ಮುಖದಲ್ಲಿ ಆವೇಗ ಏರಿತ್ತು. ತಾನು ಹೊರಗೆ ಬರಲು ಅಡಿಗರು ಕಾದಿದ್ದಾರೆಂದು ಜಗನ್ನಾಥನಿಗೆ ತಿಳಿಯಿತು. ಅವರೇನು ಹೇಳಬೇಕೆಂದಿದ್ದಾರೆ ಎನ್ನುವುದನ್ನು ಎದುರು ನೋಡುತ್ತ ಜಗನ್ನಾಥ ಹೊರಗೆ ಬಂದ. ರಾಯರು ಎಲೆಯಡಿಕೆ ಹಾಕುವ ಅವಸರದಲ್ಲಿ ಮಹಡಿ ಹತ್ತಿ ಹೋದರು.

ಜಗನ್ನಾಥ ಅಡಿಗರ ಪಕ್ಕದಲ್ಲಿ ನಿಂತ. ಅಡಿಗರು ಮಾತಾಡದೆ ಒಳಗಿನ ಸಂತೋಷವನ್ನೆಲ್ಲ ವ್ಯಕ್ತಪಡಿಸುವಂತೆ ಆರ್ದ್ರ ಕಣ್ಣುಗಳಿಂದ ಜಗನ್ನಾಥನನ್ನು ದಿಟ್ಟಿಸಿ ನೋಡಿದರು. ಹಾಳುಬಿದ್ದ ಬಸ್ತಿಯ. ಎದುರು ಕಲ್ಲಿನ ಮೇಲೆ ಕೂತಿದ್ದಾಗ ಅವರು ಮಾಡಿದ್ದು ನೆನಪಾಗಿ ಜಗನ್ನಾಥನಿಗೆ ದಿಗಿಲಾಯಿತು.

‘ಜಗಣ್ಣ, ನೀನೊಬ್ಬ ಗುಪ್ತ ಭಕ್ತ.’

ಜಗನ್ನಾಥ ನಕ್ಕ. ಅಡಿಗರು ಎಂಥ ಭೋಳೆ ಎಂದುಕೊಂಡ. ಅವನ ಬೆನ್ನಿನ ಮೇಲೆ ಅಡಿಗರು ಸಲಿಗೆಯಿಂದ ಕೈಯಿಟ್ಟರು. ಗಂಧ ಹಚ್ಚಿದ ಅವರ ಬರಿಮೈ ಅವನ ಶರ್ಟಿಗೆ ಸೋಕಿತು. ಅವನನ್ನು ತಬ್ಬುವ ಹಾಗೆ ಅವರ ಕೈ ಬೆನ್ನನ್ನು ಬಳಸಿತು. ಕತ್ತಿನ ಮೇಲೆ ಸಿಬ್ಬ, ಪರವಶನಾಗಿ ಹೊಳೆಯುವ ಕಣ್ಣುಗಳು. ಜಗನ್ನಾಥನಿಗೆ ಮುಜುಗರವಾಗಿ ಕಸಿವಿಸಿಯಾಗಿ ನಗಲು ಪ್ರಯತ್ನಿಸಿ ‘ಮೇಲೆ ಬನ್ನಿ’ ಎಂದ.

ರಾಯರು ಸುಸ್ತಾಗಿ ಚಾಪೆ ಮೇಲೆ ಕಣ್ಣುಮುಚ್ಚಿ ಮಲಗಿದ್ದರು. ಅಡಿಗರು ವೀಳ್ಯ ಹಾಕಿಕೊಳ್ಳುತ್ತ ಖುಷಿಯಲ್ಲಿ ತಾವು ಹೇಳಬೇಕೆಂದಿದ್ದ ಕತೆ ಪ್ರಾರಂಭಿಸಿದರು:

‘ಯೋಗಃ ಚಿತ್ತವೃತ್ತಿ ನಿರೋಧಃ. ಏಕಾಗ್ರತೇ ಮಹಿಮೇನ್ನ ಹೇಳೋ ಕಥೆ ಇದು. ಗೋಸಾಯಿಯೊಬ್ಬ ಒರಿಸ್ಸಾದಲ್ಲಿ ನನಗೆ ಹೇಳಿದ್ದು. ಚಿಕ್ಕಿ ಎದುರು ಹೇಳಕ್ಕಾಗಲ್ಲ ಅಂತ ಆಗ ನಾನು ನಿನಗೆ ಹೇಳ್ಲಿಲ್ಲ.

‘ಒಂದಾನೊಂದು ಕಾಲದಲ್ಲಿ ಒಬ್ಬ ಹೊಲೆಯನಿದ್ದ. ಅವನಿಗೆ ಅರಮನೇಲಿ ಕಕ್ಕಸ ಎತ್ತೋ ಕೆಲಸ. ಅರಮನೆ ಅಂದಮೇಲೆ ಹೇಳಬೇಕ? ಎತ್ತರವಾದ ಕಕ್ಕಸಗಳು. ಒಂದು ದಿನ ಅವ ಕಕ್ಕಸ ಎತ್ತಕ್ಕೆ ಹೋಗಿದ್ದಾಗ ರಾಣಿ ಕೂತಿದ್ದಳು. ಹೊಲೆಯ ಕಕ್ಕಸದ ಹೊರಗೆ ನಿಂತು ಬಗ್ಗಿದಾಗ ರಾಣಿಯ ಯೋನಿಪ್ರದೇಶವನ್ನು ಗುದ ಪ್ರದೇಶವನ್ನೂ ನೋಡಿ ಅವಾಕ್ಕಾದ. ಅವನು ಇಡೀ ಜನ್ಮದಲ್ಲಿ ಗೌರವರ್ಣದ ಸ್ತ್ರೀಯ ಆ ಭಾಗಗಳನ್ನ ನೋಡಿದ್ದೇ ಇಲ್ಲವಾದ್ದರಿಂದ ಹಗಲೂ ರಾತ್ರೆ ಅವನಿಗೆ ಅದೇ ಧ್ಯಾನವಾಗಿ ಬಿಟ್ಟಿತು. ರಾಣಿಯ ಬೆತ್ತಲೆ ಮೈ ಹೇಗಿರುತ್ತೇಂತ ಕಲ್ಪಿಸಿಕೋತ ಅವ ಅನ್ನ ಬಿಟ್ಟ, ನೀರು ಬಿಟ್ಟ, ನಿದ್ದೆ ಬಿಟ್ಟ, ಸ್ನಾನ ಬಿಟ್ಟ, ಅವನ ಮುಖ ಬತ್ತಿತ್ತು, ಕಣ್ಣು ಗುಳಿಬಿದ್ದವು, ಗಡ್ಡ ಬೆಳೀತು. ತಲೆಗೂದಲು ಜಟೆಯಾಯಿತು. ಹೊಲೆಯನ ಹೆಂಡತಿಗೆ ಗಾಬರಿಯಾಯಿತು. ತನ್ನ ಗಂಡ ಯಾಕೆ ಹೀಗೆ ಕೃಶ ಆಗಿದಾನೆ ತಿಳೀದೆ ಕಾರಣ ಹೇಳೂಂತ ಅವನನ್ನ ಕಾಡಿದಳು. ಬೇಡಿದಳು. ಒಂದು ದಿನ ಅವ ಹೀಗೆ ಹೀಗೆ ಆಯ್ತು ಅಂತ ಹೇಳಿದ. ಹೆಂಡತಿ ಬಹಳ ದಿನ ಯೋಚಿಸಿದಳು. ಗಂಡನ ಪ್ರಾಣ

ಉಳಿಯೋದು ಎಲ್ಲಕ್ಕಿಂತ ಮುಖ್ಯ ಅಂತ ಅವಳಿಗೆ ಧೈರ್ಯ ಬೆಳೀತು. ಕೊನೇಗೊಂದು ದಿನ ಹೇಗೋ ಮಾಡಿ ರಾಣೀನ್ನ ನೋಡೇಬಿಟ್ಟಳು. ರಾಣಿ ಅವಳ ಕಥೇನ್ನ ಕೇಳಿ ನಕ್ಕಳು. ಆಗಲಿ ಅಂದಳು. ನಿನ್ನ ಗಂಡನ್ನ ಕರ್ಕೊಂಬಾ, ನನ್ನ ಇಡೀ ದೇಹಾನ್ನ ಅವನು ಬೆತ್ತಲೆ ನೋಡಬಹುದಂತೆ ಅಂತ ಅನ್ನು ಅಂದಳು. ಹೊಲೆಯ ಬಂದ. ನಿಂತ. ನೋಡಿದ. ಬೆತ್ತಲಾಗಿ ರಾಣಿ ನಿಂತಿದ್ದಾಳೆ. ಆದರೆ ಆಶ್ಚರ್ಯ ಅಂದರೆ ಅವನ್ನೇ ಧ್ಯಾನಿಸಿ ಧ್ಯಾನಿಸಿ ರಾಣಿ ಬೆತ್ತಲೆ ದೇಹಾನ್ನ ನೋಡೋ ಹೊತ್ತಿಗಾಗಲೇ ನೋಡಬೇಕೆನ್ನೊ ಮೋಹದಿಂದ ಅವ ಪಾರಾಗಿಬಿಟ್ಟಿದ್ದ. ಯೋಗಿಯಾಗಿಬಿಟ್ಟಿದ್ದ. ಜಟೆ ಗಡ್ಡಗಳು ಬೆಳೆದ ಹೊಲೆಯನನ್ನ ರಾಣಿ ನೋಡಿದಳು. ಬೆತ್ತಲೆ ರಾಣೀನ್ನ ಹೊಲೆಯ ನೋಡಿದ. ಅವಳ ಪಾದ ಮುಟ್ಟಿ ಹೊಲೆಯ ನಮಸ್ಕಾರ ಮಾಡಿದ. ಹೊಲೆಯನ ಪಾದ ಮುಟ್ಟಿ ರಾಣಿ ನಮಸ್ಕಾರ ಮಾಡಿದಳು.'

'ನಾನು ಹೇಳ್ತ ಇದ್ದ ಮಾತಿನ ತಾತ್ಪರ್ಯ ಎಲ್ಲ ಈ ಕಥೆಲಿದೆ, ನಿನಗೆ ಇದರ ಅರ್ಥ ಕ್ರಮೇಣ ಹೊಳೆಯುತ್ತೆ'.

ಅಡಿಗರು ಮತ್ತು ರಾಯರು ಚಾಪೆ ಹಾಸಿ ಸ್ವಲ್ಪ ಹೊತ್ತು ಮಲಗಿ ಕಾಫಿ ಕುಡಿದು ಹೊರಟುಹೋದಿದ್ದರು. ಜಾತ್ರೆ ದಿನ ಜಗನ್ನಾಥನ ಮನೆಗೆ ಬರಬಹುದಾದ ನೂರಾರು ಯಾತ್ರಿಕರಿಗಾಗಿ ಅಡಿಗರು ತಂದ ಒಣಗಿದ ಬಾಳೆಲೆ ಕಟ್ಟುಗಳನ್ನೂ ದೊನ್ನೆಗಳನ್ನೂ ಚಿಕ್ಕಿ ಕೊಂಡಿದ್ದರು. ಆದರೆ ತಮ್ಮಲ್ಲಿಗೆ ಯಾರಾದರೂ ಇನ್ನು ಮುಂದೆ ಊಟಕ್ಕೆ ಬರುವುದುಂಟೆ ಎಂದು ದುಃಖಿಸುತ್ತ ಜಗಣ್ಣನಿಗೆ ಬುದ್ಧಿ ಹೇಳುವಂತೆ ಅಡಿಗರನ್ನು ಬೇಡಿದ್ದಳು. ಕಾಲಾಯ ತಸ್ಮೈ ನಮಃ ಎಂದು ಸಮಾಧಾನ ಹೇಳಿದ ಅಡಿಗರಿಗೆ 'ನಿಮ್ಮ ಮಕ್ಕಳಿಗೆ ಕೊಡಿ' ಎಂದು ಬಾಳೆಲ್ಲಿ ಜಿಲೇಬಿ ಕಟ್ಟಿಕೊಟ್ಟರು.

ಇಬ್ಬರೂ ಹೋದ ಮೇಲೆ ಜಗನ್ನಾಥ ಆತುರದಿಂದ ಹೊಲೆಯರ ಯುವಕರಿಗಾಗಿ ಕಾದ. ಚಾವಡಿಯಲ್ಲಿ ಕುರ್ಚಿಯ ಮೇಲೆ ಕೂತು ಇವತ್ತು ಬಂದವರು ತನ್ನನ್ನು ಮುಟ್ಟುವರೋ ನೋಡಬೇಕು ಅಂದುಕೊಂಡ. ಈ ತನಕ ಆ ಬಗ್ಗೆ ತಾನು ವಿಚಾರ ಮಾಡಲೇ ಇಲ್ಲವಲ್ಲ ಎನ್ನಿಸಿತು. ಮರಳಿನಲ್ಲಿ ಅಕ್ಷರ ಕಲಿಯುತ್ತಿದ್ದವರಿಗೆ ತಾನು ತಂದ ಹೊಸ ಸ್ಲೇಟು ಬಳಪಗಳನ್ನು ಕೊಡಲೆಂದು ಪಕ್ಕದಲ್ಲಿಟ್ಟುಕೊಂಡಿದ್ದ. ಅವರು ಕಲಿಯಲೇಬೇಕಾದ ಅತ್ಯಗತ್ಯ ಅಕ್ಷರಗಳು ಯಾವುವು, ಓದಲು ಕಲಿತ ಮೇಲೆ ಅವರಿಗೆ ಕೊಡಲು ಯೋಗ್ಯವಾದ ಪುಸ್ತಕಗಳು ಎಷ್ಟಿವೆ? 'ಚೋಮನ ದುಡಿ' ಓದಿಸಬೇಕು. ಮತ್ತೆ ತಾನೇ ಸರಳವಾಗಿ ಬರೆಯಬೇಕು : ಬಸವಣ್ಣನ ಬಗ್ಗೆ, ಈಸೂರಿನ ಬಗ್ಗೆ, ಫ್ರೆಂಚ್ ರಷ್ಯನ್ ಕ್ರಾಂತಿಗಳ ಬಗ್ಗೆ, ಚೀನಾದ ಸಾಂಸ್ಕೃತಿಕ ಕ್ರಾಂತಿಯ ಬಗ್ಗೆ. ಕೆಲವು ಪುಟಗಳನ್ನು ಆಗಲೇ ಬರೆದಿದ್ದ. ಅವುಗಳನ್ನು ನಾಳೆ ಓದುವುದೆಂದುಕೊಂಡ. ಅವರ ಜೊತೆ ಏನನ್ನಾದರೂ ಮಾತಾಡಲು ಮುಜುಗರಪಡಬಾರದು. ಅವರಿಗೆ ನಿಜವಾಗುವಷ್ಟು ಮಾತ್ರ ನಿಜ ಎನ್ನುವ ಕಠಿಣ ವ್ರತಿಯಾಗಬೇಕು. ತನಗೆ ನಿಜವಾದದ್ದನ್ನೆಲ್ಲ ಅವರಿಗೂ ನಿಜ ಮಾಡುತ್ತ ಹೋಗಬೇಕು. ತನ್ನನ್ನು ಅವರು ತಾವಾಗಿಯೇ ಮುಟ್ಟುವಷ್ಟು ಮುಂದುವರೆದರೆ ಆ ಘಳಿಗೆಯಿಂದ ಉಳಿದದ್ದೆಲ್ಲ ಕ್ರಮೇಣ ನಿಜವಾಗುತ್ತ ಹೋಗುತ್ತದೆ : ಮಂಜುನಾಥ ಹಿಂದೆ ಸರಿಯುತ್ತ ಹೋಗುತ್ತಾನೆ. ಅರಳಲು ಪ್ರಾರಂಭವಾಗುತ್ತದೆ. ಆತುರದಿಂದ ಕಾದ.

ದೂರದಿಂದ ಬರುವುದು ಕಾಣಿಸಿತು. ಜಡೆಗಟ್ಟಿದ ಕಪ್ಪು ಕೂದಲಿನಲ್ಲಿ ಕೆಂಪು ಧೂಳು; ಬರಿ ಮೈ ಮೇಲೆ ಕಪ್ಪು ಕಂಬಳಿ. ಸೊಂಟದಲ್ಲಿ ಲಂಗೋಟಿ ಮಾತ್ರ. ಸಿಕ್ಕಿಸಿದ ಕತ್ತಿ.

ಅಂಗಳಕ್ಕೂ ಆಚೆ ನಿಂತವು. ಬನ್ನಿ ಎಂದ. ಅಂಗದೊಳಕ್ಕೆ ಬಂದವು. ಬನ್ನಿ ಎಂದ. ಬರದೇ ಅಂಜುತ್ತ ಅಂಗಳದ ನಡುವೆ ನಿಂತವು. ನಿಲ್ಲುವುದೇ ತಪ್ಪೇನೊ, ಈ ಸಂಜೆಯ ಹೊತ್ತಲ್ಲಿ ತಾವು ಇರುವುದೇ ತಪ್ಪೇನೊ ಎನ್ನುವಂತೆ ಕಾಲುಗಳನ್ನು ಸೊಟ್ಟಮಾಡಿ ಬೆನ್ನು ಕುಸಿದು ನಿಂತವು. ಚಾವಡಿಯ ಹತ್ತಿರ ಬನ್ನಿ ಎಂದ. ನಿಧಾನವಾಗಿ ಕಾಲೆಳೆಯುತ್ತ ಬಂದವು. ಚಾವಡಿಯನ್ನೇರಿ ಕೂತುಕೊಳ್ಳಿ ಎನ್ನಲು ಜಗನ್ನಾಥನಿಗೆ ಧೈರ್ಯ ಬರಲಿಲ್ಲ. ವಾತಾವರಣದಲ್ಲಿ ಒತ್ತಾಯದ ಹಿಂಸೆಯಿತ್ತು. ಕೂರಿ ಎಂದ. ಬುಡಕ್ಕೆ ಕಂಬಳಿ ಹಾಸಿ ಕೂತವು. ಬಿಗಿದಿದ್ದು ಸಡಿಲವಾಗಲೆಂದು ಪಕ್ಕದಲ್ಲಿದ್ದ ತಟ್ಟೆಯಿಂದ ಅಡಿಕೆ ಹೊಗೆಸೊಪ್ಪುಗಳನ್ನು ಎಸೆದ. ಒಬ್ಬ ಆಸೆಯಿಂದ ಕೈ ಮಾಡಿ ಹಿಡಿದು ಜೊತೆಯವರಿಗೆ ಹಂಚಿದ. ಹಾಕಿಕೊಳ್ಳಿ ಎಂದು ತಾನೂ ಎಲೆಗೆ ಸುಣ್ಣ ಹಚ್ಚುತ್ತ ಅಡಿಕೆ ಜಗಿದ. ಮುಂದೆ ನಡೆಯುವುದೆಲ್ಲ ಸಾಮಾನ್ಯ ನಡವಳಿಕೆ ಎನ್ನುವ ವಾತಾವರಣ ಸೃಷ್ಟಿಸಲು ಜಗನ್ನಾಥ ಪ್ರಯತ್ನಿಸಿದ. ಆದರೆ ಹೊಲೆಯರು ಅವನ ಎದುರು ಹೊಗೆಸಪ್ಪಿಗೆ ಸುಣ್ಣ ತಿಕ್ಕಲಿಲ್ಲ. ಗಾಬರಿಯಾಗಿ ಕೂತಿದ್ದವು. ಚಳಿ ಬಿಡಿಸುವುದು ಹೇಗೆ ತಿಳಿಯದೆ ಜಗನ್ನಾಥ ನೆನಪಿಗೆ ಬಂದ ಹೆಸರನ್ನು ಕರೆದ: 'ಪಿಳ್ಳ'

ಒಬ್ಬ ಓ ಎಂದ. ಇವನೇ ಪಿಳ್ಳ ಎಂದು ಜಗನ್ನಾಥ ಮತ್ತೆ ಗುರುತಿಸಿಕೊಳ್ಳುತ್ತ ಹೇಗೆ ಎತ್ತರವಾಗಿ ಗಟ್ಟಿಮುಟ್ಟಾಗಿ ಕಠ್ರಗೆ ಇದ್ದಾನೆ ಎಂದುಕೊಂಡ. ತಲೆಯ ತುಂಬ ಪೊದೆ ಪೊದೆ ಕೂದಲು. ಮುಖದ ಮೇಲೆ ಎಳೆಯ ಮೀಸೆ, ಕುರುಚಲು ಗಡ್ಡ, ಕಟ್ಟುಮಸ್ತಾದ ದೇಹದ ಸುಂದರ ಯುವಕ. ಇವನನ್ನೆ ನಾಯಕ ಮಾಡಿಕೊಳ್ಳುವುದು ಎನ್ನಿಸಿತು.

'ಇನ್ನುಳಿದ ಐದು ಜನ ಯಾಕೆ ಬಂದಿಲ್ಲ ?'

'ಬೆಸ್ತೂರಿಗೆ ಹೋಗಿವೆ ಒಡೆಯ.'

'ಬಾಯಿಗೆ ಹಾಕ್ಕೊಳ್ಳಿ.'

ಜಗನ್ನಾಥ ಎಲೆ ಜಗಿಯುತ್ತ ಕಾದ. ಸಡಿಲವಾಗಿರಬೇಕು; ಅಡಿಕೆ ಬಾಯಿಗೆ ಹಾಕಿಕೊಂಡು ಹೊಗೆಸೊಪ್ಪನ್ನು ಸುಣ್ಣದಿಂದ ತಿಕ್ಕಿದುವು. ತಾನು ಮುಂದೆ ಹೇಳೀಬೇಕೆಂದಿರುವುದು ಎಷ್ಟು ಅಸಂಗತ ಎನ್ನಿಸಿತು. ಅತ್ಯಂತ ಸರಳವಾದ ಮಾತುಗಳಲ್ಲಿ ಹೇಳಿದ: ಅಮಾಸೆ ಮಾರನೇ ದಿನ ರಥೋತ್ಸವ; ನೀವು ನನ್ನ ಜೊತೆ ಆ ದಿವಸ ದೇವಸ್ಥಾನದೊಳಗೆ ಬರಬೇಕು. ಹೊಲೆಯರು ಸುಮ್ಮನೇ ಕೂತಿದ್ದವು. ಯಾಕೆ ಎಂದು ಅವು ಕೇಳಲಿಲ್ಲ, ಯಾವ ದಿಕ್ಕಿನಲ್ಲಿ ಅವುಗಳ ಮನಸ್ಸು ಹರಿಯುತ್ತಿದೆಯೊ ? ನಿಲ್ಲಿಸಿ, ತನ್ನ ಮಾತು ಜಗ್ಗೆದ್ದು ಅವರ ಮನಸ್ಸನ್ನು ಹಿಡಿಯುವಂತೆ ಮಾಡುವುದು ಹೇಗೆ ? ತಿಳಿಯಲಿಲ್ಲ. ಯಾಕೆ ಎಂದು ತಾನೆ ಪ್ರಶ್ನೆ ಕೇಳಿ ಉತ್ತರಿಸಲು ಪ್ರಯತ್ನಿಸಿದ. ಹೊಲೆಯರು ಸುಮ್ಮನೇ ಹೊಗೆಸೊಪ್ಪನ್ನು ಬಾಯಲ್ಲಿಟ್ಟುಕೊಂಡು ಕೂತಿದ್ದವು. ಗಾಂಧಿ, ಅಂಬೇಡ್ಕರ್, ನಿಗ್ರೋ ಗುಲಾಮರು – ಏನೇನೋ ಬಡಬಡಿಸಿದ – ಹೊಲೆಯರು ಹಾಗೇ ಕೂತಿದ್ದವು. ಎಲ್ಲ ಎಷ್ಟು ಅಸಂಗತ ಎನ್ನಿಸಿತು, ಎಷ್ಟು ಹಾಸ್ಯಾಸ್ಪದ ಎನ್ನಿಸಿತು.

'ಇನ್ನು ಮುಂದೆ ನೀವು ಸ್ಲೇಟಿನಲ್ಲಿ ಬರೆಯೋದು ಓದೋದು ಕಲೀಬೇಕು'

ಎಂದು ಮಾತು ಬದಲಾಯಿಸಿ ಒಂದು ಸ್ಲೇಟಿನ ಮೇಲೆ ‘ಬಸವ’ ಎಂದು ಬರೆದು ‘ಪಿಳ್ಳ ತಗೋ’ ಎಂದು ಚಿಟ್ಟೆಯ ಮೇಲೆ ಕೂತವನು ಸ್ಲೇಟನ್ನು ಒಡ್ಡಿದ. ಪಿಳ್ಳ ಎದ್ದು ನಿಂತ. ಜಗನ್ನಾಥ ತಗೊ ಎಂದ. ಪಿಳ್ಳ ಸ್ವಲ್ಪ ಹತ್ತಿರ ಬಂದು ಎಸೆದ ಸಾಮಾನು ಹಿಡಿಯುವುದಕ್ಕೆ ಸನ್ನದ್ಧನಾದವನಂತೆ ನಿಂತ.

ಜಗನ್ನಾಥ ಎಂದು ನಿಂತ ಸ್ಲೇಟನ್ನು ಪಿಳ್ಳನ ಒಡ್ಡಿದ ಕೈಗೆ ಹತ್ತಿರ ತಂದ. ಪಿಳ್ಳ ಕೈಗಳನ್ನು ಥಟ್ಟನೆ ಕೆಳಗೆ ಮಾಡಿದ. ‘ಬಿದ್ದರೆ ಸ್ಲೇಟು ಒಡೆಯುತ್ತೆ ತಗೋ’ ಎಂದು ಜಗನ್ನಾಥ ಇನ್ನೂ ಬಗ್ಗಿದ. ಪಿಳ್ಳನ ಕೈಗಳು ಚಕ್ಕನೆ ಇನ್ನೂ ಕೆಳಕ್ಕೆ ಹೋದವು. ಜಗನ್ನಾಥ ಮತ್ತೂ ಬಗ್ಗಿದ. ಈಗ ಪಿಳ್ಳ ಇನ್ನಷ್ಟು ಬಗ್ಗಲಾರದೇ ಚಿಟ್ಟೆಯ ಕೆಳಗೆ ಕೈಯೊಡ್ಡಿ ನೆಲದ ಮೇಲೆ ಕೂತುಬಿಟ್ಟ. ಇನ್ನೂ ಜಗನ್ನಾಥ ಬಗ್ಗಿದರೆ ಪಿಳ್ಳ ಭೂಮಿಯೊಳಕ್ಕೆ ಹೊಕ್ಕು ಬಿಡಲೂ ಪ್ರಯತ್ನಿಸಿಬಿಡಬಹುದೆನ್ನಿಸಿತು. ಈ ಒಡ್ಡುವ, ದೂರವಾಗುವ, ನಾಟಕ ಎಷಟು ಹಾಸ್ಯಾಸ್ಪದವಾಯಿತೆನ್ನಿಸಿ ಜಗನ್ನಾಥ ಬೇಸರದಿಂದ ಸ್ಲೇಟನ್ನು ಕೈಬಿಟ್ಟ. ಪಿಳ್ಳ ಅದನ್ನು ಹಿಡಿದುಕೊಂಡ. ಜಗನ್ನಾಥ ತಾನೇನು ಬರೆದಿದ್ದೇನೆ ಓದು ಎಂದ. ಪಿಳ್ಳ ಬಹಳ ಕಷ್ಟಪಡುತ್ತ ಕತ್ತಿನ ನರಗಳೆಲ್ಲ ಉಬ್ಬುವಂತೆ ಸ್ಲೇಟನ್ನೆ ನೋಡುತ್ತಿದ್ದು ‘ಬಸವ’ ಎಂದ. ಉಳಿದ ಸ್ಲೇಟುಗಳ ಮೇಲೆ ‘ಕಮಲ’, ‘ಕರಗ’, ‘ರಮಣ’, ‘ಚಪಲ’, ಎಂದು ಬರೆದು ಒಬ್ಬೊಬ್ಬನಿಗೂ ಒಂದೊಂದು ಸ್ಲೇಟು ಎಸೆದು ಓದಿ ಎಂದ. ಇಬ್ಬರು ತಡವರಿಸಿ ಓದಿದರು; ಇನ್ನಿಬ್ಬರು ಓದಲಿಲ್ಲ.

ಜಗನ್ನಾಥ ಮತ್ತೆ ಹೊಲೆಯರ ಯಾಕೆ ದೇವಾಲಯ ಪ್ರವೇಶಿಸಬೇಕೆಂದು ಹೇಳಿದ. ತನ್ನ ಮಾತೆಲ್ಲ ಸ್ವಗತವಾಗುತ್ತಿದೆ ಎನ್ನಿಸಿದರೂ ಭಂಡಗೆಟ್ಟವನಂತೆ ತನ್ನ ಮನಸ್ಸಿನಲ್ಲಿರುವುದನ್ನೆಲ್ಲ ಹೇಳಿ ‘ಏನಾದರೂ ಕೇಳಿ’ ಎಂದ, ಯಾರು ಮಾತಾಡಲಿಲ್ಲ. ‘ಏ ಪಿಳ್ಳ ಏನಾದ್ರೂ ಕೇಳೊ’ ಎಂದ. ಬೇರೆ ಯಾರಾದರೂ ಕಂಡರೆ ನಾಚಿಕೆ ಪಡಬೇಕಾದಂಥ ಸನ್ನಿವೇಶ; ಏನೋ ಕಳ್ಳತನ ಮಾಡುತ್ತಿರುವ ಹಾಗೆ – ಈ ಹೊಲೆಯರ ಜೊತೆ ಆಪ್ತವಾಗಿ ಮಾತಾಡುವ ತನ್ನ ಪ್ರಯತ್ನ ಎನ್ನಸಿತು.

ಪಿಳ್ಳ ನಾಚುತ್ತ ತಲೆ ಕರೆದುಕೊಂಡ :

‘ನನ್ನಪ್ಪ ಹೇಳ್ತು. ಹೊಲತೀನ್ನ ನಂಗೆ ತರಬೇಕಂತೆ. ಐವತ್ತು ರೂಪಾಯಿ ತೆರೆ ಕೊಡ್ಬೇಕಂತೆ’.

‘ಯಾವ ಹೊಲತಿನೊ ?’

ಜಗನ್ನಾತ ಹಾಸ್ಯ ಮಾಡಿ ಅವರನ್ನು ನಗಿಸಲು ಪ್ರಯತ್ನಿಸಿದ. ಇನ್ನೊಬ್ಬ ಹೊಲೆಯ ನಗುತ್ತ ಹೇಳಿದ :

‘ಪಿಳ್ಳನಿಗೊಂದು ಹೊಲತಿಯಯ್ಯ. ಅದನ್ನು ತರಾಕೆ ತೆರ ತೆತ್ತಬೇಕಲ್ಲ. ಆ ಹೊಲ್ತಿ ನಿಮ್ಮನೇಲಿ ಬಂದು ಗೆಯ್ದು ಸಾಲ ತೀರಿಸತ್ತೆ.’

ಪಿಳ್ಳನಿಗೊಂದು ಹೊಲತಿ. ಯಾವ ಹೊಲತಿ ? ಹೇಗಿದೆ ಅದು ? ಪಿಳ್ಳ ಅದನ್ನು ಪ್ರೀತಿಸಿದ್ದಾನೆಯ ? ವಯಸ್ಸಿಗೆ ಬಂದೊಡನೆ ಹೊಲೆಯರ ಹುಡುಗರು ತಮ್ಮ ತಾಯಿತಂದೆಗೆ ದುಂಬಾಲು ಬೀಳುತ್ತವಂತೆ – ಮದುವೆ ಮಾಡಿಸು ಅಂತ. ಮುದಿ

ಹೊಲತಿಯರು ಚಿಕ್ಕಿಗೆ ಕಷ್ಟ ಸುಖ ಹೇಳಿಕೊಳ್ಳುವಾಗ ಜಗನ್ನಾಥ ಕೇಳಿಸಿಕೊಂಡಿದ್ದ.

'ನಾಳೆ ಶಾನುಭೋಗರನ್ನ ಕೇಳು. ಹೇಳಿರ್ತೇನೆ. ಯಾವಾಗ ಲಗ್ನ?'

ಇನ್ನೆರಡು ತಿಂಗಳು ತಡ ಎಂದು ಹೊಲೆಯರು ಹೇಳಿದವು. ತೆರ ಇಷ್ಟು ಸುಲಭವಾಗಿ ಸಿಗುತ್ತದಲ್ಲ ಎಂದು ಪಿಳ್ಳನ ಮುಖ ಅರಳಿತ್ತು. ತಾಯಿಯಂತಾಗಲೀ, ಚಿಕ್ಕಿಯಂತಾಗಲೀ ತಾನು ಸತಾಯಿಸದೆ ತೆರ ಕೊಡಲು ಒಪ್ಪಿದ್ದೇ ಅದಕ್ಕೆ ಕಾರಣ. ಪ್ರಾಯಶಃ ಇಷ್ಟು ಸುಲಭವಾಗಿ ಒಪ್ಪಿದರೂ ಅವುಗಳಿಗೆ ತಾನು ಅರ್ಥವಾಗದೆ ದೂರವಾಗಬಹುದೇನೊ.

ಹೊಲೆಯರು ಹೊರಟು ಹೋದ ಮೇಲೆ ಜಗನ್ನಾಥನಿಗೊಂದು ಉಪಾಯ ಹೊಳೆಯಿತು. ನನ್ನ ಹಾಗೇ ಹೊಲೆಯರೂ ಬಿಳಿಯಂಗಿ ತೊಟ್ಟು ಬಿಳಿ ಪಂಚೆ ಉಡಬೇಕು. ಆಗ ನನ್ನನ್ನು ಮುಟ್ಟಬಹುದು ಎಂಬ ಭಾವನೆ ಅವರಲ್ಲಿ ಮೂಡೀತು. ಈ ವಿಚಾರ ಹೊಳೆದದ್ದೆ ಖುಷಿಯಾಯಿತು. ರಾಯರ ಅಂಗಡಿಯಿಂದ ಹತ್ತು ಜನಕ್ಕೂ ಮುಂಡು ಪಂಚೆಗಳನ್ನು ಕೊಳ್ಳುವುದು; ಶಾಮನ ಅಂಗಡಿಯಿಂದ ಮುಂಡು ತೋಳಿನ ರೆಡಿಮೇಡ್ ಬಿಳಿಯಂಗಿಗಳನ್ನು ಕೊಂಡುತರುವುದು; ನಾಳೆಯೇ – ಎಂದು ಒಳಗೆ ಹೋಗಲು ಎದ್ದು ನಿಂತ. ಕಾವೇರಿ ಕಟ್ಟೆಗೆ ಹೊತ್ತು ದನವನ್ನು ಅಟ್ಟುತ್ತ ಅಂಗಳದೊಳಗೆ ಬಂದಳು. ಓರೆಗಣ್ಣಿಂದ ತನ್ನನ್ನು ನೋಡಿದಳು. ನಾಚಿಕೆಯಿಂದ ನಕ್ಕಳು. ಹೀಗೆ ತನ್ನೆದುರು ಸುಳಿದಾಡೆಂದು ಹೇಳಿರಬಹುದಾದ ಜನಾರ್ಧನ ಸೆಟ್ಟಿ ಟಾರ್ಚ್ ಹಿಡಿದು ಲವಲವಿಕೆಯಿಂದ ತನ್ನನ್ನು ಮಾತಾಡಿಸಲು ಬಂದ. ಅವನು ಪೇಪರಿನಲ್ಲಿ ಸುದ್ದಿ ಓದಿರಬೇಕು. ತುಂಬ ಆಪ್ತನಂತೆ ಹತ್ತಿರಬಂದ. 'ಈ ಹೊಲೇರ ಸವಾಸ ನಿಮಗೆ ಯಾಕಯ್ಯ?' ಎಂದ. ಅವನ ಧೈರ್ಯ ಕಂಡು ಜಗನ್ನಾಥನಿಗೆ ಸಿಟ್ಟು ಬಂತು. 'ಕೆಲಸ ಹೇಗೆ ನಡೀತಿದೆ?' ಎಂದು ಅಪ್ಪಣೆಯ ಧಾಟಿಯಲ್ಲಿ ಕೇಳಿ ಉತ್ತರಕ್ಕೆ ಕಾಯದೆ ಒಳಗೆ ಹೋದ. ಜವಾನ ಗ್ಯಾಸ್‌ಲೈಟ್‌ಗಳನ್ನು ಹಚ್ಚುತ್ತ ಕೂತಿದ್ದ. ಮಧ್ಯಾಹ್ನ ಊಟ ಲೇಟಾದ್ದರಿಂದ ಹಸಿವಿಲ್ಲ ಎಂದು ಚಿಕ್ಕಿಗೆ ಹೇಳಿ ತನ್ನ ರೂಮಿಗೆ ಹೋಗಿ ಮಲಗಿದ. ಕೈಗೆ ಸಿಕ್ಕ ಪುಸ್ತಕವೊಂದನ್ನೆತ್ತಿಕೊಂಡು ಓದಲು ಪ್ರಯತ್ನಿಸಿದ. ಪುರಾಣಿಕರನ್ನು ಆಗಾಗ ಹೋಗಿ ನೋಡುತ್ತಿರಬೇಕೆನ್ನಿಸಿತು. ಆದರೆ ಸುಮ್ಮನೇ ಸಮಯ ಹಾಳು ಎಂದುಕೊಂಡ. ಒಣಗಿದ ತನ್ನ ಬಟ್ಟೆಗಳನ್ನು ಮಡಿಸಿಡುವ ನೆವದಲ್ಲಿ ಕಾವೇರಿ ಕೋಣೆಗೆ ಹೊರಗೆ ಓಡಾಡಿದಳು. ಓದುತ್ತಿರುವ ತನಗೆ ಲಾಟೀನಿನ ದೀಪ ಸಾಲದೆಂದು ಗಮನಿಸಿ ಕೆಳಗಿನಿಂದ ಗ್ಯಾಸ್‌ಲೈಟ್ ತಂದು ಮೇಜಿನ ಮೇಲಿಟ್ಟಳು. ಜಗನ್ನಾಥ ಉದ್ವೇಗದಿಂದ ಉಸಿರಾಡುತ್ತ ಅವಳನ್ನು ನೋಡದೆ ಓದಲು ಪ್ರಯತ್ನಿಸಿದ. ಜೀವನದಿಂದ ತಾನು ಹೀಗೂ ದೂರವಾಗಿ ಬಿಡುತ್ತಿದ್ದೇನೆ ಎನ್ನಿಸಿತು. ಮಾರ್ಗರೆಟ್ಟಿಗೆ ಬರೆಯಬೇಕೆಂದು ನಿಶ್ಚಯಿಸಿದ. ಕಾವೇರಿ ಹೊರಟು ಹೋದಳೆಂದು ಸಮಾಧಾನವಾಯಿತು.

* * *

ಮಾರನೇ ಬೆಳಿಗ್ಗೆ ಎದ್ದವನೇ ರಾಯರ ಅಂಗಡಿಯಿಂದ ಹತ್ತು ಜೊತೆ ಬಿಳಿ ಖಾದಿ ಮುಂಡುಗಳನ್ನೂ ಶ್ಯಾಮನಿಂದ ಹತ್ತು ಜೊತೆ ಅಂಗಿಗಳನ್ನೂ ಕೊಂಡುತಂದ. ಜಗನ್ನಾಥ ಅಂಗಡಿಯಿಂದ ಹಿಂದಕ್ಕೆ ಬರುವುದನ್ನು ಕಾಯುತ್ತಿದ್ದ ಶ್ಯಾನುಭೋಗ ಶಾಸ್ತ್ರಿ ಖಾತೆ ಪುಸ್ತಕ ಹಿಡಿದು ರೂಮಿಗೆ ಬಂದ. ರಾಯರ ಮಗ ರಂಗಣ್ಣನನ್ನು ಕೆಲಸಕ್ಕೆ ಸೇರಿಸಿದ ಮೇಲಿನಿಂದ ಶಾಸ್ತ್ರಿಗೆ ವ್ಯಕ್ತಪಡಿಸಲಾರದ ಅಸಮಾಧಾನವಾಗಿರುವುದನ್ನು ಗಮನಿಸಿದ್ದ ಜಗನ್ನಾಥ ಮೃದುವಾಗಿ 'ಏನು' ಎಂದ. ತೀರಿಹೋದ

ರೈಟರ್ ಕೃಷ್ಣಯ್ಯನ ಮಗ ಗೋಪಾಲ ಜಾತ್ರೆ ಹೊತ್ತಿಗೆ ಮನೆಗೆ ಬರುತ್ತೇನೆಂದೂ ಒಂದು ನೂರು ರೂಪಾಯಿ ಬೇಕೆಂದೂ ಮೈಸೂರಿನಿಂದ ಕಾಗದ ಬರೆದಿರುವ ವಿಷಯವನ್ನು ಶಾಸ್ತ್ರಿ ತಿಳಿಸಿ, ಕಳಿಸಬೇಕೇ ಎಂದು ಕೇಳಿದ. ಮನೆಯ ಹುಡುಗನಂತೆ ಸಾಕುತ್ತಿದ್ದ ಗೋಪಾಲನಿಗೆ ಹಣ ಕಳುಹಿಸುವ ವಿಷಯದಲ್ಲಿ ಶಾನುಭೋಗನ ಸಣ್ಣತನ ಕಂಡು ಜಗನ್ನಾಥನಿಗೆ ರೇಗಿತು. ‘ಅದನ್ನೇನು ನನ್ನ ಹತ್ರ ಕೇಳೋದು ? ಕಳಿಸಿ’ ಎಂದ. ‘ಅಲ್ಲ ಹದಿನೈದು ದಿವಸಗಳ ಕೆಳಗೆ ನೂರಾಐವತ್ತು ಕಳಿಸಿತ್ತು; ಅದಕ್ಕೇ ಕೇಳಿದೆ’ ಎಂದು ವೈಯ್ಯಾರದಿಂದ ನಗುತ್ತ ಶಾಸ್ತ್ರಿ ಹೇಳಿದ. ಜಗನ್ನಾಥ ‘ಪರವಾಗಿಲ್ಲ ಕಳಿಸಿ’ ಎಂದು ತಾನು ಓದುತ್ತಿದ್ದ ಪುಸ್ತಕ ಎತ್ತಿಕೊಂಡ.

ಟಪಾಲು ಬಸ್ ಬಂತು. ತನಗೆ ಬಂದ ಕಾಗದಗಳಲ್ಲಿ ಮಾರ್ಗರೆಟ್ಟಿಂದ ಒಂದು ಕಾಗದವಿರುವುದನ್ನು ಕಂಡು ಜಗನ್ನಾಥ ಉದ್ವೇಗದಿಂದ ಕಾಗದ ಒಡೆದು ಓದಿದ. ಪ್ರೀತಿಯಿಂದ, ಅವಸರದಿಂದ ಸಣ್ಣದೊಂದು ಕಾಗದ ಬರೆದಿದ್ದಳು. ನೀನೊಬ್ಬ ನಂಬಿಕೆಗೆ ಅನರ್ಹನಾದ ಯರ್ಾಸ್ಕಲ್; ಯಾಕೆ ಇಷ್ಟು ದಿನ ಕಾಗದ ಬರೆದಿಲ್ಲ; ಈಗ ಇಂಗ್ಲೆಂಡಲ್ಲಿ ಎಲೆಕ್ಷನ್ನಿನ ಬಿಸಿ; ಕಲರ್ಡ್ ಜನರಿಗೆ ಮೋಸ ಮಾಡಿದ ಲೇಬರ್ ಪಕ್ಷ ಚುನಾವಣೆಯಲ್ಲಿ ಗೆಲ್ಲಲೇ ಕೂಡದೆಂದು ನನಗನ್ನಿಸುತ್ತೆ; ಇಂಗ್ಲಿಷ್ ಜನರಿಗೆ ಈ ಎರಡು ಪಕ್ಷಗಳಲ್ಲಿ ನಿಜವಾದ ಚಾಯ್ಸ್ ಇಲ್ಲದಿರೋದರಿಂದ ಡೆಮಾಕ್ರಸಿ ಹೇಗೆ ಸುಳ್ಳಾಗಿದೆ ನೋಡು; ವಿಲ್ಸನ್ ಮತ್ತು ಹೀತ್ ನಿಜವಾಗಿ ಟ್ವೀಡಲ್‌ಡಮ್ ಎಂಡ್ ಟ್ವೆಡಲ್‌ಡೀ – ಇತ್ಯಾದಿ ಗೀಚಿ ತನಗೆ ಭಾರತಕ್ಕೆ ಬರಲು ಇಷ್ಟವೆಂದಿದ್ದಳು. ಬೆಂಗಳೂರಿನ ಹತ್ತಿರ ಒಂದು ಇಂಟರ್ ನ್ಯಾಷನಲ್ ಸ್ಕೂಲ್ ಇದೆಯಂತಲ್ಲ, ಜೆ.ಕೆ.ಫಿಲಾಸಫಿ ಮೇಲೆ ಕಟ್ಟಿದ್ದು, ಅಲ್ಲಿ ನಾನು ಇಂಗ್ಲಿಷ್ ಮತ್ತ ಹಿಸ್ಟರಿ ಪಾಠ ಹೇಳುತ್ತೇನೆ. ಪ್ರಿನ್ಸಿಪಾಲರಿಗೆ ಬರೆದಿದ್ದೇನೆ, ಅವರು ತಂದೆಗೆ ಪರಿಚಯ, ನೀನೊಂದು ಮಾತು ಕೇಳಿ ಬರಿ ಎಂದಿದ್ದಳು. ತುಂಬ ಪ್ರೀತಿಯಿಂದ ಕಾಗದ ಮುಗಿಸಿದ್ದಳು. ಚಳಿಯಲಲಿ ನೀನು ಬೇಕೆನಿಸುತ್ತೆ, ನಿನ್ನ ಮೈ ಎಷ್ಟು ಬೆಚ್ಚಗೆ ನೆನಪಾಗುತ್ತೆ ಎಂದು ಚುಕ್ಕೆಗಳನ್ನು ಹಾಕಿ ಇಬ್ಬರಿಗೂ ಆಪ್ತವಾಗಿ ಗೊತ್ತಿದ್ದ ನೆನಪುಗಳನ್ನು ಕೆರಳಿಸಿದ್ದಳು. ನಿನ್ನ ಭಾವುಕ ಕಣ್ಣುಗಳಿಂದ ಎಷ್ಟು ಜನರನ್ನು ವಂಚಿಸಲು ಹವಣಿಸುತ್ತಿದ್ದೀಯ ಜೋಕೆ ಎಂದು ಗೇಲಿ ಮಾಡಿದ್ದಳು.

ಜಗನ್ನಾಥ ಕೂಡಲೇ ಅವಳಿಗೊಂದು ಉತ್ತರ ಬರೆದ. ಎಲ್ಲ ಹೊರೆ ಹಗುರವಾಗಿ ಬಿಟ್ಟಿತು. ತನ್ನ ಯೋಜನೆ ತಿಳಿಸಿ ಇನ್ನೊಂದು ವಾರದಲ್ಲೆ ಬೆಂಗಳೂರಿಗೆ ಹೋಗಿ ಫಿಕ್ಸ್ ಮಾಡುತ್ತೇನೆಂದು ಹೇಳಿ ಕಾಗದವನ್ನು ಟಪಾಲು ಪೆಟ್ಟಿಗೆಗೆ ಸ್ವತಃ ಹಾಕಿ ಬಂದ. ಹೊಲೆಯರಿಗೆಂದು ಬಂಡಾಯದ ಇತಿಹಾಸವನ್ನು ಸರಳವಾದ ಕನ್ನಡದಲ್ಲಿ ಬರೆಯಲು ಕೂತ.

ಮಧ್ಯಾಹ್ನ ಊಟದ ಹೊತ್ತಿಗೆ ಮನೆಯ ಪರಿಚಾರಕರನ್ನು ಬಿಟ್ಟರೆ ಬೇರೆ ಯಾರೂ ಇರಲಿಲ್ಲವೆಂದು ಚಿಕ್ಕಿಗೆ ದುಃಖವಾಗಿರಬೇಕು. ತಾನು ಪರಿಶಂಚನೆ, ಚಿತ್ರಾಹುತಿ, ಆಪೋಶನ ಯಾವುದನ್ನು ಆಚರಿಸೆ ಊಟ ಮಾಡುತ್ತೇನೆಂದು ಪಕ್ಕದಲ್ಲಿ ಕೂತ ಮನೆಯ ಅರ್ಚಕನಾದ ಗಣಪತಿ ಭಟ್ಟನಿಗೆ ಮುಜುಗರವಾಗಿದ್ದರಿಂದ ಊಟ ಪ್ರಾರಂಭಿಸುವ ತನಕ ಆತ ತನ್ನ ಕಡೆ ನೋಡುವುದಿಲ್ಲ. ಎಡ ಹಸ್ತವನ್ನು ನೆಲಕ್ಕೂರಿ ಅವನು ಊಟ ಮಾಡುವುದು. ಲೋಟವನ್ನೆತ್ತಿ ಗಳಕ್ ಗಳಕ್ ಶಬ್ದ ಮಾಡುತ್ತ ನಿರರ್ಗಳವಾಗಿ ನೀರು ಕುಡಿಯುವುದು. ಕಣ್ಣು ಮುಚ್ಚಿ ತೃಪ್ತಿ ಪಡುತ್ತ ಸವಿಯುತ್ತ ಊಟ ಮಾಡುವುದು. ಇನ್ನು ಅಡಿಗೆ ಭಟ್ಟರ ಇಬ್ಬರು ಹುಡುಗರು. ಕಮಾನಾಗಿ ಕತ್ತರಿಸಿದ ತಲೆ, ದೊಡ್ಡ ಜುಟ್ಟು. ಈಚೆಗೆ ಉಪನಯನವಾದ್ದರಿಂದ ಊಟದ ವೇಳೆಯಲ್ಲಿ ಮಾತಾಡುವುದಿಲ್ಲ. ಬಡಿಸಲು ಬರುವಾತ ಲೇವಡಿ ಮಾಡಲೆಂದೇ ಸಾರು ತರಲು ಮಜ್ಜಿಗೆ ಬಡಿಸಲು, ಸೇರುವುದಿಲ್ಲವ ಎಂದು ಅವನ ವ್ರತಭಂಗ ಮಾಡಲು ಪ್ರಯತ್ನಿಸುತ್ತಾನೆ. ಇನ್ನೊಂದು ಚೌಲವಾಗದ ಐದಾರು ವರ್ಷದ

ಹುಡುಗ. ತಂದೆಯೆಂದರೆ ಅದಕ್ಕೆ ಎಷ್ಟು ಭಯವೆಂದರೆ ಅವರು ಆಸುಪಾಸಿನಲ್ಲಿ ಎಲ್ಲಾದರೂ ಇದ್ದರೆ ಮಾತು ಸಹ ಆಡುವುದಿಲ್ಲ. ಸಾಹುಕಾರ್ರ ಮನೆಯಲ್ಲೇ ಬಾಳಬೇಕಾಗಿ ಬಂದದ್ದರಿಂದ ಉಸಿರಾಡಲೂ ಹೆದರಿ ಈ ಮಕ್ಕಳು ಬೆಳೆಯುತ್ತಿದ್ದಾವೆಂದು ಜಗನ್ನಾಥನಿಗೆ ಗೊತ್ತು. ಆದರೆ ಅವ ಏನೂ ಮಾಡಲಾರ.

ಊಟ ಮುಗಿಸಿ ರೂಪಮಿಗೆ ಬರುವಾಗ ಚಿಕ್ಕಿ ಎದುರಾದರು. ಅವರನ್ನು ಕಂಡೊಡನೆ ಜಗನ್ನಾಥನಿಗೆ ಸಂಕಟವಾಯಿತು. ತನ್ನ ಧೈರ್ಯವನ್ನೆಲ್ಲ ಮುರಿದುಬಿಡಬಲ್ಲ ಶೋಕ ಅವರ ಮುಖಭಾವದಲ್ಲಿತ್ತು. ಅವರಿಗೆ ಪ್ರಿಯವಾಗಲೆಂದು 'ಗೋಪಾಲ ಜಾತ್ರೆಗೆ ಬರುತ್ತೇನೆಂತ ಬರ್ದಿದಾನೆ' ಎಂದು ಹೇಳಿ ಮಹಡಿ ಹತ್ತಿದ. ಅಷ್ಟರಲ್ಲೇ ರಾಯರು ಲಗುಬಗೆಯಿಂದ ಕೈಯಲ್ಲಿ ಪೇಪರ್ ಹಿಡಿದು ಬಂದರು.

'ಜಗನ್ನಾಥ ನೀನು ಸುದ್ದಿಯಾಗಿದ್ದೀಯ' ಎಂದು ರಾಯರು ಶಿವಮೊಗ್ಗದಿಂದ ಹೊರಡುತ್ತಿದ್ದ ದಿನಪತ್ರಿಕೆ,''ಜಾಗೃತಿ'ಯನ್ನು ಕೊಟ್ಟರು. ಸ್ವಭಾವತಃ ರಾಜಕಾರಣಿಯಾದ ರಾಯರಿಗೆ ಸುದ್ದಿಯಾಗುವುದೆಂದರೆ ಎಷ್ಟು ಮಹತ್ವದ ಸಂಗತಿಯೆಂದು ಜಗನ್ನಾಥನಿಗೆ ನಗು ಬಂತು. 'ಜಾಗೃತಿ' ಜಗನ್ನಾಥನ ಶ್ರೀಮಂತಿಕೆಯನ್ನು ಎತ್ತಿ ತೋರಿಸಿ ಅವನ ಕ್ರಾಂತಿಕಾರತೆಯನ್ನು ಹೊಗಳಿತ್ತು. 'ಇದರ ಎಡಿಟರ್ ಈಗಾಗಲೇ ಮೂರು ನಾಲ್ಕು ಪಕ್ಷ ಬದಲಾಯಿಸಿದಾನೆ' ಎಂದು ರಾಯರು ಹೇಳಿದರು.''ನಾಳೆ ಬೆಂಗಳೂರಿನ ಪತ್ರಿಕೆಗಳಲ್ಲೂ ಸಂಪಾದಕರಿಗೆ ಪತ್ರಗಳಿರುತ್ತವೆ' ಎಂದು ಉತ್ಸಾಹದಿಂದ ರಾಯರು ಹೇಳಿ ಓದುತ್ತ ಕುಳಿತರು.

ರಾಯರಿಗೆ ತನ್ನ ಕ್ರಿಯೆಯಲ್ಲಿ ಉತ್ಸಾಹವಿಲ್ಲದಿದ್ದರೂ ತನ್ನ ಬಗ್ಗೆ ಎಷ್ಟು ಕಾಳಜಿ ಎಂಬುದನ್ನು ಜಗನ್ನಾಥ ಗಮನಿಸಿದ. ನಾವು ಯಾರನ್ನು ಬದಲಾಯಿಸುತ್ತೇವೆಯೊ ಅವರನ್ನ ನಾವು ಪ್ರೀತಿಸೋದು. ಅಲ್ಲವೆ? ಈ ಹುಡುಗನ ಸ್ವಭಾವದ ಮಾರ್ಪಾಟಿಗೆ ತಾನು ಕಾರಣ ಎಂದು ರಾಯರಿಗೆ ತನ್ನ ಮೇಲೆ ಪ್ರೀತಿ. ಹಾಗೆಯೇ ಮಾರ್ಗರೆಟ್ಟನ್ನು ಇವತ್ತಿಗೂ ತಾನು ಪ್ರೀತಿಸಲು ಕಾರಣ : ಅವಳನ್ನು ಬದಲಾಯಿಸಲು ತಾನು ಕಾರಣನಾದೆ ಎಂದು. ಬದಲಾಯಿಸಿದ್ದು ಮಾತ್ರ ನಿಜವಾಗಿ ನಮ್ಮದಾಗುತ್ತದೆ.

ರಾಯರ ಹಾಗೆ ತಾನು ಸ್ವಭಾವತಃ ರಾಜಕೀಯದ ಮನುಷ್ಯನಲ್ಲ. ಇದು ರಾಯರಿಗೂ ಗೊತ್ತು. ಆದ್ದರಿಂದ ರಾಜಕೀಯ ನಿನಗೆ ಬೇಡ ಎನ್ನುತ್ತಾರೆ.

ರಾಯರು ತುಂಬ ಹೊತ್ತು ಮಾತಾಡದೆ ಕೂತಿದ್ದರು. ಜಗನ್ನಾಥ ಬರೆಯುತ್ತ ಕೂತ. ಏನೂ ಮಾತಾಡದೇಇವರ ಜೊತೆ ಇರುವುದು ಸಾಧ್ಯವೆನ್ನಿಸಿ ಕೃತಜ್ಞನಾದ. ಅಕ್ಕಪಕ್ಕದಲ್ಲಿದ್ದರೆ ಸಾಕು. ಕೆಲವರ ಹತ್ತಿರ ಮಾತ್ರ ಈ ಸಂಬಂಧ ಸಾಧ್ಯ. ಮಾರ್ಗರೆಟ್ ಜೊತೆ ಇದು ಕೆಲವೊಮ್ಮೆ ಸಾಧ್ಯವಾಗಲಿಲ್ಲ. ಒಬ್ಬರನ್ನೊಬ್ಬರು ಸದಾ ಕೆಣಕಿಕೊಂಡೇ ರಮಿಸಿಕೊಂಡೋ ಇರಬೇಕಾಗಿ ಬರುತ್ತಿತ್ತು.

ರಾಯರು ಹೋದ ಮೇಲೆ ಪ್ರಭು ಬಂದ. ಆರಾಮಾಗಿ ಕೂತು ಪಾಸಿಂಗ್ ಶೋ ಸಿಗರೇಟು ಹಚ್ಚಿದ. ಮುಂದಿನ ಸಾರಿ ಚುನಾವಣೆಗೆ ನೀವೇ ನಿಲ್ಲಬೇಕು. ಒಕ್ಕಲಿಗರಿಗೆ ಈ ಸೀಟು ಬಿಟ್ಟುಕೊಡಬಾರದು. ಜಗನ್ನಾಥ ಮಾತು ಬೇಕಿಲ್ಲೆಂದು

ಸೂಚಿಸಲು ಆಕಳಿಸಿದ. ಕಾಫಿ ತಂದ ಚಿಕ್ಕಿಗೆ 'ಹಗ್ಗಕ್ಕೆ ಹೇಳಿಕಳಿಸಿದ್ದರಂತೆ ಎಷ್ಟು ದಪ್ಪದ ಮಿಣಿ ಬೇಕು' ಎಂದು ಪ್ರಭು ಕೇಳಿ ತಿಳಿದುಕೊಂಡ. ಶಿವಮೊಗ್ಗದಿಂದ ತರಿಸಿ ಕೊಡುತ್ತೇನೆ ಎಂದ. ಜಗನ್ನಾಥ ಪ್ರಸನ್ನನಾದ ಘಳಿಗೆಗೆ ಕಾದು 'ನಾನು ನೀವೂ ಬೆಂಗಳೂರಿಗೆ ಹೋಗಿ ಮಿನಿಸ್ಟರನ್ನು ನೋಡಿ ಬರುವ ಮಾರಾಯರೆ, ಎಲೆಕ್ಟ್ರಿಸಿಟಿ ಬೇಕೂಂತ ಒಂದು ಅರ್ಜಿ ಕೊಟ್ಟು ಬರುವ' ಎಂದ. 'ನೀವೇನೋ ಹರಿಜನ ಉದ್ಧಾರಕ್ಕೆ ನಿಂತಿದ್ದೀರಿ, ಆದರೆ ಅವಕ್ಕೆ ಕೃತಜ್ಞತೆ ಉಂಟೂಂತ ತಿಳ್ದಿದೀರ? ನಾಳೆ ಅವು ಓಟ್ ಹಾಕೋದು ಸರ್ಕಾರದ ಪಕ್ಷಕ್ಕೇನೆ' ಎಂದು ಎದ್ದು ನಿಂತ. ಹೋಗುವ ಮುಂಚೆ,

'ನಿಮ್ಮಂಥ ವಿದ್ಯಾವಂತರ ಜೊತೆ ಮಾತಾಡೋದು ಒಂದು ದೊಡ್ಡ ಲಾಭ ಮಾರಾಯರೆ. ಇನ್ನೊಂದು ಸಾರಿ ಬರ್ತ ನನ್ನ ಮಗನನ್ನು ಕರ್ಕೊಂಡು ಬರ್ತೀನಿ. ಅವನು ಎಂಜಿನಿಯರ್ ಆಗಲಿಕ್ಕೆ ಲಾಯಕ್ಕೋ, ಐಎಎಸ್ ಮಾಡಬೇಕೋ ನೀವೇ ನೋಡಿ ಹೇಳಿ'

ಎಂದು ನಮಸ್ಕಾರ ಮಾಡಿ ಹೋದ. ಜಗನ್ನಾಥ ಮತ್ತೆ ಬರೆಯಲು ಕೂತ. ತನ್ನ ಮನಸ್ಸಿನಲ್ಲಿ ನಡೆಯುತ್ತಿರುವುದನ್ನು ಬರೆದಿಡಬೇಕೆಂದು ಆಸೆಯಾಯಿತು. ಹೊಸದೊಂದು ನೋಟ್ ಬುಕ್ಕನ್ನು ತೆರೆದು ಹೀಗೆ ಪ್ರಾರಂಭಿಸಿದ :

* * *

ಮೊದಲಿನಿಂದಲೂ ಮನುಷ್ಯನ ಮಿತಿಗಳೇನು ಎಂದು ನಾನು ಯೋಚಿಸಿದ್ದಿಲ್ಲ; ಸಾಧ್ಯತೆಗಳೇ ನನ್ನ ಕಾಳಜಿ. ವಿಚಾರಗಳು ಉಮ್ಮಳಿಸಿ ಬರುತ್ತಾವೆ; ವಾಸ್ತವತೆಯೆಂದರೆ ನನಗೆ ಅಸಮಾಧಾನ. ನನ್ನ ಸಮಸ್ಯೆ ಇದು : ಮಾರ್ಗರೆಟ್ ಜೊತೆ, ಅಥವಾ ಪೀಟರ್, ಟಾಮ್, ರೂಬೆನ್ಸ್ ಜೊತೆ ಹೈಡ್ ಪಾರ್ಕ್‌ನಲ್ಲಿ ಬಿಸಿಲಿಗೆ ಮೈಚೆಲ್ಲಿ ಕೂತೋ, ಯೂನಿಯನ್ ಬಾರ್‌ನಲ್ಲಿ ಡ್ರಾಫ್ಟ್ ಬಿಯರ್ ಕುಡಿಯುತ್ತಲೋ ಎಷ್ಟೊಂದು ಆರಾಮಾಗಿ ವಿಚಾರಗಳ ಚೆಂಡಾಟ ನಾನು ಆಡಿದ್ದೇನೆ. ಸ್ನೇಹಿತರ ಜೊತೆ ಏನನ್ನಾದರೂ ವಿಚಾರ ಮಾಡಲು ಸಾಧ್ಯವಿರುವುದರಿಂದ ನಾನು ನಿಜವಾಗಿ ಸ್ವತಂತ್ರ ಎನ್ನುವ ಭ್ರಮೆಯಲ್ಲಿದ್ದೆ – ಬಹಳ ದಿನ. ಹೇಗೆ ಬೇಕಾದರೂ ಯೋಚಿಸುತ್ತ, ಯಾವ ನಿರ್ಬಂಧವಿಲ್ಲದೆ ಎಲ್ಲೆಂದರಲ್ಲಿಗೆ ತುಯ್ಯುತ್ತ ಉತ್ಸಾಹದಲ್ಲಿ ಮುಖ ಕೆಂಪಾಗಿ ಅರಳುತ್ತಿದ್ದ ಕಾಲ ನಿಧಾನವಾಗಿ ನನಗೆ ಸುಳ್ಳಾಯ್ತು. ವಿಚಾರ ಎಷ್ಟು ನಿಜ ತಿಳಿಯಲು ಅದು ವಸ್ತುವದ ಜೊತೆ ಉಜ್ಜಾಡಬೇಕು. ಅಂದರೆ ಈಗ ಹೊಲೆಯರ ಯುವಕರು ತಯ್ಯಾರಾಗಿ ನಿಲ್ಲುವಷ್ಟು ನನ್ನ ವಿಚಾರ ನಿಜವಾಗುತ್ತದೆ – ಅಷ್ಟೆ. ಈ ನಿಕಷದ ಅಗತ್ಯ ನನ್ನ ವ್ಯಕ್ತಿತ್ವಕ್ಕೆ ಇದೆ.

ನನ್ನ ವರ್ಗದವರ ಜೊತೆ, ಮಾರ್ಗರೆಟ್ ಜೊತೆ ಯೋಚಿಸಿದ್ದೆಲ್ಲ ನಿಜವೆಂಬ ಭ್ರಮೆಯಲ್ಲಿರುವುದು ಸಾಧ್ಯ. ಹೊಲೆಯರ ಗುಲಾಮಗಿರಿ ನನ್ನ ಮಾನವೀಯತೆಯ ಸಾಧ್ಯತೆಗಳನ್ನು ಮೊಟಕು ಮಾಡುತ್ತದೆಂದು ಅನ್ನಿಸಿದ ಘಳಿಗೆಯಿಂದ ನಾನು ನಿಜವಾದ ಸ್ವಾತಂತ್ರ್ಯದ ಹುಡುಕಾಟಕ್ಕೆ ತೊಡಗಿದಂತಾಗಿದೆ.

ರಾಯ್‌ನಂತಹ ಮುಕ್ತ ವೈಚಾರಿಕನಿಗಿಂತ ಇನ್ನೂ ದೇವರ ಗರ್ಭದಲ್ಲಿದ್ದು ಒದ್ದೆಯುತ್ತಿದ್ದ ಗಾಂಧೀಯೇ ಹೆಚ್ಚು ನಿಜ. ಪುರಾಣಿಕರ ಜೊತೆ ವಿಚಾರದ ಚೆಂಡಾಟಕ್ಕಿಂತ ಈ ವಾಸ್ತವತೆಯನ್ನು ರೂಪಿಸುತ್ತಿದ್ದ ಪ್ರಭುವಿನಂಥ ಖದೀಮನ ಜೊತೆ

ಸೆಣಸಾಡುವುದು ಹೆಚ್ಚು ಅರ್ಥಪೂರ್ಣ.

ಉದಾಹರಣೆಗೆ ಕಮ್ಯೂನಿಸ್ಟ್ ಪಕ್ಷದ ದೀಕ್ಷಿತ್. ಬೆಂಗಳೂರಿನಲ್ಲೊಮ್ಮೆ ಅವನ ಜೊತೆ ವಾದಿಸುತ್ತಿದ್ದಂತೆ ನನಗೆ ತುಂಬ ಕಸಿವಿಸಿಯಾಯಿತು. ಚಾರ್ಮಿನಾರ್ ಸೇದುತ್ತ ಇಂಗ್ಲೀಷಲ್ಲವನು ವಾದಿಸಿದ್ದ. ಯಾವ ಭಾರತೀಯ ಭಾಷೆಯೂ ಸರಿಯಾಗಿ ಬರೆದ ಅವನಿಗೆ ಗಾಂಧಿ ಬರೀ ಒಂದು ಮೋಸ. ಹರಿದ ಅಂಗಿದೊಗಳೆ ಪ್ಯಾಂಟಿನ ಮೈಪರಿವೆಯಿಲ್ಲದೆ ಮಗ್ನನಾದ ಮನುಷ್ಯ. ಅವನಿಗೆ ಹೇಳೀದೆ: ಈ ಜನ ನಿಮಗೆ ತಿಳಿದೇ ಇಲ್ಲ; ಗಾಂಧಿಗೆ ಈ ನೆಲ ಗೊತ್ತು. ಪರಿಸರವನ್ನು ಮಥಿಸಬಲ್ಲ ಕಡಗೋಲು ಒರಟೊರಟಾಗಿರಬೇಕಾಗುತ್ತೆ. ಬುದ್ಧಿಜೀವಿ ಗಾಳಿಯಲ್ಲಿ ಅಲೆಯುವ ಧ್ವನಿ ತರಂಗಗಳನ್ನು ಹಿಡಿಯಬಲ್ಲ ಏರಿಯಲ್‌ನಂತಿದ್ದರೆ ಸಾಲದು; ತನ್ನ ಮೈಮನಸ್ಸಿನಲ್ಲೂ ಪರಿಸರದ ಗುಣಗಳನ್ನು ಪಡೆದ ಒರಟು ಕಡೆಗೋಲೂ ಆಗಿರಬೇಕು. ಹಿಂದೂಧರ್ಮದ ಆಕರ್ಷಣೆಯನ್ನು ತನ್ನೊಳಗೂ ಗುರುತಿಸಿಕೊಳ್ಳದವನು ಇಲ್ಲಿ ಯಾವ ನಿಜವಾದ ವಿಚಾರವನ್ನೂ ಮಾಡಲಾರ. ಒಪ್ಪಿದ. ಆದರೆ ಆರ್ಥಿಕ ವ್ಯವಸ್ಥೆ ಮೊದಲು ಬದಲಾಗಬೇಕು ಎಂದು ನಗುತ್ತ ಹೇಳಿದ.

ಬಂಗಾಳದ ಕಾಳಿಯ ಭಕ್ತನಿಗೂ, ತಲೆ ಕತ್ತರಿಸಬೇಕೆನ್ನುವ ಉಗ್ರ ಕಮ್ಯುನಿಸ್ಟನಿಗೂ ಸಂಬಂಧವಿದೆಯಲ್ಲವೆ? – ಹೀಗೇ ಬಹಳ ಹೊತ್ತು ವಾದಿಸಿದೆ. 'ಈಗ ನನ್ನ ಸಮಸ್ಯೆ ವೇಜ್ ತೀರ್ಮಾನ' ಎಂದು ನಗುತ್ತ ಕೈ ಕುಲುಕಿ ಹೊರಟುಹೋದ.

ನಾನೊಬ್ಬನೇ ನನ್ನಲ್ಲೇ ಪಡೆಯಬಹುದಾದ ನಿವೃತ್ತಿ ಪ್ರಯೋಜನವಿಲ್ಲವೆನ್ನಿಸಿದ್ದರಿಂದಲೇ ಈ ಎಲ್ಲ ಪರದಾಟ. ಎಲ್ಲದರಿಂದ ಮುಕ್ತನಾದ ಭ್ರಮೆಯ ಅಡಿಗರಂತಾಗಬಹುದು; ಮಹಡಿ ಮೇಲಿನ ರೂಮನ್ನು ಇಂಗ್ಲೆಂಡ್ ಮಾಡಿಕೊಳ್ಳಬಹುದು; ಇರುವುದನ್ನು ಒಪ್ಪಿಕೊಂಡು ದಳಗಳ ಮಿತಿಗೆಷ್ಟೇ ಅರಳು ಎನ್ನುವ ವಾಸ್ತವವಾದಿಯಾಗಬಹುದು. ಎಲ್ಲ ಕಾಲದಲ್ಲೂ ಯಾವ ಗಳಿಗೆಯನ್ನಾದರೂ ಅವಾಕ್ಕಾಗಿಸುವಂತೆ ಅರಳಿಸಬಲ್ಲ ಸಂಗೀತಗಾರರಿಲ್ಲವೆ? ಬದಲಾವಣೆಯ ಹಿಂಸೆ ಯಾಕೆ ಬೇಕು ಅನ್ನಿಸುತ್ತೆ. ಹೊಗುವ ಉಜ್ವವ, ಬೆಂಕಿ ಹುಟ್ಟಿಸುವ ಕ್ರಿಯೆ ಅದು. ಅರಳೀದ ಹೂವು ಇಬ್ಬನಿಯನ್ನು ಸ್ವೀಕರಿಸಿ ಹೇಗೊ ಅಂತೂ ತಾಗಿದ ಬಿಸಿಲಿಗೆ ಮಣಿ ಮಣಿ ಹೊಳೆಯುವ ಸಡಗರದ ಕ್ರಮ ಬೇರೆ. ಆದರೆ ನಾಗಮಣಿ ನಂದಿಹೋದದ್ದನ್ನು ಹೇಗೆ ಮರೆಯುವುದು ಸಾಧ್ಯ? ನಾನು ಕಂಡಿಲ್ಲವೆಂದಲ್ಲ; ಮಾರ್ಗರೆಟ್ ಜೊತೆ ಚಳಿಗಾಲದಲ್ಲಿ ಬೆತ್ತಲೆಯಾಗಿ ಮಲಗಿದ್ದಾಗ ಅಲಾಪದ ನಿರವಧಿಯಂತೆ ಅವಸರವಿಲ್ಲದೆ ಮಾರ್ದವತೆ. ವಾಸ್‌ನಲ್ಲಿ ಕೆಂಪುಗುಲಾಬಿ. ಬಿರಿದ ಆಹ್ವಾನದಲ್ಲಿ ಶಂಖದಂತೆ ಒಳಗೆ ಸೆಳೆದುಕೊಳ್ಳುವ ಸುರುಳಿ ಸುರುಳಿ ತಿರುಪು ಪಕಳೆಗಳ ಗೌಪ್ಯ. ಭದ್ರವಾದ ತೊಟ್ಟಿನ ತುದಿಯಲ್ಲಿ ಕೋಮಲವಾದ ಹೂವಿನ ಹಗುರ. ನೋಡಿಸಿಕೊಳ್ಳುವ, ಬಚ್ಚಿಟ್ಟುಕೊಳ್ಳುವ ಗುಲಾಬಿ. ಬಿಸಿಗೆ ಬಿಸಿ ಹೆಣೆಯುತ್ತ, ಇನ್ನಷ್ಟು ನುಸುಳಿ ಮೈಗೆ ಒತ್ತಿಕೊಳ್ಳುವ ಮಾರ್ಗರೆಟ್ಟಿನ ಉಸಿರು ಕತ್ತಿನ ಮೇಲೆ. ಅವಳ ಕೂದಲನ್ನು ಕೆನ್ನೆಯಿಂದ ತಳ್ಳುವ ಭಯವಿಲ್ಲದಂತೆ ನಿರತಂಕನಾದ ಕ್ಷಣ. ಲೋಭವಿಲ್ಲದ, ಆತುರವಿಲ್ಲದ, ಆಲಾಪದಂತೆ ಕೊಂಚ ಏರುವ, ಕೊಂಚ ಇಳಿಯುವ, ಎಷ್ಟೆಂದರಷ್ಟು ವಿಸ್ತರಿಸುವ ಸೌಖ್ಯ. ಶಿಖರಕ್ಕೇರುವ ಆತುರವನ್ನು ನಿರಂತರ ಮುಂದೂಡಬಲ್ಲ ಮೈಥುನ ಹೀಗೆ ಸಾಧ್ಯವಾದದ್ದು ಎಲ್ಲೋ ಕೆಲವೊಮ್ಮೆ.

ಆದರೂ ಮಾರ್ಗರೆಟ್ ಯಾಕೆ ನನ್ನ ನಿರಾಕರಿಸಿದಳು? ನನಗೂ ಯಾಕೆ ಅವಳು ಸಾಲದೆನ್ನಿಸಿತು? ಈ ನೆಲದಲ್ಲಿ ಏನನ್ನೂ ನೆಟ್ಟು ಬೆಳೆಯದ, ಹಾಗೇ ಹುಟ್ಟಿ ಹಾಗೇ ಉದುರುವ ಈ ಹೊಲೆಯರ ಮೂಲಕ ಯಾಕೆ ನಿಜವಾಗಬೇಕೆನ್ನಿಸಿತು? ಅಡಿಗರ

ಅನುಭಾವ, ಮಾರ್ಗರೆಟ್ ಜೊತೆ ಮೈಥುನ ಯಾಕೆ ಸಾಲದೆನ್ನಿಸಿತು ?

* * *

ಬರೆದುದ್ದನ್ನು ಓದಿದ. ಅತೃಪ್ತಿಯಾಯಿತು. ಆರು ತಿಂಗಳುಗಳ ಕೆಳಗೂ ಪ್ರಾಯಶಃ ತಾನಿದನ್ನು ಬರೆಯಬಹುದಿತ್ತು. ಒಳಗಿನ ಎಲ್ಲ ವಿಚಾರಗಳನ್ನೂ ಪ್ರತ್ಯಕ್ಷಪಡಿಸಿಕೊಂಡು ನೋಡಲಾರೆ. ತನ್ನೂ ತಾನು ಆದರ್ಶವಾದಿಯಾಗಿಯೇ ಉಳಿದಿದ್ದೇನೆ, ಕನ್ನಡಿಯ ಎದುರು ಈಗ ಹಿಗ್ಗುವ ಮತ್ತೆ ಕುಗ್ಗುವ ಆಟ.

ಹೊಲೆಯರು ಬರುವ ಮುಂಚೆ ಓಡಾಡಿ ಬರೋಣವೆಂದು ಜಗನ್ನಾಥ ತೋಟದ ಕಡೆ ಹೋದ. ಆಸ್ತಿಯಲ್ಲಿ ತನಗೆ ಆಸಕ್ತಿಯಿದೆಯೆಂದು ಅವನು ಈಚೆಗೆ ನಟಿಸುತ್ತಿದ್ದಾನೆ – ಅಷ್ಟೆ. ಇಲ್ಲವಾದರೆ ತಾನು ಈ ಪರಿಸರದಲ್ಲಿ ಸುಳ್ಳಾಗಿ ಬಿಡುತ್ತೇನೆ. ಏನೋ ಶೀನಪ್ಪ, ಏನು ಶೆಟ್ಟರೆ ಎಂದು ವಿಚಾರಿಸುತ್ತ ಅಡ್ಡಾಡಿದ. ಅವರೆಲ್ಲರ ವರ್ತನೆಯಲ್ಲೂ ಸುದ್ದಿ ತಿಳಿದ ಮೇಲೆ ಬದಲಾವಣೆಯಾಗಿತ್ತು. ಸಾಹುಕಾರರು ಹೊಲೆಯರು ಜೊತೆ ಸೇರಿ ಕೀಳಾಗುವುದು ಅವರಿಗೆ ಯಾತನೆಯ ವಿಷಯವಾಗಿತ್ತೆಂಬುದನ್ನು ಗಮನಿಸಿದ. ತಾನು ಜರ್ಬಿನ ಮನುಷ್ಯವಾಗಿದ್ದರೆ ತಾವು ತಗ್ಗಿ ನಡೆಯಬೇಕಲ್ಲ – ಆಗಲೇ ಅವರಿಗೆ ಸುಖ, ತೃಪ್ತಿ. ತಾನು ಎಷ್ಟು ನಿರ್ದಯನಾಗಬಲ್ಲೆನೊ ಅಷ್ಟು ತಾನು ತೋರಿಸುವ ಕರುಣೆಗೆ ಅವರಲ್ಲಿ ಬೆಲೆ. ಬದಲಾಯಿಸುವ ಕ್ರಿಯೆಯ ಮೂಲಕ ಮಾತ್ರ ಈ ಜನರಿಗೆ ತಾನು ಹೊಸಬನಾಗುವುದು ಸಾಧ್ಯ. ಇಲ್ಲವಾದರೆ ರುಮಾಲು ಮೀಸೆಯ ಸಾಹುಕಾರ್ರ ಚಿತ್ರಕ್ಕೆ ತಾನು ಕ್ರಮೇಣ ಸರಿಹೊಂದುವುದನ್ನೆ ಬಯಸುತ್ತ ಇವರು ಕಾದಿರುತ್ತಾರೆ.

ಮಾವಿನ ಮರದ ಬುಡದಲ್ಲಿ ನಿಂತ. ಈ ಸಾರಿ ಸಮೃದ್ಧವಾದ ಹೂವು. ಪ್ರಾಯಶಃ ಚಿಕ್ಕಿಯ ಯೋಚನೆಯೆಲ್ಲ ಎರಡು ವರ್ಷಕ್ಕಾಗುವಷ್ಟು ಉಪ್ಪಿನಕಾಯಿ ಹಾಕಿಡಬೇಕೆಂದು. ಅದಕ್ಕಾಗಿಯೇ ಇರಬೇಕು – ಶಾಸ್ತ್ರಿಗಳ ಹತ್ತಿರ ನಿನ್ನೆ ಶಿವಮೊಗ್ಗದಿಂದ ಆರು ದೊಡ್ಡ ಗಾಜಿನ ಜಾಡಿಗಳನ್ನು ತರುವಂತೆ ಚಿಕ್ಕಿ ಹೇಳಿದರು.

ತೊಗಟೆಯ ಮೇಲೆ ಇರುವೆಗಳು. ಈ ಶೂದ್ರರು ಹುರಿದು ತಿನ್ನುವ ಕೆಂಜಿಗ. ರಾತ್ರೆ ಹಿತ್ತಲಲ್ಲಿ ಬೆಂಕಿ ಉರಿಸಿ ನೀರು ಕಾಯಿಸಿಕೊಂಡು ಸ್ನಾನ ಮಾಡುತ್ತಾರೆ. ಸುಖದ ನೂರು ಒಳದಾರಿಗಳಿವೆ. ನನ್ನ ಹುಡುಕಾಡ ಮಾತ್ರ ಬೇರೆ. ರಗಳೆಯಾಗಿ ನಡೆದು ಅಂಗಳಕ್ಕೆ ಬಂದ.

ದೂರದಿಂದ ಹೊಲೆಯರು ಬರುತ್ತಿರುವುದು ಕಾಣಿಸಿತು. ಕೆಲಸಕ್ಕೆ ಬರುವವರಂತೆ ನಡೆಯುತ್ತಿದ್ದಾರೆ. ಉತ್ಸಾಹವಿಲ್ಲ. ಪಿಳ್ಳನಿಗೆ ತಾನು ಚಲುವನೆಂಬ ಅರಿವೇ ಇರಲಿಕ್ಕಿಲ್ಲ. ಇವತ್ತು ಅವರಿಗೇನೂ ತಾನು ಹೇಳಕೂಡದೆಂದು ನಿರ್ಧರಿಸಿ ‘ಇರಿ ಬಂದೆ’ ಎಂದು ರೂಮಿಗೆ ಹೋಗಿ ಪಂಚೆ ಶರ್ಟುಗಳನ್ನು ತಂದ. ಜೊತೆಗೆ ಈ ಬಟ್ಟೆಗಳನ್ನು ಒಗೆಯಲು ಸೋಪಿನ ತುಂಡುಗಳನ್ನು ತಂದ ಆರು ಜನ ಮಾತ್ರ ಬಂದಿದ್ದರು. ಬರಲೇಬೇಕೆಂದು ಕಡ್ಡಾಯ ಮಾಡುವುದು ಅವನಿಗೆ ಇಷ್ಟವಿಲ್ಲದ್ದರಿಂದ ಒಬ್ಬೊಬ್ಬನಿಗೂ ಒಂದೊಂದು ಬಿಳಿ ಶರ್ಟು, ಒಂದೊಂದು ಪಂಚೆ ಮತ್ತು ಸೋಪಿನ ಚೂರುಗಳನ್ನು ಕೊಟ್ಟ. ತಾನು ತೊಡುತ್ತಿದ್ದ ಬಟ್ಟೆಗಳ ಹಾಗೇ ಅವು ಇದ್ದವು. ಜೇಬು, ಕಾಲರು, ಮುಂಡು ತೋಳು, ಅಂಚಿನ ಪಂಚೆ-ತೊಟ್ಟಾಗ ತನ್ನ

ಅಂತಸ್ತಿನ ಜನರಂತೆಯೇ ಅವರು ಕಾಣಬೇಕು.

‘ಎಲ್ಲಿ ಅಂಗಿಗಳನ್ನು ಹಾಕಿಕೊಳ್ಳಿ. ನೋಡುವ’ ಎಂದ.

ಕೆಲವರಿಗೆ ಬಿಗಿ, ಕೆಲವರಿಗೆ ದೊಗಳೆ, ಪಂಚೆಯನ್ನುಡಿ ಎಂದಾಗ ಮಾತ್ರ ಎಲ್ಲರೂ ಹಿಂಜರಿದರು. ಒತ್ತಯ ಮಾಡಿದ ಮೇಲೆ ಉಟ್ಟರು. ಇಡೀ ಜನ್ಮದಲ್ಲಿ ಅವರು ಮಂಡಿಯ ಕೆಳಗೆ ಪಂಚೆ ಉಟ್ಟಿದ್ದಿರಲಿಕ್ಕಿಲ್ಲ. ಮುಜುಗರವಾಗಿ ಬಿಚ್ಚಿದರು. ಮಡಿಸಿ ಕಂಕುಳಲ್ಲಿ ಸಿಕ್ಕಿಸಿಕೊಂಡರು. ಜಗನ್ನಾಥ ಪಿಳ್ಳನಿಗೆ ಹೇಳಿದ:

‘ನಾಳೆ ಈ ಹೊತ್ತಿಗೆ ಬನ್ನಿ. ಕೆಲಸ ಮುಗಿದದ್ದೆ ಸ್ನಾನ ಮಾಡಿ ಈ ಬಟ್ಟೆ ತೊಟ್ಟು ಬನ್ನಿ. ನಾಚಿಕೋಬೇಡಿ. ಉಳಿದವರಿಗೂ ಬರಹೇಳಿ. ಅವರಿಗೂ ಪಂಚೆ ಅಂಗಿಗಳಿವೆ.’

ಪಿಳ್ಳ ತಲೆ ಕೆರೆಯುತ್ತ ನಿಂತ. ಜಗನ್ನಾಥನಿಗೆ ನೆನಪಾಯಿತು. ‘ಮದುವೆಗೆ ಮುಂಚೆ ಹಣ ಸಿಕ್ಕರೆ ಆಯಿತಲ್ಲ? ಇನ್ನೂ ಎರಡು ತಿಂಗಳಿದೆ. ಈಗ ಯಾಕೆ ಅವಸರ?’ ಎಂದ. ಬಂದ ಹುಡುಗರಿಗೆ ‘ಬಾಯಿಗೆ ಕೊಟ್ಟು’ ಕಳಿಸಿದ.

ಮಾರನೇ ದಿನ ಶ್ರೀಪತಿರಾಯರು ಬೆಂಗಳೂರಿಂದ ಹೊರಡುವ ದಿನ ಪತ್ರಿಕೆಗಳನ್ನು ತಂದರು. ವಾಚಕರ ವಾಣಿಯಲ್ಲಿ ಜಗನ್ನಾಥನ ಬಗ್ಗೆ ಬಂದ ಪತ್ರಗಳನ್ನೆಲ್ಲ ಗಟ್ಟಿಯಾಗಿ ಓದಿದರು. ಹೊಲೆಯರಿಗೆ ತನ್ನ ಮನಸ್ಸನ್ನು ಬಿಚ್ಚಿ ತೋರಿಸುವುದರಲ್ಲಿ ತಾನಿನ್ನೂ ಯಶಸ್ವಿಯಾಗದಿರುವಾಗ ಪತ್ರಿಕೆಗಳು ತೆಗಳಿಕೆ ಹೊಗಳಿಕೆಗಳೆರಡೂ ಜಗನ್ನಾಥನಿಗೆ ವಿಪರ್ಯಾಸವಾಗಿ ಕಂಡಿತು. ಖಂಡಿಸುವ ಒಂದು ಪತ್ರ ಹೀಗೆ ಹೇಳಿತ್ತು: ಬೇಕೆಂದೇ ಸವರ್ಣೀಯರ ಮನಸ್ಸು ನೋಯಿಸುವ ಹರಿಜನ ದೇವಾಲಯ ಪ್ರವೇಶದ ಹಠಮಾರಿತನ ಹೇಗೆ ಗಾಂಧಿವಾದಕ್ಕೆ ದೂರವಾದ್ದು -ಇತ್ಯಾದಿ. ದೈವಭಕ್ತನೊಬ್ಬ ಹರಿಜನ ಪ್ರೇಮದಿಂದ ದೇವಾಲಯ ಪ್ರವೇಶವಾಗಬೇಕೆಂಬೂದಕ್ಕೂ, ಪಾಶ್ಚಾತ್ಯರಿಂದ ಪ್ರಭಾವಿತನಾದ ನಿರೀಶ್ವರವಾದಿಯೊಬ್ಬ ಹಿಂದೂಧರ್ಮದ ನಾಶದ ದೃಷ್ಟಿಯಿಂದ ಹರಿಜನ ದೇವಾಲಯ ಪ್ರವೇಶವಾಗಬೇಕೆಂಬುದಕ್ಕೂ ಇರುವ ವ್ಯತ್ಯಾಸವನ್ನು ಇನ್ನೊಬ್ಬ ದಪ್ಪ ದಪ್ಪ ಮಾತುಗಳಲ್ಲಿ ವಿಶ್ಲೇಷಿಸಿದ್ದ. ಕಮ್ಯೂನಿಸ್ಟ್ ಪಕ್ಷದ ದೀಕ್ಷಿತ್: ಜಮೀನುದಾರ ವರ್ಗದವನೊಬ್ಬನ ಆದರ್ಶವಾದದಿಂದ ಹುಟ್ಟಿದ ಈ ಕ್ರಿಯೆ ವಿಫಲವಾಗುವುದು ಖಂಡಿತವೆಂದೂ, ಆರ್ಥಿಕ ಕ್ರಾಂತಿಯಿಂದ ಮಾತ್ರ ಜಾತಿಭೇದ ತೊಡೆಯಬಹುದೆಂದೂ, ಆದರೂ ತಾನು ಜಗನ್ನಾಥರಿಗೆ ಬೆಂಬಲ ಕೊಡುವುದಾಗಿಯೂ ಹೇಳಿಕೆ ಕೊಟ್ಟಿದ್ದ. ಸರ್ವೋದಯ ಕಾರ್ಯಕರ್ತರಾದ ಮಾಗಡಿ ಅನಂತಕೃಷ್ಣರು ಮಹಾತ್ಮಗಾಂಧಿ, ಸಂತ ವಿನೋಬಾಜೀಗೆ ಪ್ರಿಯವಾದ ಈ ಕೆಲಸಕ್ಕೆ ಮುಂದಾದ ಜಗನ್ನಾಥರ ಜೊತೆ ಎಲ್ಲರೂ ಸಹಕರಿಸಬೇಕೆಂದು ಕರೆಕೊಟ್ಟಿದ್ದರು. ಅಹಿಂಸೆಯ ಅಗತ್ಯ ಒತ್ತಿ ಹೇಳಿದ್ದರು. ಹರಿಜನ ದೇವಾಲಯ ಪ್ರವೇಶದಿಂದ ಮಂಜುನಾಥನ ಕೀರ್ತಿ ಬೆಳೆಯುವುದೆಂದು ಸವರ್ಣೀಯರಿಗೆ ಮನ ಒಲಿಯುವಂತೆ ವಾದಿಸಿದ್ದರು.

‘ಈ ಅನಂತಕೃಷ್ಣ ಯಾರೂಂತೀಯ?’ ಎಂದು ಶ್ರೀಪತಿರಾಯರು ಉತ್ಸಾಹದಿಂದ ಕಥೆ ಪ್ರಾರಂಭಿಸಿದರು. ಸ್ವಾತಂತ್ರ್ಯ ಚಳುವಳಿಯಲ್ಲಿ ತನ್ನ ಜೊತೆಗಾರ, ವಾಗ್ಮಿ. ಚಿತ್ರದುರ್ಗದಲ್ಲಿ ಕಾಂಗ್ರೆಸ್ ಮುಖಂಡರೆಲ್ಲ ಜಾತೀಯವಾಗಿಗಳಾಗಿದ್ದರಿಂದ ಈತ

ಬೇಸತ್ತ. ಅಸೆಂಬ್ಲಿಗೆ ಟಿಕೆಟ್ ಸಿಗಲಿಲ್ಲ – ಜಯಪ್ರಕಾಶರ ಕರೆ ಕೇಳಿ ಜೀವದಾನ ಮಾಡಿದ. ಬುದ್ಧಿವಂತ. ಸ್ನೇಹಪರ ಮನುಷ್ಯ, ಮನೆ ಬಿಟ್ಟು ಚಳುವಳಿ ಸೇರಿದ ಆದರ್ಶವಾದಿ, ಆಸೆಬುರುಕನಾದರೂ ಮರ್ಯಾದಸ್ಥ. ಕುಡೀತಿದ್ದ, ಈಗ ಬಿಟ್ಟಿರಬೇಕು, ನನ್ನ ಹಾಗೇ ಹೆಂಡತೀಂದ ದೂರ ಇರೋಕೆ ಅವ ಏನೆಲ್ಲ ಉಪಾಯ ಹೂಡ್ತಾನೆ ಅಂತಿ – ರಾಯರು ಮನಸ್ಸು ಬಿಚ್ಚಿ ಹರಟಲು ಪ್ರಾರಂಭಿಸಿದ್ದರು.

'ಬಲು ಜಾಣ, ಬಲು ಜಾಣ. ಎಂಥ ಮಾತುಗಾರ ಅಂತಿ ? ಕ್ವಿಟ್ ಇಂಡಿಯಾ ಚಳುವಳೀಲಿ ಅವನು ಮಾಡಿದ ಭಾಷಣಗಳು ಇನ್ನೂ ನನಗೆ ನೆನಪಿವೆ. ತುಂಬ ಅನುಕೂಲದಿಂದ ಇರಬಹುದಿತ್ತು. ಆದ್ರೆ ಚಳುವಳೀಲಿ ಎಲ್ಲ ಕಳಕೊಂಡ. ಆಮೇಲೆ ಕಾಂಗ್ರೆಸ್ ಒಳಜಗಳಗಳಲ್ಲಿ ಹೇಸಿಗೆ ಮಾಡಿಕೊಂಡ. ಕುಲಗೆಟ್ಟು ಹೋದ. ರೋಸಿ ಸರ್ವೋದಯ ಸೇರಿದ. ಅವನೂ ಒಬ್ಬ ಕನಸುಗಾರ ಗೊತ್ತ ? ಎಷ್ಟು ಕುಲಗೆಟ್ಟರೂ ಈ ಜನರು ಎಂದರೆ ನನಗೆ ಪ್ರೀತಿ ಕಣಯ್ಯ.'

ರಾಯರ ಕಣ್ಣುಗಳು ಸ್ನೇಹದಿಂದ ಹೊಳೆಯುತ್ತಿದ್ದುವು. ಕೆಲವು ವಿಷಯದಲ್ಲಿ ರಾಯರು ಪಕ್ವವಾಗಿ ಯೋಚಿಸುತ್ತಾರೆಂದು ಜಗನ್ನಾಥನಿಗೆ ಅವರ ಬಗ್ಗೆ ಅಪಾರ ಗೌರವ ಮೂಡಿತು.

ರಾಯರು ಹೋದ ಮೇಲೆ ಹೊಸ ನೋಟು ಬುಕ್ಕಲ್ಲಿ ಬರೆಯಲು ಕೂತ. ಮಧ್ಯಾಹ್ನ ತನ್ನ ಮನೆದೇವರಿಗೆ, ನರಸಿಂಹ ಶಾಲಿಗ್ರಾಮಕ್ಕೆ ನಡೆಯುತ್ತಿದ್ದ ಪೂಜೆಯ ಮಂತ್ರ, ಜಾಗಟೆಯ ಶಬ್ದ ಕೇಳಿ ಕಸಿವಿಸಿಯಾಯಿತು. ಈ ಪೂಜೆ ಮುಗಿಯುತ್ತಿದ್ದಂತೆ ಮಂಜುನಾಥನಿಗೆ ಸಲ್ಲುವ ಮಹಾಮಂಗಳಾರತಿಯ ಗಂಟೆ. ತಾನು ಈ ಊರಲ್ಲಿ ಪ್ರೇತವಾಗಿಬಿಟ್ಟಿದ್ದೇನೆ ಅನ್ನಿಸಿತು. ಬರೆದ : ನನ್ನ ಮನೆಯಲ್ಲೂ ಪೂಜೆ ನಡೆಯುತ್ತಿದೆ. ಎಲ್ಲೂ ಮುಷ್ಟಿಗೆ ಸಿಗದಂತೆ ದೇವರು ಆವರಿಸಿಕೊಂಡಿದ್ದಾನೆ. ನನ್ನ ಬಾಲ್ಯದ ಕಿರೀಟ ಅವನ ಮೇಲಿದೆ. ಎಷ್ಟೊಂದು ದಿನ ಅವನ ದರ್ಶನ ಮಾಡಿ ಅಮ್ಮನ ಜೊತೆ ಹೊರಗೆ ಬಂದು ಮೆಟ್ಟಲಿನ ಮೇಲೆ ಶಾಂತವಾಗಿ ಕೂತಿಲ್ಲ. ಪ್ರಸಾದದ ಬಾಳೆಹಣ್ಣನ್ನು ಮಂಗಗಳು ಬಂದು ಕೈಯಿಂದ ಕಸಿದುಕೊಂಡು ಹೋಗುತ್ತಿದ್ದುವು. ಬಲಿಪಾಡ್ಯ, ಅಕ್ಷತ್ತದಿಗೆ, ಗಣೇಶಛತಿ, ಉತ್ಥಾನದ್ವಾದಶಿ, ಮಹಾಲಯ ಅಮಾವಸ್ಯೆ ಇತ್ಯಾದಿಯಾಗಿ ತಿಥಿಗಳನ್ನು ದೇವರಿಗೆ ಹಂಚಿಕೊಂಡು, ಸಣ್ಣ ದೊಡ್ಡ ಗಂಟೆಗಳನ್ನು ಬಾರಿಸಿಕೊಂಡು, ಹುಟ್ಟು ಸಂಭೋಗ ಸಾವುಗಳಲ್ಲಿ ಆವರ್ತಿಸುತ್ತ ಕಾಲ ಇಲ್ಲಿ ತೂಕಡಿಸುತ್ತಿದೆ. ಹೊಲೆಯರು ಬಡಿದೆಬ್ಬಿಸಿಯಾರೆಂದು ನನ್ನ ಭರವಸೆ. ಆದರೆ ನೆರಳಿನಂತೆ ಬರುತ್ತಾವೆ. ಅವಕ್ಕಿನ್ನೂ ವ್ಯಕ್ತಿತ್ವ ದಕ್ಕದ್ದರಿಂದ ನನ್ನ ವಿಚಾರ ಪ್ರೇತವಾಗಿ ಉಳಿದಿವೆ.

ಸಾಯಂಕಾಲ ಹೊರಗೆ ಬಂದು ಅಂಗಳದಲ್ಲಿ ಕಾದ. ದನಗಳೆಲ್ಲ ಕೊಟ್ಟಿಗೆ ಸೇರುವುದನ್ನು ನೋಡುತ್ತ ಚಿಕ್ಕಮ್ಮ ನಿಂತಿದ್ದರು. ತನ್ನ ನಿರ್ಧಾರ ಬಹಿರಂಗವಾದಂದಿನಿಂದ ಅವರು ಒಂದೇ ಹೊತ್ತು ಊಟ ಮಾಡುತ್ತಿದ್ದಾರೆಂದು ಜಗನ್ನಾಥನಿಗೆ ಗೊತ್ತಾಗಿತ್ತು. ಈ ಮೌನ ಯುದ್ಧ ಅವನಿಗೆ ಅಸಹನೀಯವಾಗಿತ್ತು. ಅವರ ಜೊತೆ ಕೂತು ಮಾತಾಡಿ ತನ್ನ ಕಡೆ ಒಲಿಸಿಕೊಳ್ಳುವುದು ಅಸಾಧ್ಯ. ಮೌನವೇ ಅವರ ಅಸ್ತ್ರ. ಜಗನ್ನಾಥನಿಗೆ ಚಿಕ್ಕಿಯ ಬಗ್ಗೆ ರೇಗಿತು. ನಮ್ಮ ಜೀವನದ ಗೊಡ್ಡುತನವೆಲ್ಲ ಅವರಲ್ಲಿ ಹೆಪ್ಪುಗಟ್ಟಿದೆ ಎನ್ನಿಸಿದೆ.

ಹೊಲೆಯರು ಹತ್ತಿರ ಬಂದಾಗಲೇ ಜಗನ್ನಾಥನಿಗೆ ತಿಳಿದದ್ದು – ಅವು ಪಂಚೆಯನ್ನು ಮೇಲಕ್ಕೆತ್ತಿ ಕಟ್ಟಿ ಬಂದಿಲ್ಲ. ಪಂಚೆಯನ್ನು

ಹರಿದು ಅರ್ಧಮಾಡಿ ಉಟ್ಟಿದ್ದಾವೆಂದು. ಬಟ್ಟೆಯ ಮೇಲಿನ ಆಸೆಯಿಂದ ಉಳಿದವೂ ಲಂಗೋಟಿ ಕಟ್ಟಿ ಹಾಜರಾಗಿದ್ದುವು. ಜಗನ್ನಾಥ ಸಿಟ್ಟನ್ನು ನುಂಗಿಕೊಂಡು ನೋಡಿದ, ಹಾಸ್ಯಾಸ್ಪದವಾಗಿ ಎದುರು ನಿಂತಿದ್ದುವು. ಎಂದೂ ಕಾಲರ್ ಇರುವ ಅಂಗಿ ಹಾಕಿರದಿದ್ದರಿಂದ ಅವು ಮುಜುಗರದಿಂದ ಕಾಲರನ್ನು ಒಳಗಡೆ ಮಡಚಿಕೊಂಡಿದ್ದುವು; ಯಾವುದೇ ತೂತಿಗೆ ಯಾವುದೋ ಗುಂಡಿ ಹಾಕಿಕೊಂಡಿದ್ದುವು, ನೆರಪೇತಲಗಳಂತೆ ಭಯದಲ್ಲಿ, ಹೊಸ ಬಟ್ಟೆ ತೊಟ್ಟ ಅವಮಾನದಲ್ಲಿ ನಿಂತಿದ್ದುವು.

'ಪಂಚೇನ ಏನು ಮಾಡಿದ್ರಿ?' ಪಿಳ್ಳನನ್ನು ದುರುಗುಟ್ಟಿ ನೋಡುತ್ತ ಜಗನ್ನಾಥ ಕೇಳಿದ.

ಉತ್ತರ ಕೇಳಿ ಜಗನ್ನಾಥನಿಗೆ ನಗು ಬಂತು. ಮನೆಯಲ್ಲಿ ಅಪ್ಪ, ಚಿಗಪ್ಪ, ಅಣ್ಣ, ತಮ್ಮ, ಬಂದ ನೆಂಟ ಹೀಗೆ ಹಲವರಿಗೆ ಅರ್ಧ ಹರಿದ ಪಂಚೆಗಳನ್ನು ಲಂಗೋಟಿ ಮಾಡಿ ಹಂಚ ಬೇಕಾಯ್ತು. ಅರ್ಧ ಪಂಚೆ ನಿಮಗೆ ಸಾಕೆಂದು ಮನೆಯಲ್ಲಿ ಗದರಿಸಿದ್ದರಿಂದ ಬೇರೆ ಮಾರ್ಗವಿರಲಿಲ್ಲ. ಜಗನ್ನಾಥ ಹೇಳಿದ: ಈ ಅರ್ಧ ಪಂಚೆಗಳನ್ನೂ ಲಂಗೋಟಿ ಮಾಡಿ ಹಂಚಿಬಿಡಿ. ನಿಮಗೆ ಬೇರೆ ಪಂಚೆ ಕೊಡುತ್ತೇನೆ. ನೀವು ಇಡಿಯಾಗಿ ಉಟ್ಟುಕೋಬೇಕು. ನನ್ನ ಹಾಗೇ ನಾಚಿಕೊಳ್ಳದೆ ಪೇಟೆಯಲ್ಲೂ ಓಡಾಡಬೇಕು. ನೀವು ನನ್ನ ಜೊತೆ ಮಂಜುನಾಥ ಗುಡಿಗೆ ಬರುವವರು. ಉಳಿದ ಹೊಲೆಯರನ್ನು ಮೂಢನಂಬಿಕೆಯಿಂದ ಎಚ್ಚರಿಸಬೇಕಾದ ಹೊಸ ಜನಾಂಗದವರು.

ತನ್ನ ಎಷ್ಟೋ ಶಬ್ದಗಳು ಅವಕ್ಕೆ ಅರ್ಥವಾಗದೇ ಕಣ್ಣು ಬಿಡುತ್ತ ನಿಂತಿರುವುದು ಕಂಡು ಜಗನ್ನಾಥನಿಗೆ ಮತ್ತೆ ನಾಚಿಕೆಯಾಯಿತು. ತಾನು ನಿರುಪಯೋಗಿ ಎಂದು ಹೇಸಿಗೆ ಪಡುತ್ತ ಒಳಗೆ ಹೋದ. ಇನ್ನಷ್ಟು ನಾನು ಗಟ್ಟಿಯಾಗಬೇಕು, ಹೇಗೆ ಎಂದು ರಾತ್ರೆಯೆಲ್ಲ ಯೋಚಿಸಿದ. ಉಳುವುದಷ್ಟೇ, ಬಿತ್ತುವುದಷ್ಟೇ, ಮಳೆಗಾಗಿ ಕಾಯುವುದಷ್ಟೇ ತನು ಮಾಡಬಹುದಾದ್ದೆನ್ನಿಸಿ ನಿರಾಶೆಯ ಮಂಕಿನಲ್ಲಿ ಬೆಳಿಗ್ಗೆ ಎದ್ದು ಗೇರುಗುಡ್ಡ ಸುತ್ತಾಡಿ ಬಂದ. ಮನೆಯೊಳಗೆಲ್ಲ ಚಿಕ್ಕಿಯ ನಿಟ್ಟುಸಿರು ಕೇಳೀಸುತ್ತಿದೆ ಎನ್ನಿಸಿತು.

ತನಗೆ ತಿಳಿಯದಂತೆ ಚಿಕ್ಕಿ ತನ್ನನ್ನು ಚುಚ್ಚುತ್ತಿದ್ದರು. ಕಾಫಿ ಕೊಡುವಾಗ ಅವರು ನೋಡುವ ಕ್ರಮದಲ್ಲಿ, ತಲೆ ಕೆದರಿಕೊಂಡಿರುವ ವಿಧದಲ್ಲಿ, ಉಪವಾಸದಿಂದ ಮುಖ ಬಾಡಿಸಿ ಕೊಂಡ ರೀತಿಯಲ್ಲಿ ; ಎಲ್ಲಕ್ಕಿಂತ ಹೆಚ್ಚಾಗಿ ಊಟದ ಹೊತ್ತಿಗೆ ಬರಿದಾದ ಊಟದ ಮನೆಯನ್ನು ಅವರು ನೋಡಿ, ನಿಟ್ಟುಸಿರಿಡುತ್ತ ಜಗನ್ನಾಥನ ಕಣ್ಣು ಹುಡುಕುವ ಸಂಕಟ ತುಂಬಿದ ಮೌನದಲ್ಲಿ.

ಮಧ್ಯಾಹ್ನ ಟಪಾಲಿನ ಜೊತೆ ಶ್ರೀಪತಿರಾಯರು ಬಂದರು. ತನ್ನ ಕ್ರಿಯೆಯನ್ನವರು ಮನಸಾರೆ ಒಪ್ಪದಿದ್ದರೂ ಸುದ್ದಿಯ ಬಗ್ಗೆ ತೋರಿಸುತ್ತಿದ್ದ ಸಂಭ್ರಮ ನೋಡಿ ಜಗನ್ನಾಥನಿಗೆ ಅವರ ಬಗ್ಗೆ ಕೆಲವೊಮ್ಮೆ ಗೌರವ ಕಡಿಮೆಯಾಗುತ್ತಿತ್ತು.

'ಅಲ್ಲ ಜಗಣ್ಣ, ಗುರುಪ್ಪಗೌಡ ಏನಾದರೂ ಸ್ಟೇಟ್‌ಮೆಂಟ್ ಕೊಟ್ಟಿದ್ದಾನೆ ನೋಡು – ಖದೀಮ! ಹರಿಜನರು ದೇವಸ್ಥಾನದ ಒಳಗೆ ಬರಬಾರ್ದು ಅನ್ನಲಾರ – ಕಾಂಗ್ರೆಸ್‌ಮನ್‌ಅಲ್ವ? ಬರಬೇಕು ಅನ್ನಲಾರ. ಯಾಕೆಂದ್ರೆ ಓಟು ಸಿಗಲ್ಲ. ಏನೋ ಹೇಳೊ ಜಗಣ್ಣ – ಮೂಲಭೂತ ರಾಜಕೀಯಕ್ಕೆ ಈ ದೇಶದಲ್ಲಿ ತಯಾರಾಗೋರು ಬ್ರಾಹ್ಮಣರೇ ಹೊರ್ತು ಶೂದ್ರರಲ್ಲ. ಯಾಕೆಂದರೆ

ಈಗಿರೋ ವ್ಯವಸ್ಥೇಂದ ಅವರಿಗೆ ಸಾಕಷ್ಟು ಲಾಭವಾಗ್ತ ಇದೆ. ಎಲ್ಲಾ ನೌಕರೀನೂ ಹೆಚ್ಚು ಕಡಿಮೆ ಈಗ ಗೌಡರೀಗೊ ಲಿಂಗಾಯ್ತರಿಗೋ ಸಿಗ್ತಾ ಇದೆ ನೋಡು. ಹಿಂದೆ ಬ್ರಿಟಿಷರಿದ್ದಾಗ್ಲೂ ಅಷ್ಟೆ – ಇವೆಲ್ಲ ಜಸ್ಟೀಸ್ ಪಾರ್ಟೀಲಿ ಇದ್ದುವು. ತಮಾಷೆ ಗೊತ್ತ? ಈ ಶೂದ್ರರೆಲ್ಲ ಈಗ ನವ ಬ್ರಾಹ್ಮಣರಾಗ್ತಾ ಇದಾರೆ. ಕಂದಾಯದ ಮಂತ್ರಿ ಬಿಷ್ಟೆಗೌಡ ಒಂದು ಸಾರಿ ಗುರಪ್ಪ ಗೌಡನ ಮನೆಗೆ ಊಟಕ್ಕೆ ಬಂದಿದ್ನಂತೆ. ಆಯ್ತು? ಬಿರಿಯಾನಿ ಊಟಾನ್ನ ಗುರುಪ್ಪ ಗೌಡ ಹಾಕಿಸ್ಥ. ಬಿಷ್ಟೇಗೌಡ ಬಿರಿಯಾನಿ ಉಂಡ. ಉಂಡಾದ ಮೇಲೆ ಮೊಸರನ್ನ ಬಂತು. ಮೊಸರನ್ನ ಬ್ರಾಹ್ಮಣರ ಊಟ ಅಲ್ವ? ಬಿಷ್ಟೇಗೌಡ ಶೂದ್ರ – ಬಿರಿಯಾನಿ ತಿಂದ ಬಾಯನ್ನು ತೊಳ್ಕೊಂಡು ಬಂದು ಬ್ರಾಹ್ಮಣ – ಮೊಸರನ್ನಾನ್ನ ತಿಂದನಂತೆ. ಹೊಟ್ಟೇಲಿ ಒಟ್ಟಾದ್ರೂ ಪರವಾಗಿಲ್ಲ – ಬಾಯಲ್ಲಿ ಬ್ರಾಹ್ಮಣ ಮತ್ತು ಶೂದ್ರ ಆಹಾರ ಒಟ್ಟಾಗಬಾರ್ದೂಂತ. ಇಂಥ ಜನ ಇವು...’

ರಾಯರು ಏನೋ ಹೇಳಹೋಗಿ ಏನೋ ಹೇಳಿದ್ದರು. ವಾಸ್ತವಿಕತೆಯ ಪ್ರಜ್ಞೆ ರಾಯರನ್ನು ಹೇಗೆ ಸಿನಿಕನನ್ನಾಗ ಮಾಡುತ್ತಿದೆ ಕಂಡು ಜಗನ್ನಾಥ ನೊಂದ. ಶೂದ್ರ ಹೀಗೆ ವರ್ತಿಸುತ್ತಾಬೆಂಬ ನೋವಿಗೆ ಬದಲಾಗಿ ರಾಯರು ಅವನ ದೌರ್ಬಲ್ಯ ಕಂಡು ಹಿಗ್ಗುತ್ತಿದ್ದರು. ಬ್ರಾಹ್ಮಣನ ಪ್ರಜ್ಞೆಯಲ್ಲಿ ಹೊಕ್ಕಿರುವ ಈ ಕೊಂಕು ಹೇಗೆ ಅವನನ್ನು ಪರಿಕೀಯನನ್ನಾಗಿ ಮಾಡುತ್ತದೆ ಎಂದು ಜಗನ್ನಾಥನಿಗೆ ನೋವಾಯಿತು. ಮಾತು ಬದಲಾಯಿಸಲು.

‘ರಾಯರೆ ಪೇಪರ್‌ನಲ್ಲಿ ಏನಿದೆ?’ ಎಂದು ಕೇಳಿದ. ರಾಯರು ಪೇಪರ್ ಬಿಚ್ಚಿ ಮೈಸೂರು ಸೋಷಲಿಸ್ಟ್ ಪಕ್ಷದ ನೀಲಕಂಠಸ್ವಾಮಿ ಚಳುವಳಿಯಲ್ಲಿ ತಾನು ಭಾಗವಹಿಸುವುದಾಗಿ ಕೊಟ್ಟು ಹೇಳಿಕೆ ಓದಿದರು. ‘ಇವನನ್ನ ನಂಬಬೇಡಯ್ಯ. ಸೋಷಲಿಸ್ಟ್ ಪಕ್ಷದ ಸೆಕ್ರೆಟರಿ ಬ್ರಾಹ್ಮಣಾಂತ ಜಗಳ ಆಡಿ ಇವ ಮೈಸೋಪ ಅಂತ ಹೊಸ ಪಾರ್ಟಿ ಕಟ್ಟಿದಾನೆ. ಲಿಂಗಾಯುತ. ಯಾವತ್ತು ಕಾಂಗ್ರೆಸ್ ಸೇರ್ತಾನೊ ಹೇಳಕ್ಕಾಗಲ್ಲ. ಅವನ ಜೊತೆ ರಂಗರಾವ್ ಅಂತ ಇನ್ನೊಬ್ಬ ಇದಾನೆ. ಹೆಸರು ಮಾತ್ರ ಬ್ರಾಹ್ಮಣಂದು – ಆದ್ರೆ ಅವ ಗೌಡ. ಪಕ್ಕಾ ಬ್ರಹ್ಮದ್ವೇಷಿಯಂತೆ. ನಮ್ಮ ಸರ್ವೋದಯದ ಅನಂತಕೃಷ್ಣನಿಗೆ ಇವರೆಲ್ಲ ಗೊತ್ತು. ಅಂದ ಹಾಗೆ ಅವನೂ ಕಾಗದ ಬರ್ದಿದಾನೆ – ಬರ್ತಾನಂತೆ. ಒಟ್ಟಿನಲ್ಲಿ ಯಾವ ಇಶ್ಯಾನೂ ಇಲ್ದೆ ಸೋಮಾರಿಗಳಾಗಿದ್ದ ರಾಜಕಾರಣಿಗಳಿಗೆ ನೀನೊಂದು ಪ್ಲ್ಯಾಟ್‌ಫಾರಂ ಮಾಡಿಕೊಟ್ಟ ಹಾಗಾಯ್ತು.’

ರಾಯರು ನಕ್ಕರು. ಆದೆ ಜಗನ್ನಾಥನಿಗೆ ಹೀಗೆ ತನ್ನ ಉದ್ದೇಶವೆಲ್ಲ ಚಿಲ್ಲರೆ ಯಾದೀತೆಂದು ಹೆದರಿಕೆಯಾಯಿತು. ನಾನು ಯೋಚಿಸಿದ್ದ ತೀವ್ರವಾದ ಕ್ರಿಯೆಯನ್ನು ಪರಿಶುದ್ಧವಾಗಿ ಉಳಿಸಿಕೊಳ್ಳುವುದು ಹೇಗೆಂಬುದೇ ತನ್ನ ಮುಂದಿನ ಹೋರಾಟವಾಗಬೇಕು.

ಇವುಗಳನ್ನೆಲ್ಲ ತೀರ ಮನಸ್ಸಿಗೆ ಹಚ್ಚಿಕೊಳ್ಳಕೂಡದೆಂದು ಮತ್ತೆ ಹೊಲೆಯರಿಗಾಗಿ ಕಾದ. ಸಾಯಂಕಾಲ ಜಗನ್ನಾಥನ ಹಾಗೆ ಬಟ್ಟೆ ತೊಟ್ಟು ವಿಕಾರವಾಗಿ ಹೆಜ್ಜೆ ಹಾಕುತ್ತ, ಹತ್ತು ಜನ ಹೊಲೆಯರು ಯುವಕರೂ ಪೆಚ್ಚು ಮುಖ ಹೊತ್ತ ಬಂದವು. ಬಟ್ಟೆ ಕೊಳೆಯಾದೀತೆಂದು ಮಣ್ಣಿನ ಅಂಗಳದ ಮೇಲೆ ಕೂರಲೊಲ್ಲವು; ಸಿಮೆಂಟ್ ಚಿಟ್ಟೆ ಹತ್ತಿ ಕೂರುವ ಧೈರ್ಯ ಮಾಡಲೊಲ್ಲವು. ದೊಡ್ಡ ತಪ್ಪನ್ನು ತಲೆಯ ಮೇಲೆ ಹೊತ್ತವರಂತೆ ಅಂಗಳದಲ್ಲಿ ನಿಂತವು. ಅವು ಹಾಗೆ ನಿಂತೇ ಇದ್ದದ್ದರಿಂದ ಮಾತಾಡುವುದಾಗಲೀ ಓದುವುದಾಗಲೀ ಜಗನ್ನಾಥನಿಗೆ ಅಸಾಧ್ಯವಾಯ್ತು. ಏನೇನೋ ಓಡಾಡುತ್ತ ಹೇಳಿದ. ಏನನ್ನೂ ಕೇಳಿಸಿಕೊಳ್ಳದ ಅವು ನಿಂತೇ ಇದ್ದುವು. ಮಂಡ್ಯದ ಹಳ್ಳಿಯೊಂದರಲ್ಲಿ ನಡೆದ ಘಟನೆಯನ್ನು ವಿವರಿಸಿದ. ನೋಡಿ, ಆ

ಹೊಲೆಯ ಮಾಡಿದ್ದು ಎಲ್ಲರೂ ಮಾಡುವಂತಹ ತಪ್ಪೆ. ಆದರೆ ಅವ ಹೊಲೆಯನಾದ್ದರಿಂದ ಹಿಂದೂಗಳ ಕಣ್ಣಿಗೆ ಭಯಂಕರವಾಗಿ ಕಂಡಿತು. ಅವನನ್ನು ಮರಕ್ಕೆ ಕಟ್ಟಿಹಾಕಿ ಕೈಬೆರಳುಗಳನ್ನು ಕತ್ತಿಯಿಂದ ಕೊಚ್ಚಿಹಾಕಿದರಂತೆ. ಈ ದೇಶದಲ್ಲಿ ನೀವು ಅಧಿಕ ಸಂಖ್ಯೆಯಲ್ಲಿದ್ದೀರಿ. ನೀವು ಎದ್ದು ನಿಂತರೆ ಎಲ್ಲ ಬದಲಾಗುತ್ತೆ. ಆದ್ದರಿಂದ ನೀವು ನನ್ನ ಜೊತೆ ಬಲು ಕಾರ್ಣಿಕನೆಂದು ಇಡೀ ದೇಶದಲ್ಲಿ ಪ್ರಸಿದ್ಧವಾದ ಮಂಜುನಾಥನ ಗುಡಿಗೆ ಬರಬೇಕು. ನಮ್ಮ ಕಣ್ಣಿನಲ್ಲಿ ನೀವಿನ್ನೂ ಮನುಷ್ಯರೇ ಅಲ್ಲ. ಕುರಿ ಕೋಣಕ್ಕಿಂತಲೂ ನೀವು ಅತ್ತತ್ತ. ಆದ್ರಿಂದ ನೀವು ಕೋಪ ಮಾಡಿಕೊಂಡರೆ ನಮ್ಮ ಕಣ್ಣಿಗೆ ಮನುಷ್ಯರಂತೆ ಕಾಣಕ್ಕೆ ಶುರುವಾಗ್ತಿರಿ. ಇತ್ಯಾದಿ.

ಎಷ್ಟು ಸರಳವಾಗಿ ಮಾತಾಡಿದ್ದರೂ ಅವು ನಿಜವಾಗಿ ಕೇಳಿಸಿಕೊಂಡಂತೆ ಭಾಸವಾಗಲಿಲ್ಲ. ಎದುರಿಗಿದ್ದರೂ ಎಲ್ಲೋ ಇದ್ದಂತೆ, ಎಲ್ಲಿ ಇರಲೂ ತಾವು ಅನರ್ಹರೆಂಬಂತೆ, ಯಾರಾದರೂ ಬಿಳಿ ಬಟ್ಟೆಯಲ್ಲಿದ್ದ ತಮ್ಮನ್ನು ಕಂಡಾರೆಂದು ದಿಗಿಲುಪಡುತ್ತ ಅವು ನಿಂತಿರುವ ಜೋಬದ್ರ ಭಂಗಿ ಕಂಡು ಜಗನ್ನಾಥನಿಗೆ ತಾನೂ ಹೊಲೆಯರು ಒಟ್ಟಾಗಿ ಮೀರಬೇಕಾದ ಕಠೋರ ಸತ್ಯಗಳೆಲ್ಲ ಕಣ್ಣಿಗೆ ಕಟ್ಟಿದಂತಾಯಿತು.

ಥಟ್ಟನೇ ಜಗನ್ನಾಥನಿಗೊಂಡು ವಿಚಾರ ಹೊಳೆಯಿತು. ತನ್ನ ಪ್ರಯೋಗ ಕ್ರೂರವಾಗದೆ ನಿಜವಾಗದು; ಆಘಾತವಾಗದೆ ಇವು ಎಚ್ಚರವಾಗುವುದಿಲ್ಲ. ಆದರೆ ತನ್ನಂತಹ ಲಿಬರಲ್ ಮನೋಧರ್ಮದ ಸಾತ್ವಿಕ ಈ ಆಘಾತವನ್ನು ಉಂಟುಮಾಡಬಲ್ಲೆನೆ?

ಹೊಲೆಯರನ್ನು ಕಳಿಸಿ ತನ್ನ ರೂಮಿಗೆ ಬಂದು ಕಾಲುಚಾಚಿ ಮಲಗಿದ. ಕಿಟಕಿಯಾಚೆ ಮಸಿಯಾಗುತ್ತ ಇರುವ ಗುಡ್ಡಗಳನ್ನು ಮರಗಳನ್ನು ದಿಟ್ಟಿಸುತ್ತ ತನ್ನ ದುರ್ಬಲತೆಯ ಬಗ್ಗೆ ಹೇಸಿಗೆ ಪಟ್ಟ. ಎಲ್ ಪರೆ ಹರಿದು ಒಳಗಿರುವುದನ್ನೂ ಹೊರಗಿರುವುದನ್ನೂ ಯಾಕೆ ನಾನು ನೋಡಲಾರೆ? ಬರೆಯಬೇಕೆನ್ನಿಸಿ ಮೇಜಿನ ಎದುರು ಕೂತು ನೋಟ್ ಬುಕ್ಕಲ್ಲಿ ಹೀಗೆ ಬರೆದ :

* * *

ಉದಾತ್ತನಾಗಿ ನನಗೆ ಹೊಲೆಯರನ್ನು ಮುಟ್ಟಬೇಕೆಂದು ಅನ್ನಿಸೀತು. ಆದರೆ ಹೊಟ್ಟೆಗಿಚ್ಚಿನಿಂದ ಅವರಿಗೆ ನನ್ನನ್ನು ಮುಟ್ಟಬೇಕೆಂಬ ಆಸೆ ಮೂಡಬಹುದು. ಹಾಗಿದ್ದಲ್ಲಿ ಅವರಲ್ಲಿ ಹೊಟ್ಟೆಗಿಚ್ಚು, ಆಸೆಗಳನ್ನು ಹುಟ್ಟಿಸಲೂ ನಾನು ಅಂಜಕೂಡದು. ಎಂಗೆಲ್ಸ್ ಹೇಳುವುದಿಲ್ಲವೇ? ಚರಿತ್ರೆ ಮುಂದುವರಿಯಲು ಕಾರಣ evil passions of men. ಮಂಜುನಾಥನ ಗರ್ಭವಾಸ ಮುಗಿಯಲು ಕ್ರೌರ್ಯ ಅವಶ್ಯವಾದರೆ ಸಿದ್ಧನಾಗಬೇಕು. ಹೊಲೆಯರು ತಮ್ಮ ಮುಗ್ಧತೆ ಕಳೆದುಕೊಳ್ಳುವ ತನಕ ಬಂಡಾಯ ಏಳುವುದಿಲ್ಲ. ಈ ಮುಗ್ಧತೆ ಕಳೆಯಲು ಅಸೂಯೆ, ಲೋಭ, ರೋಷ ಎಲ್ಲವೂ ಪ್ರಾಯಶಃ ಆವಶ್ಯಕ. ಎಚ್ಚರಾಗಲು ಆಯಸ್ಥಳಗಳಲ್ಲಿ ಚಿವುಟಬೇಕು. ಚಿಟಿಕೆ ಹಾಕಬೇಕು.

ನಾವು ಬಯಸುವುದನ್ನೆಲ್ಲ ಹೊಲೆಯರೂ ಬಯಸಬೇಕು. ಬ್ರಾಹ್ಮಣ ಹುಡುಗಿಯನ್ನು ಹೊಲೆಯ ಆಸೆಪಡುವಂತಾಗಬೇಕು. ಬ್ರಾಹ್ಮಣ ಹುಡುಗಿಗೆ ಹೊಲೆಯನ ಜೊತೆ ಮಲಗುವ ಆಸೆ ಹುಟ್ಟಬೇಕು.

ಆಸೆ ಹುಟ್ಟದೆ ಅವಕ್ಕೆ ಓದು ಬರೆಹ ಹತ್ತುವುದಿಲ್ಲ. ಆಸೆಯಿಂದ ಸಂಕಟ, ಸಂಕಟದಿಂದ ಪ್ರಜ್ಞೆ.

ಈಗ ಬರಿ ಪ್ರೇತಗಳು, ಹತ್ತಿರ ಹಾಯಬಾರದ ನೆರಳುಗಳು, ಮನುಷ್ಯ ಪರಮಾತ್ಮ ಸ್ವರೂಪಿಯೆಂದ ಶಂಕರನೂ ಅಸ್ಪೃಶ್ಯತೆಯನ್ನು ಖಂಡಿಸಲಿಲ್ಲ. ಕಾರಣ – ಹೊಲೆಯರು ಕೈಯೊಡ್ಡಲಿಲ್ಲ. ಆಸೆಯಲ್ಲಿ ಬೆಂದು, ಕುದ್ದು ಮನುಷ್ಯರಾಗಲಿಲ್ಲ.

ಒಳ್ಳೆ ಹೆಸರಿಗೆ ಅಧಿಕಾರವಿಲ್ಲ. ಈ ಬಟ್ಟೆಗೆ ಅಧಿಕಾರವಿಲ್ಲ. ತಪ್ಪು ಮಾಡುವ ಅಧಿಕಾರವಿಲ್ಲ. ಈ ನಾಡಿನಲ್ಲಿ ಅವರಿಗೆ ಮೀರಿ ನಿಲ್ಲಲಿದ್ದ ಒಂದೇ ಒಂದು ಮಾರ್ಗ – ಭಕ್ತಿ. ದೀನರು ಈ ನಾಡಿನಲ್ಲಿ ಅತಿ ದೀನನಾಗಲು ಮಾತ್ರ ಸ್ವಾತಂತ್ರ್ಯ. ದಾಸಾನುದಾಸನಾಗುವ ಪೈಪೋಟಿಯಲ್ಲಿ ಎಲ್ಲರನ್ನು ಮೀರಿಸಿ ಆಳ್ವಾರಾಗುವ ಹಕ್ಕು ಇದೆ.

ಎಲ್ಲಾ ಸಾಮಾಜಿಕ ಕಟ್ಟಳೆಗಳನ್ನು ಮೀರುವುದು ಅತ್ಯಂತ ದೀನನಾಗಬಲ್ಲ ಅನುಭಾವಿಗೆ ಮಾತ್ರ ಸಾಧ್ಯವೆಂದು ಈ ದೇಶ ಎಂತಹ ಮೋಸ ಮಾಡಿತು! ದೇವರ ವಿಷಯದಲ್ಲಿ ದೈನ್ಯನಾಗುವ ಶಕ್ತಿ ಬ್ರಾಹ್ಮಣನಿಗಿಂತಲೂ ಹೊಲೆಯನಿಗೆ ಹೆಚ್ಚು. ಈಗ ಹೇಲು ಹೊರುವವರು ಮುಂದೆ ತುಳಸಿಯಾಗಿ ಹುಟ್ಟಿ ದೇವರ ಕಾಲು ಸೇರುವ ಕನಸನ್ನು ಅವರಿಗೆ ಹಚ್ಚಿದ ಜಾಣರು ನಾವು. ತ್ಯಾಗದ ಮೂಲಕ ಮಾತ್ರ, ದೈನ್ಯದ ಮೂಲಕ ಮಾತ್ರ, ಅಹಂಕಾರ ವಿಸರ್ಜನೆಯ ಮೂಲಕ ಮಾತ್ರ – ಎನ್ನುವ ಸಮಾಜ ನಿತ್ಯದ ಬದುಕಿನಿಂದ ಅರ್ಥವನ್ನೆಲ್ಲ ಕಳೆದುಕೊಳ್ಳುತ್ತದೆ.

ನಿತ್ಯಜೀವನ ಅರಳಬೇಕೆಂದು ಹೊರಟ ಕ್ರಾಂತಿಕಾರನೂ ಹಾಗೇಯೇ ನಿತ್ಯ ಜೀವನದಿಂದ ದೂರವಾಗಬೇಕಾದೀತು.

ಇಷ್ಟು ಖಂಡಿ ನಿಜ: ಹೊಲೆಯರಲ್ಲಿ ಆಸೆ ಹುಟ್ಟಬೇಕು, ಅಸೂಯೆ ಹುಟ್ಟಬೇಕು. ಪ್ರಾಯಶಃ ಆಗ ಮಾತ್ರ ಪಿಂಡಕ್ಕೆ ಕಣ್ಣು ಕಿವಿ ಮೂಗು ಉಗುರುಗಳು ಹುಟ್ಟುತ್ತವೆ.

* * *

ಸ್ವಲ್ಪ ಮಜ್ಜಿಗೆಯನ್ನು ಊಟ ಮಾಡಿ, ಅಂಗಳದಲ್ಲಿ ಅಡ್ಡಾಡಿ, ರೂಮಿಗೆ ಹೋದ. ಏಟ್ಸ್ ಕವಿಯ Easter ೧೯೧೬ ಓದುತ್ತ ಯೋಚಿಸುತ್ತ ಕಣ್ಣು ಬಾಡಿತು. ದೀಪ ಆರಿಸಿ ಮಲಗಿದ. ಹೊರಗೆ ಬಿದಿರು ಹಿಂಡುಗಳಲ್ಲಿ ಜಗ್ ಎಂದು ಮಿಣುಕು ಹುಳುಗಳು ಹೊತ್ತಿ ಆರುವುದನ್ನು ನೋಡುತ್ತ ನಿದ್ದೆ ಮಾಡಿದ.

ಬಹಳ ಉತ್ಸಾಹದಿಂದ ಜಗನ್ನಾಥ ಬೆಳಿಗ್ಗೆ ಎದ್ದು ಮುಖ ತೊಳೆದು ಕಾಫಿ ಕುಡಿದು ಗೇರು ಗುಡ್ಡದ ಮೇಲೆ ಸುತ್ತಾಡಿ ಬರಲು ಹೋದ. ತೊಯ್ದ ಜೇಡರ ಬಲೆಗಳ ಮೇಲೆ, ಹಸಿರು ಹುಲ್ಲಿನ ಮೇಲೆ, ಹಿಮವನ್ನು ಹರಿದು ಬಿದ್ದ ಬಿಸಿಲು ಸುಂದರವಾಗಿತ್ತು; ದೇವಸ್ಥಾನದ ಶಿಖರವನ್ನು ಆಭರಣ ಮಾಡಿತ್ತು. ಮಾರ್ಗರೆಟ್ ಕಾಗದದ ವಾಕ್ಯಗಳನ್ನೆಲ್ಲ ನೆನಸಿಕೊಂಡ. ತನ್ನ ಸ್ವಭಾವಕ್ಕೆ ಸಂಭ್ರಮದ ಅಗತ್ಯ ಎಷ್ಟಿದೆಯೆಂದು ತಿಳಿದೂ ಈಗ ಜಗನ್ನಾಥನಿಗೆ ಕಸಿವಿಸಿಯಾಗಲಿಲ್ಲ. ನಾನು ನಾನೇ, ಏನು

ಮಾಡಲಿಕ್ಕಾಗುತ್ತೆ ಎಂದು ಕಾಕೆಹಣ್ಣಿನ ಗಿಡಗಳನ್ನು ಹುಡುಕುತ್ತ ಓಡಾಡಿದ. ಗುಡ್ಡದ ದಾಸವಾಳದ ಹಣ್ಣುಗಳು, ಕಾಕೆಹಣ್ಣುಗಳು ಎಂದರೆ ಹುಡುಗನಾಗಿದ್ದಾಗ ತನಗೆ ಬಹಳ ಪ್ರೀತಿ.

ತನ್ನ ಮನಸ್ಸು ಯಾವುದೋ ನಿಶ್ಚಯಕ್ಕೆ ಬಂದಿದೆ; ಆದರೆ ಅದು ಯಾವುದೆಂದು ಸ್ಪಷ್ಟವಾಗಲಿಲ್ಲ. ತಿಂಡಿಯಾದ ಮೇಲೆ ಬರೆಯುತ್ತ ಕೂತ. ಪೇಟೆಗೆಂದು ಹೊರಟ. ಜನ ತನ್ನನ್ನು ದ್ವೇಷ, ಭಯಗಳಿಂದ ನೋಡತ್ತಾರೆಂದು ಮುಜುಗರವಾಗಲಿಲ್ಲ. ಕೆದರಿದ ಕ್ರಾಪು ಹಣೆ ತುಂಬ ವಿಭೂತಿಯ ವೆಂಕಟಕೃಷ್ಣರಾಯರನ್ನು ಉತ್ಸಾಹದಿಂದ ಮಾತಾಡಿಸಿದ. ಬೆಳಿಗ್ಗೆ ನಾಲ್ಕು ಗಂಟೆಗೆ ತಣ್ಣೀರು ಹೊಯ್ದುಕೊಂಡು, ಎರಡು ಗಂಟೆಗಳ ಕಾಲ ಪೂಜೆ ಮಾಡಿ, ನಂತರ ಗೋವುಗಳನ್ನು ತೊಳೆದು ಕುಂಕುಮ ಹಚ್ಚಿ ಪೂಜಿಸಿ, ಅಕ್ಕಚ್ಚು ಕುಡಿಯಲು ಕೊಟ್ಟು ಹಾಲು ಕರೆದು, ತದನಂತರ ಮಂಜುನಾಥ ದೇವಸ್ಥಾನಕ್ಕೆ ಹೋಗಿ ಅಲ್ಲಿ ಮಧ್ಯಾಹ್ನದ ತನಕ ಕಣ್ಣು ಮುಚ್ಚಿ ಜಪಿಸುತ್ತ ಕೂರುತ್ತಿದ್ದ, ವಾರಕ್ಕೆರಡು ಬಾರಿಯಾದರೂ ಅರಳಿ ಮರದ ಬುಡದಲ್ಲಿ ನಿಂತು ಗರುಡಪಕ್ಷಿಯ ದರ್ಶನವಾದ ಮೇಲೆ ಊಟ ಮಾಡುತ್ತಿದ್ದ, ಈ ನಿಷ್ಠಾವಂತ ಬ್ರಾಹ್ಮಣನನ್ನ 'ಇಷ್ಟೆಲ್ಲ ಯಾವ ಸಲುವಾಗಿ' ಎಂದು ಕೇಳಿದರೆ ಗಂಭೀರವಾಗಿ ಆತ ಉತ್ತರಿಸುತ್ತಿದ್ದ – ಮುಂದಿನ ಜನ್ಮದಲ್ಲಾದರೂ ತಾನು ಅಮೇರಿಕಾದಲ್ಲಿ ಹುಟ್ಟಬೇಕೆಂದು. ಜಗನ್ನಾಥ ನಸುನಗುತ್ತ 'ಏನು ಇವತ್ತು ಮನೆಯಲ್ಲೆ ಇದೀರಲ್ಲ' ಎಂದಿದ್ದಕ್ಕೆ 'ಇವಳು ಹೊರಗೆ ನನ್ನದೇ ಅಡಿಗೆ' ಎಂದರು. ತನ್ನನ್ನು ಆತ ದ್ವೇಷಿಸುತ್ತಿರಬಹುದು, ಆದರೆ ತೋರಿಸಿಕೊಳ್ಳುವುದಿಲ್ಲ. ಚೌಕದಲ್ಲಿ ವಾಸು ಸಿಕ್ಕಿದ. ತುಂಬ ಕಾಳಜಿಯ ಮುಖ ಮಾಡಿ 'ಈ ಹೊಲೇರ ಸವಾಸ ಕಟ್ಟಕೊಂಡು ಯಾಕೆ ಊರಿಡೀ ನಿಷ್ಠುರ ಕಟ್ಟಕೋತೀಯಯ್ಯ' ಎಂದು ಬುದ್ಧಿ ಹೇಳಿದ; ನೀವು ವಿದ್ಯಾವಂತರು, ಶ್ರೀಮಂತರು, ಹೇಗೂ ತಾಳಿಕೋತೀರಿ ಎಂದು ಬಹುವಚನದಲ್ಲಿ ಮುಂದುವರಿಸಿದ. ತನು ಅಂಗಡಿ ತೆರೆಯುವ ಪ್ರಯತ್ನ ಅಷ್ಟಕ್ಕೆ ನಿಂತಿದೆ, ಸಾಲಕ್ಕೆ ನಿಮ್ಮ ಹತ್ತಿರ ಬರಬೇಕಾಗಬಹುದೆಂದು ಸೂಚಿಸಿ ಹೊರಟುಹೋದ. ಜೋಯಿಸರ ಮನೆಯೊಳಗೆ ಹೋಗುವ ಧೈರ್ಯವಾಗಲಿಲ್ಲ; ಸೂತಕದ ಮನೆ ಬಿಕೋ ಎನ್ನುತ್ತಿತ್ತು. ರಾಯರನ್ನು ಕಂಡ; ಯಾರಿಗೋ ಅರ್ಜಿ ಬರೆದುಕೊಡುತ್ತಿದ್ದರು. ಯಾವಾಗಲೂ ಈ ಬಿಟ್ಟಿ ಕೆಲಸವೇ ಅವರ ಪಾಲಿಗೆ.

ತಾನು ಇಂಗ್ಲೆಂಡಿನ ಬರುವಾಗ ತಂದಿದ್ದ ಶಿವಾಸ್ ರೀಗಲ್ ವ್ಹಿಸ್ಕಿಯನ್ನು ಒಂದು ದಿನ ಹೋಗಿ ಪುರಾಣಿಕರಿಗೆ ಕಡಬೇಕು ಎಂದುಕೊಂಡು. ಅವರ ಹುಟ್ಟಿದ ತಾರೀಖು ಯಾವುದೆಂದು ಗೊತ್ತಿದ್ದರೆ ಚೆನ್ನಾಗಿರುತ್ತಿತ್ತು.

ಔಷಧಿ ಬಾಟ್ಲಿ ಹಿಡಿದುಕೊಂಡು ಬರುತ್ತಿದ್ದ ದೇವಸ್ಥಾನದ ಅರ್ಚಕರ ಮಗ ಗಣೇಶ ಎದುರು ಸಿಕ್ಕ. ಇವನದು ಬಹಳ ವಿಚಿತ್ರವಾದ ಮುಖವೆನ್ನಿಸಿತು. ಬಾಲಕನ ದೇಹ; ಆದರೆ ಗುಳಿಬಿದ್ದ ಕಣ್ಣುಗಳ ಮುದಿಮುಖ. ಸೀಲ್ ಹಾಕಿದಂತೆ ಮುಚ್ಚಿದ ಬಾಯಿ. ತನ್ನ ಕಡೆಯೇ ನೋಡುತ್ತಿದ್ದ ಗಣೇಶನಿಗೆ ಉತ್ತರವಾಗಿ ಜಗನ್ನಾಥ ಮುಗುಳ್ನಕ್ಕ. ಗಣೇಶ ಮಾತಾಡಲೆಂಬಂತೆ ನಿಂತಿದ್ದು ನೋಡಿ ಆಶ್ಚರ್ಯವಾಯಿತು. ಜಗನ್ನಾಥನೂ ನಿಂತ. ಗಣೇಶ ಏನೋ ಹೇಳಲು ಪ್ರಯತ್ನಿಸುತ್ತ ಉಗ್ಗುತ್ತಿರುವುದು ಕಂಡು ಜಗನ್ನಾಥನಿಗೆ ಯಾತನೆಯಾಯಿತು. ಆದರೆ ಅದನ್ನು ತೋರಗೊಂಡದಂತೆ ಇದು ಬಹಳ ಸಹಜ ಸನ್ನಿವೇಶ ಎನ್ನುವ ಹಾಗೆ ಗಣೇಶನ ಮಾತು ಪೂರ್ಣವಾಗಲು ಕಾದ. ಮುಖವನ್ನೆಲ್ಲ ವಿಕಾರವಾಗಿ ಒಡೆದುಕೊಂಡು ಗಣೇಶ, ನಿಮ್ಮಲ್ಲಿ ಶರತ್‌ಚಂದ್ರರ ಕಾದಂಬರಿಗಳು ಸಿಗುತ್ತವೆಯೇ ಎಂದು ಕೇಳಿದ. ಅವನ ಸ್ನೇಹ ಆಶ್ಚರ್ಯವೆನ್ನಿಸಿತು. 'ಇವೆ ಯಾವಾಗಲಾದರೂ ಬನ್ನಿ' ಎಂದು ಪ್ರೀತಿಯಿಂದ ಮಾತಾಡಿ ಗಣೇಶನಿಗೆ ಹಿಂಸೆಯಾಗಬಾರದೆಂದು ಜಗನ್ನಾಥ ನಡೆದುಬಿಟ್ಟ.

ಮಧ್ಯಾಹ್ನ ಪೂಜೆ ಭಟ್ಟ, ಅಡಿಗೆ ಭಟ್ಟರ ಮಕ್ಕಳ ಜೊತೆ ಊಟವಾಯ್ತು. ಚಿಕ್ಕಿಯನ್ನು ಮಾತಾಡಿಸಲು ಪ್ರಯತ್ನಿಸಿ ಸೋತು, ಕೈತೊಳೆದು ರೂಮಿಗೆ ಹೋಗುವ ಮುಂಚೆ ಆಗತಾನೇ ಪೂಜೆಯಾದ್ದರಿಂದ ಹೊಸ ಹೂವು ಹೊಸ ತುಳಸಿಗಳಿಂದಾಗಿ ಸವಿಯಾಗಿ ವಾಸನೆ ಬರುತ್ತಿದ್ದ ದೇವರ ಕೋಣೆಯ ಎದುರು ನಿಂತು ಯೋಚಿಸಿದ. ಅವನ ವಿಚಾರ ಇನ್ನಷ್ಟು ಗಟ್ಟಿಯಾಯಿತು. ತನಗೇ ಅದನ್ನು ತೀರಾ ಸ್ಪಷ್ಟಪಡಿಸಿಕೊಳ್ಳಲು ಇಚ್ಛಿಸದೆ ರೂಮಿಗೆ ಹೋಗಿ ಒಂದರ್ಧ ತಾಸು ನಿದ್ದೆ ಮಾಡುವುದು ಉತ್ತಮವೆಂದು ಕಣ್ಣು ಮುಚ್ಚಿದ. ಸಾಯಂಕಾಲ ತನಗಿರುವ ತೀವ್ರತೆಯನ್ನೆಲ್ಲ, ಶಕ್ತಿಯನ್ನೆಲ್ಲ ದುಡಿಸಿಕೊಳ್ಳಲು ಪ್ರಯತ್ನಿಸಿದ. ಲಘುವಾಗಿ ಅದೂ ಇದೂ ಯೋಚಿಸುತ್ತ ತನ್ನೊಳಗೇ ನಕ್ಕ. ವೆಸ್ಟ್ ಇಂಡಿಯನ್ನರು ಏರ್ಪಡಿಸಿದ್ದ ನೃತ್ಯ ಒಂದರಲ್ಲಿ ಮಾರ್ಗರೆಟ್ ಅವನನ್ನು ಸಂಗೀತ ಪ್ರಾರಂಭವಾದೊಡನೆ ತಮಾಷೆ ಮಾಡಲೆಂದು ಕುಣಿಯಲು ಎಳೆದಿದ್ದಳು. ಹೆಜ್ಜೆ ಹಾಕಲು ಬರದ ತಾನು ಬೆವರುತ್ತ ಎಷ್ಟು ಪೆಚ್ಚಾಗಿದ್ದೆ. ಮಾರ್ಗರೆಟ್ ಹೇಗೆ ನಕ್ಕಳು ಎಂಬುದನ್ನು ನೆನೆಸಿಕೊಂಡ. Jagan, relax ಎನ್ನುತ್ತ ಅವಳು, ತನ್ನ ಸೆಟೆದುಕೊಂಡಿದ್ದ ದೇಹವನ್ನೆಲ್ಲ ಲಯಕ್ಕೆ ಮೃದುಗೊಳಿಸಲು ವಿಶ್ವಪ್ರಯತ್ನ ಮಾಡಿ ಸೋತಿದ್ದಳು. ಮೈಮರೆತು ಕುಣಿಯುವ, ಹಾಡುವ ಜೀವನದ ಸಾಧ್ಯತೆಗಳು ಗೊತ್ತಿಲ್ಲದ ಪೆದ್ದ ನೀನು' ಎಂದು ಮಾರ್ಗರೆಟ್ ರೇಗಿದ್ದಳು. ಕುಡಿದಾಗಲೂ ತಾನು ಸಂಪೂರ್ಣ ಸಡಿಲವಾಗಿದ್ದಿಲ್ಲ.

ಥಟ್ಟನೆ ಎದ್ದು ಕೂತ. ಟ್ರಂಕಿನಿಂದ ಶಿವಾಸ್ ರೀಗಲ್ ವ್ವಿಸ್ಕಿಯ ಬಾಟಲನ್ನು ತೆಗೆದು ಕಾಗದದಲ್ಲಿ ಸುತ್ತಿ ತಲೆ ಬಾಚಿಕೊಂಡ. ಹೊರಗೆ ಒಂದು ಬಹಳ ದಿವಸಗಳಿಂದ ಉಪಯೋಗಿಸದ ಕಾರನ್ನು ಗ್ಯಾರೇಜಿನಿಂದ ಹೊರಗೆ ತಂದು ಡ್ರೈವ್ ಮಾಡಿಕೊಂಡು ಸೀದ ಪುರಾಣಿಕರ ಮನೆಕಡೆ ಹೊರಟ. ಕಾರಿನ ಮೇಲೆ ಹೋಗಬೇಕೆಂದರೆ ಅವರ ಮನೆಗೆ ತುಂಬ ಬಳಸಾಗುತ್ತದೆ, ಅದೂ ಕೊರಕಲ ದಾರಿ. ದ್ವೀಪದಂತಿದ್ದ ಅವರ ಮನೆ ತಲುಪಿ ವ್ವಿಸ್ಕಿಯನ್ನು ಹಿಡಿದುಕೊಂಡು ಎರಡು ಸಾರಿ ಬೆಲ್ ಮಾಡಿದ ಮೇಲೆ ಯಥಾಪ್ರಕಾರ ಘೂರ್ಕ ಬಂದು ಬಾಗಿಲು ತೆಗೆದು, ಸೆಲ್ಯೂಟ್ ಮಾಡಿದ, ಹಜಾರದಲ್ಲಿ ಕೂರಿಸಿ ಸ್ಲಿಪ್ಪಿನ ಮೇಲೆ ಜಗನ್ನಾಥನ ಹೆಸರು ಬರೆಸಿಕೊಂಡು ತಟ್ಟೆಯಲ್ಲಿಟ್ಟು ಮೇಲೆ ಹೋದ. ಪುರಾಣಿಕರು ಇಳಿದು ಬಂದರು. ಸ್ಲಿಪರ್ ಹಾಕಿಕೊಂಡು, ತುಂಬ ಹಳೆಯದಾದರೂ ಸುಂದರವಾಗಿದ್ದ ರೇಷ್ಮೆ ಗೌನ್ ಧರಿಸಿದ್ದ ಪುರಾಣಿಕರು ಕೈ ನೀಡಿ ಕುಲುಕಿ, 'Excuse me. I am not dressed' ಅಂದರು. ಜಗನ್ನಾಥ 'ಪರವಾಗಿಲ್ಲ. ಮುಂಚೆ ತಿಳಿಸದೇ ಬಂದದ್ದಕ್ಕೆ ಕ್ಷಮಿಸಿ' ಎಂದ. 'Not at al. You must feel free to drop in at any time' ಎಂದು ಅವನನ್ನು ಮೇಲೆ ಕರೆದುಕೊಂಡು ಹೋದರು.

'ಏನು ಬಂದ ವಿಷಯ ?' ಎಂದು ಕೇಳದೆ ತನ್ನನ್ನು ಸ್ವಾಗತಿಸಿದ ಪುರಾಣಿಕರ ಸಭ್ಯತೆಯನ್ನು ಜಗನ್ನಾಥ ಗಮನಿಸಿದ. 'ನನಗೆ ಕೆಲಸವಿದೆ. ಹೋಗಬೇಕು. ಐದು ನಿಮಿಷ ನಿಮ್ಮನ್ನ ನೋಡಿ ಹೋಗೋಣೆಂದು ಬಂದೆ', ಎಂದು ಜಗನ್ನಾಥ ನಾಚುತ್ತ ವ್ವಿಸ್ಕಿಯನ್ನು ಅವರಿಗೆ ಕೊಟ್ಟ. 'No you mustn't give this to me. This is liquid velvet' ಎಂದು ಬಹಳ ಸಂಭ್ರಮದಿಂದ ವ್ವಿಸ್ಕಿಯನ್ನು ತೆಗೆದುಕೊಂಡು ಜಗನ್ನಾಥನನ್ನು ವಂದಿಸಿದರು. 'Let us celebrate this meeting, I will fix you a drink' ಎಂದರು. 'ಬೇಡ ನನಗೆ ಈಗಿನ್ನೂ ಊಟವಾಗಿದೆ' ಎಂದು ಜಗನ್ನಾಥ ಕ್ಷಮೆ ಕೇಳಿದ. 'Then some liqueur is the right thing for you' ಎಂದು ಒತ್ತಾಯಪಡಿಸುತ್ತ ಸುಂದರವಾದ ನೀಳವಾದ ಗಾಜಿನ ಬಟ್ಟಲಲ್ಲಿ ಸುರಿದು ಕೊಟ್ಟರು. ತಾವೂ ಬಗ್ಗಿಸಿಕೊಂಡು 'Cheers' ಎಂದರು.

'The labour party appears to be winnging the election this time also. The

prediction of the “Daily Herlad” has failed’ ಎಂದು ಮಾತು ಶುರು ಮಾಡಿದರು. ಜಗನ್ನಾಥನಿಗೆ ರೇಡಿಯೋದ ಮೇಲಿದ್ದ ಒಂದು ಮಾಸಿದ ಫೋಟೋ ಕಂಡಿತು. ಹಿಂದಿನ ಸಾರಿ ಈ ಫೋಟೋವನ್ನು ಅವನು ಗಮನಿಸಿರಲಿಲ್ಲ. ಎದ್ದು ಹೋಗಿ ಆಸಕ್ತಿಯಿಂದ ಫೋಟೋ ನೋಡುತ್ತ, ‘ಲೇಬರ್ ಅಧಿಕಾರಕ್ಕೆ ಬಂದರೆ ಕನ್ಸರ್ವೇಟಿವ್ ಪಕ್ಷದಂತೆ ನಡಕೋತಾರೆ. ಆದರೆ ಕನ್ಸರ್ವೇಟೀವ್‌ಗಳು ಅಧಿಕಾರಕ್ಕೆ ಬಂದರೆ ಎಷ್ಟೋ ವಿಷಯಗಳಲ್ಲಿ ಲೆಫ್ಟಿಸ್ಟ್ ನೀತಿಯನ್ನೇ ಅನುಸರಿಸುತ್ತಾರೆ. ಇಂಗ್ಲೆಂಡ್ ರಾಜಕೀಯ ವಿಚಿತ್ರ’ ಎಂದ. ಜಗನ್ನಾಥ ಮಾಸಿದ ಫೋಟೋವನ್ನು ನೋಡುತ್ತಿರುವುದನ್ನು ಗಮನಿಸಿದ ಪುರಾಣಿಕರು,

‘That was taken many decades ago, whn I married’ ಎಂದರು.

ಫೋಟೋ ಅತ್ಯಂತ ಕುತೂಹಲಕಾರಿಯಾಗಿತ್ತು, ಪುರಾಣಿಕರ ಪಕ್ಕದಲ್ಲಿ ಅವರ ಹೆಂಡತಿ ನಿಂತಿದ್ದರು, ಪುರಾಣಿಕರು ಪೇಟ ಸುತ್ತಿ, ಕೋಟ್ ತೊಟ್ಟು ಕಚ್ಚೆ ಪಂಚೆಯುಟ್ಟಿದ್ದರು. ಪಕ್ಕದಲ್ಲಿದ್ದ ಅವರ ಹೆಂಡತಿ ಮೈತುಂಬ ಸೆರಗು ಹೊದ್ದು ನಡುವೆ ಬೈತಲೆ ತೆಗೆದು ತಲೆಯೆತ್ತಿ ನಸುನಗುತ್ತ ಪುರಾಣಿಕರ ಮೈಗೊತ್ತಿಕೊಂಡು ನಿಂತಿದ್ದರು. ಮೂರು ಗುಂಡಿಗಳನ್ನೂ ಹಾಕಿದ್ದ ಪುರಾಣಿಕರ ಕಪ್ಪು ಕೋಟಿನಲ್ಲಿ ಜಗನ್ನಾಥನನ್ನು ಆಕರ್ಷಿಸಿದ್ದ ಸಂಗತಿಯೆಂದರೆ ಅದರ ದೊಡ್ಡ ದೊಡ್ಡ ಕಾಲರುಗಳು. ಎಲ್ಲಕ್ಕಿಂತ ಮುಖ್ಯವಾಗಿ ಅವರ ಕ್ರಾಂತಿಕಾರಿ ವಿವಾಹದ ಹಿಂದಿದ್ದ ಹೊಸಯುಗದ ಧೋರಣೆಯನ್ನೆಲ್ಲ ಭಟ್ಟಿ ಇಳಿಸಿದ್ದ ವಿವರವೆಂದರೆ ಇಂತಹ ಫೋಟೋದಲ್ಲಿ ಸಾಮಾನ್ಯವಾಗಿ ಗಂಡ ಹೆಂಡಿರು ಹಾರ ಹಾಕಿಕೊಂಡೋ ಬಾಸಿಂಗ ತೊಟ್ಟೋ ನಿಲ್ಲುವಂತೆ ನಿಲ್ಲದೆ ಕೈಗಳಲ್ಲಿ ಇಬ್ಬರೂ ಪುಸ್ತಕ ಹಿಡಿದು ನಿಂತದ್ದು. ಗಂಡ ಹೆಂಡತಿ ಇಬ್ಬರೂ ಯಾವುದೋ ಪುಸ್ತಕವನ್ನು ಫೋಟೋದಲ್ಲಿ ಪ್ರಾಮುಖ್ಯವಾಗಿ ಕಾಣುವಂತೆ ಕಾನ್ವೋಕೇಷನ್ನಿನ ಸಂದರ್ಭದಲ್ಲಿ ನಿಲ್ಲುವ ರೀತಿಯಲ್ಲಿ ಎದೆಗವಚಿಕೊಂಡು ಹಿಡಿದು ನಿಂತಿದ್ದರು. ಗಂಡಹೆಂಡಿರಿಬ್ಬರ ಕಣ್ಣುಗಳಲ್ಲೂ ಹೀಗೆ ಪುಸ್ತಕಗಳನ್ನು ಹಿಡಿದು ನಿಂತ ತಾವು ಎಲ್ಲರಿಗಿಂತ ಭಿನ್ನರು ಎಂಬ ಭಾವನೆ ಇದ್ದಂತಿತ್ತು. ಫೋಟೋದ ಕೆಳಗೆ ಇಬ್ಬರ ಹೆಸರೂ, ಇದು ಅಕ್ಷತ ವಿಧವಾ ವಿವಾಹದ ಸಂದರ್ಭದಲ್ಲಿ ತೆಗೆದದ್ದೆಂದೂ ಬರೆದಿತ್ತು.

ಮೈಮರೆತು ಫೋಟೋದ ಪ್ರತಿಯೊಂದು ವಿವರವನ್ನೂ ನೋಡುತ್ತ ನಿಂತ ಜಗನ್ನಾಥನಿಗೆ ಪುರಾಣಿಕರು,

‘Have you succeeded in shocking the medieval citizens of our town ?’ ಎಂದು ಕೇಳಿದರು. ಜಗನ್ನಾಥ ನಗುತ್ತ ‘ಏನೋ ಪ್ರಯತ್ನವಂತೂ ನಡೆದಿದೆ’ ಎಂದ. ಗ್ಲಾಸನ್ನು ಕೆಳಗಿಟ್ಟು, ‘ಇನ್ನೊಮ್ಮೆ ಬಂದು ನೋಡ್ತೇನೆ, ಈಗ ಹೋಗಬೇಕು, ಕ್ಷಮಿಸಿ’ ಎಂದು ಕೈ ಕುಲುಕಿದ. ‘Thanks for the wonderful whisky. Nothing else could have please me more’ ಎಂದು ಪುರಾಣಿಕರು ಮತ್ತೊಮ್ಮೆ ಕೈಕುಲುಕಿ, ಪೈಪ್ ಎತ್ತಿಕೊಂಡರು. ಗೇಟಿನ ತನಕ ಬಂದು ‘Come again’ ಎಂದು ಬೀಳ್ಕೊಟ್ಟರು.

ಜಗನ್ನಾಥ ಬಹಳ ಹರ್ಷದಿಂದ ಮನೆಗೆ ಹಿಂದುರುಗಿದ. ಆದರೆ ಸಂಜೆ ತಾನು ಮಾಡಬೇಕೆಂದಿದ್ದುದು ನೆನಪಾದಂತೆ ತಳಮಳವಾಯಿತು. ಯಾಕೆ ತಾನು ಇದ್ದಕ್ಕಿದ್ದಂತೆ ಹೀಗೆ ಎದ್ದುಹೋಗಿ ಪುರಾಣಿಕರನ್ನು ನೋಡಿ ಬಂದೆ ಎಂದು ತನ್ನ

ವರ್ತನೆಯ ಬಗ್ಗೆ ಆಶ್ಚರ್ಯಪಟ್ಟ.

* * *

ಸಾಯಂಕಾಲವಾಗುವುದನ್ನೆ ಆಸೆಯಲ್ಲಿ ಭಯದಲ್ಲಿ ಕಾದಿದ್ದ ಜಗನ್ನಾಥನಿಗೆ ಅಂಗಳದಾಚೆ ಹೊಲೆಯರು ಬಂದು ನಿಂತಿದ್ದುದು ಕಾಣಿಸಿತು. ಮಹಡಿಯಿಂದ ಇಳಿಯುವಾಗ ತನ್ನ ಕಾಲುಗಳು ನಿರ್ಬಲವಾಗಿವೆ ಎನ್ನಿಸಿತು. ಅಂಗೈ ಬೆವತಿತ್ತು. ಅಂಗಳದಾಚೆ ಅವು ನಿಂತಿದ್ದಾವೆ; ಏನನ್ನೂ ನಿರೀಕ್ಷಿಸದೆ ಅವು ನಿಂತಿದ್ದಾವೆ – ಎಂದ ತನಗೇ ಅಂದುಕೊಂಡು ಚಾವಡಿಗೆ ಬಂದ. ‘ ಸ್ವಲ್ಪ ಇರಿ, ಬಂದೆ’ ಎಂದು ಒಳಗೆ ಹೋದ. ಏನು ಹೇಳಿದರೂ ಬೆಪ್ಪಾಗಿ ಕೇಳಿಸಿಕೊಳ್ಳುತ್ತವೆ; ಈಗ ಪಂಚೆಯುಟ್ಟು ಅಪರಾಧಿಗಳಂತೆ ನಿಂತಿವೆ. ಜಗನ್ನಾಥನಿಗೆ ಯಾತನೆಯಾಯಿತು. ಚಾವಟಿಯಲ್ಲಿ  ಹೊಡೆದಂತಾಗಬೇಕು. ಆಗ ಎಚ್ಚತ್ತಾವು. ಮೋಸ ದಹ ದುರಾಸೆಯ ಈ ಪ್ರಪಂಚಕ್ಕೆ ಬಂದು ಬಿದ್ದು ಕೈಯೊಡ್ಡಿ ಯಾವು. ಬಯಸಿದವು. ಕಲಿತಾವು.

ನಿಶ್ಚಯ ಗಟ್ಟಿಯಾಯಿತು. ಜಗನ್ನಾಥ ದೇವರ ಮನೆಯ ಎದುರು ನಿಂತ.

ಕತ್ತಲಿನ ಕೋಣೆಯಲ್ಲಿ ಹೊಳೆಯುವ ಕಂಚಿನ ದೀಪಗಳು. ಸಂಪುಟದಲ್ಲಿ ಮನೆಯ ದೇವರಾದ ನರಸಿಂಹ ಶಾಲಿಗ್ರಾಮವಿದೆ. ಅದಕ್ಕೆ ಮುಟ್ಟುಚಟ್ಟಾದರೆ ಮನೆಯೊಳಗೆ ಕಾಳಿಂಗಸರ್ಪ ಬರುತ್ತದೆ, ತೋಟಕ್ಕೆ ಬೆಂಕಿ ಬೀಳುತ್ತದೆ ಎಂದು ನಂಬಿಕೆ. ಸಾವಿರ ವರ್ಷದ ಶಾಲಿಗ್ರಾಮವಂತೆ. ನಿತ್ಯ ಅದರ ತೀರ್ಥವನ್ನು ಎಷ್ಟು ವರ್ಷಗಳಿಂದಲೋ ಈ ಮನೆತನದವರು ಕುಡಿದ ಮೇಲೆಯೇ ಊಟ ಮಾಡುವುದು.

ಮತ್ತೊಮ್ಮೆ ಸ್ನಾನ ಮಾಡಿ ಬಂದ ಪೂಜೆಯ ಭಟ್ಟರು ನಂದಾದೀಪಕ್ಕೆ ಎಣ್ಣೆ ಹಾಕಿದರು. ಹಗಲು ರಾತ್ರೆ ಉರಿಯುವ ಈ ದೀಪಕ್ಕೊಂದು ವಾಸನೆಯೂ ಇದೆ ಅನ್ನಿಸಿತು. ಗಂಧ, ಸಂಜೆಯ ಹೊತ್ತಿಗೆ ಮಲಿನವಾಗಿರುವ ತುಳಸಿ, ಶಂಕುಪುಷ್ಪ, ಗುಲಾಬಿ, ಕೆಂಡಸಂಪಿಗೆ, ಎಣ್ಣೆ, ಊದುಬತ್ತಿ ಮಿಶ್ರಿತವಾದ ಕೊಳೆಯುವ ಸವಿವಾದ ವಾಸನೆ, ಬತ್ತಿಯಿಂದ ಬತ್ತಿಗೆ ಅಂಟಿ ಉರಿಯುತ್ತಲೇ ಇರುವ ದೀಪದ ಚೂಪಾದ ನಾಲಗೆ, ಇದರಿಂದ ಅಂಟಿಸಿಕೊಂಡ ಬೆಂಕಿಯ ಎದುರು ಉಪನಯನ; ಮತ್ತೆ ಈ ಬೆಂಕಿಯಿಂದಲೇ ಲಗ್ನದ ಹೋಮ. ಪ್ರಾಯಶಃ ಸಾವಿರ ವರ್ಷಗಳಿಂದಲೂ ಉರಿಯುತ್ತ ಬಂದಿರುವ ಬೆಂಕಿಯೆಂದು ಚಿಕ್ಕಿ ತಿಳಿದಿದ್ದಾರೆ. ಸನಾತನವಾದ ದೀಪ.

ಈ ಸಾತತ್ಯದ ಕಲ್ಪನೆಯನ್ನು ಕಂಡರೆ ಜಗನ್ನಾಥನಿಗೆ ಕೆಲವೊಮ್ಮೆ ನಗುಬರುತ್ತದೆ. ಮಜ್ಜಿಗೆಯಿಂದ ಹೆಪ್ಪು. ಈ ಹೆಪ್ಪಿನ ಮಜ್ಜಿಗೆಯಿಂದ ನಾಳೆಯ ಹೆಪ್ಪು, ಅದರ ಮಜ್ಜಿಗೆಯಿಂದ ನಾಡಿದ್ದಿನ ಮೊಸರು ಹೀಗೆ ವರ್ಷವಿಡೀ ಅದೇ ಮಜ್ಜಿಗೆಯಿಂದ ಹಾಲು ಹೆಪ್ಪಾಗುತ್ತ ಹೋಗುತ್ತದೆಂದು ಚಿಕ್ಕಿ ವರ್ಷಕ್ಕೊಂದು ಸಾರಿ ಹೊಸ ಹೆಪ್ಪು ಮಾಡುತ್ತಾರೆ – ಸ್ವಾತಿ ಮಳೆಯ ನೀರನ್ನು ಹಾಲಿಗೆ ಹಾಕಿ. ಆದರೆ ಆ ದೀಪ ಮಾತ್ರ ಮನೆಗೆ ಅಗ್ನಿಯನ್ನು ಒದಗಿಸುತ್ತ ಶತಮಾನಗಳಿಂದ ಉರಿಯುತ್ತಲೇ ಇದೆ.

ಸಂಬಳ ತೆಗೆದುಕೊಳ್ಳುವ ಅರ್ಚಕ ಭಟ್ಟರ ಕಾಪಾಡಿಕೊಂಡು ಬಂದ ಶಿಖೆ ಇದು. ಎಲ್ಲೋ ಒಂದು ದಿನ ಮರೆತದ್ದರಿಂದ ಎಣ್ಣೆ

ತೀರಿ ಯಾಕೆ ಇದು ಆರಿರಬಾರದು ? ಭಟ್ಟರು ಅವಸರದಿಂದ ಕಡ್ಡಿ ಗೀರಿ ಹತ್ತಿಸಿರಬಾರದು ? – ಆದರೂ ನಂಬಿಕೆ; ಮನೆತನದ ದೀಪ, ಸಾವಿರ ವರ್ಷದಿಂದ ಉರಿದು ಬಂದಿರುವ ದೀಪ, ಪಿತೃಗಳು ಹೊತ್ತಿಸಿಟ್ಟಿರುವ ದೀಪ ಇತ್ಯಾದಿ.

ಪೂಜೆಯ ಭಟ್ಟರ ಎದುರಲ್ಲೇ ಒಳಗೆ ಹೋಗಿ ನರಸಿಂಹ ಶಾಲಿಗ್ರಾಮ ತರುವುದೆ ? ಅಂಗಿ ಹಾಕಿಕೊಂಡು ಮೈಲಿಗೆಯಲ್ಲೆ ಒಳಗೆ ಹೋಗುವುದೆ ? ಸಂಪುಟ ಸಮೇತ ತುರುವುದೆ ? ಜಗನ್ನಾಥನಿಗೆ ಎದೆ ಹೊಡೆದುಕೊಳ್ಳತೊಡಗಿತು. ಪಾದಗಳು ಬೆವರಿದವು. ಇನ್ನು ಹಿಂದೆಗೆಯಲಾರೆನೆನ್ನಿಸಿ ಒಳಗೆ ಹೋದ, ಮೈಲಿಗೆಯಲ್ಲಿ ಸಾಹುಕಾರ್ರು ಒಳ ಬರುವುದು ನೋಡಿ ಭಟ್ಟರು ಅವಾಕ್ಕಾದರು.

ತಾನೇನೂ ಅಸಾಮಾನ್ಯವಾಗಿ ವರ್ತಿಸುತ್ತಿಲ್ಲೆಂದು ನಟಿಸುವುದು ಜಗನ್ನಾಥನಿಗೆ ಅವಶ್ಯಕವಾಗಿತ್ತು. ಆದರೂ ಗಾಬರಿಯಾದ ಭಟ್ಟರ ಕಣ್ಣೆದುರು ಹಿಂಸೆಗೆ ಕೆರಳಿ ನಿಂತವನಂತೆ ಜಗನ್ನಾಥ ಕೈಯೊಡ್ಡಬೇಕಾಯ್ತು. ಯಾರೂ ಕೈಹಿಡಿದುರ ತನ್ನನ್ನು ಎಳೆಯದಿದ್ದರೂ ಮನೆ ಮಂದಿಯೆಲ್ಲ ತನ್ನನ್ನು ಹಿಂದಕ್ಕೆ ಜಗ್ಗುತ್ತಿದ್ದರೂ ಎಂಬಂತೆ ಉಸಿರುಕಟ್ಟಿ ಮುನ್ನುಗ್ಗಿ ಸಂಪುಟದ ಸಮೇತವಾಗಿ ಶಾಲಿಗ್ರಾಮವನ್ನು ಎತ್ತಿದ. ತಾನು ಅನುಭವಿಸುತ್ತಿರುವ ಒತ್ತಡ ಎಷ್ಟು ಹಾಸ್ಯಾಸ್ಪದ ಎಂದು ಅನ್ನಿಸಿದರೂ ಕಣ್ಣುಗಳು ಉರಿಯುತ್ತಿದ್ದುವು. ಮುಖ ಬಿಸಿಯಾಗಿತ್ತು. ನೆಟ್ಟಗೆ ಚೂಪಾಗಿ ಉರಿಯುವ ದೀಪದ ಹಿಂದೆ ನಿಂತ ಭಟ್ಟರು ದೀರ್ಘ ನೆರಳಾಗಿದ್ದರು. ಜಗನ್ನಾಥ ಮುಗುಳ್ನಗಲು ಪ್ರಯತ್ನಿಸಿ ವಿಕಾರವಾಗಿ ಅವರ ಕಡೆ ನೋಡಿದ ಏನು ಮಾಡಬೇಕೆಂದು ತೋಚದ ಭಟ್ಟರು ಬತ್ತಿಯನ್ನು ತಳ್ಳಿ ದೀಪವನ್ನು ಬೆಳೆಸುತ್ತ, ನಗಲು ಪ್ರಯತ್ನಿಸುತ್ತ 'ಏನು ಬೇಕಿತ್ತು ?' ಎಂದು ಕೇಳಿದರು. ಜಗನ್ನಾಥ ಸಮಾಧಾನದಿಂದ 'ಏನಿಲ್ಲ' ಎಂದು ಸಣ್ಣದನಿಯಲ್ಲಿ ಹೇಳಿ, 'ಐದು ನಿಮಿಷ ಅಷ್ಟೆ. ಹಿಂದಕ್ಕೆ ತಂದು ಬಿಡ್ತೀನಿ' ಎಂದು ಸಭ್ಯವಾದ ಮಾತಿನಲ್ಲಿ ಕ್ಷಮೆ ಬೇಡುವವನಂತೆ ಕೇಳಿದ.

ಓಡಬೇಕೆಂಬ ಅಸೆಯನ್ನು ಅದುಮಿಕೊಂಡು ತಲೆ ತಗ್ಗಿಸಿ ದೇವರ ಮನೆ ಬಾಗಿಲು ದಾಟಿದ. ನಿಧಾನವಾಗಿ ನಡೆಯುತ್ತ ಚಾವಡಿಗೆ ಬಂದ. ಅನಾವಶ್ಯಕವೆನ್ನಿಸಿದರೂ, ಅವನ ಕೈ ಮಾತ್ರ ಶಾಲಿಗ್ರಾಮವಿದ್ದ ಸಂಪುಟವನ್ನು ನೋಯುವಷ್ಟು ಗಟ್ಟಿಯಾಗಿ ಹಿಡಿದುಕೊಂಡಿತ್ತು.

ಚಾವಡಿಯಿಂದಿಳಿದು ಅಂಗಳಕ್ಕೆ ಬಂದ. ನಿಂತ. ಹಿಂದಕ್ಕೆ ತಿರುಗಿ ನೋಡಬೇಕೆಂಬ ಆಸೆಯನ್ನು ಅದುಮಿಕೊಂಡು. ಆದರೂ ಬಾಗಿಲಲ್ಲಿ ಚಿಕ್ಕಿ, ಪೂಜೆಯ ಭಟ್ಟರು, ಅಡಿಗೆಯವರು, ಅವರ ಮಕ್ಕಳು ನಿಂತು ತನ್ನನ್ನು ನೋಡುತ್ತ ನಿಂತಿದ್ದಾರೆ ಎನ್ನಿಸಿತು. ತನ್ನ ಬೆನ್ನಿನ ಮೇಲೆ ಚುಳುಕಾಗುವಂತೆ ಚಿಕ್ಕಿ ತನ್ನನ್ನು ನೋಡುತ್ತಿದ್ದಾರೆ. ಹಿಂದಕ್ಕೆ ತಿರುಗಿ ಅವರ ಕಣ್ಣಿಗೆ ಕಣ್ಣಿಟ್ಟು ನೋಡಿ, ಅವರ ಆರ್ತತೆಯನ್ನು ಜರಿದುಬಿಡುವುದರಿಂದ ತನ್ನ ಈ ಯಾತನೆಯನ್ನು ಕಳೆದುಕೊಳ್ಳಬಹುದಿತ್ತು. ಆದರೆ ತಿರುಗಿ ನೋಡಲಾರದಷ್ಟು ಅವನಿಗೆ ಭಯವಾಗಿತ್ತು. ಅಥವಾ ಕಣ್ಣಿಗೆ ಕಣ್ಣಿಟ್ಟು ನೋಡಿ ಅವರನ್ನು ತಿರಸ್ಕರಿಸುವ ಹಿಂಸೆ ಅತಿಯಾದೀತೆಂದೂ ಅನ್ನಿಸಿತ್ತು. ಸಂಪುಟ ಹಿಡಿದ ಕೈ ಬೆವರುತ್ತಿತ್ತು. ಈ ನರಸಿಂಹ ಶಾಲಿಗ್ರಾಮ ಪ್ರಾಯಶಃ ಹೊಸಿಲು ದಾಟಿದ್ದೇ ಇಲ್ಲ. ಚಿಕ್ಕಿ ಮಾತಾಡಲಾರದಷ್ಟು ಅವಾಕ್ಕಾಗಿ ನಿಂತಿರಬಹುದು. ತಾನು ಹಿಂದಕ್ಕೆ ಬರಲಿ ಎಂದು ತಮ್ಮ ಪ್ರಾಣವನ್ನೆಲ್ಲ ಕಣ್ಣಲಿಟ್ಟು ನನ್ನನ್ನು ಪ್ರಾರ್ಥನೆಯಲ್ಲಿ ಸೆಳೆಯುತ್ತಿರಬಹುದು. ಯಾಕೆ ನಾನು ಸುಮ್ಮದೇ ಹೀಗೆ ನಿಂತಿದ್ದೇನೆ ಎಂದು ಎದುರು ನೋಡಿದ. ಬಿಳಿ ಪಂಚೆಯುಟ್ಟು ಹೊಲೆಯರು ಅನಾಥರಂತೆ ಅಂಗಳದಾಚೆ ನಿಂತಿದ್ದುವು. ಅವುಗಳ

ಕಣ್ಣುಗಳು ಏನನ್ನೂ ನಿರೀಕ್ಷಿಸುತ್ತಿರುವಂತೆ ತೋರಲಿಲ್ಲ. ಬಾಗಿಲಲ್ಲಿ ನಿಂತ ಚಿಕ್ಕಿಯನ್ನ ತನ್ನನ್ನ ಅವು ಸುಮ್ಮನೇ ನೋಡುತ್ತಿದ್ದಾವೆ ಅಷ್ಟೆ. ಮುಂದೇನು ಸ್ಫೋಟಿಸೀತು ಎಂದವಕ್ಕೆ ಗೊತ್ತಿಲ್ಲ. ಬೇಕಿಲ್ಲ.

ಜಗನ್ನಾಥ ನಿಧಾನವಾಗಿ ನಡೆದ. ದೂರದ ಬೆಟ್ಟದ ಹೆಗಲಿನ ಮೇಲೆ ಸೂರ್ಯ ಕೆಂಪು ಉಂಡೆಯಾಗಿದ್ದ. ಹುಲ್ಲಿನ ದಿಬ್ಬದ ಮೇಲೆ ಸಂಜೆಯ ಹಿಂದೆಗೆಯುವ ತೆಳು ಬಿಸಿಲು ಬಿದ್ದಿತ್ತು. ಗುಡ್ಡದ ಕೆಳಗೆ ಹಾವಿನಂತೆ ಡೊಂಕಾದ ರಸ್ತೆಯಲ್ಲಿ ಶಿವಮೊಗ್ಗದಿಂದ ಲಾಸ್ಟ್ ಬಸ್ಸು ಧೂಳೆಬ್ಬಿಸುತ್ತ ಬರುವುದು ಕಂಡಿತು. ಕೊರಳಿನ ಗಂಟೆಯನ್ನು ಶಬ್ದ ಮಾಡುತ್ತ ಹಸು ಕರುಗಳು ಕೊಟ್ಟಿಗೆ ಕಡೆ ಬಂದವು. ಈ ಹೊತ್ತಿಗೆ ಚಿಕ್ಕಿ ಎದುರು ನಿಂತರಬೇಕಿತ್ತು. ಕಾವೇರಿ ತಲೆಯ ಮೇಲೆ ಒಂದು ಹೊರೆ ಸೌದೆ ಹೊತ್ತು, ಸೀರೆಯನ್ನು ಮೇಲಕ್ಕೆ ಸಿಕ್ಕಿಸಿಕೊಂಡು, ಭಾರಕ್ಕೆ ಅವಸರವಾಗಿ ಹೆಜ್ಜೆಹಾಕುತ್ತ ಅಂಗಳ ಹಾಯ್ದಳು. ಈ ಹೊಲೇರ ಕುರ್ದೆಗಳು ಅಯ್ಯನವರಂತೆ ಬಿಳಿಯಂಗಿ ತೊಟ್ಟು ಬಿಳಿ ಪಂಚೆಯುಟ್ಟದ್ದು ಅವಳಿಗೆ ಹಾಸ್ಯಸ್ಪದವಾಗಿ ಕಂಡಿರಬೇಕು; ಕಿಸಕ್ಕೆಂದು ನಕ್ಕಳು.

ಜಗನ್ನಾಥನಿಗೆ ಇದ್ದಕ್ಕಿದ್ದಂತೆ ಎಷ್ಟು ಅಸಂಬದ್ಧ ಸನ್ನಿವೇಶ ಅನ್ನಿಸಿತ್ತು. ಈ ಶಾಲಿಗ್ರಾಮ ನನ್ನ ಪಾಲಿಗೆ ಬರಿ ಒಂದು ಕಲ್ಲಿನ ಉಂಡೆ. ಆದರೂ ಅದರ ಸುತ್ತ ಉತ್ಕಟ ನಾಟಕ! ಈ ಕಲ್ಲಿನುಂಡೆಯನ್ನು ಮುಟ್ಟುವುದು ಹೊಲೆಯರಿಗೆ ಒಂದು ಮಹತ್ವದ ಅನುಭವ ಅಂತ ಆಕೆ ನಾನು ತಿಳಿದಿದ್ದೇನೆ? ಇಡೀ ಅಂಗಳವನ್ನು ಒಂದು ಅಯಸ್ಕಾಂತ ಕ್ಷೆತ್ರ ಮಾಡಿ ಕಣ್ಣ ಮುಂದೆ ಹೊಲೆಯರನ್ನೂ ಬೆನ್ನ ಹಿಂದೆ ಚಿಕ್ಕಿಯನ್ನೂ ನಿಲ್ಲಿಸಿಕೊಂಡು ತಾನು ಈಗ ಮಾಡುತ್ತಿರುವುದಕ್ಕೂ, ತುಂಬ ತಿಳಿಯಾಗಿ ತರ್ಕಬದ್ಧವಾಗಿ ವಿಚಾರಮಾಡಿ ದೇವರಿಲ್ಲವೆಂಬ ವೈಜ್ಞಾನಿಕ ತೀರ್ಮಾನಕ್ಕೆ ಬಂದ ತನ್ನ ವ್ಯಕ್ತಿತ್ವಕ್ಕೂ ಏನಾದರೂ ಸಂಬಂಧವಿದೆಯೇ ಎಂದು ಸಂದೇಹವಾಯಿತು.

ಹೊಲೆಯರಿಗೆ ಮುಟ್ಟಿಸಹೋಗುವುದರ ಮೂಲಕ ಈ ಕಲ್ಲಿನುಂಡೆಯನ್ನು ಶಾಲಿಗ್ರಾಮ ಮಾಡುತ್ತಿರೋದು ತಾನೇ ಎಂದು ಜಗನ್ನಾಥನಿಗೆ ತನ್ನ ಕ್ರಿಯೆಯ ಆಭಾಸ ಥಟ್ಟನೇ ಹೊಳೆಯಿತಾದರೂ ಅಲ್ಲಾಡಲಾರದಂತೆ ನಿಂತ. ತುಂಬ ಪ್ರಯತ್ನಪಟ್ಟು ಬೆನ್ನ ಹಿಂದೆ ನೋಡಿದ. ಚಿಕ್ಕಿಯಾದಿಯಾಗಿ ಮನೆಮಂದಿಯೆಲ್ಲ ನಿಂತಿದ್ದರು. ಜಗುಲಿಯ ಮೂಲೆಯಲ್ಲಿ ಕೆಲಸದ ಆಳುಗಳೂ ನಿಂತಿದ್ದರು. ತನ್ನನ್ನೇ ನೋಡುತ್ತಿದ್ದರು. ಚಿಕ್ಕಿಯ ಬಾಯಿ ಒಣಗಿರಬೇಕು; ಇಲ್ಲದಿದ್ದಲ್ಲಿ ತನ್ನನ್ನವರು ಖಂಡಿತ ಕರೆಯುತ್ತಿದ್ದರು. ಮಗನ ಹೆಣವನ್ನು ಸ್ಮಶಾನಕ್ಕೆ ಒಯ್ಯುವುದನ್ನು ನೋಡುತ್ತ ನಿಂತ ತಾಯಿಯಂತೆ ಅವರು ನಿಂತಿದ್ದರು. ಯಾವತ್ತೂ ಹೊಸಲು ದಾಟದ ಸಾವಿರ ವರ್ಷದ ನರಸಿಂಹ ಶಾಲಿಗ್ರಾಮದ ಬಗ್ಗೆ ಅವರು ಯೋಚಿಸುತ್ತಿರಬಹುದಾದ್ದೆಲ್ಲ ಜಗನ್ನಾಥನ ಪ್ರಜ್ಞೆಯ ಒಂದಂಶವಾಗಿಬಿಟ್ಟಿತು. ಚಿಕ್ಕಿಯ ಕಣ್ಣಗಳೂ ತನ್ನೊಳಗಿದ್ದಾವೆ ಎನ್ನಿಸಿ ಕೈಯಲ್ಲಿ ಬಿಗಿಯಾಗಿ ಹಿಡಿದಿದ್ದ ಕಪ್ಪು ಶಿಲೆ ಕೆಂಡದಂತೆ ಉರಿಯಿತು.

ಹೊಲೆಯರಿಗಾಗಿ ತಾನಿದನ್ನು ಮಾಡುತ್ತಿರುವುದೊ ಅಥವಾ ತನಗಾಗಿಯೊ? ಬ್ರಾಹ್ಮಣತ್ವದ ವಿಸರ್ಜನೆಗಾಗಿಯೂ? ಹೀಗೇ ವಿಸರ್ಜಿಸಿಕೊಳ್ಳುತ್ತ ಅಡಿಗರು ಹೇಳುವ ಅವಧೂತನ ದಾರಿಯನ್ನು ನಾನೀಗ ತುಳಿಯುತ್ತಿರುವುದೊ? ಹೇಗೆ ಈ ಘಳಿಗೆಯಲ್ಲಿ ತಾನು ಕಲಿತಿದ್ದ ಮಾರ್ಕ್ಸ್ ರಸೆಲ್ಲರೆಲ್ಲ ತನ್ನಿಂದ ಇಂಗಿಹೋಗುತ್ತಿದ್ದಾರೆಂದು ಜಗನ್ನಾಥನಿಗೆ ತಬ್ಬಿಬಾಯಿತು.

ತಾನು ವಿಚಾರ ಮಾಡಿದ್ದನ್ನು ಮತ್ತೆ ಸ್ಪಷ್ಟಪಡಿಸಿಕೊಳ್ಳಲು ಪ್ರಯತ್ನಿಸಿದ. ಯಾವುದನ್ನೂ ನಿರೀಕ್ಷಿಸದ ಹೊಲೆಯರೂ ಇನ್ನೂ ರೂಪಧಾರಣಮಾಡದ ಪ್ರೇತಗಳಂತೆ ಎದುರು ನಿಂತಿದ್ದಾವೆ. ನಾನು ಹೀಗೆ ತುಯ್ಯುತ್ತ ಇಲ್ಲಿ ನಿಂತಿರಲಾರೆ. ನನ್ನ ನಿರ್ಧಾರ ನಿರ್ಬಲವಾದ ಘಳಿಗೆ ಚಿಕ್ಕಿಯ ಕಣ್ಣುಗಳು ನನ್ನನ್ನು ಆಕ್ರಮಿಸಿ ಗೆದ್ದುಬಿಡುತ್ತವೆ. ಈ ನಿಮಿಷ ಶಾಲಿಗ್ರಾಮವನ್ನು ಮುಂದೊಡ್ಡಿ ನಡೆದಿರುವ ನಾನು, ಆಳುಕಿನಲ್ಲಿ ಹಿಮ್ಮೆಟ್ಟುವ ನಾನು ಬೇರೆಯಲ್ಲ. ಯಾಕೆ ಈ ಕ್ರಿಯೆ ನನ್ನ ತಲೆಗೆ ಬಂತು ? ಊರಿನ ಮಂಜುನಾಥನಿಗಿಂತ ಮೊದಲು ಮನೆಯ ಇಷ್ಟದೇವತೆಗೆ ಹೊಲೆಯ ಸ್ಪರ್ಶವಾಗಬೇಕು. ಇಲ್ಲವೇ ನನ್ನ ನಿರ್ಧಾರ ನಿಜವಾಗಲಾರದು, ದೃಢವಾಗಲಾರದು, ಹೊಲೆಯರು ಹಳೆಯದನ್ನು ನೀಗಿ ಹೊಸದನ್ನು ಪಡೆಯಲಾರರು. ಈ ಕ್ರಿಯೆಗೆ ಅಗತ್ಯವಾದ ಹಿಂಸೆಗೆ ನಾನು ತಯಾರಾದರೆ ಪರಿವರ್ತನೆಯ ಹಿಂಸೆಯ ಮೊದಲನೇ ಪಾಠ ಕಲಿತಂತೆ-ಇತ್ಯಾದಿ ಯೋಚಿಸಿದ್ದೆ. ನಾನು ಯೋಚಿಸಿದ್ದು ಸರಿ ಎಂದು ಮುಂದೆ ಹೆಜ್ಜೆಯಿಡಬೇಕು-ಅಷ್ಟೆ. ಇಲ್ಲವಾದರೆ ಬೆನ್ನ ಹಿಂದಿನ ಚಿಕ್ಕಿ ಗೆಲ್ಲುತ್ತಾರೆ. ಮತ್ತೊಮ್ಮೆ ನಿಷ್ಠುರವಾಗಿ ತಿರುಗಿ ನೋಡಿದ. ಇಡೀ ಮನೆ ಪ್ರೇತಕಳೆ ಹೊತ್ತು ನಿಂತಿತ್ತು; ತನ್ನನ್ನು ತಿರಸ್ಕರಿಸಿ ಅಂಗಳದಲ್ಲಿ ಬಿದ್ದ ಒಂದು ಶುಷ್ಕವಸ್ತುವನ್ನಾಗಿ ಮಾಡಿತ್ತು.

ಈ ಭೀತಿ ಮತ್ತು ಆತಂಕದ ಸನ್ನಿವೇಶ ಮೊದಲೇ ಅಪರಾಧಿಗಳಂತೆ ಪಂಚೆಯುಟ್ಟು ನಿಂತಿದ್ದ ಹೊಲೆಯರಿಗೆ ದಿಗಿಲು ಹುಟ್ಟಿಸಿರಬೇಕು. ತನು ಮುಂದೆ ಹೆಜ್ಜೆ ಇಟ್ಟು ಅಂಗಳ ಹಾದು ಹೋಗಿ ಅವುಗಳಿಗೆ ಕೈಯಲ್ಲಿರುವ ಶಿಲೆಯನ್ನು ಒಡ್ಡದಿದ್ದರೆ ಅವು ಹೊರಟು ಹೋದಾವು. ತುರ್ತಾಗಿ ಏನನ್ನಾದರೂ ಮಾಡಿಬಿಡಬೇಕಾದ ಸನ್ನಿವೇಶದಲ್ಲಿ ತಾನಿದ್ದೇನೆಂದು ಮನದಟ್ಟಾದೊಡನೆ ಜಗನ್ನಾಥ ಸರಸರ ಹೆಜ್ಜೆ ಹಾಕಿದ.

ನಡೆಯುವಾಗ ಅಂದುಕೊಂಡ; ಮುಖ್ಯವಾದ ಪ್ರಶ್ನೆ ಇದು: ದೇವರು ಯಾಕೆ ನನ್ನನ್ನು ಹೀಗೆ ಆಕ್ರಮಿಸಿದ್ದಾನೆ ? ಕಲ್ಲೊಂದು ಸ್ಥಾಪಿಸಹೋದದ್ದು ಯಾಕೆ ಶಾಲಿಗ್ರಾಮವಾಯಿತು ? ಗಂಟೆಗಳು ಯಾಕೆ ನನ್ನೊಳಗೆ ಮೊಳಗುತ್ತಾವೆ ? ವಿಲಕ್ಷಣವಾದೊಂದು ವಿದ್ಯುಕ್ತಕ್ರಿಯೆಯ ಪುರೋಹಿತನ ಹಾಗೆ ತಾನು ಪ್ರತಿ ಹೆಜ್ಜೆಗೂ ಕಲ್ಲನ್ನು ಶಾಲಿಗ್ರಾಮ ಮಾಡುತ್ತ, ಆದರೆ ಇದು ಶಾಲಿಗ್ರಾಮವಲ್ಲ ಬರಿ ಕಲ್ಲೆಂದು ಸಾರಲು ಯತ್ನಿಸುತ್ತ ನಡೆದಿದ್ದೇನೆ. ಯಾವ ಸ್ಪಷ್ಟ ಅಪೇಕ್ಷೆಯೂ ಇಲ್ಲದೆ ಮೇಯುವಾಗ ಮುಖ ಎತ್ತಿ ನೋಡುವ ಪಶುವಿನ ಕಣ್ಣುಗಳ ಹಾಗೆ ಹೊಲೆಯರ ಕಣ್ಣುಗಳು ನನ್ನನ್ನು ನೋಡುತ್ತಿವೆ, ಏನನ್ನೂ ನಿರೀಕ್ಷಿದೆ. ಅವಕ್ಕೆ ಭೂತವಿಲ್ಲ, ಭವಿಷ್ಯವಿಲ್ಲ. ಬೆನ್ನ ಹಿಂದಿನ ಕಣ್ಣುಗಳಲ್ಲಿ ಅಂತಃಕಾರಣವಿದೆ. ಜಗ್ಗುತ್ತಾವೆ. ನಾನೀಗ ಮಗುಚಿಕೊಳ್ಳುವೆನೊ, ಮಗ್ಗಲು ಬದಲಿಸಿ ಅವುಗಳ ಮನಸ್ಸಿನಲ್ಲಿ ಫಲವಾಗುತ್ತಾಗುವೆನೊ ನೋಡಬೇಕು.

ಹೊಲೆಯರ ಹತ್ತಿರ ಹೋಗಿ ನಿಂತ. ಒಡೆಯ ಎಷ್ಟು ಹತ್ತಿರ ಬಂದುಬಿಟ್ಟನೆಂದು ಅವು ಹಿಂದಕ್ಕೆ ಸರಿದವು. ಸಂಪುಟದ ಮುಚ್ಚಳ ತೆರೆಯುವಾಗ ಜಗನ್ನಾಥನಿಗೆ ತನ್ನ ಕ್ರಿಯೆ ಎಷ್ಟು ಅಭಾಸವೆನ್ನಿಸಿತೆಂದರೆ, ಈಗ ಶಂಖ ಜಾಗಟೆಗಳು ಮೊಳಗಿದರೆ ಸರಿಯಾದ ವ್ಯಾಖ್ಯಾನವಾಗುತ್ತೆ ಅಂದುಕೊಂಡ. ಆದರೆ ಬೆತ್ತಲೆಯಾದ ಕಪ್ಪದ ಕಲ್ಲನ್ನು ಅಂಗೈ ಮೇಲಿಟ್ಟು ಹೊಲೆಯರಿಗೆ ಒಡ್ಡಿ ನಿಂತ ಮುಹೂರ್ತ ನಿಧಾನವಾಗಿ ತನಗೆ ಪರಿವೆಯಿಲ್ಲದಂತೆ ತನ್ನನ್ನು ಆಕ್ರಮಿಸಿತು. ಗಂಟಲಿನ ನರಗಳು ಉಬ್ಬಿದವು. ಆಳವಾದ ನಡುಗುವ ಸ್ವರದಲ್ಲಿ,

'ಮುಟ್ಟಿ' ಎಂದ.

ಸುತ್ತಲೂ ನೋಡಿದ. ಸೂರ್ಯ ಮುಳುಗುತ್ತಿದ್ದಾನೆ. ಬಾಗಿಲಲ್ಲಿ ಭಯಗ್ರಸ್ತರಾಗಿ ನಿಂತ ಚಿಕ್ಕಿ, ಪೂಜೆ ಭಟ್ಟರು. ಅಲ್ಲದೆ ಜನಾರ್ಧನಸೆಟ್ಟಿ ಅಂಗಳದೊಂದು ಮೂಲೆಯಲ್ಲಿ ನಿಂತಿದ್ದ. ಒಕ್ಕಲಿಗೆ ಜಾತಿಯ ಆಳುಗಳು ಸೊಂಟಕ್ಕೆ ಕತ್ತಿ ಸಿಕ್ಕಿಸಿ ಇನ್ನೊಂದು ಮೂಲೆಯಲ್ಲಿ ಗುಂಪಾಗಿ ನಿಂತು ನೋಡುತ್ತಿದ್ದುವು. ಮುಖ ಒರೆಸಿಕೊಳ್ಳುತ್ತ ಕಾವೇರಿ ಚಿಟ್ಟೆಗೊರಗಿ ನಿಂತಿದ್ದಳು. ಎದುರು ಬೆಪ್ಪರಂತೆ ಹೊಲೆಯರು ನಿಂತಿದ್ದವು. ಜಗನ್ನಾಥನ ಮೈ ಕಂಪಿಸಿತು, ಕೂದಲುಗಳು ಎದ್ದು ನಿಂತವು. ಪುಸಲಾಯಿಸುವ ಸ್ವರದಲ್ಲಿ.

'ಮುಟ್ಟಿ' ಎಂದು ಎರಡನೆ ಬಾರಿ ಬೇಡಿದ.

ಆಡಬೇಕಾದ ಮಾತುಗಳೆಲ್ಲ ಗಂಟಲಲ್ಲೆ ಹೂತವು. ಇದು ಯಃಕಶ್ಚಿತ್ ಪದಾರ್ಥ ಮುಟ್ಟಿ; ನನ್ನ ಜೀವನವನ್ನೆ ಕೈಯಲ್ಲಿ ಹಿಡಿದು ಒಡ್ಡಿದ್ದೇನೆ ಮುಟ್ಟಿ; ನನ್ನ ಅಂತರಂಗದ ಅತ್ಯಂತ ಆಯಸ್ಥಳವನ್ನು ಮುಟ್ಟಿ; ಸಂಜೆಯ ಅರ್ಚನೆಯ ಹೊತ್ತಿದು. ಮುಟ್ಟಿ. ಎಂದೂ ಆರದ ದೀಪ ಅಲ್ಲಿ ಬರಿದೇ ಉರಿಯುತ್ತಿದೆ. ಹಿಂದೆ ನಿಂತವರು ಎಷ್ಟು ಋಣಾನುಬಂಧಗಳನ್ನು ಜ್ಞಾಪಿಸುತ್ತ ಜಗ್ಗುತ್ತಿದ್ದಾರೆ. ಯವುದಕ್ಕಾಗಿ ಕಾದಿದ್ದೀರಿ. ನಾನು ಏನು ಒಡ್ಡಿದ್ದೇನೆ. ಪ್ರಾಯಶಃ ಹೀಗೆ : ನಾನು ಇಗೋ ಇದು ಬರಿ ಕಲ್ಲು ಎಂದು ಒಡ್ಡಿದ್ದರಿಂದಲೇ ಇದು ಶಾಲಿಗ್ರಾಮ. ಒಡ್ಡಿದ್ದನ್ನು ನೀವು ಮುಟ್ಟಿದರೆ ಅವರಿಗೆಲ್ಲ ಇದು ಕಲ್ಲಗುತ್ತದೆ. ಈ ನನ್ನ ಆರ್ತತೆ ಶಾಲಿಗ್ರಾಮವಾಗುತ್ತದೆ; ನಾನು ಒಡ್ಡಿದ್ದರಿಂದ ನೀವು ಮುಟ್ಟಿದ್ದರಿಂದ ಅವರೆಲ್ಲ ನೋಡಿದ್ದರಿಂದ ಈ ಕಪ್ಪಾಗುತ್ತಿರುವ ಸಂಜೆಯಲ್ಲಿ ಕಲ್ಲು ಶಾಲಿಗ್ರಾಮವಾಗಲಿ, ಶಾಲಿಗ್ರಾಮ ಕಲ್ಲಾಗಲಿ. ಕಾಡುಹಂದಿ ಬರಲಿ, ಹುಲಿ ಬರಲಿ ಹೆದರದೇ ಇರುವ ಪಿಳ್ಳ ಮುಟ್ಟು. ಆಮೇಲೆ ದೇವಸ್ಥಾನದ ಹೊಸಲು ದಾಟುವ ಒಂದೇ ಒಂದು ಹೆಜ್ಜೆ. ಶತಮಾನಗಳು ಪಲ್ಲಟವಾಗುತ್ತವೆ. ಈಗ ಮುಟ್ಟಿ, ಕಲಿಯಿರಿ, ಮುಟ್ಟಿ. ಎಷ್ಟು ಸುಲಭ. ಮುಟ್ಟಿ.

ಕೈ ಬೆವರುತ್ತಿತ್ತು. ಹೊಲೆಯರು ಬೆಪ್ಪಾಗಿ ಹಿಂದೆ ಸರಿದರು. ತನ್ನ ಆರ್ತತೆಯನ್ನೆಲ್ಲ ಇವು, ಅವರು, ಸಂಜೆ ತಿರಸ್ಕರಿಸಿದ್ದುವು. ಜಗನ್ನಾಥ ತನಗೆ ಸಾಧ್ಯವಾದ ವಿವೇಕದಿಂದ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಯತ್ನಿಸಿದ. ಅವನಿಗೆ ಗೊತ್ತು : ಕಳ್ಳರನ್ನು ಹಿಡಿಯಲೆಂದು ಮಂತ್ರಿಸಿದ ಕಾಯಿ ಮುಟ್ಟಿಸುವುದನ್ನು ಇವರು ನೋಡಿದ್ದಾರೆ. ತಟ್ಟೆಯ ಮೇಲೆ ಕೆಂಪು ಮಂತ್ರಾಕ್ಷತೆ: ಅದರ ಮೇಲೆ ಜುಟ್ಟು ಕಂಕುಮವಿರುವ ಕಾಯಿ ಮುಖದಂತೆ ನೋಡುತ್ತ ಎಲ್ಲರಿಂದ ಮುಟ್ಟಿಸಿಕೊಂಡು ಕೊನೆಗೆ ತನ್ನ ಎದುರೇ ಬಂದಾಗ ಹೇಗೆ ನರಗಳು ಉಬ್ಬಿ, ಉಸಿರು ಕಟ್ಟಿ ಮೂರ್ಛೆ ಹೋಗುವವರಿದ್ದಾರೆ ಎಂಬುದನ್ನಿವರು ನೋಡಿದ್ದಾರೆ. ಸಿಂಗರ ಹಿಡಿದು ಕುಂಕುಮ ಬಳೆದುಕೊಂಡು ಥತ್ತರ ಕಂಪಿಸುತ್ತ ಶಿಕಷೆ ವಿಧಿಸುವ ಭೂತರಾಯ, ಈ ಒಡ್ಡಿರುವ ಮುಹೂರ್ತದಲಿ ಅವರಿಗೆ ಪ್ರತ್ಯಕ್ಷವಾಗಿದ್ದಾನೆ.

'ಇದು ಬರಿ ಕಲ್ಲು, ಮುಟ್ಟಿ ನೋಡಿ, ನಿಮಗೇ ಗೊತ್ತಾಗುತ್ತೆ. ಹೀಗೆ ಆಡಿದರೆ ನೀವು ಪೆದ್ದರಾಗೇ ಉಳಿತೀರಿ.'

ಜಗನ್ನಾಥ ಪ್ರತಿನಿತ್ಯದ ತನ್ನ ಉಪಾಧ್ಯಾಯನ ಧಾಟಿಯಲ್ಲಿ ಅವರಿಗೆ ಸಮಾಧಾನ ಹೇಳಿದ. ಥಟ್ಟನೆ ಏನೆನ್ನಿಸಿತೊ ಹೊಲೆಯರಿಗೆ – ಒಟ್ಟಾಗಿ ಹಿಮ್ಮೆಟ್ಟಿದವು. ಭೀತಿಯಿಂದ ವಿಕಾರವಾದ ಮುಖವನ್ನು ಹೊತ್ತು ನಿಲ್ಲಲಾರದೆ ಓಡಲಾರದೆ

ಒದ್ದಾಡಿದುವು. ಮುಟ್ಟುವ ಮುಹೂರ್ತಕ್ಕಾಗಿ ಆರ್ತನಾಗಿ ಕಾಮಿಸಿದ ಜಗನ್ನಾಥನಲ್ಲಿ ಇದ್ದಕ್ಕಿದ್ದಂತೆ ರೋಷ ಉಕ್ಕಿತು. ಕೋಪದಿಂದ ಕಂಪಿಸುವ ಸ್ವರದಲ್ಲಿ,

'ಹೂ. ಮುಟ್ಟಿ'

ಎಂದ. ಒಡೆಯ ಬರುವುದನ್ನು ಕಂಡು ಕಂಗಾಲಾದ ಹೊಲೆಯರು ಹಿಂದಕ್ಕೆ ಸರಿದವು. ಜಗನ್ನಾಥವು ಭಾವನೆಗಳೆಲ್ಲ ಈಗ ಕ್ರೂರವಾಗಿಬಿಟ್ಟವು. ಎದುರಿಗಿದ್ದ ಹೊಲೆಯರು ಅವನಿಗೆ ಅತ್ಯಂತ ಹೇಸಿಗೆ ಹುಟ್ಟಿಸುವ ಹೊಟ್ಟೆ ಹೊಸೆಯುವ ಜಂತುಗಳಂತೆ ಕಂಡವು.

ಅವಡುಕಚ್ಚಿ ಮೆತ್ತಗೆ ಹೇಳಿದ:

'ಏ ಪಿಳ್ಳ, ಮುಟ್ಟು. ಹೂ ಮುಟ್ಟು'

ಪಿಳ್ಳ ಕಣ್ಣು ಬಿಡುತ್ತ ನಿಂತ. ಇಷ್ಟು ದಿನ ತಾನು ಹೇಳಿದ್ದೆಲ್ಲ ಜಗನ್ನಾಥನಿಗೆ ವ್ಯರ್ಥವೆನ್ನಿಸಿತು. ಭೀಕರವಾದ ಧ್ವನಿಯಲ್ಲಿ ಕಿರುಚಿದ:

'ಮುಟ್ಟು. ಮುಟ್ಟು. ಹೂ ಮುಟ್ಟೂ.'

ಜಗನ್ನಾಥನ ಗಂಟಲಿನಿಂದ ಬಂದ ಧ್ವನಿ ಕೆರಳಿದ ಪಶು ಮಾಡುವ ಸದ್ದಿನಂತಿತ್ತು. ಅವನಿಗೇ ತನ್ನನ್ನು ಹರಿದು ಬರುತ್ತಿದ್ದ ಸದ್ದು ಕೇಳಿ ದಿಗಿಲಾಯಿತು. ಕ್ರೌರ್ಯವೊಂದಲ್ಲದೆ ಬೇರೆ ಎಲ್ಲ ಭಾವನೆಗಳೂ ಮಾಯವಾದವು. ಭೂತರಾಯನಿಗಿಂತ ಭಯಂಕರವಾಗಿ ಹೊಲೆಯರಿಗೆ ಕಾಣಿಸಿಕೊಳ್ಳುತ್ತ,

'ಮುಟ್ಟಿ, ಮುಟ್ಟಿ, ಮುಟ್ಟಿ' ಎಂದು ಅರಚಲು ಪ್ರಾರಂಭಿಸಿದ. ಈ ಅಮುಕುವ ತಿವಿಯುವ ಸದ್ದಿನಿಂದ ಕಂಗಾಲಾದ ಹೊಲೆಯರು ಯಾಂತ್ರಿಕವಾಗಿ ಮುಂದೆ ಬಂದು ಜಗನ್ನಾಥ ಒಡ್ಡಿದ್ದನ್ನು ಮುಟ್ಟಿದ ಶಾಸ್ತ್ರ ಮಾಡಿ ಸರಕ್ಕನೆ ಹಿಂದೆ ಸರಿದು ನಿಂತರು.

ಕ್ರೌರ್ಯ ದುಃಖಗಳಿಂದ ನಿರ್ಬಲನಾದ ಜಗನ್ನಾಥ ಶಾಲಿಗ್ರಾಮವನ್ನು ಅಲ್ಲೆ ಎಸೆದ. ನಿಗರಿ ನಿಂತಿದ್ದ ಒಂದು ಆರ್ತತೆ ವಿಕಾರವಾಗಿ ಕೊನೆಯಾಗಿತ್ತು; ಹೊಲೆಯರು ಅಸ್ಪೃಶ್ಯರೆಂದು ಕಾಣುವ ಚಿಕ್ಕಿಗಿರುವ ಮಾನವೀಯ ಭಾವನೆಯನ್ನೂ ತಾನು ಒಂದು ಕ್ಷಣ ಕಳೆದುಕೊಂಡಿದ್ದೆ. ಹೊಲೆಯರು ಅರ್ಥಹೀನ ವಸ್ತುಗಳಾಗಿ ತನಗೆ ಕಂಡವು. ಜಗನ್ನಾಥ ಮುಖ ತಗ್ಗಿಸಿ ನಿಂತಿದ್ದ. ಹೊಲೆಯರು ಹೊರಟುಹೋದದ್ದು ಅವನಿಗೆ ತಿಳಿಯಲಿಲ್ಲ, ಸುತ್ತಮುತ್ತಲೂ ಯಾರೂ ಇಲ್ಲವೆನ್ನುವುದು ಅವನಿಗೆ ಗೊತ್ತಾದಾಗ ಕತ್ತಲಾಗಿತ್ತು. ತನ್ನ ಬಗ್ಗೆ ಅಸಹ್ಯಪಡುತ್ತ ಹಾಗೆ ಅಲೆದಾಡಿದ. ಮುಟ್ಟಿದಾಗ ಅವುಗಳೂ ನಾನೂ ಇರುವ

ಮಾನವೀಯತೆಯನ್ನೂ ಕಳೆದುಕೊಂಡು ಸತ್ತೆವಲ್ಲ; ಇದಕ್ಕೆ ಕಾರಣ ತನ್ನ ಒಳಗಿದೆಯೊ ಅಥವಾ ಸಮಾಜದಲ್ಲಿ ಇದೆಯೊ ಎಂದು ತಿಳಿಯಲಾರದೆ ಬಹಳ ಹೊತ್ತು ಮಂಕಾಗಿ ಓಡಾಡಿ ಮನೆಗೆ ಬಂದ. ಚಿಕ್ಕಿ ಮುಖ ತೋರಿಸಲಿಲ್ಲ; ತಮ್ಮ ರೂಮಿನ ಬಾಗಿಲು ಹಾಕಿ ಮಲಗಿದ್ದರು. ಪೂಜೆ ಭಟ್ಟರು, ಅಡಿಗೆಯವರು ಗಂಟುಮೂಟೆ ಕಟ್ಟಿ ಹೊರಟಿದ್ದರು. ಇಷ್ಟು ಹೊತ್ತೂ ಮನೆಯ ಕಿಟಕಿಯಿಂದ ಎಲ್ಲವನ್ನೂ ನೋಡುತ್ತಿದ್ದ ಶಾನುಭೋಗ ಶಾಸ್ತ್ರಿ ಎದುರು ಬಂದು ನಿಂತ. 'ಶಾಸ್ತ್ರಿಗಳೆ ಇವರು ನಮ್ಮ ಮನೆ ಬಿಟ್ಟು ಹೋಗುವಂತಿದೆ. ಅವರಿಗೆ ಲೆಖ್ಖ ಮಾಡಿ ಕೊಡುವುದನ್ನೆಲ್ಲ ಕೊಡಿ. ಒಂದು ತಿಂಗಳ ಸಂಬಳ ಹೆಚ್ಚು ಕೊಡಿ, ಮಧ್ಯದಲ್ಲಿ ಬೇರೆ ಕೆಲಸ ಸಿಕ್ಕಲಿಕ್ಕಿಲ್ಲ' ಎಂದು ಸಮಾಧಾನದಿಂದ ಹೇಳಿದ. ಅಡಿಗೆಯವರು, ಪೂಜೆಯವರು ತನ್ನನ್ನು ಒಬ್ಬ ಹುಚ್ಚನೆನ್ನುವಂತೆ ನೋಡುತ್ತಿದ್ದವರು 'ಹೋಗಿ ಬರ್ತೀವಿ' ಎಂದು ಕೈ ಮುಗಿದು ಹೊರಟರು. ಈಗ ಇಡೀ ಮನೆಗೆ ತಾನು ಚಿಕ್ಕಿ ಇಬ್ಬರೇ ಆದೆವೆಂಬುದು ಜಗನ್ನಾಥನಿಗೆ ಅರ್ಥವಾಗಿ ದುಃಖವಾಯಿತು. ಅಡಿಗೆಯವನು ಹೋಗುವ ಮುಂಚೆ,

'ನಿಮ್ಮ ಫಲಹಾರವನ್ನ ತಟ್ಟೇಲಿ ಇಟ್ಟಿದೇನೆ. ನಿಮ್ಮ ರೂಮಲ್ಲಿದೆ'

ಎಂದು ತನ್ನ ಕೊನೆಯ ಕರ್ತವ್ಯ ನಿರ್ವಹಿಸಿದ. ಜಗನ್ನಾಥ 'ಆಗಲಿ, ಹೋಗಿ ಬನ್ನಿ' ಎಂದು ಒಳಗೆ ಹೋದ.

## 'Politics is not enough'

ದೇಸಾಯರು ತಮ್ಮ ಮಾತಿನ ತೀವ್ರತೆಯಲ್ಲಿ ಇನ್ನೊಂದು ಹಂತ ಇನ್ನೇನು ಏರಲಿದ್ದಂತೆ ಕಂಡಿತು. ಕಾರನ್ನು ಸರ್ವೀಸಿಗೆ ಬಿಟ್ಟು ಊಟ ಮಾಡಿ ಬಾ ಎಂದು ಬುಡನ್ನಿಗೆ ಹೇಳಲು ಜಗನ್ನಾಥ ಹೊರಗೆ ಹೋಗುವ ಅವಕಾಶವನ್ನು ದೇಸಾಯರ ಮಾತಿನ ಮಧ್ಯೆ ಹುಡುಕುತ್ತಿದ್ದ, ಭಾರತೀಪುರದಿಂದ ಬೆಂಗಳೂರಿನ ತನಕ ಡ್ರೈವ್ ಮಾಡಿ ಅವನಿಗೆ ಸುಸ್ತಾಗಿರಬೇಕು. 'ಸ್ವಲ್ಪ ಕ್ಷಮಿಸಿ' ಎಂದು ಜಗನ್ನಾಥ ಹೊರಗೆ ಹೋದ. ಬುಡನ್ನಿಗೆ ದುಡ್ಡು ಕೊಟ್ಟು ಕಳಿಸಿದ. ಒಳಗೆ ಬಂದಾಗ ದೇಸಾಯರು ತನ್ನನ್ನು ಮರೆತಿರುವಂತೆ ಕಂಡಿತು. ಅವರ ಮುಖದಲ್ಲಿ ಒಂದು ನಿಮಿಷದ ಹಿಂದಿದ್ದ ತೀವ್ರತೆಯೆಲ್ಲ ಇಂಗಿತ್ತು. ಏನನ್ನೊ ಓದುತ್ತ ಕೂತಿದ್ದರು – ಕಾಲಿನ ಮೇಲೆ ಕಾಲು ಹಾಕಿ ಆರಾಮಾಗಿ ಒಂದು ಕಾಲನ್ನು ಆಡಿಸುತ್ತ. ಎಲ್ಲ ದಿಕ್ಕುಗಳಿಂದಲು ಬೆಳಕನ್ನು ಪಡೆಯುವ ಗಾಜಿನ ಕಿಟಕಿಗಳಿದ್ದ, ಸುಖವಾದ ಸೋಫಾಗಳಿಂದ ಸಜ್ಜಾದ ವಿಶಾಲವಾದ ಅವರ ಕೋಣೆಯಿಂದ ಅವರ ಮನಸ್ಸು ಗೈರುಹಾಜರಾಗಿದ್ದಂತೆ ಕಂಡಿತು.

ಕ್ಯಾಲೆಂಡರುಗಳಲ್ಲಿ ಅವನಿಗೆ ಪರಿಚಯವಾಗಿದ್ದ ವರ್ಣರಂಜಿತವಾದ ಗುಂಡಗಿನ ಮುಖವಲ್ಲ – ಚೂಪಾದ ಉದ್ದ ಮುಖ. ನುಣ್ಣಗೆ ಕ್ಷೌರ ಮಾಡಿದ ಕೆನ್ನೆಗಳು. ಎತ್ತರವಾದ ಹಣೆ. ಕ್ಯಾಲೆಂಡರಿನ ಚಿತ್ರದ ವಿಶಾಲ ಕಣ್ಣುಗಳಲ್ಲ – ತೀಕ್ಷ್ಣವಾಗಿ ನೋಡಬಲ್ಲ ಸಣ್ಣ ಕಣ್ಣುಗಳು. ಆದರೆ ಸಭ್ಯ ಕಣ್ಣುಗಳು. ಎದ್ದು ನಿಂತಾಗ ಕುಳ್ಳಗೆ, ದಪ್ಪಗೆ ಶುಭ್ರವಾದ ಮುಖದ ಮಿಠಾಯಿ ಅಂಗಡಿಯ ಮಾಲೀಕನಂತೆ ಕಾಣುತ್ತಿದ್ದ ವ್ಯಕ್ತಿ. ಇವರನ್ನು ನೋಡುತ್ತ ತನ್ನ ಪ್ರಜ್ಞೆ ಭಾರತೀಪುರದಲ್ಲಿದ್ದಾಗಿನ ನಿಷ್ಠುರ ತೀವ್ರತೆಯನ್ನು ಚೆಲ್ಲಿಕೊಂಡು ವ್ಯಂಗ್ಯದ ಹೊಸ ಆಯಾಮ ಪಡೆದಿತ್ತು. ನಲವತ್ತೆರಡರ ಕ್ವಿಟ್ ಇಂಡಿಯಾ ಚಳುವಳಿಯ ಹೀರೋ. ಜೈಲಿನಿಂದ ತಪ್ಪಿಸಿಕೊಂಡ ಈ ವ್ಯಕ್ತಿಯನ್ನು ಹಿಡಿದುಕೊಟ್ಟರೆ ಹತ್ತು ಸಾವಿರ ರೂಪಾಯಿ ಬಹುಮಾನವನ್ನು ಕೊಡುತ್ತೇವೆಂದು ಆಗಿನ ಬ್ರಿಟಿಷ್ ಸರ್ಕಾರ ಘೋಷಿಸಿತ್ತು. ಬೊಂಬಾಯಿಯ ಯುಕವರ ನಾಯಕರಾಗಿ ಇಂಕ್ವಿಲಾಬ್

ಜಿಂದಾಬಾದಿಗೆ ಪ್ರಾಸ ಕೂಡಿಸುವ ಕೆಲವು ಹೆಸರುಗಳಲ್ಲಿ ಇವರದೂ ಒಂದಾಗಿತ್ತು. ಈಗ ಇಂಟರ್‌ನ್ಯಾಷನಲ್ ಸ್ಕೂಲಿನ ಯಜಮಾನರಾಗಿದ್ದಾರೆ.

ಜಗನ್ನಾಥ ಬಂದೊಡನೆ ಪ್ರೀತಿಯಿಂದ ಕೈ ಕುಲುಕಿದ್ದರು. ಎಷ್ಟೋ ವರ್ಷಗಳ ಸ್ನೇಹಿತನಂತೆ ಆಪ್ತವಾಗಿ ಮಾತಾಡುತ್ತ ಈಚೆಗೆ ತನಗೆ ಮೈ ಹುಷಾರಿಲ್ಲ ಎಂದಿದ್ದರು. ಐದು ನಿಮಿಷಗಳೊಳಗೆ ಜಗನ್ನಾಥ ಬಂದ ಕೆಲಸ ಕೈಗೂಡಿತ್ತು. ಮಾರ್ಗರೆಟ್‌ತನಗೂ ಬರೆದದ್ದಾಗಿಯೂ, ಮುಂದಿನ ಜೂನ್‌ಅವಳು ಸ್ಕೂಲಿನಲ್ಲಿ ಕೆಲಸ ಪ್ರಾರಂಭಿಸಬಹುದೆಂದೂ, ಅವಳ ತಂದೆ ತನಗೆ ಪರಿಚಯದವರೆಂದೂ ದೇಸಾಯಿ ಹೇಳಿ ಇದಕ್ಕಾಗಿ ನೀವಿಷ್ಟು ದೂರ ಬರಬೇಕಿತ್ತೆ ಎಂದು ಕೇಳಿದ್ದರು.

ದೇಸಾಯರ ವ್ಯಕ್ತಿತ್ವದಿಂದ ಹೊಮ್ಮುತ್ತಿದ್ದ ಸಭ್ಯ ನಾಗರಿಕ ವಾತಾವರಣದಿಂದ ಜಗನ್ನಾಥನಿಗೆ ಕ್ರಮೇಣ ಸುಖವಾಯಿತು. ಬಿಟ್ಟುಬಂದ ಭಾರತೀಪುರದ ಯಾವ ಒತ್ತಡಗಳೂ ಇಲ್ಲದೆ ವಿಚಾರದ ಚೆಂಡಾಟ ಸಾಧ್ಯವಾಯಿತು. ಟೀ ತರಲು ಜವಾನನಿಗೆ ಹೇಳಿ ದೇಸಾಯರು ಈಚೆಗೆ ನೀವು ಸುದ್ದಿಯಾಗಿದ್ದೀರಲ್ಲವೆ ಎಂದು ಕೇಳಿದರು.

ದೇಸಾಯರಿಗೆ ತನ್ನ ಒಳಗಿನ ಕಷ್ಟವನ್ನೆಲ್ಲ ಹೇಳಿಕೊಂಡುಬಿಡಬಹುದೆಂದು ಜಗನ್ನಾಥನಿಗೆ ಅನ್ನಿಸಿತ್ತು. ನಾವಾಗಲೀ ಹೊಲೆಯರಾಗಲೀ ನಿಜವಾಗಿ ಸಿದ್ಧವಾಗಿಲ್ಲ ದೇಸಾಯರೆ. ಆದ್ದರಿಂದ ನನ್ನ ಅಹಂಕಾರಕ್ಕಾಗಿ ಅವರನ್ನು ದೇವಸ್ಥಾನದೊಳಕ್ಕೆ ಕರೆದುಕೊಂಡು ಹೋಗುವುದು ಮೂರ್ಖತನವಾದೀತು. ಆದ್ದರಿಂದ ನನ್ನ ಇಡೀ ಪ್ಲಾನನ್ನು ಕೈಬಿಡೋಣವೆ. ಕಾಯೋದು ಉತ್ತಮವಲ್ಲವೆ ಅನ್ನಿಸಿದೆ. ಕೈಬಿಡುವುದಕ್ಕೂ ಧೈರ್ಯಬೇಕು. ಆತಂಕವಿಲ್ಲದೆ ಯೋಚಿಸಬೇಕು. ಒಂದು ದಿನದ ಮಟ್ಟಿಗೆ ಶಾಂತವಾಗಿ ವಿಚಾರ ಮಾಡಬೇಕೂಂತ ಊರು ಬಿಟ್ಟು ಬಂದಿದೀನಿ. ನೀವೇನು ಹೇಳುತ್ತೀರಿ?

ಆದರೆ ಜಗನ್ನಾಥ ಕೇಳಲಿಲ್ಲ. ಮನಸ್ಸಿನಲ್ಲೆ ತನ್ನ ವಿಚಾರವನ್ನು ತಿರುವಿಹಾಕುತ್ತ ದೇಸಾಯರ ಮಾತು ಕೇಳುತ್ತ ಕೂತ. ಈಚೆಗೆ ಕಟ್ಟಿಸಿದ ಹಲ್ಲುಗಳು ತೊಂದರೆ ಕೊಡುತ್ತಿರಬೇಕು – ಇಲ್ಲದಿದ್ದರೆ ಮಾತಿನಲ್ಲಿ ಮೈಮರೆಯುವ ಮನುಷ್ಯ ಈತ ಎನ್ನಿಸಿತು.

ಪ್ರತಿ ಶಬ್ದದ ಮೇಲೂ ಘಾತಹಾಕಿ ಅತ್ಯಂತ ಹೃತ್ಪೂರ್ವಕವೆನ್ನಿಸುವಂತೆ ದೇಸಾಯರು ಮಾತಾಡಿದರು. ಕಣ್ಣುಗಳನ್ನು ಕಿರಿದುಮಾಡಿ ತನ್ನನ್ನು ಸಿಕ್ಕಿಸುವಂತೆ ನೋಡುತ್ತ ಅವರು ರಾಜಕೀಯ ಯಾಕೆ ಸಾಲದೆಂದು ವಿವರಿಸಿದರು. ವಿಕ್ಟೋರಿಯಾ ಕಾಲದ ಉದ್ದುದ್ದ ವಾಕ್ಯಗಳಲ್ಲಿ ಮರಾಠಿ ಉಚ್ಚಾರಣೆಯ ಇಂಗ್ಲಿಷ್ ಮಾತುಗಳಿಂದ ಅವರು ತೋಡಿಕೊಂಡ ಆತ್ಮವೃತ್ತದಲ್ಲಿ ಪಿಸುಮಾತುಗಳಲ್ಲಿ ಕೇಳಿಸಬೇಕಾಗಿದ್ದ ಸತ್ಯಗಳೂ ಯಾಕೆ ಅಬ್ಬರಿಸುತ್ತವೆಂದು ಜಗನ್ನಾಥನಿಗೆ ಕಸಿವಿಸಿಯಾಯಿತು. ಅತ್ಯಂತ ಆಪ್ತ ವಿಷಯಕ್ಕೆ ಸಾರ್ವಜನಿಕ ಭಾಷಣದ ಚೌಕಟ್ಟು ಕೊಡುತ್ತಿದ್ದ ಅವರ ಭಾಷೆಯಿಂದಾಗಿ ಜಗನ್ನಾಥನಿಗೆ ಅವರು ಬಯಸಿದ ಗಮನವನ್ನು ಕೊಡಲಾಗಲಿಲ್ಲ.

'I had traumatic experience when India became independent' ಎಂದು ಅವರು ಮತ್ತೆ ಮಾತಿಗೆ ಪ್ರಾರಂಭಿಸಿ ಜಗನ್ನಾಥನನ್ನು ನೆಟ್ಟು ನೋಡುತ್ತ ಮೌನವಾದರು; ತನ್ನ ಮಾತಿನ ತೀವ್ರತೆ ಜಗನ್ನಾಥನಲ್ಲಿ ಬೇರೂರಿ ಒಡೆದುಕೊಳ್ಳಲು ಕಾದರು; ತಮ್ಮ ಅನುಭವ ಜಗನ್ನಾಥನ ಗಮನದಲ್ಲಿ ಫಲವತ್ತಾಗುವುದನ್ನು ನಿರೀಕ್ಷಿಸಿದರು. ಆದರೆ ಅವರ

ಹಾವಭಾವದ ತೀವ್ರತೆಯಲ್ಲಿ ಜಗನ್ನಾಥ ತಲ್ಲೀನನಾಗಲು ಒಪ್ಪದೆ ಸರಿದು ನಿಂತಿದ್ದ.

ಇಂಡಿಯಾ ಸ್ವಾತಂತ್ರ್ಯ ಪಡೆದಾಗ ದೇಸಾಯರು ಪ್ಯಾರಿಸ್‌ನಲ್ಲಿದ್ದರಂತೆ. ಪೇಪರಿನಲ್ಲಿ ಸುದ್ದಿ ತಿಳಿದೊಡನೆ ಅವರಿಗೆ ವಿಚಿತ್ರವಾದ ಅನುಭವವಾಯಿತು. ನಲವತ್ತೆರಡರ ಚಳುವಳಿಯಲ್ಲಿ ತಾನು ಪ್ರಾಣವನ್ನು ಒತ್ತೆಯಿಟ್ಟು ಹೋರಾಡದಿದ್ದರೂ ಈ ಸ್ವಾತಂತ್ರ್ಯ ಹೇಗೂ ಬರುತ್ತಿತ್ತಲ್ಲವೆ ಎನ್ನಿಸಿ ತನ್ನ ಜೀವನದಲ್ಲೆ ದೊಡ್ಡದೊಂದು ಕಂದಕ ಬಾಯ್ದೆರೆದಂತಾಯಿತು. ಇಲ್ಲಿಯ ತನಕ ತಾನು ಇಲ್ಯೂಶನ್ನಿನಲ್ಲಿ ಬದುಕುತ್ತಿದ್ದೆ ಎನ್ನಿಸಿತು. ನಾನಿಲ್ಲದೆಯೂ ಚರಿತ್ರೆ ಚಲಿಸತ್ತೆ. ಅದಕ್ಕಿರುವ ಅಗತ್ಯ ಒತ್ತಡಗಳ ತರ್ಕವೇ ಬೇರೆ. ಇರುವ ಒಂದು ಜೀವನದಲ್ಲಿ ಪ್ರೇಮ ಮತ್ತು ಸಫಲತೆಗೆ ಹಾತೊರೆಯುವ ಈ ಬದುಕನ್ನು ಒಂದೇ ಉದ್ದೇಶಕ್ಕೆ ಕಟ್ಟಿ ಹಾಕುವುದು ತಪ್ಪಾಗತ್ತೆ. ಚರಿತ್ರೆ impersonal ಆದ್ದರಿಂದ...,,

ಅವರು ಮಾತಾಡುತ್ತಿದ್ದಂತೆ ಜಗನ್ನಾಥನ ಗಮನ ಅವರ ಕೈಗಳ ಮೇಲೆ ಹೋಯಿತು. ಭಾಷಣದ ಬೀಸಿನಲ್ಲಿ ಅವರ ಕೈಗಳು ಚಲಿಸುತ್ತಿದ್ದುವು. ನಾನು ಆಮೇಲೆ ಅರವಿಂದರನ್ನು ಓದಿದೆ; ಜೆ.ಕೆ. ಯವರನ್ನು ಭೆಟ್ಟಿ ಮಾಡಿ ಅವರ ಜೊತೆ ಕೆಲವು ಕಾಲ ಕಳೆದ; ನಿಜವಾದ ಒಂದೇ ಒಂದು  ಕ್ರಾಂತಿಯೆಂದರೆ, ಸರ್ವಕಾಲಕ್ಕೂ ಅರ್ಥಪೂರ್ಣವಾದ ಕ್ರಾಂತಿಯೆಂದರೆ.... 'The only revolution' ಎನ್ನುವಾಗ ದೇಸಾಯರು ಪ್ರತಿಯೊಂದು ಪದವನ್ನೂ ಕಠೋರ ಗೊಳಿಸಿದ್ದರು; ತನ್ನ ಮನಸ್ಸನ್ನು ಹೊಕ್ಕು ವಶಪಡಿಸಿಕೊಳ್ಳುವ ಹವಣಿಕೆಯಲ್ಲಿ ಶಬ್ದಗಳನ್ನು ಅಟ್ಟುತ್ತಿದ್ರು. ಅಗೊ ಆ ಅನುಭವ ಹೇಗಾಗುತ್ತದೆಂದರೆ, ಇದ್ದಕ್ಕಿದ್ದಂತೆ ನಿನ್ನ ಮೌನದಲ್ಲಿ ಹೇಗೆ ಸಿದ್ಧಿಸುತ್ತವೆಂದರೆ, when the break through comes... ಹೀಗೆನ್ನುವಾಗ ದೇಸಾಯರು ಎದ್ದು ನಿಂತಿದ್ದರು. ತನ್ನನ್ನು ದಿಟ್ಟಿಸಿ ನೋಡುತ್ತ ಕಣ್ಣಲ್ಲಿ ನೀರೊಡೆದು ಮೃದುವಾಗಿದ್ದರು. ಅವರಿಗಾದ break-through ಹೀಗೆ ಮತ್ತೆ ಅವರಿಗೇ ನಿಜವಾಗಲು ಕೇಳಿಸಿಕೊಳ್ಳುವ ಇನ್ನೊಬ್ಬ ಬೇಕಲ್ಲವೆ ಎಂದು ಜಗನ್ನಾಥನಿಗೆ ಅನುಮಾನವಾಯಿತು. ಇನ್ನೊಂದು ಪ್ರಶ್ನೆಯನ್ನು ಮಾತಿನಲ್ಲಿ ಹೀಗೆ ಆವರಿಸಿ ವಶಪಡಿಸಿಕೊಳ್ಳದೇ ಇದ್ದಲ್ಲಿ ಪ್ರಾಯಶಃ ದೇಸಾಯರು ಈ ರೂಮಿನಲ್ಲಿ ಪ್ರೇತದಂತೆ ಇದ್ದುಬಿಡಬಹುದು. 'ಜನರ ಕಣ್ಣಲ್ಲೆ ಬದುಕಿದ ರಾಜಕಾರಣಿ ಚಿಪ್ಪೊಳಗೆ ಸೇರಿ ಸಣ್ಣಗೆ ಉಸಿರಾಡುತ್ತ ಮೃದುವಾಗಲು ಹವಣಿಸುತ್ತಾನೆ; ಆದರೆ ಆ ಬದುಕನ್ನೂ ತೀಕ್ಷ್ಣವಾದ ಬೆಳಕಿನಲ್ಲಿ ಊಹಿಸಿಕೊಳ್ಳುತ್ತಾನೆ, ಯಾಕೆ ಹೇಳಿ' ಎಂದು ದೇಸಾಯರನ್ನು ಕೇಳಿ ಬೆಚ್ಚಿಸಬೇಕೆನ್ನಿಸಿತು.

ಜಗನ್ನಾಥನ ಗಮನ ತಾನು ಒಡ್ಡಿದ ತೀವ್ರತೆಯಿಂದ ಜಾರಿಕೊಳ್ಳುತ್ತಿದೆ ಎಂದು ದೇಸಾಯರಿಗೆ ಅನ್ನಿಸಿರಬೇಕು. ಇದ್ದಕ್ಕಿದ್ದಂತೆ ಪೆಚ್ಚಾದರು. ಜಗನ್ನಾಥನಿಗೆ ತನ್ನ ತಾಯಿಯ ನೆನಪಾಯಿತು. ಪ್ರಾಯಶಃ ದೇಸಾಯರು ಹೇಳುತ್ತಿರುವುದು ಸಾಧ್ಯವಾಗುವುದು ಹಕ್ಕಿಗೂಡಿನಂತೆ ಬೆಚ್ಚಗಿರುವ ಸಾಂಸಾರಿಕ ಜೀವನದ ಆಪ್ತತೆಯಲ್ಲಿ ಮಾತ್ರ. ಅಲ್ಲಿ ಉಮೇದು, ಸ್ವಾರ್ಥ, ಪಶುತ್ವ, ದೈವಿಕತೆ, ಮೃದುತ್ವ, ನಿರಪೇಕ್ಷವಾದ ಸೌಖ್ಯ ನಿರಂಬಳವಾಗಿ ಉತ್ತಿ ಬದುಕನ್ನು ಹದ ಮಾಡುತ್ತವೆ. ಒಂಟಿ ಜೀವನ ನಡೆಸಿದ ದೇಸಾಯರು ಎಲ್ಲವನ್ನೂ ಊಹಿಸಬಲ್ಲರು ಅಷ್ಟೆ. ಆದರೆ ತನ್ನ ತಾಯಿ ಗಾಳಿಗೊಡ್ಡಿದ ಪರಿಮಳದ ಹೂವಿನಂತೆ ಸವೆದರು. ಹೊತ್ತಿ ಉರಿದು ನಂದಿಬಿಡುವ ಪ್ರಖರತೆ ಅವರಲ್ಲಿರಲಿಲ್ಲ.

ಟೀ ಬಂದಿತ್ತು. ಜಗನ್ನಾಥ ಇಂಟರ್‌ನ್ಯಾಷನಲ್ ಸ್ಕೂಲಿನ ಕಿಚನ್‌ನಲ್ಲಿ ತಯಾರಾದ ಕ್ರೀಮ್ ಕೇಕನ್ನು ತುಂಬ ಆಸೆಯಿಂದ ತಿಂದ. ದೇಸಾಯರು ಟೀ ಕುಡಿಯುತ್ತ ಮಂಕಾದ್ದನ್ನು ಕಂಡು ವಿಷಯ ಬದಲಿಸಲು ಜಗನ್ನಾಥ ಪ್ರಯತ್ನಿಸಿದ. ಇನ್ನೊಮ್ಮೆ

ಮುಷ್ಠಿ ಕಟ್ಟಿ ತನ್ನನ್ನು ಹೊರ ಚೆಲ್ಲುವ ಕ್ಷಣ ಒದಗುವ ತನಕ ದೇಸಾಯರು ತನ್ನ ಅಸ್ತಿತ್ವದಿಂದಲೇ ಗೈರುಹಾಜರಾಗಿ ಬಿಟ್ಟಿದ್ದಾರೆ ಎನ್ನಿಸಿತ್ತು.

ಹೊಯ್ಸಾಟಕ್ಕೆ ಅತೀತವಾದ ಸ್ಥಿತಿಯನ್ನು ಮುಟ್ಟಬೇಕೆಂದು ದೇಸಾಯರು ಮತ್ತೆ ಮಾತಿಗೆ ಶುರುಮಾಡಿದರು. ಈ ಅತೀತವಾದ ಸ್ಥಿತಿ ಮೌನದಲ್ಲಿ ಅನುಭವಕ್ಕೆ ಬರುವಂಥದೆಂದು ವಿವರಿಸಿದರು. ಆದರೆ ಎಷ್ಟೊಂದು ಅಬ್ಬರದ ಮಾತುಗಳಲ್ಲಿ. ತನ್ನ ತಾಯಿಗದು ಪ್ರಾಯಶಃ ದಕ್ಕಿದ್ದಿರಬಹುದೆ? ಎಸ್ಟೇಟಿನ ಉಸ್ತುವಾರಿ ತಂದೆಗೆ. ಅಷ್ಟು ಸರಸಪ್ರಿಯನಲ್ಲದ ದುಡ್ಡಿಗಂಟಿಕೊಂಡ ಮನುಷ್ಯ ತನ್ನ ಅಪ್ಪ. ತಾಯಿಗವರ ಮೇಲೆ ಪ್ರೀತಿಯಿತ್ತೆ ಹೇಳುವುದು ಅಸಾಧ್ಯ. ಅತಿಥಿ ಸತ್ಕಾರ, ಮನೆಗೆಲಸ, ಮೈಕೈ ನೋವು, ದನಕರುಗಳ ಆರೈಕೆ, ಹೂವಿನ ಗಿಡಗಳನ್ನು ಬೆಳೆಸುವುದು, ಸಂಗೀತ – ಇಷ್ಟರಲ್ಲೆ ತಾಯಿ ಹದವಾಗಿ ಸತ್ತರೆ? ದೇಸಾಯರು ವಿವರಿಸಿದ ತತ್ವವನ್ನು ತಾಯಿ ವೈಚಾರಿಕವಾಗಿ ಖಂಡಿತ ತಿಳಿದಿರಲಿಲ್ಲ. ಮಾತಿಗೆ, ವಿಚಾರಕ್ಕೆ ದಕ್ಕದೇ ಇದ್ದದ್ದೂ ನಿಜವೆನ್ನಿಸುವುದು ಎಷ್ಟು ಕಷ್ಟ? ತನಗೆ ಮಾತ್ರವಲ್ಲ, ಅದನ್ನೇ ಹೇಳುವ ಈ ದೇಸಾಯರಿಗೂ; ಅಥವಾ ದೇಸಾಯರಿಗೆ ತಿಳಿದಿದೆ. ಆದರೆ ಅದಕ್ಕೆ ತಕ್ಕ ಮಾತು ತಿಳಿಯದೆ ಭ್ರಷ್ಟರಾಗಿದ್ದಾರೆ.

'ಸ್ಕೂಲನ್ನು ನೋಡಿ' ಎಂದು ದೇಸಾಯರು ತನ್ನನ್ನು ಕರೆದುಕೊಂಡು ಹೋದರು. ಅಮೇರಿಕ, ಇಂಗ್ಲೆಂಡ್, ಜರ್ಮನಿ – ಎಲ್ಲ ದೇಶಗಳ ಮಕ್ಕಳೂ ಸ್ಕೂಲಲ್ಲಿದ್ದರು. ಯಾವ ಕಂಡೀಶನಿಂಗೂ ಆಗದಂತೆ ಇಲ್ಲಿ ಮಕ್ಕಳನ್ನು ಬೆಳೆಸಲು ಯತ್ನಿಸುತ್ತೇವೆ ಎಂದು ದೇಸಾಯರು ವಿವರಿಸುತ್ತ ನಡೆದರು. ವಿಶಾಲವಾದ, ರಮ್ಯವಾದ ಜಾಗದಲ್ಲಿ ಸ್ಕೂಲಿತ್ತು. ಭಾರತೀಯ ಮಕ್ಕಳ ಜೊತೆ ಯುರೋಪಿನ ಮಕ್ಕಳು ಒಂದು ಮರದ ಕೆಳಗೆ ಆಡುತ್ತಿದ್ದುದನ್ನು ಕಂಡ. 'ಎಷ್ಟು ಫೀಸ್' ಎಂದು ಜಗನ್ನಾಥ ಮೃದುವಾಗಿ ದೇಸಾಯರನ್ನು ಕೇಳಿದ. ದೇಸಾಯರು ತುಂಬ ನಾಚಿಕೆಯಿಂದ, 'ವರ್ಷಕ್ಕೆ ಒಂದು ಮಗುವಿಗೆ ನಾಲ್ಕು ಸಾವಿರವಾದರೂ ಖರ್ಚಾಗುತ್ತೆ. ಬಡವರ ಮಕ್ಕಳಿಗೆ ಇಂಥ ವಿದ್ಯಭ್ಯಾಸ ಕೊಡುವುದು ಸಾಧ್ಯವಿಲ್ಲವೆಂದು ನನಗೆ ದುಃಖವಾಗುತ್ತೆ' ಎಂದರು. ಅವರ ಕಸಿವಿಸಿ ಪ್ರಾಮಾಣಿಕವಾದದ್ದು ಎಂದು ಜಗನ್ನಾಥನಿಗೆ ಅನ್ನಿಸಿತು. ಅವರನ್ನು ತಾನು ನೋಯಿಸಿರಬಹುದೆಂದು ಬೇಸರವಾಯಿತು. ಚಿತ್ರಕಲೆ ಹೇಳಿಕೊಡುತ್ತಿದ್ದ ಕೆಂಬಣ್ಣದ ತಲೆಕೂದಲಿನ, ಸೀರೆ ಉಟ್ಟ ಅಮೇರಿಕನ್ ಮಹಿಳೆಯೊಬ್ಬಳು ಬಣ್ಣವನ್ನು ಅಕಸ್ಮಾತ್ ಚೆಲ್ಲಿದ್ದ ಏಳೆಂಟು ವರ್ಷದ ಭಾರತೀಯ ಹುಡುಗಿಯೊಂದನ್ನು ಹೊಡೆಯಲು ಕೈ ಎತ್ತಿದ್ದಳು. ಯಾರೋ ಬರುತ್ತಿರುವುದು ಕಂಡು 'Child, don't be clumsy' ಎಂದು ಎತ್ತಿದ ಕೈಯನ್ನು ಅವಸರದಲ್ಲಿ ಸೊಂಟದ ಮೇಲಿಟ್ಟಳು. ದೇಸಾಯರು ಇದನ್ನು ಬೇಕೆಂದೇ ಗಮನಿಸದೆ ಜಗನ್ನಾಥನನ್ನು ಆಕೆಗೆ ಪರಿಚಯ ಮಾಡಿಕೊಟ್ಟರು. ಜಗನ್ನಾಥ ಆಸಕ್ತಿಯಿಂದ ಮಕ್ಕಳು ಬರೆದ ಚಿತ್ರಗಳನ್ನೆಲ್ಲ ನೋಡಿ ಹೊರಗೆ ಬಂದ.

ಗೇಟಿನ ತನಕ ಬಂದು ಕಳಿಸುತ್ತೇನೆಂದು ದೇಸಾಯರು ಜೊತೆಗೆ ನಡೆದರು. ಮರಗಳನ್ನು ಬೆಳೆಸಿದ ಸುಂದರವಾದ ಕಾಲುದಾರಿಯಲ್ಲಿ ನಿಂತು ಮತ್ತೆ ಮಾತಿಗೆ ಪ್ರಾರಂಭಿಸಿದರು : ನೋಡಿ sex ಬಗ್ಗೆ ನಾವು ಹೇಗೆ ಯೋಚಿಸುತ್ತೇವೆ. ನನ್ನ ನೆವ್ಯೂ ಅಮೇರಿಕಾಕ್ಕೆ ಓದಲೆಂದು ಹೋಗುವಾಗ ನಾನು ಅವನಿಗೆ ಕೇಳಿದೆ : ನೀನು ಯುವಕ. ಸೆಕ್ಸ್ ಬಗ್ಗೆ ಏನು ಯೋಚಿಸಿದ್ದೀಯ? ಅಮೆರಿಕ ಭಾರತದಂತೆ ಇಲ್ಲ; ಸೆಕ್ಸುಯಲ್ ಸ್ವಾತಂತ್ರ್ಯ ಅಲ್ಲಿ ಇಲ್ಲಿಗಿಂತ ಹೆಚ್ಚು – ಆದರೆ ನೋಡು, ಸೆಕ್ಸ್ ತಪ್ಪೂ ಅಲ್ಲ, ಸರಿಯೂ ಅಲ್ಲ. ಅದರಲ್ಲೊಂದು ಸಮಸ್ಯೆಯಿದೆ – ಅಷ್ಟೆ. ಹೆಣ್ಣಿನ ಜೊತೆ ಸಂಭೋಗದಲ್ಲಿ ನಮ್ಮ ಮೈಮನಸ್ಸು ಎರಡೂ tumscent ಆಗುತ್ತಾವೆ. ಸಂಭೋಗದ ಕ್ರಿಯೆಯಲ್ಲಿ ದೇಹ detumescent ಆಗತ್ತೆ. ಆದರೆ

ಮನಸ್ಸು ಆಗಲ್ಲ. ಮನುಷ್ಯನಿಗೆ sex ನಲ್ಲಿ ನಿಜವಾದ ಶಮನ ಸಿಗಲ್ಲ; ಇದೇ ಸಮಸ್ಯೆ. ಆದ್ದರಿಂದಲೇನೇ tenderness ಬೇಕು. ತನ್ನ ಸುಖದ ಜೊತೆ ಹೆಣ್ಣಿಗೂ ಸುಖ ಸಿಗಬೇಕೆಂಬ ಆಸೆ ಬೇಕು. ನೋಡು, ಮನಸ್ಸನ್ನ ಹೇಗೆ detumescent ಸ್ಥಿತಿಗೆ ತರಬೇಕೆನ್ನೋದೇ ನಿಜವಾದ ಸಮಸ್ಯೆ. ನಮ್ಮ ರಾಜಕೀಯ ಆರ್ಥಿಕ ಪರದಾಟಗಳಿಗೂ ಮೀರಿ ಮನುಷ್ಯನ್ನ ಕಾಡೋ ಮೂಲಭೂತ ಪ್ರಶ್ನೆ ಎಂದರೆ ಇದು.

ಗೇಟು ಹತ್ತಿರವಾದ್ದರಿಂದ ಮಾತು ಮುಗಿಸುವ ಕ್ರಮ ತಿಳಿಯದೆ ದೇಸಾಯರು ಕೈಯೊಡ್ಡಿದರು. ಜಗನ್ನಾಥ 'ಹೋಗುವ' ಎಂದ. ದೇಸಾಯರು 'ಮತ್ತೆ ಬನ್ನಿ' ಎಂದರು. 'ರಾಜಕೀಯದಲ್ಲಿ ನಿಮ್ಮ ಮನಸ್ಸಿನ ಶಾಂತಿಯನ್ನು ಕೆಡಿಸಿಕೊಳ್ಳಬೇಡಿ. ಆಗಾಗ ನಮ್ಮ ಸ್ಕೂಲಿಗೆ ಬಂದು ಇರಿ. ಗೆಸ್ಟ್‌ಹೌಸ್‌ಇದೆ. ಮಕ್ಕಳ ಜೊತೆ ಕಾಲ ಕಳೆಯಬಹುದು' ಎಂದು ಇಷ್ಟು ಹೊತ್ತೂ ಮಾತಾಡಿದ್ದರ ಉದ್ದೇಶವನ್ನು ಹೊರಗೆ ಹಾಕಿದರು. ದೇಸಾಯರು ತನ್ನ ಐರನಿಯನ್ನು ಹೇಗೆ ಮೀರಿ ನಿಲ್ಲುತ್ತಾರೆ, ಕೆಲವು ಕ್ಷಣವಾದರೂ, ಎಂದು ಜಗನ್ನಾಥನಿಗೆ ಅವರ ಬಗ್ಗೆ ಗೌರವ ಹುಟ್ಟಿತು.

ಜಗನ್ನಾಥನಿಗೆ ಕಾರಲ್ಲಿ ಕೂತು ಹೊರಡುವಾಗ ಬೆಂಗಳೂರು ಸಿಟಿ ಕಡೆ ಹೊರಟಿದ್ದ ಸ್ಕೂಲಿನ ಮ್ಯಾನೇಜರರು ನನಗೊಂದು ಡ್ರಾಪ್ ಕೊಡಿ ಎಂದರು. ದಾರಿಯಲ್ಲಿ ಅವರನ್ನು ಜಗನ್ನಾಥ 'ಮಕ್ಕಳನ್ನು ನೀವು ಪರೀಕ್ಷೆಗೆ ತಯಾರು ಮಾಡುವುದಿಲ್ಲವೆ?' ಎಂದು ಕೇಳಿದ. ಅದಕ್ಕವರು 'ಅಷ್ಟು ದುಡ್ಡು ಖಚು ಮಾಡಿದ ಮೇಲೆ ಪೇರೆಂಟ್ಸ್ ಸುಮ್ಮನಿರುತ್ತಾರೆಯೆ? ಕಂಡೀಶನಿಂಗ್ ಆಗದಂತೆ ಮಕ್ಕಳನ್ನು ಪರೀಕ್ಷೆಗೆ ತಯಾರು ಮಾಡಲು ದೇಸಾಯರು ಬಹಳ ಪ್ರಯತ್ನಿಸುತ್ತಾರೆ. ಕಾಂಪ್ರೊಮೈಸ್ ಮಾಡಿಕೊಳ್ಳದೆ ವಿಧಿಯಿಲ್ಲವಲ್ಲ' ಎಂದರು.

ಹತ್ತು ಮೈಲಿಯಾಚೆ ಬೆಂಗಳೂರು ಸಿಕ್ಕಿತು. 'ಮತ್ತೆ ನೀವು ಬರಬೇಕು. ನಾಳೆಯೇ ನಾವು ಮಾರ್ಗರೆಟ್‌ಗೆ ಇನ್ನೊಂದು ಕಾಗದ ಹಾಕುತ್ತಿದ್ದೇವೆ' ಎಂದು ಮ್ಯಾನೇಜರ್‌ಇಳಿದರು. ಭಾವುಕರಾದ ದೇಸಾಯರಿಗೆ ಅಗತ್ಯವಾದ ಪ್ರಾಕ್ಟಿಕಲ್ ಮೈಂಡೆಡ್ ಮ್ಯಾನೇಜರ್ ಈತ ಎನ್ನಿಸಿತು.

* * *

ಹೋಟೆಲಲ್ಲಿ ಜಗನ್ನಾಥ ಊಟ ಮಾಡಿದ. ತನ್ನ ಮನಸ್ಸು ತಿಳಿಯಾದೀತೆಂದು ಭಾವಿಸಿ ಅವನು ಬೆಂಗಳೂರಿಗೆ ಬಂದಿದ್ದ. ಶಾಲಿಗ್ರಾಮವನ್ನು ಹೊಲೆಯರಿಗೆ ಒಡ್ಡಿದ ರಾತ್ರೆ ಅವನಿಗೆ ನಿದ್ದೆ ಬಂದಿರಲಿಲ್ಲ. ಮಧ್ಯರಾತ್ರೆ ಎದ್ದು ಹೊಲೆಯರ ಗುಡಿಗಳಿಗೆ ಹೋಗಿ ಅವರನ್ನು ಕರೆದೆಬ್ಬಿಸಲು ಧೈರ್ಯ ಬರದೆ ಹಿಂದಕ್ಕೆ ಬಂದಿದ್ದ. ದೇವಸ್ಥಾನಕ್ಕೆ ಹೊಲೆಯರನ್ನು ಕರೆದುಕೊಂಡು ಹೋಗಬೇಕೆಂಬುದು ಅಪಕ್ವವಾದ ತೀರ್ಮಾನವೆ? ಈ ವಿಚಾರ ಇನ್ನಷ್ಟು ಸ್ಪಷ್ಟವಾಗಲೆಂದು ಬೆಂಗಳೂರಿಗೆ ಬಂದಿದ್ದ. ಯಾವ ಅಹಂಕಾರವೂ ಇಲ್ಲದೆ ತಾನು ಘೋಷಿಸಿದ ಕ್ರಿಯೆಯನ್ನು ಕೈಬಿಡಲು ಜಗನ್ನಾಥ ತಯಾರಿದ್ದ. ಆದರೆ ಹಾಗೆ ಮಾಡುವುದೇ ಸರಿಯೆಂಬ ಬಗ್ಗೆಯೂ ಅವನಿಗೆ ಅನುಮಾನವಿತ್ತು.

ದೇಸಾಯರು ಆಡಿದ ಮಾತಿನಿಂದ ಜಗನ್ನಾಥನ ಮನಸ್ಸಿಗೆ ಕಳವಳವಾಗಿತ್ತು. ತನ್ನ ಕ್ರಿಯೆ ಕೃತಕವಾದದ್ದಲ್ಲವೆ ಎನ್ನಿಸಿತು.

ಹೊಲೆಯರ ಜೊತೆ ತಾನು ಇಷ್ಟು ದಿನಗಳೂ ಕಳೆದ ಘಳಿಗೆಗಳಲ್ಲಿ ಒಂದಾದರೂ ತನಗಾಗಲೀ ಅವರಿಗಾಗಲೀ ನಿಜವಾದ ಅನುಭವವಾಗಿರಲಿಲ್ಲ. ಈ ಕೃತಕತೆಯಿಂದ ತನ್ನ ಜೀವನ ಒಣಗೀತೆಂದು ದಿಗಿಲಾಯಿತು.

ಊಟ ಮುಗಿಸಿದವನೆ ಕಾರಿನಲ್ಲಿ ಕೂತು. 'ಬುಡನ್, ಸೀದಾ ಭಾರತೀಪುರಕ್ಕೆ ಹೋಗೋಣ. ನಿನಗೆ ಸುಸ್ತಾಗಿದ್ದರೆ ನಾನಷ್ಟು ದೂರ ಡ್ರೈವ್ ಮಾಡ್ತೀನಿ' ಎಂದ.

ಬೆಂಗಳೂರಲ್ಲಿ ಕೂತು ನಾನು ಯಾವ ತೀರ್ಮಾನಕ್ಕೂ ಬರಲಾರೆನೆಂದು ಒಮ್ಮಿಂದೂ ಮೈಗೆ ಜಗನ್ನಾಥನಿಗೆ ಅನ್ನಿಸಿತ್ತು. ಮತ್ತೆ ಆ ಮನೆಗೆ ಹೋಗಬೇಕು; ನರಹುಳ ಸುಳಿಯದ ಅದರ ಒಳಗೆ ಓಡಾಡಬೇಕು; ದುಃಖದಿಂದ ಸೊರಗಿದ ಚಿಕ್ಕಿಯನ್ನು ನೋಡಬೇಕು. ಈ ವಾಸ್ತವತೆಯನ್ನು ಎದುರಿಸಿ ನನ್ನ ಕ್ರಿಯೆ ಹೊಲೆಯರಿಗೆಷ್ಟು ಅಗತ್ಯ ಎಂದು ತಿಳಿಯಾಗಿ ಯೋಚಿಸಬೇಕು. ಕಾಯಬೇಕು. ಯಾವ ಘಳಿಗೆಯಲ್ಲಾದರೂ ತಾನು ಮಾಡುತ್ತಿರುವುದೆಲ್ಲ ಕೃತಕ, ತನ್ನ ಗರ್ವದಿಂದ ಹುಟ್ಟಿದ್ದು ಎನ್ನಿಸಿದೊಡನೆಯೇ ಹಿಂದೆಗೆಯುವ ಧೈರ್ಯ ತೋರಿಸಬೇಕು.

ದೇಸಾಯರ ಜೊತೆ ಮಾತಾಡುವಾಗ ವಿಚಿತ್ರವಾದ ಅನುಭವವಾಗಿತ್ತಲ್ಲವೆ ಎಂದು ದಾರಿಯಲ್ಲಿ ಜಗನ್ನಾಥ ಯೋಚಿಸಿದ. ವ್ಯಂಗ್ಯದಿಂದ ಅವರನ್ನು ನೋಡಿದೆ; ಮತ್ತೆ ಗೌರವದಿಂದ ಅವರ ಮಾತು ಕೇಳಿಸಿಕೊಂಡೆ. ಎಲ್ಲ ಸುಳ್ಳೆನ್ನಿಸಿತು. ಆದರೂ ಅವರ ತೀವ್ರತೆ ಕಾಡುವಂತಿತ್ತು. ನಾನು ಯಾಕೆ ಹೊಲೆಯರನ್ನು ದೇವಸ್ಥಾನದೊಳಗೆ ಕರೆದುಕೊಂಡು ಹೋಗುವುದು ಅನಗತ್ಯ ಎಂದುದನ್ನೆ ಅವರು ಹೇಳಲು ಪ್ರಯತ್ನಿಸಿದ್ದರೆ? ಪರ್ಯಾಯವಾಗಿ ಯಾವುದು ನಿಜವೆಂದು ಅವರು ತೋರಿಸಲು ಒದ್ದಾಡುತ್ತಿದ್ದ ಕ್ರಮದಲ್ಲೆ ತನಗೆ ಬಿರುಕು ಕಂಡಿತ್ತು. ನಾನು ಮಾಡಹೊರಟದ್ದು ಸರಿಯೋ ತಪ್ಪೋ ಯೋಚನೆಯ ಮೂಲಕ ತಿಳಿಯುವಂಥದ್ದಲ್ಲ. ಭಾರತೀಪುರದ ಹೊಲೆಯರು ಅದನ್ನು ನಿರ್ಧರಿಸುತ್ತಾರೆ. ಸಾಧ್ಯವಿದ್ದಷ್ಟು ತಳ್ಳುವುದು; ಕಾರಣವಾಗಲು ಪ್ರಯತ್ನಿಸುವುದು; ಕಾಯುವುದು; ಎಲ್ಲ ಕೃತಕವೆನ್ನಿಸಿದರೆ ಸರಿದು ನಿಲ್ಲುವುದು – ಇಷ್ಟೇ ನನಗೆ ಸಾಧ್ಯ. ದೊಡ್ಡದೊಂದು ಕಾರಣಕ್ಕೆ ಒಡ್ಡಿ ಕೊಳ್ಳದಿದ್ದರೆ ಆತ್ಮರತನಾಗಿ ಉಳಿಯುತ್ತೇನೆ.

ಜಗನ್ನಾಥ ಭಾರತೀಪುರ ತಲ್ಪಿದಾಗ ರಾತ್ರೆ ಒಂಬತ್ತು ಗಂಟೆಯಾಗಿತ್ತು. ಮನೆಯಲ್ಲಿ ಚಿಕ್ಕಿ ಮತ್ತು ಹೊರಗೆಲಸದ ಆಳಲ್ಲದೆ ಇನ್ನು ಯಾರೂ ಇರಲಿಲ್ಲ. ಸೊರಗಿದ ಮುಖ ಚಿಕ್ಕಿಯನ್ನು ನೋಡಿ ಏನಾದರೂ ಹೇಳಬೇಕೆನ್ನಿಸಿತು. ನಾನು ಮುಟ್ಠಾಳ ಅಲ್ಲ ಚಿಕ್ಕಿ, ನನ್ನ ನಿಶ್ಚಯ ಅಪಕ್ವ ಎನ್ನಿಸಿದರೆ ಇಡೀ ಯೋಜನೇನ್ನ ಕೈಬಿಡುತ್ತೇನೆ ಎಂದು ಹೇಳಲು ಪ್ರಯತ್ನಿಸಿದ. ಆಗಲಿಲ್ಲ. 'ಆಯಾಸವಾಗಿದೆ, ಸ್ನಾನಮಾಡಿ ಊಟ ಮಾಡುತ್ತೇನೆ' ಎಂದು ಸ್ನಾನದ ಮನೆಗೆ ಹೋದ. ಅವನ ಮನೆಯಲ್ಲಿ ಯಾವ ಹೊತ್ತಿಗೆಂದರೂ ಬಿಸಿ ನೀರು ಸಿದ್ಧವಿರುತ್ತಾದ್ದರಿಂದ ಮೈ ಬೆವರುವಂತೆ ಸ್ನಾನ ಮಾಡಿದ.

ಚಿಕ್ಕಿ ಬಡಿಸಿದರು. ಸ್ವಲ್ಪ ಸಾರನ್ನ ಊಟ ಮಾಡಿ ರೂಮಿಗೆ ಹೋದ. ಡಿಸೆಂಬರಿನ ಚಳಿರಾತ್ರೆ. ಸ್ವಲ್ಪ ಹೊತ್ತು ಓದುತ್ತ ಕೂತಿದ್ದವನು ದೀಪ ಆರಿಸಿ ಮಲಗಿದ. ಉಲ್ಲಾಸವಿಲ್ಲದೆ ಏನು ಮಾಡಿಯೂ ಪ್ರಯೋಜನವಿಲ್ಲ; ಒಟ್ಟು ವಾತಾವರಣ ತನಗೆ ಮಂಕು ಹಿಡಿಸುವಂತಿತ್ತು. ಶಾಲನ್ನು ಹೊದ್ದು ಕಾಲು ಚಾಚಿ ಕಣ್ಣು ಮುಚ್ಚಿದೊಡನೆ ಹಾಯೆನ್ನಿಸಿತು. ಹಗಲಿನ ಜೀವನವೆಲ್ಲ ಸಾರ್ವಜನಿಕವಾಗುತ್ತ ಹೋದ್ದರಿಂದ ರಾತ್ರೆ ಹಾಸಿಗೆಯಲ್ಲಿ ಮಲಗಿ ನಿದ್ದೆ ಹತ್ತುವ ತನಕವೂ ಅವನು ಅನುಭವಿಸುತ್ತಿದ್ದ

ಏಕಾಂತ ಪ್ರಿಯವಾಗಿತ್ತು.

ಅವತ್ತು ಪೇಪರಿನಲ್ಲಿ ಬಂದಿದ್ದ ಕಾಗದಗಳನ್ನು ನೆನಸಿಕೊಂಡ. ಖಂಡಿಸುವ ಕಾಗದಗಳಾಗಲೀ, ಹೊಗಳುವ ಕಾಗದಗಳಾಗಲೀ ಅರ್ಥ ಪೂರ್ಣವೆನ್ನಿಸಿರಲಿಲ್ಲ. ಮನಸ್ಸು ಹಗುರಾಗಿ ಹರಿದಾಡಿತು. ಮಾರ್ಗರೆಟ್ ಆ ಸ್ಕೂಲನ್ನು ಇಷ್ಟಪಡುವಳೆ, ದೇಸಾಯದ ಆದರ್ಶಕ್ಕೂ ಸ್ಕೂಲಿನಲ್ಲಿ ನಡೆಯುವ ವಾಸ್ತವಕ್ಕೂ ನಡುವೆ ಕಂದಕ ಕಂಡು ಅವಳಿಗೆ ಭ್ರಮನಿರಸನ ವಾಗಲಿಕ್ಕಿಲ್ಲವೆ- ಮಾರ್ಗರೆಟ್ಟಿಗೆ ದೇಸಾಯರ ಬಗ್ಗೆ ಬರೆಯಬೇಕು ಎಂದು ನಿರ್ಧರಿಸಿದ. ತಾಯಿಯ ನೆನಪಾಯಿತು. ಮತ್ತೆ ಸ್ಟ್ರಾಟ್‌ಫರ್ಡಿನಲ್ಲಿ ನೋಡಿದ ಕೋರಿಯೋಲೇನಸ್ ನಾಟಕ, ಹುಡುಗನಾಗಿದ್ದಾಗ ರಾತ್ರೆಯಲ್ಲ ಕೂತು ನೋಡುತ್ತಿದ್ದ ಯಕ್ಷಗಾನ. ಪ್ರತಿವರ್ಷ ಜಾತ್ರೆಯ ಸಮಯದಲ್ಲಿ ಒಂದು ಯಕ್ಷಗಾನ ತಮ್ಮ ಮನೆಯ ಖರ್ಚನಿಂದ ನಡೆಯುತ್ತಿತ್ತು. ಆದರೆ ಈ ವರ್ಷ ಆಡಿಸಿರೆಂದು ಕೇಳಲು ಯಾರೂ ಬಂದಿರಲಿಲ್ಲವೆಂದೂ ನೋವಾಯಿತು.

ಇನ್ನೇನು ನಿದ್ದೆ ಹತ್ತಬೇಕು ಅನ್ನುವಷ್ಟರಲ್ಲಿ ಹೊರಗಿನಿಂದ ಯಾರೂ 'ಅಯ್ಯೋವರ' ಎಂದು ಕೂಗಿ ಕರೆದದ್ದು ಕೇಳಿಸಿತು. ಭಯಗ್ರಸ್ತವಾದ ಸ್ವರ. ಜಗನ್ನಾಥ ಎದ್ದು ಟಾರ್ಚ್ ಹಿಡಿದು ಕೆಳಗೆ ಬಂದ. ಅಮಾವಾಸ್ಯೆಯ ಎದುರಿನ ದಟ್ಟವಾದ ಕತ್ತಲು. ಅಂಗಳದಾಚೆ ನಿಂತು ಯಾರೋ ಅಳುತ್ತಿದ್ದಾರೆ.

ಟಾರ್ಚ್‌ಬೆಳಕಿನಲ್ಲಿ ಪಿಳ್ಳನ ಅಪ್ಪ ಅವ್ವ ಕಂಡರು. ಪಿಳ್ಳನ ಅಪ್ಪ ಬರಿ ಲಂಗೋಟಿಯಲ್ಲಿ ನಿಂತು ಚಳಿಯಲ್ಲಿ ನಡುಗುತ್ತಿದ್ದ. ಅವನ ಕೂದಲೆಲ್ಲ ಕೆದರಿ ಕಣ್ಣು ಕೆಂಪಾಗಿದ್ದುವು. ಬಾಯಿಂದ ಹೆಂಡದ ವಾಸನೆ ಬರುತ್ತಿತ್ತು. 'ಏನು ವಿಷಯ?' ಎಂದು ಸಮಾಧಾನದಿಂದ ಜಗನ್ನಾಥ ಕೇಳಿದ.

ಗಾಬರಿಯಲ್ಲಿ ಪಿಳ್ಳನ ಅಪ್ಪ ಮಾತಾಡಿದ. ಜಗನ್ನಾಥ ಮತ್ತೆ ಮತ್ತೆ ಅವನನ್ನು ಪ್ರಶ್ನಿಸಿದ ಮೇಲೂ ತಿಳಿದದ್ದು ಇಷ್ಟೆ. ರಾತ್ರೆ ಪೊಲೀಸರು ಬಂದು ಪಿಳ್ಳನನ್ನು ಎಳೆದುಕೊಂಡು ಹೋದರು. ಎಲ್ಲಿಗೆ ಗೊತ್ತಿಲ್ಲ; ಯಾಕೆ ಗೊತ್ತಿಲ್ಲ.

'ಗುಡಿಸಲಿಗೆ ಹೋಗಿರಿ, ನಾನವನ್ನ ಕರ್ಕೊಂಡು ಬರ್ತೀನಿ' ಎಂದು ಸಮಾಧಾನ ಹೇಳಿದ. ಅವುಗಳು ಇನ್ನೂ ಅಳುತ್ತಿದ್ದುದು ನೋಡಿ ಗದರಿಸಬೇಕಾಯ್ತು. ಉಟ್ಟ ವಸ್ತ್ರದಲ್ಲೆ ಕಾರಿನಲ್ಲಿ ಸೀದ ಭಾರತೀಪುರದ ಪೊಲೀಸ್ ಸ್ಟೇಶನ್ನಿಗೆ ಹೋದ.

ಜಗನ್ನಾಥನನ್ನು ನೋಡಿದೊಡನೆ ಭರ್ಜರಿ ಮೀಸೆಯ ದಫೇದಾರನೊಬ್ಬ ಎದ್ದು ನಿಂತು ನಮಸ್ಕಾರ ಮಾಡಿದ. 'ಯಾರು ಡ್ಯೂಟಿ ಮೇಲಿರೋದು?' ಜಗನ್ನಾಥ ಅಧಿಕಾರವಾಣಿಯಿಂದ ಕೇಳಿದ.

'ನಾನು ಸಾರ್ ಯಾಕೆ?'

'ಸ್ವಲ್ಪ ಇನ್‌ಸ್‌ಪೆಕ್ಟರನ್ನ ಕರೀರಿ.' ಜಗನ್ನಾಥ ಮೇಜಿನ ಎದುರಿದ್ದ ಕುರ್ಚಿಯ ಮೇಲೆ ಕೂತ, ದಫೇದಾರ ನಿಂತೇ ಇದ್ದ.

‘ಸಾಹೇಬ್ರು ಮಲಗವ್ರೆ ಸಾರ್.’

‘ನಮ್ಮನೇ ಆಳು ಪಿಳ್ಳನನ್ನ ಸ್ಟೇಶನ್ನಿಗೆ ತಂದಿದೀರಲ್ಲ ಯಾಕೇಂತ ಕೇಳಲಿಕ್ಕೆ ಬಂದೆ’ ಜಗನ್ನಾಥ ಗಡುಸಾಗಿ ಹೇಳಿದ.

‘ಅದು ಕೇಸಾಗಿದೆ ಸಾರ್, ಕ್ರಿಮಿನಲ್ ಕೇಸು.’

‘ಅದೇನು ಕೇಸು ತಿಳಿಸಿ. ನಾನು ಜಾಮೀನು ನಿಲ್ತೀನಿ ಬೇಕಾದರೆ. ಅವನನ್ನ ಮೊದಲು ಲಾಕಪ್ಪಿಂದ ಹೊರಗೆ ಬಿಡಿ.’

ದಫೇದಾರ ತಬ್ಬಿಬ್ಬಾದಂತೆ ಕಂಡಿತು. ನಿಂತೇ ಇದ್ದವನು ವಿನಯದಿಂದ ಹೇಳಿದ :

‘ಈ ಹೊಲೇ ಮುಂಡೇಮಕ್ಕಳು ಹೆಚ್ಚಿಕೊಂಡಿದಾವೆ ಸಾರ್. ಈ ಪಿಳ್ಳ ಅದ್ಯಾರೋ ಸೆಟ್ಟರ ಪೈಕಿ ಒಂದು ಹುಡುಗೀಯ ಮಾನಭಂಗ ಮಾಡಕ್ಕೆ ಹೋದ್ನಂತೆ. ಕಂಪ್ಲೈಂಟ್ ಬಂತು ಅದಕ್ಕೇ..’

‘ಸ್ಟೇಟ್‌ಮೆಂಟ್ ಎಲ್ಲಿ ತೋರಿಸಿ.’

‘ಹುಡುಗಿ ಕಡೇವ್ರು ಬಂದು ಕೇಸ್ ಮಾಡೋದು ಬೇಡ, ಗುಲ್ಲಾಗುತ್ತೆ, ನಾಲ್ಕು ಬಾರಿಸಿ ಬುದ್ಧಿ ಕಲಿಸಿ ಅಟ್ಟಿ ಅಂದ್ರು ಸಾರ್.’ ದಫೇದಾರ ಹೆದರಿಕೊಂಡು ಹೇಳಿದ.

ಜಗನ್ನಾಥನಿಗೆ ಸಿಟ್ಟು ಬಂತು.

‘ಈ ಥರಾ ಮಾಡೋದು ಕಾನೂನಿಗೆ ವಿರುದ್ಧವಾದ್ದು ದಫೇದಾರ್. ನಾನು ಡಿ.ಎಸ್.ಪಿ.ಗೆ ನಿಮ್ಮ ವಿರುದ್ಧ ಕಂಪ್ಲೈಂಟ್ ಮಾಡಿದ್ರೆ ಏನಾಗಬಹುದು ಗೊತ್ತ? ಎಲ್ಲಿ ಪಿಳ್ಳ? ಆ ಹುಡುಗಿ ಕಡೇವ್ರು ಎಲ್ಲಿದ್ದಾರೆ?’

‘ಅವರೂ ನಿಮ್ಮ ಆಳುಗಳೇ ಸಾರ್. ಶೀನಪ್ಪ ಅಂತ ಸೆಟ್ಟರ ಪೈಕಿ ಒಬ್ಬ ಇಲ್ಲ – ಅವನೆ, ಒಡೇರು ಊರಲ್ಲಿಲ್ಲ – ಇದ್ದಿದ್ರೆ ಅವರೇ ಕಂಪ್ಲೈಂಟ್ ಮಾಡ್ತಿದ್ರು ಅಂತ ಶೀನಪ್ಪ ಬಂದು ಹೇಳಿದ ಸಾರ್.’

‘ಪಿಳ್ಳ ಎಲ್ಲಿ? ಮೊದಲು ಅವನ್ನ ತೋರಿಸಿ.’

‘ಹಾಗಾದ್ರೆ ಕೇಸ್ ದಾಖಲೆ ಮಾಡಿಕೊಂಡು ಬಿಡ್ತೀವಿ ಸಾರ್.’

ದಫೇದಾರ ಪಿಳ್ಳನನ್ನು ಹೊರಗೆ ಬಿಡಲು ಸುಲಭವಾಗಿ ತಯಾರಿಲ್ಲವೆಂದು ಜಗನ್ನಾಥನಿಗೆ ಅನ್ನಿಸಿತು. ಸ್ವಲ್ಪ ಜೋರಾಗಿ

ಗದರಿಸಿದ:

‘ನೋಡಿ, ಕಾನೂನಿನ ಪ್ರಕಾರ ನೀವು ನಡಕೊಂಡಿಲ್ಲಾಂತ ನಾನು ಗಲಾಟೆ ಮಾಡಬೇಕಾಗುತ್ತೆ. ಮೊದಲು ಪಿಳ್ಳನ್ನ ನನಗೆ ತೋರಿಸಿ.’

‘ದೊಡ್ಡೋವ್ರ ಮಾತು ನಾನು ತೆಗೆದು ಹಾಕಲ್ಲ ಸಾರ್. ಆದ್ರೆ ಈ ಮಾದಿಗ ಸೂಳೇ ಮಕ್ಕಳು -’

‘ರೀ, ದಫೇದಾರ್, ಎಲ್ಲಿ ಪಿಳ್ಳ ಹೇಳಿ ?’

ಜಗನ್ನಾಥ ನಡುಗುತ್ತ ಎದ್ದು ನಿಂತ. ದಫೇದಾರ ಬೀಗದಕ್ಕೆ ಗೊಂಚಲನ್ನು ಹಿಡಿದು ಹೊರಟ. ಲಾಕಪ್ಪಿನ ಬೀಗ ತೆಗೆದು ದಫೇದಾರ ಮಾತಾಡದೇ ನಿಂತ. ಜಗನ್ನಾಥ ಟಾರ್ಚ್‌ಬಿಟ್ಟು ನೋಡಿದ. ಮೂಲೆಯಲ್ಲಿ ಪಿಳ್ಳ ಮುದುಕಿ ಕೂತಿದ್ದ. ಅವನಿಗೆ ಮೈ ಪರಿವೆ ಇದ್ದಂತೆ ಕಾಣಿಸಲಿಲ್ಲ. ‘ಪಿಳ್ಳ’ ಎಂದು ಕೂಗಿದ ಮೇಲೆ ಅವನು ಯಾತನೆಯಿಂದ ವಿಕಾರವಾಗಿದ್ದ ಮುಖವನ್ನೆತ್ತಿದ. ಕಣ್ಣುಗಳು ಬಾತಿದ್ದುವು. ಮೂಗು ತುಟಿಗಳಿಂದ ರಕ್ತ ಹರಿದಿತ್ತು. ಅವನ ಕಣ್ಣಿನಲ್ಲಿ ತನ್ನನ್ನು ಗುರುತಿಸಬಲ್ಲ ದೃಷ್ಟಿಯಿದ್ದಂತೆ ಕಾಣಿಸಲಿಲ್ಲ. ಜಗನ್ನಾಥ ಹತ್ತಿರ ಹೋಗಿ ಟಾರ್ಚ್‌ಹಾಕಿ ನೋಡಿದ. ಅವನು ತಂದುಕೊಟ್ಟ ಬಿಳಿ ಬಟ್ಟೆಯ ಮೇಲೆಲ್ಲ ರಕ್ತದ ಗುರುತುಗಳಿದ್ದುವು. ಅಂಗಿಯ ತೋಳು ಕಾಲರು ಹರಿದಿದ್ದುವು.

‘ನೀವೇನು ಮನುಷ್ಯರೋ ಮೃಗಗಳೋ ?’

‘ಮುಖದ ಮೇಲೆ ಹೊಡೆದದ್ದು ಶೀನಪ್ಪ ಕಡೇವ್ರೆ ಸಾರ್. ಬಾಯಿ ಬಿಡಿಸೋಕೇಂತ ನಾನು ನಾಲ್ಕು ಏಟು ಹೊಡೆದದ್ದು ನಿಜ. ಇಲ್ದೆ ಇದ್ರೆ ನಾಲಗೆ ಬಿಚ್ಚಲ್ಲ ಸಾರ್.’

ಜಗನ್ನಾಥನಿಗೆ ವಿಪರೀತ ಸುಸ್ತೆನ್ನಿಸಿತ್ತು. ದಫೇದಾರನಿಗೆ ಪಿಳ್ಳ ಒಬ್ಬ ಮನುಷ್ಯ ಎಂದು ಅನ್ನಿಸುತ್ತಲೇ ಇಲ್ಲ. ಅನಾಮತ್ತಾಗಿ ವ್ಯಕ್ತವಾಗುವ ಈ ಕ್ರೌರ್ಯದ ಹಿಂದೆ ಶತಮಾನಗಳ ಮೌಢ್ಯವಿತ್ತು. ಕುಲೀನ ಹುಡುಗಿಯನ್ನು ಹೊಲೆಯ ಬಯಸಿದ್ದ. ಆದರೆ ಯಾರು ಬೇಕಾದರೂ ಮಾಡಿರಬಹುದಾಗಿದ್ದ ಈ ತಪ್ಪು ಹೊಲೆಯನಲ್ಲಿ ಘೋರ ಪಾತಕವಾಗಿ ಕಂಡಿತ್ತು. ಹೀಗೆನ್ನಿಸುವುದು ಎಷ್ಟು ಸಹಜವೆಂದು ಜಗನ್ನಾಥನಿಗೆ ತಿಳಿದಿದ್ದರಿಂದ, ದಫೇದಾರನ ಮೇಲೆ ರೇಗುವುದು ನಿಷ್ಪ್ರಯೋಜಕವೆನ್ನಿಸಿ ತನ್ನ ಯಾತನೆಯನ್ನೆಲ್ಲ ನುಂಗಿಕೊಂಡು, ‘ಪಿಳ್ಳ, ಎದ್ದೇಳು. ಬಾ’ ಎಂದ.

ಗಟ್ಟಿಮುಟ್ಟಾದ ಯುವಕ ಪಿಳ್ಳ ದಿಗಿಲಿನಿಂದ ಪಶುವಿನ ಹಾಗೆ ಮೂಲೆಯಲ್ಲಿ ಬಿದ್ದಿದ್ದ. ಜಗನ್ನಾಥನಿಗೆ ಅವನ ಬಿಳಿ ಬಟ್ಟೆಯ ಮೇಲಿನ ರಕ್ತವನ್ನು ನೋಡುತ್ತಿದ್ದಂತೆ ಹೊಟ್ಟೆ ತೊಳಸಿಬಂದಂತಾಯಿತು. ದಫೇದಾರ, ‘ಏಳು’ ಎಂದು ಗದರಿಸಿದ್ದು ಕೇಳಿ ಪಿಳ್ಳ ಭಯಗ್ರಸ್ತ ಹುಳುವಿನಂತೆ ಇನ್ನಷ್ಟು ಮುದುಡಿಕೊಂಡ. ‘ದಪೇದಾರ್ ನೀವು ಸುಮ್ಮನಿರಿ’ ಎಂದು ಜಗನ್ನಾಥ ಪಿಳ್ಳನ ಬಳಿಗೆ ಹೋಗಿ ಅವನನ್ನು ಎತ್ತಲು ಕೈಯೊಡ್ಡಿದ.

‘ಅವನನ್ನು ನೀವ್ಯಾಕೆ ಮುಟ್ತೀರಿ ಸಾರ್. ಅವನಿಗೇನೂ ಧಾಡಿ ಬಡ್ಡಿಲ್ಲ. ಎದ್ದು ನಿಲ್ತಾನೆ’ ಎಂದು ದಫೇದಾರ ಮತ್ತೆ ರೋಪಿನಲ್ಲಿ ಮಾತಾಡಿದ. ಜಗನ್ನಾಥ ಅದನ್ನು ಗಮನಿಸದೆ ಪಿಳ್ಳನ ರಟ್ಟೆಯನ್ನು ಮೃದುವಾಗಿ ಹಿಡಿದ. ಜಗನ್ನಾಥ ತನ್ನನ್ನು ಮುಟ್ಟಿದೊಡನೆ ಪಿಳ್ಳ ಭಯದಿಂದ ಕುಸಿಯುವಂತೆ ಕಂಡಿತು. ‘ಹೆದರಬೇಡ ಪಿಳ್ಳ. ನನ್ನ ಜೊತೆ ಬಾ’ ಎಂದು ಜಗನ್ನಾಥ ಪಿಳ್ಳನ ಭಯವನ್ನು ಲೆಖ್ಖಕ್ಕೆ ತೆಗೆದುಕೊಳ್ಳದೆ ಅವನನ್ನು ಲಾಕಪ್ಪಿನಿಂದ ಹೊರಗೆ ಮೆತ್ತಗೆ ನಡೆಸಿಕೊಂಡು ಹೋಗಿ ಕಾರಿನಲ್ಲಿ ಕೂರಿಸಿದ. ದಫೇದಾರ ತನ್ನ ಕಣ್ಣನ್ನೆ ನಂಬದವನಂತೆ ನೋಡುತ್ತ ನಿಂತಿದ್ದನ್ನು ಗಮನಿಸಿದ ಜಗನ್ನಾಥ ‘ನಾಳೆ ಬೇಕಾದ್ರೆ ಇನ್‌ಸ್ಪೆಕ್ಟರಿಗೆ ನಾನೇ ಹೇಳ್ತೇನೆ’ ಎಂದು ಡ್ರೈವ್ ಮಾಡಿಕೊಂಡು ಹೊರಟ.

ಪಿಳ್ಳ ಜಗುಲಿ ಹತ್ತಲೊಲ್ಲ. ಒತ್ತಾಯ ಮಾಡಿ ಜಗಲಿ ಹತ್ತಿಸಿದ ಮೇಲೆ ನಡುಮನೆಯೊಳಗೆ ಬರಲೊಲ್ಲ. ಜಗನ್ನಾಥ ಆಳನ್ನು ಎಬ್ಬಿಸಿ ಗ್ಯಾಸ್‌ಲೈಟ್ ಹತ್ತಿಸಿದ. ಒಳಗೆ ಹೋಗಿ ಟಿಂಕ್ಚರ್, ಹತ್ತಿ, ಡೆಟ್ಟಾಲ್ ತಂದು ಪಿಳ್ಳನ ಬಟ್ಟೆಯನ್ನು ಬಿಚ್ಚಿದ. ಜಗನ್ನಾಥನ ಶುಶ್ರೂಷೆಯಿಂದಾಗಿ ಪಿಳ್ಳ ನರಳಿದ. ಪಿಳ್ಳನ ಕಪ್ಪು ದೇಹವಿಡೀ ಬಾಸುಂಡೆಗಳಿದ್ದುವು. ಗಾಯಗಳನ್ನು ತೊಳೆದು ಟಿಂಕ್ಚರ್ ಹಚ್ಚಿ ಅವನನ್ನು ಚಾಪೆಯ ಮೇಲೆ ಮಲಗಿಸಿದ. ಒಳಗಿನಿಂದ ಬ್ರಾಂಡಿಯನ್ನು ತಂದು ಅವನಿಗೆ ಸ್ವಲ್ಪ ಕುಡಿಸಿದ ಮೇಲೆ ಪಿಳ್ಳ ಚೇತರಿಸಿಕೊಳ್ಳುತ್ತಿದ್ದಂತೆ ಕಂಡಿತು.

ಬೆತ್ತಲೆಯಾಗಿದ್ದ ಪಿಳ್ಳ ಚಳಿಯಲ್ಲಿ ನಡುಗುತ್ತಿದ್ದ. ಜಗನ್ನಾಥ ತನ್ನದೊಂದು ಅಂಗಿ ಪಂಚೆಯನ್ನು ತಂದು ಅವನಿಗೆ ಉಡಿಸಿ ಹೊದ್ದುಕೊಳ್ಳಲು ಕಂಬಳಿ ಕೊಟ್ಟ. ಪಿಳ್ಳನ ಮುಖ ಗಾಬರಿಯಿಂದ ವಿಕಾರವಾಗಿತ್ತು, ಜಗನ್ನಾಥ ಮೆತ್ತಗೆ ಕೇಳಿದ :

‘ಸಯಂಕಾಲ ತುಂಬ ಕುಡ್ಡಿದ್ಯ?’

ಪಿಳ್ಳ ಹೌದೆಂದು ತಲೆ ಹಾಕಿದ. ಕಷ್ಟಪಟ್ಟು ಎದ್ದು ಕೂತ.

‘ನೀನು ಮಾಡಿದ್ದು ನಿಜವೆ?’

ಪಿಳ್ಳ ಕೂತಲ್ಲಿಂದಲೆ ಜಗನ್ನಾಥನ ಕಾಲಿಗೆ ಬಿದ್ದ. ಜಗನ್ನಾಥ ‘ಛೆ. ಎದ್ದೇಳು’ ಎಂದು ಹೇಳಿದ.

‘ಯಾರು ಕಾವೇರಿಯ?’

ಪಿಳ್ಳನ ಮೌನ ಹೌದೆಂದಿತು.

‘ಆಸೆ ಹುಟ್ಟಿದ್ದು ತಪ್ಪಲ್ಲ ಪಿಳ್ಳ, ನೀನು ಹೊಲೆಯ ಆದ್ದರಿಂದ ದೊಡ್ಡ ಪಾತಕವಾಗಿ ಕಾಣತ್ತೆ ಉಳಿದವರಿಗೆ. ಇಷ್ಟಪಡದ ಹುಡುಗೀನ್ನ ಬಲಾತ್ಕರಿಸಬಾರದು -ಅಷ್ಟೆ. ಏನಾಯ್ತು ನನ್ನ ಹತ್ರ ಹೇಳು.’

ಜಗನ್ನಾಥನಿಗೆ ಆಶ್ಚರ್ಯವಾಗುವಂತೆ ಇಡೀ ತಮ್ಮ ನಡುವಿನ ವಾತಾವರಣ ಪ್ರಥಮ ಬಾರಿಗೆ ತಿಳಿಯಾಗಿತ್ತು. ಪಿಳ್ಳ ತೊದಲುತ್ತ ಮಾತಾಡಿದ್ದ; ಅವನು ನಿಜವಾಗಿ ಆಡಿದ್ದ ಮೊದಲನೇ ಮಾತುಗಳು ಅವು. ಗ್ಯಾಸ್‌ಲೈಟ್ ಬೆಳಕಿನಲ್ಲಿ ಚಾವಡಿಯ ಮೇಲೆ ಹೀಗೆ ಎದುರುಬದರಾಗಿ ಕೂತು ಮಾತಾಡಿದ್ದು ಜಗನ್ನಾಥನಿಗೆ ಸದಾ ನೆನಪಿನಲ್ಲಿ ಉಳಿಯುವ ಘಟನೆಯಾಯಿತು.

ಪಿಳ್ಳ ಬಲಾತ್ಕಾರ ಮಾಡಿರಲಿಲ್ಲ. ಕುಡಿದಿದ್ದ. ಏನೋ ಹಾಡಿಕೊಳ್ಳುತ್ತ ಒಬ್ಬನೇ ಬರುತ್ತಿದ್ದ. ತಾನು ಉಟ್ಟಿದ್ದ ಬಿಳಿ ಬಟ್ಟೆ ನೋಡಿ ಹೆಂಡದಂಗಡಿಯಲ್ಲಿ ಎಲ್ಲರೂ ಹಾಸ್ಯ ಮಾಡಿದ್ದರು. ಸಿಟ್ಟು ಬಂದಿತ್ತು. ಖುಷಿಯೂ ಆಗಿತ್ತು. ಹೀಗೇ ಬರ್ತಾ ಇದ್ದಾಗ ಕತ್ತಲಾಗೋ ಹೊತ್ತಿಗೆ ಮೊಟ್ಟಿನ ಸಂದಿ ಏನೋ ಕಂಡ ಹಾಗೆ ಆಯ್ತು. ಹತ್ತಿರ ಹೋಗಿ ನೋಡಿದಾಗ ಜನಾರ್ಧನ ಸೆಟ್ಟಿ ಕಾವೇರಿಯ ಬಟ್ಟೆಯನ್ನೆಲ್ಲ ಬಿಚ್ಚುತ್ತಿದ್ದ. ಅವರಿಗೆ ತಾನು ನಿಂತದ್ದು ಕಾಣಿಸಲಿಲ್ಲ. ಹೀಗೇ ನೋಡುತ್ತಿದ್ಂತೆ ತನಗೇನಾಯಿತೋ ತಿಳಿಯದು. ಬೆತ್ತಲೆಯಾದ ಕಾವೇರಿಯಿದ್ದಲ್ಲಿಗೆ ಸೀದಾ ತಾನು ನಡೆದುಬಿಟ್ಟಿದ್ದೆ. ಕೈಯನ್ನೊಡ್ಡಿ ಪಿಳ್ಳ ನಡೆದುಬರುತ್ತಿರುವುದನ್ನು ಕಂಡು ಸೆಟ್ಟಿ ಓಡಿದ. ಕಾವೇರಿ ಮೈ ಮುಚ್ಚಿಕೊಂಡಳು. ತಾನು ಹಾಗೇ ನಿಂತಿದ್ದ. ಇದ್ದಕ್ಕಿದ್ದಂತೆ ಹಿಂದಿನಿಂದ ಜನಾರ್ದನ ಸೆಟ್ಟಿ ಬಂದು ತಲೆಯ ಮೇಲೆ ಹೊಡೆದ. ಧ್ಯಾಸ ತಪ್ಪಿತು, ಎಚ್ಚರಾದ ಮೇಲೆ ಅಲ್ಲಿ ಯಾರೂ ಇರಲಿಲ್ಲ. ಪಿಳ್ಳ ಎದ್ದು ಮನೆಗೆ ಹೋದ. ಯಾರಿಗೆ ಏನೂ ಹೇಳಲಿಲ್ಲ. ಕುಡಿದು ಜಗಳಾಡಿ ಬಂದಿದ್ದಾನೆ ಎಂದು ಅಪ್ಪ ಅವ್ವ ತಿಳಿದಿರಬೇಕು. ಸ್ವಲ್ಪ ಹೊತ್ತಾದ ಮೇಲೆ ಪೊಲೀಸಿನವನೊಬ್ಬ ರಾತ್ರೆ ಬಂದು ಎಳೆದುಕೊಂಡು ಹೋಗಿ ಮೈಮುರಿಯುವ ಹಾಗೆ ಹೊಡೆದು ಲಾಕಪ್ಪಿಗೆ ಹಾಕಿದ.

ತಾನು ಬಯಸಿದ ಹೆಣ್ಣಿನ ಬಗ್ಗೆ ಪಿಳ್ಳನಿಗೂ ಆಸೆ ಹುಟ್ಟಿತೆಂಬುದು ಜಗನ್ನಾಥನಿಗೆ ವಿಚಿತ್ರವಾದ ಅನುಭವವನ್ನು ತಂದಿತು. ಗ್ಯಾಸ್‌ಲೈಟ್ ಬೆಳಕಿನಲ್ಲಿ ಕೂತು ಕಪ್ಪು ಬಲಿಷ್ಠ ದೇಹ ತನ್ನದರ ಹಾಗೇ ವಾಸನಾಯುಕ್ತವಾದ್ದು, ಜೀವಂತವಾದ್ದು. ಈಗ ತಾನು ಅವನನ್ನು ನಿಜವಾಗಿ ಮುಟ್ಟಬಹುದೆನ್ನಿಸಿತು.

‘ಪಿಳ್ಳ, ಹೆದರದೇ ನೀವೆಲ್ಲ ನನ್ನ ಜೊತೆ ದೇವಸ್ಥಾನದೊಳಗೆ ಬರಬೇಕು ಗೊತ್ತಾಯ್ತ?’ ಕಂಪಿಸುವ ಸ್ವರದಲ್ಲಿ ಜಗನ್ನಾಥ ಕೇಳಿದ. ಪಿಳ್ಳನ ಮುಖದಲ್ಲಿ ಸ್ನೇಹ ಭಾವ ಕಾಣಿಸಿದಂತಾಗಿ ಖುಷಿಯಾಯಿತು. ಇನ್ನು ಮುಂದೆ ನಿಜವಾಗಿ ಮಾತಿಗೆ ಪ್ರಾರಂಭಿಸಬಹುದು ಎನ್ನಿಸಿತು.

‘ಇಲ್ಲೇ ಮಲಗ್ತೀಯೊ? ಗುಡಿಸ್ಲಿಗೆ ಹೋಗ್ತೀಯೊ?’

‘ಹೋಗ್ತೀನಿ ಒಡೇರೆ.’ ಪಿಳ್ಳ ಕಷ್ಟಪಟ್ಟು ಎದ್ದು ನಿಂತ.

‘ಅಷ್ಟು ದೂರ ನಾನೂ ನಿನ್ನ ಜೊತೆ ಬರ್ತೀನಿ’ ಎಂದು ಟಾರ್ಚ್‌ಹಿಡಿದು ಜಗನ್ನಾಥ ಹೊರಟ. ಕಷ್ಟಪಟ್ಟು ನಡೆಯುತ್ತಿದ್ದ ಪಿಳ್ಳನ ಕೈ ಹಿಡಿದುಕೊಂಡ.

‘ಮುಟ್ಟಬೇಡಿ ಒಡೇರೆ.’ ಪಿಳ್ಳ ಹೀಗೆ ಸ್ಪಷ್ಟವಾಗಿ ಹೇಳಿದನೆಂದು ಜಗನ್ನಾಥನಿಗೆ ಸಂತೋಷವಾಯಿತು.

‘ಕತ್ತೆ. ಮುಟ್ಟಿದ್ರೆ ಏನಾಗುತ್ತೊ?’ ಜಗನ್ನಾಥ ತಮಾಷೆ ಮಾಡಿದ.

ಹೊಲೆಯರ ಗುಡಿಗಳವರೆಗೆ ಜಗನ್ನಾಥ ನಡೆದ. ಒಳಗೆ ಹೋಗಬೇಕೆನ್ನಿಸಿತು. ಆದರೆ ಬ್ರಾಹ್ಮಣರು ತಮ್ಮ ಗುಡಿಗಳೊಳಗೆ ಬರುವುದರಿಂದ ತಮಗೆ ಕೇಡಾಗುತ್ತದೆಂದು ಹೊಲೆಯರು ನಂಬುವುದರಿಂದ ಅವರು ಕರೆಯದೇ ತಾನು ಹೋಗುವುದು ಸರಿಯಲ್ಲವೆನ್ನಿಇತು. ಹೊರಗೇ ನಿಂತು,

‘ಹೆದರಬೇಡ ಪಿಳ್ಳ. ನಾಳೆ ನನ್ನ ಬಂದು ನೀವೆಲ್ಲ ನೋಡಿ’ ಎಂದು ಮನೆಗೆ ಹಿಂದಕ್ಕೆ ಬಂದು ಮಲಗಿದ. ಚಿಕ್ಕಿ ಇನ್ನೂ ಎದ್ದೇ ಇದ್ದರು. ಆದರೆ ಜಗನ್ನಾಥನನ್ನೂ ಏನೂ ಕೇಳಲಿಲ್ಲ.

ಪಿಳ್ಳನಿಗೆ ತಾನು ಶಾಲಿಗ್ರಾಮ ಒಡ್ಡಿದೆ; ತನ್ನಲ್ಲಿ ಆಸೆ ಹುಟ್ಟಿಸಿದ ಕಾವೇರಿಯ ದೇಹಕ್ಕಾಗಿ ಪಿಳ್ಳ ಕೈಯೊಡ್ಡಿದ. ಹೀಗೆ ಪಿಳ್ಳನ ಒಳಗೆ ಎಚ್ಚೆತ್ತದ್ದನ್ನು ಗ್ರಹಿಸಲು, ಗ್ರಹಿಸಿ ಒಪ್ಪಿಕೊಳ್ಳಲು ಯತ್ನಿಸುತ್ತಿದ್ದಾಗ ತಾನು ಅಡಿಗರ ದುಡ್ಡು ಕದ್ದಿದ್ದು, ಶೀನಪ್ಪ ತೋಟದಲ್ಲಿ ಕದಿಯುತ್ತಿದ್ದುದನ್ನು ತಾನು ಪರವಶನಾಗಿ ನೋಡಿದ್ದು – ಎಲ್ಲ ನೆನಪಾಗಿ ತನ್ನ ಸ್ವಭಾವದಲ್ಲಿರುವ ಇದಕ್ಕೆಲ್ಲ ಏನು ಅರ್ಥ ತಿಳಿಯದಂತಾಯಿತು. ಸುಸ್ತಾಗಿ ನಿದ್ದೆ ಹೋದ.

ಮಾರನೇ ಬೆಳಿಗ್ಗೆ ಕಾವೇರಿ ಮನೆಗೆಲಸಕ್ಕೆ ಬರಲಿಲ್ಲ. ಸೆಟ್ಟಿ ಮುಖ ತೋರಿಸಲಿಲ್ಲ. ಶಾನುಭೋಗ ಶಾಸ್ತ್ರಿಗಳು ಬಹಳ ವಿನಯದಿಂದ ಎದುರು ನಿಂತು ನಡೆದದ್ದೆಲ್ಲ ತನಗೆ ಗೊತ್ತಿಲ್ಲವೆನ್ನುವಂತೆ ನಟಿಸುತ್ತ, ‘ಇನ್ನು ಮುಂದೆ ಸೆಟ್ಟಿ ಕಡೆ ಆಳುಗಳು ಕೆಲಸಕ್ಕೆ ಬರಲ್ಲ ಅಂತಿದಾರೆ. ಏನು ಮಾಡೋದು?’ ಎಂದರು. ‘ಕನ್ನಡಾ ಜಿಲ್ಲೆಗೆ ಹೋಗಿ ಬೇರೆ ಆಳುಗಳನ್ನು ತರಿಸಿದರಾಯಿತು’ ಎಂದು ಜಗನ್ನಾಥ ಹೇಳಿ ರಾಯರ ಮಗ ರಂಗಣ್ಣನಿಗೆ ‘ಅಪ್ಪ ಮನೇಲೇ ಇದ್ರ?’ ಎಂದು ಕೇಳಿದ. ‘ಟಪಾಲು ತಗೊಂಡು ಬರ್ತೀನಿಂತ ಹೇಳಿದ್ರು’ ಎಂದು ರಂಗಣ್ಣ ಖಾತೆ ಪುಸ್ತಕದಲ್ಲಿ ಏನೋ ಬರೆಯುತ್ತ ಕೂತ.

ಜಗನ್ನಾಥ ಅಫೀಸಿನಿಂದ ಹೊರಗೆ ಬಂದು ಅಡ್ಡಾಡಿದ. ದೂರದಿಂದ ರಾಯರು ಬರುತ್ತಿರುವುದು ಕಂಡು ಅವನಿಗೆ ಖುಷಿಯಾಯಿತು. ಅಂಗಳದಲ್ಲೆಲ್ಲ ಅವರಿಗಾಗಿ ಕಾದುನಿಂತ. ವೇಗವಾಗಿ ನಡೆದುಬಂದ ರಾಯರು ಗಾಬರಿಯಾಗಿದ್ದಂತೆ ಕಂಡರು. ಶಾಲಿಗ್ರಾಮವನ್ನು ಹೊಲೆಯರಿಗೆ ಮುಟ್ಟಿಸಿದ್ದನ್ನು ಪೂಜೆಯ ಭಟ್ಟರು ಮತ್ತು ಅಡಿಗೆಯವರು ಊರೆಲ್ಲ ಪ್ರಚಾರ ಮಾಡಿದ್ದರು. ಜನರು ಮಾತಾಡಿಕೊಳ್ಳುತ್ತಿದ್ದುದನ್ನು ಕೇಳಿ ರಾಯರು ನಿನ್ನೆ ಮನೆಗೆ ಬಂದಿದ್ದರು, ಇದ್ದಕ್ಕಿದ್ದಂತೆ ಜಗನ್ನಾಥ ಬೆಂಗಳೂರಿಗೆ ಹೋಗಿದ್ದಾನೆಂದು ತಿಳಿದು ಗಾಬರಿಯಾಗಿದ್ದರು.

ಜಗನ್ನಾಥ ರಾಯರನ್ನು ಮಹಡಿಯ ಮೇಲೆ ಕರೆದುಕೊಂಡು ಹೋಗಿ ಗುಟ್ಟಾಗಿ ಪಿಳ್ಳನಿಗೆ ಪೋಲೀಸರು ಹೊಡೆದದ್ದನ್ನು ಹೇಳಿದ. ಅದೂ ತನ್ನ ಕಿವಿಯ ಮೇಲೆ ಬಿದ್ದಿದೆಯೆಂದು ರಾಯರು ಹೇಳಿ, ಇದು ಹಿಂಸಾಚಾರಕ್ಕೆ ದಾರಿ ಮಾಡಿಕೊಡಬಹುದೆಂದು ಆತಂಕಿಸಿದರು. ನನ್ನ ನಿಶ್ಚಯ ತೀರಾ ಅಪಕ್ವವಾದ್ದು ಎನ್ನಿಸಿದ ಕ್ಷಣ ನಾನು ಹಿಂದೆಗೆಯುತ್ತೇನೆ

ರಾಯರೇ ಎಂದದ್ದಕ್ಕೆ ಇಷ್ಟಾದ ಮೇಲೆ ನೀನು ಹಿಂದಿರುಗೋದು ಸಹ ಸಾಧ್ಯವಿಲ್ಲ ಜಗಣ್ಣ ಎಂದು ನಿಟ್ಟುಸಿರಿಟ್ಟರು. ಕಾವೇರಿಯನ್ನು ಪಿಳ್ಳ ಬಯಸಿದ್ದರಿಂದ ತನಗೆ ಸಂತೋಷವೇ ಆಗಿದೆಯೆಂಬುದನ್ನು ಹೇಳಿದರೆ ರಾಯರಿಗೆ ಅರ್ಥವಾಗಲಿಕ್ಕಿಲ್ಲವೆಂದು ಜಗನ್ನಾಥ ಸುಮ್ಮನಾದ.

'ಇವತ್ತು ಪೇಪರಿನಲ್ಲಿ ಏನಿದೆ?'

'ಏನಿಲ್ಲ. ಯಥಾಪ್ರಕಾರ ಒಂದಿಷ್ಟು ವಾಚಕರ ಪತ್ರಗಳಿವೆ. ಮೈಸೂರು ಸೋಷಲಿಸ್ಟ್ ಪಕ್ಷದ ನೀಲಕಂಠಸ್ವಾಮಿ ಮತ್ತು ರಂಗರಾವ್ ಭಾರತೀಪುರಕ್ಕೆ ಚಳುವಳಿಯಲ್ಲಿ ಭಾಗವಹಿಸಲು ಹೊರಟಿದ್ದಾರೆಂಬ ಸುದ್ದಿಯಿದೆ. ಮಾಗಡಿ ಅನಂತಕೃಷ್ಣ ಸರ್ವೋದಯ ಕಾರ್ಯಕರ್ತರ ಪರವಾಗಿ ತಾನೂ ಬರುತ್ತಿದ್ದೇನೆಂದು ನನಗೆ ಬರೆದಿದ್ದಾನೆ – ಅಷ್ಟೆ.'

'ರಾಯರೆ, ಚಿಕ್ಕಿ ನನ್ನ ಹತ್ರ ಮಾತಾಡ್ತಾನೇ ಇಲ್ಲ. ತುಂಬ ಹೆದರಿಬಿಟ್ಟಿದ್ದಾರೆ ಅನ್ನಿಸತ್ತೆ. ಅಡಿಗೆ ಮಾಡಲಿಕ್ಕೆ ಜನ ಇಲ್ಲ. ಸ್ವಲ್ಪ ಅವ್ರಿಗೆ ಧೈರ್ಯ ಹೇಳ್ತೀರ?'

'ಆಗಲಿ ಜಗಣ್ಣ. ನಾನ್ಯಾಕೆ ಇಲ್ಲಿಗೆ ಅರ್ಜೆಂಟಾಗಿ ಬಂದದ್ದು ಅಂದ್ರೆ – ನೀನು ಕೂಡ್ಲೆ ಒಂದು ಕೆಲಸ ಮಾಡಬೇಕು. ಶಿವಮೊಗ್ಗದಲ್ಲಿ ಹರಿಜನ ಡಿ.ಸಿ. ಸತ್ಯಪ್ರಕಾಶ್ ಇದಾನೆ. ಅವನಿಗೊಂದು ಮಾತು ನೀನು ಹೇಳಬೇಕು; ಜಾತ್ರೆ ಹೊತ್ತಿಗೆ ಹಿಂಸಾಚಾರವಾಗದಂತೆ ಪೊಲೀಸ್ ದಳಾನ್ನ ಕಳುಹಿಸಬೇಕು ಅಂತ. ಆಂಧ್ರದಲ್ಲಿ ಹೊಲೆಯರನ್ನ ಸುಟ್ಟುಹಾಕಿದ ವರದಿಗಳನ್ನ ನೀನು ಓದಿರಬಹುದು. ಈ ಊರಲ್ಲೂ ಹಾಗೆಲ್ಲ ಆಗಲ್ಲಾಂತ ಹೇಳಕ್ಕೆ ಆಗಲ್ಲ.'

ಜಗನ್ನಾಥನಿಗೆ ರಾಯರು ಹೇಳಿದ್ದು ಸರಿಯೆನ್ನಿಸಿತು.

'ಈಗಲೇ ಹಾಗಾದ್ರೆ ಶಿಮೊಗ್ಗಕ್ಕೆ ಹೋಗ್ತೀನಿ. ಸಾಯಂಕಾಲದೊಳಗೆ ಬರ್ತೀನಿ. ನೀವು ಸ್ವಲ್ಪ ಚಿಕ್ಕಿ ಜೊತೆಗಿದ್ದು ಅವರಿಗೆ ಧೈರ್ಯ ಹೇಳಿ.'

ಎಂದು ಜಗನ್ನಾಥ ಶುಭ್ರವಾದ ಅಂಗಿ ಪಂಚೆ ತೊಟ್ಟು ಹೊರಟುಬಿಟ್ಟ.

ದಾರಿಯಲ್ಲಿ ವಾಸು ಕೈಯೊಡ್ಡಿ ಕಾರು ನಿಲ್ಲಿಸಿದ. ಅವನ ಜೊತೆ ಪ್ರಭು ಮತ್ತು ನಾಗರಾಜ ಜೋಯಿಸರಿದ್ದರು. ಜಗನ್ನಾಥನಿಗೆ ಏಕಾಂತದ ಆವಶ್ಯಕತೆಯಿತ್ತು. ಆದರೆ ವಾಸು 'ಶಿಮೊಗ್ಗಕ್ಕೆ ಹೋಗ್ತಿದೀಯ? ಹಾಗಾದರೆ ನಾವೂ ಬರ್ತೇವೆ' ಎಂದಾಗ ದಾಕ್ಷಿಣ್ಯದಲ್ಲಿ ಕಾರಲ್ಲಿ ಕೂರಿಸಿಕೊಂಡ. ವಾಸು ಹರಟಲು ಪ್ರಾರಂಭಿಸಿದ. ಶಿಮೊಗ್ಗದಲ್ಲಿ ಸಿಹಿ ತಿಂಡಿ ತಯಾರಿಸಬಲ್ಲ ಉತ್ತರ ದೇಶದವನೊಬ್ಬನಿದ್ದಾನೆ; ಅವನನ್ನು ಕರ್ಕೊಂಡು ಬರಬೇಕು. ಜಾತ್ರೆ ಹೊತ್ತಿಗೆ ಅಂಗಡಿ ಸಿದ್ಧವಾಗಬೇಕು. ಇಷ್ಟೆಲ್ಲ ಯಾಕೆ ಮೈಮೇಲೆ ಹಾಕ್ಕೊಂಡಿದಿ ಜಗಣ್ಣ ನಿನಗಿದು ಬೇಡಿತ್ತು – ಇತ್ಯಾದಿ.

ಜಗನ್ನಾಥ ಉತ್ತರ ಕೊಡದೆ ಡ್ರೈವ್ ಮಾಡಿದ. ಜೋಯಿಸರು ವಾಸುಗೆ ಹೇಳಿದರು. 'ಜಗನ್ನಾಥರಾಯರು ಮಾಡುತ್ತಿರೋದು ಸರಿಯೋ ತಪ್ಪೋ ಅನ್ನೋ ಪ್ರಶ್ನೆಗಿಂತ ಮುಖ್ಯವಾಗಿ ಇನ್ನೊಂದು ಪ್ರಶ್ನೆಯಿದೆ. ಉಪನಿಷತ್ತು ಹೇಳತ್ತೆ : ಒಬ್ಬ ಋಷಿಗೆ ಎಲ್ಲವುದೂ ಕಾಣಿಸೋದು ಸಾಧ್ಯವಾಗಿದ್ದ ಪಕ್ಷದಲ್ಲಿ ಅವನು ಹೇಳಿದ್ದೇ ಪ್ರಮಾಣವಾಗುತ್ತಿತ್ತಲ್ಲ. ಯಾಕೆ ಬೇರೆ ಬೇರೆ ಋಷಿಗಳ ಅಗತ್ಯವಿರುತ್ತಿತ್ತು ಅಂತ. ಸ್ಥಗಿತವಾದ್ದು ಚಲಿಸಲಿ ಅಂತ ಜಗನ್ನಾಥರಾಯರು ಹೊರಟಿದ್ದಾರೇ ವಿನಹ...'

'ಶಿವಮೊಗ್ಗದಲ್ಲಿ ಏನಾಯಿತು ಜೋಯಿಸರೆ?' ಪ್ರಭುಗಳು ಕೇಳಿದರು.

'ಮಗನಿಗಿನ್ನೂ ಮುವ್ವತ್ತು ವರ್ಷ. ನಾಗಮಣೀದು ಹೀಗಾಯ್ತು. ಏನು ಮಾಡೋದು. ಎರಡನೇ ಸಂಬಂಧಕ್ಕೆ ಒಪ್ಪಿ ಯಾರೋ ಹೆಣ್ಣು ಕೊಡಲು ಬಂದಿದಾರೆ. ಓದಿದ ಹುಡುಗ – ಅವನನ್ನೊಂದು ಮಾತು ಕೇಳಿ ಮುಂದಿನ ವರ್ಷ ಲಗ್ನ ನಿಶ್ಚಯಿಸಬೇಕು' – ಜೋಯಿಸರು ನಿಟ್ಟುಸಿರು ಬಿಟ್ಟು ಹೇಳಿದರು.

ಪ್ರಭುಗಳು ಜಗನ್ನಾಥನನ್ನು ಕೇಳಿದರು :

'ಇಂಗ್ಲೆಂಡಿಂದ ನೀವೊಂದು ಹೊಸ ಕಾರು ಯಾಕೆ ತರ್ಲಿಲ್ವೊ?'

ಜಗನ್ನಾಥ ಉತ್ಸಾಹವಿಲ್ಲದೆ 'ಸುಮ್ಮನೆ' ಎಂದ.

'ಈ ರೋಡಲ್ಲಿ ಒಳ್ಳೆ ಕಾರು ನಾಲ್ಕು ದಿನ ಬರಲ್ಲ. ಸರಿಯೆ. ಮಾರಾಯ್ರೆ ಈ ಸ್ವಾತಂತ್ರ್ಯ ಬಂದ ಮೇಲೆ ಕೈಬಿಸಿಯಾಗದೆ ಏನೂ ಕೆಲಸ ಆಗಲ್ಲ.'

ಡ್ರೈವ್ ಮಾಡುವಾಗ ಮಾತಾಡೋದು ತನಗೆ ಇಷ್ಟವಿಲ್ಲವೆಂದು ಸೂಚಿಸಲು ರಿಯರ್ ಕನ್ನಡಿಯನ್ನು ಸರಿಮಾಡುತ್ತ ಜಗನ್ನಾಥ ಕಾರು ಓಡಿಸಿದ. ಪ್ರಭುಗಳು ವಾಸುವಿಗೆ ಹೇಳಿದರು :

'ಈ ಹೊಸ ಡಿ.ಸಿ. ಮಾರಾಯ್ರೆ, ಲಂಚವಿಲ್ದೆ ಏನೂ ಕೆಲಸ ಮಾಡಲ್ಲ. ಹರಿಜನ ಅಲ್ವೊ? ಅವನನ್ನ ಹಿಡಿಯೋರು ಯಾರು ಹೇಳಿ? ಮಂತ್ರಿ ಬೇರೆ ಸಂಬಂಧ ಅಂತೆ'.

ವಾಸು ಜಗನ್ನಾಥನನ್ನು ಚುಚ್ಚಲೆಂದೇ ಹೊಲೆಯರು ಮೇಲೆ ಬಂದರೆ ಏನೇನು ಅನಾಹುತಗಳಾಗುತ್ತವೆನ್ನುವುದನ್ನು ವರ್ಣಿಸಲು ಪ್ರಾರಂಭಿಸಿದ. ಯಾವನೋ ಹೊಲೆಯ ಎಂ.ಪಿ. ಡೆಲ್ಲಿಯಲ್ಲಿ ಪಕ್ಕದ ರೂಮಲ್ಲಿದ್ದ ಹೆಣ್ಣನ್ನ ಕೆಣಕಲು ಹೋಗಿ ನೆಹರೂ ಹತ್ತಿರ ಹೇಗೆ ಛೀಮಾರಿ ಹಾಕಿಸಿಕೊಂಡ ಎನ್ನುವ ಕಥೆಯಿಂದ ಅವನ ವ್ಯಾಖ್ಯಾನ ಪ್ರಾರಂಭವಾಗಿ ಜೋಕುಗಳಲ್ಲಿ ಪರ್ಯವಸಾನವಾಯಿತು. ಯಾವನೋ ಒಬ್ಬ ಹೊಲೆಯ ಮಂತ್ರಿಯಂತೆ. ಮಂತ್ರಿಯಾದ ದಿನ ಅವನೂ ಅವನ ಹೆಂಡ್ತೀನೂ ಬೆಂಗಳೂರಿಗೆ ಬಂದು ಒಂದು ಹೋಟ್ಲಲ್ಲಿ ಇಳ್ಕೊಂಡ್ರಂತೆ. ರೂಮ್ ವಿತ್‌ಬಾತ್‌ರೂಮ್ ಅಟ್ಯಾಚ್ಡ್. ಹೆಂಡತಿ ಕಕ್ಕಸ್ಸಿಗೆ

ಹೋದಳು. ನೋಡಿದಳು. ದಿಗ್ಭ್ರಮೆಯಾಗಿ ಕೂತುಬಿಟ್ಟಳು. ಎಷ್ಟು ಹೊತ್ತಾದ್ರೂ ಹೆಂಡತಿ ಬರ್ಲಿಲ್ವಲ್ಲ ಅಂತ ಮಾರಾಯ ಗಂಡ ಒಳಗೆ ಹೋಗಿ ನೋಡಿದ. ಏನು ನೋಡೋದು ? – ಕೂತುಬಿಟ್ಟಿದ್ದಾಳೆ ಮಾರಾಯತಿ ನೆಲದ ಮೇಲೆ. ಗಂಡನನ್ನು ನೋಡಿ 'ನೋಡಿದ್ರ ಏಸು ಸೆಂದಾಕೈತೆ! ಇಲ್ಲೆ ಉಂಡು ಮಕ್ಕೊಬಹುದಲ್ಲ ?' ಎಂದ್ಳು.

ಜಗನ್ನಾನ ಕಾರನ್ನು ನಿಧಾನ ಮಾಡಿ ಪಕ್ಕದಲ್ಲಿ ಕೂತ ವಾಸುವನ್ನು ಕ್ರೂರವಾಗಿ ನೋಡಿ,

'Shut up. You have become disgusting' ಎಂದ. ಜಗನ್ನಾಥನ ಮೈ ಸಿಟ್ಟಿನಿಂದ ನಡುಗುತ್ತಿರುವುದನ್ನು ನೋಡಿ ವಾಸು ಪೆಚ್ಚಾದ. ಪ್ರಭುಗಳು ಮಾತು ಬದಲಾಯಿಸಿದರು :

'ಜಗನ್ನಾಥರಾಯರು ನಾನು ಹೇಳಿದ್ದನ್ನ ಮನಸ್ಸಿಗೆ ತಂದುಕೊಂಡೇ ಇಲ್ಲ. ಈ ಗುರಪ್ಪಗೌಡನ್ನ ನಂಬಿಕೊಂಡ್ರೆ ಊರು ಉದ್ಧಾರವಾಗಲ್ಲ ಮಾರಾಯರೆ. ಗೌಡರ ಮಕ್ಕಳಿಗೆ ಏನು ಬೇಕೂ ಅಷ್ಟು ಮಾಡ್ತಾನೆ. ಶಾನುಭೋಗರನ್ನ ಹೆದರಿಸೋದು. ಶ್ರೀಮಂತ ಗೌಡರ ಮನೆ ಎದುರಿರೋ ರೋಡನ್ನ ದುರಸ್ತು ಮಾಡಿಸೋದು. ಅಮಲ್ದಾರನ್ನ ವರ್ಗ ಮಾಡಿ ಮಾಡಿಸೋದು ಇಷ್ಟೆ ಶಿವಾಯಿ ಅವನು ಇನ್ನೇತಕ್ಕೂ ಪ್ರಯೋಜನ ಇಲ್ಲ. ನೀವೇನಾದ್ರೂ ಮಾಡಿದ್ರೆ ಮಾಡಬೇಕು ಅಷ್ಟೆ.'

ಜಗನ್ನಾಥ ಹೂಗುಟ್ಟಿದ. ಮಾತಾಡಲಿಲ್ಲ. ಜಗನ್ನಾಥನ ಸಿಟ್ಟನ್ನ ಜೋಕೆಂದು ತಿಳಿದುಕೊಳ್ಳುವ ಪ್ರಯತ್ನ ವಿಫಲವಾದ್ದರಿಂದ ಕಾರಿನಿಂದ ಇಳಿಯುವಾಗ ವಾಸು, 'Excuse me' ಎಂದ. ನ್ಯಾಷನಲ್ ಲಾಡ್ಜ್ ಎದುರು ಮೂವರನ್ನೂ ಇಳಿಸಿ ಜಗನ್ನಾಥ ಸೀದ ಡಿ.ಸಿ. ಯವರ ಆಫೀಸಿಗೆ ಹೋದ.

* * *

SATHYAPRAKASH, B.A. B.L., IN

ಬೋರ್ಡ್‌ನೋರ್ಡಿ ಜಗನ್ನಾಥ ಚೀಟಿಯಲ್ಲಿ ತನ್ನ ಹೆಸರು ಬರೆದು ಉದ್ದ ಸ್ಟೂಲಿನ ಮೇಲೆ ಕೂತಿದ್ದ ಒಂದು ಬಡಕಲು ವ್ಯಕ್ತಿಯ ಕೈಯಲ್ಲಿ ಕೊಟ್ಟ. ಅವನ ಹಣೆಯಲ್ಲಿ ಅಂಗಾರ ಅಕ್ಷತೆ. ಎರಡು ಕಣ್ಣಿನ ಪಕ್ಕಕ್ಕೂ ಅಳಿಸಿ ಹೋಗುವ ಸ್ಥಿತಿಯಲ್ಲಿದ್ದ ಶಂಖ ಚಕ್ರಗಳ ಗೋಪಿ ಮುದ್ರೆಗಳಿದ್ದುವು. ಜುಟ್ಟಿನ ತಲೆಯ ಮೇಲೆ ಮಾಸಿದ ಬಿಳಿ ಟೋಪಿಯಿತ್ತು. ಕಾಲಲ್ಲಿ ಚಪ್ಪಲಿಯಿರಲಿಲ್ಲವಾದರೂ ಪ್ಯೂನಿನ ಸಮವಸ್ತ್ರವಾದ ಬಿಳಿಕೋಟು, ಬಿಳಿದೊಗಳೆ ಪ್ಯಾಂಟ್ ತೊಟ್ಟಿದ್ದ ಬಲರಾಮ ಗೋವಿನಂತಹ ಬಡಕಲು ಬ್ರಾಹ್ಮಣ. ಸಾಹೇಬರು ಗಂಟೆ ತಟ್ಟಿದ ಕೂಡಲೇ ಬಾಣದಂತೆ ಒಳನುಗ್ಗುವ ಹೊರನುಗ್ಗುವ ಪ್ಯೂನು. ಉಳಾಯ್ ಪಿದಾಯ್, ಉಳಾಯ್ ಪಿದಾಯ್, ಉಳಾಯ್ ಪಿದಾಯ್ – ಜಾತ್ರೆಯಲ್ಲಿ ಕರ್ಪೂರದ ಚೆಂಡನ್ನು ಪೆಟ್ಟಿಗೆಯ ಒಳಗೆ ಹೊರಗೆ ಆಡಿಸುತ್ತಿದ್ದ ಜಾದೂಗಾರನ ಕೈಚಳಕ ನೆನಪಾಯ್ತು. ಪ್ರತಿ ಸಾರಿ ಚೀಟಿ ಕೊಡುವಾಗಲೂ ಸತ್ಯ ಪ್ರಕಾಶರನ್ನು ಅನಿವಾರ್ಯವಾಗಿ ಮುಟ್ಟುತ್ತ, ಕಾರಣ – ಮನೆಯಲ್ಲಿ ನಿತ್ಯವೂ ಸಾಯಂಕಾಲ ಸ್ನಾನ ಮಾಡಿ, ಜನಿವಾರ ಬದಲಾಯಿಸಿ, ದನದ ಉಚ್ಚೆ ಸಗಣಿ ಸೇವಿಸಿ, ಗಾರ್ಹಸ್ಥ್ಯ ನಡೆಸಬೇಕಾಗಿ ಬಂದ ಪ್ಯೂನಾಗಿರಬಹುದು ಇವನು. ಜಗನ್ನಾಥ

ಕನಿಕರದಿಂದ ಅವನ ಜೋಬದ್ರ ಮುಖ ನೋಡಿದ. ತನ್ನ ವೇಷಭೂಷಣ ನೋಡಿ ಅವನಿಗೆ ಗೌರವ ಹುಟ್ಟಿರಲಿಲ್ಲ. 'ಸಾಹೇಬ್ರು ಕೆಲಸ ಮಾಡ್ತಿದಾರೆ. ಕಾಯಬೇಕು' ಎಂದ. 'ಚೀಟೀನ್ನ ಕೊಟ್ಟುಬನ್ನಿ, ದಯವಿಟ್ಟು' ಎಂದು ಜಗನ್ನಾಥ ಆತನನ್ನು ವಿನಯದಿಂದ ಕೇಳಿಕೊಂಡ ಮೇಲೆ ಮುಖ ಸೊಟ್ಟಗೆ ಮಾಡಿ ಆತ ಒಳಗೆ ಹೋದ. ಪಾಪ, ಸವರ್ಣೀಯರ ಮೇಲಿನ ಜಿದ್ದನ್ನೆಲ್ಲ ಈ ಬಡ ಪ್ರಾಣಿಯ ಮೇಲೆ ಸತ್ಯಪ್ರಕಾಶ ತೀರಿಸಿ ಕೊಳ್ಳುತ್ತಿರಬಹುದು. ಏಕಕಾಲದಲ್ಲಿ ಪಿಳ್ಳನೂ ಸತ್ಯಪ್ರಕಾಶನೂ ಈ ಬಡ ಬ್ರಾಹ್ಮಣ ಮನುಷ್ಯನೂ ಇರುವ ಈ ದೇಶದ ವಾಸ್ತವವನ್ನು ಅರ್ಥಮಾಡಿಕೊಳ್ಳುವುದು ಎಷ್ಟು ಜಟಿಲ ಎನ್ನಿಸಿತು.

ಕೂಡಲೇ ಒಳಗೆ ಕರೆದುಕೊಂಡು ಬರಲು ಸಾಹೇಬರು ಹೇಳಿದ್ದರಿಂದ ಪ್ಯೂನ್‌ನ ಮುಖದಲ್ಲಿ ಈಗ ವಿನಯವಿತ್ತು. ಬಾಗಿಲನ್ನು ತೆರೆದು ಗೌರವದಿಂದ ಬಾಗಿದ. ಸತ್ಯಪ್ರಕಾಶ್‌ಎದ್ದು ನಿಂತು ಜಗನ್ನಾಥನ ಕೈಲುಕಿದರು. ಕುಳ್ಳಗೆ ಕಪ್ಪಗೆ ಇದ್ದ ಸತ್ಯಪ್ರಕಾಶರ ಮುಖದ ಒರಟೊರಟಾದ ದೊಡ್ಡ ಕಿವಿಗಳು. ಅವರಳ ಹಾವಭಾವದಲ್ಲಿ ಒಲಿಸಿಕೊಳ್ಳುವ ಬಡಿವಾರ ಎದ್ದು ಕಾಣುತ್ತಿತ್ತು. ಎದುರಿದ್ದವರಿಗೆ ನೀವೆ ನನ್ನ ಸರ್ವಸ್ವ ಎಂದು ಹೇಳಲು ಪ್ರಯತ್ನ ಪಡುತ್ತಿದ್ದ ಅವರ ಅಗಲವಾದ ನಗು ಈ ಮನುಷ್ಯ ಪದವಿಯಿಂದ ಪದವಿಗೆ ಅಷ್ಟು ಬೇಗನೆ ಏರುತ್ತ ಹೋದ ಕ್ರಮವನ್ನು ಹೇಳುತ್ತಿತ್ತು.

'ಬನ್ನಿ, ಕೂತುಕೊಳ್ಳಿ. ನೀವು ನನ್ನನ್ನು ನೋಡಲು ಬಂದು ನನ್ನನ್ನು ಧನ್ಯನಾಗಿ ಮಾಡಿದಿರಿ.'

ಸತ್ಯಪ್ರಕಾಶನ ಕನ್ನಡ ಎಷ್ಟು ಕೃತಕ ಎನ್ನಿಸಿತು. ಅಸ್ಪೃಶ್ಯನಾಗಿದ್ದ ಹುಡುಗ ಹೀಗೆ ಆಫೀಸರಾಗಿ ಪರಿವರ್ತನೆಯಾಗುವಾಗ ಎಲ್ಲ ನೈಜತೆಯನ್ನೂ ಕಳೆದುಕೊಳ್ಳುತ್ತಾನಲ್ಲ. 'ನಿಮ್ಮ ಊರು ಯಾವುದು ?' ಇತ್ಯಾದಿ ಉಪಚಾರದ ಪ್ರಶ್ನೆಗಳನ್ನು ಕೇಳುತ್ತ ಜಗನ್ನಾಥ ಅವರ ಆಫೀಸನ್ನು ಕುತೂಹಲದಿಂದ ನೋಡಿದ. ಗಾಂಧಿ, ಗುಲಾಬಿ ತೊಟ್ಟ ನೆಹರೂ, ಮೈಸೂರಿನ ಮುಖ್ಯಮಂತ್ರಿಗಳ ಫೋಟೋಗಳು ಒಂದು ಗೋಡೆಯ ಮೇಲಿದ್ದುವು. ಜಗನ್ನಾಥನ ಬೆನ್ನ ಹಿಂದೆ ಮಂಜುನಾಥ ಸ್ವಾಮಿಯ ದೊಡ್ಡದೊಂದು ಫೋಟೋ ಇತ್ತು. ಬಹಳ ಹಿಂದಿನಿಂದ ಇರುವ ಫೋಟೋ ಅದು ಎನ್ನುವುದು ಊದುಬತ್ತಿ ಆರಿಸಿ ಕುಂಕುಮಗಳ ಕಲೆಯಿಂದ ಗೊತ್ತಾಗುತ್ತಿತ್ತು. ಇವತ್ತು ಉರಿಸಿರಬಹುದಾದ ಊದುಬತ್ತಿಯ ಅವಶೇಷವಾದ ಬೂದಿ ಫೋಟೋದ ಕಟ್ಟಿನ ಮೇಲೆ ಬಿದ್ದಿತ್ತು. ಟೇಬಲ್ಲಿನ ಮೇಲಿನ ಖಾದೆ ಬಟ್ಟೆಯನ್ನು ಸವರುತ್ತ, ಚಪಲದಲ್ಲಿ ಬೆಲ್ಲಿನ ಜೊತೆ ಆಡುತ್ತ ಸತ್ಯಪ್ರಕಾಶ್ ಪುಸ್ತಕ ಓದಿದ ಹಾಗೆ ಮಾತಾಡಿದರು.

'ನಮದು ತುಮಕೂರು ಸ್ವಾಮಿ. ನಮ್ಮ ಸಮಾಜ ಉದ್ಧಾರವಾಗಬೇಕಾದರೆ ನಿಮ್ಮಂತಹ ಯುವಕರು ದೇಶಸೇವೆಗೆ ಕಂಕಣಬದ್ಧರಾಗಿ ನಿಲ್ಲಬೇಕು. ಕಾರಂತರು ಹೇಳುತ್ತಾರಲ್ಲ ಹಾಗೆ ಮರಳಿ ಮಣ್ಣಿಗೆ ನೀವು ಬಂದಿದ್ದೀರಿ. ಮೊನ್ನೆ ಬೆಂಗಳೂರಿಗೆ ಡೆಪ್ಯೂಟಿ ಕಮೀಷನರ್ಸ್ ಕಾನ್ಫರನ್ಸಿಗೆಂದು ಹೋದಾಗ ನಾರಾಯಣರಿಗೆ ತಿಳಿಸಿದೆ ಗೊತ್ತಲ್ಲ ನಾರಾಯಣ್‌ನಮ್ಮ ನೆಂಟರು – ನನ್ನ ಹೆಂಡತೀನೂ ಅವರ ಹೆಂಡತೀನೂ ಖಾಸ ಅಕ್ಕ ತಂಗಿಯರು. ಅವರು ಆರೋಗ್ಯದ ಮಂತ್ರಿಗಳು – ಗೊತ್ತಿರಬೋದು ನಿಮಗೆ. ನಿಮ್ಮ ವಿಷಯ ಅವರಿಗೆ ಹೇಳಿದೆ. ಬಹಳ ಸಂತೋಷ ಪಟ್ಟರು.'

ಜಗನ್ನಾಥ ಸುಮ್ಮನೇ ಕೂತ. ಇಡೀ ವಾತಾವರಣದ ಕೃತಕತೆಯಿಂದ ಅವನಿಗೆ ಕಸಿವಿಸಿಯಾಗುತ್ತಿತ್ತು. ಟೇಬಲ್ಲಿನ ಮೇಲೆ ಕಾಗದದ ಹೂಗಳಿದ್ದವು. ಕಾಫಿ ಕಲೆಗಳ ಟೇಬಲ್‌ಕ್ಲಾತ್. ಬೆಲ್ ಮಾಡಲು ಹಾತೊರೆಯುವ ಸತ್ಯಪ್ರಕಾಶರ ಬೆರಳುಗಳು.

‘ತಾವು ಇಂಗ್ಲೆಂಡಲ್ಲಿ ಇದ್ದಿರೀಂತ ಕೇಳಿದೆ. ನಾನು ಒಂದು ಟೂರ್ ಹೋಗಿದ್ದೆ. ಜಪಾನಿಗೆ, ಅದೇ ಕೋ-ಆಪರೇಟಿವ್ ಮೂವ್‌ಮೆಂಟಿನ ಸಂಬಂಧದಲ್ಲಿ. ಅದೇನು ದೇಶ – ನೋಡಿದ್ರೆ ಆಶ್ಚರ್ಯವಾಯ್ತು. ನಮ್ಮ ಜನ ಶುದ್ಧ ಸೋಮಾರಿಗಳು. ಈಗ ನಮ್ಮ ಜನರನ್ನೆ ತಗೊಳ್ಳಿ, ಎಷ್ಟು ಸವಲತ್ತನ್ನ ಸರ್ಕಾರ ಒದಗಿಸಿಕೊಟ್ಟಿದೆ! ಆದ್ರೆ ಎಲ್ಲವನ್ನೂ ಅವು ದುರುಪಯೋಗ ಮಾಡ್ತಾವೆ. ಹಾಸ್ಟೆಲಲ್ಲಿ ಹುಡುಗರು ಬಿಟ್ಟಿ ಊಟ ಮಾಡಿಕೊಂಡು ಹೆಂಡ ಕುಡಿದು ಕಾಲ ಹಾಳುಮಾಡ್ತಾವೆ. ಅದಕ್ಕೇ ಅವಕ್ಕೆ ನಾನು ಹೇಳ್ತೀನಿ : ಬ್ರಾಹ್ಮಣ ಹುಡುಗರನ್ನ ನೋಡಿ ಎಷ್ಟು ಕಷ್ಟಪಟ್ಟು ಬೀದಿ ದೀಪದಲ್ಲಿ ಅವು ಓದಿ ಪಾಸ್ ಮಾಡ್ತಾವಲ್ಲ ನಿಮಗೇನು ಧಾಡಿ ಬಡೆದಿದೆ ಅಂತ? ಈಗ ನೋಡಿ ನಮ್ಮ ಪ್ಯೂನ್ ಗೋವಿಂದಾಚಾರ್‍ರ ಮಗನೂ ಎಸ್.ಎಸ್.ಎಲ್.ಸಿ. ನನ್ನ ಮಗನೂ ಎಸ್.ಎಸ್.ಎಲ್.ಸಿ. ಅವರ ಮಗ ಥ್ರೂ ಔಟ್ ಫಸ್ಟ್‌ಕ್ಲಾಸ್. ನಮ್ಮ ಮಗನಿಗೇನು ಕಡಿಮೆ? ಆದ್ರೆ ಒಂದೊಂದು ಕ್ಲಾಲ್ಲೂ ಅವ ಗ್ರೇಸ್ ತಗೊಳ್ದೆ ಪಾಸಾಗಲ್ಲ.’

ಸತ್ಯಪ್ರಕಾಶ ಬೆಲ್ ಕುಟ್ಟಿಯೇ ಬಿಟ್ಟರು. ಪ್ಯೂನ್ ಓಡಿಬಂದು ಬಾಗಿ ನಿಂತ.

‘ಆಚಾರ್‍ರೆ ಮನೇಗೆ ಹೋಗಿ ಫ್ಲಾಸ್ಕಲ್ಲಿ ಒಳ್ಳೆ ಕಾಫಿ ಮಾಡ್ಸಿ ತನ್ನಿ’ ಎಂದು ಜಗನ್ನಾಥನ ಕಡೆ ತಿರುಗಿ ‘ಕ್ಯಾಂಟೀನ್ನಲ್ಲಿ ಕಾಫಿ ಚೆನ್ನಾಗಿರಲ್ಲ ಮಿಸ್ಟರ್‌ಜಗನ್ನಾಥ್’ ಎಂದರು. ಪ್ಯೂನ್ ಬ್ರಾಹ್ಮಣನಾದ್ದರಿಂದ ಅವನಿಗೆ ಬಹುವಚನದ ಗೌರವ ಕೊಟ್ಟ ಸತ್ಯಪ್ರಕಾಶ್‌ನ ವ್ಯಕ್ತಿತ್ವದ ಬಗ್ಗೆ ಜಗನ್ನಾಥನ ಕುತೂಹಲ ಹೆಚ್ಚಿತು. ಮನೆಯಿಂದ ಕಾಫಿ ತರಿಸುತ್ತಾರೆ – ತಾನು ಕುಡಿಯುತ್ತೇನೊ ಪರೀಕ್ಷಿಸಲು. ಜಿದ್ದಿಗಾಗಿ ಬ್ರಾಹ್ಮಣನನ್ನು ಪ್ಯೂನ್ ಮಾಡಿಕೋತಾರೆ; ಆದರೆ ಬಹುವಚನದಲ್ಲಿ ಅವನನ್ನು ಮಾತಾಡಿಸ್ತಾರೆ. ದೈನ್ಯದಿಂದ ನಾಜೂಕಾಗಿ ಕೃತಕ ಕನ್ನಡದಲ್ಲಿ ಮಾತಾಡುತ್ತಾರೆ; ಆದರೆ ಪ್ರಾಯಶಃ ಒಳಗೊಳಗೇ ದ್ವೇಷದಿಂದ ಕುದೀತಿದಾರೆ. ನಾನು ವಿದ್ಯಾವಂತ ಬ್ರಾಹ್ಮಣನೆಂದು ನನ್ನನ್ನು ಮೆಚ್ಚಿಸಲು ತಮ್ಮ ಸರ್ವಶಕ್ತಿಯನ್ನೂ ಉಪಯೋಗಿಸುತ್ತಿದ್ದಾರೆ. ಪಿಳ್ಳ ಮುಂದೆ ಈ ಸತ್ಯಪ್ರಕಾಶ್ ಆದಾನು. ಚಲನೆಗೆ ಕೈ ಹಚ್ಚಿದವ ಇದಕ್ಕೂ ಸಿದ್ಧನಾಗಬೇಕು.

‘ನಾನು ತಮ್ಮ ಹತ್ತಿರ ಬಂದ ಕಾರಣ ಗೊತ್ತಾಗಿರಬಹುದು.’

‘ಅದೇ ಊಹಿಸಿದೆ – ಮಿಸ್ಟರ್ ಜಗನ್ನಾಥ್. ನೀವು ಈ ಕೆಲಸ ಮಾಡ್ತಿರೋದು ದೊಡ್ಡದು. ಈಗ ನನ್ನ ನೋಡಿ. ಹೆಚ್ಚು ಕಡಿಮೆ ಎಲ್ಲ ಟೆಂಪಲ್‌ಗೂ ನಾನು ಹೋಗಿ ಬಂದಿದೀನಿ. ತಿರುಪತಿ, ರಾಮೇಶ್ವರ, ಮಧುರೆ – ಎಲ್ಲೂ ನನ್ನ ತಡೆದಿಲ್ಲ. ನಮ್ಮ ಜನ ಮೊದಲು ಎಜುಕೇಟೆಡ್ ಆಗಬೇಕು. ಇನ್ನೂ ಮೂಢನಂಬಿಕೇಲೇ ಬದುಕ್ತಿದಾವೆ. ಎಡಗೈ ಜನಕ್ಕೆ ಬಲಗೈ ಅಂದರೆ ಆಗಲ್ಲ. i have no sympathy for some of my people. ನಿಮ್ಮಂಥೋರು ಕೈ ಹಿಡಿದು ಅವರನ್ನ ಎತ್ತಬೇಕು. ನನಗೆ ಎನ್ಕರೇಜ್‌ಮೆಂಟ್ ಕೊಟ್ಟೋರು ಯಾರು ಗೊತ್ತಾ? ಗುಬ್ಬಿ ಹೈಸ್ಕೂಲಲ್ಲಿ ಒಬ್ಬ ಬ್ರಾಹ್ಮಣ ಮೇಷ್ಟ್ರು.’

ಕಾಫಿ ಬಂತು. ಪಿಳ್ಳನ ಜೊತೆಗಾಗಲೀ ಸತ್ಯಪ್ರಕಾಶ್‌ಜೊತೆಗಾಗಲೀ ಸಹಜವಾದ ಸಂಬಂಧ ಸಾಧ್ಯವಾಗದ ದುರಂತ ಜಗನ್ನಾಥನನ್ನು ಬಾಧಿಸಿತು. ಏನೋ ಕೃತಕತೆ ತಲೆಹಾಕತ್ತೆ. ಪ್ಯೂನ್ ಇಬ್ಬರಿಗೂ ಕಪ್ಪಿನಲ್ಲಿ ಕಾಫಿ ಬಸಿದುಕೊಟ್ಟ. ವಿಪರೀತ ಸಿಹಿಯ ಕಾಫಿ, ಅದರಲ್ಲಿ ಉಂಡುಂಡೆಯಾಗಿ ಸಿಗುವ ಹಾಲಿನ ಕೆನೆ – ಜಗನ್ನಾಥ ಕಷ್ಟಪಟ್ಟು ಕುಡಿದ.

'ನಿಮಗೆ ನಾನು ಹೇಳಬೇಕೂಂತ ಬಂದದ್ದು ಇದು. ಜಾತ್ರೆದಿನ ಗಲಾಟೆಯಾಗಬಹುದು. ಹರಿಜನರ ವಿರುದ್ಧ ಹಿಂಸಾಚಾರ ಆಗಬಹುದು. ಆದ್ದರಿಂದ ಪೊಲೀಸ್ ಬಂದೋಬಸ್ತು ಮಾಡಬೇಕೂಂತ ನಿಮ್ಮನ್ನ ಕೇಳೋಣಾಂತ ಬಂದೆ.'

ಜಗನ್ನಾಥ ಸತ್ಯಪ್ರಕಾಶರ ಪ್ರತಿಕ್ರಿಯೆಗೆ ಕಾದ. ಸತ್ಯಪ್ರಕಾಶ್ ತುಂಬ ವಿವೇಕಶಾಲಿಯ ಮುಖ ಮಾಡಿಕೊಂಡು ಮಾತಾಡಿದರು :

'ಅದನ್ನೆ ಹೇಳೋಕೆ ಹೊರಟಿದ್ದೆ ಮಿಸ್ಟರ್ ಜಗನ್ನಾಥ್, ನನಗೂ ತುಂಬ ರೆಪ್ರಸೆಂಟೇಶನ್‌ಗಳು ಬಂದಿವೆ. ಜಾತ್ರೆ ಸಮಯದಲ್ಲಿ ಈ ಎಂಟ್ರಿ ಕಾರ್ಯಕ್ರಮ ಇಟ್ಟುಕೋಬೇಡಿ. ಇನ್ನೊಂದು ದಿನ ಕ್ವಯಟ್‌ಆಗಿ ಮಾಡಿಬಿಡಿ. ನಾನೂ ನಿಮ್ಮ ಜೊತೆ ಬರ್‍ತೇನೆ. ಶಾಂತಿಗೆ ಹೆಸರಾದ ದೇಶ ನಮ್ದು. ನಾನು ಡಿ.ಸಿ.ಯಾಗಿ ರಿಪೋರ್ಟ್‌ಮಾಡಿಕೊಳ್ಳೋ ದಿನ ನಿಮ್ಮ ದೇವಸ್ಥಾನದ ಕಮಿಟಿಯೋರು ಸ್ಪೆಷಲ್ ಆಗಿ ಪೂಜೆ ಮಾಡಿಸಿ ನಂಗೆ ಪ್ರಸಾದ ಕಳ್ಸಿದ್ರು. ಎಲ್ಲ ಕ್ರಮೇಣ ಚೇಂಜ್ ಆಗೆ ಆಗ್ತಾರೆ. ಹೇಳಲ್ವೆ? ಯಂ ಶೈವಾಃ ಸಮುಪಾಸತೆ ಸಿವ ಇತಿ ಅಂತ. ರಿಲಿಜಸ್ ಟಾಲರೆನ್ಸ್ ಅಂತ ನೆಹರೂ ಕರ್ದದ್ದು ಇದನ್ನೆ. ಸ್ಲೋ ಅಂಡ್ ಸ್ಟಡಿ – ಅದೇ ನನ್ನ ಪಾಲಿಸಿ. ನಿಮ್ಮನ್ನ ಒಬ್ಬ ಹರಿಜನ ಆಗಿ ಪ್ರಾರ್ಥಿಸ್ಕೋತೀನಿ....'

ಸತ್ಯಪ್ರಕಾಶ್ ಕೈಮುಗಿದು ಎದ್ದು ನಿಂತರು. ಜಗನ್ನಾಥನಿಗೆ ಕಾಫಿಯ ಕೆಟ್ಟ ಸಿಹಿ ಇನ್ನೂ ಬಾಯಲ್ಲಿತ್ತು. ಹೇಸಿಗೆಯಿಂದ ಕಂಪಿಸುತ್ತ ಅವನೂ ಎದ್ದು ನಿಂತ.

'ನಾವು ಮಾಡಿರೋ ನಿರ್ಧಾರದಿಂದ ಹಿಂದೆಗೆಯೋದು ಸಾಧ್ಯವಿಲ್ಲ. ಹರಿಜನರೇ ತಯಾರಾಗಿಲ್ಲ ಅನ್ನಿಸಿದ್ರೆ ಬೇರೆ ಮಾತು. ಲಾ ಅಂಡ್ ಆರ್ಡರ್‌ಗೆ ನೀವು ಜವಾಬ್ದಾರರು ಅಂತ ತಿಳಿಸೋಕೆ ಬಂದೆ ಅಷ್ಟೆ.'

ಜಗನ್ನಾಥ ಗಂಭೀರವಾಗಿ ಆದರೆ ಕಟುವಾಗಿ ಮಾತಾಡಿದ್ದು ಕೇಳಿ ಸತ್ಯಪ್ರಕಾಶ್‌ಗೆ ಗಾಬರಿಯಾಗಿರಬೇಕು. ಜಗನ್ನಾಥನ ಜೊತೆ ನಡೆದು ಕಾರಿನ ತನಕ ಬಂದರು. ಶಾಂತಿ, ಅಹಿಂಸೆ, ಹರಿಜನರು ನಿಷ್ಠುರ ಕಟ್ಟಿಕೊಂಡು ಬದುಕಲಾರರು, ಮೊದಲು ವಿದ್ಯಾವಂತರಾಗಲಿ – ಇತ್ಯಾದಿ ಗೊಣಗುತ್ತ ಕೈಮುಗಿದು ಜಗನ್ನಾಥನನ್ನು ಕಳಿಸಿಕೊಟ್ಟರು.

ಮೈ.ಸೋ.ಪ.ದ (ಮೈಸೂರು ಸೋಷಲಿಸ್ಟ್ ಪಕ್ಷದ) ನೀಲಕಂಠಸ್ವಾಮಿ ಮತ್ತು ರಂಗರಾವ್ ಕೈಯಲ್ಲೊಂದು ಬ್ಯಾಗು, ಬಾವುಟ ಹಿಡಿದು ಜಗನ್ನಾಥನ ಮನೆಗೆ ಸೀದ ಬಂದಿದ್ದರು. ಶ್ರೀಪತಿರಾಯರು ಅವರನ್ನು ಸ್ವಾಗತಿಸಿ, ಚಿಕ್ಕಿಯಿಂದ ಕಾಫಿ ತಿಂಡಿ ಮಾಡಿಸಿ ಕೊಡಿಸಿ ಆಫೀಸಿಗೆ ಅಂಟಿಕೊಂಡಿದ್ದ ದೊಡ್ಡ ರೂಮೊಂದರಲ್ಲಿ ಇಳಿಸಿದರು. ಜಗನ್ನಾಥ ಬಂದೊಡನೆ ನೀಲಕಂಠಸ್ವಾಮಿ ತನ್ನ ಪರಿಚಯ ಮಾಡಿಕೊಂಡ. ಪೊಲಿಟಿಕಲ್ ಸೈನ್ಸ್ ಎಂ.ಎ. ಮುಗಿಸಿ ಫೈನಲ್ ಲಾ ವಿದ್ಯಾರ್ಥಿ; ಲಾ ಕಾಲೇಜಿನ ಅಸೋಸಿಯೇಷನ್ನಿನ ಅಧ್ಯಕ್ಷ; ಮೈ.ಸೋ.ಪ.ದ ಕಾರ್ಯದರ್ಶಿ. ಇವರ ಭಾಷಾಣವಿಲ್ಲದೆ ಯಾವ ಫಂಕ್ಷನ್ನೂ ಮೈಸೂರಲ್ಲಿ ನಡೆಯುವುದಿಲ್ಲೆಂದು ತನ್ನನ್ನು ಹೊಗಳಿದ ರಂಗರಾವ್ ಪರಿಚಯವನ್ನು ಆಮೇಲೆ ನೀಲಕಂಠಸ್ವಾಮಿಯೇ ಮಾಡಿಕೊಟ್ಟ; ಪೊಲಿಟಿಕಲ್ ಸೈನ್ಸ್ ಎಂ.ಎ. ಮುಗಿಸಿದ್ದಾರೆ; ರಿಸರ್ಚ್ ಮಾಡುತ್ತಿದ್ದಾರೆ; ಸಂಘ ಕಟ್ಟುತ್ತಿದ್ದಾರೆ. ತಾವು ಯಾಕೆ ಸೋಷಲಿಸ್ಟ್ ಪಕ್ಷದಿಂದ ಒಡೆದು ಬೇರೆ ಪಕ್ಷ ಕಟ್ಟಬೇಕಾಯ್ತೆಂದು ನೀಲಕಂಠಸ್ವಾಮಿ ವಿವರಿಸಿದ. ಪಾರ್ಟಿ ಅಧ್ಯಕ್ಷ ಪಕ್ಷವನ್ನು

ತನ್ನ ವೈಯಕ್ತಿಕ ಲೋಭಗಳಿಗಾಗಿ ಉಪಯೋಗಿಸಿ ಕೊಂಡದ್ದರಿಂದ ತನ್ನ ಜಾತಿಯವನನ್ನೆ ಕಾರ್ಯದರ್ಶಿ ಸ್ಥಾನಕ್ಕೆ ಆರಿಸಿದ್ದರಿಂದ – ಇತ್ಯಾದಿ. ಮಾತಾಡುವಾಗ ನೀಲಕಂಠಸ್ವಾಮಿ ತನ್ನ ಗುಂಗುರು ಕೂದಲಿಗೆ ಕೈ ಹಾಕಿ, ಒಂದು ಕೂದಲನ್ನು ಬೇರ್ಪಡಿಸಿ, ಜಗ್ಗಿ ಎಳೆದು ಕಿತ್ತು ಅದರ ಬೇರನ್ನು ನೋಡಿ, ಕೆಳಗೆ ಹಾಕಿ, ಮತ್ತೆ ಅದೇ ಸ್ಥಳದಲ್ಲಿ ಇನ್ನೊಂದು ಕೂದಲನ್ನು ಹುಡುಕುವುದು ನೋಡಿ ಜಗನ್ನಾಥನಿಗೆ ಬಹಳ ಹಿಂಸೆಯಾಯಿತು.

'ವಿಶ್ರಮಿಸಿಕೊಳ್ಳಿ, ಆಮೇಲೆ ನಿಮ್ಮನ್ನ ನೋಡ್ತೇನೆ' ಎಂದು ಜಗನ್ನಾಥ ತನ್ನ ರೂಮಿಗೆ ಬಂದ. ಹಿಂದಿನಿಂದ ಶ್ರೀಪತಿರಾಯರು ಬಂದರು. ಬಾಗಿಲು ಹಾಕಿ ಜಗನ್ನಾಥನಿಗೆ ಆಪ್ತವಾಗಿ ಮೆತ್ತಗೆ ಹೇಳಿದರು :

'ಸ್ವಲ್ಪ ಜಾಗರೂಕತೆಯಿಂದ ಅವರ ಹತ್ರ ನಡಕೋಬೇಕು ಜಗಣ್ಣ. ಅವರೇನು ಮಾತಾಡಿಕೋತಿದ್ರು ಗೊತ್ತ? ನಾನು ಹೊರಗೆ ನಿಂತಿದ್ದು ಗೊತ್ತಿರಲಿಲ್ಲಾಂತ ಕಾಣತ್ತೆ. ನೀಲಕಂಠಸ್ವಾಮಿ ಹೇಳಿದ : 'ಜಗನ್ನಾಥರನ್ನ ನಮ್ಮ ಪಾರ್ಟಿ ಅಧ್ಯಕ್ಷರನ್ನಾಗಿ ಮಾಡಿಕೊಂಡರೆ ಹೇಗೋ ರಂಗರಾವ್' ಅಂತ. ಅದಕ್ಕೆ ರಂಗರಾವ್, 'A brahmin is a brahmin ಎಂದ. ರಂಗರಾವ್ ಒಕ್ಕಲಿಗರೋನು, ನೀಲಕಂಠಸ್ವಾಮಿ ಹೇಳ್ದ : 'It is strategy Ranga Rao ಮುಂದಿನ ಸಾರಿ ಇಲ್ಲಿಂದ ಜಗನ್ನಾಥ ನಮ್ಮ ಪಕ್ಷಕ್ಕೆ ಒಳ್ಳೆ ಕ್ಯಾಂಡಿಡೇಟ್ ಆಗ್ತಾನೆ' ಅಂತ. ನನಗವ್ರ ಮಾತು ಕೇಳಿ ಬಹಳ ಬೇಜಾರಾಯ್ತು. ಬಂದವ್ನೆ ರಂಗರಾವ್ ಏನು ಮಾಡ್ದ ಗೊತ್ತ? ಬಟ್ಟೆ ಬದಲಾಯಿಸಿ ಸೀದ ದೇವಸ್ಥಾನಕ್ಕೆ ಹೋಗಿ ಪ್ರಸಾದ ತಗೊಂಬಂದ. 'ನೀವು ಹೀಗೆ ಮಾಡಿದ್ದು ಸರಿಯಲ್ಲ' ಅಂತ ನಾನು ಅಂದದ್ದಕ್ಕೆ 'ನನ್ನ ಗುರ್ತು ಯಾರಿಗೂ ಇಲ್ವಲ್ಲ, ಪರವಾಗಿಲ್ಲ, ನಮ್ಮ ತಾಯಿಗೆ ಮಂಜುನಾಥ ಸ್ವಾಮೀಂದ್ರೆ ತುಂಬ ಭಕ್ತಿ' ಅಂದ. ನೀಲಕಂಠಸ್ವಾಮೀನೂ ಅವನನ್ನ ಬೈದ ಕಾರಣ ಇಷ್ಟೆ; ಲಿಂಗಾಯ್ತ ಆದ್ರಿಂದ ಅವನಿಗೆ ಬ್ರಾಹ್ಮಣರ ದೇವಸ್ಥಾನದ ಪ್ರಸಾದದಲ್ಲಿ ಅಷ್ಟು ಅದರ ಇಲ್ಲ. ಯಾಕೆ ಇವನ್ನೆಲ್ಲ ಹೇಳಕ್ಕೆ ಬಂದೇಂದ್ರೆ ನಿನಗೆ ರಾಜಕೀಯ ಹೊಸದು. ಜೋಕೆಯಾಗಿರು.'

ರಾಯರು ನಾಟಕೀಯವಾಗಿ ರಸವತ್ತಾಗಿ ಹೇಳಿದ್ದನ್ನು ಜಗನ್ನಾಥ ಸಮಾಧಾನದಿಂದ ಕೇಳಿಸಿಕೊಂಡ. 'ನಮ್ಮ ಪರ್ಪಸ್‌ಗಾಗಿ ಇಂಥ ಎಲ್ಲವನ್ನೂ ದುಡಿಸಿಕೊಳ್ಳಬೇಕಾಗತ್ತೆ' ಎಂದ. ರಾಯರು ನಕ್ಕರು. 'ನೀನೊಬ್ಬ ಮೂರ್ಖ. ಅವರೇ ನಿನ್ನ ಎಕ್ಸ್‌ಪ್ಲಾಯಿಟ್ ಮಾಡ್ತಾರೆ – ಬೇಕಾದರೆ ನೋಡು' ಎಂದರು. ಜಗನ್ನಾಥ ಡಿ.ಸಿ. ಜೊತೆ ತನ್ನ ಭೇಟಿಯನ್ನು ವಿವರಿಸಿದ. 'ನನಗಿದು ಮೊದಲೇ ಗೊತ್ತಿತ್ತು. ಅವನೊಬ್ಬ ಶುದ್ಧ ಕರಪ್ಟ್‌ಫೆಲೋ' ಎಂದು ರಾಯರು ಎದ್ದು ನಿಂತರು. ಜಗನ್ನಾಥ ಹಾಸಿಗೆಯ ಮೇಲೆ ಕಾಲು ಚಾಚಿದ.

'ಇನ್ನೂ ಯಾರಾರೋ ಬಂದಾರು ಮನೆಗೆ. ಚಿಕ್ಕಿಗೊಬ್ಬರಿಗೇ ಅಡಿಗೆ ಮಾಡೋದು ಕಷ್ಟ. ನನ್ನ ಹೆಂಡತೀನ್ನ ಕಳಿಸಿಕೊಡ್ತೀನಿ' ಎಂದರು ರಾಯರು.

'ಚಿಕ್ಕೀಗೆ ಸಮಾಧಾನ ಹೇಳಿದ್ರ ರಾಯರೆ?'

'ಹೇಳ್ದೆ. ಅವರು ಅಡಿಗರಿಗೆ ಹೇಳಿಕಳಿಸಿದಾರಂತೆ. ಶಾಲಿಗ್ರಾಮಾನ್ನ ಶುದ್ದ ಮಾಡಿ ಪೂಜೆಮಾಡಿ ಹೋಗೀಂತ. ಅದರ

ತೀರ್ಥವಿಲ್ಲದೆ ತಾನು ಹೇಗೆ ಊಟ ಮಾಡ್ಲಿ ಅಂತ ಅವರು ಅಳ್ತಾರೆ. ನಂಗವರನ್ನ ನೋಡಿದ್ರೆ ಪಾಪ ಅನ್ನಿಸತ್ತೆ. ನಾಳೆ ಗೋಪಾಲ ಬರ್ತಾನಂತಲ್ಲ – ಅದೇ ಅವರಿಗೆ ನೆಮ್ಮದಿ.'

ರೈಟರ್ ಕೃಷ್ಣಯ್ಯನ ಮಗನ ವಿಷಯದಲ್ಲಿ ತಾಯಿಗೂ ಚಿಕ್ಕಿಗೂ ಇದ್ದ ವಾತ್ಸಲ್ಯ ಜಗನ್ನಾಥನಿಗೆ ಆಶ್ಚರ್ಯದ ವಿಷಯ. ಅವನಿಗೆ ಗೋಪಾಲ ಬರುತ್ತಿದ್ದಾನೆಂದು ಕೇಳಿ ಸಂತೋಷವಾಯಿತು. ಒಟ್ಟಿನಲ್ಲಿ ಚಿಕ್ಕಿ ಗೆಲುವಾಗಿರೋದು ಅವನಿಗೆ ಬೇಕಿತ್ತು.

ರಾಯರು ಹೊರಡುವಾಗ ಹೇಳಿದರು :

'ಬಿಳಿ ಬಟ್ಟೆ ಹಾಕ್ಕೊಂಡು ಪೇಟೇ ಬೀದೀಲಿ ಓಡಾಡಬೇಡೀಂತ ಹೊಲೇರ ಹುಡುಗರಿಗೆ ಹೇಳು ಜಗಣ್ಣ. ಜನರ ಕಣ್ಣಿಗೆ ಅವರು ತೀರಾ ಬಿದ್ರೆ ಗಲಾಟೆಯಾಗಬಹುದು.'

* * *

ಸಂಜೆ ಹೊಲೆಯರ ಯುವಕರು ಬಂದರು. ಮೈಕೈ ನೋವಾಗಿದ್ದರೂ ಪಿಳ್ಳ ಬಂದಿದ್ದು ನೋಡಿ ಜಗನ್ನಾಥನಿಗೆ ಗೆಲುವಾಯಿತು. ಅವನ ಮುಖದಲ್ಲಿ ತಾನು ಹಿಂದೆಂದೂ ಕಾಣದಿದ್ದ ಸ್ನೇಹವಿತ್ತು – ಅಲ್ಲವೆ? ಜಗನ್ನಾಥ ಡಿ.ಸಿ.ಯನ್ನು ನೋಡಿದ್ದೇನೆ ಎಂದು ಹೇಳಿದ. ಅವರು ನಿಮ್ಮ ಜಾತಿಯವರೆ ಎಂದು ಅವರಲ್ಲಿ ಧೈರ್ಯ ತುಂಬಿದ. ನೀವು ದೇವಾಲಯ ಪ್ರವೇಶ ಮಾಡುವುದಕ್ಕೆ ಸಹಾಯ ಮಾಡಲಯ ಮೈಸೂರಿನಿಂದ ಈ ಇಬ್ಬರು ಬಂದಿದಾರೆ ಎಂದು ನೀಲಕಂಠಸ್ವಾಮಿ ಮತ್ತು ರಂಗರಾವ್‌ರನ್ನು ಪರಿಚಯ ಮಾಡಿಕೊಟ್ಟು, ಹೊಲೆಯರ ಯುವಕರಿಗೆ ಸಮಾಜವಾದ ಕುರಿತು ಮಾತಾಡುವಂತೆ ನೀಲಕಂಠಸ್ವಾಮಿಗೆ ತಿಳಿಸಿ, ತಾನಿದ್ದರೆ ಮುಜುಗರವಾದೀತೆಂದು ಮನೆಯೊಳಗೆ ಹೋದ.

ರಾಯರ ಹೆಂಡತಿ ಭಾಗ್ಯಮ್ಮ, ರಜದ ಮೇಲೆ ಬಂದಿದ್ದ ಮಗಳು ಸಾವಿತ್ರಿ ಚಿಕ್ಕಿಗೆ ಸಹಾಯ ಮಾಡಲು ಬಂದಿದ್ದರು. ಜಗನ್ನಾಥ ಸುತ್ತಾಡಿ ಬರಲು ಗುಡ್ಡ ಇಳಿದು ನಡೆದ.

ರಾತ್ರೆ ಊಟಕ್ಕೆ ರಾಯರೂ ಇದ್ದರು. ಊಟದ ಮನೆಯಲ್ಲಿ ಪ್ರಥಮ ಬಾರಿಗೆ ಒಬ್ಬ ಲಿಂಗಾಯತ ಮತ್ತು ಒಕ್ಕಲಿಗ ಊಟ ಮಾಡುತ್ತಿದ್ದಾರೆಂದು ಜಗನ್ನಾಥನಿಗೆ ಸಂತೋಷವಾಯಿತು. ಚಿಕ್ಕಿ ಮೌನವಾಗಿ ಬಡಿಸಿದರು. ನಾಳೆ ಇನ್ನಷ್ಟು ಜನ ನಮ್ಮ ಪಾರ್ಟಿಯವರು ಬರ್ತಿದಾರೆ ಎಂದು ನೀಲಕಂಠಸ್ವಾಮಿ ಹೇಳಿದ. ಇಲ್ಲೊಂದು ರೈತಸಂಘ ಶುರು ಮಾಡಬೇಕೆಂದು ರಂಗರಾವ್ ಸೂಚಿಸಿದ.

ಮಾರನೇ ದಿನ ಪತ್ರಿಕೆಯಲ್ಲಿ ಭಾರತೀಪುರದ ಬ್ರಾಹ್ಮಣ ಯುವಕ ಸಂಘದವರು ಹರಿಜನ ದೇವಾಲಯ ಪ್ರವೇಶವನ್ನು ಖಂಡಿಸಿ ಬರೆದ ಪತ್ರವಿತ್ತು. ಟಪಾಲು ಬಸ್ಸಿನಲ್ಲಿ ಜಗನ್ನಾಥನಿಗೆ ಎರಡು ಕಾಗದದಗಳು ಬಂದವು. ಮೈಸೂರು ಯೂನಿವರ್ಸಿಟಿಯಲ್ಲಿ ಸಮಾಜಶಾಸ್ತ್ರದ ರೀಡರ್ ಆಗಿದ್ದ ರಮೇಶಚಂದ್ರನಿಂದ ಒಂದು. ರಮೇಶಚಂದ್ರ ಜಗನ್ನಾಥನಿಗೆ

ಹಳೆಯ ಪರಿಚಯ. ನಂಜನಗೂಡಿನ ಒಂದು ಪ್ರಸಿದ್ಧ ಹೊಯ್ಸಳ ಕರ್ನಾಟಕ ಮನೆತನದವನು. ಬಿ.ಎ. ಮುಗಿಸುವ ತನಕ ಕಿವಿಗೆ ಒಂಟಿ ಹಾಕುತ್ತಿದ್ದ ಈತ ಇಂಗ್ಲೆಂಡಲ್ಲಿ ತ್ರೀಪೀಸ್ ಸೂಟನ್ನು ಚೂರೂ ಇಸ್ತ್ರಿ ಕೆಡದಂತೆ ನಾಜೂಕಾಗಿ ಧರಿಸಲು ಕಲಿತಿದ್ದ. ಕನ್ನಡಕವನ್ನು ಕರ್ಚೀಫಿನಿಂದ ಒರೆಸುತ್ತ ತುಸು ಬಾಗಿ ಕೂತು ಅವನು ಗಂಭೀರವಾದ ಚರ್ಚೆಗೆ ಪ್ರಾರಂಭಿಸುವುದನ್ನು ಕಂಡವರೆಲ್ಲ ಅವನೊಬ್ಬ ಬುದ್ಧಿಜೀವಿಯೆಂದೇ ತಿಳಿಯುತ್ತಿದ್ದರು. ಭಾರತದ ಜಾತಿವ್ಯವಸ್ಥೆಯನ್ನು ಅತ್ಯಂತ ಸೂಕ್ಷ್ಮವಾಗಿ ಅವನು ಎತ್ತಿಹಿಡಿಯುತ್ತಿದ್ದ. 'ಅಲ್ಲಾರೀ ನೋಡಿ ಎಂಥ ರಿಚ್ ಲೈಫ್ ಲೀಡ್ ಮಾಡ್ತಾರೆ ಕುಂಬಾರ್ರು ಅನ್ನೋದು ನಿಮಗೆ ಗೊತ್ತೇನ್ರಿ ?' ಆದರೆ ಮಾತ್ರ ಇಂಗ್ಲೆಂಡಲ್ಲಿದ್ದ ಕಲರ್ಡ್ ಫೀಲಿಂಗನ್ನ ಅಷ್ಟೇ ಉಗ್ರವಾಗಿ ಅವ ಖಂಡಿಸುತ್ತಿದ್. 'ನೀವು ಹಿಪೋಕ್ರಿಟ್' ಎಂದು ಜಗನ್ನಾಥ ಅಂದರೆ, 'May I have a cigarette please ?' ಎಂದು ಸಿಗರೇಟ್ ಹಚ್ಚಿ,

'ನಿಮ್ಮ ಕಳಕಳಿ ಅರ್ಥವಾಗತ್ತೆ. ಆದ್ರೆ ಜಗನ್ ಈಗ ಎಜ್ಯುಕೇಟೆಡ್ ಆಗಿರೋ ಶೂದ್ರರು ಏನಾಗಿದಾರೆ ನೋಡಿ – ಮೈಸೂರು ಯೂನಿವರ್ಸಿಟಿ ಗತಿ ಏನಾಯ್ತು ? ಒಕ್ಕಲಿಗರಿಗೂ ಲಿಂಗಾಯ್ತರಿಗೂ ನಿತ್ಯ ಜಗಳ ಅಲ್ಲಿ. ಒಂದು ಕಾಲದಲ್ಲಿ ಹಿರಿಯಣ್ಣ. ರಾಧಾಕೃಷ್ಣನ್ ಇದ್ದ ಯೂನಿವರ್ಸಿಟೀಲಿ ಇಗ ನಡೆಯೋದೆಲ್ಲ ಕಾಳಪ್ಪ ಸಿದ್ಧಪ್ಪರ ದರ್ಬಾರು. ಇದನ್ನ ಖಂಡಿಸ್ಬೇಕು ಹೊರ್ತು ಜಾತಿ ವ್ಯವಸ್ಥೇನ ಬೈದು ಏನು ಪ್ರಯೋಜ್ನ ಹೇಳಿ.'

ರಮೇಶಚಂದ್ರ ಭಾರತೀಯ ಹಿಪೋಕ್ರಸಿಯ ಅತ್ಯಂತ ಮುಗ್ಧ ಚಿತ್ರವಾಗಿದ್ದ. ಆಳವಾದ ನಂಬಿಕೆಯಿಂದ ವಾದಿಸುತ್ತಿದ್ದ ; ಶೂದ್ರ ಹೆಂಗಸರು ಹಾದರ ಮಾಡಿದರೆ ಸರಿ ಆದರೆ ಬ್ರಾಹ್ಮಣರ ಹೆಂಗಸರು ಮಾಡಲ್ಲ; ಇಂಡಿಯಾದಲ್ಲಿ ನ್ಯೂರೋಟಿಕ್ಸ್ ಇಲ್ಲ; ಐರೋಪ್ಯ ಸಂಸ್ಕೃತಿಗಿಂತ ಭಾರತೀಯ ಸಂಸ್ಕೃತಿ ದೊಡ್ಡದು ; ಬ್ರಿಟಿಷರು ಇಂಡಿಯಾಕ್ಕೆ ಬಂದು ಇಂಗ್ಲಿಷ್ ಹೇಳಿಕೊಡದಿದ್ದರೆ ನಮ್ಮಲ್ಲಿ ಎಲೆಕ್ಟ್ರಿಸಿಟಿ ರೈಲುಗಳೇ ಇರ್ತಿರಲಿಲ್ಲ; ಸ್ವಾತಂತ್ರ್ಯ ಇನ್ನೂ ತಡವಾಗಿ ಬರ್ಬೇಕಿತ್ತು; ಅಕ್ಷರ ಬಾರದವರಿಗೆ ಓಟಿನ ಹಕ್ಕು ಕೊಟ್ಟಿದ್ದು ತಪ್ಪು; ಕ್ಲೆನ್ಲಿನೆಸ್ ಅಂತ ಬಡಕೊಳ್ಳೊ ಈ ಇಂಗ್ಲಿಷ್ ಜನ ಅಂಡನ್ನ ತೊಳ್ಕಳ್ಳೋದೆ ಇಲ್ಲಲ್ರಿ ? – ಇತ್ಯಾದಿ. ರಮೇಶಚಂದ್ರನ ಮುದ್ದಾದ ಮೀಸೆ, ಅವನು ಎರಡು ಕೈಗಳನ್ನೂ ಎದೆಗೊತ್ತಿಕೊಂಡು ವಾತಾಡುವ ಕಳಕಳಿ ನೋಡುತ್ತ ಜಗನ್ನಾಥ ಆಕಳಿಸುತ್ತಿದ್ದ.

ರಮೇಶಚಂದ್ರನ ಭವಿಷ್ಯ ಜಗನ್ನಾಥ ಊಹಿಸಿದಂತೆಯೇ ರೂಪಪಡೆದಿತ್ತು. ಭಾರತೀಯ ಸ್ತ್ರೀಯ ಪಾತಿವ್ರತ್ಯವನ್ನು ನಂಬಿದ್ದವ ಇಂಗ್ಲೆಂಡಲ್ಲಿ ಒಂದು ಹುಡುಗೀನ್ನ ಪ್ರೀತಿಸಿದ, ಪ್ರೀತಿಸಿ ದಾಗಲೂ ಈ ಹುಡುಗೀನ್ನ ತಾನೆಂದೂ ಮದುವೆಯಾಗಲಾರೆ ಎಂದು ರಮೇಶನಿಗೆ ಗೊತ್ತಿತ್ತೆಂದು ಜಗನ್ನಾಥನಿಗೆ ಗೊತ್ತು. ಅವಳನ್ನು ಬಿಟ್ಟು ಹಿಂದಿರುಗುವಾಗ ಪಾಶ್ಚಾತ್ಯ ಸಾಹಿತ್ಯದಲ್ಲಿ ಅವನು ಮೆಚ್ಚಿಕೊಂಡಿದ್ದ ಪ್ರೇಮದುರಂತದ ದುಃಖವನ್ನು ಸವಿದ. ಇಂಡಿಯಾಕ್ಕೆ ಬಂದು ಪಾಶ್ಚಾತ್ಯರ ಸ್ವಚ್ಛತೆ, ಆನೆಸ್ಟಿ, ಪೊಲಿಟಿಕಲ್ ಮೆಚೂರಿಟಿ ಹೊಗಳುತ್ತ ಹೊಯ್ಸಳ ಕರ್ಣಾಟಕದವರಾಗಿದ್ದ ಎಕ್ಸಿಕ್ಯೂಟಿವ್ ಎಂಜಿನಿಯರ್ ಒಬ್ಬರಿಗೆ ಅಚ್ಚುಮೆಚ್ಚಾದ. ನಾಲ್ಕಾರು ಹೆಣ್ಣುಗಳನ್ನು ಇಂಟರ್‌ವ್ಯೂ ಮಾಡಿದ ನಂತರ ಅಷ್ಟೇನೂ ಸುಂದರಳಲ್ಲದಿದ್ದ ಅವರ ಮಗಳನ್ನೇ ಮದುವೆಯಾದ. ಆಮಂತ್ರಣ ಪತ್ರಿಕೆಯಲ್ಲಿ ತನ್ನ ಹೆಸರಿನ ಮುಂದೆ M.A. (London) ಹಚ್ಚಿಕೊಂಡ.

ರಮೇಶಚಂದ್ರ ಮುದ್ದಾದ ಅಕ್ಷರದಲ್ಲಿ ಹೀಗೆ ಬರೆದಿದ್ದ : ಭಾರತೀಪುರದಲ್ಲಿ ಎಕ್ಸಿಸ್ಟೆನ್ಸಿಯಲಿಸ್ಟ್ ಸೋಷಲಿಸಂ ಅನ್ನು ತರುವ

ನಿಮ್ಮ ಸಾಹಸ ಮೆಚ್ಚುತ್ತೇನೆ. ಆದರೆ ಸೋಷಿಯಾಲಿಜಿಸ್ಟ್ ಆಗಿ ನನಗೆ ನಿಮ್ಮ ಪ್ರಯತ್ನ ಸಫಲವಾಗಲಾರದು ಅನ್ನಿಸತ್ತೆ. ಈ ಹರಿಜನರ ಸಮಸ್ಯೆ ಅರ್ಬನೈಸೇಶನ್ನಿನ ಮುಖಾಂತರ ಕ್ರಮೇಣ ತೀರ್ಮಾನವಾಗಬೇಕೇ ಹೊರತು ನಿಮ್ಮ ರೀತಿಯ ಕಾರ್ಯಕ್ರಮದ ಮೂಲಕವಲ್ಲ.ಈಗ ಅಧಿಕಾರದಲ್ಲಿರುವ ನವಬ್ರಾಹ್ಮಣರಾದ ಒಕ್ಕಲಿಗರು ಲಿಂಗಾಯತರನ್ನು ವಿರೋಧಿಸುವುದೇ ಬುಧ್ಧಿಜೀವಿಗಳಾದ ನಿಮ್ಮಂಥವರು ಮಾಡಬೇಕಾದ್ದು. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಲಿಂಗಾಯತರು ಒಕ್ಕಲಿಗರು ವೈಸ್ ಚಾನ್ಸಲರ್ ಪದವಿಗಾಗಿ ಪರಸ್ಪರ ಹೋರಾಡುತ್ತ ಬೌದ್ಧಿಕ ಕೆಲಸದ ಪಾವಿತ್ರ್ಯವನ್ನು ಹೇಗೆ ಕಡೆಗಣಿಸುತ್ತಿದ್ದಾರೆಂಬುದು ನಿಮಗೆ ತಿಳಿದಿರಲಿಕ್ಕಿಲ್ಲ. ಮೈಸೂರಲ್ಲೂ ಅಷ್ಟೆ, ಮೆರಿಟ್‌ಗೆ ಜಾಗವಿದ್ದಲ್ಲಿ ನಾನೇ ಪ್ರೊಫೆಸರ್ ಆಗಬೇಕಿತ್ತು. ಆದರೆ... ಇತ್ಯಾದಿ.

ಇನ್ನೊಂದುಕಾಗದ ಇಂಗ್ಲೆಂಡಿಂದ ಚಂದ್ರಶೇಖರ್‌ಬರೆದದ್ದು. ತನ್ನಲ್ಲಿ ತೀವ್ರವಾದ ಕಸಿವಿಸಿಯನ್ನುಂಟುಮಾಡಿದ ಆ ಕಾಗದವನ್ನು ಜಗನ್ನಾಥ ಮತ್ತೆ ಮತ್ತೆ ಓದಿದ.

ಪ್ರಿಯ ಜಗನ್,

ಮಾರ್ಗರೆಟ್‌ಎಲ್ಲ ತಿಳಿಸಿದಳು. ಬೆಂಗಳೂರಿಂದ ನನ್ನ ತಮ್ಮನೂ ಬರೆದಿದ್ದ. ಎಲ್ಲರಿಗಿಂತ ಪ್ರಾಯಶಃ ನಾನೇ ನಿಮ್ಮನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದೇನೆ. ಹಗಲುಗನಸಿನಲ್ಲಿ ಬೊಜ್ಜಾದ ನಿಮ್ಮ ಆದರ್ಶವಾದವನ್ನು ಹೀಗೆ ಕರಗಿಸಿಕೊಂಡು ಅಥ್ಲಟಿಕ್ ಫಿಗರ್ ಪಡೆಯಲು ನೀವು ಪ್ರಯತ್ನಿಸುತ್ತಿದ್ದೀರಿ. ನಿಮಗೆ ಸಫರ್ ಮಾಡುವುದು ಬೇಕಾಗಿದೆ. ನಿಮ್ಮ ದುರಂತವೆಂದರೆ ಈಗಲೂ ನೀವು ಮತ್ತೊಂದು ಬಗೆಯ ಹೀರೋ ಆಗುತ್ತೀರಿ – ಅಷ್ಟೆ. ಯಾಕೆಂದರೆ ನೀವು ಹೊಲೆಯರನ್ನ ಖಂಡಿತ ಪ್ರೀತಿಸಲಾರಿರಿ. ಆತ್ಮರತವಾದ ನಿಮ್ಮ ವ್ಯಕ್ತಿತ್ವಕ್ಕೆ ನಿಜವಾದ ಪ್ರೇಮ ಸಾಧ್ಯವಿಲ್ಲ. ಅಸೂಯೆಯಲ್ಲಿ ಚಡಪಡಿಸುವ ನನಗೆ ಮನುಷ್ಯನ ದೌರ್ಬಲ್ಯದ ಮುಖಾಂತರ ತಿಳಿಯುವಷ್ಟು ಆಳವಾದ ಸತ್ಯಗಳು ಉದಾತ್ತತೆಯಲ್ಲಿ ಬದುಕುವ ನಿಮಗೆ ತಿಳಿಯಲಾರವು. ಒಂದು ಬಗೆಯ ಪಾಂಪಾಸಿಟಿಯಿಂದ ಇನ್ನೊಂದು ಬಗೆಯ ಪಾಂಪಾಸಿಟಿಗೆ ನೀವು ಹೊರಳಿಕೊಳ್ಳುತ್ತಿದ್ದೀರಿ. ಆದರೆ ನೀವು ಠೊಳ್ಳೆಂದು ನನಗೆ ಗೊತ್ತಿದ್ದರೂ ನಿಮ್ಮನ್ನು ಕಂಡರೆ ನನಗೆ ಯಾಕಷ್ಟು ಅಸೂಯೆ ಪ್ರೀತಿ ದ್ವೇಷ ತುಂಬಿದೆಯೆಂಬುದೇ ಆಶ್ಚರ್ಯ. ಜೀವನದಲ್ಲಿ ಒಟ್ಟು ಪುಣ್ಯಶಾಲಿಗಳಾದ ನಿಮ್ಮಂಥವರನ್ನು ಕಂಡು ಕರುಬುವುದರಲ್ಲೆ ಜೀವಂತವಾಗಬೇಕಾದ ದುರಂತ ನನ್ನದು. ನಾನಲ್ಲದೆ ಬೇರೆ ಯಾರು ಇಷ್ಟು ನಿಷ್ಠುರವಾದ ಸತ್ಯವನ್ನು ನಿಮಗೆ ಹೇಳಲಾರರೆಂದು ಗೊತ್ತಿರುವುದರಿಂದ  ನಿಮ್ಮ ಲಿಬರಲ್ ನಾಟಕವನ್ನು ಖಂಡಿಸಿ ಈ ಕಾಗದ ಬರೆಯುತ್ತಿದ್ದೇನೆ. ಮಾರ್ಗರೆಟ್ ನಾನು ಹೇಳೋದನ್ನ ಒಪ್ಪಲ್ಲ ಆದರೂ ಒಳಗಿನಿಂದ ಅವಳಿಗೆ ನಾನು ಹೇಳೋದು ನಿಜವೆನ್ನಿಸತ್ತೆಂತ ನನಗೆ ಗೊತ್ತು.

ಪ್ರೀತಿಯಿಂದ ನಿಮ್ಮವ
ಚಂದ್ರಶೇಖರ

ಜಗನ್ನಾಥ ಚಂದ್ರಶೇಖರನ ಕಾಗದವನ್ನು ಮರೆಯಲೆಂದು ನೀಲಕಂಠಸ್ವಾಮಿಯನ್ನು ಹುಡುಕಿಕೊಂಡು ಹೋದ. ಹೊಲೆಯರ

ಜೊತೆ ಮೈ.ಸೋ.ಪ. ದ ಸೆಕ್ರೆಟರಿಯವರು ಮೀಟಿಂಗ್ ಮಾಡಿದರು ಎಂಬ ವರದಿಯನ್ನು ಪೇಪರಿಗೆ ಕಳಿಸಲು ಅವನು ಪ್ರತಿ ಎತ್ತುತ್ತಿದ್ದ. ಜಗನ್ನಾಥನನ್ನು ಕಂಡೊಡನೆ, 'ಇಲ್ಲಿನ ಎಂ.ಎಲ್.ಎ. ಅನ್ನು ಖಂಡಿಸಿ ಒಂದು ಹೇಳಿಕೆ ನೀವು ಕೊಡಬೇಕು' ಎಂದ.

'ಕೊಡೋಣ, ಆದರೆ ಅವರನ್ನ ಮೊದಲು ನೋಡಿ ಮಾತಾಡೋದು ಒಳ್ಳೇದಲ್ವೆ?'

'ಗುರಪ್ಪಗೌಡರು ಮಹಾ ಖದೀಮರು. ಪೇಚಿಗೆ ಸಿಕ್ಕಿಹಾಕ್ಕೋಬಾರದೂಂತ ಬೆಂಗಳೂರಿಗೆ ಹೋಗಿ ಕೂತಿದಾರಂತೆ.'

ಜಗನ್ನಾಥನಿಗೆ ಮಾತು ಬೇಡವಾಗಿತ್ತು. ಚಂದ್ರಶೇಖರನ ಕಾಗದದಲ್ಲಿ ಅನೇಕ ಸುಳ್ಳುಗಳಿದ್ದರೂ ಅವನ ಒಂದೊಂದು ಮಾತು ಭರ್ಜಿಯಂತೆ ಅವನನ್ನು ಇರಿದಿತ್ತು. ನೀಲಕಂಠಸ್ವಾಮಿ, ರಂಗರಾವ್‌ರನ್ನು ಕರೆದುಕೊಂಡು ಒಳಗೆ ಹೋಗಿ ಅವರ ಜೊತೆ ಕಾಫಿ ಕುಡಿದು, 'ಸ್ವಲ್ಪ ಕೆಲಸವಿದೆ. ಮುಗಿಸಿ ಬರುತ್ತೇನೆಂದು' ರಾಯರನ್ನು ಹುಡುಕಿಕೊಂಡು ಹೊರಟ. ಬೆಳಗಿನಿಂದ ರಾಯರು ಬಂದಿರಲಿಲ್ಲ. ಆದರೆ ಅವರ ಹೆಂಡತಿ ಮತ್ತು ಮಗಳು ತನ್ನ ಮನೆಯಲ್ಲೆ ಚಿಕ್ಕಿಗೆ ನೆರವಾಗಿ ಇದ್ದರು.

ಜಗನ್ನಾಥ ಊರಿನ ಬೀದಿ ತಲ್ಪುತ್ತಿದ್ದಂತೆ ಬಾವುಟ ಹಿಡಿದು ಐದಾರು ಜನ ಬರುತ್ತಿರುವುದು ಕಾಣಿಸಿತು. ಬಾವುಟ ನೋಡಿ ಅವರು ನೀಲಕಂಠಸ್ವಾಮಿಯ ಕಡೆಯವರೆಂದು ಊಹಿಸಿದ. ನಿಂತು ಅವರಿಗೆ ತನ್ನ ಮನೆ ತೋರಿಸಿ, 'ಹೋಗಿ ವಿಶ್ರಮಿಸಿಕೊಳ್ಳಿ. ಇನ್ನೊಂದು ಘಂಟೆಯಲ್ಲಿ ನಾನು ಬಂದುಬಿಡುತ್ತೇನೆ' ಎಂದ. ಯುವಕರು ನಗುತ್ತ ಖುಷಿಯಾಗಿದ್ದರು : ಉತ್ಸವಕ್ಕೊ, ಪಿಕ್‌ನಿಕ್ಕಿಗು ಬಂದವರಂತೆ ಅವರು ಕಂರು. 'ಆಗಲಿ ಕಾಮ್ರೇಡ್' ಎಂದು ಅವರಲ್ಲೊಬ್ಬ ಯುವಕ ಸಲಿಗೆಯಲ್ಲಿ ತನಗೆ ಹೇಳಿದ್ದು ಕೇಳಿ ಜಗನ್ನಾಥನಿಗೆ ಮುಜುಗರವಾಯಿತು. ಆದರೆ ಅದನ್ನು ತೋರಿಸಿಕೊಳ್ಳದೆ ಸೀದ ರಾಯರ ಅಂಗಡಿ ಕಡೆ ಜಗನ್ನಾಥ ನಡೆದ.

ಪೇಟೆಯ ಬೀದಿಗಳು ಜಾತ್ರೆಗೆಂದು ಸಿಂಗರಿಸಿಕೊಂಡಿದ್ದವು. ಯಾರೂ ತನ್ನನ್ನು ಮಾತಾಡಿಸಲಿಲ್ಲ. ಹುಟ್ಟಿದೂರಿನ ಬೀದಿಗಳಿಂದ ಹೀಗೆ ತಿರಸ್ಕೃತನಾದೆನೆಂದು ಜಗನ್ನಾಥನಿಗೆ ಸಂಕಟವಾಯಿತು. ರಾಯರು ಅಂಗಡಿ ಬಾಗಿಲು ಮುಚ್ಚಿ ತನ್ನ ಮನೆಗೇ ಹೊರಡಲು ತಯ್ಯಾರಾಗಿದ್ದರು. ಅವರು ಖುಷಿಯಾಗಿದ್ದಿದ್ದಕ್ಕೆ ಕಾರಣ ಸರ್ವೋದಯದ ಮಾಗಡಿ ಅನಂತಕೃಷ್ಣ ಸಾಯಂಕಾಲ ಬರುತ್ತಾರೆಂಬ ಸುದ್ದಿ ತಿಳಿದದ್ದು. ಸತ್ಯಾಗ್ರಹದಲ್ಲಿ ಜೈಲಿನಲ್ಲಿ ಜೊತೆಗಾರನಾಗಿದ್ದ ಆಪ್ತ ಸ್ನೇಹಿತನನ್ನು ನೋಡುವ ಆತುರದಲ್ಲಿದ್ದರು. ದಾರಿಯ ಮೇಲೆ ನಡೆದುಬರುವಾಗ ತುಂಬ ಸ್ವಾರಸ್ಯವಾಗಿ ಆತನ ಕಥೆಯನ್ನು ಜಗನ್ನಾಥನಿಗೆ ಹೇಳಿದರು. ಚಂದ್ರಶೇಖರನ ಕಾಗದದಿಂದ ವ್ಯಗ್ರವಾಗಿದ್ದ ಜಗನ್ನಾಥ ರಾಯರನ್ನು ಯಾಕೆ ತಾನು ಹೀಗೆ ಹುಡುಕಿಕೊಂಡು ಬಂದೆನೆಂದು ಆಶ್ಚರ್ಯಪಡುತ್ತ ಅರೆ ಮನಸ್ಸಿನಿಂದ ಕಥೆ ಕೇಳಿಸಿಕೊಳ್ಳಲು ಪ್ರಾರಂಭಿಸಿದ. ಆದರೆ ಆ ಕಥೆಯ ನಡುವೆ ರಾಯರು ಹೇಳುವುದರಲ್ಲಿ ತನ್ಮಯನಾದ.

ಅನಂತಕೃಷ್ಣ ನನಗಿಂತ ಚಿಕ್ಕವ. ಅಷ್ಟೇನೂ ಅಲ್ಲ – ನಾಲ್ಕೈದು ವರ್ಷ ಇರಬಹುದು. ನನ್ನ ಹತ್ರ ಅವ ಯಾವತ್ತೂ ಗುಟ್ಟು ಮಾಡಲ್ಲ. ಅವನ ಜೀವನದ ಒಂದು ದುರಂತ ಕತೆ ಹೇಳ್ತೀನಿ ಕೇಳು. ನಮ್ಮಂಥ ಆದರ್ಶವಾದಿಗಳಿಗೆ ಅದರಲ್ಲೊಂದು

ಪಾಠವಿದೆ.

ಅನಂತಕೃಷ್ಣ ತುಂಬ ಚಿಕ್ಕವನಾಗಿದ್ದಾಗಲೇ ಸ್ವಾತಂತ್ರ್ಯ ಚಳುವಳೀಗೆ ಸೇರಿಕೊಂಡು ಇಂಟರ್‌ಮೀಡಿಯೆಟ್ ಓದ್ತ ಇದ್ದವ್ನು ಜೈಲಿಗೆ ಹೋದ. ಈ ವಿದ್ಯಾಭ್ಯಾಸ ನಮ್ಮನ್ನ ಗುಲಾಮಗಿರಿಗೆ ತಯಾರು ಮಾಡುತ್ತೆ, ನಿಜವಾದ ವಿದ್ಯಾರ್ಜನೆ ಕಾಲೇಜಲ್ಲಿ ಸಾಧ್ಯವಿಲ್ಲ ಅಂತ ಸಾವಿರಾರು ಯುವಕರಿಗೆ ಅನ್ನಿಸಿದ ಹಾಗೆ ಅವನಿಗೂ ಅನ್ನಿಸಿತ್ತು. ಸಾಹಿತ್ಯದಲ್ಲಿ ತುಂಬ ಒಳ್ಳೆ ವಿದ್ಯಾರ್ಥಿ. ಇವತ್ತಿಗೂ ಎಷ್ಟು ಚೆನ್ನಾಗಿ ಅವ ಬರೀತಾನೆ ಮಾತಾಡ್ತಾನೆ ಅಂತೀಯ ? ಮನೇವ್ರು ಕಂದಾಚಾರದ ಜನ. ಅಪ್ಪ ಶಿರಸ್ತೇದಾರ. ಅನಂತಕೃಷ್ಣನ ತಾಯಿ ಸತ್ತಮೇಲೆ ಎರಡನೇ ಸಂಬಂಧ ಮಾಡಿಕೊಂಡಿದ್ದ. ಚಿಕ್ಕ ತಾಯಿ ಪರಮ ಕ್ರೂರಿ.

ಸರ್ಕಾರಾನ್ನ ನಿಂದಿಸೋ ಮಗ ಮನೇಲಿರೋದು ನೌಕರಿ ಮಡೋ ಅಪ್ಪನಿಗೆ ಬೇಡಿತ್ತು. ಬೆಳೀತಿದ್ದ ಹೆಣ್ಣು ಮಕ್ಕಳಿದ್ದ ಮನೆಯಾದ್ದರಿಂದ ಚಿಕ್ಕತಾಯಿಗೆ ಜಾತಿಯಲ್ಲದ ಜಾತೀಲಿ ಊಟ ಮಾಡೋ ಮಗನೊಬ್ಬನನ್ನ ಮನೇಲಿ ಇರಿಸಿಕೊಂಡು ಊರೆಲ್ಲ ಮಾತಾಡೋದು ಬೇಡಿತ್ತು. ಒಟ್ಟಿನಲ್ಲಿ ಪ್ರೀತಿ ಮಮತೆ ಕಾಣದ ಸುಡುಗಾಡು ಮನೆ. ಹೀಗಿರೋವಾಗ ಸ್ವಾತಂತ್ರ್ಯ ಚಳುವಳೀನೂ ಪ್ರಾಯಶಃ ಒಂದು ನೆವವಾಗಿರಬೇಕು – ಅನಂತಕೃಷ್ಣನ ಹಾಗೆ ಬಹಳ ಜನ ಹುಡುಗರಿಗೆ. ಮಗ ಮನೆ ಬಿಟ್ಟ.

ಸ್ವಾತಂತ್ರ್ಯ ಚಳುವಳಿಯ ಆ ದಿನಗಳಲ್ಲಿ ಹೊಟ್ಟೆಪಾಡು ಹೊರೆಯೋದು ಅಂಥದ್ದೊಂದು ಸಮಸ್ಯೆಯಾಗಿರಲಿಲ್ಲ. ಊರಿಂದ ಊರಿಗೆ ಪ್ರಯಾಣ. ಠಿಕಾಣಿ ಬಿಟ್ಟಲ್ಲಿ ಊಟ. ಭಾಷಣ, ಭಾಷಣ ಅಂದ್ರೆ ಎಂಥ ಭಾಷಣ ಅನಂತಕೃಷ್ಣಂದು !

ಹೀಗಾಗಿ ಕಾಂಗ್ರೆಸ್ ನಾಯಕರಿಗೆಲ್ಲ ಅನಂತಕೃಷ್ಣ ಪ್ರಿಯನಾದ ವ್ಯಕ್ತಿಯಾದ. ನಿದ್ದೆಯಿಂದ ಎಬ್ಬಿಸಿ ಭಾಷಣ ಮಾಡೋ ಅಂದ್ರೆ ನಿರರ್ಗಳವಾಗಿ ಶುರುಮಾಡಿಬಿಡ್ತಿದ್ದ. ಅನಂತಕೃಷ್ಣ ಈ ಅಮಲಿನಲ್ಲಿ ಮೈಮರೆತು ದೇಶಾದ್ಯಂತ ಓಡಾಡಿದ. ಮನೆ ಸಂಪರ್ಕ ಸಂಪೂರ್ಣ ಕಳಕೊಂಡ. ಅವನೊಬ್ಬ ಖಾಸಗಿ ಮನುಷ್ಯ ಅನ್ನೋದೇ ಪತ್ತೆಗೆ ಸಿಗದ ಹಾಗೆ ಸದಾ ಜನರ ಮಧ್ಯೆ ಬದುಕಿದ. ಮಾತಿಗಾಗಿ ಜನ ತನ್ನ ಹತ್ರ ಬರ್ತಾರೆ. ತನ್ನನ್ನ ಅನುಸರಿಸ್ತಾರೆ, ಹೊಗಳ್ತಾರೆ ಅನ್ನೋದನ್ನ ತಿಳಿದು ಯಾರು ಕರದ್ರೆ ಅವರಿಗೆ ಪ್ರಚಾರ ಮಾಡೋ ಯಂತ್ರವಾದ. ಪುಷ್ಕಳವಾದ ಪದಗುಚ್ಛಗಳಲ್ಲದೆ ಅವನೊಳ್ಗೆ ಇನ್ನೇನೂ ಇಲ್ವೇನೋ ಅಂತ ನನಗೆ ಅನೇಕ ಸಾರಿ ಅನ್ನಿದ್ದುಂಟು.

ಅನಂತಕೃಷ್ಣ ನೋಡಲು ಆಕರ್ಷಕ ವ್ಯಕ್ತಿ. ತಾನಾಡ್ತಿದ್ದ ಎಲ್ಲ ಮಾತುಗಳನ್ನೂ ನಂಬುತ್ತಿದ್ದ ಆತ ಅದರ್ಶದ ಅಮಲಿನಲ್ಲಿ ಒಮ್ಮೆ ಗಾಂಧೀಜಿ ಆಶ್ರಮಕ್ಕೆ ಹೋಗಿದ್ದ. ಅಲ್ಲಿ ಗಾಂಧೀಜಿಗೆ ಪ್ರಿಯಶಿಷ್ಯನಾದ. ಮಲಗಿದಾಗ ಅವರಿಗೆ ಬೀಸಣಿಗೆ ಬೀಸೋದು, ಜೊತೆಗೆ ವಾಕ್ ಹೋಗೋದು, 'ಹರಿಜನ'ದಲ್ಲಿ ಅವರು ಬರೆದದ್ದನ್ನು ಕನ್ನಡಕ್ಕೆ ಮಾಡೋದು; ಅನಂತಕೃಷ್ಣ ಏನೇ ಮಾಡಲಿ ಅದರಲ್ಲೊಂದು ಸ್ಟೈಲ್ ಇರ್ತಿತ್ತು. ಗಾಂಧಿ ಆಶ್ರಮದಲ್ಲಿದ್ದಾಗ ಅನಂತಕೃಷ್ಣ ಬಾವಿಗೆ ಬಿದ್ದದ್ದು.

ಆಶ್ರಮದಲ್ಲೊಂದು ನಾಯಿಡು ಜಾತಿ ಹುಡುಗಿ – ಅನಾಥ ಹುಡುಗಿ. ಕಟ್ಟುನಿಟ್ಟಾಗಿ ಬೆಳೆದವಳು. ಅನಂತಕೃಷ್ಣನಿಗೂ ಅವಳಿಗೂ ವಾಲಂಟಿಯರ್‌ಕೆಲಸ ಮಾಡ್ತ ಪರಿಚಯವಾಯ್ತು. ಪರಿಚಯ ಸ್ನೇಹವಾಯ್ತು. ತನ್ನ ಆದರ್ಶವಾದವನ್ನ ಜಗತ್ತಿಗೆ ಪ್ರೂವ್ ಮಾಡಿ ತೋರಿಸಲಿಕ್ಕೊಂದು ಛಾನ್ಸ್ ಬೇಕೂಂತ ಅನಂತಕೃಷ್ಣ ಕಾದಿದ್ದ. ಸ್ವಯಂಸೇವಕಿಯಾದ ತನಗೆ ಒಬ್ಬ ಸ್ವಯಂ

ಸೇವಕ ಜೊತೇಗಿದ್ರೆ ಒಳ್ಳೇದಲ್ವೆ ಅಂತ ಅವಳು ಕಾದಿದ್ಳು. ಅಂತರ್ಜಾತೀಯ ವಿವಾಹಾನ್ನೇ ಮಾಡಿಕೋಬೇಕೂಂತ ಹಠತೊಟ್ಟಿದ್ದ ಅನಂತಕೃಷ್ಣ ಅವಳನ್ನ ಮದುವೆಯಾಗ್ತೀಯ ಅಂತ ಕೇಳ್ದ. ಮಹಾತ್ಮಜಿಯನ್ನು ಕೇಳೋಣ ಅಂತ ಅವಳು ಹೇಳಿದ್ಳು. ಗಾಂಧೀಜಿ ವಿಷಯ ಗೊತ್ತಲ್ಲ ? ಕಾಮಕ್ಕಾಗಿ ಮದುವೆ ಆಗಬಾರ್ದು, ಮಗುವಿಗಾಗಿ ಮಾತ್ರ ಹೆಂಡತೀನ್ನ ಕೂಡಬೇಕು, ಇಬ್ಬರೂ ಒಟ್ಟಾಗಿ ಬ್ರಹ್ಮಚರ್ಯ ಪಾಲಿಸಬೇಕು ಇತ್ಯಾದಿ ಬೋಧಿಸಿ ಅನಂತಕೃಷ್ಣನಿಗೂ ಅವಳಿಗೂ ಒಂದು ದಿನ ಸಾಮೂಹಿಕ ಮದುವೆ ಜೊತೆ ಲಗ್ನ ಅಂತ ಗಾಂಧೀಜಿ ನಿಶ್ಚಯ ಮಾಡಿದ್ರು.

ಇವತ್ತು ಬೆಳಿಗ್ಗೆ ಮದುವೆಯಾಗಬೇಕು. ಮದುವೆಗೆ ಒಂದು ಘಂಟೆ ಮುಂಚೆ ಒಂದು ಮರದ ಕೆಳಗೆ ಅನಂತಕೃಷ್ಣನೂ ಆ ನಾಯ್ಡು ಹುಡುಗೀನೂ ನಿಂತಿದಾರೆ. ಅವಳು ಮರಕ್ಕೆ ಒರಗಿ ನಿಂತು ಇಬ್ಬರೂ ಒಟ್ಟಾಗಿ ಹೇಗೆ ದೇಶಸೇವೆ ಮಾಡಬೇಕು ಅನ್ನೋದನ್ನ ವಿವರಿಸ್ತಿದಾಳೆ. ಈ ತನಕ ಅವಳು ಅವನ್ನ ಮುಟ್ಟಿಲ್ಲ. ಅವನು ಅವಳನ್ನ ಮುಟ್ಟಿಲ್ಲ. ಬೇಕೂಂತ ಅನ್ನಿಸಿದ್ದೂ ಇಲ್ಲ. ಹೀಗೆ ಮಾತಾಡಿದ್ದದ್ದೇ ಹೊರ್ತು ಇನ್ನು ಏನೂ ಇಬ್ಬರ ನಡುವೆ ಜರುಗಿದ್ದಿಲ್ಲ.

ಇನ್ನೇನು ಮದುವೆ ಮುಹೂರ್ತ ಸಮೀಪಿಸ್ತ ಇದೆ. ಇಬ್ಬರೂ ಒರಟೊರಟಾದ ಹೊಸ ಖಾದಿಬಟ್ಟೆ ತೊಟ್ಟು ನಿಂತಿದಾರೆ – ಖೈದಿಗಳ ಹಾಗೆ. ಅವಳು ತನ್ನ ಚಪ್ಪಟೆ ಎದೇನ್ನ ಕುಪ್ಪಸದಿಂದ ಬಿದಿಗು ಇನ್ನಷ್ಟು ಚಪ್ಪಟೆ ಮಾಡಿಕೊಂಡಿದಾಳೆ. ಅನಂತಕೃಷ್ಣ ಮುಖಾನ್ನ ಬಹಳ ಗಂಭೀರಮಾಡಿಕೊಂಡು ಅವಳ ಮಾತು ಕೇಳ್ತ ನಿಂತಿದಾನೆ. ಯಾವ ಮಾತೂ ಹೊಸತಲ್ಲ ; ಯಾಕೇಂದ್ರೆ ಅವನೇ ಈ ತನಕ ಮಾತಾಡ್ತ ಬಂದ ಶಬ್ದಗಳು ಅವು.

ಆಯ್ತು ? ಅನಂತಕೃಷ್ಣ ಒಂದು ಕಾಲದಲ್ಲಿ ಬಹಳ ರಸಿಕ. ಮುದ್ದಣ ಮನೋರಮ ಸಂವಾದ, ಕಾಳಿದಾಸನ ಶಾಕುಂತಲ ಕಂಠಪಾಠ ಮಾಡಿದ್ದವ. ಹುಡುಗಿ ಆಡ್ತ ಇದ್ದ ಗಂಭೀರವಾದ ಮಾತು ಕೇಳ್ತ ಕೇಳ್ತ ಅವನ ಗಮನವೆಲ್ಲ ಅವಳ ತುಸು ಉಬ್ಬಿದ ಹಲ್ಲು, ಉದ್ದ ಮೂಗು, ಚಪ್ಪಟೆ ಎದೆ, ಸಣ್ಣ ಸಣ್ಣ ಆನೆಕಣ್ಣುಗಳು, ಕಿರಿದಾದ ಹಣೆಗಳ ಮೇಲೆ ಹೋಯ್ತು. ಅವಳು ಆಡ್ತಾನೆ ಆಡ್ತಾನೇ ಇದ್ದ ಚಿರಪರಿಚಿತ ಮಾತುಗಳೆಲ್ಲ ಜೇನ್ನೊಣಗಳ ಹಾಗೆ ಝೇಂಕರಿಸಲಿಕ್ಕೆ ಪ್ರಾರಂಭಿಸಿದುವು. ಇನ್ನೆಷ್ಟೋ ವರ್ಷಗಳ ತನಕ ಇದೇ ಹಣೆ ಇದೇ ಹಲ್ಲು ಇದೇ ಮೂಗು ಇದೇ ಬಾಯಿ ಇದೇ ಭಂಗಿಯಲ್ಲಿ ಇದೇ ಮಾತುಗಳನ್ನು ಆಡ್ತಾನೇ ಇರ್ತಾವಲ್ಲ ಅಂತ ಅನಂತಕೃಷ್ಣನಿಗೆ ಭಯವಾಯ್ತು. ಇವಳು ಕುರೂಪಿ, ಇವಳನ್ನ ಮದುವೆಯಾಗೋದು ಸಾಧ್ಯವೇ ಇಲ್ಲ ಅಂತ ಮನಸ್ಸು ಚೀರಿತು. ಅವಳ ಜೊತೆ ಸಂಗವನ್ನು ಕಲ್ಪಿಸಿಕೊಂಡು ಮೈ ಹೇಸಿಗೆಯಿಂದ ಕಂಪಿಸ್ತು. ಇಲ್ಲಿಂದ ಈ ಕ್ಷಣ ಓಡಿ ಬಚಾವಾಗಬೇಕು ಅನ್ನಿಸ್ತು. ಆದ್ರೆ ಕಾಲು ಕದಲದೆ ನಿಂತಿತ್ತು. ಕಣ್ಣುಗಳು ಅವಳ ಹಣೆ ಮೂಗು ಹಲ್ಲುಗಳಲ್ಲಿ ಕೀಳಲಾರದೆ ನೆಟ್ಟಿದ್ದುವು. ಓಡಿಹೋಗಬೇಕು ಎನ್ನೋ ಆಸೆಯಷ್ಟೆ ಪ್ರಬಲವಾಗಿ ನಾನೂ ಏನೂ ಮಾಡಲಾರೆ ಎನ್ನೋ ನಿಸ್ಸಹಾಯಕತೇನೂ ಏರ್ತ ಹೋಯ್ತು.

'ಏನು ಹೀಗೆ ಮಂಕಾಗಿ ನೋಡ್ತಾ ಇದೀರಿ ?' ಎಂದು ಅವಳು ಮಾತು ನಿಲ್ಲಿಸಿ ಗದರಿಸಿದಳು. ಅನಂತಕೃಷ್ಣ ಬಿಳಿಚಿಕೊಂಡ ಮುಖಾನ್ನ ಅಲ್ಲಾಡಿಸಿದ. ಮಾತಾಡಲು ಉಗುಳು ನುಂಗು ಪ್ರಯತ್ನಿಸಿದ. 'ಶ್ರೀರಂಗಪಟ್ಟಣದಲ್ಲಿ ಒಂದು ಆಶ್ರಮ ಸ್ಥಾಪಿಸಬೇಕು. ಅನಾಥ ಮಕ್ಕಳನ್ನ ಸಾಕಬೇಕು....' ಅವಳು ಮಾತಾಡ್ತಾನೇ ಇದ್ದಳು.

ಮದುವೆಯಾಯ್ತು, ಮಗುವಾಯ್ತು. ಅನಂತಕೃಷ್ಣ ಒಗ್ಗಿ ಕೊರಗಿ ಕುಗ್ಗಿದ. ಈಗಲೂ ಹೇಳ್ತಾನೆ – 'ನೋಡೋ ಶ್ರೀಪತಿ, ನನ್ನ ಇಡೀ ಜೀವನದಲ್ಲಿ ನನಗೆ ಅನ್ನಿಸಿದ ನಿಜವಾದ ಒಂದು ಭಾವನೆ ಅಂದ್ರೆ ಅವಳು ಕುರೂಪಿ ಅನ್ನೋದು. ಆದರೆ ನಾನಂಟಿಕೊಂಡ ತತ್ವಾನ್ನ ಮೀರಲಾರದೆ ಹೋದ'.

ಹೇಗೆ ಅವನ ಎಲ್ಲ ಭಾವನೆಗಳೂ ಕೃತಕವಾಗ್ತಾ ಹೋದವು. ಅವನಿಗೆ ಖಾರಾಂದ್ರೆ ಇಷ್ಟ; ಪುಳಿಯೋಗರೆ ಬಿಸಿಬೇಳೆಬಾತ್ ಅಂದ್ರೆ ಪ್ರಾಣ. ಆದರೆ ಅವಳು ಅಡಿಗೇಗೆ ಖಾರಹಾಕಲ್ಲ. ತರಕಾರಿ ಬೇಯ್ಸಿಟ್ಟು ತಿನ್ನಿ ಅಂತಾಳೆ. ಕಾಫಿ ಟೀ ಮನೇಲಿ ಮಾಡಲ್ಲ. ಹೇಗೋ ಒಂದು ವರ್ಷ ಅನಂತಕೃಷ್ಣ ಸಹಿಸಿಕೊಂಡು ಹೆಂಡ್ತಿ ಹೇಳಿದ ಹಾಗೆ ಕೇಳಿಕೊಂಡಿದ್ದ. ಆಮೇಲಿಂದ ಕದ್ದು ಮಸಾಲೆ ತಿನ್ನಕ್ಕೆ ಶುರುಮಾಡಿದ. ಕುಡೀಲಿಕ್ಕೂ ಪ್ರಾರಂಭಿಸಿದ. ಹೆಂಡತಿ ಮನೇಂದ ಹೊರಗೆ ಹಾಕಿದಳು; ಕಾಂಗ್ರೆಸ್ ಕಛೇರಿಗೆ ಗಂಡನ ಮೇಲೆ ದೂರುಕೊಟ್ಟಳು.

ಕಾಂಗ್ರೆಸ್ ಪಕ್ಷಾನೂ ಕೂಡ ಅನಂತಕೃಷ್ಣನ್ನ ಎಷ್ಟು ಬೇಕೋ ಅಷ್ಟು ದುಡಿಸಿಕೊಂಡು ಕಬ್ಬಿನ ಸಿಪ್ಪೇ ಹಾಗೆ ಬಿಸಾಕ್ತು. ಬ್ರಾಹ್ಮಣಾಂತ ಅವನಿಗೆ ಸೀಟು ಕೊಡಲಿಲ್ಲ. ರೋಸಿ ಹೋಗಿದ್ದ ಅನಂತಕೃಷ್ಣ ಜೀವನಧಾನಿಯಾದ. ಹೆಂಡತೀ ಜೊತೆ ಇರೋಕ್ಕಿಂತ ವಿನೋಬನ ಜೊತೆ ಸುತ್ತಾಡೋದೇ ವಾಸಿ ಅಂತ ಪಾದಯಾತ್ರೆ ಮಾಡಿದ.

ಇಷ್ಟು ಹೇಳಿದ್ರೂ ಅನಂತಕೃಷ್ಣ ಬಹಳ ದೊಡ್ಡ ಮನುಷ್ಯ ಅಂತಲೇ ನನ್ನ ಭಾವನೆ. ಅವನ ಜೀವನಕ್ಕೊಂದು ವಿಷಾದದ ಛಾಯೆ ಬೆರೆತು ಈಗ ಪಕ್ವ ಆಗಿದಾನೆ. ಕುಡೀಬಹುದು; ಆದರೆ ಸರ್ವೋದಯದ ಬಗ್ಗೆ ನಿಜವಾದ ಕಳಕಳಿಂದ ಮಾತಾಡ್ತಾನೆ. ಮನುಷ್ಯಾಂದ್ರೆ ಹೀಗೆಂತ್ಲೇ ಹೇಳಕ್ಕಾಗಲ್ಲ. ಅವನ ಜೀವನದಲ್ಲಿ ಬಿರುಕಿದೆ ನಿಜ. ಆದ್ರೆ ಒಂದು ಆದರ್ಶಕ್ಕಾಗಿ ಇವತ್ತಿಗೂ ಅವ ಬದುಕ್ತ ಇದಾನೆ ಎಂಬೋದು ನಿಜ. ನನ್ನ ಹಾಗೆ ಅವ ಸೋತು ಸುಣ್ಣಾಗಿಲ್ಲ. ಹೆಣಗ್ತಾನೇ ಇದಾನೆ.'

ಚಂದ್ರಶೇಖರನ ಕಾಗದ, ಅನಂತಕೃಷ್ಣನ ಕಥೆ, ಇನ್ನೂ ತನಗೆ ಹತ್ತಿರವಾಗಲಾರದೇ ಹೋದ ಹೊಲೆಯರು. ತನ್ನ ಪಾಡಿಗೆ ತಾನಿರುವ ಭಾರತೀಪುರ, ಯಾವ ಮೂಲಭೂತ ಬದಲಾವಣೆಯೂ ಸಾಧ್ಯವಿಲ್ಲವೆನ್ನುವ ರಾಯರ ವಿವೇಕ – ಈ ಎಲ್ಲವೂ ಕೂಡಿ ಜಗನ್ನಾಥ ಮಂಕಾಗಿದ್ದ.

ಗುಡ್ಡ ಹತ್ತುತ್ತ ರಾಯರಿಗೆ ಹೇಳಿದ : 'ರಾಯರೇ ನೋಡಿ, ನಮ್ಮ awareness ಇದ್ದ ಹಾಗೆ ನಮ್ಮ being ಇಲ್ಲ. ಇದನ್ನ ಬೇಕಾದರೆ ಹಿಪೊಕ್ರಸಿ ಅನ್ನಬಹುದು. ಹೊಲೇರನ್ನ ಪ್ರೀತಿಸೋದು ನನಗಿನ್ನೂ ಸಾಧ್ಯವಾಗಿಲ್ಲ; ಆದರೆ ಈಗ ಸಾಧ್ಯವಾಗದೇ ಇರೋದೆಷ್ಟನ್ನೋ ಚರಿತ್ರೆ ಸಾಧ್ಯವಾಗಿಸತ್ತೆ ಅನ್ನೊ 'ಅರಿವು' ನನಗಿದೆ. ಆದರೂ ನನ್ನ being ನನ್ನ 'ಇರುವು' ಸತ್ಯಪ್ರಕಾಶನ್ನ ಕಂಡರೆ ಹೇಸತ್ತೆ; ಹೊಲೇರ ಹುಡುಗರ ಜೊತೆ ಕೃತಕವಾಗಿ ವರ್ತಿಸತ್ತೆ. ನಿಜ – ಇದನ್ನೆ ನಾನು ಯಾತನೆ ಅನ್ನೋದು. ಅರಿವಿಗೂ ಇರವಿಗೂ ಬಿರುಕಿರೋದು ಮನುಷ್ಯನಲ್ಲಿ ಅನಿವಾರ್ಯ. ಪ್ರಾಣಿಗೆ ಈ ಸಮಸ್ಯೇನೇ ಇಲ್ಲ. ಚರಿತ್ರೆ ನನ್ನನ್ನ ಹೀಗೆ ಸೃಷ್ಟಿಸಿ, ಇನ್ನೊಂದು ಬೇರೆ ವಾಸ್ತವಾನ್ನ ಸೃಷ್ಟಿಸೋಕೂ ಹೊಂಚು ಹಾಕ್ತ ಇರತ್ತೆ – ಈ ನನ್ನ ಮೂಲಕಾನೂ. ಆದರೆ ಅದರ ಕಾರ್ಯಕ್ಷೇತ್ರ ಇರೋದು ನನ್ನ ಅರಿವಿನಲ್ಲಿ ಎಷ್ಟೋ, ಅಷ್ಟೇ ಈ ಭಾರತೀಪುರದಲ್ಲಿ ಕೂಡ. ಚರಿತ್ರೇಲಿ ಬಿದ್ದಿರೋ ಬೀಜಗಳೆಲ್ಲ ಮೊಳಕೆ ಬಿಡೋಕೆ ಏನೇನೊ ಅವಶ್ಯವಾಗತ್ತೆ – ನಾವು ನಮ್ಮ ಸಂಕುಚಿತ ದೃಷ್ಟೀಲಿ

ತಿಳಿದಿರೋ ಈ ವಿಲ್ ಕೂಡ. ನೋಡಿ ರಾಯರೆ – ಕನ್ಸರ್ವೇಟಿವ್‌ಗೆ ಈ ಯಾತನೆ ತಿಳಿಯಲ್ಲ – ಮನುಷ್ಯ ಸ್ವಭಾವದಲ್ಲಿ ಈಗಿರೋ ನಿಜಾನ್ನ ಮಾತ್ರ ಅವ ನೋಡ್ತಾನೆ. ಆದರೆ reality ಮತ್ತು possibility – ಈ ಎರಡು ದೃಶ್ಯಾನೂ ಒಟ್ಟಿಗೇ ಕಾಣಿಸೊ ನನ್ನಂಥವರಿಗೆ ಯಾತನೆ ತಪ್ಪಿದ್ದಲ್ಲ.'

ಮಾತಾಡಲು ಪ್ರಾರಂಭಿಸಿದಾಗ ಇದ್ದ ಉತ್ಸಾಹ ಕೊನೇಲಿ ಇರಲಿಲ್ಲ. ರಾಯರಿಗೆ ಅರ್ಥವಾದರೂ ನಿಜಾಂತ ಅನ್ನಿಸಿದ ಹಾಗೆ ಕಾಣಲಿಲ್ಲ. ಈ ಮಾತುಗಳನ್ನೆಲ್ಲ ಎಷ್ಟೋ ಸಾರಿ ಆಡಿಯಾಗಿದೆ. ಭಾರತೀಪುರದ ವಾಸ್ತವ ಬದಲಾಗ್ದ ಹೊರತು, ಹೊಲೆಯರು ಸಿದ್ಧವಾಗದ ಹೊರತು, ಪಿಳ್ಳನಲ್ಲಿ ಮೊಳೀತಿರುವಂತೆ ಕಂಡದ್ದು ಭದ್ರವಾಗಿ ಊರಿಕೊಳ್ಳದ ಹೊರತು ನನ್ನ ವಿಚಾರಗಳೆಲ್ಲ ಪ್ರೇತವಾಗಿ ಉಳೀತಾವೆ.

ಊಟಕ್ಕೆ ಕೂತಾಗ ಜಗನ್ನಾಥ ಮಂಕಾಗಿದ್ದ. ಈಗ ಈ ಸಾಲಲ್ಲಿ ಊಟಕ್ಕೆ ಕೂತಿರುವ ಒಬ್ಬನನ್ನೂ ತಾನು ಪ್ರೀತಿಸಲಾರ. ನನ್ನನ್ನು ಪ್ರೀತಿಸುವ ಚಿಕ್ಕಿಯನ್ನ ಗೋಳಿಗೆ ಒಳಪಡಿಸಿದ್ದೇನೆ. ಈ ಊಟದ ಮನೆಯಲ್ಲಿ ತಾನು ಒಗ್ಗಿರುವ ಯಾರೂ ಇನ್ನು ಮುಂದೆ ಊಟ ಮಾಡರು. ಪಕ್ಕದಲ್ಲಿ ಕೂತಿದ್ದ ರಂಗರಾವ್ ಗಟ್ಟಿಯಾಗಿ ಹುಳಿಯನ್ನ ಕಲಸಿಕೊಂಡು ಇಡೀ ಕೈಯಿಂದ ಉರುಟುರುಟಾದ ಉಂಡೆ ಕಟ್ಟುತ್ತ ಬಾಯಿಗದನ್ನು ಎಸೆಯುತ್ತಿದ್ದ. ಅನ್ನದ ರಾಶಿಯನ್ನು ಬೇರ್ಪಡಿಸದೆ ಹೊಂಡ ಮಾಡಿ ಅದಕ್ಕೆ ಒಂದೇ ಒಂದು ಸೌಟು ಹುಳಿಯನ್ನು ಹಾಕಿಸಿಕೊಂಡು ಪುಡಿಪುಡಿಯಾಗಿ ಅವನು ಕಲಸಿಕೊಳ್ಳುವ ಕ್ರಮವನ್ನು, ಅನ್ನವನ್ನೆತ್ತಿ ಪಿಂಡಕ್ಕೆಂಬಂತೆ ಉಂಡೆಕಟ್ಟುವ ವಿಧಾನವನ್ನು ಜುಗುಪ್ಸೆಯಿಂದ ಚಿಕ್ಕಿ ನೋಡಿದ್ದರು. ಹೊರಗಡೆ ಕೂತು ಶೂದ್ರ ಹೀಗೆ ಊಟ ಮಾಡೋದು ಅವರಿಗೆ ಹೊಸದಲ್ಲ. ಆದರೆ ತಮ್ಮ ಊಟದ ಮನೆಯಲ್ಲೆ ಕೂತು ಶೂದ್ರನೊಬ್ಬ ಊಟ ಮಾಡುವ ಈ ಕ್ರಮದಿಂದ ಅವರಿಗಾಗುತ್ತಿದ್ದ ಹೇಸಿಗೆ ಜಗನ್ನಾಥನನ್ನೂ ತಿಳಿಯದಂತೆ ಆಕ್ರಮಿಸಿತ್ತು. I must become insensitive. ಶೌಚಕರ್ಮದಿಂದ ಹಿಡಿದು ಊಟ ಮಾಡುವ ಕ್ರಮದ ತನಕವೂ ಬೇರೆ ಬೇರೆ ಲೋಕಗಳನ್ನು ಸೃಷ್ಟಿಸಿ ತನ್ನ ಮಾನವೀಯತೆಯನ್ನೆ ಹೀಗೆ ಮುಕ್ಕಾಗಿಸುತ್ತಿರುವ ಜಾತಿಪದ್ಧತಿಯನ್ನು ನಾಶಮಾಡುವ ಕ್ರಮ ತಿಳಿಯದು. ಷಂಡ ರೋಷದಿಂದ ತನ್ನನ್ನೆ ಹಳಿದುಕೊಳ್ಳದೆ ಬೇರೆ ಮಾರ್ಗವಿಲ್ಲ. ಈ ಸಮಾಜದಲ್ಲಿ ಅಂತರ ಪಿಶಾಚಿಯಾಗದೇ ವಿಧಿಯಿಲ್ಲ. ಎಷ್ಟು ಕೃತಕವೆನ್ನಿಸಿದರೂ ನನ್ನ ಭಾವನೆಗಳಿಗೆ ವಿರುದ್ಧ ದಿಕ್ಕಿನಲ್ಲಿ ಹೋಗುವುದೇ ಪ್ರಾಯಶಃ ಸರಿ; ಅಥವಾ ಅನಿವಾರ್ಯ. ಈ ರಂಗರಾವ್‌ನನ್ನ, ಸತ್ಯಪ್ರಕಾಶನ್ನ ಪ್ರೀತಿಸೋದಕ್ಕೆ ಕಲೀಬೇಕು ಅಥವಾ ಅರ್ಥ ಮಾಡಿಕೊಳ್ಳೋದಕ್ಕೆ. ನೀಲಕಂಠಸ್ವಾಮಿ ಹೇಳಿದ :

'ಮಿಸ್ಟರ್ ಜಗನ್ನಾಥ್, ಪಬ್ಲಿಕ್ ಅಡ್ಮಿನಿಸ್ಟ್ರೇಶನ್ ಬಗ್ಗೆ ನಾನೊಂದು ಪುಸ್ತಕ ಬರ್ದಿದೀನಿ'.

'ಹೌದೇನು ?'

'ಅದನ್ನ ಪಬ್ಲಿಷ್ ಮಾಡಿಸ್ತ ಇದೀನಿ. ಮಹಾರಾಜರ ಹತ್ತಿರ ಅದಕ್ಕೊಂದು ಮುನ್ನುಡಿ ಬರೆದು ಕೊಡೋಕೆ ಕೇಳ್ತ ಇದೀನಿ.'

'ಅಲ್ಲ. ನೀವು ಸೋಷಲಿಸ್ಟ್ ಆಗಿ...' ಜಗನ್ನಾಥ ತಮಾಷೆಯಾಗಿ ಪ್ರಶ್ನಿಸಿದ. ನೀಲಕಂಠಸ್ವಾಮಿಯೂ ನಗುತ್ತ ಹೇಳಿದ:

'Strategy ಅಷ್ಟೆ. ಇಲ್ದೆ ಹೋದ್ರೆ ಯಾರು ನನ್ನ ಬುಕ್ಕನ್ನ ಪಬ್ಲಿಶ್‌ಮಾಡ್ತಾರೆ ಹೇಳಿ ? ಕನ್ನಡ ಪಬ್ಲಿಕೇಶನ್ ತುಂಬ ಜಾತೀಯತೆ ಇದೆ.'

'ನಿಜವೆ ?'

'Of Course ಈಗ ನನ್ನ ಬುಕ್ಕು ಇಂಗ್ಲಿಷ್‌ಕನ್ನಡ ಎರಡರಲ್ಲೂ ಪಬ್ಲಿಶ್‌ಆಗ್ತ ಇದೆ. ಟೆಕ್ಸ್ಟ್‌ಬುಕ್ಕೂ ಆಗಬಹುದು. ಆಗ ನಾನು ಹೇಳಿದ್ದಕ್ಕೆ ಬೆಲೆ ಇರ್ತದೆ. ಪಾರ್ಟಿಗೂ ಆದ್ರಿಂದ ಲಾಭ ಆಗ್ತದೆ.'

ನೀಲಕಂಠಸ್ವಾಮಿ ನಾಚಿಕೆಯಿಲ್ಲದೆ ಮಾತಾಡಿದ್ದ. ಜಗನ್ನಾಥನಿಗೆ ಅವನ ಆಶಾವಾದ. ಅವನ ಎನರ್ಜಿ ಕಂಡು ಆಶ್ಚರ್ಯವಾಯ್ತು. ಕೊಳಕ. ಆದರೆ ಇವನೇ ಪ್ರಾಯಶಃ ಭವಿಷ್ಯವನ್ನು ರೂಪಿಸೋ ವ್ಯಕ್ತಿ. ಪಿಳ್ಳನಂಥೋರು ಈ ಖದೀಮರನ್ನ ಮೆಟ್ಟಿ ನಿಲ್ಲೋ ತನಕ. ಬ್ರಾಹ್ಮಣನಲ್ಲಿ ನಯ ನಾಜೂಕಿದೆ; ಒಳಗನ್ನಿಸಿದ್ದನ್ನ ಮಾಡಲಾರ್ದೆ ಇರೋ ಪುಕ್ಕಲಿದೆ; ಕರುಬುವ ಹಿಪಾಕ್ರಸಿಯಿದೆ. ಆದರೆ ಈ ಗೌಡರಲ್ಲಿ ಲಿಂಗಾಯತರಲ್ಲಿ ಮಾನಗೆಟ್ಟ ಧೈರ್ಯವಿದೆ; ಎನರ್ಜಿಯಿದೆ; ಯೌವನವಿದೆ. ಬದಲಾಗ್ತಿರೋ ಸಮಾಜದಲ್ಲಿ ಇವರೆಲ್ಲರೂ ಅಂತರಪಿಶಾಚಿಗಳಾಗ್ತಾರೆ; ದೋಚಿಕೊಳ್ಳೋದಕ್ಕೆ ಹಾತೊರೀತಾರೆ. ಆಸೆಯಲ್ಲಿ ಬಾಯಿ ಕಿಸಿದ ಈ ನವಬ್ರಾಹ್ಮಣರನ್ನ ನಾಳೆ ಪಿಳ್ಳ ಒದೀತಾನೆ. ಆಮೇಲೆ ಪ್ರಾಯಶಃ ಅವನೂ ಸತ್ಯಪ್ರಕಾಶನ ಹಾಗೆ ಬಾಯಿ ಕಿಸೀತಾನೆ. ಚರಿತ್ರೇಲಿರೋ ಬೀಜಗಳಲ್ಲಿ ಕೆಲವು ಮುಗ್ಗಲಾಗುತಾವೆ, ಕೆಲವು ಕೊಳೀತಾವೆ, ಕೆಲವು ಮೊಳೀತಾವೆ, ನನ್ನಂಥೋರು ಗೊಬ್ಬರವಾಗಬೇಕು. ನೊಂದರೂ ಪರವಾಗಿಲ್ಲೆಂದು ಹೇಳಿದ :

'ನೋಡಿ, ನೀವು ಮಹಾರಾಜರ ಹತ್ರ ಮುನ್ನುಡಿ ಬರೆಸಿಕೊಳ್ಳೋಕ್ಕೆ ನೋಡೋದು, ಎಲ್ಲದನ್ನೂ ಸ್ಟ್ರಾಟೆಜಿ ಅಂತ ಸಮರ್ಥಿಸಿಕೊಳ್ಳೋದು ಅಪಾಯ ಅಂತ ನನಗನ್ನಿಸತ್ತೆ. ವಲ್ಗರ್ ಕೂಡ, ರಂಗರಾವ್ ಬಂದವ್ರೆ ದೇವಸ್ಥಾನಕ್ಕೆ ಹೋಗಿ ಪ್ರಸಾದ ತಂದ್ರಂತೆ. ನನ್ನ ಜೊತೆ ಈ ಕಾರ್ಯದಲ್ಲಿ ಸೇರೋ ನೀವು ಪ್ಯೂರ್‌ಆಗಿ ವರ್ತಿಸಬೇಕೂಂತ ನನ್ನ ಇಷ್ಟ.'

ನೀಲಕಂಠಸ್ವಾಮಿಯಾಗಲೀ ರಂಗರಾವ್ ಆಗಲೀ ಬೇಸರಪಟ್ಟಂತೆ ಕಾಣಲಿಲ್ಲ. ನೀಲಕಂಠಸ್ವಾಮಿ,

'I see what you mean' ಎಂದು ಊಟ ಮುಂದುವರಿಸಿದ. ಯಶಸ್ಸೇ ಮುಖ್ಯವಾದ ಸಮಾಜದಲ್ಲಿ ಯಾವುದು ಕ್ಷಣಿಕ ಯಾವುದು ಶಾಶ್ವತ ಎನ್ನುವ ಮೌಲ್ಯ ಗೋಚರಿಸಲ್ಲ; ನೀಲಕಂಠಸ್ವಾಮಿಗೆ ಗೆಲ್ಲೋದು ಮುಖ್ಯ. ಹಿಂದೆ ಬ್ರಾಹ್ಮಣರು ಮುಕ್ಕಿದ್ರು; ಈಗ ಇವ ಮುಕ್ಕುತಾನೆ. ಧರ್ಮದ ಕಲ್ಪನೆಯಿದ್ದೂ ಸಾವಿರಾರು ವರ್ಷ ಈ ದೇಶದಲ್ಲಿ ಹೊಲೇರು ಹೀಗಿದಾರಲ್ಲ ಎಂದು ಯಾರೂ ನಿದ್ದೆ ಕೆಟ್ಟು ಯೋಚಿಸಿದ್ದಿಲ್ಲ.

ರಾಯರು ಮಾತಾಡದೆ ಊಟ ಮಾಡಿದ್ದರು. ತಾನು ಆಡಿದ ಮಾತಿನಿಂದ ಅವರಿಗೆ ಸಂತೋಷವಾಗಿತ್ತು. ಬ್ರಾಹ್ಮಣೇತರರೇ ಹೀಗೆ – ಎಂದು ನಿಶ್ಚಯಕ್ಕೆ ಬಂದಿದ್ದ ಅವರ ಮನಸ್ಸನ್ನು ಕಲಕುವುದು ತನ್ನಿಂದ ಸಾಧ್ಯವಿಲ್ಲವಲ್ಲ ಎಂದು ಜಗನ್ನಾಥನಿಗೆ ಸಿಟ್ಟು

ಬಂತು. ಅವರನ್ನು ನೋಯಿಸಬಲ್ಲ ಮಾತು ಹುಡುಕುತ್ತ ಕೈ ತೊಳೆದ. ನೀಲಕಂಠಸ್ವಾಮಿಯ ಅನುಯಾಯಿಗಳು ಕೈತೊಳೆದು ಹಿತ್ತಲಿನಲ್ಲಿದ್ದ ಪೇರಳೆಹಣ್ಣನ್ನು ಕೀಳುತ್ತಿದ್ದರು. ಕೀಳಬಹುದೇ ಎಂದವರು ತನ್ನನ್ನಾಗಲೀ ಚಿಕ್ಕಿಯನ್ನಾಗಲೀ ಕೇಳಿರಲಿಲ್ಲ.

ಜಗನ್ನಾಥ ಸ್ವಲ್ಪ ರೆಸ್ಟ್ ಮಾಡುತ್ತೇನೆಂದು ಮೇಲೆ ಹೋದ. ಸೋಷಲಿಸ್ಟರು ಊರು ಸುತ್ತಿ ಬರುತ್ತೇವೆಂದು ನೀಲಕಂಠಸ್ವಾಮಿಯ ನೇತೃತ್ವದಲ್ಲಿ ಹೊರಟರು. ರಾಯರು ಅವರ ಜೊತೆ ಹೋದರು.

* * *

ಜಗನ್ನಾಥನಿಗೆ ಆಶ್ಚರ್ಯವಾಯಿತು. ದೇವಸ್ಥಾನದ ಅರ್ಚಕರ ಮಗ ಗಣೇಶ ಸೀದ ಅವನ ರೂಮಿಗೆ ಬಂದಿದ್ದ. ಎದ್ದು ಕೂತು ಕುರ್ಚಿ ತೋರಿಸಿ ‘ಕೂತುಕೊಳ್ಳಿ’ ಎಂದ. ಉತ್ಸಾಹ ಬಿರಿಯುತ್ತಿದ್ದ ಕಣ್ಣುಗಳಿಂದ ಜಗನ್ನಾಥನನ್ನು ನೋಡುತ್ತ ಗಣೇಶ ರೂಮಿನ ಬಾಗಿಲು ಹಾಕಿ ಕುರ್ಚಿಯ ಮೇಲೆ ಕೂತ. ಮಾಸಿದ ಅಂಗಿ, ಮಾಸಿದ ಪಂಚೆ, ಹೀಚಲು ಕಾಯಿಯಂಥ ದೇಹಕ್ಕೆ ಮುದಿ ಮುಖ. ಯೌವನವಿಲ್ಲದ, ಮುಪ್ಪಿಲ್ಲದ ವಿಷಾದದ ಮೂರ್ತಿ. ತಲೆಯ ಮೇಲೆ ಅದೆಷ್ಟೋ ತಿಂಗಳಿನ ಕೂದಲು, ಕೂದಲಿಗಿಂತ ಉದ್ದವಾದ ಜುಟ್ಟು. ಗದ್ದದ ಮೇಲೆ ಕುರುಚಲು ಗಡ್ಡ. ಕಿವಿಗಳಲ್ಲಿ ಹರಳಿನ ಒಂಟಿ.

ಮಾತಾಡಲು ಪ್ರಯತ್ನಿಸುತ್ತ ಗಣೇಶ ಉಗ್ಗಲು ಪ್ರಾರಂಭಿಸಿದ.

‘ಪುಸ್ತಕ ಬೇಕಿತ್ತ ?’

ಜಗನ್ನಾಥನೇ ಅವನ ಪರವಾಗಿ ಮಾತಾಡಿ ತಾಯಿಗೆ ಇಷ್ಟವಾಗಿದ್ದ ಶರತ್‌ಚಂದ್ರ ಕಾದಂಬರಿಗಳನ್ನು ತಂದುಕೊಟ್ಟ.

‘ನಾನಿಲ್ಲಿ ಬಂದದ್ದನ್ನ ಯಾರಿಗೂ ಹೇಳಬೇಡಿ.’

ಗಣೇಶ ಕಣ್ಣಿನಲ್ಲಿ ಜೀವ ತುಳುಕಿಸುತ್ತ ಉಗ್ಗಿ ಉಗ್ಗಿ ಹೇಳಿದ. ಹೊಸದೊಂದು ನಿಜ ಹುಟ್ಟಿಬರುವ ಯಾತನೆಯಂತಿತ್ತು ಅವನ ಉಗ್ಗು. ಜಗನ್ನಾಥನಿಗೆ ಏನು ಮಾತಾಡಬೇಕು ತಿಳಿಯದೆ,

‘ನೀವೇ ಹಿರೇಮಗನ ?’ ಎಂದ.

ಗಣೇಶ ಹೌದೆಂದು ತಲೆಹಾಕಿದ. ಮತ್ತೆ ಕಣ್ಣುಗಳು ಬಿರಿಯುವಂತೆ ಜಗನ್ನಾಥನನ್ನು ನೋಡಿದ.

‘ನಿಮಗೆ ಮದುವೆಯಾಗಿದೆಯ ?’

ಕೇಳಬಾರದಿತ್ತು ಎನ್ನಿಸಿತು. ಯಾಕೆಂದರೆ ಹತಾಶವಾದ ದೃಷ್ಟಿಯಿಂದ ಗಣೇಶ ಜಗನ್ನಾಥನನ್ನು ನೋಡಿ ಮತ್ತೆ ತಲೆಹಾಕಿದ್ದ. ಅವನಿಗೇನೋ ಹೇಳುವುದು ಅಗತ್ಯವಿತ್ತು. ಅದನ್ನು ಹೇಳಿಸಲು ಅಗತ್ಯವಾದ ಸ್ವಾತಂತ್ರ್ಯದ ವಾತಾವರಣವನ್ನು ಜಗನ್ನಾಥ ಸೃಷ್ಟಿಸಬೇಕಿತ್ತು. ಸಹಾನುಭೂತಿಯಿಂದ ಗಣೇಶನ್ನ ನೋಡುತ್ತ ಕೂತ. ಗಣೇಶ ಕೂತ ಕ್ರಮದಲ್ಲಿ ಏನೋ ಹವಣಿಕೆಯಿತ್ತು. ಯೌವನದಿಂದ ಮುಪ್ಪಿನ ತನಕ ಯಾವ ವಯಸ್ಸಾದರೂ ಆಗಿರಬಹುದಾಗಿದ್ದ ಗಣೇಶ ಕುದಿಯುತ್ತ ಕೂತಿದ್ದಂತೆ ಅನ್ನಿಸಿತು. ಜಗನ್ನಾಥನಿಗೆ ಶೂನ್ಯದೃಷ್ಟಿಯ ಹೊಲೆಯರ ಹುಡುಗರು ನೆನಪಾದರು. ಗಣೇಶನನ್ನು ವಿಕಾರಗೊಳಿಸುತ್ತಿದ್ದುದು ಅವನ ರೂಪ ಮಾತ್ರವಲ್ಲ – ತನ್ನ ಬಿಳುಪಿನಲ್ಲಿ ನೂರಾರು ವರ್ಷದ ಇನ್‌ಬ್ರೀಡಿಂಗಿನ ಕತೆ ಹೇಳುತ್ತಿದ್ದ ಅವನ ಸವೆದ ಮುಖ.

'ನೀವು ಮಾಡ್ತಿರೋದು ಸರಿ'

ಗಣೇಶ ಒಳಗೆ ಕುದಿಯುತ್ತಿದ್ದುದನ್ನು ಹೊರಗೆ ಹಾಕಿ ಬೆವರಿದ.

'ಹೋಗ್ತೇನೆ'

ಎಂದು ಎದ್ದು ದಾಪುಕಾಲು ಹಾಕುತ್ತ ನಡೆದುಬಿಟ್ಟ. ಜಗನ್ನಾಥ ಕೆಳಗಿಳಿದು ಬಂದು ಗುಡ್ಡವನ್ನು ಓಡುತ್ತ ಇಳಿಯುತ್ತಿದ್ದ ಗಣೇಶನ ಕುಳ್ಳಗಿನ ರೋಗಗ್ರಸ್ತ ದೇಹದ ಚುರುಕನ್ನು ಆಶ್ಚರ್ಯದಿಂದ ನೋಡುತ್ತಲೇ ನಿಂತ.

ಬಾಗಿಲು ಹಾಕಿಕೊಂಡು ಮಂಚದ ಮೇಲೊರಗಿ ಬಹಳ ಆತುರದಿಂದ ಜಗನ್ನಾಥ ಮಾರ್ಗರೆಟ್ಟಿನ ಕಾಗದ ಓದಿದ.

ಮೊದಲು ಇಂಟರ್‌ನ್ಯಾಷನಲ್ ಸ್ಕೂಲ್ ವಿಷಯ. ದೇಸಾಯರ ಪತ್ರ ಬಂದಿದೆ. ಮುಂದಿನ ವರ್ಷ ಬರುತ್ತಿದ್ದೇನೆ, ಚಂದರ್‌ಕೂಡ ಬೆಂಗಳೂರಲ್ಲೆ ಕೆಲಸ ಮಾಡ್ತಾನಂತೆ – ಇತ್ಯಾದಿ. ಆಮೇಲೆ ವೆದರ್. ಮೂರು ದಿನಗಳಿಂದ ಸತತವಾಗಿ ಸ್ನೋ ಬೀಳ್ತ ಇದೆ. ಬೆಂಕಿ ಎದುರು ಕೂತೇ ಇರೋಣ ಎನ್ನಿಸುತ್ತೆ. ಬಿಯರ್‌ಕುಡಿದು ಕುಡಿದು ಮೈ ಬಂದಿದೆ. ಮತ್ತೆ ತಂದೆಯಲ್ಲಾದ ಅದ್ಭುತ ಬದಲಾವಣೆಯ ಬಗ್ಗೆ. ನಿವೃತ್ತರಾದ ಮೇಲೆ ತುಂಬ ಲವಲವಿಕೆಯಿಂದ ಇದ್ದಾರೆ. ತಾಯಿಯ ನ್ಯಾಗಿಂಗನ್ನ ಕೇರ್‌ಮಾಡಲ್ಲ. ಒಂದು ಅಂಗಡಿ ತೆರೆದಿದ್ದಾರೆ. ಕರಿ ಪೌಡರ್, ಮ್ಯಾಂಗೋ ಪಿಕಲ್ಸ್, ಪಪ್ಪಡಂಸ್ ಹೀಗೆ ಎಲ್ಲ ಇಂಡಿಯನ್ ಸಾಮಾನುಗಳನ್ನು ಮಾರುವ ಅಂಗಡಿ. ವಿಚಿತ್ರವಾದ ರೀತೀಲೆ ತನ್ನ ಐಡೆಂಟಿಟಿಯನ್ನ ಕಂಡುಕೋತಿದಾರೆ. ಬೆಳಿಗ್ಗೆ ಬೇಗ ಎದ್ದು ತಿರುಪತಿಯ ದೇವರಿಗೆ ಊದುಕಡ್ಡಿ ಹಚ್ಚಿ ಪೂಜೆ ಮಾಡ್ತಾರೆ; ನಿತ್ಯ ಸಂಜೆ ಥಿಯಸಾಫಿಕಲ್ ಸೊಸೈಟಿಗೆ ಹೋಗಿ ಲೆಕ್ಚರ್ ಕೇಳ್ಸಿಕೋತಾರೆ. ಭಾರತದಿಂದ ಹರಿಕಥೆ ಮಾಡುವವರನ್ನು, ಸಿತಾರ್ ಸರೋದ್ ವಾದಕರನ್ನು ಕರೆಸುವ ವ್ಯವಸ್ಥೆ ಮಾಡುವ ಆರ್ಗನೈಸೇಶನ್ ಕಟ್ಟುತ್ತಿದ್ದಾರೆ.

ನೀನು ಯಾಕೆ ದೇವರ ಮೇಲೆ ಬಂಡಾಯ ಹೂಡಿದಿ ನನಗೆ ಅರ್ಥವಾಗತ್ತೆ. ಆದರೆ ಡ್ಯಾಡಿಗೆ ಯಾಕೆ ದೇವರು ಬೇಕಾಯ್ತು ಅನ್ನೋದನ್ನೂ ನೀನು ಅರ್ಥಮಾಡಿಕೋಬೇಕು. ಚಂದರ್ ಜೊತೆ ಅದನ್ನ ಚರ್ಚಿಸಿದ. ಅವನು ನಿನ್ನ ರೊಮ್ಯಾಂಟಿಕ್ ಎನ್ನುತ್ತಾನೆ; ನೆಹರೂ ಯುಗದ ಪ್ರಾಡಕ್ಟ್ ಅನ್ನುತ್ತಾನೆ. ಕ್ರೇಸಿ ಫೆಲೋ. ಅವನು ಹೇಳಿದ್ದನ್ನೆಲ್ಲ ನಾನು ಒಪ್ಪಲ್ಲ. ಆದರೆ

ಇನ್‌ಸೈಟ್ ಇದೆ.

ಕಾಗದದ ಕೊನೆಯ ಪ್ಯಾರ ಓದುತ್ತ ಜಗನ್ನಾಥನ ಮುಖ ಬಿಳುಚಿಕೊಂಡಿತು.

ಡಾರ್ಲಿಂಗ್‌ಜಗನ್, ನಾನೂ ನೀನೂ ಒಬ್ಬರಿಗೊಬ್ಬರು ಲ್ಯೂಸಿಡ್ಡಾಗಿ ಬದುಕಬೇಕೂಂತ ನಿಶ್ಚಯ ಮಾಡಿದ್ದೀವಲ್ಲವ? ಈಗ ನಾನು ಹೇಳೋ ವಿಷಯದಿಂದ ನೀನು ನೊಂದಕೋಬಾರದು. ನೀನು ಹೋದ ಮೇಲಿಂದ ಚಂದ್ರಶೇಖರ್‌ನನ್ನ ಪ್ರೀತಿಗಾಗಿ ಕಾಡುತ್ತಿದ್ದಾನೆ. ಅವನ ಅಸೂಯೆ, ಅವನ ಇಂಟೆನ್ಸಿಟಿಯಿಂದ ನನಗೆ ಯಾವತ್ತೂ ಆಗದ ಹೊಸ ಅನುಭವವಾಗಿದೆ. ಇದ್ದಕ್ಕಿದ್ದಂತೆ ಯಾಕೊ ಏನೊ ನಾನು ಅವನಿಗೆ ಮನಸೋತು ನನ್ನನ್ನು ಕೊಟ್ಟುಕೊಂಡಿದ್ದೇನೆ. ಇದರಿಂದ ನಿನಗೆ ವ್ಯಥೆಯಾಗುತ್ತೆಂದು ನನಗೆ ಗೊತ್ತು. ಆದರೆ ನನ್ನ ದೌರ್ಬಲ್ಯವನ್ನು ಅರ್ಥಮಾಡಿಕೊಳ್ಳೋದು ಕ್ಷಮಿಸೋದು ನಿನಗೆ ಮಾತ್ರ ಸಾಧ್ಯ – ಮಾರ್ಗರೆಟ್.

ಜಗನ್ನಾಥನ ಕೈ ಬೆವತಿತ್ತು. ಕೊನೆಯ ಪ್ಯಾರಾವನ್ನು ಮತ್ತೆ ಮತ್ತೆ ಓದಿದ. ಇರಿದ ಜಾಗದಲ್ಲೆ ಮತ್ತೆ ಮತ್ತೆ ಇರಿಸಿಕೊಂಡು ನೋವಿಗೆ ಅತೀತನಾಗಲು ಪ್ರಯತ್ನಿಸಿದ. ಎದ್ದು ಕೆಳಗಿಳಿದು ಬಂದ. ನೀಲಕಂಠಸ್ವಾಮಿ ಕಾರಿಗೆ ಪೋಸ್ಟರ್‌ಕಟ್ಟಿಸುತ್ತ ನಿಂತಿದ್ದ. ನಾಳೆ ಸಾಯಂಕಾಲ ಇಷ್ಟು ಘಂಟೆಗೆ ಭಾಷಣ, ಇಂಥಲ್ಲಿ ಇಂಥಿಂಥವರಿಂದ. ಬ್ಯಾಟರಿಂದ ನಡೆಯುವ ಮೈಕನ್ನು ಕಾರೊಳಗಿಟ್ಟುಕೊಂಡು ರಂಗರಾವ್ ಹೆಲೋ ಹೆಲೋ ಎಂದು ಟೆಸ್ಟ್ ಮಾಡುತ್ತಿದ್ದ. ಸರ್ವೋದಯದ ಅನಂತಕೃಷ್ಣರು ಸೋಷಲಿಸ್ಟ್ ಹುಡುಗರ ಜೊತೆ ಲೋಹಿಯಾ ಮತ್ತು ಗಾಂಧಿ ಬಗ್ಗೆ ಚರ್ಚಿಸುತ್ತಿದ್ದರು. ಶಾನುಭೋಗ ಶಾಸ್ತ್ರಿ ಆಫೀಸಿನಿಂದ ಇಣುಕಿ ನೋಡಿ ಹೊರಗೆ ಬಂದು 'ಮಧ್ಯಾಹ್ನದ ಬಸ್ಸಿಗೆ ಕನ್ನಡಾ ಜಿಲ್ಲೆಗೆ ಹೋಗ್ತಿದೀನಿ – ಆಳುಗಳನ್ನು ಕರ್ಕೊಂಬರಕ್ಕೆ' ಎಂದು ತನ್ನ ನಿಷ್ಠೆ ಪ್ರದರ್ಶಿಸಿ ಒಳಗೆ ಹೋದ. 'ಜನ ಸೇರೋಕೆ ಶುರುವಾಗಿದಾರೆ. ಒಳ್ಳೇ ಅಪರ್ಚುನಿಟಿ. ಇಡೀ ಸ್ಟೇಟಿಂದ, ನಾರ್ತ್ ಇಂಡಿಯಾದಿಂದಲೂ ಜನ ಬಂದಿರ್ತಾರೆ. ನಾಳೆ ಸರಿಯಾಗಿ ಪ್ರಚಾರ ಮಾಡಬೇಕು' – ನೀಲಕಂಠಸ್ವಾಮಿ ಖುಷಿಯಾಗಿ ಹೇಳಿದ. ಭಾಷಣ ಮಾಡುವ ಅವಕಾಶ ನಿರೀಕ್ಷಿಸುತ್ತ ಅನಂತಕೃಷ್ಣರ ಮುಖ ಅರಳಿತು. 'ಚೆನ್ನಾಗಿಲ್ಲ ಮೈಕ್ ಸೆಟ್ಟು' ಎಂದು ರಂಗರಾವ್ ಗೊಣಗಿದ. ಶ್ರೀಪತಿರಾಯರು 'ಹೋದ ಸಾರಿ ಗುರಪ್ಪಗೌಡರ ಎಲೆಕ್ಷನ್ನಿಗೇಂತ ಪ್ರಭು ಕೊಂಡು ತಂದದ್ದು' ಎಂದರು.

ಜಗನ್ನಾಥನಿಗೆ ಎಲ್ಲರಿಂದ ದೂರವಿರಬೇಕೆನ್ನಿಸಿ ಗೇರುಗುಡ್ಡ ಹತ್ತಿ ನಡೆದ. ಇದ್ದಕ್ಕಿದ್ದಂತೆ ಎಲ್ಲವೂ ನಿಸ್ಸಾರವಾಗಿತ್ತು. ತನಗೆ ತಾನೇ ಮಾತಾಡಿಕೊಂಡ. ಇನ್ನು ನಾಲ್ಕು ದಿನ ಅಷ್ಟೆ. ಹೊಲೆಯರು ದೇವರ ಗುಡಿಯೊಳಗೆ ಕಾಲಿಡುತ್ತಾರೆ. ಹೆಜ್ಜೆ ಮುಂದಿಟ್ಟು ಶತಮಾನಗಳನ್ನು ಬದಲಿಸುತ್ತಾರೆ. ಅದಕ್ಕಾಗಿ ಹುರಿಯಾಗಿ ಕಾದಿರೋ ನನಗೆ ಎಂಥ ಆಘಾತ ಮಾಡಿದೆ ಮಾರ್ಗರೆಟ್.

ಇಷ್ಟರ ತನಕ ಅವಳ ಮೇಲೆ ತನಗೆಷ್ಟು ಪ್ರೀತಿಯಿತ್ತೆಂದು ತಾನು ತಿಳಿದಿರಲಿಲ್ಲ. ಭಯಂಕರ ಸಂಕಟವೆಂದರೆ ಈ ದೇಹಕ್ಕೆ ಪರಿಚಯವಿದ್ದ ಬೆತ್ತಲೆ ದೇಹವೊಂದು ಈ ಘಳಿಗೆಯಲ್ಲೆ ಇನ್ನೊಬ್ಬನ ತೆಕ್ಕೆಯಲ್ಲಿದ್ದ ಎಂಬುದನ್ನು ಯೋಚಿಸೋದು. ಅತ್ಯಂತ ಆಪ್ತವಾಗಿ ಮಾತಾಡುತ್ತಾಳೆ. ಅವನಿಗೆ ತೆರೆದುಕೊಳ್ಳುತ್ತಾಳೆ. ಸುಖದಲ್ಲಿ ನರಳುತ್ತಾಳೆ. ನಾನು ವರ್ಜ್ಯನಾಗಿಬಿಟ್ಟೆ. ಈ ಆಕಾಶದಿಂದ, ಈ ಹೊತ್ತಿನಿಂದ. ಎಸೆದುಬಿಟ್ಟ ವಸ್ತುವಿನ ಹಾಗೆ.

ಇನ್ನು ಅನಿವಾರ್ಯಗಳು ಮಾತ್ರ. ಮಾಡಬೇಕು. ವಿಧಿಯಿಲ್ಲ, ಮಾಡುತ್ತೇನೆ. ಕ್ರೂರವಾಗಿ ನೋಡುವ ಕಣ್ಣುಗಳಿಂದ ವರ್ಜ್ಯವಾಗಿ ಹೊಲೆಯರ ಜೊತೆ ನಡೆಯುತ್ತೇನೆ. ಅವರು ಯಾರೊ, ನಾನು ಯಾರೊ, ಯಾವ ದೇವರೊ, ಭರವಸೆಗಳಿಲ್ಲ. ನಾನು ಮುಟ್ಟಿ ತಡವಿದ್ದೆಲ್ಲವನ್ನೂ ಇನ್ನು ಯಾರೋ ಮುಟ್ಟಿ ತಡವುತ್ತಾನೆ. ನನ್ನನ್ನು ಕೊಂದು ಹಿಗ್ಗುತ್ತಿದ್ದಾನೆ.

ಗುಡ್ಡದ ನೆತ್ತಿಯ ಮೇಲೆ ನಿಂತ ಶೂನ್ಯ ದೃಷ್ಟಿಯಿಂದ ದೇವಸ್ಥಾನದ ಶಿಖರ ನೋಡಿದ. ನೀಲಕಂಠಸ್ವಾಮಿ ಅಬ್ಬರಿಸಿ ಮಾರನೇ ದಿನದ ಸಾಯಂಕಾಲದ ಮೀಟಿಂಗಿಗೆ ಜನರನ್ನು ಕರೆಯುತ್ತಿರುವುದು ಕೇಳಿಸಿತು.

'ಮಹಾಜನರಲ್ಲಿ ವಿನಂತಿ.

ಈ ದೇಶದ ಧುರೀಣರಲ್ಲಿ ಒಬ್ಬರಾದ,
ಸರ್ವಸ್ವವನ್ನೂ ತ್ಯಾಗಮಾಡಿ ಹರಿಜನ ಸೇವೆಗೆ ಬದ್ಧಕಂಕಣರಾದ
ಶ್ರೀ ಜಗನ್ನಾಥರಾಯರು ಪ್ರಾರಂಭಿಸಿದ ಚಳುವಳಿಗೆ ಬೆಂಬಲವನ್ನು ಸೂಚಿಸಿ
ಸೋಷಲಿಸ್ಟ್ ನಾಯಕ ಶ್ರೀ ನೀಲಕಂಠಸ್ವಾಮಿ,
ಸಹ ಕಾರ್ಯದರ್ಶಿ ಶ್ರೀ ರಂಗರಾವ್,
ಗಾಂಧೀಜಿಯವರ ಆಪ್ತ ಶಿಷ್ಯರಲ್ಲಿ ಒಬ್ಬರಾಗಿದ್ದ ಸರ್ವೋದಯ ನಾಯಕ
ಶ್ರೀ ಅನಂತಕೃಷ್ಣ.... ಕೇಳಿರಿ. ಕೇಳಿರಿ.
ನಾಳೆ ಸಂಜೆ ಐದು ಘಂಟೆಗೆ,
ದೇವಸ್ಥಾನದ ಹೊರಾಂಗಣದಲ್ಲಿ,
ಭಾಷಣ ಮಾಡಲಿದ್ದಾರೆ.'

ಭಾರತೀಪುರದ ಮೌನವನ್ನು ಕಲುಕುತ್ತಿದ್ದ ಮಾತುಗಳು ಜಗನ್ನಾಥನಿಗೆ ಅಸಹ್ಯವಾದುವು. ಈಗ ತಾನು ತನ್ನ ಮನಸ್ಸನ್ನು ಸ್ವಾಧೀನಕ್ಕೆ ತಂದುಕೊಳ್ಳದೇ ಹೋದರೆ ಇಷ್ಟು ದಿನದ ಪ್ರಯತ್ನವೆಲ್ಲ ಕುಸಿದುಹೋದೀತು. ನಾನು ಯಾತರ ಮನುಷ್ಯ? ಆದರೆ ಸಂಕಟ ನಿಜ. ಕ್ರಿಯೆಯಲ್ಲಿ ಮೈಮರೆಯೋದೊಂದೇ ಮಾರ್ಗ. ಅಂದರೆ ಜಡ್ಡಾಗೋದು. ವೈಯಕ್ತಿಕ ಜೀವನವನ್ನು ಬಿಟ್ಟುಕೊಡೋದು.

ಹೆಜ್ಜೆ ಸಪ್ಪಳ ಕೇಳಿ ಜಗನ್ನಾಥ ಬೆಚ್ಚಿದ. ಪಕ್ಕದಲ್ಲಿ ಸುಬ್ರಾಯ ಅಡಿಗರು ಬಂದು ನಿಂತಿದ್ದರು.

'ನಿನ್ನ ಮುಖ ನೋಡಿದೆ. ಬಹಳ ನೋವಿನಲ್ಲಿದ್ದಿ ಅಂತ ಅನ್ನಿಸ್ತು. ಅದಕ್ಕೇ ಬಂದೆ'

ಅಡಿಗರು ಇಷ್ಟು ಹೇಳಿ ಮೌನವಾಗಿಬಿಟ್ಟರು. ಅವರ ಜೊತೆ ಗುಡ್ಡ ಇಳಿಯುವಾಗ ಏನು ಯೋಚಿಸ್ತಿದಿ ಅಂತ ವಿಚಾರಿಸಲಿಲ್ಲ.

ತನ್ನನ್ನು ಕೆದಕಲಿಲ್ಲ. ಎಲ್ಲಿ ಮೌನ ಸರಿ, ಎಲ್ಲಿ ಮಾತು ಸರಿ ಅಂತ ತಿಳಿದ ಅವರ ಹೃದಯವಂತಿಕೆಗೆ ಜಗನ್ನಾಥ ತುಂಬ ಕೃತಜ್ಞನಾದ.

* * *

ಮಧ್ಯಾಹ್ನದ ಊಟಕ್ಕೆ ಅಡಿಗರು ಇದ್ದರೆಂದು ಚಿಕ್ಕಿ ಜಿಲೇಬಿ ಮಾಡಿದ್ದರು. ನರಸಿಂಹ ಶಾಲಿಗ್ರಾಮವನ್ನು ಶುದ್ಧಮಾಡಿ ಅಡಿಗರು ಪೂಜಿಸಿದ್ದರೆಂದು ಚಿಕ್ಕಿಗೆ ಸಂತೋಷವಾಗಿರಬೇಕು. ಅಲ್ಲದೆ ಗೋಪಾಲ ಮೈಸೂರಿನಿಂದ ಬಂದಿದ್ದ. ಕಾಲೇಜಿನಲ್ಲಿ ಸ್ಟ್ರೈಕಂತೆ. ಒಕ್ಕಲಿಗ ಹುಡುಗರಿಗೂ ಲಿಂಗಾಯಿತರಿಗೂ ಹಣಾಹಣಿ. ಪ್ರಿನ್ಸಿಪಲ್ ಒಕ್ಕಲಿಗರ ಪರವಾಗಿದ್ದಾನೆ ಎಂದು ಉಳಿದ ಕೋಮಿನ ವಿದ್ಯಾರ್ಥಿಗಳಿಂದ ಅವನ ರಾಜೀನಾಮೆಗೆ ಒತ್ತಾಯ – ಗಬ್ಬು ಜನ ಎಂದು ಗೋಪಾಲ ಎಲ್ಲರನ್ನೂ ಹಳಿದ. ನೀಲಕಂಠಸ್ವಾಮಿ, ರಂಗರಾವ್ ಈ ಸುದ್ದಿ ಕೇಳಿ ತಾವು ಮೈಸೂರಿನಲ್ಲಿಲ್ಲೆಂದು ಚಡಪಡಿಸಿದರು. ತಾನು ಜಾತೀಯವಾದಿಯಲ್ಲವೆಂದು ಪ್ರೂವ್‌ಮಾಡಲು ನೀಲಕಂಠಸ್ವಾಮಿ ಸಂಬಂಧಪಟ್ಟವರಲ್ಲಿ ಒಬ್ಬ ಲಿಂಗಾಯತನನ್ನು ಬೈದ; ಇನ್ನೊಬ್ಬನ್ನ ಹೊಗಳಿದ. ಹಾಗೆಯೇ ರಂಗರಾವ್ ಒಕ್ಕಲಿಗ ಪ್ರಿನ್ಸಿಪಾಲ್‌ನನ್ನು ಬೈದ; ಒಕ್ಕಲಿಗ ರಿಜಿಸ್ಟ್ರಾರ್‌ರನ್ನು ಹೊಗಳಿದ. ಅವರಿಬ್ಬರ ನಡುವೆ ಶೀತಯುದ್ಧವನ್ನು ಜಗನ್ನಾಥ ಗಮನಿಸಿದ.

ಅಡಿಗರು ಒಳಗೆ ಕೂತು ಊಟ ಮಾಡಿದರು. ಅನಂತಕೃಷ್ಣ ಬಹಳ ಖುಷಿಯಿಂದ ಅಡಿಗೆ ಹೊಗಳಿದರು, 'ಇವತ್ತು ಸಂಜೆ ಹೊಲೆಯರ ಯುವಕರ ಹತ್ತಿರ ನೀವು ಮಾತಾಡಬೇಕು' ಎಂದು ಜಗನ್ನಾಥ ಕೇಳಿದ್ದಕ್ಕೆ ಅನಂತಕೃಷ್ಣ ಒಪ್ಪಿ, 'ನಿಮ್ಮ ಬಗ್ಗೆ ವಿನೋಬಾರಿಗೆ ಬರೆದಿದ್ದೇನೆ. ಅವರಿಂದ ಆಶೀರ್ವಾದ ಬಂದರೆ ನಮ್ಮ ಚಳುವಳಿಗೆ ದೊಡ್ಡ ಕುಮ್ಮಕ್ಕು ಸಿಕ್ಕಿದಂತೆ' ಎಂದರು. ಜಗನ್ನಾಥನಿಗೆ ಮಾತು ಬೇಡಿತ್ತು. ಊಟ ಮುಗಿಸಿದವನೇ ಎದ್ದು ರೂಮಿಗೆ ಹೋಗಿ ಮಲಗಿದ.

ನೀಲಕಂಠಸ್ವಾಮಿ ಊಟ ಮುಗಿದದ್ದೆ ಮತ್ತೆ ಪ್ರಚಾರ ಮಾಡಲು ಕಾರು ತೆಗೆದುಕೊಂಡು ಹೋಗಿದ್ದ. ತನ್ನನ್ನೂ, ಅವನನ್ನೂ ಅನಂತಕೃಷ್ಣರನ್ನೂ ಹೊಗಳುತ್ತ ಅವನು ಮಾಡುತ್ತಿದ್ದ ಘೋಷಣೆಗಳಿಂದ ಜಗನ್ನಾಥನಿಗೆ ವಾಕರಿಕೆಯಾಯಿತು.

ಬಿಸಿಲಿಳಿಯುತ್ತಿದ್ದಂತೆ ಎದ್ದು ಹೊರಟ – ಪುರಾಣಿಕರ ಮನೆಗೆ. ನಿರ್ಜನವಾದ ಬೀದಿಗಳನ್ನು ಹುಡುಕಿ ಕಳ್ಳನಂತೆ ನಡೆದುಹೋದ. ಮೈಕಿನಿಂದ ಬರುತ್ತಿದ್ದ ಘೋಷಣೆ ಕೇಳಿ ತನ್ನ ಮುಖವನ್ನೆಲ್ಲ ಜನ ನೋಡುವರೊ ಎಂದು ಅವನಿಗೆ ನಾಚಿಕೆಯಾಗಿತ್ತು. ಒಳದಾರಿಗಳಿಂದ ವೇಗವಾಗಿ ನಡೆದು ಪುರಾಣಿಕರ ಮನೆಗೆ ಹೋಗಿಬೆಲ್ ಒತ್ತಿದ. ಯಥಾಪ್ರಕಾರ ಘೂರ್ಕ ಬಂದು ಚೀಟಿಯಲ್ಲಿ ಹೆಸರು ಬರೆಸಿಕೊಂಡು ಹೋದ. ಪುರಾಣಿಕರು ಇಳಿದು ಬಂದು ಕೈಕುಲುಕಿದರು. ಟೈ ಕಟ್ಟಿದ ಅಂಗಿಯ ಕಾಲರ್‌ಹರಿದಿತ್ತು. ಆದರೆ ಇಸ್ತ್ರೀ ಮಾಡಿದ  ಸೂಟು ಅವರ ಮೈ ಮೇಲೆ ನೀಟಾಗಿ ಕೂತಿತ್ತು. ಸ್ವಲ್ಪವೂ ಬೊಜ್ಜು ಬೆಳೆಯದ ಪುರಾಣಿಕರ ದೇಹ ಕಂಡು ಜಗನ್ನಾಥನಿಗೆ ಆಶ್ಚರ್ಯವಾಯಿತು.

'I was feeling terribly lonely. Thanks for coming. My friend Avdhani is terribly ill, you see' ಎಂದು ಮಹಡಿ ಮೇಲೆ ಕರೆದುಕೊಂಡು ಹೋದರು. ಜಗನ್ನಾಥ ಬೇಡವೆಂದರು ಎರಡು ಗ್ಲಾಸ್‌ಗಳಲ್ಲಿ ವ್ಹಿಸ್ಕಿ

ಸುರಿದು ಸೋಡಾ ಬೆರೆಸಿದರು.

'For the success of your intended revolution' ಎಂದು ಗಾಜಿಗೆ ಗಾಜು ತಾಕಿಸಿದರು.

ಜಗನ್ನಾಥ ವ್ಹಿಸ್ಕಿಯನ್ನು ಸವಿಯುತ್ತ ಎಲ್ಲವನ್ನೂ ಮರೆಯಲು ಪ್ರಯತ್ನಿಸಿದ. ಆದರೆ ಪುರಾಣಿಕರ ಮಹಡಿಯ ರೂಮೊಳಗೂ ನೀಲಕಂಠಸ್ವಾಮಿಯ ಅಬ್ಬರ ಕ್ಷೀಣವಾಗಿ ಕೇಳಿಸುತ್ತಿತ್ತು. ಪುರಾಣಿಕರು ಮತ್ತೆ ತನ್ನ ಗ್ಲಾಸನ್ನು ತುಂಬಲು ಬಂದಾಗ ಜಗನ್ನಾಥ ಬೇಡೆನ್ನಲಿಲ್ಲ. ಕಾಲು ಚಾಚಿ ಕೂತು ಕಣ್ಣು ಮುಚ್ಚಿದ, ಆದರೂ ಮನಸ್ಸಿಗೆ ಶಾಂತಿಯಿರಲಿಲ್ಲ. ಮಾರ್ಗರೆಟ್ ಕಾಗದದ ಕೊನೆಯ ಪ್ಯಾರಾದ ಮಾತುಗಳನ್ನು ಮತ್ತೆ ಮತ್ತೆ ಮನಸ್ಸು ತಿರುವಿಹಾಕುತ್ತಿತ್ತು. ಪುರಾಣಿಕರು ರೇಡಿಯೋ ಹಾಕಿದರು. ಎಲ್ಲಿಂದಲೋ ಪಿಯಾನೊ ಸಂಗೀತ ತೇಲಿಬಂತು. ಪುರಾಣಿಕರು ಕೊಟ್ಟ ಚುಟ್ಟವನ್ನು ಜಗನ್ನಾಥ ಹಚ್ಚಿದ. ಪುರಾಣಿಕರೆ ಮಾತಿಗೆ ಶುರುಮಾಡಿದರು.

'I have kept ready for you the material I once gathered on Bhootha Raya. There is a curious folk song in it with two or three differenet versions. You know, only those women who have passed their menopause can go up the hill of Bhootharaya? The belief is that if a girl menstruates on the hill she can't come down; she becomes the possession of Bhootharaya. This song describes the deluge and how it happens. A headstrong brahmin girl goes up the hill and menstruates. Thus she becomes the possession of Bhootharaya. She isn't satisfied and sleeps with a paraiah. Bhootharaya is enraged. He comes down the hill and destroys the town in a furious dance. Not even his Lord Manjunatha is able to control him. Evil is let loose. In another version, which is more interesting, the Bhootharaya enjoys her in different forms as a bull, as horse, as a wild bear and then as a shudra and finally as a paraiah. The girl refuses him in the form of a paraiah and so the Bhootharaya is enraged and destroys the town. A very curious story. You must read it'.

ಜಗನ್ನಾಥ ಪುರಾಣಿಕರಿಂದ ದಾರದಲ್ಲಿ ಕಟ್ಟಿದ್ದ ಕಾಗದದ ಕಂತೆಯನ್ನು ತೆಗೆದುಕೊಂಡು ಹೊರಟ. ಮನೆಗೆ ಬಂದಾಗ ನೀಲಕಂಠಸ್ವಾಮಿ, ರಂಗರಾವ್ ಮತ್ತು ಅವರ ಅನುಯಾಯಿಗಳು ಅಂಗಳದಲ್ಲಿ ಕೂತು ಮಾತಾಡುತ್ತಿದ್ದರು. ಅಂಗಳದಾಚೆ ಅನಂತಕೃಷ್ಣರು ಹೊಲೆಯರ ಯುವಕರಿಗೊಂದು ಭಾಷಣ ಬಿಗಿಯುತ್ತಿದ್ದರು. ನೀಲಕಂಠಸ್ವಾಮಿಯನ್ನು ನೋಡಿದ ಕೂಡಲೆ ಜಗನ್ನಾಥನಿಗೆ ರೇಗಿತು:

‘ರೀ ಮಿಸ್ಟರ್ ನೀಲಕಂಠಸ್ವಾಮಿ, ನನ್ನನ್ನ ಹೊಗಳ್ತ ನಮ್ಮೂರಲ್ಲೆ ನೀವು ಪ್ರಚಾರ ಮಾಡಿದ್ದು ನನಗೆ ಹಿಡಿಸ್ಲಿಲ್ಲ. It was a very vulgar thing to do. ನಿಮ್ಮ ರಾಜಕೀಯಾನ ದಯವಿಟ್ಟು ಇಲ್ಲಿ ತರಬೇಡಿ’.

ಆಡಿಬಿಟ್ಟ ಮೇಲೆ ತನ್ನ ಮಾತು ಅನಾವಶ್ಯಕವಾಗಿ ಕ್ರೂರವಾಯಿತು ಎನ್ನಿಸಿತು. ಆದರೆ ಅವನ ಮುಖ ಕೆಂಪಾಗಿ ಮೈಕೈಯೆಲ್ಲ ನಡುಗುತ್ತಿತ್ತು. ನೀಲಕಂಠಸ್ವಾಮಿ ನಿರ್ಲಜ್ಜೆಯಿಂದ ಹೇಳಿದ:

‘ರಾಜಕೀಯ ನಿಮಗೆ ಹೊಸದು ಸಾರ್. ಅದಕ್ಕೇ ಹೀಗೆ ಮಾತಾಡ್ತೀರಿ. ಗ್ಲೌಸ್ ಹಾಕಿದ ಕೈಯಿಂದ ಕ್ರಾಂತಿ ಮಾಡೋಕೆ ಸಾಧ್ಯವಿಲ್ಲ. ಕೈ ಕೊಳೆ ಮಾಡಿಕೊಳ್ಳೋಕೆ ಹೇಸಿಗೆ ಪಡಬಾರ್ದು.’

‘I am sorry. ನಿಮ್ಮ ರಾಜಕೀಯಕ್ಕೆ ಈ ಸಿಚುಯೇಶನ್ನನ್ನ ದಯಮಾಡಿ ಎಕ್ಸ್‌ಪ್ಲಾಯಿಟ್ ಮಾಡಿಕೋಬೇಡಿ.’

ನೀಲಕಂಠಸ್ವಾಮಿ ತನ್ನ ಕೋಪವನ್ನ ಮನಸ್ಸಿಗೆ ಹಚ್ಚಿಕೊಂಡಂತೆ ಕಾಣಲಿಲ್ಲ. ಆದರೂ ತಾನು ಕೋಪಗೊಂಡೆನೆಂದು ಜಗನ್ನಾಥನ ಮನಸ್ಸಿಗೆ ಸಮಾಧಾನವಾಯಿತು. ತಾನು ಈ ಕುಹಕ ರಾಜಕಾರಣಿಗಳ ಕೈಗೊಂಬೆಯಾಗಬಾರದೆಂದು ನಿಶ್ಚಯಮಾಡಿ ಸೀದ ರೂಮಿಗೆ ಹೋದ. ಆದರೆ ತನ್ನ ಕೋಪಕ್ಕೆ ಬರೇ ನೀಲಕಂಠಸ್ವಾಮಿ ಕಾರಣನೆ? ಜಗನ್ನಾಥನ ಮೈ ಬಿಸಿಯಾಗಿತ್ತು. ಮಲಗಿಕೊಂಡು ಕಣ್ಣುಮುಚ್ಚಿದ.

ತ್ರಯೋದಶಿ. ಜಗನ್ನಾಥ ಬೆಳಿಗ್ಗೆ ಬೇಗ ಎದ್ದು ಮುಖ ತೊಳೆದು ಸ್ವೆಟರ್ ಹಾಕಿಕೊಂಡು ಹೊರಗೆ ಬಂದ. ಮಾರ್ಗರೆಟ್ ಕೊಟ್ಟ ಸ್ವೆಟರ್ ಅದೆಂದು ನೆನಪಾಗಿ ಮತ್ತೆ ಸಂಕಟವೆಲ್ಲ ಮರುಕಳಿಸಿತು. ಚಳಿ, ಗುಡ್ಡವನ್ನು ವೇಗವಾಗಿ ಹತ್ತಿದ. ಭಾರತೀಪುರವಿದ್ದ ಕಣಿವೆಯ ಒಳಗೆ ಸೂರ್ಯನಿಗೆ ಚೂರು ಚೂರೇ ಕರಗುತ್ತಿರುವ ಬೂರುಗನ ಹತ್ತಿಯಂತೆ ಹಗುರವಾದ ಮಂಜು. ಈಗ ಮಂಜು ಅಮುಕಿರುವ ಬೆಳಕು. ಕ್ರಮೇಣ ಮಂಜಿನ ತುಂಬ ತುಳುಕುವ ಬೆಳಕು. ಈಗ ಕಾಣುತ್ತಿರುವುದರ ಹಿಂದೆ ನೆನಪುಗಳೂ ಇವೆ. ಇದೇ ಚಳಿ, ಇದೇ ಮಂಜು, ಇದೇ ಬೆಳಗಿನ ಝಾವದ ಹಸುಗೂಸಿನಂಥ ಬೆಳಕು ತಾಯಿಯ ಕೈ ಹಿಡಿದು ನಡೆಯುವಾಗ, ಮತ್ತೆ ಈಗ. ಯಾತನೆಯಲ್ಲಿರುವಾಗ ಅವತ್ತು ಸ್ನಾನಕ್ಕೆ ಇಳಿದಾಗ ನದಿಯ ನೀರು ಬೆಚ್ಚಗೆ. ಅಹಹಾ ಎನ್ನುವ ಬಾಯಿಂದ ಹಬೆ, ಇದನ್ನೆಲ್ಲ ಹಿಂದೆಂದೂ ನೆನೆದಿದ್ದೇನೆ. ಪಾಚಿಗಟ್ಟಿದ ಪಾಗಾರ. ಅದರ ಮೇಲೆ ಕೋತಿ.

ಯಾವಾಗ ಯೋಚಿಸಿದ್ದು? ಈವಿಲ್‌ನಂತೆ ಕಂಡರೆ ಕಾಣಲಿ. ಪಿಳ್ಳ ಕೊಡಲಿಯ ಹರಿತವಾದ ಅಂಚು; ನಾನದರ ಕಾವು. ಅವನು ಪಡೆಯಬೇಕು; ನಾನು ಬಿಡಬೇಕು. ಪಡೆದು ಅವನು ಬಿಡುವುದನ್ನು ಕಲಿಯಬೇಕು. ಚರಿತ್ರೆ ಆಗ ಚಲಿಸುತ್ತದೆ.

ಪ್ರಾತಃಕಾಲ ದೇವರನ್ನು ಎಬ್ಬಿಸಲು ಹಾಡುತ್ತಾರೆ. ಮೈಮುರಿದು ಊರು ಎಚ್ಚರಾಗುವುದಕ್ಕೆ ನಾನು ಕಾದಿದ್ದೇನೆ. ಇವತ್ತು ಹೊಲೆಯರ ಗುಡಿಸಲಿಗೆ ಹೋಗುತ್ತೇನೆ. ಆದದ್ದಾಗಲಿ.

ಮನೆಗೆ ಬಂದು ಎಲ್ಲರ ಜೊತೆ ಕೂತು ಉಪ್ಪಿಟ್ಟು ತಿಂದು ಕಾಫಿ ಕುಡಿದ. ಊಟದ ಮನೆಯಲ್ಲಿ ಸಂಭ್ರಮದ

ವಾತಾವರಣವಿತ್ತು. ಸಂಜೆಯ ಕಾರ್ಯಕ್ರಮವನ್ನು ಪ್ರಸಾರ ಮಾಡಲು ಮತ್ತೆ ನೀಲಕಂಠಸ್ವಾಮಿ, ರಂಗರಾವ್ ಮತ್ತು ಅವರ ಗೆಳೆಯರು ಹೋದರು. ಬೆಳಗಿನಿಂದ ಚಿಕ್ಕಿ ಕಂಡಿರಲಿಲ್ಲ. ಏನು ಮಾಡುತ್ತಿರುವರೆಂದು ನೋಡಲು ಅಡಿಗೆ ಮನೆಗೆ ಹೋದ. ಭಾಗ್ಯವನ್ನು ತರಕಾರಿ ಹೆಚ್ಚುತ್ತಿದ್ದರು. ಚಿಕ್ಕಿ ಮಗ್ನರಾಗಿ ಮಣ್ಣಿನ ಒಲೆಯೊಂದನ್ನು ಕೊರೆಯುತ್ತಿದ್ದರು – ಕೋಡಲೊಲೆ. ಅವರು ಕೊರೆದ ಒಲೆ ತುಂಬ ಚೆನ್ನಾಗಿ ಉರಿಯುತ್ತದೆಂದು ಪ್ರಸಿದ್ಧಿ. ತಾನು ನಿಂತಿದ್ದು ಚಿಕ್ಕಿಗಾಗಲೀ ಭಾಗ್ಯಮ್ಮ ನಿಗಾಗಲೀ ಕಾಣಿಸಿರಲಿಲ್ಲ. ಚಿಕ್ಕಿಯ ಏಕಾಗ್ರತೆ ಕಂಡು ಆಶ್ಚರ್ಯವಾಯಿತು. ಬಂದವರಿಗೆ ಎಲ್ಲ ತಲ್ಲಣವನ್ನೂ ನುಂಗಿಕೊಂಡು ಅಡಿಗೆ ಮಾಡಿ ಬಡಿಸುತ್ತಿರುವ ಚಿಕ್ಕಿ ಬಗ್ಗೆ ಕೃತಜ್ಞನಾಗಿ ಮಾತಾಡದೆ ತನ್ನ ರೂಮಿಗೆ ಹೋಗಿ ಮಾರ್ಗರೆಟ್‌ಗೆ ಕಾಗದ ಬರೆಯಲು ಕೂತ.

Dear Margaret ಎಂದು ಪ್ರಾರಂಭಿಸಿ ಗಂಭೀರವಾದ ಬಿಗಿಯಾದ ಒಂದು ಕಾಗದ ಬರೆದ. ಕಾಗ ಸುಳ್ಳೆನಿಸಿತು. ಮೇಜಿನ ಮೇಲಿದ್ದ ಅವಳ ಫೋಟೋ ನೋಡಿ ಅವಳನ್ನು ಕಳೆದುಕೊಂಡ ಯಾತನೆ ಮರುಕಳಿಸಿತು. ಕೆನ್ನೆಮೇಲೆ ಇಳಿದ ಕೂದಲು: ಏನೋ ತುಂಟು ಮಾತಾಡಲು ಬಗ್ಗಿದ್ದಾಳೆ. ಕಣ್ಣು ನಗುತ್ತಿವೆ. ಅವಳ ಬೆನ್ನ ಹಿಂದೆ ತಮ್ಮ ಫ್ಲ್ಯಾಟಿನ ಹಿತ್ತಲಲ್ಲಿದ್ದ ಸೇಬಿನ ಮರ. ತಾನು ತೆಗೆದ ಫೋಟೋ. ಆ ಮರದ ಕೆಳಗೇ ಮಲಗಿ ತನ್ನನ್ನವಳು ತ್ಯಜಿಸಿದ್ದಳು. ಈಗ ಕ್ರಿಯೆಯಲ್ಲಿ ಮತ್ತೆ ತ್ಯಜಿಸಿದಳು.

ಮಾರ್ಗರೆಟ್‌ಗೆ ಬೇರೆಯಾಗುವ ಸ್ವಾತಂತ್ರ್ಯವಿರಬೇಕು. ಇದ್ದೂ ತನ್ನ ವಸ್ತುವಾಗಿರಬೇಕು; ಹಾಗೆ ತನ್ನ ವಸ್ತುವಾಗಿದ್ದಾಗಲೂ ಸ್ವತಂತ್ರವಾಗಿ ಉಳಿದಿರಬೇಕು. ಇದು ತನ್ನ ಬಯಕೆ. ಅವಳು ತನ್ನ ವಸ್ತುವಾಗಿ ದಕ್ಕದೆ ಪ್ರೀತಿ ಸಫಲವಾಗಲ್ಲ; ಆದರೆ ತನ್ನಿಂದ ಪ್ರತ್ಯೇಕಳು ಅನ್ನಿಸದೆ ಪ್ರೀತಿ ಉಳಿಯಲ್ಲ. ತದ್ವಿರುದ್ಧ – ಆದಜೆ ನಿಜ. ಅದಕ್ಕೇ ಪ್ರೀತಿಸುವುದೆಂದರೆ ಯಾತನೆ.

Darling ಎಂದು ಪ್ರಾರಂಭಿಸಿ ಇನ್ನೊಂದು ಕಾಗದ ಬರೆದ. ಉದಾತ್ತವಾಗಿ ಅವಳನ್ನು ಕ್ಷಮಿಸುವ ಪ್ರೀತಿ ತುಂಬಿ. ಆದರೆ ಈ ಕಾಗದವೂ ಅವಳ ಸ್ವಾತಂತ್ರ್ಯವನ್ನು ಅಪಹರಿಸಿ ಅವಳಲ್ಲಿ ಪಾಪಪ್ರಜ್ಞೆ ಬಿತ್ತುವ ಸೂಕ್ಷ್ಮ ಉಪಾಯವೆನ್ನಿಸಿತು. ಕಷ್ಟವೆಂದರೆ; ಯಾತನೆಯಲ್ಲಿದ್ದಾಗ ಯಾವ ತೋರಿಕೆಯೂ ಇಲ್ಲದೆ ಬಿಚ್ಚಿಕೊಳ್ಳುವುದು.

ಹರಿದು ಹಾಕಿ ಮತ್ತೆ ಬರೆದ. Dearest Margaret, ನನ್ನ ಉದಾತ್ತತೆ ಸೋತಲ್ಲಿ ಅವನ ಅಸೂಯೆ, ಕೀಳುತನ, ತೀವ್ರತೆ ಗೆದ್ದಿದೆ. ನನ್ನ ಉದಾತ್ತತೆಯನ್ನು ಮತ್ತೆ ನೀನು ಹೀಗೆ ಪರೀಕ್ಷೆಗೆ ಒಡ್ಡಿದ್ದಿ. ನನ್ನ ಸೋಲನ್ನು ಅರ್ಥಮಾಡಿಕೊಳ್ಳುತ್ತೇನೆ. ನಿನ್ನ ವ್ಯಕ್ತಿತ್ವ ನನಗೆ ಅರ್ಥಪೂರ್ಣವಾದ್ದರಿಂದ ನನ್ನನ್ನು ಬಿಟ್ಟು ಅವನು ನಿನಗೆ ಯಾಕೆ ಬೇಕೆನ್ನಿಸಿತೆಂಬುದನ್ನು ತಿಳಿಯಲು ಪ್ರಯತ್ನಿಸುತ್ತೇನೆ. ಕನಿಕರದ ಅವಶ್ಯಕತೆಯಿಲ್ಲ. ನಾನು ನಿಜವಾಗಿ ಬೇಕೆನ್ನಿಸುವ ಘಳಿಗೆ ಬಂದೀತು. ಅದಕ್ಕಾಗಿ ಗಟ್ಟಿಯಾಗಿ ಇಡಿಯಾಗೆ ಕಾದಿರುತ್ತೇನೆ – ಜಗನ್.

ಬರೆದದ್ದನ್ನು ಮತ್ತೆ ಓದಿದ. ಚಂದ್ರಶೇಖರನ ಹೆಸರನ್ನು ಕಾಗದದಲ್ಲಿ ಯಾಕೆ ತಾನು ಎಲ್ಲೂ ಎತ್ತಿರಲಿಲ್ಲ ? ಹೆಸರೆತ್ತಿ ಬರೆಯುವುದು ಯಾತನೆಯಾದ್ದರಿಂದ 'ಅವನು' ಎಂದು ಬರೆದ. ಮಾರ್ಗರೆಟ್ ಪ್ರೀತಿಸುವವನನ್ನು ಅನಾಮಧೇಯನೆಂದು ಕಾಣುವುದು ಸಣ್ಣತನವಾದೀತು. ಮತ್ತೊಮ್ಮೆ ಕಾಗದವನ್ನು ಅಲ್ಲಲ್ಲಿ ತಿದ್ದಿ ಬರೆದ; ಮಾರ್ಗರೆಟ್ ಆಪ್ತವಾಗಿ ಕರೆಯುವ

'ಚಂದರ್' ಎನ್ನುವ ಹೆಸರನ್ನೆ ಉಪಯೋಗಿಸಿದ. ಹಾಗೆ ಬರೆಯುವಾಗ ಅವರಿಬ್ಬರೂ ಬೆತ್ತಲೆಯಾಗಿ ಒಟ್ಟಿಗಿರುವ ಸನ್ನಿವೇಶವನ್ನು ಕಂಡಂತಹ ಯಾತನೆಪಟ್ಟ. ಗೆದ್ದೆ ಎನ್ನಿಸಿ ಬರೆದದ್ದನ್ನು ಓದಿದ. ಆದರೆ ಈ ಬದಲಾವಣೆಯಿಂದಾಗಿ ಚಂದ್ರಶೇಖರನ ಬಗ್ಗೆ ತನಗೆ ಅಸೂಯೆಯಿಲ್ಲೆಂದು ತೋರಿಸಿಕೊಳ್ಳುವ ಸುಳ್ಳು ಉದಾತ್ತತೆ ಕಾಗದದಲ್ಲಿ ಇಣುಕಿತ್ತು.

ತನಗೆ ಬೇರೆ ಮಾರ್ಗವಿಲ್ಲೆನಿಸಿತು. ಕಾಗದದ ತುದಿಯಲ್ಲಿ ಇವತ್ತು ನಾನು ಹೊಲೆಯರ ಗುಡಿಗಳಿಗೇ ಹೋಗುವ ಸಾಹಸ ಮಾಡುತ್ತಿದ್ದೇನೆ ಎಂದು ಬರೆದು ಸೀದ ಪೋಸ್ಟ್‌ಬಾಕ್ಸ್ ಇದ್ದಲ್ಲಿಗೆ ನಡೆದು ಹೋಗಿ ಕಾಗದ ಪೋಸ್ಟ್ ಮಾಡಿ ಬಂದ. ಮನಸ್ಸು ಹಗುರಾಗಿತ್ತು.

ಮಧ್ಯಾಹ್ನ ಊಟಕ್ಕೆಲ್ಲರೂ ಸೇರಿದ ಹೊತ್ತಿಗೆ 'ಇವತ್ತು ನಾನು ಭಾಷಣ ಮಾಡಲ್ಲ. ನೀವೇ ಕಾರ್ಯಕ್ರಮ ನಡೆಸಿ' ಎಂದ. ನೀಲಕಂಠಸ್ವಾಮಿಗೆ ಶಾಕ್ ಆಗಿರಬೇಕು. 'ಛೇ ನೀವು ಹಾಗೆ ಹಿಂದೆಗೆಯಬಾರದು' ಎಂದ. 'ಹಿಂದೆಗೆಯುವ ವಿಷಯವಲ್ಲ. ಬೇರೆ ಕಾರ್ಯಕ್ರಮವಿದೆ. ಮಾತಾಡಿ ಪ್ರಯೋಜನವಿಲ್ಲವೆನ್ನಿಸತ್ತೆ' ಎಂದ. ಅದಕ್ಕೆ ಅನಂತಕೃಷ್ಣರು 'ಹರಿಜನರ ಬಗ್ಗೆ ಸವರ್ಣೀಯರು ಪ್ರೀತಿಯಿಂದ ನಡೆದುಕೊಳ್ಳುವಂತೆ ಮಾಡಬೇಕು. ಅದೇ ಗಾಂಧೀಜಿಯ ಆದೇಶ. ನೀವು ಮಾತಾಡಿದರೆ ಜನ ಒಲಿದಾರು' ಎಂದರು. ಜಗನ್ನಾಥ 'ನನ್ನ ಉದ್ದೇಶ ಅದಲ್ಲ, ಹೊಲೆಯರು ಪ್ರತಿಭಟಿಸುವಂತೆ ಮಾಡೋದೇ ಮುಖ್ಯ. ಹೊಲೆಯರು ಮೊದಲು ವ್ಯಕ್ತಿಗಳಾಗಬೇಕು. ಆದ್ದರಿಂದ ಮಾತಾಡಿ ಪ್ರಯೋಜನ ಇಲ್ಲಾಂತ ನಿರ್ಧರಿಸಿದ್ದೇನೆ' ಎಂದ. ರಾಯರು ಚರ್ಚೆಯಲ್ಲಿ ಭಾಗವಹಿಸಲಿಲ್ಲ. ಊಟವಾದ ಮೇಲೆ ನೀಲಕಂಠಸ್ವಾಮಿಗೆ, 'ನಿಮ್ಮ ಪ್ರಚಾರ ನೀವು ಮಾಡಿ. ನನ್ನನ್ನ ತಪ್ಪು ತಿಳಿಯಬೇಡಿ. ನಾನು ಬೇರೆ ಕಾರ್ಯಕ್ರಮ ಹಾಕಿಕೊಂಡಿದ್ದೇನೆ. ಭಾಷಣ ಮಾಡೋಕಿಂತ ಮುಖ್ಯವಾದ್ದು' ಎಂದು ಹೇಳಿ ಒಪ್ಪಿಸಿದ. 'ನೀವು ಮಾತಾಡ್ತೀರಿ ಅಂದ್ರೆ ಜನ ಬರ್ತಾರೆ' ಎಂದ ರಂಗರಾವ್.

ಎಲ್ಲರೂ ಮತ್ತೆ ಪ್ರಚಾರಕ್ಕೆ ಹೋದರು. ಜಗನ್ನಾಥ ರೂಮಿಗೆ ಹೋಗಿ ನೋಟ್‌ಬುಕ್ಕಲ್ಲಿ ಬರೆದ; ನಿಶ್ಚಯದ ಕ್ರಿಯೆಗೆ ಗಟ್ಟಿಯಾಗಬೇಕು; ನೋವಿಗೆ, ಸುಖಕ್ಕೆ ಒಳಗೆ ಮೃದುವಾಗಿಯೂ ಉಳಿಯಬೇಕು. ನಾಗಮಣಿಯ ಸಾವನ್ನ ಅರ್ಥಮಾಡಿಕೋಬೇಕು.

ಒಂದು ಧಾಸಾಳ ಭಾವನೆ ಒಳಗರಳುತ್ತಿತ್ತ. ಬರೆದ : ಚಿಕ್ಕಿಯಂಥವರಿಗೆ ಹೊಲೆಯರು ಗೊತ್ತು. ಯಾರು ಕೆಲಸದಲ್ಲಿ ಕಳ್ಳರು, ಯಾರು ಬಸುರಿ, ಯಾವಳನ್ನು ಯಾರು ಇಟ್ಟುಕೊಂಡಿದ್ದಾರೆ, ಇವಳಿಗೆಷ್ಟು ಮಕ್ಕಳು, ಎಷ್ಟು ಸತ್ತವು ? ಆದರೆ ನಾನು ಬೇರೊಂದು ಸಂಬಂಧದಲ್ಲಿ ಅವರನ್ನು ಇನ್ನಷ್ಟು ಆಳವಾಗಿ ಅರಿಯಲು ಹೊರಟಿದ್ದೇನೆ. ಅದಕ್ಕಾಗಿ ಮಂಜುನಾಥ, ನನ್ನ ಪೂರ್ವಸ್ಮೃತಿ, ಒಳಗೆ ಮೊಳಗುವ ದೇವಾಲಯದ ಘಂಟೆಗಳು, ಜನರ ಅದರ – ಎಲ್ಲವನ್ನೂ ನಾಶಮಾಡುತ್ತೇನೆ. ವಿಸರ್ಜಿಸಿಕೊಳ್ಳುತ್ತೇನೆ, ಬಿಡುತ್ತ ಪಡೆಯುತ್ತೇನೆ. ಅವುಗಳೂ ಪಡೆದು ಬಿಡುವುದನ್ನು ಕಲಿಯುತ್ತಾರೆ. ಈ ಕ್ಷುದ್ರರ ಸ್ವಾತಂತ್ರ್ಯ ಹಿಗ್ಗಿಸುವುದರಲ್ಲೆ ನನ್ನ ಸ್ವಾತಂತ್ರ್ಯ ಹಿಗ್ಗುತ್ತದೆ. ಹೊಸ ವಾಸ್ತವದಲ್ಲಿ ಮಾರ್ಗರೆಟ್ಟನ್ನು ಮತ್ತೆ ಪಡೆಯುತ್ತೇನೆ.

ರಾಯರು ಅವಸರವಾಗಿ ಬಂದರು. ಜಗನ್ನಾಥ ಪ್ರಶ್ನಾರ್ಥಕವಾಗಿ ಅವರನ್ನು ನೋಡಿದ. 'ಆಳುಗಳನ್ನ ಕೆಲಸದಿಂದ ಬಿಡಿಸಿದ್ದು

ಯಾರೂಂತ ನಿನಗೆ ಗೊತ್ತಿ?' ಎಂದು ಕೇಳಿ ಕೂತು ಎಲೆಯಡಿಕೆ ಹಾಕುತ್ತ ಪ್ರಭುವಿನ ಮಸಲತ್ತನ್ನೆಲ್ಲ ವರ್ಣಿಸಿದರು. 'ನಿನಗೆ ಅವನಿಂದ ಅಪಯವಿದೆ' ಎಂದು ಎಚ್ಚರಿಸಿ ಅನಂತಕೃಷ್ಣರ ಜೊತೆ ಹರಟಲು ಹೋದರು.

ಸಾಯಂಕಾಲವಾಗುವುದಕ್ಕಾಗಿ ಜಗನ್ನಾಥ ಕಾದ. ಯಾವ ಹೊಳೆಯನೂ ಭಾಷಣಕ್ಕೆ ಹೋಗಿರುವುದಿಲ್ಲವೆಂದು ಅವನಿಗೆ ಗೊತ್ತಿತ್ತು. ಮುಖ ತೊಳೆದು ಶುಭ್ರವಾದ ಬಟ್ಟೆ ತೊಟ್ಟು ತಲೆ ಬಾಚಿಕೊಂಡು ಪ್ರಸನ್ನ ಮನಸ್ಸಿನಿಂದ ಹೊಲೆಯರ ಗುಡಿಗಳ ಕಡೆ ನಡೆದ. ಹುಡುಗನಾಗಿದ್ದಾಗ ತಾಯಿ ಹೇಳುತ್ತಿದ್ದುದು ನೆನಪಾಯಿತು. ತಮ್ಮ ಗುಡಿಗಳೊಳಗೆ ಬ್ರಾಹ್ಮಣರು ಬಂದರೆ ಹೊಲೆಯರು ಹೊಡೆದಟ್ಟುತ್ತಾರೆ; ತಾವು  ನಾಶವಾಗುತ್ತೇವೆಂದು ಹೆದರುತ್ತಾರೆ. ಜಗನ್ನಾಥನಿಗೆ ದಿಗಿಲಾಯಿತು.

ಗುಡ್ಡದ ಮೇಲಿದ್ದ ಸೋಗೆ ಹೊದೆಸಿದ ಗುಡಿಗಳನ್ನು ನೋಡುತ್ತಾ ನಡೆದ. ತಾನು ಒಳಗೆ ಹೋಗಿ ನಿಂತ ಘಳಿಗೆ ಹೊಲೆಯರಿಗೆ ಆಗಬಹುದಾದ ದಿಗಿಲನ್ನು ನೆನೆದು ಅವನ ಮೈ ಬೆವತಿತು. ಎಲ್ಲವನ್ನೂ ಎದುರಿಸದೆ ವಿಧಿಯಿಲ್ಲವೆನ್ನಿಸಿತು. ನೆಟ್ಟಗೆ ನಡೆದ. ಯಾರೂ ಕಾಣಿಸಲಿಲ್ಲ. ಹಿತ್ತಲಲ್ಲಿ ಹೊಲತಿಯೊಬ್ಬಳು ಮೂರು ಕಲ್ಲಿನ ಮೇಲೆ ಕಲ್ಲಿನ ದೊಡ್ಡ ಮಡಿಕೆಯೊಂದನ್ನಿಟ್ಟು ಉರಿ ಹಾಕುತ್ತಿದ್ದಳು. ರಾತ್ರೆ ಮೀಯಲೆಂದಿರಬೇಕು. ಸಂಜೆಯ ಚಳಿಯಲ್ಲೂ ಮೈ ಮೇಲೆ ಒಂದು ಚೂರೂ ಬಟ್ಟೆಯಿಲ್ಲದ ಸಿಂಬಳ ಬುರುಕ ಮಕ್ಕಳು ಕೆಲವು ನೆಲದ ಮೇಲೆ ಆಡುತ್ತಿದ್ದುವು.

'ಪಿಳ್ಳ'

ಎಂದು ಕೂಗುತ್ತ ಜಗನ್ನಾಥ ಗುಡಿಯೊಂದರ ಎದುರು ನಿಂತ. ಯಾರ ಗುಡಿಯೊ? ದೇವಸ್ಥಾನಕ್ಕೂ ಗುಡಿ ಎನ್ನುತ್ತಾರೆ; ಹೊಲೆಯರು ವಾಸ ಮಾಡುವ  ಜಾಗಕ್ಕೂ ಗುಡಿ ಎನ್ನುತ್ತಾರೆ, ವಿಚಿತ್ರ. 'ಪಿಳ್ಳ' ಎಂದು ಮತ್ತೆ ಕರೆದು ಹಿಂದಕ್ಕೆ ತಿರುಗಿ ನೋಡಿದ.

ಎಲ್ಲೆಲ್ಲಿಂದಲೋ ಹೊಲೆಯರು ಪ್ರತ್ಯಕ್ಷವಾಗಿ ನಿಂತಿದ್ದುವು. ತಲೆ ಕೆದರಿ ಲಂಗೋಟಿ ಮಾತ್ರ ತೊಟ್ಟ ಬರಿ ಮೈಯಲ್ಲಿ ನಿಶ್ಚೇಷ್ಟಿತರಾದಂತೆ. ಕಡೆದು ನಿಲ್ಲಿಸಿದ ಕಪ್ಪು ಶಿಲೆಯ ವಿಗ್ರಹಗಳಂತೆ. ಜಗನ್ನಾಥ ನಸುನಗಲು ಪ್ರಯತ್ನಿಸುತ್ತ 'ಪಿಳ್ಳ ಇದಾನ?' ಎಂದು ಕೇಳಿದ. ಉತ್ತರವಿಲ್ಲ. ಭಯವಾಯಿತು.

'ಸ್ವಲ್ಪ ಕೆಲಸವಿತ್ತು. ನೋಡೋಣಾಂತ ಬಂದೆ.'

ತನ್ನ ನಯವಾದ ಮಾತಿನಿಂದ ಇನ್ನಷ್ಟು ಹೊಲೆಯರಿಗೆ ಗಾಬರಿಯಾಗಿರಬೇಕು. ಯಾರೂ ಚಲಿಸಲಿಲ್ಲ. ಮಕ್ಕಳು ಮಾತ್ರ ಆಡುತ್ತಲೇ ಇದ್ದವು. ಸೂರ್ಯ ಮುಳುಗುತ್ತಿದ್ದ. ಇಡೀ ಸನ್ನಿವೇಶ ಯಾವ ಸದ್ದು ಇಲ್ಲದೇ ಕೃತಕವಾಗಿತ್ತು. ಅಲ್ಲೊಬ್ಬ ಇಲ್ಲೊಬ್ಬನಂತೆ ಹೊಲೆಯರು ನಿಂತು ತನ್ನನ್ನು ದುರುಗುಟ್ಟಿ ನೋಡುತ್ತಿರುವುದು ಜಗನ್ನಾಥನಿಗೆ ಅಸಹನೀಯವಾಯಿತು ಅಧಿಕಾರವಾಣಿಯಿಂದ ಕೇಳಿದ :

'ಯಾಕೆ ಹಾಗೆ ನನ್ನ ನೋಡ್ತ ಇದೀರಿ ? ಇಲ್ಲಿದಾನೆ ಪಿಳ್ಳ ಹೇಳಿ'.

ಆಗತಾನೇ ಪಿಳ್ಳ ಬಂದಿರಬೇಕು. ಬಿಳಿ ಬಟ್ಟೆಯುಟ್ಟು ಅವಸರವಾಗಿ ಕುಂಟುತ್ತ ತನ್ನೆಡೆಗೆ ಅವನು ಬಂದ. ಅವನ ಮುಖದಲ್ಲೂ ದಿಗಿಲಿತ್ತು. ಆದರೂ ಹೇಳಿದ :

'ಬನ್ನಿ ಒಡೆಯ ಕೂತುಕೊಳ್ಳಿ'.

ಪಿಳ್ಳ ತನ್ನ ಗುಡಿಯ ಕಡೆ ನಡೆದ. ಗೆದ್ದೆನೆಂಬ ಸಂತೋಷದಿಂದ ಜಗನ್ನಾಥನೂ ಅವನ ಜೊತೆ ನಡೆದ. ಗುಡಿಯ ತಟ್ಟಿಯ ಬಾಗಿಲನ್ನು ತೆರೆದು 'ಬನ್ನಿ ಒಡೆಯ' ಎಂದು ಪಿಳ್ಳ ಕರೆದ. ತಾನು ಬಯಸಿದ್ದಕ್ಕೂ ಮಿಗಿಲಾಗಿ ಸನ್ನಿವೇಶ ಬದಲಾದ್ದು ಕಂಡು ಜಗನ್ನಾಥ ಆಶ್ಚರ್ಯಪಡುತ್ತ ಒಳಗೆ ಹೋದ.

ಅಟ್ಟದಿಂದ ಇಳಿಬಿಟ್ಟ ಕೆಲವು ಬುಟ್ಟಿಗಳು, ಒಂದೆರಡು ಮಡಕೆಯಲ್ಲದೆ ಪಿಳ್ಳನ ಗುಡಿಯಲ್ಲಿ ಇನ್ನೇನೂ ಇರಲಿಲ್ಲ. ಆದರೆ ಹೊಳೆಯುವಂತೆ ಉಜ್ಜಿದ ಮಣ್ಣಿನ ನೆಲ ಸ್ವಚ್ಛವಾಗಿತ್ತು. ಜಗನ್ನಾಥನಿಗೆ ಕೂರಲು ಏನು ಕೊಡುವುದೆಂದು ತಿಳಿಯದೆ ತಬ್ಬಿಬ್ಬಾದ ಪಿಳ್ಳನಿಗೆ 'ಏನೂ ಬೇಡ'ವೆಂದು ಜಗನ್ನಾಥ ನೆಲದ ಮೇಲೇ ಕೂತ.

ದೂರದಲ್ಲಿ ನಿಂತಿದ್ದ ಹೊಲೆಯರೆಲ್ಲ ಪಿಳ್ಳನ ಗುಡಿಯನ್ನು ಸುತ್ತುವರೆದರು. ಅವರಲ್ಲೆಲ್ಲ ಹಿರಿಯನಾಗಿದ್ದ ಒಬ್ಬ ಹೊಳೆಯ ಒಳಗೆ ಬಂದು ಒಡೇರು ಹೀಗೆಲ್ಲ ನಮ್ಮ ಗುಡಿಯೊಳಗೆ ಬರಕೂಡದೆಂದು ಹೆದರಿಕೆಯಿಂದ ನಡುಗುವ ಸ್ವರದಲ್ಲಿ ಹೇಳಿದ. ಜಗನ್ನಾಥ ಪಿಳ್ಳನನ್ನು ನೋಡಿ ನೀನೇ ಅವರಿಗೆ ವಿವರಿಸು ಎಂದ. ಪಿಳ್ಳ ಪ್ರಯತ್ನಪಟ್ಟ; ಒಡೇರು ಹೊಲೇರನ್ನೂ ಮುಟ್ಟಬಹುದು ಅಂತಾರೆ, ಇತ್ಯಾದಿ. ಯಾರಿಗೂ ಅರ್ಥವಾಗದಂತೆ ತಿಳಿಯಲಿಲ್ಲ.

'ಉಳಿದ ಹುಡುಗರೆಲ್ಲಿ ?' ಜಗನ್ನಾಥ ಕೇಳಿದ.

'ಈಗ ಬತ್ತಾವೆ ಒಡೇರೆ.' ಪಿಳ್ಳ ಸಹಜವಾಗಿ ಮಾತಾಡಲು ಶುರುಮಾಡಿದ್ದು ನೋಡಿ ಜಗನ್ನಾಥನಿಗೆ ಸಂತೋಷವಾಯಿತು.

'ಯಾರೂ ಹೆದರಕೂಡದು ಪಿಳ್ಳ. ನನ್ನ ಜೊತೆ ನೀವು ಸೀದಾ ನಡೆದುಬರಬೇಕು. ನೀವು ಸಿಟ್ಟಾಗಿ ಜಗಳಕ್ಕೆ ನಿಲ್ಲಬೇಕು. ನೀವು ಹಂದಿಗಳಲ್ಲ ಮನುಷ್ಯರು ಅಂತ ಹೇಳಬೇಕು. ತಿಳೀತ ?'

ಇನ್ನೂ ಏನೇನೋ ಹೇಳಬೇಕೆಂದಿದ್ದುದನ್ನು ಜಗನ್ನಾಥ ನುಂಗಿಕೊಂಡು ಎದ್ದು ಎಲ್ಲರ ಎದುರಿನಲ್ಲಿ ಪಿಳ್ಳನ ಭುಜದ ಮೇಲೆ ಕೈ ಹಾಕಿದ.

'ನಿನ್ನ ಅಪ್ಪ ಎಲ್ಲಿ ?'

ಪಿಳ್ಳ ದೂರದಲ್ಲಿ ನಿಂತ ಅಪ್ಪನನ್ನು ತೋರಿಸಿದ.

‘ನಿನ್ನ ಮಗನಿಗೆ ಮುಂದಿನ ತಿಂಗಳು ಮದುವೆ ಮಾಡಿಸಾಣ ಕಣಯ್ಯ.’ ಜಗನ್ನಾಥ ನಗುತ್ತ ಹೇಳಿದ. ಹೊಲೆಯರೆಲ್ಲ ಮಂಕಾಗಿದ್ದಂತೆ ಕಂಡಿತು. ಇದು ಪ್ರಾರಂಭ; ಮುಂದೆಲ್ಲ ಸರಿಹೋಗುತ್ತದೆಂದುಕೊಂಡು,

‘ನಾನು ಬಂದಿದ್ದೇಂತ ಉಳಿದ ಹುಡುಗರಿಗೂ ಹೇಳು’ ಎಂದು ಪಿಳ್ಳನಿಗೆ ಹೇಳಿ ಜಗನ್ನಾಥ ಹೊರಟ. ಮನೆಯ ತನಕ ಬಿಟ್ಟುಬರಲು ಪಿಳ್ಳನೂ ಕುಂಟುತ್ತ ಬಂದ.

* * *

ಮನೆಗೆ ಬಂದಾಗ ಜಗನ್ನಾಥ ಖುಷಿಯಾಗಿದ್ದ. ಬದಲಾವಣೆಯೆಂದರೆ ದಿಗಿಲು ಸಹಜವಾದ್ದು – ಹೊಲೆಯರಿಗೆ, ನನಗೆ. ಈ ದಿಗಿಲನ್ನು ಕೋಡು ಹಿಡಿದು ನೋಡಿದ ಮೇಲೆ ಸಡಿಲವಾಗಲು ಪ್ರಾರಂಭಿಸುತ್ತೆ. ಭಾಷಣ ಮುಗಿಸಿ ಹುರುಪಿನಿಂದ ಅನಂತಕೃಷ್ಣ, ರಂಗರಾವ್, ನೀಲಕಂಠಸ್ವಾಮಿ ಬಂದಿದ್ದರು; ತಾವು ಆಡಿದ ಮಾತುಗಳನ್ನು ಚರ್ಚಿಸುತ್ತಿದ್ದರು. ರಾಯರು ಅನಂತಕೃಷ್ಣನಿಗೆ ‘ಚೆನ್ನಾಗಿ ಮಾತಾಡಿದಿ’ ಎಂದರು. ‘ಆದರೆ ಸರ್ವೋದಯದವರ ಸಮಜಾಯಿಸಿ ಮಾಡೋ ರಾಜಕೀಯ ನಾನು ಒಪ್ಪಲ್ಲ’ ಎಂದು ನೀಲಕಂಠಸ್ವಾಮಿ ಸಕಾರಣವಾಗಿ ಚೆನ್ನಾಗಿ ಚರ್ಚಿಸಿದ. ಜಗನ್ನಾಥನೂ ಚರ್ಚೆಯಲ್ಲಿ ಭಾಗವಹಿಸಿದ. ಜಾತೀಯತೆಯ ಪ್ರಶ್ನೆ ಬಂತು. ಜಗನ್ನಾಥ ಹೇಳಿದ :

‘ಲಿಂಗಾಯಿತರಿಗೆ ಜಾತೀಯವಾದಿಗಳಾಗೋ ಅಧಿಕಾರ ಶೇಕಡಾ ಐವತ್ತು ಇದೆ ಅನ್ನಬಹುದು. ಯಾಕೇಂದ್ರೆ ಇನ್ನೂ ಹಿಂದುಳಿದವು ಅವರ ಜಾತೀಲಿ ಇದಾರೆ. ಒಕ್ಕಲಿಗರಿಗೆ ಶೇಕಡಾ ಎಪ್ಪತ್ತು ಭಾಗ ಜಾತೀಯವಾದಿಗಳಾಗೋ ಅಧಿಕಾರ ಇದೆ ಅನ್ನಬಹುದೇನೋ. ಬ್ರಾಹ್ಮಣರಿಗಂತೂ ಶೇಕಡಾ ನೂರಕ್ಕೆ ನೂರು ಜಾತೀಯವಾದಿಗಳಾಗೋ ಅಧಿಕಾರ ಇಲ್ಲ. ಹಾಗೇನೇ ಶೇಕಡಾ ನೂರಕ್ಕೆ ನೂರು ಜಾತಿವಾದಿಗಳಾಗೋ ಅಧಿಕಾರ ಇರೋದೂಂದ್ರೆ ಹೊಲೆಯರಿಗೆ, ಆದರೆ ದುರಂತ ಅಂದ್ರೆ ಅವರಲ್ಲಿ ಆ ಪ್ರಜ್ಞೆ ಇಲ್ಲ. ನೌಕರಿಗಾಗಿ ಕಚ್ಚಾಡೋ ಬ್ರಾಹ್ಮಣರು, ಲಿಂಗಾಯಿತರು, ಗೌಡರು ಜಾತೀಯವಾದಿಗಳಾಗ್ತಾರೆ ಅಷ್ಟೆ’.

ನೀಲಕಂಠಸ್ವಾಮಿ ಜಗನ್ನಾಥನ ವಾದಾನ್ನ ಸಮರ್ಥಿಸಿದ. ಜಾತಿಪ್ರಜ್ಞೆಗಿಂತ ವರ್ಗಪ್ರಜ್ಞೇನೇ ಉತ್ತಮ ಅಂತ ರಂಗರಾವ್ ವಾದಿಸಿದ. ಪ್ರೇಮವಿಲ್ಲದೆ ಏನೂ ಆಗಲ್ಲ ಅಂತ ಅನಂತಕೃಷ್ಣ ಹೇಳಿದರು. ಅಡಿಗರು ಎಲ್ಲವದನ್ನೂ ಆಸಕ್ತಿಯಿಂದ ಕೇಳಿಸಿಕೊಳ್ಳುತ್ತ ಕೂತಿದ್ದವರು ಪೃಷ್ಠ ಎತ್ತಿ ಹೂಸಿದರು. ‘ಹಾಳು ವಾಯು. ಆದರೆ ವಾಯು ಪದಾರ್ಥಾಂದ್ರೇ ಇಷ್ಟ ಈ ದೇಹಕ್ಕೆ’ ಎಂದು ತಮ್ಮಷ್ಟಕ್ಕೆ ಮಾತಾಡಿಕೊಂಡರು. ಸೋಷಲಿಸ್ಟ್ ಹುಡುಗರು ಮುಜುಗರದಿಂದ ಮುಖ ತಗ್ಗಿಸಿದರು.

ಊಟವಾದ ಮೇಲೆ ಎಲ್ಲರೂ ಮಲಗಿಕೊಳ್ಳಲು ಹೋದರು. ಜಗನ್ನಾಥ ಅಂಗಳದಲ್ಲಿ ಅಡ್ಡಾಡಿದ. ಆಕಾಶದಲ್ಲಿ ಮಹರ್ಷಿ

ವಸಿಷ್ಠ, ಪಕ್ಕದಲ್ಲಿ ಹೊಲತಿ ಅರುಂಧತಿ. ನಗುಬಂತು. ಅಮಾವಾಸ್ಯೆಯ ಎದುರಿನ ಚಳಿ ರಾತ್ರಿಯಲ್ಲಿ ನಕ್ಷತ್ರಗಳು ಸೂಜಿಮೊನೆಯಾಗಿ ಹೊಳೆಯುತ್ತಿದ್ದವು. ಜಗನ್ನಾಥನ ಮನಸ್ಸು ಉಲ್ಲಾಸದಲ್ಲಿ ಅರಳಿತ್ತು. ಒಳಗೆ ಹೋಗಿ ಚಿಕ್ಕಿ ಮಲಗಿದ್ದ ರೂಮಿನ ಬಾಗಿಲು ತೆರೆದ. ಬರಿ ಸೀರೆಯೊಂದನ್ನು ಹೊದ್ದು ದೀಪ ಆರಿಸದೆ ಚಿಕ್ಕಿ ಮಲಗಿದ್ದರು. 'ಹೊದ್ದುಗೊಂಡು ಮಲಗಿ ಚಿಕ್ಕಿ, ಚಳಿಯಾಗಲ್ವ?' ಎಂದು ಬೆಂಚಿನ ಮೇಲಿದ್ದ ರಗ್ಗನ್ನು ಬಿಚ್ಚಿ ಚಿಕ್ಕಿಗೆ ಹೊದಿಸಲು ಹೋದ. 'ಅಯ್ಯೋ ನನಗ್ಯಾಕೆ?' ಎಂದು ಬೋಗಾರು ದುಃಖದ ಮಾತನ್ನು ಚಿಕ್ಕಿ ಆಡಿದ್ದು ಕೇಳಿ ಜಗನ್ನಾಥ ನಗುತ್ತ ಒತ್ತಾಯ ಮಾಡಿ ರಗ್ಗು ಹೊದಿಸಿದ. ಲಾಟೀನಿನ ದೀಪ ಸಣ್ಣ ಮಾಡಿದ. ಚಿಕ್ಕಿಗೆ ಖುಷಿಯಾಗಿತ್ತು. ಪ್ರಾಯಶಃ ತಾಯಿ ಬದುಕಿದ್ದರೆ, ಅಥವಾ ಮದುವೆಯಗಬೇಕಾದ ತಂಗಿಯೊಬ್ಬಳಿದ್ದರೆ ತನಗೆ ಈ ಬಂಡಾಯ ಸಾಧ್ಯವಾಗುತ್ತಿರಲಿಲ್ಲವೇನೊ? ಅಥವಾ ತಾನು ಮಧ್ಯಮ ವರ್ಗದವನಾಗಿದ್ದರೆ?

* * *

ರೂಮಿಗೆ ಹೊಗಿ ಲಾಟೀನಿನ ದೀಪವನ್ನು ಸಣ್ಣಗೆ ಮಾಡಿ ಮಲಗಿದ. ಮೈ ಬೆಚ್ಚಗಾದ್ದರಿಂದ ಶಾಲಿನ ಮೇಲೊಂದು ರಗ್ಗು ಬೇಕೆನ್ನಿಸಲಿಲ್ಲ. ಎಷ್ಟೋ ವರ್ಷಗಳ ಕೆಳಗೆ ತಾಯಿ ತಂದುಕೊಟ್ಟ ಉಣ್ಣೆಯ ಶಾಲದು. ನಶ್ಯ ಬಣ್ಣದ ಮೃದುವಾದ ಶಾಲು. ಇಪ್ಪತ್ತು ವರ್ಷಗಳಿಂದ ಹೊದ್ದದ್ದು. ಹೊದ್ದುಹೊದ್ದು ಅದು ಸವೆದು ನುಣುಪಾಗಿದೆ. ಹರಿದ ಕಡೆಯೆಲ್ಲ ಅವನದನ್ನು ಖುದ್ದು ಹೊಲಿದಿದ್ದಾನೆ. ಮಾರ್ಗರೆಟ್ ಹಾಸ್ಯಮಾಡಿ ಎರಡು ತೇಪೆ ಹಾಕಿದ್ದಾಳೆ. ಅಪ್ಪ ಸತ್ತ ಮೇಲೆ ತಾಯಿ ಹತ್ತು ತಿಂಗಳ ಕಾಲ ತೀರ್ಥಯಾತ್ರೆಗೆಂದು ಹೋದರು. ಕಾಶಿಯಲ್ಲಿ ಈ ಶಾಲುಕೊಂಡು ತಂದರು. ಜಗನ್ನಾಥ ಅದನ್ನು ಹೊದ್ದು, ಕಾಲು ಮಡಿಚಿ, ತೊಡೆಯ ಸಂದಿ ಕೈಯಿಟ್ಟು, ಬಾಲಕನಿದ್ದಾಗ ಮಲಗುತ್ತಿದ್ದಂತೆ ಈಗಲೂ ಮಲಗುತ್ತಾನೆ. ಬಹಳ ಆಪ್ತವೆನ್ನಿಸಿ ಸುಖವಾದ ನಿದ್ದೆ ಹತ್ತಲು ಹೀಗೆ ಮಲಗಬೇಕು. ಗರ್ಭದೊಳಗಿನ ಶಿಶು ಎಂದು ಮಾರ್ಗರೇಟ್ ಹಾಸ್ಯ ಮಾಡಿದ್ದುಂಟು. ಅವನ ಮಡಿಸಿದ ಮಂಡಿಯನ್ನು ತನ್ನ ಕಾಲಿನಿಂದ ಒದ್ದು ತಳ್ಳುತ್ತಿದ್ದಳು. ಹೀಗೆ ನೀನು ಮಲಗಿದರೆ ಇಬ್ಬರಿಗೆ ಹಾಸಿಗೆ ಸಾಲದಾಗುತ್ತೆ ಎಂದು ಕಿಚಾಯಿಸುತ್ತಿದ್ದಳು. ಕೈಗಳನ್ನೆಳೆದು ನೆಟ್ಟಗೆ ಮಲಗಿಸಿ ನಗುತ್ತಿದ್ದಳು. ಅವಳು ಪಾದವನ್ನು ಚಿಲಕದಂತೆ ತನ್ನ ಪಾದಗಳಿಗೆ ಸಿಕ್ಕಿಸಿ ನೆಟ್ಟಗಿರಿಸಿದ್ದರೂ ನನ್ನ ಕಾಲುಗಳು ಹಾಗೇ ನಿದ್ದೆ ಹತ್ತುತ್ತಿದ್ದಂತೆ ಮಡಿಸಲೇಬೇಕು. ಪ್ಲೀಸ್ ಎಂದು ಮಾರ್ಗರೆಟ್ಟನ್ನು ತಡವಿ ಮುದ್ದಾಡಿ ಕಾಲು ಮಡಿಸಿ ನಿದ್ದೆಗಿಳಿದುಬಿಡುತ್ತಿದ್ದೆ. ನಿದ್ದೆ ಹೋಗುವ ಪ್ರಯತ್ನದಲ್ಲಿ ಥಟ್ಟನೇ ನೋವಾಯಿತು. ಮತ್ತೆ ಜೋಂಪು ಹತ್ತಿತು. ಗಾಢವಾದ ನಿದ್ದೆಯಲ್ಲಿ ಕಿರುಚಾಟ ಕೇಳಿ ಎದ್ದು ಕೆಳಗೋಡಿ ಬಂದ. ಅಂಗಳದಲ್ಲಿ ತನಗಿಂತ ಮುಂಚೆಯೇ ಉಳಿದವರೆಲ್ಲ ಸೇರಿದ್ದರು.

ಗುಡ್ಡದ ಮೇಲೆ ಉರಿಯುತ್ತಿರುವ ಬೆಂಕಿ, ಅಂಗಳದಾಚೆ ಅಳುತ್ತಿರುವ ಹೊಲೆಯರು. ಜವಾನರು ಇರುವ ದೀಪವನ್ನೆಲ್ಲ ಹೊತ್ತಿಸಿ ತಂದರು -ಗ್ಯಾಸ್‌ಲೈಟ್, ಲಾಟೀನ್, ಬೆಡ್‌ಲ್ಯಾಂಪು, ಇದು ಯಾವ ಸ್ಥಳ, ನಿದ್ದೆಯೊ, ಕನಸೊ-ಜಗನ್ನಾಥ ತಬ್ಬಿಬ್ಬಾದ. 'ಶಾಲಿಗ್ರಾಮ ಮುಟ್ಟಿದ್ದರಿಂದ' ಎಂದು ಚಿಕ್ಕಿ ಅಡಿಗರಿಗೆ ಹೇಳಿದ್ದು ಕೇಳಿಸಿತು. ನೀಲಕಂಠಸ್ವಾಮಿ ಮತ್ತು ರಂಗರಾವ್ ಚುರುಕಾಗಿ ಓಡಾದಿ ಪರಿಸ್ಥಿತಿಯನ್ನು ಹತೋಟಿಗೆ ತರಲು ಪ್ರಯತ್ನಿಸಿದರು. ಒಳಗಿನಿಂದ ಒಂದು ಗಡಿಗೆ ಜೇನುತುಪ್ಪ ತಂದು ರಂಗರಾವ್ ಸುಟ್ಟ ಗಾಯಗಳಿಗೆ ಹಚ್ಚಿದ. ವಯಸ್ಸಾದ ಹೊಲೆಯರು ರೋದಿಸುತ್ತಿದ್ದರು. ನೀಲಕಂಠಸ್ವಾಮಿ ಹೊಲೆಯರನ್ನು ಗದರಿಸುತ್ತ ಬುದ್ಧಿ ಹೇಳುತ್ತ ಧೈರ್ಯ ತುಂಬುತ್ತ ಓಡಾಡಿದ. ಡಾಕ್ಟರನ್ನು ಕರೆದುತರಲು ಒಬ್ಬ ಸೋಷಲಿಸ್ಟ್ ಹುಡುಗನ ಜೊತೆ ಅನಂತಕೃಷ್ಣ ಹೋದರು. ಜಗನ್ನಾಥ ಪಿಳ್ಳನನ್ನು ಹುಡುಕಿ 'ಏನಾಯ್ತು' ಎಂದು

ಕೇಳಿದ.

ಎಲ್ಲರೂ ನಿದ್ದೆ ಮಾಡುತ್ತಿದ್ದಾಗ ಗುಡಿಗಳಿಗೆ ಬೆಂಕಿ ಹತ್ತಿತು. ಪಿಳ್ಳ ಕೂಗಿಕೊಂಡು ಹೊರಗೋಡಿದ. ಎಲ್ಲರನ್ನೂ ಎಚ್ಚರಿಸಿ ಹೊರಗೆ ಕರೆದುಕೊಂಡು ಬಂದ. ಬೆಂಕಿಯಿಂದ ಹೊರಗೆ ಬರುವಾಗ ಕೆಲವರಿಗೆ ಸುಟ್ಟಗಾಯಗಳಾಗಿದ್ದವು.

ಆರ್ತ ಕಣ್ಣುಗಳಿಂದ ತನ್ನನ್ನು ನೋಡುತ್ತಿದ್ದ ಹೊಲೆಯರಿಗೆ ಏನು ಹೇಳಬೇಕು ತೋಚದೆ ಜಗನ್ನಾಥ ನೀಲಕಂಠಸ್ವಾಮಿಯನ್ನು ಮೂಲೆಗೆ ಕರೆದುಕೊಂಡು ಹೋಗಿ 'ಯಾರು ಸತ್ತಿಲ್ಲ ತಾನೆ?' ಎಂದ.

'ಒಂದು ಹುಡುಗ ಸತ್ತಿದೆ ಅಂತ ಕಾಣತ್ತೆ. ಡಾಕ್ಟರ್ ಬರೋ ತನಕ ಸುಮ್ಮನಿರಿ.'

ನೀಲಕಂಠಸ್ವಾಮಿ ಸಿಗರೇಟ್ ಹಚ್ಚಿದ. 'ಈ ರೀತಿ ವಯಲೆನ್ಸ್ ಆಗತ್ತೇಂತ ನನಗೆ ಮೊದಲೇ ಗೊತ್ತಿತ್ತು' ಎಂದು ಹೊಲೆಯರನ್ನು ಸಮಾಧಾನಪಡಿಸಲು ಹೋದ. ಜಗನ್ನಾಥನೂ ಅವನ ಜೊತೆ ಹೋಗಿ ಗಾಯಗಳಿಗೆ ಜೇನುತುಪ್ಪ ಹಚ್ಚುವುದರಲ್ಲಿ ಸಹಾಯ ಮಾಡಿದ. ಮಂಡ್ಯದಲ್ಲಿ ಹೊಲೆಯನೊಬ್ಬನ ಬೆರಳು ಕತ್ತರಿಸಿ ಹಾಕಿದ್ದನ್ನು ಸೋಷಲಿಸ್ಟ್ ಹುಡುಗನೊಬ್ಬ ವರ್ಣಿಸುತ್ತಿದ್ದ. ಮಲಗೋದೆಲ್ಲಿ, ಇರೋದೆಲ್ಲಿ, ತಮಗಿನ್ನು ದಿಕ್ಕೆಲ್ಲಿ ಎಂದು ಹೊಲತಿಯೊಬ್ಬಳು ಗೋಳಿಡುತ್ತಿದ್ದಳು. ಜಗನ್ನಾಥ ಅವಳಿಗೆ ಧೈರ್ಯ ಹೇಳಲು ಪ್ರಯತ್ನಿಸಿ, ಸೋತು, ಗದರಿಸಿದ.

ತಾನು ಕೂಡಲೆ ಮಾಡಬೇಕಾದ್ದೇನು? ಇನ್ನೂ ಕತ್ತಲು, ಬೆಳಗಾಗಲು ಹೊತ್ತಿದೆ. ಹೊಲೆಯರಿಗೆ ಮಲಗಲೊಂದು ಸೂರು ಬೇಕು. ಆಕಾಶದ ಕೆಳಗೆ ಚಳಿಯಲ್ಲಿ ಮಲಗಲಾರರು. ಬೇರೆ ಹೊಲೆಯರು ಇವರನ್ನು ಹತ್ತಿರ ಸೇರಿಸರು. ಅಡಿಕೆ ಸುಲಿಯುವುದಕ್ಕೆಂದು ಉಪಯೋಗಿಸುತ್ತಿದ್ದ ತಮ್ಮ ಮನೆಗೆ ಒತ್ತಿಕೊಂಡಿದ್ದ ಉದ್ದನೆಯ ಹಜಾರಕ್ಕೆ ಎಲ್ಲರನ್ನೂ ಕರೆದುಕೊಂಡು ಹೋಗಬೇಕೆಂದು ನೀಲಕಂಠಸ್ವಾಮಿ ಹೇಳಿದ.

ಆದರೆ ಒಳಗೆ ಬರಲು ಹೊಲೆಯರು ಹಿಂಜರಿದರು. ನೀಲಕಂಠಸ್ವಾಮಿಯ ಪುಸಲಾವಣೆ ನಡೆಯದಿದ್ದನ್ನು ನೋಡಿ ಜಗನ್ನಾಥ ಗದರಿಸಿ ಒಳಗೆ ಕಳಿಸಬೇಕಾಯ್ತು. ತಾನು ಹೊರಗೆ ನಿಂತಿರುವುದರಿಂದ ಯಾಕೆ ಕಷ್ಟವಾಗಬೇಕೆಂದು ಚಿಕ್ಕಿ ಒಳಗೆ ಹೋದರು.

ಹುಡುಗನ ಹೆಣವನ್ನು ಎದುರಿಗಿಟ್ಟುಕೊಂಡು ಅದರ ಅಪ್ಪ ಅವ್ವ ಮಾತ್ರ ಕೂತೇ ಇದ್ದರು. ಏಳಿ ಎಂದರೆ ಏಳಲಿಲ್ಲ. ಡಾಕ್ಟರ್ ಒಂದು ಮದ್ದು ಕೊಡ್ತಾರೆ ನೀವು ಒಳಗೆ ಹೋಗಿ ಎಂದು ನೀಲಕಂಠಸ್ವಾಮಿ ಹೇಳಿದ್ದನ್ನು ಅವರು ಕೇಳಲಿಲ್ಲ. ಸತ್ತ ಹುಡುಗನ ಮೈ ತುಂಬ ಬೊಕ್ಕೆಗಳಿದ್ದವು. ಮುಖ ಬೆಂದು ವಿಕಾರವಾಗಿತ್ತು. ಆದರೂ ಪ್ರಾಣವಿದೆ ಎಂಬ ಭ್ರಮೆ. ಹುಡುಗ ಅಷ್ಟು ಸುಟ್ಟುಕೊಳ್ಳಲು ಏನು ಕಾರಣವೆಂದು ಜಗನ್ನಾಥನಿಗೆ ಹೊಲೆಯ ಹೇಳಿದ:

ಬೆಂಕಿ ಬಿದ್ದಾಗ ಹುಡುಗ ಅಟ್ಟ ಹತ್ತಿ ಕೂತಿದ್ದ. ಅಟ್ಟದ ಮೇಲೆ ಬಾಳೆಗೊನೆಯಿತ್ತು, ಬಾಯಿ ಚಪಲ ಹುಡುಗನಿಗೆ. ಯಾವಾಗಲೂ ಹೀಗೆ ಬಾಳೆಹಣ್ಣು ಕದ್ದು ತಿನ್ನೊ ಅಭ್ಯಾಸ. ಬೇಡ ಎಂದರೆ ಕೇಳ್ತಿರಲಿಲ್ಲ ದರಿದ್ರ ಮುಂಡೇದು. ಸೂರಿಗೆ ಹತ್ತಿದ

ಬೆಂಕಿ ಮುಖಕ್ಕೇ ಬಡಿಯಿತು. ಕೆಳಗೆ ದೊಪ್ಪನೆ ಬಿದ್ದಾಗಲೇ ತಮಗೆ ಗೊತ್ತಾದ್ದು, ಗುಡಿಗೆ ಬೆಂಕಿ ಹೊತ್ತಿದೇಂತ.

ಹುಡುಗ ಸತ್ತಿದ್ದಾನೆಂದು ಇವಕ್ಕೆ ಹೇಗೆ ತಿಳಿಸುವುದೆಂದು ಜಗನ್ನಾಥ ಪ್ರಯತ್ನಿಸಿದ:

'ಇಲ್ಲಿ ನೋಡಿ, ನಿಮ್ಮ ಹುಡುಗ...'

ಹೊಲತಿ ಯಾಕೆ ಗಾಬರಿಯಿಂದ ತನ್ನ ಮಾತಿನ ನಡುವೆ ಎದ್ದು ನಿಂತಳೆಂದು ಜಗನ್ನಾಥನಿಗೆ ತಿಳಿಯಲಿಲ್ಲ. ಅಳುತ್ತಳುತ್ತ ಅವಳು ಹೇಳಿದಳು :

'ತ್ವಾಟದಿಂದ ಕದ್ದ ಬಾಳೆಗೊನೆ ಅದಲ್ಲ ಒಡೇರೇ. ನನ್ನವ್ವನ ಊರಿಗೆ ಹ್ವಾದ ವಾರ ನಾ ಹೋಗಿದ್ದೆ. ನನ್ನವ್ವ ತಿನ್ಕ ಅಂತ ಬಾಳೆಗೊನೆ ಕೊಡ್ತು. ಹಣ್ಣಾಗಲಿ ಅಂತ ಅಟ್ಟದ ಮ್ಯಾಲೆ ಮಡಕೇಲಿ ಇಟ್ಟಿದ್ದೆ. ಬೇಕಾದರೆ ಭೂತರಾಯನಿಗೆ ಪರ್ಮಾಣ ಮಾಡಿ ನಾ ಹೇಳ್ತೀನಿ – ತ್ವಾಟದಿಂದ ಕದ್ದ ಬಾಳೆಹಣ್ಣಲ್ಲ'.

ಜಗನ್ನಾಥನಿಗೆ ಅವಳ ದೈನ್ಯ ಕಂಡು ಹೇಸಿಗೆಯಾಯಿತು. ಬಾಳೆಗೊನೆ ವಿಷಯ ತಾನು ಎತ್ತುತ್ತಿದ್ದೇನೆಂದು ಹೊಲತಿ ತಿಳೀತಲ್ಲ ಎಂದು ರೇಗಿತು :

'ನಿನ್ನ ಮಗ ಸತ್ತಿದ್ದಾನೆ'.

ಗದ್ಗದ ಕಂಠದಿಂದ ಜಗನ್ನಾಥ ಹೇಳಿಬಿಟ್ಟ ಕೂಡಲೇ ತಂದೆ ತಾಯಿ ಇಬ್ಬರೂ ಗಟ್ಟಿಯಾಗಿ ಕಿರುಚಿಕೊಂಡು ಅಳಲು ಪ್ರಾರಂಭಿಸಿದರು. ಇದನ್ನು ಕೇಳಿ ಒಳಗಿದ್ದ ಹೊಲೆಯರೆಲ್ಲರೂ ಓಡಿ ಬಂದವು. ಬೆಂಕಿ ಬಿದ್ದಿದ್ದ ಮನೆಯಲ್ಲಿರುವಷ್ಟೇ ಕಷ್ಟ ತನ್ನ ಮನೆಯೊಳಗಿದ್ದಾಗಲೂ ಇವಕ್ಕೆ ಆಗುತ್ತಿರಬಹುದು – ಜಗನ್ನಾಥ ಒಳಗೆ ನಡೀರಿ ಎಂದು ಗದರಿಸಿದ್ದನ್ನು ಯಾರೂ ಕೇಳಲಿಲ್ಲ. ಸತ್ತ ಹುಡುಗನ ಸುತ್ತ ಗುಂಪುಗಟ್ಟಿ ಎಲ್ಲರೂ ಅತ್ತವು. 'ಅವಕ್ಕೆ ಅಳಬೇಕೆನ್ನಿಸಿದರೆ ಅಳಲಿ' ಎಂದು ಅಂಗಳದ ಮೂಲೆಯಲ್ಲಿ ಹೋಗಿ ನಿಂತ. ಡಾಕ್ಟರು ಹಚ್ಚಲೆಂದು ಒಂದಷ್ಟು ಮುಲಾಮನ್ನು ತಂದು ಚಾವಡಿಯ ಮೇಲೆ ಕೂತು ಅನಂತಕೃಷ್ಣರ ಜೊತೆ ಮಾತಾಡುತ್ತಿದ್ದರು. ನೀಲಕಂಠಸ್ವಾಮಿ ಮತ್ತು ರಂಗರಾವ್ ತಮ್ಮ ಜೊತೆ ಹುಡುಗರನ್ನು ಕಟ್ಟಿಕೊಂಡು ಯಾರರ್ಯಾರಿಗೆ ತೀರ ಹೆಚ್ಚು ಗಾಯವಾಗಿದೆಯೆಂದು ಹುಡುಕಿ ಡಾಕ್ಟರರ ಹತ್ತಿರ ಕರೆದುಕೊಂಡು ಹೋಗುತ್ತಿದ್ದರು. ಜಗನ್ನಾಥ ಒಬ್ಬನೇ ನಿಂತಿರುವುದು ಕಂಡು ಪಿಳ್ಳ ಅವನ ಹತ್ತಿರ ಬಂದ. ಅಡಿಗರೂ ಬಂದರು. ಸುಮ್ಮನೇ ನಿಂತರು. ಅವರ ಮೌನ ಅಸಹನೀಯವಾಗಿತ್ತು.

'ಶಾಲಿಗ್ರಾಮ ಮುಟ್ಟಿದ್ರಿಂದ ಹೀಗೆಲ್ಲ ಆಯ್ತೂಂತ ನಂಬ್ತೀರಿ ತಾನೆ?'

ಜಗನ್ನಾಥ ಕ್ರೂರವಾಗಿ ಹೇಳಿ ಕತ್ತಲಲ್ಲಿ ದೂರದಲ್ಲಿ ನಿಂತಿದ್ದ ಪಿಳ್ಳನ ಮುಖ ನೋಡಿದ.

ಅಡಿಗರು ಮಾತಾಡಲಿಲ್ಲ.

‘ಹೇಳಿ. ಯಾಕೆ ಸುಮ್ಮನೆ ನಿಂತಿದೀರಿ’.

‘ಸಿಟ್ಟಿಗಿದು ಕಾಲ ಅಲ್ಲ ಜಗಣ್ಣ’.

ಅಡಿಗರ ಭೋಳೇತನದ ಮಾರ್ದವದಿಂದ ಜಗನ್ನಾಥನಿಗೆ ಹೇಸಿಗೆಯಾಯಿತು.

‘ನನ್ನ ಪ್ರಶ್ನೆಗೆ ಉತ್ತರ ಹೇಳಿ ಅಡಿಗರೆ. ನಿಮ್ಮಂಥೋರ ಮನಸ್ಸು ಹೇಗೆ ಕೆಲಸ ಮಾಡ್ತದೆ ಅನ್ನೋದೇ ನನಗೆ ಆಶ್ಚರ್ಯ.’

‘ಶಾಲಿಗ್ರಾಮ ಮುಟ್ಟಿದ್ರಿಂದ ಆ ಹುಡುಗ ಸಾಯಬೇಕಾಯ್ತು ಅನ್ನೋದು ಪರೋಕ್ಷವಾಗಿ ನಿಜವೆ. ಈ ಚಕ್ರದ ಚಲನೇಗೆ ನೀನು ಮೊದಲು ಕೈ ಹಚ್ಚದೇ ಇದ್ದಿದ್ರೆ ಎಲ್ಲ ಇರೋ ಹಾಗೆ ಇರ್ತಿತ್ತು – ಅಲ್ವ ?’

ಸುಬ್ರಾಯ ಅಡಿಗರ ಶಾಂತವಾದ ಮಾತಿನ ಧಾಟಿ ಕೇಳಿ ಜಗನ್ನಾಥನಿಗೆ ಮೈಯೆಲ್ಲ ಸಿಟ್ಟಿನಲ್ಲಿ ಉರಿಯಿತು.

‘ಅದ್ವೈತ ಮಾತಾಡೋಕೆ ನಾಚಿಕೆಯಾಗಲ್ವ ನಿಮಗೆ ?’

‘ಬಾಳೆಹಣ್ಣು ತಿನ್ತ ಇರೋವಾಗ ಒಂದು ಮಗು ಸಾಯ್ತು ಅಂತ ನಿನಗೆ ದುಃಖವಾಗಬೇಕು ಸಿಟ್ಟಲ್ಲ.’

‘ಬ್ರಾಹ್ಮಣರ ಹುಡುಗ ಸತ್ತಿದ್ರೆ ?’

‘ಚರ್ಚೆ ಬೇಡ ಜಗಣ್ಣ. ನಿನ್ನ ಜವಾಬ್ದಾರಿ ಏನೂಂತ ಯೋಚಿಸು.’

‘ನಿಮ್ಮ ಅನುಭಾವ, ನಿಮ್ಮ ಶಂಕರಾಚಾರ್ಯ ಎಲ್ಲ ಈ ವ್ಯವಸ್ಥೇನೆ ಎತ್ತಿ ಹಿಡಿಯೋ ಉಪಾಯ ಅಷ್ಟೆ.’

‘ನಿನ್ನ ಕೋಪದಿಂದ ನೀನು ಸುಳ್ಳಾಗ್ತ ಇದಿ ಅಷ್ಟೆ.’

ಕತ್ತಲಿನಲ್ಲಿ ಉರಿಯುತ್ತಿದ್ದ ಗ್ಯಾಸ್‌ಲೈಟ್‌ಗಳ ಶಬ್ದ, ಹೊಲೆಯರ ರೋದನ ಬೆರೆತು ಗುಡ್ಡದ ಮೇಲಿದ್ದ ಮನೆ ಸ್ಮಶಾನದಂತೆ ಕಂಡಿತು.

‘ಕಣ್ಣುನೆಟ್ಟು ನೋಡಬೇಕಾದ್ದನ್ನ ನೀನು ನೋಡ್ತ ಇಲ್ಲ ಜಗಣ್ಣ. ನಿನ್ನ ಮನಸ್ಸು ಕ್ಷುಬ್ದವಾಗಿದೆ.’

ಜಗನ್ನಾಥ ಮಾತಾಡಲಿಲ್ಲ. ಪಿಳ್ಳ ಏನು ಈಗ ಯೋಚಿಸುತ್ತಿದ್ದಾನೆಂದು ಅರಿಯಲು ಪ್ರಯತ್ನಿಸುತ್ತ ಅವನ ಮುಖ ನೋಡಿದ. ಅಡಿಗರು ಶಾಂತವಾಗಿ ಮಾತು ಮುಂದುವರಿಸಿದರು:

‘ದಕ್ಷಿಣೇಶ್ವರದಲ್ಲಿ ಒಬ್ಬ ಸಾಧು ಹೇಳ್ತ ಇದ್ದರು. ಮೈಮೇಲೆ ಎರಗಿ ಬಂದವನೊಬ್ಬನ ಮೇಲೆ ನೀನೂ ಎರಗಿ ಹೋದರೆ ಏನಾಗತ್ತೆ ಹೇಳು ? ಮೈಕೈ ನೋವಾಗತ್ತೆ. ಅದರ ಬದಲು ಅವನು ಎರಗಿ ಬಂದ ದಿಕ್ಕಿನಲ್ಲಿ ನೀನೂ ಚಲಿಸು, ಹಾಗೇ ಸರಿದು ನಿಲ್ಲು, ಮುಖಾಮುಖಿ ನೂಕಕ್ಕೆ ಹೋಗಬೇಡ. ಆಗ ಅವ ಮುಕ್ಕರಿಸಿ ಬೀಳ್ತಾನೆ. ನೀನು ಉಳ್ಕೋತಿಯ, ಇದೇ ಚಲನೆಯ ಗುಟ್ಟು. ಹೊಲೇರು ತಮ್ಮ ಪಾಡಿಗೆ ತಾವು ಜೀವಿಸ್ಕೊಂಡಿದ್ರು, ಕುಡಕೊಂಡು ಕುಣಕೊಂಡು ಖುಷಿಯಾಗಿದ್ರು. ಒಗ್ಗಿಕೋತಾ ಹೋದ್ರು. ನಾನು ನಿನ್ನ ಮುಟ್ಟಲ್ಲ ಅಂದ್ರೆ, ನಾನೂ ನಿನ್ನ ಮುಟ್ಟಲ್ಲ ಅಂದ್ರು, ಹೀಗೆ ತಾಳಿಕೊಂಡ್ರು. ಒಗ್ಗೋಕ್ಕಿಂತ ತನ್ಮಯವಾಗಿ ನೋಡೋದು ದೊಡ್ಡದು. ಹಾಗೆ ನೋಡಿದಾಗ ಎಲ್ಲ ಲೀಲೆ – ಈ ಬೆಂಕಿ, ಈ ಹಿಂಸೆ, ಈ ಚಕ್ರದ ಚಲನೇಗೆ ಕೈ ಹಚ್ಚಿರೋ ನೀನು -ಎಲ್ಲ.’

ಎಷ್ಟೊಂದು ಶತಮಾನಗಳ ಮಸಲತ್ತು ಅಡಿಗರು ಯೋಚಿಸುವ ಕ್ರಮದಲ್ಲಿದೆಯೊ! ಜಗನ್ನಾಥನಿಗೆ ತುಂಬ ಬೇಸರವಾಗಿ ಕೇಳಿದ :

‘ನಿಮಗೆ ಕೋಪಾನೇ ಬರಲ್ವ ಅಡಿಗರೆ ? ಹೊಲೇರು ಮಲಗಿರುವಾಗ ಬೆಂಕಿ ಹಾಕಿಸಿರೋ ಮನುಷ್ಯ ಒಂದು ಕ್ಷುದ್ರ ಜಂತು ಅಂತ ನಿಮಗೆ ಅನ್ನಿಸಲ್ವ ? ಪ್ರಭು ಮಾಡಿರಬಹುದು ಈ ಕೆಲಸಾನ್ನ. ಅಥವಾ ಸೆಟ್ಟಿ, ಯಾರೊ ? ಅಂತೂ ನಿಮಗೆ ಯಾಕೆ ಸಿಟ್ಟು ಬರಲ್ಲ ಹೇಳಿ ? ಈ ಜಾತಿ ವ್ಯವಸ್ಥೇಂದ ನಿಮ್ಮ ಮನುಷ್ಯತ್ವಾನೇ ಮೊಟಕಾಗಿದೆ ಅಂತ ನಿಮಗೆ ಯಾಕೆ ಅನ್ನಿಸಲ್ಲ ಹೇಳಿ ? ಪ್ರಾಣಿಗಳ ಹಂಗೆ ಒದ್ದಾಗ ಒದೆಸಿಕೊಂಡಿದ್ರೆ ಮಾತ್ರ ಹೊಲೇರು ನಿಮ್ಮ ಪ್ರೀತಿಗೆ ಪಾತ್ರರಾಗ್ತಾರಲ್ಲ ಇದು ಹೇಸಿಗೇಂತ ನೀವು ಯಾಕೆ ತಿಳಿಯಲ್ಲ ಹೇಳಿ ? ನಿಮ್ಮ ಶಂಕರಾಚಾರ್ಯ, ಮಧ್ವಾಚಾರ್ಯ, ನಿಮ್ಮ ಪರಮಹಂಸ, ನಿಮ್ಮ ರಮಣ ಮಹರ್ಷಿ ಎಲ್ಲರೂ ಹೀಗೇ ನಿಮ್ಮ ಹಾಗೆ ಮುಕ್ಕಾದರು.’

‘ನಾನು ಯಾರು ಬಿಡು’ ಅಡಿಗರು ಸಿಟ್ಟಾಗದೆ ಹೇಳಿದರು: ‘ಹೊಟ್ಟೆಪಾಡಿಗಾಗಿ ಈ ವೇಷ ಹಾಕ್ಕೊಂಡಿದೇನೆ-ಅಷ್ಟೇ. ಸಿಟ್ಟು ಬಂದಾಗ ಹೆಂಡ್ತೀನ ಹೊಡೆಯೋ ನನಗೆ ಯಾವ ಮಾತಾಡೋ ಅಧಿಕಾರನೂ ಇಲ್ಲ. ಆದರೆ ನಿನ್ನ ಕೋಪ ಇದೆಯಲ್ಲ ಅದು ಕರ್ಪೂರಕ್ಕೆ ಹತ್ತಿದ ಬೆಂಕಿಯಂತೆ ಉರೀತಿದೆಯೋ, ಅಥವಾ ಒದ್ದೆ ಕಟ್ಟಿಗೆಗೆ ಹತ್ತಿದ ಬೆಂಕಿಯಂತೆ ನರಳ್ತ ಇದೆಯೋ ಅಂತ ನನಗೆ ಅನುಮಾನ-ಅಷ್ಟೆ.’

ಜಗನ್ನಾಥ ಒಂದು ಕ್ಷಣ ತಬ್ಬಿಬ್ಬಾದ.

ನನ್ನನ್ನ ಅಂತರ್ಮುಖಿ ಮಾಡಿಸಿ ಯಾವ ಕ್ರಿಯೇನೂ ಸಾಧ್ಯವಾಗದ ಹಾಗೆ ಮಾಡತ್ತೆ ಈ ಬಗೆಯ ವಿಚಾರ ಎಂದುಕೊಂಡು

ಪಿಳ್ಳನನ್ನು ಮಾತಾಡಿಸಲು ಅವನ ಕಡೆ ನಡೆದ. ಸುಬ್ರಾಯ ಅಡಿಗರು ಅನಂತಕೃಷ್ಣ ಕೂತಲ್ಲಿಗೆ ಹೋದರು.

ಅಂಗಳದಲ್ಲಿ ಕೂತು ಹೊಲೆಯರು ಗೋಳಿಡುತ್ತಿದ್ದ ಕ್ರಮ ಕಂಡು ಜಗನ್ನಾಥನಿಗೆ ನಿರಾಸೆಯಾಯಿತು. ಎಷ್ಟು ನಿಜವಾದ ದುಃಖವಿತ್ತೊ ಅಷ್ಟೇ ತನ್ನ ಸಹಾನುಭೂತಿಯನ್ನು ದೋಚುವ ಉಪಾಯ ಅದರಲ್ಲಿತ್ತು. ಈ ಜನರನ್ನು ನಾನು ನಿಜವಾಗಿ ಪ್ರೀತಿಸಲಾರೆ-ಎನ್ನಿಸಿತು.

ನೀಲಕಂಠಸ್ವಾಮಿ ಆಪ್ತಾಲೋಚನೆಗೆಂದು ಜಗನ್ನಾಥನನ್ನು ಕರೆದ. ಏನೋ ಆತುರದಲ್ಲಿ ಅವನಿದ್ದಂತೆ ಕಂಡಿತು. ಗುಪ್ತಾಲೋಚನೆಯ ಪಿಸುಮಾತಿನ ಧಾಟಿಯಿಂದ ಮುಜುಗರವಾಯಿತು. ಬಗ್ಗಿ ಕಿವಿಯ ಹತ್ತಿರ ಬಂದು ಅವನು ಮಾತಾಡುವಾಗ ಅವನ ಬೆರಳುಗಳು ಆತಂಕದಲ್ಲಿ ಒಂದೊಂದೇ ತಲೆಗೂದಲನ್ನು ವಿಂಗಡಿಸುತ್ತ ಕೀಳುತ್ತಿರಬಹುದು. ಕತ್ತಲೆಯಲ್ಲಿ ನೀಲಕಂಠಸ್ವಾಮಿ ಹೇಳಿದ :

'ಸಾರ್ ಇದನ್ನೊಂದು ಇಶ್ಯೂ ಮಾಡಬೇಕು. ನಾನು ಸೀದ ಶಿಮೊಗ್ಗಕ್ಕೆ ಹೋಗಿ ಬೆಂಗಳೂರಿಗೆ ಪ್ರೆಸ್ ಟೆಲಿಗ್ರಾಂ ಕಳಿಸ್ತೇನೆ. ಫ್ರಂಟ್ ಪೇಜ್ ನ್ಯೂಸಾಗತ್ತೆ. ನನ್ನ ಕ್ಯಾಮರಾದಿಂದ ಫೋಟೋ ತೆಕ್ಕೋತೇನೆ-ಆ ಹುಡುಗನ ಹೆಸರು ಚೌಡ ಅಂತೆ. ಚೌಡನ್ನ ನಮ್ಮ ಚಳುವಳಿಯ ಹೀರೋ ಮಾಡಬೇಕು'.

ಯಾವ ಆತಂಕವೂ ಇಲ್ಲದೆ ಖುಷಿಯಾಗಿ ಕ್ರಿಯೆಗೆ ಸನ್ನದ್ಧನಾದ ನೀಲಕಂಠಸ್ವಾಮಿಯ ಜೊತೆ ಹೀಗೆ ವ್ಯವಹರಿಸುವುದು ಅಶ್ಲೀಲ ಎನ್ನಿಸಿತು. ಎಲ್ಲರೂ ಸೇರಿ ಏನೋ ಅನ್ಯಾಯ ಮಾಡುತ್ತಿರುವಂತೆ; ಈ ಸಂದರ್ಭದಲ್ಲಿ ಎದುರಿಸಲೇ ಬೇಕಾದ ಯಾವುದೋ ಸತ್ಯವನ್ನು ತಾನು ಕಡೆಗಣಿಸಿ ಇನ್ನೇನೋ ಮಾಡುತ್ತಿದ್ದಂತೆ. ಆದರೆ ಯೋಚನೆ ಸಾಧ್ಯವಾಗದಂತೆ ನೀಲಕಂಠಸ್ವಾಮಿ ತೀವ್ರವಾಗಿ ಪಿಸುಗುಡುತ್ತಲೇ ಹೋದ:

'ನಮ್ಮ ವೈರಿಗಳಿಗೆ ನಿಮ್ಮ ಸೂಕ್ಷ್ಮ ಇಲ್ಲ ಸಾರ್. ಬೆಂಕಿ ಹಚ್ತಾರೆ. ಕೊಲ್ತಾರೆ. ಹೆದರಿಸ್ತಾರೆ. ನಾವು ಕೈಕಟ್ಟಿ ಕೂರೋದು ಸಾಧ್ಯವಿಲ್ಲ. ಜನರ ಕಾನ್‌ಶನ್ಸ್‌ನ ಡಿಸ್ಟರ್ಬ್‌ಮಾಡ್ಬೇಕು. ಅದಕ್ಕಾಗಿ ನ್ಯೂಸ್ ಪೇಪರ್ರು, ರೇಡಿಯೋ ಎಲ್ಲವದನ್ನೂ ಉಪಯೋಗಿಸ್ಕೋಬೇಕು'.

ಗೊತ್ತು. ಆದರೆ ವಿಕಾರವಾಗಿ ಸತ್ತು ಬಿದ್ದಿರುವ ಹುಡುಗ? ನಾನು ಹೊರಬೇಕಾದ ಜವಾಬ್ದಾರಿ? ಅಳುವ ಈ ಅತಂತ್ರ ಮುಗ್ಧರು? ಇವೆಲ್ಲವನ್ನೂ ತನ್ನ ಅಂತರಂಗದಲ್ಲಿ ಒಳಪಡಿಸಿಕೊಂಡು ಕಣ್ಣಿಟ್ಟು ನೋಡಿ ಹುಟ್ಟಬಹುದಾದ ಪರಿಶುದ್ಧ ಕ್ರಿಯೆಗೆ ಮೌನ ಬೇಕಿತ್ತು. ಏಕಾಂತದ ಅಗತ್ಯವಿತ್ತು. ಆದರೆ ಇನ್ನುಮುಂದೆ ಏಕಾಂತವಿಲ್ಲ. ತಾಯಿ ಕೊಟ್ಟ ಶಾಲಿನ ಮೃದುವಿನಲ್ಲಿ ಕಾಲುಮಡಚಿ ಮಲಗಿ ನನ್ನೊಳಗೇ ನಾನು ಸುತ್ತಿಕೊಳ್ಳುವ ಆಪ್ತತೆಯಿಂದ ವರ್ಜ್ಯನಾದೆ. ಆಗಲಿ ಎನ್ನಲೆ, ಬೇಡ ಎನ್ನಲೆ, ಬೇಡ ಎಂದು ಅಡಿಗರ ಜೋಡಿ ಚಾವಡಿಯಲ್ಲಿ ಕೂತು ಧ್ಯಾನಿಸಲೆ – ಹೊಲತಿಯ ರೋದನ ಅಸಹ್ಯವಾಗಿತ್ತು. 'ಆಗಲಿ' ಎಂದ.

ನೀಲಕಂಠಸ್ವಾಮಿ ಮಹಡಿಗೆ ಓಡಿಹೋಗಿ ಕ್ಯಾಮರಾ ತಂದ. ರಂಗರಾವ್ ಎಲ್ಲ ಗ್ಯಾಸ್‌ಲೈಟ್‌ಗಳನ್ನೂ ತಂದು ಹೊಲೆಯರ ಸುತ್ತ ಇಟ್ಟ. ಕತ್ತಲಿನ ರಾತ್ರೆಯಲ್ಲಿ ಅಂಗಳದ ಒಂದು ಜಾಗ ಕೃತಕವಾದ ಬೆಳಕಿನಲ್ಲಿ ಅರಳಿಕೊಂಡಿತು. ಲಂಗೋಟಿ ತೊಟ್ಟ ಬೆತ್ತಲೆ ಹೊಲೆಯರು ಈ ಬೆಳಕಿನಲ್ಲಿ. ಕಪ್ಪು ಪೊದೆಗಳ ಹಾಗೆ ಅವರ ಕೂದಲು. ನೀಲಕಂಠಸ್ವಾಮಿ ಈ ವಿಕಾರವನ್ನು, ಈ ಸಂಕಟವನ್ನು ಅತ್ಯಂತ ಸಮರ್ಪಕವಾದ ಕೋನಗಳಲ್ಲಿ ನಿಂತು ಫ್ಲ್ಯಾಶ್ ಬಲ್ಬುಗಳ ಮಿಂಚಿನಲ್ಲಿ ಹಿಡಿಯುತ್ತ ಓಡಾಡಿದ. ಹೊಲೆಯರನ್ನು ಪುಸಲಾಯಿಸಿ ಬೇರೆ ಬೇರೆ ರೀತಿಯಲ್ಲಿ ಕೂರಿಸಿ, ಅವರು ಅಳುವುದಕ್ಕೆ ಕಾದು ಕ್ಯಾಮರಾ ಕ್ಲಿಕ್ ಮಾಡಿದ. ತನ್ನನ್ನು ಕರೆದ. 'ಚೌಡನಿಗೆ ಎಲ್ಲೆಲ್ಲಿ ಸುಟ್ಟಿದೆ ನೋಡಿ ಹೇಳಿ ಸಾರ್. ವಿವರಗಳನ್ನು ವೈರ್ ಮಾಡಬೇಕು' ಎಂದ. ಜಗನ್ನಾಥ ಚೌಡನ ಹೆಣವನ್ನು ಪರೀಕ್ಷಿಸುತ್ತಿದ್ದಾಗ ಅವನ ಮುಖ ಉದ್ವಿಗ್ನವಾದ ಘಳಿಗೆಗೆ ಕಾದು ಕ್ಯಾಮರಾ ಕ್ಲಿಕ್ ಮಾಡಿದ. ಬಲ್ಬು ಮಿಂಚಿದ್ದೆ ಜಗನ್ನಾಥನಿಗೆ ಹೇಸಿಗೆಯಾಯಿತು. ಸಿಟ್ಟಿನಿಂದ ಎದ್ದು ನಿಂತ ಜಗನ್ನಾಥನನ್ನು ನೋಡಿ ನೀಲಕಂಠಸ್ವಾಮಿ ಆಪ್ತನಾಗಿ ನಕ್ಕ.

'ಅದೂ ಬೇಕು ಸಾರ್'.

* * *

ಕಾರು ಬಿಟ್ಟುಕೊಂಡು ನೀಲಕಂಠಸ್ವಾಮಿ ಮತ್ತು ರಂಗರಾವ್ ಶಿವಮೊಗ್ಗಕ್ಕೆ ಹೋದರು, ಅನಂತಕೃಷ್ಣ ಇಬ್ಬರನ್ನೂ ಹೊಗಳಿದರು: 'ನೀಲಕಂಠಸ್ವಾಮಿ ಮುಂದಿನ ಸಾರಿ ಚುನಾವಣೇಲಿ ಖಂಡಿತ ಗೆಲ್ತಾನೆ. ಅವನ ಕ್ಷೇತ್ರವಾದ ನಂಜನಗೂಡಿನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟಿನವರ ಸೈಝುಬಲ್ ಓಟಿದೆ' ಎಂದರು.

ಶ್ರೀಪತಿರಾಯರು ಮನೆಯಿಂದ ಬಂದದ್ದೆ ಚೌಡನ ಹೆಣದ ವಿಲೆವಾರಿಗೆ ವ್ಯವಸ್ಥೆ ಮಾಡಿದರು. ಮಾರನೇ ದಿನವೇ ಬೇರೆ ಗುಡಿಗಳನ್ನು ಕಟ್ಟಿಸುವುದಕ್ಕೆ ಏನೇನು ಬೇಕು ಲೆಖ್ಖ ಹಾಕಿದರು. ಜಗನ್ನಾಥನ ಮನೆಯಲ್ಲಿ ಸಾಕಷ್ಟು ಗಳ, ನಾಟ ಇತ್ತು. ಹುಲ್ಲು ಹೊಚ್ಚೋದು ಅಪಾಯ. ಬಡ್ಡೀಮಗ ಪ್ರಭುವಿನಿಂದಲೇ ಜಿಂಕ್ಶೀಟು ಕೊಂಡುತರಬೇಕು, ಅವನೇ ಬೆಂಕಿ ಹಾಕಿಸಿ ಹೇಗೆ ಲಾಭ ಮಾಡಿಕೊಂಡ ನೋಡಿ. ಶಿಮೊಗ್ಗದಿಂದ ತರಿಸೋಣಾಂದ್ರೂ ಲಾರಿ ಪ್ರಭುವಿಂದೆ. ಅವನು ಬೆಂಕಿ ಹಾಕಿಸಿದ್ನೊ, ಅಥವಾ ಜನಾರ್ಧನ ಸೆಟ್ಟಿ ಹಾಕಿಸಿದ್ನೊ ಈಗ್ಯಾಕೆ? ಸತ್ತ ಹುಡುಗ ಸತ್ತ.

ಶ್ರೀಪತಿರಾಯರ ಮಾತು ಕೇಳಿಸಿಕೊಳ್ಳುತ್ತ ಜಗನ್ನಾಥ ಚಾವಡಿಯ ಮೇಲೆ ಕೂತಿದ್ದ. ಅನಂತಕೃಷ್ಣರ ಜೊತೆ ಕೂತಿದ್ದ ಅಡಿಗರು ಮೃದುವಾಗಿ ಹೇಳಿದರು :

'ಅಲ್ಲೋ ಜಗಣ್ಣ, ಈ ರಾಜಕೀಯದ ಜನ ವಿಚಿತ್ರವಪ್ಪ. ನಿಮ್ಮ ನೀಲಕಂಠಸ್ವಾಮೀನ್ನ ನೋಡು...'

ಜಗನ್ನಾಥನಿಗೆ ನೋವಾಯಿತು.

'ಅಡಿಗರೆ, ನಿಮ್ಮ ಅನುಭಾವದ ಹಿಂದೆ ದೇವಸ್ಥಾನವಿದೆ, ದುಡ್ಡಿದೆ, ಮೂಢನಂಬಿಕೆಯಿದೆ, ಅಪರಾತ್ರೀಲಿ ಬೆಂಕಿ ಹಚ್ಚಿ ಮಕ್ಕಳನ್ನ ಕೊಲ್ಲೋರಿದಾರೆ. ಹಾಗೆ ನನ್ನಂಥವರ ಹಿಂದೆ ಕುಟಿಲ ರಾಜಕಾರಣ ಮಾಡೋರು ಇದಾರೆ. ಆದರೆ ಇವುಗಳ ನಡುವೆ ನನಗೇನು ಅನ್ನಿಸತ್ತೆ ಹೇಳಲ? ನಿಮ್ಮಂಥವರ ಅಲೌಕಿಕ ದುಃಖಕ್ಕಿಂತ ಈಗ ನೀಲಕಂಠಸ್ವಾಮಿ ಫೋಟೋ ಹಿಡಿದು ಮಾಡ್ತಿರೋ ಕೆಲಸವಿದೆಯಲ್ಲ – ಹೆಚ್ಚು ಅರ್ಥಪೂರ್ಣ.'

ಹೇಳಿದ ಮಾತಿನಲ್ಲಿ ಅನುಮಾನವಿದ್ದರೂ ಅದನ್ನೊಂದು ಕ್ಷಣ ಗೆದ್ದು ಜಗನ್ನಾಥ ಮಾತಾಡಿದ್ದ.

ಅಡಿಗರು ಉತ್ತರ ಕೊಡಲಿಲ್ಲ. ಸುಮ್ಮನಾದರು. ಅನಂತಕೃಷ್ಣ ಗಾಂಧಿಯವರ means ಮತ್ತು ends ಬಗೆಗಿನ ತತ್ವ ಹೇಳಿದರು. ಇನ್ನೇನು ಸುರ್ಯೋದಯವಾಗುವ ಹೊತ್ತು ಸಮೀಪಿಸುತ್ತಿರುವುದನ್ನು ಕಂಡು ಅಮಾವಾಸ್ಯೆಯ ಬೆಳಗಿನ ಸ್ನಾನಕ್ಕೆಂದು ಚೊಂಬು ಹಿಡಿದು ಹೊಳೆಗೆ ಹೊರಟ ಅಡಿಗರು ನಿಂತು ಒಂದು ಕಥೆ ಹೇಳಿದರು :

'ಬ್ರಾಹ್ಮಣರು ನೀತಿಗೆಟ್ಟಿರೋದೇ ನಮ್ಮ ಸಮಾಜ ಈ ಸ್ಥಿತಿಗೆ ಬಂದಿದೇನ್ನೋಕೆ ಒಂದು ಕಥೆ ಹೇಳ್ತೀನಿ. ಗುಜರಾತ್‌ನಲ್ಲಿ ಒಬ್ಬ ಬೈರಾಗಿ ನನಗೆ ಹೇಳಿದ್ದು. ಒಂದಾನೊಂದು ಕಾಲದಲ್ಲಿ ಒಂದು ಅಗ್ರಹಾರವಿತ್ತಂತೆ. ಅಲ್ಲಿ ನಿಷ್ಠಾವಂತರಾದ ಬ್ರಾಹ್ಮಣರು ವಾಸಮಾಡಿಕೊಂಡಿದ್ರಂತೆ. ಒಬ್ಬೊಬ್ಬ ಬ್ರಾಹ್ಮಣನ ಮನೇಲೂ ಒಂದೊಂದು ಯಜ್ಞಕುಂಡ, ಪ್ರತಿನಿತ್ಯ ಯಾಗ ಮಾಡಿಯೇ ಅವರ ಊಟ. ಒಂದು ದಿನ ಏನಾಯ್ತು? ಒಬ್ಬ ಹಿರಿಯ ಬ್ರಾಹ್ಮಣ ತನ್ನ ಮಗನಿಗೆ ಮದುವೆ ಮಾಡಿ ಮನೆ ತುಂಬಿಸಿಕೊಂಡಿದ್ದ. ಸೊಸೆ ಚಿಕ್ಕವಳು, ಅವತ್ತು ತಾನೆ ಮನೆಗೆ ಬಂದವಳು. ರಾತ್ರಿ ಉಚ್ಚೆಗೆ ಅವಸರವಾಗಿ ಎದ್ದಳು. ಹೊಸ ಮನೆ, ಹೊಸ ಜಾಗ, ಹಿತ್ತಲಿಗೆ ಹೋಗ್ಲಿಕೆ ಭಯ, ಆದ್ರಿಂದ ಉರೀತಿರೋ ಯಜ್ಞ ಕುಂಡದಲ್ಲೇ ಉಚ್ಚೆಹೊಯ್ದು ಬಿಟ್ಟು ಯಾರಿಗೂ ಹೇಳದೆ ಹೋಗಿ ಮಲಗಿಕೊಂಡಳು. ಬ್ರಾಹ್ಮಣರು ಬೆಳಿಗ್ಗೆ ಎದ್ದು ನೋಡ್ತಾನೆ – ಯಜ್ಞಕುಂಡದಲ್ಲೊಂದು ಬಂಗಾರದ ಗಟ್ಟಿ! ಅವನ ಮನಸ್ಸಿಗೆ ತುಂಬ ಕ್ಷೋಭೆಯಾಯ್ತು. ಪವಿತ್ರವಾದ ಯಜ್ಞಕುಂಡದಲ್ಲೊಂದು ಬಂಗಾರದ ಇರೋದೂಂದ್ರೇನು? ಎಲ್ಲೋ ಮೈಲಿಗೆಯಾಗಿದೇಂತ ಅವ ತುಂಬ ಸಂಕಟಪಟ್ಟ. ಆಗ ಸೊಸೆ ಹೆದರಿಕೋತ ಮಾವನ ಹತ್ರ ಬಂದು ಅವನಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ತಾನು ಹೀಗೆ ಉಚ್ಚೆ ಹೊಯ್ದುಬಿಟ್ಟೆ ಅನ್ನೋದನ್ನ ಹೇಳಿದ್ದು. ಮಾವ ಒಳ್ಳೇವನು. ಪರಾವಾಯಿಲ್ಲ ಬಿಡು ಎಂದು ಧರ್ಮಶಾಸ್ತ್ರಾನ್ನ ಹುಡುಕಿದ. ಈ ಪಾಪಕ್ಕೆ ಪರಿಹಾರ ಸಿಕ್ಕಿತು. ಆ ಪ್ರಕಾರವಾಗಿ ಯಜ್ಞಕುಂಡವನ್ನು ಶುದ್ಧಮಾಡಿ ಮತ್ತೆ ತನ್ನ ವಿಧಿಗಳನ್ನು ಶುರುಮಾಡಿದ್ದೇ ಅವನಿಗೊಂದು ವಿಚಾರ ಹೊಳೀತು. ಅಲ್ಲ-ಯಜ್ಞಕುಂಡ ಅಪವಿತ್ರವಾದರೆ ಹೇಗಿದ್ರೂ ಅದಕ್ಕೆ ಪರಿಹಾರವಿದೆ. ಅಂದಮೇಲೆ-ಸೊಸೇನ್ನ ಕರ್ದು ಹೇಳಿದ. ನಾಳೇನೂ ನೀನು ಉಚ್ಚೆ ಹೊಯ್ಯಿ ಅಂತ. ಆಯ್ತು? ಪಕ್ಕದ ಮನೆ ಬ್ರಾಹ್ಮಣನಿಗಿದು ಗೊತ್ತಾಯ್ತು. ಅವನು ತನ್ನ ಸೊಸೇಗೆ ಹೇಳ್ದ. ಹೇಗೂ ಶಾಸ್ತ್ರ ಸಮ್ಮತವಾದ ಪರಿಹಾರ ಇದೆಯಲ್ಲ – ನೀನೂ ಉಚ್ಚೆ ಹೊಯ್ಯಿ ಅಂತ. ಹೀಗೇನೆ ಮನೇಂದ ಮನೇಗೆ ಸುದ್ದಿ ಹರಡಿ ಎಲ್ರೂ ಈ ಉದ್ಯೋಗ ಪ್ರಾರಂಭಿಸಿದ್ರು. ಆದ್ರೆ ಒಬ್ಬ ಬಡ ಬ್ರಾಹ್ಮಣ ಮಾತ್ರ ಇದಕ್ಕೊಪ್ಪಲಿಲ್ಲ. ಹೆಂಡ್ತಿ ಒತ್ತಾಯ ಮಾಡಿದ್ರೂ ಕೇಳದೆ ಅವ ಅಗ್ರಹಾರಾನ್ನೇ ಬಿಟ್ಟು ಹೋದ. ಅವನು ಮನೆ ಖಾಲಿ ಮಾಡಿದ್ದೇ ಪಕ್ಕದ ಮನೆ ಬ್ರಾಹ್ಮಣ ಯೋಚಿಸ್ದ. ಅಲ್ಲ – ನನ್ನ ಒಂದು ಯಜ್ಞಕುಂಡದಲ್ಲಿ ಒಂದು ಗಟ್ಟಿ ಬಂಗಾರ ಸಿಗೋ ಹಾಗಿದ್ರೆ ಅವನ ಯಜ್ಞಕುಂಡಾನ್ನೂ ನಾನು ವಶಪಡಿಸಿಕೊಂಡು ಎರಡು ಗಟ್ಟಿ ಬಂಗಾರ ಸಂಪಾದಿಸಿ ಎಲ್ಲರಿಗಿಂತ ಯಾಕೆ ಹೆಚ್ಚು ಶ್ರೀಮಂತ ಆಗಬಾರ್ದು ಅಂತ – ಆಯ್ತು? ಎಲ್ಲ ಬ್ರಾಹ್ಮಣರಿಗೂ ಆಗ ಎಲ್ಲ ಯಜ್ಞಕುಂಡಗಳೂ ತನಗೊಬ್ಬನಿಗೇ ಬೇಕು ಅನ್ನೊ ದುರಾಸೆ ಪ್ರಾರಂಭವಾಯ್ತು.

ಕೊನೇಲಿ ಇಡೀ ಅಗ್ರಹಾರ ಬೆಂಕೀಲಿ ಉರಿದು ನಾಶವಾಯ್ತು'.

ಒಟ್ಟು ಸನ್ನಿವೇಶಕ್ಕೂ ತನ್ನ ಕಥೆಗೂ ಏನು ಸಂಬಂಧವೆಂಬುದು ಅಡಿಗರಿಗೆ ಅನುಮಾನವಾಗಿರಬೇಕು. ಇದ್ದಕ್ಕಿದ್ದಂತೆ 'ಸ್ನಾನ ಮಾಡಿ ಬರುತ್ತೇನೆ' ಎಂದು ನಡೆದುಬಿಟ್ಟರು.

ಚಿಕ್ಕಿ ನಾಲ್ಕು ಗಡಿಗೆಯ ತುಂಬ ಗಂಜಿ, ಒಂದು ಕಟ್ಟು ಬಾಳೆಲೆ, ಮತ್ತೊಂದು ಎಲೆಯ ಮೇಲೆ ಮಾವಿನ ಮಿಡಿ ಉಪ್ಪಿನಕಾಯಿ ತಂದು ಹೊರಗಿಟ್ಟರು. ಹೊಲೆಯರು ಎತ್ತಿಕೊಂಡು ಹೋಗಿ ಗುಡ್ಡದ ಒಂದು ಮೂಲೆಯಲ್ಲಿ ಕೂತು ಊಟಮಾಡಿದರು. ಜಗನ್ನಾಥ ಪಿಳ್ಳ ಮತ್ತು ಸಂಗಡಿಗರನ್ನು ಕರೆದು,

'ನೋಡಿ. ನಾವು ನಾಳೆ ದೇವಸ್ಥಾನದೊಳಗೆ ಹೋಗ್ತಿದೀವಿ. ಹೀಗೆಲ್ಲ ಆಯ್ತು ಅಂತ ನೀವು ಹೆದರಬಾರ್ದು. ಇವತ್ತೇ ನಿಮಗೆ ಜಿಂಕ್ಶೀಟು ಹಾಕಿದ ಗುಡಿಗಳನ್ನ ಕಟ್ಟಿಸೋ ವ್ಯವಸ್ಥೆ ಮಾಡ್ತಿದೀನಿ' ಎಂದ.

ಏನು ಯೋಚಿಸ್ತಿದಿ ಪಿಳ್ಳ ಎಂದು ಕೇಳಬೇಕೆನ್ನಿಸಿತು. ಆದರೆ ಯೋಚನೆ ಎನ್ನುವ ಶಬ್ದವೇ ಅವನಿಗೆ ಹೊಸದಿರಬಹುದು. ಪಿಳ್ಳನನ್ನು ಬಿಟ್ಟು ಉಳಿದವರು ಇನ್ನೂ ತನಗೆ ನಿಜವಾಗಿಲ್ಲ. ಯಾರು ಕರಿಯ, ಯಾರು ಮಾದ, ಯಾರು ಬಸ್ಯ, ಇನ್ನೊಬ್ಬ ನಿಜವಾದ್ದು ಸತ್ತ ಹುಡುಗ ಚೌಡ.

ಕಾಫಿ ತಿಂಡಿ ಮುಗಿಸಿ ಹೊರಟ. ಚಳಿ. ಎಳೆ ಬಿಸಿಲು. ನಡೆಯುತ್ತ ಮೈ ಬೆಚ್ಚಗಾಯಿತು. ದಾರಿಯುದ್ದಕ್ಕೂ ಜನ. ಹೊಳೆಯಲ್ಲಿ ಸ್ನಾನಮಾಡಿ ಹಿಂದಕ್ಕೆ ಬರುತ್ತಿದ್ದ ಪರಿಚಿತ ಮುಖಗಳು ಕೆಲವು : ಇನ್ನೆಷ್ಟೋ ಅಪರಿಚಿತ ಮುಖಗಳು. ಗುಡಿಗಳನ್ನು ಕಟ್ಟಿಸುವ ಜವಾಬ್ದಾರಿ ರಾಯರು ಹೊತ್ತಿದ್ದಾರೆ. ಆದ್ದರಿಂದ ಒಂದಿಷ್ಟು ಆರಾಮಾಗಿರಬಹುದು. ದೇಶದ ಯಾವುಯಾವುದೋ ಮೂಲೆಗಳಿಮದ ಹರಕೆ ಹೊತ್ತು ಬಂದವರನ್ನು ನೋಡುತ್ತ ಹೀಗೆ ಅಡ್ಡಾಡಬಹುದು. ತಾನು ಯೋಚಿಸಿದ್ದ ಕ್ರಿಯೆಯಿಂದ ಯಾರೂ ಬಾಧಿತರಾದಂತೆ ಕಾಣಲಿಲ್ಲ. ಶತಮಾನಗಳಿಂದ ಜನ ಹೀಗೇ ಇದೇ ದಿನ ಸ್ನಾನ ಮಾಡಿದ್ದರೆ ಅದೇ ಕತೆ ಕೇಳಿದ್ದಾರೆ. ಮಕ್ಕಳಿಗೆ ಹೇಳಿದ್ದಾರೆ. ಅಮ್ಮ ನನಗೆ ಹೇಳಿದಂತೆ. ಜಮದಗ್ನಿ ಕಡುಕೋಪಿ. ಹೆಂಡತಿಯಲ್ಲಿ ಹಾದರದ ಬುದ್ಧಿ ಮೂಡಿದ್ದು ಕಂಡು ತಾಯಿಯನ್ನು ಕಡಿಯಿರೋ ಎಂದ ಮಕ್ಕಳಿಗೆ. ಯಾರೂ ಮುಂದಾಗಲಿಲ್ಲ – ಪರಶುರಾನನ್ನು ಬಿಟ್ಟು. ಅವನು ಕೊಡಲಿಯೆತ್ತಿ ತಾಯಿಯ ತಲೆ ಕಡಿದ. ತಂದೆಯ ಅಪ್ಪಣೆ ಮೀರಬಾರದೆಂಬ ತತ್ವಕ್ಕೆ ಅವನು ಬದ್ಧ. ಆದರೂ ತಾಯಿಯಲ್ಲವೆ, ತತ್ವಕ್ಕೆ ಮೀರಿದ ಪ್ರೇಮವಿಲ್ಲವೆ – ಪ್ರಸನ್ನನಾದ ತಂದೆ ಏನಾದರೂ ವರ ಕೇಳು ಎಂದದ್ದಕ್ಕೆ ತಾಯಿಯನ್ನು ಬದುಕಿಸು ಎಂದು ಬೇಡಿಕೊಂಡ. ತಾಯಿ ಬದುಕಿದಳು. ಆದರೆ ಕೊಡಲಿಗೆ ಹತ್ತಿದ ರಕ್ತ ಯಾವ ನೀರಿನಲ್ಲಿ ತೊಳೆದರೂ ಹೋಗಲಿಲ್ಲಂತೆ. ಕೊನೇಗೆ ಅವನು ಭಾರತೀಪುರದ ಈ ತುಂಗೆಯಲ್ಲಿ ಕೊಡಲಿ ಅದ್ದಿದನಂತೆ. ರಕ್ತ ಮಾಯವಾಯಿತು. ಕೊಡಲಿರಾಮ ಮಂಜುನಾಥನನ್ನು ಪ್ರತಿಷ್ಠಾಪಿಸಿದ – ಪಾಪ ತೊಳೆದ ನೆನಪಿಗಾಗಿ. ಅವನು ಕೊಡಲಿ ತೊಳದ ಮಡುವಿನಲ್ಲೆ ಸಹಸ್ರಾರು ಜನ ಅಮಾವಾಸ್ಯೆಯ ಪ್ರಾತಃಕಾಲ ಮುಳುಗಿ ಏಳುತ್ತಾರೆ, ಪಾಪವೆಲ್ಲ ಕಳೆಯಿತೆಂದು ಭ್ರಮಿಸಿ ಹರ್ಷರಾಗಿ ಓಡಾಡುತ್ತಾರೆ. ಈ ಪಾಪನಾಶಿನಿ, ಈ ಕೂಪ, ತತ್ವ ಮತ್ತು ತತ್ವಕ್ಕೆ ಮೀರಿದ ಪ್ರೇಮ, ಜಗನ್ನಾಥ ತನ್ನ ನಿಶ್ಚಯದ ಪ್ರಾರಂಭದಲ್ಲಿದ್ದ ತಿಳಿಯಾದ ಶುಭ್ರವಾದ ವಿಚಾರವನ್ನು ತನ್ನ ಅಂತರಂಗದಲ್ಲಿ ಮತ್ತೆ ಪಡೆದುಕೊಳ್ಳಲು ಯತ್ನಿಸುತ್ತ ಹೊಳೆಯ

ದಂಡೆಯ ಮೇಲೆ ಬಂದು ನಿಂತ.

ಎಷ್ಟು ಸಾವಿರ ಜನ. ಮುದುಕರು, ಮಕ್ಕಳು, ಹೆಂಗಸರು, ಎಷ್ಟೋ ಹೆತ್ತು ಸುಸ್ತಾದ ಅರಿಸಿನ ಹಚ್ಚಿ ಬಿಳುಚಿದ ಮುಖಗಳು, ನೀರು ಜೊಟ್ಟುವ ಕೂದುಲುಗಳು, ಅಮ್ಮನ ಒದ್ದೆಯಾದ ಹೇರಳವಾಗಿ ಬೆಳೆದ ಕಪ್ಪಾದ ಕೂದಲಿನ ಹಿಂದೆ ನಾನು ಓಡುತ್ತೋಡುತ್ತ ಹಿಂಬಾಲಿಸುತ್ತಿದ್ದೆ.

ಇವರಲ್ಲಿ ಅನುಮಾನ ಹುಟ್ಟಬೇಕು. ಅಷ್ಟೆ ಎಚ್ಚರಾಗಬೇಕು. ದೇವರನ್ನೊದ್ದು ನಿಲ್ಲಬೇಕು. ಭೂತರಾಯನ ಶಕ್ತಿ ಹೊಲೆಯರಲ್ಲುಕ್ಕಬೇಕು, ತಮ್ಮ ಜೀವನಕ್ಕೆ ತಾವೇ ಜವಾಬ್ದಾರರಾಗಬೇಕು. ಅವುಗಳು ಒಂದೇ ಒಂದು ಹೆಜ್ಜೆ ಒಳಗಿಟ್ಟರೆ. ಯಾವತ್ತಿನಿಂದಲೂ ಹೊರಗಿದ್ದ ಅವುಗಳು. ಪಿಳ್ಳನ ಮೊದಲ ಹೆಜ್ಜೆ ಸುಷುಪ್ತಿಯಲ್ಲಿರುವ ಈ ಪ್ರಾಚೀನ ಕ್ಷೇತ್ರದಲ್ಲಿ ತಳಮಳ ಹುಟ್ಟಿಸಬೇಕು. ಚಿಕ್ಕ ದೊಡ್ಡ ಗಂಟೆಗಳನ್ನಾಡಿಸಿಕೊಂಡು ಇದ್ದಂತೇ ಇದ್ದು ಬಿಟ್ಟದ್ದು ಮೈ ಕೊಡವಿ ಏಳಬೇಕು. ಚೌಡನ ಹೆಣ, ಪಿಳ್ಳನ ರಕ್ತ, ಬೆಂಕಿಯಲ್ಲಿ ಉರಿದ ಗುಡಿಗಳು ಹೊಸದೊಂದು ವಾಸ್ತವವನ್ನು ಕೊರೆದು ತೆಗೆಯಬೇಕು.

ಯಾರೂ ತನ್ನನ್ನು ಗಮನಿಸಲಿಲ್ಲವೆಂದು ಸಂತೋಷವಾಯಿತು. ಜಗನ್ನಾಥ ಹಿಂದಕ್ಕೆ ನಡೆದ. ನಾಳೆಗಾಗಿ ಅಲಂಕೃತವಾದ ತೇರು. ಒದ್ದೆಯಾದ ಅದೇ ದಪ್ಪ ಮಿಣಿಗಳು, ಅದೇ ಮರದ ಕೆಳಗೆ ಇನ್ನೊಬ್ಬ ಮಂಗವನ್ನಾಡಿಸುವಾತ. ಯಾವನೋ ದೊಂಬ. ದಾರಿಯುದ್ದಕ್ಕೂ ಬಾಗಿಲು ತೆರೆಯುತ್ತಿರುವ ಅಂಗಡಿಗಳು. ಈ ದೊಡ್ಡ ಗೌಜು. ಸೀಳಿಕೊಂಡು ಒಂದೇ ಒಂದು ಅನುಮಾನ ಬಿರುಕು ಬಿಟ್ಟರೆ ಸಾಕು. ಮಿಠಾಯಿ ಅಂಗಡಿಯ ಬಾಗಿಲು ತೆರೆಯುತ್ತಿದ್ದ ವಾಸು 'ಏನಯ್ಯ?' ಎಂದು ಯೋಗಕ್ಷೇಮ ವಿಚಾರಿಸಿದ.

'Mr. Jagannath, may I ask you another question? ನೀವು ಎಕ್ಸಿಸ್ಟನ್ಸಿಯಲ್ಲಿಸ್ಟರೆ? ಯಾಕೆಂದರೆ ಸಾರ್ತ್ರ್ ಬೋಧಿಸುವ ಕಮಿಟ್‌ಮೆಂಟ್ ಥರ ನಿಮ್ಮ ವಿಚಾರ ಇದೆ ಅನ್ನಿಸುತ್ತೆ.?

ಬೆಂಗಳೂರಿನಿಂದ ಬಂದ ಪತ್ರಿಕಾ ಪ್ರತಿನಿಧಿ ಪಿಆರ್ಥಿ ಕೇಳಿದ. ನೀಲಕಂಠಸ್ವಾಮಿಯ ಟ್ರಂಕ್‌ಕಾಲ್ ಕೆಲಸ ಮಾಡಿತ್ತು. ಅವನ ಜೊತೆಗೆ ಬಂದಿದ್ದ ಅತ್ಯಂತ ಚುರುಕಾಗಿ ಓಡಾಡುವ, ಗಹಗಹಿಸಿ ನಗುವ ಕುಳ್ಳ ವ್ಯಕ್ತಿಯೊಬ್ಬ – ನೋಡಲು ಪಕ್‌ನಂತೆ ಕಾಣುತ್ತಿದ್ದವ – ಬೇರೆ ಬೇರೆ ಆಂಗಲ್‌ಗಳಲ್ಲಿ ನಿಂತು ಜಗನ್ನಾಥನ ಫೋಟೋ ತೆಗೆದ. ಪಿಆರ್ಥಿ ನೋಟ್ ಬುಕ್‌ನಲ್ಲಿ ಉತ್ತರ ಬರೆದುಕೊಳ್ಳುತ್ತ ಜಗನ್ನಾಥನ ಎದುರು ಕೂತಿದ್ದ. ನೀಲಕಂಠಸ್ವಾಮಿ ಜಗನ್ನಾಥನ ಉತ್ತರವನ್ನು ಅತ್ಯಾತುರದಿಂದ ಕೇಳಿಸಿಕೊಳ್ಳುತ್ತ ಚಿತ್ರದಲ್ಲಿ ತಾನೂ ಒಳಪಡಲೆಂದು ಸ್ವಲ್ಪ ಸ್ವಲ್ಪವೇ ಜಗನ್ನಾಥ ಕೂತ ದಿಕ್ಕಿಗೆ ತನ್ನ ಕುರ್ಚಿಯನ್ನು ಸರಿಸಿಕೊಂಡ. ಜಗನ್ನಾಥ ಉತ್ಸಾಹವಿಲ್ಲದೆ ಹೇಳಿದ :

'ನೀವು ಉಪಯೋಗಿಸೋ ಶಬ್ದಗಳಲ್ಲಿ ನನ್ನ ಕ್ರಿಯೇನ್ನ ವಿವರಿಸೋದು ನನಗೆ ಇಷ್ಟವಿಲ್ಲ.'

'ಹಾಗಾದರೆ ನೀವು ಮಾರ್ಕ್ಸಿಸ್ಟ್ ಎನ್ನೋಣವೆ?' ಮಂತ್ರಿಗಳನ್ನು ಬಾಯಿ ಬಿಡಿಸುವುದರಲ್ಲಿ ಚತುರನೆಂದು ಪಿಆರ್ಥಿ ಪ್ರಖ್ಯಾತ.

‘ಭಾರತೀಯ ಪರಿಸರದಲ್ಲಿ ಬೇರೂರಿ ನಮ್ಮ ಕಮ್ಯೂನಿಸ್ಟರು ಯೋಚಿಸಿದ್ದೇ ಇಲ್ಲ. ಒಂದೋ ರಷ್ಯದ ಕಡೆ, ಅಥವಾ ಚೀನದ ಕಡೆ ನೋಡ್ತಾ ಇರ್ತಾರೆ.’

‘ಹಾಗಾದರೆ ನೀವು ಲೋಹಿಯಾ ಸಮಾಜವಾದಿಯೊ?

‘ಜಗನ್ನಾಥರ ಯೋಚನಾ ಕ್ರಮ ಲೋಹಿಯಾಗೆ ಬಹಳ ಹತ್ತಿರಾಂತ ನನಗೆ ಅನ್ನಿಸುತ್ತೆ.’

ಲೋಹಿಯಾ ಹೆಸರಲ್ಲಿ ಸಮಾಜವಾದೀ ಪಕ್ಷದಿಂದ ಒಡೆದುಕೊಂಡಿದ್ದ ನೀಲಕಂಠ ಸ್ವಾಮಿಗೆ ಹಾಗೆ ಹೇಳುವುದರಲ್ಲಿ ಲಾಭವಿತ್ತು. ಜಗನ್ನಾಥ ಹೇಳಿದ:

‘ಲೋಹಿಯಾ ವಿಚಾರ ನನಗೆ ತುಂಬ ಹಿಡಿಸತ್ತೆ ಅನ್ನೋದು ನಿಜ. ಆದರೆ ಪಾರ್ಲಿಮೆಂಟರಿ ರಾಜಕೀಯದಲ್ಲಿ ನನಗಷ್ಟು ಆಸಕ್ತಿಯಿಲ್ಲದೇ ಇರೋದರಿಂದ ನೀಲಕಂಠಸ್ವಾಮಿಗಳ ಪಾರ್ಟಿಗೆ ನಾನು ಸೇರಿಲ್ಲ. ಯಾರರ್ಯಾರು ಈ ಚಳುವಳೀಲಿ ನಂಬ್ತಾರೋ ಅವರೆಲ್ಲರ ಸಹಾಯ ನನಗೆ ಬೇಕು.’

ಪಿಆರ್‌ರ್ವಿ ಅಷ್ಟಕ್ಕೇ ಬಿಡಲಿಲ್ಲ. ಒಳಗಿನಿಂದ ಬಂದ ಕಾಫಿಯನ್ನು ಕುಡಿಯುತ್ತ ಫೋಟೋಗ್ರಾಫರ್ ಪಕ್‌ನಿಂದ ಒಂದು ಎಕ್ಸ್‌ಪೋರ್ಟ್ ಚಾರ್ಮಿನಾರ್ ಸಿಗರೇಟ್ ತೆಗೆದುಕೊಂಡು ಹಚ್ಚಿದ. ಜಗನ್ನಾಥನಿಗೆ ಸಿಗರೇಟು ಒಡ್ಡಿದ. ‘I don’t smoke much, but all right’ ಎಂದು ಜಗನ್ನಾಥನೂ ಸಿಗರೇಟು ಹಚ್ಚಿದ.

‘ನಾಳೆ ರಥೋತ್ಸವಕ್ಕೆ ಮುಂಚೆ ಹರಿಜನ ದೇವಾಲಯ ಪ್ರವೇಶ ಅಂತ ಇಟ್ಕೊಂಡಿದೀರಿ. ಇದರಿಂದ ದೊಡ್ಡದೊಂದು ಕ್ರಾಂತಿಯಾಗುತ್ತೇಂತ ತಿಳ್ದಿದೀರ?’

‘ತಿಳ್ದಿದ್ದೆ. But not now. ಯಾವ ಕ್ರಾಂತಿಗೂ ಪೂರ್ವವಾಗಿ ಈ ಮಧ್ಯಯುಗದ ನಂಬಿಕೇನ್ನ ಸೀಳಬೇಕೂಂತ ನನ್ನ ಉದ್ದೇಶ. ಅದು ಸಫಲವಾದರೆ ಮೊದಲನೇ ಹೆಜ್ಜೆ ಇಟ್ಟಂತೆ. ಒಂದು ವೇಳೆ ಹೊಲೆಯರು ಹೆದರಿ ದೇವಸ್ಥಾನದೊಳಕ್ಕೆ ಬರ್ದೇ ಹೋಗಬಹುದು. ಅಲ್ಲವೆ? ಅವರು ಸ್ವಂತ ಇಚ್ಛೇಂದ್ಲೆ ಪ್ರತಿಭಟಿಸಬೇಕು ಅನ್ನೋದು ನನ್ನ ಗುರಿ. ನಾವು ನಾಳೆ ಸೋಲಲಿ ಗೆಲ್ಲಲ್ಲಿ ಹೋರಾಟಾಂತೂ ಪ್ರಾರಂಭವಾಗಿದೇಂತ ನಾನು ತಿಳ್ದಿದೀನಿ.’

‘That is correct’

ನೀಲಕಂಠಸ್ವಾಮಿ ಮೆಚ್ಚಿಗೆಯಿಂದ ಜಗನ್ನಾಥನನ್ನು ಹೊಗಳಿದ.

‘Another question, ನಾವು ನೋಡೋ ಎಲ್ಲ ಮಂಜುನಾಥನ ಚಿತ್ರದಲ್ಲೂ ಇರೋ ಬಂಗಾರದ ಕಿರೀಟ ನಿಮ್ಮ ಪ್ರಾಣ ಉಳಿಸಿದ್ದು ಅಂತಾರೆ. Any comment?’

ಜಗನ್ನಾಥ ‘No’ ಎಂದ.

‘ಹೊಲೇರ ಗುಡಿಗಳಿಗೆ ಬೆಂಕಿ ಬಿದ್ದದ್ದಕ್ಕೆ ಕಾರಣ: ಅವರು ಶಾಲಿಗ್ರಾಮ ಮುಟ್ಟಿದ್ರಿಂದ ಅಂತ ಕೆಲವರು ಅನ್ತಾರೆ; ನಿಮ್ಮ ಅನುಯಾಯಿಯೊಬ್ಬ ಬಂಟರ ಹುಡುಗೀನ್ನ ರೇಪ್ ಮಾಡಕ್ಕೆ ಪ್ರಯತ್ನಿಸಿದ್ರಿಂದ ಅಂತ್ಲೂ ಕೆಲವರು ಅನ್ತಾರೆ. Any comment?’

‘ಯಾರೂ ಅಪರಾಧಿ ಅಂತ ಪತ್ತೆ ಹಚ್ಚೋದು ಪೋಲೀಸರಿಗೆ ಸೇರಿದ್ದು.’

‘ಈ ಊರಿನ ವರ್ತಕರೊಬ್ಬರ ಕೈವಾಡ ಇದೆ ಅಂತ್ಲೂ ಗುಮಾನಿ ಇದೆ.’

ರಂಗರಾವ್ ಪಿಆರ್ಒಯ ಗಮನಕ್ಕದು ಬರಲಿ ಎಂದು ಒತ್ತಾಯಪೂರ್ವಕವಾಗಿ ಹೇಳಿದ. ಪಿಆರ್ಒ ಸಿಗರೇಟನ್ನು ಬೂಡ್ಸಿನಿಂದ ಉಜ್ಜಿ ಕೇಳಿದ:

‘ನೀವೊಬ್ಬರೂ ಆದರ್ಶವಾದಿ ಅಂತ ಕೆಲವರು ಹೇಳಿದರೆ, ಹಲವರಿಗೆ ನೀವು ಈ ಕ್ಷೇತ್ರದಿಂದ ಮುಂದಿನ ಸಾರಿ ಚುನಾವಣೆಗೆ ನಿಲ್ತಿದೀರಿ ಅನ್ನೊ ಅಭಿಪ್ರಾಯವಿದೆ. ಆ ಕಾರಣಕ್ಕಾಗಿ ಇದೆಲ್ಲ ನಿಮ್ಮ ತಯಾರಿ ಅಂತಾರೆ’.

ಜಗನ್ನಾಥ ನಗುತ್ತ ಇಲ್ಲವೆಂದು ತಲೆಯಲ್ಲಾಡಿಸಿದ.

‘ಈ ಸಂಘಟನೆ ಕೆಲಸಾನ್ನ ಮುಂದುವರಿಸಿಕೊಂಡು ಹೋಗ್ತೇನೆ ಅಷ್ಟೆ. ಹೊಲೆಯರು ಆಮೇಲೆ ರೈತರು...’

‘ಈಗಿರೋ ಮಂತ್ರಿಮಂಡಳದ ಬಗ್ಗೆ ನಿಮ್ಮ ಅಭಿಪ್ರಾಯವೇನು? Socialistic Pattern of Society ನ ತರಬಹುದು ಅಂತ ಅನ್ನಿಸತ್ತ?’

‘ಇಲ್ಲ. ನಮ್ಮ ರಾಷ್ಟ್ರಪತಿಗಳು ಕಾಶೀಲಿ ಬ್ರಾಹ್ಮಣರ ಪಾದ ತೊಳೆದು ತೀರ್ಥ ಕುಡಿದರು. ಶೃಂಗೇರಿ ಸ್ವಾಮಿಗಳು ಕಾಲಿಗೆ ಬಿದ್ರು. ಅವರು ಸಕೇಶಿಗಳಿಗೆ ತೀರ್ಥ ಕೊಡಲ್ಲಾಂತ ಕೇಳಿದೀನಿ. ಈ ಮಂಜುನಾಥ ದೇವರಿಗೂ ಅವರು ಪರಮಭಕ್ತರು. ಈ ದೇಶದಲ್ಲಿ ಜನರನ್ನ ಮೊದಲು ದೇವ್ರ ಹಿಡಿತದಿಂದ ತಪ್ಪಿಸಬೇಕೂಂತ ನನ್ನ ಅಭಿಪ್ರಾಯ.’

‘Thank You’

ಪಿಆರ್ಓ ಫೋಟೋಗ್ರಾಫರ್ ಜೊತೆ ಊರು ಸುತ್ತಿ ಬರಲು ಎದ್ದುನಿಂತ, ಇಬ್ಬರ ಜೇಬಲ್ಲೂ ಮಂಜುನಾಥನ ಪ್ರಸಾದದ ಪುಟ್ಟಣಗಳಿದ್ದುದನ್ನು ಗಮನಿಸಿ ಜಗನ್ನಾಥ,

'ನೀವು ಇಲ್ಲಿ ಬರೋಕೆ ಮುಂಚೆ ದೇವಸ್ಥಾನಕ್ಕೆ ಹೋಗಿ ಬಂದ್ರ ?'

ಎಂದು ಕೇಳಿದ.

'Yes. A beautiful place. ಅದೆಂಥಾ ಟ್ರೆಮೆಂಡಸ್ ಗಂಟೆ ಇದೇರಿ ಅಲ್ಲಿ ನಿಮ್ಮ ಮನೆತನದವರು ಮಾಡಿಸಿಕೊಟ್ಟದ್ದಂತೆ' ಎಂದು ಪಿಆರ್ಓ ಹೇಳಿದ. ಫೋಟೋಗ್ರಾಫರ್ ಕೈ ಜೋಡಿಸಿ ಬಗ್ಗಿ ನಮಸ್ಕರಿಸಿ ಪರಮಾಪ್ತನಂತೆ ನಕ್ಕು, ಕೈ ಕುಲುಕಿ, ಲಗುಬಗೆಯಿಂದ ಪಿಆರ್ಓ ಜೊತೆ ನಡೆದ.

* * *

ಪಿಆರ್ಓ ಚಿತ್ರಗಳ ಸಹಿತ ಸ್ಟೋರಿ ಮಾಡಿ ಬೆಂಗಳೂರಿಗೆ ರವಾನಿಸಿದ. ಅವನ ಸ್ಟೋರಿಯಲ್ಲಿ ಜಗನ್ನಾಥನ ಪ್ರಾಣ ಉಳಿಸಿದ ಬಂಗಾರದ ಕಿರೀಟಕ್ಕೆ ವಿಶೇಷವಾದ ಮಹತ್ವವಿತ್ತು. ಆದಾದ ಮೇಲೆ ಜಗನ್ನಾಥನ ಇಂಗ್ಲೆಂಡ್ ವಿದ್ಯಾಭ್ಯಾಸ: ಫಾರ್‌ಸ್ಟರ್ ಪರಿಚಯ; ನ್ಯೂಲೆಫ್ಟಿನವರ ಜೊತೆ ಸಹವಾಸ; ಉದ್ದ ಕೂದಲು ಸಾದಾ ಡ್ರೆಸ್ಸು ನೀಳ ಮೂಗು ಎತ್ತರ ನಿಲುವು; ಶಾಲಿಗ್ರಾಮ ಸ್ಪರ್ಶ, ಅತ್ಯಾಚಾರ ಪ್ರಯತ್ನ; ಶತಮಾನಗಳ ವಾಸ್ತವ ಬದಲಿಸುವ ಮೊದಲ ಹೆಜ್ಜೆಯ ಆಸ್ತತ್ವವಾದೀ ಥಿಯರಿ; ಮನೆಗೆ ಬಹಿಷ್ಕಾರ; ಭಾರತೀಪುರದ ಆರ್ಥಿಕ ವ್ಯವಸ್ಥೆ ಮುರಿದು ಬಿದ್ದೀತೆಂಬ ವರ್ತಕ ಪ್ರಭುಗಳ ಆತಂಕ; ಮಂಜುನಾಥನ ಭಂಟ ಭೂತರಾಯನ ಸರ್ವವ್ಯಾಪ್ಯ – ಸರ್ವರೋಗ ಪರಿಹಾರ ಶಕ್ತಿ, ಹುಟ್ಟು ಬಂಜೆಯರಿಗೆ ಮಕ್ಕಳು ಕೊಡುವ ಶಕ್ತಿ; ಜಗನ್ನಾಥ ಮುಂದಿನ ಚುನಾವಣೆಗೆ ನಿಲ್ಲುವರೆ ? ಊಹಾಪೋಹ; ಹಾಲಿ ಅಸೆಂಬ್ಲಿ ಮೆಂಬರ್ ಗುರಪ್ಪ ಗೌಡರ ಮೌನ ; ಗುಡಿಗೆ ಬೆಂಕಿ; ಹುತಾತ್ಮ ಚೌಡ; ಅನುಯಾಯಿ ಪಿಳ್ಳ; ತಮಗೆ ಒಪ್ಪಿಗೆಯಿಲ್ಲದಿದ್ದರೂ ಎಲ್ಲರನ್ನೂ ಸತ್ಕರಿಸುವ ಜಗನ್ನಾಥನ ಚಿಕ್ಕಮ್ಮ; ಇತ್ಯಾದಿಗಳ ಕೊನೆಯಲ್ಲಿ ಹೀಗೆ ಬರೆದ:

'ಬೆಟ್ಟಗಳ ನಡುವೆ ಅಂತರ್ಮುಖಿಯಾಗಿ ಮಲಗಿ ಸಹಸ್ರಾರು ವರ್ಷಗಳಿಂದ ನಿದ್ರಿಸುತ್ತಿರುವ ಮನೋಹರ ಊರು ಭಾರತೀಪುರ. ಭಾರತೀಯ ಸಂಸ್ಕೃತಿಯ ಸಾರವನ್ನು ತನ್ನಲ್ಲಿ ಬಚ್ಚಿಟ್ಟುಕೊಂಡಿರುವ ಈ ಪುರಾತನ ಪಟ್ಟಣ ಈಗ ಕ್ಷುಬ್ಧವಾಗಿದೆ ಎಂದು ಭಾವಿಸುವುದೂ ತಪ್ಪಾದೀತು. ಈ ಬೀದಿಗಳಲ್ಲಿ ನಡೆಯುವಾಗ ಮಂಜುನಾಥನ ಪ್ರಸಾದವಾದ ಕುಂಕುಮವನ್ನು ಹೊತ್ತ ಸಹಸ್ರಾರು ಹಣೆಗಳು ಎದುರಾಗುತ್ತವೆ. ರಥೋತ್ಸವದ ದಿನ ಗುಡಿಯ ಹೊಸಲನ್ನು ಹೊಲೆಯರು ದಾಟಬಲ್ಲರೆ ಎಂದು ಇವರನ್ನು ಕೇಳೀ ನೋಡಿ. ನಿರಾತಂಕವಾಗಿ ನಗುತ್ತ ಇವರು ತಲೆಯಲ್ಲಾಡಿಸುತ್ತಾರೆ. ಭೂತರಾಯ ಕಾಲು ಎಳೆಯುತ್ತಾನೆ, ಹೊಲೆಯರು ರಕ್ತಕಾರಿ ಸಾಯುತ್ತಾರೆಂಬುದು ಇವರ ದೃಢ ನಂಬಿಕೆ. ಯುವಕ ಬ್ರಾಹ್ಮಣ ಸಂಘದ ತರುಣರೊಬ್ಬರು ಹೇಳಿದರು : ಜಗನ್ನಾಥರು ನಿಜವಾದ ಕ್ರಾಂತಿಕಾರಿಗಳಾದರೆ ದೇವಸ್ಥಾನವನ್ನೆ ಧಿಕ್ಕರಿಸಬೇಕು.

ನಿರೀಶ್ವರವಾಗಿಯೊಬ್ಬ ಹೊಲೆಯರಿಗೆ ದೇವಸ್ಥಾನ ಬೇಕೆಂಬುದರಲ್ಲಿ ಅರ್ಥವಿಲ್ಲ.

ಏನೇ ಇರಲಿ, ಭಾರತದ ರಾಷ್ಟ್ರಪತಿಗಳನ್ನೂ ಭಕ್ತನನ್ನಾಗಿ ಪಡೆದ ಈ ದೇವಸ್ಥಾನ ಸಾಮಾನ್ಯರ ನಂಬಿಕೆಯ ಮೇಲೆ ಬೆಳೆದು ನಿಂತಿದೆಯೆಂದರೆ ತಪ್ಪಲ್ಲ. ಎಲ್ಲ ವರ್ಗಭೇದಗಳನ್ನೂ ಭಾರತದಲ್ಲಿ ಸೀಳುವುದೆಂದರೆ ದೇವರು ಮತ್ತು ಸಂತರು. ಹೊಲೆಯರಿಗೂ ಈ ದೇವರು ಪ್ರಾಪ್ತವಾಗುವಂತಾಗಬೇಕೆಂಬುದು ಜಗನ್ನಾಥರ ಉದ್ದೇಶವಲ್ಲ; ಆದರೂ ಅವರ ಉದ್ದೇಶ ಮೀರಿ ಹಾಗಾಗಬಹುದೆಂಬುದಕ್ಕೆ ಈ ದೇಶದಲ್ಲಿ ಉದಾಹರಣೆಗಳಿವೆ. ಶಿವಮೊಗ್ಗೆಯ ಡಿ.ಸಿ. ಸ್ವತಃ ಹರಿಜನರು. ಅವರು ನನಗೆ ಹೀಗೆ ಹೇಳಿದರು: 'ನಮ್ಮ ಸಮಾಜ ಗಾಂಧೀಜಿಯವರು ನಂಬಿದ ಅಹಿಂಸೆಯ ಮೂಲಕ ಪರಿವರ್ತನೆಯಾಗಬೇಕು. ನಮ್ಮ ಪ್ರಧಾನಿಗಳ ನೇತೃತ್ವದಲ್ಲಿ ಈಗಾಗಲೇ ಸಮಾಜವಾದದ ಪ್ರಗತಿಶೀಲ ಹಾದಿಯನ್ನು ದೇಶ ಶಾಂತರೀತಿಯಲ್ಲಿ ತುಳಿಯುತ್ತಿದೆ. ಇಂದಲ್ಲ ನಾಳೆ ಮಂಜುನಾಥನ ದೇವಾಲಯದ ಬಾಗಿಲು ಹರಿಜನರಿಗೆ ತೆರೆಯುತ್ತದೆಂಬ ನಂಬಿಕೆ ನನಗಿದೆ. ಪಂಡಿತಾಃ ಸಮದರ್ಶಿನಃ ಎಂದು ವೇದಾಂತ ಸಾರಿಲ್ಲವೆ? ದೇವಸ್ಥಾನದ ಕಮಿಟಿಯವರು ನಾನು ಅಧಿಕಾರ ಸ್ವೀಕರಿಸಿದಾಗ ನನಗೆ ಪ್ರಸಾದ ಕಳಿಸಿದರೆಂಬುದನ್ನು ನಾನಿಲ್ಲ ಕೃತಜ್ಞತಾಪೂರ್ವಕವಾಗಿ ನೆನೆಯದಿದ್ದರೆ ತಪ್ಪಾದೀತು. ಆಕ್ರೋಶ ತಪ್ಪು. ಜನಾಂಗಗಳು ನೆಮ್ಮದಿಯಿಂದ ಒಟ್ಟಿಗೆ ಬಾಳಬೇಕು. ಹರಿಜನರು ವಿದ್ಯಾವಂತರಾಗಿ ತಮ್ಮೊಳಗಿರುವ ಭೇದ ಭಾವಗಳನ್ನು ತೊರೆದು ನಮ್ಮ ಪ್ರಧಾನಿಯ ನೇತೃತ್ವದಲ್ಲಿ ಭವ್ಯ ಸಮಾಜ ನಿರ್ಮಾಣ ಮಾಡಬೇಕು.'

ಪಿಆರ್ಬಿಯ ಕೊನೆಯ ಮಾತುಗಳು ಹೀಗಿದ್ದುವು: 'ಸತ್ಯ ಪ್ರಕಾಶರನ್ನು ಅವರ ಮನೆಯಲ್ಲಿ ಭೇಟಿ ಮಾಡಿದಾಗ ಪ್ರಾತಃಕಾಲ. ಅವರ ಹಣೆಯಲ್ಲಿ ಕುಂಕುಮವಿತ್ತು. ಅದು ಮಂಜುನಾಥನ ಪ್ರಸಾದವಿರಬಹುದೇ ಎಂದು ಅನುಮಾನಿಸುತ್ತ, ಭಾರತೀಪುರದ ನನ್ನ ಅನುಭವಗಳನ್ನೆಲ್ಲ ಮತ್ತೆ ಮೆಲುಕುಹಾಕಿದೆ.'

ಕೋಡಲೊಲೆ ಒಣಗಿರಬೇಕು. ಅದನ್ನು ಕರಿಬೆರೆಸಿದ ಸಗಣಿಯಲ್ಲಿ ಸಾರಿಸಿ, ಅದರ ಮೇಲೆ ನಾಜೂಕಾಗಿ ಚಿಕ್ಕ ರಂಗೋಲೆ ಬಿಡುಸುತ್ತ ಕೂತಿದ್ದರು.

ಅಂಗಳದ ಒಂದು ಮೂಲೆಯಲ್ಲಿ ನೀಲಕಂಠಸ್ವಾಮಿ ತನ್ನ ಗೆಳೆಯರ ಜೊತೆ ಪ್ಲಕಾರ್ಡುಗಳನ್ನು ತಯಾರಿಸುತ್ತಿದ್ದ. 'ಅಸ್ಪೃಶ್ಯತೆ ಈಗಿಂದೀಗಲೆ ತೊಲಗಲಿ'; 'ಮೈಸೋಪಕ್ಕೆ ಜಯವಾಗಲಿ'; 'ಇಂಕ್ವಿಲಾಬ್ ಜಿಂಆಬಾದ್'; 'ರೈತರ ಶೋಷಕ ಭೂತರಾಯ, ಭೂತರಾಯನ ಶೋಷಕ ಮಂಜುನಾಥ' – ಇತ್ಯಾದಿ ಕೆಂಪಕ್ಷರಗಳ ಪ್ಲಕಾರ್ಡುಗಳನ್ನು ಸಾಲಾಗಿ ಒಣಗಲು ರಂಗರಾವ್ ಇಡುತ್ತಿದ್ದ. ಶ್ರೀಪತಿರಾಯರು ಹೊಲೆಯರ ಗುಡಿಗಳನ್ನು ಕಟ್ಟಿಸುವ ವ್ಯವಸ್ಥೆಯಲ್ಲಿದ್ದರು.

ಯಾವನೊ ಹೊಲೆಯ ದೂರದಲ್ಲಿ ನಿಂತು ಒಡೇರೇ ಎಂದು ಕರೆದ. ಜಗನ್ನಾಥ ಕಡೆ ಹೊಲೆಯನಲ್ಲ. ಕೈ ಮುಗಿದು ಬೇಡಿಕೊಂಡ: 'ನಿಮ್ಮ ಹೊಲೇರು ಗುಡಿಗೆ ಹೋಗ್ತಾರೇಂತ ನಮ್ಮ ಒಡೇರು ಸಿಟ್ಟಾಗಿ ನಮ್ಮನ್ನೆಲ್ಲ ಓಡಿಸಿಬಿಡ್ತೀನಿ ಅಂತಿದಾರೆ. ಧಣೇರು ಕಾಪಾಡಬೇಕು.' ಜಗನ್ನಾಥ ಏನು ಹೇಳಬೇಕೆಂದು ಯೋಚಿಸುತ್ತಿದ್ದಂತೆ ಶ್ರೀಪತಿರಾಯರು ಪಂಚೆಯನ್ನು ಮೇಲಕ್ಕೆತ್ತಿ ಕಟ್ಟಿ ಹೇಳಿದರು :

'ಏ ಕೊಗ್ಗ ಸುಮ್ಮನೇ ಹೋಗಯ್ಯ, ನಿಮ್ಮನ್ನ ಓಡ್ಸಿದ್ರೆ ಕುಕ್ಕೇಲಿ ಪಾಯ್ಖಾನೆ ಹೊತ್ತು ಕೊಂಡು ಸಾಗಿಸೋರು ಯಾರು ಹೇಳು ? ಅದೂ ಈಗ ಜಾತ್ರೆ ಸಮಯದಲ್ಲಿ . ಗುಡೀಗೆ ಬೆಂಕಿ ಗಿಂಕಿ ಹಾಕ್ಯಾರು – ಅಷ್ಟೆ. ಸರದಿ ಮೇಲೆ ಕಾದುಕೊಂಡಿರಿ'.

ರಾಯರು ಮಾತು ಜಗನ್ನಾಥನಿಗೆ ಇಷ್ಟವಾಯಿತು. ಹೊಲೆಯರಿಗೆ ಹೇಳಬೇಕು. ನಿಮ್ಮ ಹೀನತೆಯೇ ನಿಮ್ಮ ಶಕ್ತಿ. ನಿಮ್ಮ ಹೀನತೆಯಲ್ಲೆ ಈ ಸಮಾಜಕ್ಕೆ ನಿಮ್ಮ ಅನಿವಾರ್ಯತೆ ಇದೆ. ಹೇಳು ಬಾಚಲ್ಲ ಅನ್ನಿ, ಆಗ ಮಂಜುನಾಥನನ್ನು ನಿತ್ಯ ಆವರಿಸುವ ಊದುಬತ್ತಿ ಲೋಭಾನಗಳ ಸುಗಂಧವನ್ನು ಊರಲೆಲ್ಲ ದಟ್ಟ ಹರಡುವ ಹೇಲಿನ ದುರ್ವಾಸನೆಯಿಂದ ನಾಶ ಮಾಡುವ ಶಕ್ತಿ ನಿಮ್ಮಲ್ಲಿದೆ. ಜಗನ್ನಾಥನ ಮೈ ನಡುಗಿತು. ಕಿಟಕಿಯಿಂದ ಹೂ ಬಿಟ್ಟ ಮಾವಿನ ಮರ ನೋಡಿದ. ಮಾರ್ಗರೆಟ್, ಮೇಜಿನ ಮೇಲೆ ನೊರೆಗೆರೆಯುವ ಬಿಯರ್, ನಿರಾತಂಕ ಚರ್ಚೆಯಲ್ಲಿ ಯಾವ ಜೀವನ ಸಾಧ್ಯತೆಯನ್ನಾದರೂ ಅರಳಿಸಬಲ್ಲ ಮತ್ತೇರಿದ ಮಾತಿನ ಆಟ – ಇನ್ನು ಮುಂದೆ ವರ್ಜ್ಯ. ಈ ಕ್ರೌರ್ಯ, ಈ ಕನಸು, ಒಣಗಿಸುವ ಈ ತಪಸ್ಸು – ಎಲ್ಲವನ್ನೂ ಉಪಯೋಗಿಸಿ ಭಾರತೀಪುರದ ವಾಸ್ತವದ ಆಯಸ್ಥಳಗಳನ್ನು ಪತ್ತೆ ಹಚ್ಚಿ ನುರಿಯಬೇಕು. ಹೊಲೆಯನಿಲ್ಲದಿದ್ದರೆ ಅನುಭಾವಿಯ ಹೇಲೂ ನಾರುತ್ತದೆ ಎಂಬ ಪ್ರಜ್ಞೆ ಹುಟ್ಟಿದರೆ ಕಾಲ ಚಲಿಸುತ್ತದೆ. ಚಲಿಸುತ್ತ ಕಬ್ಬಿಣದ ಉತ್ಪಾದನೆ ಹೆಚ್ಚುತ್ತದೆ. ಹೆಚ್ಚುತ್ತ ಉಕ್ಕಿನ ಕೊಳಾಯಿಗಳಾಗುತ್ತವೆ. ದೇಶಾದ್ಯಂತ ಫ್ಲಶ್ ಕಕ್ಕಸುಗಳಾಗುತ್ತವೆ. ಕುಕ್ಕೆಯಲ್ಲಿ ಹೇಲು ತಲೆಯನ್ನೇರುವ ಅಗತ್ಯ ಮಾಯವಾಗುತ್ತದೆ. ಗಾಂಧಿ ಬಸವಣ್ಣರ ಕನಸು ಅರಳುತ್ತದೆ. ಈ ಕಪ್ಪು ಹೊಲತಿಯರು ಹೇಲಿನ ಬದಲಾಗಿ ಬಿಳಿ ಮಲ್ಲಿಗೆಯನ್ನು ತಲೆಯಲ್ಲಿ ಮುಡಿದು ಗಂಧ ತೊಟ್ಟ ಬ್ರಾಹ್ಮಣರಿಗೆ ಅಪ್ಯಾಯಮಾನವಾಗುತ್ತಾರೆ. ಬ್ರಾಹ್ಮಣ ಹುಡುಗಿಯರು ವಿಶಾಲವಾದ ಕಪ್ಪು ಎದೆಯ ಪಿಳ್ಳನಂಥವರಿಗೆ ಒಲಿಯುತ್ತಾರೆ.

ಕಲ್ಪನೆಯಲ್ಲಿ ಹಿಗ್ಗುತ್ತ, ಹೀಗೆ ಹಿಗ್ಗುತ್ತಿದ್ದೇನಲ್ಲ ಎಂದು ಜಗನ್ನಾಥನಿಗೆ ನಾಚಿಕೆಯಾಯಿತು. ಮುಖ್ಯವಾಗಿ ಅರಿಯಬೇಕಾದ್ದು ನನಗಿರುವ ವಿಸರ್ಜನೆಯ ಅವಸರ. ಇಲ್ಲವೆ ನಿಜವಾಗಲಾರೆ, ನಿಶ್ಚಯದ ಕ್ರಿಯೆ ಮಾಡಲಾರೆ. ಲೋಳೆಯಾಗುತ್ತೇನೆ. ಇನ್ನೂ ಅಂತರಪಿಶಾಚಿಯಾದ್ದರಿಂದ ಕ್ರೌರ್ಯದ ಕನಸುಗಳ ಈ ತೀಟೆ. ಕ್ರಿಯೆಯಲ್ಲಿ ಸಂಪೂರ್ಣ ಒಳಪಟ್ಟಾಗ ಸರ್ಜನ್ನಿನ ಹರಿತವಾದ ಚೂರಿಯಂತೆ : ಪ್ರೇಮವಿಲ್ಲದ, ದ್ವೇಷವಿಲ್ಲದ ಉದ್ದೇಶದ ಗೆರೆಗಳ ಒಳಗೆ ಕೊಯ್ಯುವ ಸಾಧನ ಮಾತ್ರ.

ಹಾಗಾದರೆ ವಿಸರ್ಜಿಸಿಕೊಳ್ಳುತ್ತ ? ಎಲ್ಲಿಯತನಕ ? ಜಗನ್ನಾಥ ಇನ್ನೊಂದು ವಿಚಾರದ ಬೆನ್ನು ಹತ್ತಿದ. ಕಾಪಾಲಿಕರು, ಶಾಕ್ತರು, ಸಿದ್ಧಿಗಾಗಿ ಹೆಣದ ಜೊತೆ ಸಂಭೋಗ ಮಾಡುತ್ತಾರಂತೆ. ಹೂಳಿದ ಹೆಣವನ್ನು ಅಗೆದು ತೆಗೆದು ತಿನ್ನುತ್ತಾರಂತೆ. ಈ ಮೂಲಕ ಅವಧೂತರಾಗುತ್ತಾರಂತೆ. ಅವಧೂತರು ಪರಿಪೂರ್ಣ ಕ್ರಾಂತಿಕಾರರು. ಒಂದು ಬಗೆಯಲ್ಲಿ ಅವರ ರೀತಿಯಲ್ಲಿ ವಿಸರ್ಜನೆಯ ಮಾರ್ಗವನ್ನು ನಾನೂ ಹಿಡಿಯಬೇಕಾಗಿ ಬರುತ್ತದೊ ? ಅಡಿಗರು ಹೇಳುವಂತೆ ಸಾಮಾಜಿಕನಾಗಿದ್ದೂ ಕ್ರಾಂತಿಕಾರನಾಗುವುದು ಅಸಾಧ್ಯವೆ ? ವಿಪರ್ಯಾಸವೆಂದರೆ ದೇವರ ಮಹಿಮೆಯನ್ನು ನಾಶಮಾಡಲು ದೇವಸ್ಥಾನದೊಳಕ್ಕೇ ಹೋಗಬೇಕಾಗಿ ಬಂದಿರೋದು.

ರಂಗಣ್ಣ ಟಪಾಲು ಕೊಟ್ಟು ಹೋದ.

* * *

ಲೋಕಲ್ ಡೆಲಿವರಿಯ ಉದ್ದ ಲಕೋಟೆಯನ್ನು ಬಿಚ್ಚಿದ. ಫುಲ್‌ಸ್ಕೇಪ್ ಕಾಗದದ ಎರಡು ಮಗ್ಗುಲಲ್ಲೂ ಮೋಡಿ ಅಕ್ಷರದಲ್ಲಿ  ಬರೆದ ಒಂದು ಪತ್ರ ಅದರೊಳಗೆ. ಮೂಲೆಯಲ್ಲಿ 'ಕ್ಷೇಮ', ಮಧ್ಯೆ 'ಶ್ರೀ ಮಂಜುನಾಥ ಪ್ರಸನ್ನ' ಎಂದು ಬರೆದ ಈ ಪತ್ರ ಯಾರದಿರಬಹುದೆಂದು ತಿರುಗಿಸಿ ನೋಡಿದರೆ ಸಹಿ ಇರಲಿಲ್ಲ. ಕುತೂಹಲದಿಂದ ಕಾಗದವನ್ನೋದಲು ಪ್ರಾರಂಭಿಸಿದ. ರೈಟರ್ ಕೃಷ್ಣಯ್ಯನ ಮೋಡಿಯಕ್ಷರ ಓದಿ ಅಭ್ಯಾಸವಿದ್ದುದರಿಂದ ಓದುವುದು ಅಷ್ಟೇನೂ ಕಷ್ಟವಾಗಲಿಲ್ಲ.

'ಊರಿನ ಭಾರಿ ಜಮೀಂದಾರರೂ, ಒಂದು ಕಾಲದಲ್ಲಿ ಶ್ರೀ ದೇವಸ್ಥಾನದ ಧರ್ಮ ದರ್ಶಿಗಳೂ, ತಮ್ಮ ಪ್ರಾಣರಕ್ಷಣೆಯ ಸ್ವರ್ಣಕಿರೀಟವನ್ನು ಮಂಜುನಾಥ ಸ್ವಾಮಿ ತಲೆಯ ಮೇಲಿರಿಸಲು ಕಾರಣಭೂತರೂ, ಭಾರತೀಪುರದ ಪ್ರಜೆಗಳನ್ನು ತೀರ್ಥ ರೂಪರಂತೆ ಕಾಪಾಡಬೇಕಾದ ಹೊಣೆ ಹೊತ್ತವರೂ ಆದ ಶ್ರೀ ಜಗನ್ನಾಥರಾಯರಲ್ಲಿ ಅವರ ಪೂಜ್ಯ ತೀರ್ಥರೂಪರ ಕಾಲದಿಂದಲೂ ಹಿತೈಷಿಯಾಗಿರುವ ಬಡವನೊಬ್ಬನ ನಮ್ರ ವಿನಂತಿಯೇನೆಂದರೆ...'

ಜಗನ್ನಾಥ ಬೇಸರದಿಂದ ಕಾಗದ ಮಡಿಸಿದ. ಹರಿಯಲು ಹೋದವನು ಹಳೆಯ ಕಾಲದ ಒಕ್ಕಣಿಕೆಯಿಂದ ಆಕರ್ಷಿತನಾಗಿ ಮುಂದಕ್ಕೆ ಓದಿದ :

'ಜಗನ್ನಾಥರಾಯರೆ ನೀವು ನಿಮ್ಮ ತೀರ್ಥರೂಪರ ಮಕ್ಕಳಿರಲಿಕ್ಕಿಲ್ಲೆಂದು ಬರೆಯಲು ಈ ಬಡಪಾಯಿಗೆ ಅತೀವ ದುಃಖವಾಗಿದೆ. ನಿಮ್ಮ ತೀರ್ಥರೂಪರು ಭಗವದ್ಭಕ್ತರು. ಅವರನ್ನು ಮದುವೆಯಾದ ನಿಮ್ಮ ಮಾತೋಶ್ರೀಯವರು ಅವರ ಜೊತೆ ಯಾವ ಸಂಬಂಧವನ್ನೂ ಹೊಂದಿರಲಿಲ್ಲ. ನಿಮ್ಮ ತೀರ್ಥರೂಪರು ಅದನ್ನೆಂತು ಸಹಿಸಿ ಬಾಳಿದರೋ ನಮಗೆ ತಿಳಿಯದು. ಅದೇನೆ ಇರಲಿ, ನೀವು ನಿಮ್ಮ ತೀರ್ಥರೂಪರ ಮಗನಾಗಿದ್ದ ಪಕ್ಷದಲ್ಲಿ ಕುಲೀನ ಬ್ರಾಹ್ಮಣ ಕುಲಕ್ಕೆ ಸೇರಿದ ನೀವು ಇಂತಹ ಹೇಯಕಾರ್ಯಕ್ಕೆ ಮುಂದಾಗುತ್ತಿರಲಿಲ್ಲವೆನ್ನುವುದಂತೂ ಖಂಡಿತ. ನೀವು ಹಾಗಾದರೆ ಯಾರ ಮಗನೆಂದು ಕೇಳುವಿರೊ ? ನೀವು ನಿಮ್ಮ ಮನೆಯಲ್ಲಿ ರೈಟರ್ ಆಗಿದ್ದ ಕೃಷ್ಣಯ್ಯನವರ ಮಗ. ಕೃಷ್ಣಯ್ಯನವರು ಅತ್ಯಂತ ಕೀಳುಜಾತಿಯ ಬ್ರಾಹ್ಮಣರಾಗಿದ್ದರೂ ಸಹ ನಿಮ್ಮ ತಾಯಿಗವರು ಕೇವಲವಾಗಿದ್ದುದು ಆಶ್ಚರ್ಯವಲ್ಲ. ಏನಕೇನ ಅದು ಕಾಮುಕ ಸ್ತ್ರೀಯೊಬ್ಬಳ ರುಚಿಯ ಪ್ರಶ್ನೆಯಾದ್ದರಿಂದ ನಮಗೆ ಅಪ್ರಸ್ತುತವಾದ ವಿಚಾರ. ಮಾಡಿದವರ ಪಾಪ ಆಡಿದವರ ಬಾಯಲ್ಲಿ ಎನ್ನುತ್ತಾರೆ. ಆದರೆ ವಿಧಿಯಿಲ್ಲದೆ ಆಡಬೇಕಾಗಿದೆ. ನಿಮ್ಮ ಮನೆಯಲ್ಲಿರುವ ಗೋಪಾಲನೂ ನಿಮ್ಮ ಮಾತೋಶ್ರೀಯವರಿಗೆ ರೈಟರ್ ಕೃಷ್ಣಯ್ಯನಿಂದ ಹುಟ್ಟಿದ ಮಗನೆಂಬುದಕ್ಕೆ ನಾನೇ ಕಣ್ಣಾರೆ ಸಾಕ್ಷಿಯಾಗಿದ್ದೇನೆ. ನೀವು ಚಿಕ್ಕವರಾಗಿದ್ದಾಗ ನಿಮ್ಮ ಮಾತೋಶ್ರೀ ರೈಟರ್ ಮತ್ತು ಅವರ ಕುಟುಂಬದ ಜೊತೆ ತೀರ್ಥಯಾತ್ರೆಯ ನೆವದಲ್ಲಿ ಊರು ಬಿಟ್ಟಿದ್ದು ಸರಿಯಷ್ಟೆ. ಆಗ ನಾನು ಒಮ್ಮೆ ಯಾವುದೋ ಕಾರ್ಯಕ್ಕಾಗಿ ಮದ್ರಾಸಿಗೆ ಹೋದಾಗ ಗರ್ಭವತಿಯಾದ ನಿಮ್ಮ ಮಾತೋಶ್ರೀಯವರನ್ನು ನೋಡಿದೆ. ಅಲ್ಲೇ ಹೆರಿಗೆ ಮಾಡಿಸಿಕೊಂಡು ಹುಟ್ಟಿದ ಮಗುವಿಗೆ ಗೋಪಾಲನೆಂದು ನಾಮಕರಣ ಮಾಡಿ ಈ ಕೂಸು ಕೃಷ್ಣಯ್ಯ ರೋಗಗ್ರಸ್ತ ಪತ್ನಿಗೆ ಯಾತ್ರೆಯ ಕಾಲದಲ್ಲಿ ಹುಟ್ಟಿದವನೆಂದು ಸಾರಿ ಅವರು ಹಿಂದಕ್ಕೆ ಬಂದರು. ರೈಟರಿನ ಕುಟುಂಬ ತನಗೆ ಮಕ್ಕಳಿಲ್ಲದ್ದರಿಂದ ಗೋಪಾಲನನ್ನು ಬಾಯಿಮುಚ್ಚಿಕೊಂಡು ಮಗನೆಂದು ಸಲಹಿ ಒಂದೆರಡು ವರ್ಷದಲ್ಲೆ ಕಣ್ಣುಮುಚ್ಚಿದ ಮೇಲಂತೂ ನಿಮ್ಮ ಮಾತೋಶ್ರೀಯವರು ನಿರಾತಂಕವಾಗಿ ಕೃಷ್ಣಯ್ಯನವರ ಜೊತೆ ತಮ್ಮ ಪಾಪ ಜೀವನವನ್ನು ಸವೆಸಿದರು.

ನಾನು ಈ ವಿಷಯಗಳನ್ನು ಎತ್ತಲು ಕಾರಣ ನಿಮ್ಮ ಕೊಳಕನ್ನು ನೀವು ಮೊದಲು ತಿದ್ದಿಕೊಂಡು ನಂತರ ಊರನ್ನು ತಿದ್ದಲು ಮುಂದಾಗಿ ಎಂದು ಹೇಳುವುದೇ ಶಿವಾಯಿ ನಿಮ್ಮ ದಿವಂಗತ ತೀರ್ಥರೂಪರ ಪುಣ್ಯ ನೆನಪಿಗೆ ಮಸಿ ಬಳೆಯುವುದಲ್ಲ. ಊರಿಗಾಗಿ ಒಬ್ಬ ವ್ಯಕ್ತಿಯನ್ನು ಬಲಿಕೊಡು ಎಂದು ಶಾಸ್ತ್ರ ಹೇಳುತ್ತದೆ. ಆದ್ದರಿಂದ ನಿಮ್ಮ ಪ್ರಭಾವವನ್ನು ಏನಕೇನ ತಪ್ಪಿಸಲು ನಾವು ಈ ವಿಷಯವನ್ನು ಬಹಿರಂಗಗೊಳಿಸ ಬೇಕಾದಲ್ಲಿ ಶ್ರೀ ಮಂಜುನಾಥಸ್ವಾಮಿ ನಮ್ಮನ್ನು ಕ್ಷಮಿಸುತ್ತಾನೆಂಬ ಧೈರ್ಯ ನಮಗಿದೆ. ಕುಲೀನರಾದ ತಂದೆಗೆ ಹುಟ್ಟಿದ ಮಗ ನೀವಾಗಿದ್ದರೆ ಹೀಗೆ ಊರು ಹಾಳು ಮಾಡುವ ಕಾರ್ಯಕ್ಕೆ ಮುಂದಾಗುತ್ತಿರಲಿಲ್ಲವೆನ್ನುವುದನ್ನು ಇನ್ನೊಮ್ಮೆ ಹೇಳಿ ತುಂಬ ದುಃಖದಿಂದ ಈ ಕಾಗದ ಮುಗಿಸುತ್ತಿದ್ದೇನೆ.

ಸದಾ ತಮ್ಮ ಹಿತೈಷಿ,
ಭಾರತೀಪುರ ನಿವಾಸಿ.'

ಜಗನ್ನಾಥ ಕೆಳಗಿಳಿದು ಅಂಗಳಕ್ಕೆ ಹೋದ. ಯಾಕೆ ತಾನಿಲ್ಲಿ ಬರುತ್ತಿದ್ದೇನೆಂದು ಅವನಿಗೆ ಗೊತ್ತಿರಲಿಲ್ಲ. ನೀಲಕಂಠಸ್ವಾಮಿ ಪೋಸ್ಟರ್ ಬರೆಸುತ್ತ ಕೂತಿದ್ದ. ರಾಯರು ಗಳ, ನಾಟ, ಹಗ್ಗಗಳ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದರು. ಜಗನ್ನಾತ ಸುಮ್ಮನೇ ನಿಂತ. ಅವನು ನಿಂತಿರುವುದನ್ನು ನೋಡಿದ ರಂಗರಾವ್,

'ಏನು ಸಾರ್. ಹುಷಾರಿಲ್ಲವ?' ಎಂದು ಹತ್ತಿರ ಬಂದು ಆತಂಕದಿಂದ ಮುಖ ನೋಡಿದ. ರಾಯರೂ ಗಾಬರಿಯಾಗಿ 'ಒಳಗೆ ಹೋಗಿ ಮಲಗಿಕೊ' ಎಂದರು. 'ಏನಿಲ್ಲ' ಎಂದು ಜಗನ್ನಾಥ ಗಂಭೀರವಾಗಿ ಅವನರನ್ನು ನೋಡಲು ಪ್ರಯತ್ನಿಸಿ ರೂಮಿಗೆ ಹೋಗಿ ಹಾಸಿಗೆಯ ಮೇಲೆ ಮಲಗಿ ಕಣ್ಣು ಮುಚ್ಚಿದ. ಟೇಬಲ್ಲಿನ ಮೇಲೆ ಕಾಗದ ಬಿದ್ದಿತ್ತು. ಯಾರಾದರೂ ಅದನ್ನೋದಿಬಿಟ್ಟಾರೆಂದು ಹರಿದು ಬುಟ್ಟಿಗೆಸೆದ.

ಎಲ್ಲಿ ಪಿಳ್ಳ? ನಾಳೆಯ ಬಗ್ಗೆ ಅವನಿಗೇನು ಹೇಳಬೇಕು? ಬಟ್ಟೆಗಳೆಲ್ಲ ಸುಟ್ಟಿವೆ. ಹೊಸ ಬಟ್ಟೆ ತರಬೇಕು. ಹೇಳಲಿಕ್ಕೆ ಮರೆತೇಬಿಟ್ಟೆ ಎಂದು ಮತ್ತೆ ಕೆಳಗಿಳಿದು ಬಂದು ರಾಯರ ಹತ್ತಿರ ಹೊಲೆಯರಿಗೆ ಬಟ್ಟೆ ಕೊಂಡು ತರಬೇಕೆಂದು ಹೇಳಿದ. ಬಿಳಿ ಅಂಗಿ, ಬಿಳಿ ಪಂಚೆ ಎಂದು ಒತ್ತಿ ಹೇಳಿದ. 'ನಿನಗೆ ಹುಷಾರಿದ್ದಂತೆ ಕಾಣಲ್ಲ. ನಿನ್ನೆಯೆಲ್ಲ ನಿದ್ದೆ ಕೆಟ್ಟಿದೀಯ, ಸ್ವಲ್ಪ ಮಲಕ್ಕೊ' ಎಂದರು ರಾಯರು.

ಜಗನ್ನಾಥ ಚಾವಡಿಯ ಮೇಲೆ ಹೋಗಿ ಕೂತ. ಕಾಲು ನಿರ್ಬಲವಾಗಿತ್ತು. ಅವನು ಕೂತಿದ್ದು ಕಂಡು ನೀಲಕಂಠಸ್ವಾಮಿಯೂ ಬಂದು ಕೂತು.

'ರಂಗರಾವ್ ಪೇಟೆಗೆ ಹೋಗಿದ್ದ. ನೋಡಿ ಮಿಸ್ಟರ್ ಜಗನ್ನಾಥ್, ಪೇಟೇಲಿ ಯಾರೂ ನಾಳೆ ಹರಿಜನ ಪ್ರವೇಶ ಆಗತ್ತೇಂತ ನಂಬಲ್ವಂತೆ. ಭೂತರಾಯ ಬಂದು ಹೊಲೇರ ಕಾಲೆಳೆದು ಬಿಡ್ತಾನಂತೆ' ಎಂದು ನೀಲಕಂಠಸ್ವಾಮಿ ನಕ್ಕು ಸಿಗರೇಟು ಹಚ್ಚಿದ. ಜಗನ್ನಾಥ ಅವನಿಂದ ಒಂದು ಸಿಗರೇಟು ತೆಗೆದುಕೊಂಡು ಹಚ್ಚಿ ಕಣ್ಣು ಮುಚ್ಚಿ ಕೂತ. ನೀಲಕಂಠಸ್ವಾಮಿ ಹೇಳಿದ್ದಕ್ಕೆ

ಉತ್ತರವಾಗಿ ನಗಲು ಪ್ರಯತ್ನಿಸಿದ; 'ಸ್ವಲ್ಪ ಕೆಲಸವಿದೆ' ಎಂದು ಎದ್ದ. 'ಹುಷಾರಿದ್ದಂಗೆ ಕಾಣಲ್ಲ, ನಿದ್ದೆ ಕೆಟ್ಟಿದೀರಿ. ಮಲಕೊಳ್ಳಿ' ಎಂದು ನೀಲಕಂಠಸ್ವಾಮಿ ಮತ್ತೆ ಪೋಸ್ಟರ್ ಬರೆಸಲು ಹೋದ. ಹೋಗುವಾಗ 'ಬದಲಾವಣೆಯೇ ಬದುಕಿನ ಧರ್ಮ – ಎಂದು ಒಂದು ದೊಡ್ಡ ಪೋಸ್ಟರ್ ಬರಸ್ತ ಇದೀನಿ' ಎಂದು ಹೇಳಿದ.

ಅಲ್ಲ – ಯಾವನೋ ವಿಷಜಂತು ಬರೆದ ಕಾಗದದಿಂದ ಹೀಗೆ ಒದ್ದಾಡ್ತ ಇದೇನಲ್ಲ – ಥತ್ ಎಂದು ತನ್ನ ಪೆದ್ದುತನವನ್ನು ಬೈದುಕೊಂಡ. ನಡುಮನೆಯಲ್ಲಿದ್ದ ಕನ್ನಡಿಯ ಎದುರು ಗೋಪಾಲ ತಲೆ ಬಾಚಿಕೊಳ್ಳುತ್ತ ನಿಂತಿದ್ದ. ಗೋಪಾಲ ತಿರುಗಿ ನೋಡಿ ಪ್ರೀತಿಯಿಂದ ನಕ್ಕ. ತನ್ನನ್ನೆ ದುರುಗುಟ್ಟಿ ನೋಡುತ್ತಿದ್ದ ಜಗನ್ನಾಥನಿಗೆ 'ಏನು ಬೇಕಾಗಿತ್ತು ಅಣ್ಣ?' ಎಂದು ಕೇಳಿದ. ಜಗನ್ನಾಥ ಬೆಚ್ಚಿದ. ನಿಜವಿದ್ದರೆ? ಅಥವಾ ಸುಳ್ಳೆ? ಸುಳ್ಳೋ ನಿಜವೋ ಹೇಳೋವ್ರು ಯಾರೂ ಇಲ್ಲ. ಪ್ರಾಯಶಃ ರಾಯರೂ ಸುಳ್ಳೂಂತ ಅಂತಾರೆ; ಚಿಕ್ಕಿ ಸುಳ್ಳೂಂತ ಅಂತಾರೆ. ಆದರೆ ಹೇಗಿ ಅವರನ್ನ ನಂಬಲಿ? ಅಥವಾ ಈ ವಿಷಜಂತು ಬರೆದು ಪತ್ರಾನ್ನ ಹೇಗೆ ನಂಬಲಿ ? ನಿಜವೋ ಸುಳ್ಳೋ ಅನ್ನೊ ಪ್ರಶ್ನೆಗೆ ಎಲ್ಲೂ ಎಂದೂ ನನಗೆ ಪರಿಹಾರವಿಲ್ಲ.

ಗೋಪಾಲನಿಗೆ ಏನೂ ಉತ್ತರ ಕೊಡದೆ ಜಗನ್ನಾಥ ಮೆಟ್ಟಿಲು ಹತ್ತಿ ಮೇಲೆ ಹೋದ. ಪಿಳ್ಳನಿಗೆ ನಾಳೆ ವಿಷಯ ಹೇಳಬೇಕು. ಏನು? ಅಲ್ಲ ಅರ್ಥಹೀನ. ಸಂಕಟವಾಗ್ತಿದೆ ಅನ್ನೋದು ನಿಜ. ಈ ತಳಮಳಾನ್ನ ಕಣ್ಣಿಟ್ಟು ನೋಡದೆ ವಿಧಿಯಿಲ್ಲಾನ್ನೊಂದು ನಿಜ. ಪರಿಹಾರವೇ ಇಲ್ಲದ ಪ್ರಶ್ನೇನ್ನ ನನ್ನ ಅಂತರಂಗದಲ್ಲಿ ಸುತ್ತಿಸೀ ಸುತ್ತಿಸೀ, ಅದರ ಸುತ್ತ ಸುತ್ತಾಡಿ, ಸುತ್ತಾಡೋ ನನ್ನನ್ನೆ ನೋಡಿಕೋತ ಸಾಯೋ ತನಕ ಬದುಕ್ತೀನಿ ಅನ್ನೋದು ನಿಜ.

ಅನುಮಾನಕ್ಕೆ ಅವಕಾಶಾನೇ ಇಲ್ದೆ ಇದ್ರೆ ತಾನು ಹೀಗೆ ಯೋಚಿಸೋದು ಸಾಧ್ಯವಿತ್ತೆ? ತಾಯಿ ಜೊತೆ ನಾನು ನಿತ್ಯ ಮಲಗ್ತ ಇದ್ದದ್ದು. ಮಿಡ್ಲ್‌ಸ್ಕೂಲಲ್ಲಿ ಓತ್ತ ಇದ್ದೆ. ನಿದ್ದೆ ಬಂದಿರ್ಲಿಲ್ಲ. ಅಮ್ಮ ಎದ್ದು ಎಲೆಯಡಿಕೆ ಹಾಕ್ಕೊಂಡರು. ಅಪ್ಪ ಸತ್ತ ಮೇಲೆ ಎಲೆಯಡಿಕೆ ಹಾಕ್ಕೊಬಾರ್ದು. ಆದರೂ ಅಮ್ಮ ಹಾಕ್ಕೊಳ್ತ ಇದ್ದರು. ಎಲೆ ಹಾಕ್ಕೊಂಡು ಎದ್ದು ಹೋದರು. ನಾನು ಎಚ್ಚರವಾಗೇ ಇದ್ದೆ. ಯಾಕೆ ಎಲೆಯಡಿಕೆ ಹಾಕ್ಕೊಂಡು ಅಮ್ಮ ಎದ್ದು ಹೋದ್ರು ಅಂತ ನಾನು ಆವಾಗ ಯೋಚನೆ ಮಾಡಿದೆನೆ? ನೆನಪಾಗಲ್ಲ. ಎಚ್ಚರವಾಗೇ ಇದ್ದೆ ಅಂತ, ಹಾಗಾದ್ರೆ ಯಾಕೆ ಈಗಲೂ ನೆನಪು? ಬಹಳ ಹೊತ್ತಿನ ಮೇಲೆ ಮತ್ತೆ ಬಂದು ಮಗ್ಗುಲಲ್ಲಿ ಮಲಗಿದರು. ಎಲ್ಲಿಗೆ ಹೋಗಿದ್ರು? ಆಫೀಸು ರೂಮಿನ ಪಕ್ಕದಲ್ಲಿದ್ದ ಕೃಷ್ಣಯ್ಯನ ಕೋಣೆಗೊ ಅಥವಾ ಬಚ್ಚಲಿಗೊ? ಕೃಷ್ಣಯ್ಯನ ಹೆಂಡತಿ ಸಾಕಮ್ಮ ಮಲಗ್ತ ಇದ್ದದ್ದು ಅಡಿಗೆ ಮನೆ ಪಕ್ಕದ ಕೋಣೇಲಿ. ಹಾಲು ತುಪ್ಪದ ವಹಿವಾಟು ಅವರದ್ದು. ಕೃಷ್ಣಯ್ಯನ ಸ್ವಂತ ಅಕ್ಕನ ಮಗಳು ಆಕೆ. ಸಣ್ಣ ಸಣ್ಣ ಕಣ್ಣು, ಸೊಟ್ಟ ಮೂತಿ. ಆಗ ಚಿಕ್ಕಿ ಮನೇಲಿದ್ದರೆ? ಹೌದು. ಮಹಡಿ ಮೇಲೆ ಇನ್ನೊಂದು ರೂಮಲ್ಲಿ, ಈಗ ಅವರು ಮಲಗೊ ರೂಮಲ್ಲೆ. ಚಿಕ್ಕಿಗೆ ಸಂಶಯಾನೇ ಹುಟ್ಟಿರಲಿಲ್ಲ ಅಂದ್ರೆ ಕಾಗದದಲ್ಲಿ ಬರ್ದದೆಲ್ಲ ಸುಳ್ಳು. ಹುಟ್ಟಿದ್ರೆ ಅವರು ಅಮ್ಮನ್ನ ಇಷ್ಟು ಗೌರವಿಸ್ತ ಇರಲಿಲ್ಲ. ರಾಯರಿಗೂ ಅಮ್ಮ ಅಂದ್ರೆ ಎಷ್ಟು ಗೌರವ? ಅಮ್ಮ ಹಾಗಾದ್ರೆ ಬಚ್ಚಲಿಗೇ ಹೋಗಿ ಬಂದದ್ದು. ಆದರೆ ಬಚ್ಚಲಿಗೆ ಹೋಗೋವಾಗ ಅಮ್ಮ ಖಂಡಿತ ಎಲೆಯಡಿಕೆ ಹಾಕ್ಕೊಳ್ತಿರಲಿಲ್ಲ. ಅಮ್ಮ ನನ್ನ ಪಕ್ಕದಲ್ಲಿ ಮತ್ತೆ ಬಂದು ಮಲಗಿದ್ದಾಗ ಬೆವರಿದ್ದರ? ಅವರ ಕೂದಲು ಕೆದರಿತ್ತ?

ತನ್ನ ಮನಸ್ಸು ಸಂಕಟದಲ್ಲಿ ಕೆದರ್ತ್ ಇದ್ದದ್ದನ್ನು ನಿಲ್ಲಿಸಲು ಪ್ರಯತ್ನಿಸುತ್ತ ಜಗನ್ನಾಥ ಕಿಟಕಿಯಿಂದ ನೋಡಿದ. ಕೆಲಸದಲ್ಲಿ ಮಗ್ನರಾದ ರಾಯರು, ನೀಲಕಂಠಸ್ವಾಮಿ, ರಂಗರಾವ್, ನಗುತ್ತ ಓಡಾಡುತ್ತಿದ್ದ ಹುಡುಗರು; ಕುಂಟುತ್ತ ರಾಯರ ಹತ್ತಿರ

ಪಿಳ್ಳ ಬಂದ. ಇಲ್ಲ. ತಳವೇ ಇರದ ಕೂಪದಲ್ಲಿ ಅನಂತಕಾಲದವರೆಗೆ ಕಂತುತ್ತಲೇ ಇರುವಂತೆ. ಇದು ನಿಜವಾದ ಸಂಕಟ ಯಾಕೇಂದ್ರೆ ಇದನ್ನ ಬಗೆಹರಿಸಿಕೊಳ್ಳೋ ಕ್ರಮಾನೆ ಇಲ್ಲ.

ಅಮ್ಮ ರೈಟರ್ ಕೃಷ್ಣಯ್ಯಾನ ಜೊತೆ ಕೂತು ಪಗಡೆಯಾಡ್ತಾ ಇದ್ದರು. ಆಗ ಚಿಕ್ಕಿ ಜೊತೆಗಿರ್ತಿದ್ರು. ಸಾಕಮ್ಮನೂ ಇರ್ತಿದ್ರು. ಪ್ರೈಮರಿ ಸ್ಕೂಲಲ್ಲಿ ಇದ್ದಾಗ್ಲೇ ಅಪ್ಪ ಸತ್ತರು. ಪಗಡೆಯಾಡೋವಾಗ ಅಪ್ಪನೂ ಇರ್ತಿದ್ರು. ಅಪ್ಪ ಆಡಿದ್ದಾಗಲೀ ಹಾಡಿದ್ದಾಗಲೀ ನೆನಪಿಲ್ಲ. ಕೃಷ್ಣಯ್ಯ ಕುಮಾರವ್ಯಾಸ ಭಾರತಾನ್ನ ಸೊಗಸಾಗ ಓದಿ ಅರ್ಥ ಹೇಳ್ತಿದ್ರು. ಅಪ್ಪನಿಗೆ ಕೃಷ್ಣಯ್ಯಾಂದ್ರೆ ತುಂಬ ನಂಬಿಕೇಂತ ಚಿಕ್ಕಿ ಹೇಳ್ತಾರೆ. ನಾನು ಮಿಡ್ಲ್ ಸ್ಕೂಲಲ್ಲಿದ್ದಾಗ ಕೃಷ್ಣಯ್ಯ,ಸಾಕಮ್ಮ, ಅಮ್ಮ ಸುಮಾರು ಎಂಟು ಹತ್ತು ತಿಂಗಳು ಇಂಡಿಯಾನ್ನೆಲ್ಲ ಸುತ್ತಿ ಬಂದ್ರು. ಆಗ ನನ್ನ ಜೊತೆ ಚಿಕ್ಕಿ ಇದ್ರು. ಹಿಂದಕ್ಕೆ ಬಂದಾಗ ಗೋಪಾಲ ಚಿಕ್ಕ ಮಗು. ಸಾಕಮ್ಮ ಅವನನ್ನ ಮುದ್ದು ಮಾಡ್ತಿದ್ರು. ಅಮ್ಮನೂ. ಆದ್ರಿಂದ ಎಲ್ಲ ಖಂಡಿತ ಸುಳ್ಳು. ಅಮ್ಮನಿಗೆ ಹಿಂದಿ ಬರ್ತಿತ್ತು. ಕಾಶೀಂದ ನನಗೆ ಶಾಲು ತಂದು ಕೊಟ್ಟರು. ಅವರು ಮದ್ರಾಸಲ್ಲಿದ್ದದ್ದು ಖಂಡಿತ ಸುಳ್ಳು. ಅಲ್ಲಿ ಬಸುರಾಗಿದ್ದನ್ನ ನೋಡಿದೆ ಅಂತ ಬರದೋನು ಕ್ಷುದ್ರಜಂತು.

ಜಗನ್ನಾಥ ದೊಡ್ಡದಾಗಿ ನಿಟ್ಟುಸಿರಿಟ್ಟು ಹಾಸಿಗೆಯಲ್ಲಿ ಕಾಲು ಚಾಚಿದ. ತುಂಬ ಸಂತೋಷವಾಗಿ ಹೊರಳಬೇಕೆನ್ನಿಸಿತು. ಅಪ್ಪನಿಗಿಂತ ಅಮ್ಮನೇ ಶ್ರೀಮಂತಳು. ಈಗಿರೋ ಆಸ್ತೀಲಿ ಮುಕ್ಕಾಲು ಪಾಲು ಅವಳದ್ದೆ. ಅಪ್ಪ ಒಳ್ಳೆ ಕೃಷಿಗಾರ. ಮೊಣಕಾಲಿನ ತನಕ ಪಂಚೆಯುಟ್ಟು ಆಳುಗಳೂ ಹತ್ತಿರ ಕೆಲಸ ಮಾಡಿಸ್ತ ಇದ್ದ ಅಪ್ಪ ಸಾಹುಕಾರ್ರೋ, ಅಥವಾ ಫಿನ್ಲೆ ಪಂಚೆಯುಟ್ಟು ಸಿಲ್ಕ್ ಜುಬ್ಬ ಹಾಕಿ ಕೋರ್ಟು ಕಛೇರಿ ಅಂತ ಅಲೀತಿದ್ದ ರೈಟರ್ ಕೃಷ್ಣಯ್ಯ ಸಾಹುಕಾರ್ರೋ ಅಂತ ಅನುಮಾನ ಆಗ್ತಿತ್ತು ಅಂತ ರಾಯರು ಹೇಳಿದ್ದು ಕೇಳಿದೇನೆ.

ಗಂಡು ಹೆಣ್ಣಿನ ಸಂಬಂಧದಲ್ಲಿ ಬೇರೆ ಬೇರೆ ಸಾಧ್ಯತೆಗಳನ್ನ ಇಂಗ್ಲೇಂಡಲ್ಲಿ ನೋಡಿರೋ ನಾನು ಹೀಗೆ ಸಂಶಯಪಡೋದೇ ಆಶ್ಚರ್ಯ. ಕೃಷ್ಣಯ್ಯ ಅಂದ್ರೆ ಉಳಿದವರಿಗೆ ಅಸೂಯೆ ಆಗಿರಬಹುದು. ಎಷ್ಟು ಸಹಜ ಅದು. ಸಂಶಯನೂ ಎಷ್ಟು ಸಹಜ.

ಜಗನ್ನಾಥ ಉಲ್ಲಾಸದಿಂದ ಎದ್ದು ಮತ್ತೆ ಕೆಳಗೆ ಬಂದ. ನೀಲಕಂಠಸ್ವಾಮಿಯ ಹತ್ತಿರ ಇನ್ನೊಂದು ಸಿಗರೇಟು ತಗೊಂಡು ಹಚ್ಚಿದ. 'ಜ ou h ಚve give ಟ ಚ ಟe ತ ಜ ime ಟsio ಟ ಣ o ಣ he moveme ಟಣ. I ಚm ve ಡಥ g ಡಚಣ e ಣ o ಥou' ಎಂದ. ನೀಲಕಂಠಸ್ವಾಮಿ ಇದರಿಂದ ಹಿಗ್ಗಿದನೆಂದು ಸಂತೋಷವಾಯ್ತು. ಹೊಲೆಯರಿಗೆ ಬಟ್ಟೆ ತರಲು ರಂಗರಾವ್‌ಗೆ ದುಡ್ಡು ಕೊಟ್ಟ. 'ಬೇಗ ಬಂದು ಬಿಡಿ' ಎಂದು ಸಿಗರೇಟ್ ಸೇದುತ್ತ, ಪೋಸ್ಟರುಗಳನ್ನು ನೋಡುತ್ತ ಅಂಗಳದಲ್ಲಿ ಅಡ್ಡಾಡಿದ.

ಇದ್ದಕ್ಕಿದ್ದಂತೆ ಸಂಕಟ ಮರುಕಳಿಸಿತು. ನೀಲಕಂಠಸ್ವಾಮಿ ಕೂದಲು ಕಿತ್ತುಕೊಳ್ಳುವುದು ನೋಡಿ ರಗಳೆಯಾಯಿತು. ಅವತ್ತು ರಾತ್ರೆ ಅಮ್ಮ ಎಲೆಯಡಿಕೆ ಹಾಕ್ಕೊಂಡು ಬಚ್ಚಲಿಗೆ ಹೋಗಲಿಲ್ಲ. ಬಾಯಲ್ಲೇನಾದ್ರೂ ಇಟ್ಟಕೊಂಡು ಅಮ್ಮ ಕಕ್ಕಸಿಗೆ ಖಂಡಿತ ಹೋಗೋವ್ರಲ್ಲ. ಇದು ತೀರ್ಥಯಾತ್ರೆಗೆಂದು ಅಮ್ಮ ಹೋಗಿದ್ದರೆ ಮೊದಲೆ ? ನಂತರವೆ ? ಯಾವ ಬಣ್ಣದ ಸೀರೆ ಉಟ್ಟಿದ್ದರು ? ಇಡೀ ಸಂದರ್ಭದ ಎಲ್ಲ ಅಂಶಗಳನ್ನೂ ನೆನಪಿನಿಂದ ಕಟ್ಟಿಕೊಳ್ಳುತ್ತ ಜಗನ್ನಾಥ ಹಲಸಿನ ಮರ ಒಂದರ ಬುಡ

ನಿಂತ.

ಅಮ್ಮ ಎದ್ದು ಕೂತುರು. ನನ್ನನ್ನು ಮುಟ್ಟಿದರು. ಯಾಕೆ ಮುಟ್ಟಿದರು? ನಿದ್ದೆ ಮಾಡ್ತಿದೀನಿ ಎಂದು ಗಟ್ಟಿಮಾಡಿಕೊಳ್ಳಲು ಮುಟ್ಟಿದರೆ? ಆಮೇಲೆ ಎಲಹಾಕ್ಕೊಂಡರು. ತಲೆದೆಸೆಯಲ್ಲೆ ಹರಿವಾಣವಿತ್ತು. ಈಗಲೂ ಉಪಯೋಗಿಸೋ ಹರಿವಾಣ. ಇಲ್ಲ-ಎದ್ದು ಹೋಗಿಬಂದ ಮೇಲೆ ಮಲಗೋಕೆ ಮುಂಚೆ ಅಮ್ಮ ಎಲೆ ಹಾಕ್ಕೊಂಡರು. ಅಮ್ಮ ಎಲೆಯಡಿಕೆ ಜಗಿಯುವಾಗ ಅವರ ಬಾಯಿವಾಸನೆ ನನಗೆ ಇಷ್ಟ. ಏಲಕ್ಕಿ, ಲವಂಗ, ಸುಣ್ಣ, ಚಿಗುರೆಲೆ ಬಾಯಲ್ಲಿ ರಸವಾಗೋ ವಾಸನೆ. ಇಲ್ಲ-ಬಚ್ಚಲಿಗೆ ಹೋಗಿ ಬಂದ ಮೇಲೆ ಅವರು ಎಲೆ ಹಾಕ್ಕೊಂಡದ್ದು. ಮುಂಚೆ ಅಲ್ಲ. ಆದರೆ ಅಮ್ಮ ಏನನ್ನಾದರೂ ಜಗೀತ ಮಲಗೋವ ಅಲ್ಲ. ಮಲಕ್ಕೊಂಡು ತಿನ್ನೋಕೆ ಅಮ್ಮ ನನಗೆ ಬಿಡ್ತಿರ್ಲಿಲ್ಲ. ಚಟ್ಟಿ ಜೇಬಲ್ಲಿ ಕೋಡುಬಳೆ ತುಂಬಿಕೊಂಡು ಮಲಕ್ಕೊಂಡು ತಿನ್ನೋದೂಂದ್ರೆ ನನಗೆ ಇಷ್ಟ. ಆದರೆ ಅಮ್ಮ ಬೈತ ಇದ್ದರು. ಕೃಷ್ಣಯ್ಯ ಮಲಗೋ ರೂಮಿಗೆ ನಿತ್ಯ ಅಮ್ಮ ಹೋಗ್ತಿದ್ದರು. ಚಿಕ್ಕಿಗೆ ಗೊತ್ತಾಗದೇ ಇದ್ದ ಹಾಗೆ ನಿತ್ಯ ಹೋಗ್ತಿದ್ದರು.

ಅಡಿಗರು ಸ್ನಾನ ಪೂಜೆ ಮುಗಿಸಿ ಹಿಂದಕ್ಕೆ ಬಂದರು. 'ಏನು ಕಾರುಬಾರು ನಡೆದಿದೆ'? ಎಂದು ಉಲ್ಲಾಸದಿಂದ ತನ್ನನ್ನು ಕೇಳಿ, ಪ್ರಾಯಶಃ ತನ್ನ ಮುಖ ನೋಡಿ ಸುಮ್ಮನಾದರು. ಸೀದ ಒಳಗೆ ಹೋದರು. ಈಗ ಶಾಲಿಗ್ರಾಮಕ್ಕೆ ಪೂಜೆ ಮಾಡ್ತಾರೆ. ನನ್ನ ಪ್ರಯತ್ನವೆಲ್ಲ ಹೀಗೆ ನೀರಲ್ಲಿ ಮಾಡಿದ ಹೋಮ ಆಗ್ತ ಹೋಗತ್ತೆ.

ಹಸಿರು ಹಾವುಗಳು ಮೈಮೇಲೆಲ್ಲ ಹರಿದಂತಾಯ್ತು. ರಾಯರನ್ನು ಕೇಳೋದು. ನೋವು ಕಡಿಮೆಯಾದೀತು. ಇದೆಲ್ಲ ಶುದ್ಧ ಸುಳ್ಳೂಂತ ಅವರು ನಗ್ತಾರೆ. ಆಗ ನನಗೆ ತುಂಬ ಖುಷಿಯಾಗತ್ತೆ. ಎಲ್ಲ ಪುಳಕ್ಕಂತ ಮನಸ್ಸಿಂದ ಜಾರಿ ಹೋಗಿಬಿಡತ್ತೆ.

ರಾಯರಿದ್ದಲ್ಲಿಗೆ ಹೋಗೊದೂಂತ ಹೆಜ್ಜೆಯಿಡಲು ಪ್ರಯತ್ನಿಸಿದ. ಆದ್ರೆ ರಾಯರ ಮನಸ್ಸಲ್ಲೂ ಅನುಮಾನ ಬಿತ್ತಿದಂತಾಗುತ್ತೆ. ಸುಳ್ಳೂಂತ ಅಂತಾರೆ. ಆದ್ರೆ ಅವ್ರೂ ನನ್ನ ಹಾಗೇ ನಿಜವಿರಬಹುದೇನೋ ಅಂತ ಯೋಚಿಸೋಕೆ ಶುರುಮಾಡ್ತಾರೆ. ಅಮ್ಮನಿಗೆ ನಾನು ಆಗ ಅನ್ಯಾಯ ಮಾಡಿದ ಹಾಗಾಗತ್ತೆ.

ಹಲಸಿನ ಮರವನ್ನು ಶೂನ್ಯ ದೃಷ್ಟಿಯಿಂದ ನೋಡುತ್ತ ನಿಂತ. ಯಾರೋ ಅಳಿರಬೇಕು ಕತ್ತಿಯಿಂದ ಮರವನ್ನು ಗಾಯ ಮಾಡಿದಲ್ಲಿ ಹಾಲು ಒಸರಿ ಅಂಟಾಗಿತ್ತು. ಮುದಿಯಾದರೂ ಹಣ್ಣು ಬಿಡತ್ತೆ. ಕೆಂಪು ತೊಳೆ. ಜೇನುತುಪ್ಪದಷ್ಟು ಸಿಹಿ. ಅಪ್ಪನಿಗೆ ಕೃಷಿಯೆಂದರೆ ಪ್ರಾಣ. ಶ್ರೀ ಕೃಷ್ಣರಾಜ ಒಡೆಯರು ಮಂಜುನಾತ ದರ್ಶನಕ್ಕೇಂತ ಬಂದಾಗ ಈ ಮರದ ಹಣ್ಣಿನ ತೊಳೆ ತಿಂದು ಖುಷಿಯಾಗಿ ಮೆಡಲ್ ಕೊಟ್ಟಿದ್ರಂತೆ. ಅಪ್ಪ ನೋಡೋಕೆ ಹೇಗಿದ್ರೂಂತ ನೆನಪಾಗೋದೋ ಇಲ್ಲ.

ಅಪ್ಪ ಎಂದು ಯೋಚಿಸ್ತೇನೆ. ಯಾರು ನನ್ ಅಪ್ಪ? ಅವರು ಸತ್ತಾಗ ಅಮ್ಮ ಅತ್ತರು, ಕೃಷ್ಣಯ್ಯ ಅತ್ತರು. ಯಾಕೆ ಅತ್ತರು? ಇಲ್ಲ -ಯಾವತ್ತೂ ನನಗೆ ಇದು ನಿಜವೊ ಸುಳ್ಳೊ ಬಗೆಹರಿಯೋದೇ ಇಲ್ಲ ಸಾಕಮ್ಮನಿಗೆ ಅಮ್ಮ ಅವಲಕ್ಕಿ ಸರ ಮಾಡಿಸಿ ಕೊಟ್ಟಿದ್ರು. ಲಾಸ್ಟ್ ಬಸ್ಸಿಗೆ ಕೃಷ್ಣಯ್ಯ ಶಿವಮೊಗ್ಗದಿಂದ ಬರೋದನ್ನೆ ಅಮ್ಮ ಕಾಯ್ತ ನಿಂತಿರ್ತಿದ್ರು. ಸಾಕ್ಕಮ್ಮನೂ ನಿಂತಿರ್ತ ಇದ್ರು.

ಜಗನ್ನಾಥನಿಗೆ ತನ್ನ ಅಂತರಂಗದ ತೀವ್ರ ತಳಮಳದಿಂದ ಇದ್ದಕ್ಕಿದಂತೆ ಹರಳಿನಷ್ಟು ಸ್ಪಷ್ಟವಾದ ಸ್ಫುಟವಾದ ಒಂದು ವಿಚಾರ ಹುಟ್ಟಿತು. ಸೀದಾ ರೂಮಿಗೆ ಹೋಗಿ ಕೂತು ನೋಟ್ ಬುಕ್ಕಲ್ಲಿ ಬರೆದ :

ಮುಖ್ಯವಾಗಿ ಇದನ್ನು ನೋಡು. ಮಂಜುನಾಥನ ಮಹಿಮೇನ್ನ ನಾಶ ಆಡಿ. ಜನರನ್ನ ತೀವ್ರ ಸಂಕಟಕ್ಕೆ ಒಳಪಡಿಸೋದರ ಮೂಲಕ ಅವರನ್ನ ತಮ್ಮ ಜೀವನಕ್ಕೆ ಜವಾಬ್ದಾರರನ್ನಾಗಿ ಮಾಡಲು ಹೊರಟ ನನ್ನಂಥವನಿಗೂ ನನ್ನ ತಾಯಿ ಹಾದರ ಮಾಡಿರಬಹುದೆಂಬ ಸಂಶಯ ಇಷ್ಟು ದಾರುಣವದ ನೋವನ್ನು ಯಾಕೆ ಉಂಟುಮಾಡಿದೆಯೆಂಬುದೇ ಅತ್ಯಮತ ಮುಖ್ಯ ಪ್ರಶ್ನೆ. ನನ್ನ ಒಳಗೂ ಈ ಸಂಶಯಕ್ಕೆ ಪರಿಹಾರವಿಲ್ಲ; ಹೊರಗೂ ಪರಿಹಾರ ಸಿಕ್ಕಲ್ಲ ಎಂದು ಗೊತ್ತಿದ್ದರೂ ನಿಜವೋ, ಸುಳ್ಳೋ ಅಂತ ಯಾಕೆ ಒದ್ದಾಡ್ತ ಇದೀನಿ? ಪಿಳ್ಳ ಕಾವೇರಿಗೆ ಕೈಯೊಡ್ಡಿದಾಗ ಇದು ಸರಿ ಎಂದೆ. ಶಾಲಿಗ್ರಾಮನ್ನ ಹೊಲೇರಿಗೆ ಒಡ್ಡಿದೆ. ಇಡೀ ಸಮಾಜಕ್ಕೆ ನಮ್ಮ ಮನೆತನಾನ್ನ ದೂರ ಮಾಡೋ ಧೈರ್ಯ ಮಾಡಿದೆ, ಆದರೂ ಕುಲ, ಜಾತಿ, ಕುಟುಂಬ ಎನ್ನೋ ಭಾವನೆಗಳು ನನಗೆ ಮುಖ್ಯವಾಗಿಯೇ ಉಳಿದಿವೆಯೆಂದು ಇದರ ಅರ್ಥ. ಇಲ್ಲವಾದಲ್ಲಿ ನಾನು ಔರಸ ಪುತ್ರನಲ್ಲ, ಗುಢೋತ್ಪನ್ನನಿರಬಹುದು ಅನ್ನೋದು ನನ್ನನ್ನು ಬಾಧಿಸ್ತ ಇರಲಿಲ್ಲ.

ಗರ್ಭಗುಡಿಯಲ್ಲಿ ಹೊಲೆಯರು ಪ್ರವೇಶಿಸಿ ಜನರ ಮೇಲೆ ಆಘಾತವಾಗಬೇಕೆಂದು ಬಯಸುವ ನಾನು ನನ್ನ ತಾಯಿಯ ಯೋನಿಯಲ್ಲಿ ಅಗ್ನಿಸಾಕ್ಷಿಯಾಗಿ ಕೈಹಿಡಿದಾತನಿಗೆ ಮಾತ್ರ ಪ್ರವೇಶದ ಅರ್ಹತೆಯಿರಬೇಕೆಂದು ಯಾಕೆ ಇಚ್ಛಿಸುತ್ತೇನೆ? ತಾಯಿ ಯೋನಿಯಲ್ಲಿ ಅನ್ಯನ ಪ್ರವೇಶದ ಸಾಧ್ಯತೆಗೇ ಇಷ್ಟು ಸಂಕಟಪಡುವ ನನಗೆ ಗರ್ಭಗುಡಿಯ ಕಾರ್ಣಿಕವನ್ನು ನಾಶಮಮಾಡುವ ಅಧಿಕಾರವಿದೇಯೇ? ಇದು ಸುಳ್ಳೋ ನಿಜವೊ ಎಂದು ಅಂತರಂಗಕ್ಕೆ ಬೆಂಕಿ ಬಿದ್ದವನಂತೆ ನಾನು ಹುಡುಕುತ್ತಿದ್ದೇನಲ್ಲ, ಇಷ್ಟೇ ತೀವ್ರವಾಗಿ ನಾನು ಕ್ರಾಂತಿಯನ್ನು ಅಪೇಕ್ಷಿಸುತ್ತೆನೆಯೆ? ಮಾರ್ಗರೆಟ್ಟಿನ ಅಂಡಿನ ಮೇಲಿನ ಕಲೆಯನ್ನು ಇನ್ನು ಯಾರೋ ಸವರುತ್ತಿದ್ದಾರೆಂದು ಊಹಿಸುತ್ತಿದ್ದಂತೆ ನರಗಳಲ್ಲಿ ಬೆಂಕಿ ಹರಿದಾಡಿದಂತೆ ನನಗಾಗುವಾಗ ಸಮಾಜದ ಜನ ಆಪ್ತವಾಗಿ ರಕ್ಷಿಸಿಕೊಂಡು ಬಂದ ಭಾವನೆಗಳನ್ನು ಗೊಂದಲಕ್ಕೊಳಪಡಿಸಲು ನನಗೆ ಅಧಿಕಾರವಿದೆಯೆ?

ಆದರೆ ಹೀಗೆ ಸ್ಪಷ್ಟವಾಗಿ ವಿಚಾರ ಮಾಡುತ್ತಿರುವಾಗಲೂ ನನಗೆ ದುಃಖವಾಗುತ್ತಿದೆಯೆಂಬುದೂ ನಿಜ. ಅನ್ನಿಸುತ್ತಿರುವುದನ್ನು ವಿಚಾರ ತಪ್ಪೆನ್ನುತ್ತದೆ. ವಿಚಾರವನ್ನು ಮೆಟ್ಟಿಭಾವನೆ ನಿಲ್ಲುತ್ತದೆ. ಈಗ ನಾನು ಇಬ್ಬಂದಿ.

ಇಷ್ಟು ಬರೆದು ಜಗನ್ನಾಥ ಎದ್ದು ನಿಂತ. ಮನಸ್ಸು ಹಗುರಾಗಿ ಯೋಚಿಸಿದ: ಚೌಡ ಕದ್ದು ತಿನ್ನುತ್ತಿದ್ದ ಬಾಳೆಹಣ್ಣು ನಿಮ್ಮ ತೋಟದ್ದಲ್ಲವೆಂದು ಗೋಗರೆದ ಹೊಲತಿಯನನು ನಾನು ಪ್ರೀತಿಸಲಾರೆ. ಈ ಹೊಲೆಯರೆಲ್ಲ ವಿದ್ಯಾವಂತರಾಗಿ, ಕೆಲವರು ಸತ್ಯಪ್ರಕಾಶರಂತಾಗಿ, ಯುವಕರು ಟೈಟ್‌ಪ್ಯಾಂಟ್ ತೊಟ್ಟು, ಕುಕ್ಕೆಯಲ್ಲಿ ಹೇಲು ಹೊರುವ ಅಗತ್ಯ ಮಾಯವಾಗಿ, ಮಂಜುನಾಥನ ಬದಲು ಎಲ್.ಎಸ್.ಡಿ.ಬಂದು- ಹೀಗೆ ಯೋಚಿಸಿದಾಗ ಎಲ್ಲ ಬದಲಾಣೆಯೂ ಅರ್ಥಹೀನವೆನಿಸುತ್ತೆ. ಮಂಜುನಾಥನ ಕರುಣೆಯ ಹಿತವಾದ ಕತ್ತಲು ಅಮ್ಮನಿಗೆ ಸಾಂತ್ವನ ಕೊಟ್ಟಿರಬಹುದು. ಅಮ್ಮನ ಹಾಡಿನ ಮಧುರವಾದ ಬಳಕುಗಳಲ್ಲಿ, ಜೀವನದ ನೋವೆಲ್ಲ ತುಂಬಿದ್ದಿರಬಹುದು. ಕಾಲದ ಬದಲಾವಣೆಯಲ್ಲೆ ಜೀವನದ ಸಾರ್ಥಕ್ಕೆ ಪಡೆಯ ಹೊರಟ ನನಗೆ ನಿತ್ಯ ಫಲಿಸುವ ಸುಖ ದುಃಖ ಕ್ಷುಲ್ಲಕವಾಗಬೇಕಾಗುತ್ತೆ. ಯೋನಿಯಲ್ಲಿ ಬೆರಳು ಹಾಕಿದಾಗಲೂ

ವಿಭೂತಿಯನ್ನು ಪಡೆದವರಂತೆ ನಾನು ಕ್ರಮೇಣ ಒಂದೇ ಉದ್ದೇಶಕ್ಕೆ ಬದ್ಧನಾದ ರಾಕ್ಷಸನಾಗಬೇಕಾಗುತ್ತೆ.

ಎಲ್ಲರ ಜೊತೆ ಊಟಕ್ಕೆ ಕೂತಾಗಲೂ ಅದೇ ಯೋಚನೆ. ಈ ತನಕ ಶ್ರೀಮಂತಿಕೆ, ಮನೆತನದ ಘನತೆ ರಕ್ಷೆಯಾಗಿತ್ತು. ಈ ವ್ಯವಸ್ಥೆಯನ್ನು ನಾಶಮಾಡಲು ಕೈಯೊಡ್ಡಿದೆ, ಆದ್ದರಿಂದ ಈಗ ಈ ಕಿವಿಗಳು ಏನನ್ನಾದರೂ ಕೇಳಲು ತಯ್ಯಾರಾಗಬೇಕು. ಅಮ್ಮ ಕೊಟ್ಟ ಶಾಲಿನೊಳಗೆ ಕಾಲು ಮುದುಡಿ ಮಲಗಿದ್ದಾಗ ರೋದನ ಕೇಳಿ ಎದ್ದೇಳಬೇಕು. ಅವಧೂತನಾಗದೆ ಕ್ರಾಂತಿ ಮಾಡೋದು ಅಸಾಧ್ಯಾಂತ ಅಡಿಗರು ಹೇಳಿದ್ದು ಕೊನೆಗೂ ನಿಜವೇನೊ!

ಊಟ ಮಾಡುವಾಗ ರಂಗರಾವ್ ಹೇಳಿದ:

‘ಬ್ರಾಹ್ಮಣರನ್ನ ಮನೇಗ ಊಟಕ್ಕೆ ಕರೆದರೆ ನಮ್ಮ ತಾಯಿ ರೇಗ್ತಾರೆ ಗೊತ್ತ? ನಮ್ಮನೇಲಿ ಊಟ ಮಾಡಿಸಿ ಯಾಕೆ ಪಾಪ ಅವರ ಜಾತಿ ಕಳೀಬೇಕೂಂತ?’

ಅಡಿಗೆ ಮನೆಯಲ್ಲಿ ಊಟಕ್ಕೆ ಕೂತ ಅಡಿಗರು ಅಂದರು:

‘ಬ್ರಾಹ್ಮಣಾರ್ಥಕ್ಕೆ ಸಂಚಕಾರವಾದೀತೂಂತ ಇಲ್ಲಿ ಊಟ ಮಾಡ್ತಿದೀನಿ ಅಷ್ಟೆ. ಹೃಷಿಕೇಶಕ್ಕೆ ಹೋಗೋವಾಗ ಸಿಕ್ಕಿದಲ್ಲೆಲ್ಲ ನಾನು ಊಟ ಮಾಡಿದೀನಿ. ಹೇಳ್ತಾರಲ್ಲ? ಃe ಚ ಖ om ಚಟ ತhi ಟ e ಥou ಚಡe i ಟ ಖ ome’.

ಎಲ್ಲರೂ ನಗುತ್ತ ಊಟ ಮಾಡಿದರು. ಕೈ ತೊಳೆದು ಹಿತ್ತಲಿಲ್ಲ ಓಡಾಡುತ್ತ ಜಗನ್ನಾಥ ತನ್ನ ವಿಚಾರವನ್ನು ಇನ್ನಷ್ಟು ಸ್ಪಷ್ಟಪಡಿಸಿಕೊಳ್ಳಲು ಪ್ರಯತ್ನಿಸಿದ. ನಾನು ಈಗ ತೊಡಗಿರುವ ಕ್ರಿಯೆಯಲ್ಲಿ ನನಗೆ ಸಂಪೂರ್ಣ ನಂಬಿಕೆಯಿದೆಯ ಅಂತ ಯೋಚಿಸ್ತ ಹೋಗೋದರಲ್ಲಿ ಅರ್ಥವಿಲ್ಲ. ಯಾಕೇಂದ್ರೆ ತೊಡಗೋದರ ಮೂಲಕವೇ, ಆಳವಾಗುತ್ತ ಹೋಗಬೇಕಾದ ನಂಬಿಕೆ ಇದು. ನಾನು ಯಾರ ಮಗ ಎನ್ನೋದೂ ಅಮುಖ್ಯವಾಗುವಂಥ ಮಾನವೀಯ ಸಮಾಜದ ಸೃಷ್ಟಿಗಾಗಿ ಈ ಎಲ್ಲ ಆತಂಕಗಳನ್ನೂ ಅನುಭವಿಸಲೇಬೇಕು. ನನ್ನ ತಾಯಿ, ನನ್ನ ಮಗ, ನನ್ನ ಹೆಂಡತಿ ಎನ್ನೊ ಭಾವನೆಗಳು ಈಗಿರೋ ಸ್ವರೂಪದಲ್ಲಿ ಇರೋ ತನಕ ಜಾತಿ ಇರುತ್ತೆ, ಆಸ್ತಿ ಇರತ್ತೆ. ಅಥವಾ ಆಸ್ತಿ, ಜಾತಿ ಇರೋ ತನಕ ಅಂಥ ಭಾವನೆ ಇರತ್ತೆ. ಈ ಭಾವನೆಗಳ ರೂಪಾನ್ನೂ ಬದಲಾಯಿಸೋ ಪ್ರಯತ್ನವೇ ಕ್ರಾಂತಿ, ಪ್ರಜ್ಞಾ ಪೂರ್ವಕವಾದ ತೊಳಲಾಟಕ್ಕಾಗಿ ಇನ್ನು ಮುಂದೆ ನಾನು ಬದ್ಧ. ಎಲ್ಲವುದನ್ನೂ ನೋಡಲು, ಎಲ್ಲವುದನ್ನೂ ಅನುಭವಿಸಲು ತೆರವಾಗಿ ನಾನು ನಿಲ್ಲುತ್ತೇನೆ.

ಒಂದು ಕಣ್ಣಿನಲ್ಲಿ ಮೃದುವಾಗಿ ವಾಸ್ತವತೇನ್ನ ಅರ್ಥಮಾಡಿಕೊಳ್ಳುತ್ತ, ಇನ್ನೊಂದು ಕಣ್ಣಿನಲ್ಲಿ ವಾಸ್ತವತೇನ್ನ ನಿಷ್ಠುರವಾಗಿ ತಿವಿಯುತ್ತ, ಬದಲಿಸಲು ಹವಣಿಸುತ್ತ, ಈಗ ಕಾಮಿಸುತ್ತ, ಮತ್ತೆ ನಿರ್ಲಿಪ್ತನಾಗುತ್ತ, ಯಾಕೆ ಜಾತಿ ಇದೆ-ನನ್ನೊಳಗೂ-ಅನ್ನೋದನ್ನ ತಿಳಿಯುತ್ತ, ಆದರೆ ಕ್ರಿಯೆ ಮೂಲಕ ಇದನ್ನ ಮೀರುತ್ತ, ತಲೆಯೆತ್ತಿ ನಡೆಯೋ ಹೊಸ ಮನುಷ್ಯನಿಗಾಗಿ ಕಾಯುತ್ತೇನೆ. ವಿಸರ್ಜಿಸಿಕೊಳ್ಳುತ್ತ ಅವಾಹಿಸಿಕೊಳ್ಳುತ್ತ, ಕ್ರಮೇಣ ಆಕಾರವಾಗುತ್ತ, ಕ್ರೌರ್ಯ ಹಿಂಸೆ ದುರಾಸೆಗಳ ದಾರೀಲಿ ನಡೆಯುತ್ತ, ಮಂಜುನಾಥನ್ನ ಕರಗಿಸುತ್ತ ಹೇಲಿನ ಕುಕ್ಕೆಯನ್ನ ತಲೆಯಿಂದ ಕೆಳಗಿಳಿಯೊ ಹಾಗೆ ಮಾಡ್ತೇನೆ. ಹೆರಳಿನಲ್ಲಿ ಹೂ

ಮುಡಿದು ನಡೆಯುವ ಕಪ್ಪು ಹೊಲತಿ ಬ್ರಾಹ್ಮಣನಿಗೆ ಬೇಕೆನ್ನಿಸಲಿ; ಒರಟು ಕೂದಲಿನ ಕಪ್ಪು ಹೊಲೆಯನ ಅಪ್ಪುಗೆ ಬ್ರಾಹ್ಮಣ ಹುಡುಗಿಗೆ ಬೇಕೆನ್ನಿಸಲಿ. ಆ ತನಕ ಭಾರತೀಯನಿಗೆ ನಿಜವಾದ ಗಾಂಭೀರ್ಯವಿಲ್ಲ. ಹೊಲೆಯರ ಭೂತ ಮೆಟ್ಟಿ ಶೂದ್ರರ ಭೂತ ನಿಂತ. ಶೂದ್ರರ ಭೂತ ಮೆಟ್ಟಿ ಮಂಜುನಾಥ ನಿಂತ. ಅವನ ತಲೆ ಮೇಲೆ ನನ್ನ ಕಿರೀಟ. ಅಡಿಗರ ಕಣ್ಣಲ್ಲಿ ಅವನ ಹೊಳಪು. ಅವನ ಆರಾಧನೆಯಲ್ಲಿ ಅಮ್ಮನ ಒದ್ದೆ ಕೂದಲು, ಅವನ ರಕ್ಷೆಯಲ್ಲಿ ಹಾದರ, ಹುಟ್ಟು, ಸಾವು, ಸಂಭೋಗ, ಮಕ್ಕಳು, ತಲೆಯೇರಿದ ಹೇಲಿನ ಕುಕ್ಕೆ, ಎಲ್ಲದನ್ನೂ ವಹಿಸಿಕೊಂಡವನಿಂದ ಮತ್ತೆ ಕಸಿದುಕೊಳ್ಳಬೇಕು. ಅವನನ್ನು ಪೈರಾಗಿ, ತಾಮ್ರವಾಗಿ, ಹಾಲು ತುಂಬಿದ ಮೊಲೆಯಾಗಿ, ತೊಡೆಯ ಬಿಸಿಯಾಗಿ ಪಡೆಯಬೇಕು. ಬಲ್ಬುಗಳಲ್ಲಿ ಹರಿಸಬೇಕು.

ಅಮ್ಮನ ಯೋನಿಯಲ್ಲಿ ನನ್ನನ್ನು ಯಾರು ಪಡೆದರೆಂಬ ಸಂಕಟವನ್ನು ಹೀಗೆ ನಾನು ಗೆಲ್ಲುತ್ತೇನೆ, ಇನ್ನೂ ನಿಜವಾಗಿರದ ಹೊಸ ಸತ್ಯವನ್ನು ಕಾಲದ ತೊಡೆಗಳ ನಡುವೆ ನಾಳೆ ಹೊಲೆಯರ ಜೊತೆ ಬಿತ್ತಿ ಕಾಯುತ್ತೇನೆ.

ಹೊಗೆಸೊಪ್ಪಿನ ಸುಣ್ಣ ಹಚ್ಚುತ್ತ ಅಂಗಳದಲ್ಲಿ ನಿಂತಿದ್ದ ರಾಯರು ಪಿಳ್ಳನನ್ನು ನೋಡ ಹೊರಟ ಜಗನ್ನಾಥನನ್ನು ತಡೆದರು :

'ನಾನು ಇವತ್ತು ಹೊಲೇರ ಹುಡುಗರನ್ನ ನೋಡಿ ಮಾತಾಡ್ತೇನೆ. ನೀನು ಹೋಗಿ ಮಲಕ್ಕೊ. ಮೈಯಲ್ಲಿ ಹುಷಾರಿರೋ ಹಾಗೆ ಕಾಣಲ್ಲ'.

'ರಾಯರ', ಜಗನ್ನಾಥ ತನ್ನ ಯೋಚನೆಯಲ್ಲಿ ತಲ್ಲೀನನಾಗಿ ಮಾತು ಹುಡುಕುತ್ತ ನಿಂತ. 'ನಾಳೆ ದೇವಾಲಯದ ಪ್ರವೇಶದಿಂದ ನಾನು ಊಹಿಸಿದ್ದೆಲ್ಲ ಆಗ್ದೇ ಹೋಗಬಹುದು. ಆದರೆ ಹೋರಾಟ ಪ್ರಾರಂಭವಾಗಿದೇಂತ ಅನ್ನಿಸತ್ತೆ. ಕಾಲ ಚಲಿಸೋಕ್ಕೆ ಶುರುವಾಗಿದೆ. ನಾನೇನು ನಿರ್ಧರಿಸಿದೀನಿ ನಿಮಗೆ ಹೇಳಬೇಕು. ಈ ಆಸ್ತಿ ವೈವಾಟನ್ನ ಕ್ರಮೇಣ ಗೋಪಾಲನಿಗೆ ವಹಿಸಿಕೊಡ್ತೀನಿ. ಇದೊಂದು ಹೊರೆ. ನನ್ನನ್ನ ಒಡೆರೆ ಅಂತ ಇವತ್ತಿಗೂ ಹೊಲೇರು ಕರೀತಾರೆ. ನಾನು ಸಂಘಟನೆ ಮಾಡಬೇಕೂಂತ ಇದೀನಿ. ರೈತರನ್ನು ಸಂಘಟಿಸಬೇಕು. ಅವರು ಭೂತರಾಯನಿಗೆ ಹೆದರಿ ಜಮೀಂದಾರ್ರು ಕೇಳಿದ ಗೇಣೀನ್ನ ಕೊಡ್ತೆ ಇದ್ದಂಗೆ ಮಾಡಬೇಕು. ಹೊಲೇರನ್ನೂ ಸಂಘಟಿಸಬೇಕು. ಯಾವದೂ ನಾಟಕೀಯವಾಗಿ ಆಗಲ್ಲ ಅಂತ ತಿಳ್ಕೊಂಡು ಕಾಯೋದನ್ನ ಕಲೀಬೇಕು.'

ರಾಯರು ಹೊಗೆಸೊಪ್ಪನ್ನು ಬಾಯಲ್ಲಿಟ್ಟು ನಸುಗನಗುತ್ತ ಹೇಳಿದರು :

'ನಿಂಗೊಂದು ವಿಷಯ ಹೇಳಬೇಕೂಂತಿದ್ದೆ. ಏನು ಮಾಡಿಯೂ ಏನೂ ಆಗ್ದೆ ಹೋಗಬಹುದು-ಈ ನೆಲದ ಗುಣಾನೇ ಅಂಥದ್ದು. ಆದ್ರೂ ನಾಳೆ ನಾನು ಹೊಲೇರ ಜೊತೆ ಮೆರವಣಿಗೇಲಿ ಬರೋದೂಂತ ನಿಶ್ಚಯ ಮಾಡಿದೀನಿ'.

ಜಗನ್ನಾಥನ ಕಣ್ಣುಗಳಲ್ಲಿ ಕೃತಜ್ಞತೆಯ ನೀರಾಡಿದ್ದು ಕಂಡು ರಾಯರು ತಮಾಷೆ ಮಾಡಿದರು :

'ಮಹರಾಯ ನೀನು ಹೇಳೋದನ್ನೆಲ್ಲ ನಾನು ಒಪ್ತೀನಿ ಅಂತ ಇದರ ಅರ್ಥವಲ್ಲ. ಆದರೆ ನೀನು ಹೀಗೆ ಸೊಂಟ ಕಟ್ಟಿ

ನಿಂತಾಗ ನಾನು ಹೆದರಿದ್ರೆ ಸಾಯೋತನಕ ನಾನು ನಾಚಿಕೋ ಬೇಕಾದೀತು. ಮಾನ ಉಳಿಸಿಕೊಳ್ಳೋ ಉಪಾಯ-ಅಷ್ಟೆ'.

ತುಂಬ ಆಯಾಸವಾಗಿತ್ತು, ಜಗನ್ನಾಥ ಮಲಗಿ ನಿದ್ರೆ ಮಾಡಿದೆ.

----

ಶ್ರೀ ಮಂಜುನಾಥ ದೇವಾಲಯದ ಮುಖ್ಯ ಪೂಜಾರಿಗಳಾದ ಸೀತಾರಾಮಯ್ಯ ಅವಸರದಲ್ಲಿ ನಡೆಯುತ್ತ, ಯಾವುದೇ ಮಂತ್ರವನ್ನು ಗೊಣಗುತ್ತ, ದೇವಸ್ಥಾನದ ಹಿಂದಿನ ಓಣಿಯಲ್ಲಿದ್ದ ತಮ್ಮ ಮನೆಗೆ ಬಂದರು. ದಾಯಾದಿಯಾದ ನಾಗರಾಜ ಜೋಯಿಸ ಈಚೆಗೆ ಹೆಚ್ಚಿಕೊಂಡಿದ್ದ: ಕೋರ್ಟಿಗೆ ಹೋಗಲೂ ತಾನು ಹಿಂಜರಿಯುವುದಿಲ್ಲೆಂದು ಹೇಳಿದ್ದನಂತೆ. ಪೂಜೆ ಮುಗಿಸಿ ಬರುತ್ತಿದ್ದಾಗ ಪ್ರಭುಗಳ ಸೋದರಳಿಯ ವೆಂಕಟರಾಯ ಕಾಮತ್ ನಿಲ್ಲಿಸಿ ಕಿವಿಯಲ್ಲಿ ಈ ವಿಷಯ ತಿಳಿಸಿದಾಗ ಸೀತಾರಾಮಯ್ಯನಿಗೆ ಗಾಬರಿಯಾಗಿತ್ತು. 'ಈವರೆಗೆ ಯಾರೂ ಯಾಕೆ ಕೋರ್ಟಿಗೆ ಹೋಗಿಲ್ಲ ಹೇಳಿ ಸೀತಾರಾಮಯ್ಯನವರೇ ? ಭೂತರಾಯನ ಹೆದರಿಕೆಯಿಂದ ಹೌದೊ ಅಲ್ಲವೊ ? ಆ ಹೆದರಿಕೆಯನ್ನ ಜಗನ್ನಾಥರಾಯರು ನಾಶ ಮಾಡಿದ ಮೇಲೆ ಜನರಿಗೆಲ್ಲಿ ಪಾಪ ಭೀತಿ ಉಳೀಲಿಕ್ಕೆ ಸಾಧ್ಯ ಹೇಳಿ ? ಜೋಯಿಸರ ಬುದ್ಧಿ ನಿಮಗೆ ಗೊತ್ತಿಲ್ಲವೊ ? ಮಗ ಬೇರೆ ಲಾಯರಲ್ಲವೊ ? 'ನಾಳೆ ಹರಿಜನ ಪ್ರವೇಶವಾಗಲಿ- ಸೀತಾರಾಮಯ್ಯನ ಪೂಜೇಲಿ ಏನು ಕಾರ್ಣಿಕ ಉಳಿದಿದೆ ನೋಡ್ತೇನಲ್ಲ. ನಾನು ಕೋರ್ಟಿಗೆ ಹೋಗೇ ಸೈ' ಎಂದು ಜೋಯಿಸರು ಅಂಗಡಿಗೆ ಬಂದಾಗ ಹೇಳಿದರು. ಒಟಾರೆ ಮಂಗನಿಗೆ ಏಣಿ ಹಾಕಿಕೊಟ್ಟ ಹಾಗಾಯ್ತು ಅಂತ ನಾನು ಮಾವನಿಗೆ ಹೇಳಿದೆ.'

ತನಗೆ ಗಾಬರಿಯಾಗಿದೆ ಎಂದು ಕಾಮತ್‌ಗೆ ಸೀತಾರಾಮಯ್ಯ ತೋರಿಸಿಕೊಂಡಿರಲಿಲ್ಲ.

'ಮನೇಲಿ ಒಂದು ದುರ್ಮರಣವಾಯ್ತು. ದೇವರು ನೋಡಿಕೋತಾನೆ' ಎಂದಷ್ಟೆ ಹೇಳಿ ಮನೆಗೆ ಬಂದಿದ್ದರು.

ಸೀತಾರಾಮಯ್ಯ ನೋಡಲು ಭರ್ಜರಿ ಮನುಷ್ಯ. ಕಿವಿಗಳಲ್ಲಿ ವಜ್ರದ ಒಂಟಿ; ಬೆನ್ನಿನ ಮೇಲೆ ಇಳಿಬಿಟ್ಟ ಅರ್ಧ ನೆರೆತ ತುಂಬು ಜುಟ್ಟು; ಕುತ್ತಿಗೆಯಲ್ಲಿ ಬಂಗಾರದಲ್ಲಿ ಕಟ್ಟಿದ ರುದ್ರಾಕ್ಷಿ; ಹಣೆಯಲ್ಲಿ ಮಂಜುನಾಥನ ಸ್ಪೆಶಲ್ ಪ್ರಸಾದವಾದ ಕಸ್ತೂರಿ ಬೆರೆಸಿದ ಕುಂಕುಮ.

ಅಪ್ಪನ ಹೆಜ್ಜೆ ಸಪ್ಪಳ ಕೇಳಿದ್ದರೆ ಒಳಮನೆಯ ಮೂಲೆಯಲ್ಲಿ ಕಿಟಕಿಗೆ ಹತ್ತಿರವಾಗಿ ಕೂತು ದೇವದಾಶ ಕಾದಂಬರಿ ಓದುತ್ತಿದ್ದ ಗಣೇಶ ಖಂಡಿತ ಪುಸ್ತಕವನ್ನು ಮುಚ್ಚಿಡುತ್ತಿದ್ದ; ಬಾಳೆಲೆ ಕೊಯ್ಯುವುದರಲ್ಲೊ ದೊನ್ನೆ ಮಾಡುವುದರಲ್ಲೊ ಮಗ್ನನಾದಂತೆ ಕಾಣಿಸಿಕೊಳ್ಳುತ್ತಿದ್ದ. ಆದರೆ ಅವನು ಕಾದಂಬರಿಯಲ್ಲಿ ಎಷ್ಟು ತಲ್ಲೀನವಾಗಿದ್ದನೆಂದರೆ ಅಪ್ಪ ಒಳಗೆ ಬಂದದ್ದು ಗೊತ್ತಾಗಲಿಲ್ಲ. ಹತ್ತಿರ ನಿಂತದ್ದು ಕಾಣಿಸಲಿಲ್ಲ; ದುರುಗುಟ್ಟಿ ನೋಡಿದ್ದು ತಿಳಿಯಲಿಲ್ಲ. ಅಪ್ಪ ಕಪಾಳಕ್ಕೆರಡು ಬಾರಿಸಿ, ತಲೆಯ ಮೇಲೆ ಜಜ್ಜಿ, ಪುಸ್ತಕವನ್ನು ಕಿತ್ತೆಸೆದು, ರಟ್ಟೆಹಿಡಿದು ಎಳೆದಾಗ ಗಣೇಶ ಬುಸುಗುಡುತ್ತ ಎದ್ದು ನಿಂತ. ಅಪ್ಪನನ್ನು ಚಚ್ಚಿ ಸಾಯಿಸಬೇಕೆಂಬ ರೋಷವನ್ನು ಉಗ್ಗಿನಿಂದಾಗಿ ಮಾತಿನಲ್ಲೂ ವ್ಯಕ್ತಮಾಡಲಾರದೆ, ದ್ವೇಷ ಕಾರುವ ಕಣ್ಣುಗಳಿಂದ ಹೊರಹಾಕಿದ. ದೇವದಾಸ

ಕಾದಂಬರಿ ತನ್ನೊಳಗೆ ಹುಟ್ಟಿಸಿದ್ದ ಮೃದುವಾದ ಭಾವನೆಯನ್ನು ಎದುರಿಗೆ ನಿಂತ ರಾಕ್ಷಸ ಹೇಗೆ ತಿಂದು ಹಾಕಿದನಲ್ಲ; ಪುಸ್ತಕದ ಲೋಕದಲ್ಲಿನ ಪಾತ್ರಗಳ ಜೊತೆ ಒಡನಾಡುತ್ತಿದ್ದ ಸ್ವಾಭಿಮಾನಿಯಾದ ತನ್ನನ್ನು ಮತ್ತೆ ಈ ಕ್ಷುದ್ರ ವಾಸ್ತವತೆಗೆ ಎಳೆದು ತಂದು ಬಿಸಾಕಿದನಲ್ಲ ಎಂದು ಅಪ್ರಯತ್ನವಾಗಿ ಕಣ್ಣಲ್ಲಿ ನೀರಾಡಿತು.

ಅಪ್ಪನ ಸಹಸ್ರನಾಮ ಪ್ರಾರಂಭವಾಯಿತು- ಯಥಾ ಪ್ರಕಾರ 'ಜೋಬದ್ರ ಮುಂಡೇದೆ' ಎನ್ನುವ ಪದಗುಚ್ಛದಿಂದ. ಕತೆ ಪುಸ್ತಕ ಓತ್ತ ಸಾಯ್ತೀಯಲ್ಲ ನಾಚಿಕೆ ಮಾನ ಮರ್ಯಾದೆ ಉಂಟ ನಿನಗೆ; ಕೂಳು ತಿಂದು ಕೊಬ್ಬಿದರೆ ಸಾಕ; ಮದುವೆಯಾದ ಮೇಲೂ ನಿನಗೆ ಯಾಕೆ ವಿವೇಕ ಬರ್ಲಿಲ್ಲ-ಬೈಗಳಗಳು ಏರಿದಂತೆ ಲಿಂಗಪೂಜೆಯಲ್ಲಿ ಬಿಲ್ವಪತ್ರೆಯನ್ನೆಸೆಯುವ ಹಾಗೆ ಆಗೊಂದು ಈಗೊಂದು ಕಪಾಳಕ್ಕೆ ಏಟು ಬೀಳುತ್ತಿತ್ತು. ಗಣೇಶನ ರೋಷ ಕೂಡ ಹಾಗೆಯೇ ಏರುತ್ತ, ಈ ಬೈಗಳ ಈ ಏಟು ಕೊನೆಗೊಳ್ಳಬೇಕಾದ ಮುಹೂರ್ತ ನಿರೀಕ್ಷಿಸುತ್ತ, ತನ್ನ ಕೈಗಳೂ ಇಕೋ ಈಗಲೋ ಇನ್ನೊಂದು ಕ್ಷಣದಲ್ಲೋ ಮೇಲಕ್ಕೇರುತ್ತಾವೆ, ಬೀಸುತ್ತಾವೆ, ಬೈಯುವಾಗ ತುಟಿಗೆ ಒತ್ತಿ ಮೇಲಕ್ಕೆ ಕೆಳಕ್ಕೆ ಚಲಿಸುವ ಅಪ್ಪನ ಅಲುಗುವ ಉಬ್ಬು ಹಲ್ಲುಗಳನ್ನು ಉದುರಿಸುತ್ತಾವೆ, ಆಗೆಲ್ಲ ಶಾಂತವಾಗುತ್ತದೆ ಎಂಬ ಹವಣಿಕೆಯಲ್ಲಿ ಕಿವಿಯ ಒಳಗೆ ಅಪ್ಪನ ಧಾರಾಕಾರವಾದ ಮಾತಿನ ಕಂಪನವನ್ನು ಮಾತ್ರ ಅನುಭವಿಸುತ್ತ, ತನ್ನ ಈ ಸ್ಥಿತಿಯನ್ನು ಬಾಗಿಲಿನಿಂದ ಇಣುಕಿ ನೋಡಿ ಹಿಂದಕ್ಕೆ ಹೋದ ತನ್ನ ಹೆಂಡತಿಯ ಉದಾಸೀನದಲ್ಲಿ ತನ್ನ ರೋಷ ಗಡಿ ಮೀರಿ ಸಫಲವಾಗುತ್ತದೆ ಎಂದು ಅಪೇಕ್ಷಿಸುತ್ತ ಇರುವಾಗ ಸುಬ್ರಾಯ ಅಡಿಗರು ಒಳಗೆ ಬಂದು, 'ಏನು ಸೀತಾರಾಮಯ್ಯನವರು ರುದ್ರಾವತಾರಿಗಳಾಗಿದ್ದಾರಲ್ಲ' ಎಂದದ್ದರಿಂದ ಅಪ್ಪನ ಕೋಪ ಇನ್ನೊಂದು ಮಗ್ಗುಲಿಗೆ ಹೊರಳಿ ಬೋಗಾರು ದುಃಖವಾಯಿತು:

'ನೋಡಿ ಅಡಿಗರೇ, ಎಷ್ಟು ದಿನಾಂತ ನಾನು ದುಡಿದು ಸಾಯಲಿ? ಮೂರು ಹೊತ್ತೂ ಈ ಘಟಿಂಗ ಏನೋ ಪೋಲಿ ಪುಸ್ತಕ ಹಿಡಕೊಂಡು ಕೂತಿರ್ತಾನೆ. ಮದುವೆಯಾದ ಮೇಲೂ ಜವಾಬ್ದಾರಿ ಬರಲಿಲ್ಲಾಂದ್ರೆ ಹೇಗೆ ಹೇಳಿ'.

ಇನ್ನು ಅಪ್ಪನ ಗೋಳಿನ ಕಥೆ ನಿರಂತರವಾಗಿ ಮುಂದುವರಿಯುತ್ತದೆ. ಇದೂ ಕೂಡ ಒಂದಲ್ಲ ಒಂದು ಕಾಲದಲ್ಲಿ ನಿಲ್ಲಲೇಬೇಕಾಗಿ ಬಂದು ಊಟಕ್ಕೆ ಹೊತ್ತಾಗಿ ಹಸಿವಾಗುತ್ತದೆ: ನನಗೆ ಮತ್ತೆ ಮಧ್ಯಾಹ್ನದ ಸ್ನಾನದ ಹೊತ್ತಾಗುತ್ತದೆ. ಬೆಳಿಗ್ಗೆ ಚಳಿಯಲ್ಲಿ ಹೊಳೆಸ್ನಾನ ಮಾಡಿದದು. ಮಧ್ಯಾಹ್ನ ಮನೇಲೆ ಬಿಸಿನೀರು ಹೊಯ್ದುಕೋಬಹುದು. ಅಪ್ಪನಿಲ್ಲದಿದ್ದರೆ ಬಾಗಿಲು ಹಾಕಿಕೋಬಹುದು; ಲಂಗೋಟಿ ಸಹ ಇಲ್ಲದಂತೆ ದುಂಡಗೆ ನಿಲ್ಲಬಹುದು; ಬೆತ್ತಲೆ ಮೈಗೆ ಬೇಕಾದಷ್ಟು ಬಿಸಿನೀರು ಹೊಯ್ದುಕೋಬಹುದು. ಗಣೇಶ ಕೆಂಡದ ಮೇಲಿಟ್ಟು ಬಾಡಿಸಿದ ಬಾಳೆಲೆಯನ್ನು ಕೊಯ್ದು ದೊನ್ನೆ ಮಾಡುತ್ತ ಕೂತ.

ಸುಬ್ರಾಯ ಅಡಿಗರು ಧ್ವನಿ ತಗ್ಗಿಸಿ ಹೇಳಿದರು:

'ನೋಡಿ ನನಗೂ ಬೆಳೆದ ಹುಡುಗ. ಮಾತು ಕೇಳಲ್ಲ. ಆದರೆ ಹೊಡೆದು ಪ್ರಯೋಜನವಿಲ್ಲ. ಹೀಗೆ ನೀವು ಹೊಡೆದರೆ ಗಣೇಶನಿಗೆ ಮತ್ತೆ ಬುದ್ಧಿಭ್ರಮಣೆಯಾದೀತು ಸೀತಾರಾಮಯ್ಯ'.

'ನಾನು ಸತ್ತ ಮೇಲೆ ಮಂಜುನಾಥನ ಪೂಜೆಗೆ ಉತ್ತರಾಧಿಕಾರಿಯಾಗಬೇಕಾದ ಇವನು ಹೀಗೆ ಮಾಡಿದರೆ ಹೇಗೆ ಹೇಳಿ.

ನಾನು ಸುಮ್ಮನೇ ಹೇಳೋದಲ್ಲ ಅಡಿಗರೆ – ನನಗೆ ಈಚೆಗೆ ಯಾಕೋ ನಿತ್ರಾಣ, ಆದರೂ ಮದುವೆ ಮುಂಜಿ ಪೌರೋಹಿತ್ಯ ಅಂತ ಎಲ್ಲ ನಾನೇ ನೋಡಿಕೋಬೇಕು. ಈ ಘಟಿಂಗನಿಗೂ ಮಡಿಯಿಲ್ಲ, ಮೈಲಿಗೆಯಿಲ್ಲ-'

ಗಣೇಶ ದೊನ್ನೆ ಕಟ್ಟಿ, ಹಿಡಿಕಡ್ಡಿಯಿಂದ ಅದರ ಎರಡು ಪಕ್ಕಗಳನ್ನೂ ಚುಚ್ಚಿ ಭದ್ರಪಡಿಸಿ ಒಂದರಮೇಲೊಂದನ್ನು ನೀಟಾಗಿ ಇಟ್ಟು ತನ್ನ ಅವಮಾನವನ್ನು ಮರೆಯಲು ಪ್ರಯತ್ನಿಸಿದ. ಅಪ್ಪ ಆಡುವ ಎಲ್ಲ ಮಾತುಗಳಲ್ಲೂ ಈ ಉತ್ತರಾಧಿಕಾರತ್ವದ ಪ್ರಸ್ತಾಪ ಬಂದೇ ಬರಬೇಕು. ಅಮ್ಮ ಸತ್ತ ಮೇಲೆ ಅವರು ಎರಡನೇ ಮದುವೆ ಮಾಡಿಕೊಳ್ಳಲು ಕಾರಣ ಮಂಜುನಾಥನ ಪೂಜಾರಿಯಾಗಬೇಕಾದ ತನ್ನನ್ನು ನೋಡಿಕೊಳ್ಳಲು ಒಂದು ಹೆಂಗಸು ಮನೆಯಲ್ಲಿ ಬೇಡವೆ ಎಂದು! ತನಗಿಂತ ಸ್ವಲ್ಪ ಹೆಚ್ಚು ವಯಸ್ಸಿನ ಚಿಕ್ಕತಾಯಿಗೆ ಹುಟ್ಟಿದ ಎರಡು ಮಕ್ಕಳಲ್ಲಿ ಒಂದಾದರೂ ಗಂಡಾಗದಿರುವುದೂ ತನ್ನ ತಪ್ಪಾಗಬೇಕೆ? ಹೋಗಲಿ ಅಂದರೆ ತನಗೆ ಮದುವೆಯಾದ್ದೂ ಈ ಚಿಕ್ಕತಾಯಿಯ ಅಣ್ಣನ ಮಗಳು. ಕಾರಣ-ಅಪ್ಪ ಸತ್ತ ಮೇಲೆ ತಾನು ಪೂಜೆಯ ಉತ್ತರಾಧಿಕಾರಿಯಾದಾಗ ಪೌರೋಹಿತ್ಯದ ನಿತ್ಯವಿಧಿಗಳನ್ನೆಲ್ಲ ಸಾಂಗವಾಗಿ ಮಡಿಯಲ್ಲಿ ನಡೆಸಿಕೊಂಡು ಹೋಗಬಲ್ಲಂತಹ ಕುಲೀನ ಹೆಣ್ಣು ನಿನಗೆ ಬೇಕೊ, ಅಥವಾ ಕೊಂಕಣಿ ಹುಡುಗಿಯಂತೆ ವಾರೆ ಬೈತಲೆ ತೆಗೆದು ಸಿನಿಮಾ ನೋಡುವ ಹುಡುಗಿ ಬೇಕೊ ಎಂಬುದೇ ಆಗಿತ್ತು.

ಭಾರತೀಪುರದಲ್ಲಿ ಗಣೇಶ ಕದ್ದು ಬೀಡಿ ಸೇದಬಲ್ಲಂತಹ ಒಂದು ಗುಪ್ತ ಜಾಗ ಸಹ ಇರಲಿಲ್ಲ. ಒಮ್ಮೆ ಒಂದು ಬೀಡಿ ಸೇದಿದ್ದನ್ನ ಕಂಡ ಆಳೊಬ್ಬ ಗುಟ್ಟಲ್ಲಿ ಯಾರಿಗೋ ಹೇಳಿದ ಮಾತು ಇಡೀ ಊರಲ್ಲಿ ಗುಲ್ಲಾಗಿ ಅಪ್ಪನ ಕಿವಿಮುಟ್ಟಿ ಬೆನ್ನಿನ ಮೇಲೆ ಬಾಸುಂಡೆಗಳೇಳುವಂಥ ಏಟಾಗಿತ್ತು.

ಮಂಜುನಾಥನ ಪೂಜೆಗೆ ಉತ್ತರಾಧಿಕಾರಿಯಾಗಬೇಕಾದವನಿಗೆ ಇಂಗ್ಲಿಷ್ ಓದೇಕೆ? ಕಥೆ ಪುಸ್ತಕ ಯಾಕೆ? ಸಿನಿಮಾ ಯಾಕೆ? ಪ್ರೀತಿಸೋ ಹೆಂಡತಿ ಯಾಕೆ? ಕಾಲರ್ ಇರೋ ಅಂಗಿ ಯಾಕೆ? ಚಪ್ಪಲಿ ಯಾಕೆ?... ಹೆಂಡತಿ ಯಮುನ ಮಲಗೋದು ಚಿಕ್ಕಮ್ಮನ ಜೊತೆ; ತಿಥಿ ವಾರ ನೋಡಿ ತಿಂಗಳಲ್ಲಿ ಕೆಲವು ದಿನ ಮಾತ್ರ ತನ್ನ ಜೊತೆ ಮಲಗೋದು. ಆದರೆ ಹೆಂಡತಿ ಎದುರು ನಿತ್ಯ ಏಟು ತಿನ್ನೋ ತನಗೆ ಅವಳು ಪಕ್ಕದಲ್ಲಿ ಬಂದು ಮಲಗಿದಾಗ ಅಲ್ಲೇ ಸ್ವಲ್ಪ ದೂರದಲ್ಲಿ ಅಪ್ಪ ಮಲಗಿದ್ದಾನೆಂಬುದೂ, ಯಾವ ಹೊತ್ತಿಗಾದರೂ ಎದ್ದು ತನ್ನನ್ನು ಗದರಿಸಬಹುದೆಂಬುದೂ ಸದಾ ಜ್ಞಾಪಕದಲ್ಲಿರುವಾಗ ಸೆಟೆದುಕೊಂಡು ಮಲಗಿದವಳಿಗೆ ಏನು ತಾನೆ ಮಾಡಬೇಕೆನ್ನಿಸೀತು? ನಟಸಾರ್ವಭೌಮ ಕಾದಂಬರಿಯ ವರ್ಣನೆಗಳೆಲ್ಲ ಮುಷ್ಟಿ ಮೈಥುನದ ಹೊತ್ತಿನ ಕಲ್ಪನಾ ಜಗತ್ತಿನ ಉಣಿಸುಗಳಾಗಿದ್ದವು – ಅಷ್ಟೆ.

ಯಮುನ ಇನ್ನಷ್ಟು ಬಾಡಿಸಿದ ಬಾಳೆಲೆಗಳನ್ನು ತಂದಿಟ್ಟು ಹೋದಳು. ಬಾಡಿಸಿದ ಬಾಳೆಲೆಯ ವಾಸನೆ ಸದಾ ತನ್ನ ಮೂಗಲ್ಲಿರುತ್ತದೆ. ಸದ್ಯ – ಅಪ್ಪನ ಕೂಗಾಟ ತನ್ನನ್ನು ಬಿಟ್ಟು ತಾನು ಓದಿದ ಅತ್ಯುತ್ತಮ ಕಾದಂಬರಿಗಳ ಧೀರೋದಾತ್ತ ನಾಯಕನನ್ನು ಹೋಲುವ ಜಗನ್ನಾಥರಾಯರ ಮೇಲೆ ತಿರುಗಿತ್ತು.

'ಯಾರಾದರೂ ಅಪ್ಪನಿಗೆ ಹುಟ್ಟಿದ ಮಗ ಇಂಥ ನೀಚ ಕೆಲಸಕ್ಕೆ ಮುಂದಾಗ್ತಾನೊ ಹೇಳಿ. ಎಲ್ಲ ಕಡೆಯೂ ಈಗ ಬ್ರಹ್ಮ ದ್ವೇಷವೇ. ಅಮಲ್ದಾರ ಬ್ರಹ್ಮದ್ವೇಷಿ, ಡೀಸಿ ಬ್ರಹ್ಮದ್ವೇಷಿ, ಮಂತ್ರಿ ಮಂಡಲ ಬ್ರಹ್ಮದ್ವೇಷಿ – ಕೊನೆಗೆ ದೇವಸ್ಥಾನದ

ಧರ್ಮದರ್ಶಿಯಾಗಿದ್ದ ಇವನೂ ಬ್ರಹ್ಮದ್ವೇಷಿಯೆಂದರೆ...’

ಗಣೇಶ ನಿರೀಕ್ಷಿಸಿದಂತೆ ಸೀತಾರಾಮಯ್ಯ ಬ್ರಾಹ್ಮಣ ಧರ್ಮದ ಬಗ್ಗೆ ಅಸ್ಖಲಿತ ಭಾಷಣ ಶುರುಮಾಡಿದರು:

‘ವೇದಾಂತ ಏನು ಹೇಳತ್ತೆ ?

ಜನ್ಮನಾ ಜಾಯತೇ ಶೂದ್ರಃ! ಕರ್ಮಣಾ ಜಾಯತೇ ದ್ವಿಜಃ!
ವೇದಪಾರಾಯಣಾತ್ ವಿಪ್ರಃ-ಅಷ್ಟೇ. ಬ್ರಹ್ಮಜ್ಞಾನೇತಿ ಬ್ರಾಹ್ಮಣಃ!

ಈ ಗಣೇಶನಿಗೆ ನಾನು ಹೇಳ್ತೀನಿ: ಅಲ್ಲವೊ ಏನೆಲ್ಲ ಪೋಲಿ ಪುಸ್ತಕ ಓತ್ತಿ ? ಈ ಕನ್ನಡದಲ್ಲಿ ಇವೆಲ್ಲ ಏನು ಬರೆದಾವೊ ? ಲಲಿತಾ ಸಹಸ್ರನಾಮದ ಒಂದೇ ಒಂದು ಶ್ಲೋಕಕ್ಕೆ ಸಮನಾದ್ದು ನಿನಗೆ ಕಂಡಿದೆಯೇನೊ ? ಯೋನಿಮುದ್ರಾ ತ್ರಿಖಂಡೇಶಿ ತ್ರಿಕೋಣಾಂತರ ದೀಪಿಕಾ! ಆಬಾಲ ಗೋಪವಿದಿತಾ – ಎಂಥ ಮಾತುಗಳು ಅಡಿಗರೇ ? ಒಟ್ಟು ಕಲಿಕಾಲ. ಇಲ್ದೆ ಇದ್ರೆ ಸತ್ಕುಲ ಪ್ರಸೂತನೊಬ್ಬನಿಗೆ – ಈ ದೇವರ ಕಿರೀಟ ಅವನ ಪ್ರಾಣಾನ್ನ ಉಳಿಸಿದ್ದು ಅನ್ನೋದು ಮರೆತು – ದನಾ ತಿನ್ನೋ ಹೊಲೇರನ್ನ ದೇವಾಲಯದೊಳಗೆ ತರಬೇಕೂಂತ ಅನ್ನಿಸ್ತಲ್ಲ – ಅದು ಆಶ್ಚರ್ಯ. ಪ್ರತಿಮಾಪ್ರತಿಷ್ಠಾಪನ ವಿಧಿ ಗೊತ್ತಿರೋ ನಿಮಗೆ ನಾನು ಹೇಳಬೇಕ ? ಜಗನ್ನಾಥ ಲಾಗ ಹಾಕಲಿ ಬೇಕಾದರೆ ಈ ದೇವಸ್ಥಾನದೊಳಗೆ ಚಾಂಡಾಲ ಪ್ರವೇಶ ಸಾಧ್ಯವೇ ಇಲ್ಲ. ಎಷ್ಟು ಲಕ್ಷ ವರ್ಷಗಳಿಂದ ಇರೋ ದೇವಸ್ಥಾನವಿದು; ಕಾಶಿ ಬಿಟ್ಟರೆ ಇಷ್ಟು ಕಾರ್ಣೀಕವಿರೋ ಪುಣ್ಯಸ್ಥಳವೇ ಇಲ್ಲ ಅಂತಾರೆ. ಶತಾಯ, ಸಹಸ್ರಾಯ, ಲಕ್ಷಾಯ, ಅಚಂದ್ರಾರ್ಕಾಯ ಅಂತ ದೇವರನ್ನ ಪ್ರತಿಷ್ಠಾಪಿಸುತ್ತಾರಲ್ಲ- ಪರಶುರಾಮ ಮಂಜುನಾಥನನ್ನೆ ಆಚಂದ್ರಾರ್ಕಾಯ ಸ್ಥಾಪಿಸಿದ್ದು. ಧ್ಯಾನವಾಸ, ದಧಿವಾಸ, ಕ್ಷೀರವಾಸ, ಜಲವಾಸಗಳೆಲ್ಲ ಆಗಿ ಪ್ರತಿಷ್ಠಾಪನೆ ಮಾಡಿರೋ ಮಂಜುನಾಥನನ್ನ ನಾಶಮಾಡಬಲ್ಲ ನರಮನುಷ್ಯ ಹುಟ್ಟಿಲ್ಲ...ಹುಟ್ಟಲಾರ.’

ಅಪ್ಪನ ಒಂದೊಂದು ಮಾತಿಗೂ ಉಬ್ಬುಹಲ್ಲು ತುಟಿಯನ್ನೊತ್ತಿ ಅಲ್ಲಾಡಿತು; ಕಿವಿಯ ವಜ್ರದೋಲೆಗಳು ಮಿರುಗಿದುವು. ಅಡಿಗರು ‘ಹೋಗಿ ಬರ್ತೇನೆ’ ಎಂದು ಎದ್ದು ಹೋದರು. ಗಣೇಶನಿಗೆ ಇದ್ದಕ್ಕಿದ್ದಂತೆ ಮತ್ತೆ ಹೆದರಿಕೆಯಾಯಿತು. ಯಾವುದೋ ದೊನ್ನೆ ಸೊಟ್ಟಗಾಯಿತೆಂದೊ, ತೇದ ಗಂಧ ಸಾಕಾಗಲಿಲ್ಲೆಂದೊ, ಆ ಪುಸ್ತಕಾನ್ನ ಯಾವ ಸೂಳೆಮಗ ನಿನಗೆ ಕೊಟ್ಟನೆಂದೊ ಮತ್ತೆ ಬೈಗಳ ಶುರವಾದರೆ ಏನುಗತಿ ?

ಬೈರಾಸ ಉಟ್ಟು ಬೈರಾಸ ಹೊದ್ದಿದ್ದ ಗಣೇಶ ಅವಸರದಲ್ಲಿ ಎದ್ದು ಸ್ನಾನದ ಮನೆಗೆ ಹೋದ. ಮಂಜುನಾಥನ್ನ ನಾಶಮಾಡೋ ನರಮನುಷ್ಯ ಹುಟ್ಟಿಲ್ಲ-ಹುಟ್ಟಲಾರ ಎಂದು ಅಪ್ಪ ಹೇಳಿದ್ದು ಅವನ ಮನಸ್ಸಿನಲ್ಲಿ ನಾಟಿತ್ತು. ಸ್ನಾನದ ಮನೆಯ ಬಾಗಿಲು ಹಾಕುವ ಧೈರ್ಯ ಮಾಡಿ ಬಟ್ಟೆಯನ್ನೆಲ್ಲ ಬಿಚ್ಚಿ ಬೆತ್ತಲೆಯಾಗಿ ಬೆಂಕಿಯೆದುರು ನಿಂತ. ರಾತ್ರೆ ಲಂಗೋಟಿ ಕಟ್ಟದೆ ಮಲಗಿದರೂ ಅಪ್ಪ ಬೈಯುತ್ತಾನೆ. ಗಿಂಡಿಯಲ್ಲಿದ್ದ ಕೊಬ್ಬರಿ ಎಣ್ಣೆಯನ್ನು ತೊಡೆ ಸಂದಿಗಳಿಗೆ ಹಚ್ಚಿಕೊಂಡು ಮೈಗೆಲ್ಲ ಬಳಿದುಕೊಳ್ಳುತ್ತ ಬೆಂಕಿಯ ಎದುರು ಸುಖಿಸಿದ.

ಹೊರಗಿನಿಂದ ಅಪ್ಪನ ಅಬ್ಬರ ಕೇಳಿಸಿತು. ಚಿಕ್ಕಮ್ಮ ಚಾಡಿ ಹೇಳಿರಬೇಕು: 'ಬಾಗಿಲು ಹಾಕ್ಕೊಂಡು ಏನು ಮಾಡ್ತಿದಿಯೊ ಶನಿ ? ಒಳ್ಳೆ ತುರುಕರ ಹಾಗೆ ಲಂಗೋಟಿಯಿಲ್ಲದೆ ಸ್ನಾನ ಮಾಡ್ತಿದಿಯೇನೊ ?'

ಹಗಲು ಲಂಗೋಟಿ ಬಿಚ್ಚುವುದು ಸಾಧ್ಯವಾಗೋದು ಕಕ್ಕಸ್ಸಿಗೆ ಹೋದಾಗ, ಬಿಟ್ಟರೆ ಸ್ನಾನ ಮಾಡುವಾಗ. ಈ ಆಪ್ತ ಘಳಿಗೆಯಲ್ಲೂ ಅಪ್ಪ ಅಬ್ಬರಿಸುತ್ತಾನೆ. ಬಚ್ಚಲಿಗೆ ಇಳಿದು ಬಿಸಿ ನೀರು ಹೊಯ್ದುಕೊಂಡ. ಎಣ್ಣೆ ಹಚ್ಚಿದ ಆಯಸ್ಥಳಗಳನ್ನು ಮೈ ಮೇಲೆ ನಿಧಾನವಾಗಿ ಹೊಯ್ದುಕೊಂಡ ಬಿಸಿನೀರು ಹುಡುಕಿದಾಗ ತುಂಬ ಸುಖವೆನ್ನಿಸಿತು. ಸುಖಪುರಷ ರಾವಣ ವರ ಬೇಡಿಕೊಂಡಿದ್ದನಂತೆ : ಸ್ನಾನದ ಹೊತ್ತಿನಲ್ಲಿ ಮೈಮೇಲೆ ತುರಿಗಜ್ಜಿಯಾಗಲಿ ಅಂತ. ಸೀಗೆಪುಡಿಯಲ್ಲಿ ಮೈಯುಜ್ಜುತ್ತ ಮಂಜುನಾಥನ ಕಿರೀಟದಿಂದ ಕದ್ದ ಬಂಗಾರದ ಉಡುದಾರವನ್ನೂ ಉಜ್ಜಿದ. ಚಿಕ್ಕಮ್ಮನ ಕಿವಿಯ ವಾಲೆ, ಇವಳ ಸರ, ಎರಡು ಹೆಣ್ಣು ಮಕ್ಕಳ ವಾಲೆಗಳು, ಅಪ್ಪನ ರುದ್ರಾಕ್ಷಿ ಪೋಣಿಸಿದ ಮಾಲಡ ಜಗನ್ನಾಥರಾಯರ ಪ್ರಾಣ ಉಳಿಸಿದ ಆ ಕಿರೀಟದ್ದೆ.

ಗಣೇಶ ತನ್ನಷ್ಟಕ್ಕೆ ನಗುತ್ತ ಚೊಂಬಿನಿಂದ ಶಬ್ದ ಮಾಡುತ್ತ ನೀರು ತುಂಬಿ ಸ್ನಾನ ಮಾಡಿದ. ಮಂಜುನಾಥನಿಗೆ ಮೈಲಿಗೆಯಾದರೆ ಊರು ಭಸ್ಮವಾಗತ್ತತೆ. ಬುರುಡೆ. ಅಪ್ಪ ಮದುವೆಗಿದುವೆ ಮಾಡಿಸಕ್ಕೆ ಹೋದಾಗ ಗರ್ಭಗುಡಿಯಲ್ಲಿ ಅವನೊಬ್ಬನೇ ಅಲ್ಲವೇ ? ಬೆಳಿಗ್ಗೆ ಬೇಗ ಎದ್ದು ಹೋಗಿ ಗರ್ಭಗುಡಿಯ ಬಾಗಿಲನ್ನು ಇಷ್ಟಬಂದರೆ ಮುಚ್ಚಿಕೊಂಡು ಪೂಜೆಯ ಸಿದ್ಧತೆಯ ನೆವದಲಲಿ ಕೂತಿರಬಹುದಲ್ಲ ? ಬಿಟ್ಟರೆ, 'ಗುಡ್ಡ'ಕ್ಕೆ ಹೋದಾಗ ಮಾತ್ರ ಹೀಗೆ ಒಬ್ಬನೇ ಇರೋದು ಸಾಧ್ಯ. ಮಂಜುನಾಥನನ್ನು ಎಷ್ಟೊಂದು ವಿವಿಧ ರೀತಿಯಲ್ಲಿ ಮೈಲಿಗೆ ಮಾಡಬಹುದೆಂಬುದರಲ್ಲಿ ಅನೇಕ ಪ್ರಯೋಗಗಳನ್ನು ಮಾಡಿ ಅಪ್ಪನ ಮೇಲಿನ ಸಿಟ್ಟನ್ನೆಲ್ಲಲ ತೀರಿಸಿಕೊಂಡಿದ್ದ ಗಣೇಶನಿಗೆ ಒಂದು ಪ್ರಸಂಗ ನೆನಪಾಗಿ ಮೈಜುಮ್ಮೆಂದಿತು. ನಂದಾದೀಪದ ಅರೆಗತ್ತಲಲ್ಲಿ ಮಂಜುನಾಥನ ಮೂಕಲಿಂಗ ಮಾತ್ರ ಕಂಡ ಘಟನೆಯದು. ಬೋಳಿಮಗ ಎಂದು ಹಿಗ್ಗುತ್ತ ಸರಸರನೆ ನೀರು ಹೊಯ್ದುಕೊಂಡು ಮೈಯೊರೆಸುತ್ತ ಬೆಂಕಿ ಎದುರು ನಿಂತ. ತೆಂಗಿನಕಾಯಿ ಕರಟಕ್ಕೆ ಹತ್ತಿಕೊಂಡ ಬೆಂಕಿ ಬಣ್ಣ ಬಣ್ಣದ ಜ್ವಾಲೆಗಳಾದ ಚೆಂದದಿಂದ ಖುಷಿಪಟ್ಟ.

'ಇನ್ನೂ ಸ್ನಾನ ಮುಗಿಲಿಲ್ಲೇನೊ' ಮತ್ತೆ ಅಪ್ಪನ ಕೂಗು, ಚಿಕ್ಕಮ್ಮ ಕಾಯಿ ತುರಿಯುವ ಶಬ್ದ, ಯಮುನ ಕೆಮ್ಮುತ್ತ ಒಗ್ಗರಣೆ ಕರಿಯುವ ವಾಸನೆ-ಅವಸರವಿಲ್ಲದೆ ಮೈಯೊರಸಿಕೊಂಡು ಗಣೇಶ ಹೊರಗೆ ಬಂದ.

ಚಿಕ್ಕಮ್ಮ ಕಾಯಿ ತುರಿಯುವುದು ನಿಲ್ಲಿಸಿ ತಾನು ಬೆತ್ತಲೆ ಸ್ನಾನ ಮಾಡುವುದುರ ಬಗ್ಗೆ ಅಪ್ಪನಿಗೆ ಇನ್ನೂ ಏನೇನೋ ಹೇಳುತ್ತಿದ್ದಿರಬೇಕು. ಅಪ್ಪನ ಕಿರುಚಾಟ ಮತ್ತೆ ಪ್ರಾರಂಭವಾಗಿತ್ತು. ಜಗನ್ನಾಥನ ಹೆಸರು ಬರೆದಿದ್ದ 'ದೇವದಾಸ' ಕಾದಂಬರಿ ನಿನ್ನ ಕೈಗೆ ಹೇಗೆ ಬಂತೆಂಬ ತನಿಖೆ ಶುರವಾಯಿತು. ಗಣೇಶ ಮಾತಾಡದೆ ಸುಮ್ಮನಿದ್ದನೆಂದು ಹೊಡೆಯಲು ಬಂದ ಅಪ್ಪ. ಅವನು ಮಡಿಯಲ್ಲಿದ್ದಾನೆಂದು ಸುಮ್ಮನಾದ. ತಾನು ಮಡಿಯಾಗಿ ಬರಲು ಸ್ನಾದ ಮನೆಗೆ ಹೋದ.

* * *

ಗಣೇಶ ರಾತ್ರೆ ಮಲಗಿ ಬಹಳ ಹೊತ್ತು ಯೋಚಿಸಿದ. ಎಲ್ಲಿ ಹೋದರೂ ಮಂಜುನಾಥ ಬಿಡ. ಅವನ ಪ್ರಸಾದದಲ್ಲಿ ತಾನು

ಮುಳುಗಿದ್ದೇನೆ. ಗರ್ಭಗುಡಿಯಲ್ಲಿ ಎಣ್ಣೆಯ ಕಮಟು ವಾಸನೆ ಬೆರೆತ ಊದುಬತ್ತಿ ಕರ್ಪೂರಗಳ ವಾಸನೆ, ಕುಂಕುಮದ ವಾಸನೆ. ಮನೆಗೆ ಬಂದರೆ ಮತ್ತದೇ ಅರ್ಚನೆಗೆಂದು ತೆಗೆದಿಟ್ಟ ಕುಂಕುಮದ ವಾಸನೆ. ನೀರಿನಲ್ಲಿ ಊದಿದ ದೇವರ ನೈವೇದ್ಯದ ಕಡಲೆ ವಾಸನೆ. ಹಸಿವಾದಾಗ್ಲೆಲ್ಲಾ ಅದನ್ನೆ ತಿನ್ನುವುದು. ಮತ್ತೆ ತೆಂಗಿನಕಾಯಿ. ನಿತ್ಯ ರಾಶಿ ರಾಶಿ ಹೋಳುಗಳು. ಹೀಗೆ ಬಿಟ್ಟಿಗೆ ಸಿಕ್ಕ ತೆಂಗಿನಕಾಯನ್ನು ಯಥೇಚ್ಛವಾಗಿ ಹಾಕಿ ಮಾಡದ ಅಡುಗೆಯಿಲ್ಲ. ಹುಳಿಯಲ್ಲಿ ಅದೇ, ಸೌತೇ ಪಲ್ಯದಲ್ಲಿ ಅದೇ, ಚಟ್ನಿಯಲ್ಲಿ ಅದೇ, ಕೋಸುಂಬರಿಯಲ್ಲಿ ಅದೇ – ಗಣೇಶನಿಗೆ ಇಡೀ ಜನ್ಮದಲ್ಲಿ ಈರುಳ್ಳಿ ಆಲೂಗಡ್ಡೆ ಹುಳಿಯನ್ನಾಗಲೀ, ಆಲೂಗೆಡ್ಡೆ ಬೋಂಡವನ್ನಾಗಲೀ, ಮಸಾಲೆ ದೋಸೆಯನ್ನಾಗಲೀ ತಿಂದು ತಿಳಿಯದು. ಇವುಗಳ ಸುಖವನ್ನೆಲ್ಲ ಅವನು ಪಡೆದದ್ದು ಅನಕೃ ಕಾದಂಬರಿಗಳನ್ನು ಓದುವಾಗ ಮಾತ್ರ.

ಜಗನ್ನಾಥರಾಯರು ಸೋತರೆ? ಹೊಲೆಯರು ಒಳಗೆ ಬರದೇ ಹೋದರೆ? ಅಪ್ಪನಿಗೆ ಜಯವಾಗುತ್ತದೆ. ಅವನು ಸತ್ತಮೇಲೆ ಮಂಜುನಾಥ ಗಾಣದ ಹಾಗೆ ನನ್ನ ಅರೆಯುತ್ತಾನೆ. ನನ್ನ ಪಾಡು ಸಾಯೋ ತನಕ ಹೀಗೇ ಇರತ್ತೆ. ಯಮುನಾಗೆ ಗಂಡು ಮಗುವಾಗಿಲ್ಲವೆಂದು ಮಲತಾಯಿ ಜರಿಯುತ್ತಲೇ ಇರುತ್ತಾಳೆ. ಅದೇ ಕಡಲೆ, ಅದೇ ಕಾಯಿ, ಅದೇ ಕುಂಕುಮ, ಅದೇ ಆರತಿ-ಹೇಸಿಗೆಯಿಂದ ಗಣೇಶ ಕಾಲು ಮಡಿಸಿ ಕಂಬಳಿಯ ಒಳಗೆ ವಾಂತಿ ಬಂದವನಂತೆ ನಡುಗಿದ.

ಬಹಳ ಗುಪ್ತವಾಗಿ ಉಸಿರು ಬಿಗಿ ಹಿಡಿದು ಲಂಗೋಟಿ ಬಿಚ್ಚಿದ. ಆ ತುದಿಯಲ್ಲಿ ಅಪ್ಪ ಮಲಗಿದ್ದಾನೆ. ನಾನೇನು ಮಾಡುತ್ತಿದ್ದೇನೆಮದು ಪ್ರಾಯಶಃ ಊಹಿಸುತ್ತಾನೆ. ಊಟದ ಮನೆಯಲ್ಲಿ ಮಲತಾಯಿ, ಯಮುನಾ, ಮಕ್ಕಳು ಮಲಗಿದ್ದಾವೆ. ನಾಳೆ ಮತ್ತೆ ಬೈಗಳ ಶುರುವಾಗತ್ತೆ; ಹೊಡೆತ ಶುರುವಾಗತ್ತೆ. ಯಮುನ, ಮಕ್ಕಳು ಮಲಗಿದ್ದಾವೆ. ನಾಳೆ ಮತ್ತೆ ಬೈಗಳ ಶುರುವಾಗತ್ತೆ; ಹೊಡೆತ ಶುರುವಾಗತ್ತೆ. ಯಮುನ ಎಲ್ಲವನ್ನೂ ನೋಡುತ್ತ ತನ್ನ ಕೆಲಸದಲ್ಲಿ ಮಗ್ನಳಾಗಿರುತ್ತಾಳೆ. ಒಳ್ಳೆ ನಕ್ಷತ್ರ ತಿಥಿ ನೋಡಿ ಪಕ್ಕದಲ್ಲಿ ಬಂದು ಮಲಗುತ್ತಾಳೆ. ಆದರೆ ಅಪ್ಪ ಅಲ್ಲೆ ಗೊರಕೆ ಹೊಡೆಯುತ್ತ ಮಲಗಿರುತ್ತಾನೆ. ದೇವದಾಸದ ಮುಂದಿನ ಪುಟಗಳನ್ನು ಓದಬೇಕೆನ್ನಿಸುವ ಉತ್ಕಟತೆಯನ್ನು ಅಪ್ಪ ಕಣ್ಣೆದುರಿಗಿಲ್ಲದ ಸಮಯ ಸಿಗುವ ತನಕ ತಡೆಹಿಡಿದುಕೊಂಡಿರುತ್ತೇನೆ. ಎಲ್ ಹೀಗೆ ನಡೆಯುತ್ತಿರುತ್ತದೆ.

'ಇಲ್ಲ ನಾನು ಬಿಡೋದಿಲ್ಲ'- ಎಂದು ಕೊಂಡು ಗಣೇಶ ಇದ್ದಕ್ಕಿದ್ದಂತೆ ಎದ್ದು ಕೂತ. ಬೋಳಿಮಗ ಬೋಳಿಮಗ ಎಂದು ಜಪಿಸಿದ. ಪಾಣಿ ಪಂಚೆಯುಟ್ಟು ಕಂಬಳಿ ಹೊದ್ದು ನಿಂತ. ಹೊರಗೆ ಚಳಿ. ಗರ್ಭಗುಡಿಯ ಬೀಗದ ಕೈ ಅಪ್ಪನ ತಲೆದೆಸೆಯಲ್ಲಿದೆ. ದಿಂಬಿನ ಕೆಳಗೋ? ಹೊರಗೋ? ಪತ್ತೆಯಾಗಿ ಕೊಂದರೆ ಕೊಲ್ಲಲಿ. ಮೆತ್ತಗೆ ಬಳಚುತ್ತ ಹುಡುಕಿದ. ದೇವರ ದಯ-ಬೀಗದ ಕೈ ತಲೆದೆಸೆಯಲ್ಲೆ ಇತ್ತು, ದಿಂಬಿನಡಿ ಇರಲಿಲ್ಲ. ತಡವರಿಸುತ್ತ ನಡೆದು ಅಡಿಗೆ ಮನೆಗೆ ಹೋದ. ನಿದ್ದೆ ಬರದ ಶನಿ ಚಿಕ್ಕಮ್ಮ 'ಏನು' ಎಂದರೆ, 'ನೀರು ಕುಡೀಬೇಕು' ಎನ್ನುವುದೆಂದು ಕೊಂಡ. ಸುಮ್ಮನೇ ಯಾಕೆ ಅನುಮಾನವಾಗಬೇಕೆಂದು ಪಾತ್ರೆಯಿಮದ ನೀರು ತೆಗೆದು ಕುಡಿದ. ಒರಳು ಕಲ್ಲಿನ ಬಳಿ ಇದ್ದ ಹಾರೆಗೋಲನ್ನು ಸದ್ದಾಗದಂತೆ ಎತ್ತಿಕೊಂಡ. ಹಿತ್ತಲಿನ ಬಾಗಿಲು ತೆರೆದ. ದರಿದ್ರ ಬಾಗಿಲು -ಡರ್ರೋ ಎಂದು ಶಬ್ದ ಮಾಡಿತು. ಅಪ್ಪ ಅರ್ಧ ನಿದ್ರೆಯಲ್ಲೆ ಶಾಪ ಹಾಕಿದ್ದು ಕೇಳಿಸಿತು. 'ದರಿದ್ರ ಶನಿ' ಎಂದಿರಬೇಕು. ತಾನು ಕಕ್ಕಸಿಗೆ ಹೋಗುತ್ತಿದ್ದೇನೆಂದು ತಿಳಿಯಲಿ ಎಂದು ಗಣೇಶ ಉಪಾಯ ಮಾಡಿದ. ಸದ್ದಾಗುವಂತೆ ಚೊಂಬನ್ನು ಹಂಡಗೆ ಅದ್ದಿದ. ಸದ್ದಾಗುವಂತೆ ಬಕೀಟಿಗೆ ನೀರುನ್ನು ಹೊಯ್ದು ತಾನು ಕಕ್ಕಸ್ಸಿಗೆ ಹೋಗುತ್ತಿರುವುದೆಂದು ಅಪ್ಪನಿಗೆ ಖಾತ್ರಿಯಾಗಲೆಂದು ಸದ್ದಾಗುವಂತೆ ಬಕೀಟನ್ನೂ ಎತ್ತಿದ. ಹಿತ್ತಲಿನ ಬಾಗಿಲನ್ನೂ

ಹಾಕಿ ಹಾರೆಗೋಲು ಹಿಡಿದು ದೇವಸ್ಥಾನಕ್ಕೆ ನಡೆದ.

ದೇವಸ್ಥಾನದ ಪಾಗಾರದ ಸುತ್ತ ಇನ್ನೂ ಎಚ್ಚರಾಗಿದ್ದ ಭಿಕ್ಷುಕರು. ಈ ಅಪರಾತ್ರಿಯಲ್ಲಿ ಮಾರನೇ ದಿನದ ರಥೋತ್ಸವಕ್ಕೆಂದು ಸ್ಪೆಶಲ್ ಬಸ್ಸುಗಳಲ್ಲಿ ಬಂದಿಳಿಯುತ್ತಿದ್ದ ಯಾತ್ರಿಕರನ್ನು ಕಂಡು ಎಂಥ ಮೂರ್ಖರು ಎನ್ನಿಸಿತು. ಕಂಬಳಿ ಹೊದ್ದು ದೇವಸ್ಥಾನದೊಳಕ್ಕೆ ಹೋದರೆ ಯಾರಿಗಾದರೂ ಅನುಮಾನವಾದೀತೆಂದು ಮರದ ಕೆಳಗೆ ಕೂತಿದ್ದ ಭಿಕ್ಷುಕನೊಬ್ಬನಿಗೆ ಕಂಬಳಿಯನ್ನು ಎಸೆದು ಗಣೇಶ ನಡೆದ. ಪೂಜಾರಿಗಳ ಮಗ ತಾನಾದ್ದರಿಂದ ಪರಿಚಯದವರು ಏನೋ ಕೆಲಸವಿರಬೇಕೆಂದುಕೊಳ್ಳುತ್ತಾರೆ. ಯಾಕೆ ಹಾರೆಗೋಲೆಂದು ಕೇಳಿದರೆ ಹಣತೆಗಳನ್ನು ಹಚ್ಚಿಡುವ ಕಂಬಗಳನ್ನು ಹೂಳಲು ಬೇಕಾಗಿತ್ತು ಎಂದರಾಯಿತು.

ಗಣೇಶ ದೇವಸ್ಥಾನದ ದೊಡ್ಡ ಬಾಗಿಲನ್ನು ತೆಗೆದು ಒಳಗೆ ಹೋಗಿ ಬಾಗಿಲು ಹಾಕಿಕೊಂಡ. ಯಾರೂ ಇಲ್ಲ. ಕತ್ತಲು, ನಿಶ್ಯಬ್ದ. ಬೀಗ ತೆಗೆದು ಗರ್ಭಗುಡಿಯ ಒಳಗೆ ಹೋದ. ಬಾಗಿಲು ಹಾಕಿಕೊಂಡು ಅಗಳಿ ಹಾಕಿದೆ. ಉರಿಯುತ್ತಿರುವ ಎರಡು ನಂದಾದೀಪ. ಪುಟ್ಟ ಮಂಜುನಾಥ ಲಿಂಗದ ಮೇಲೆ ದೊಡ್ಡ ಮುಖವಾಡ – ಸೌಮ್ಯವಾಗಿ ನಗುವಂತಿದ್ದ ಮುಖವಾಡ. ತಲೆಯ ಮೇಲೆ ಬಂಗಾರದ ಕಿರೀಟ. ಉಪನಯನವಾದ ದಿನದಿಂದ ತಾನು ಕಳೆದಿದ್ದ ಹೆಚ್ಚು ಕಾಲವೆಲ್ಲ ಇಲ್ಲೇ. ಎಲ್ಲ ಎಷ್ಟು ಸುಲಭ ಎನ್ನಿಸಿತು.

ಆಚಂದ್ರಾರ್ಕಾಯವಂತೆ; ಹದಿನೆಂಟು ಅಡಿ ಆಳದಲ್ಲಿ ಭೂಪ್ರಸ್ತಾರ ಚಕ್ರವಂತೆ. ಹೊಂಡದಲ್ಲಿ ನವರತ್ನಗಳನ್ನೂ ನಾಣ್ಯಗಳನ್ನೂ ತುಂಬಿರುತ್ತಾರಂತೆ. ಅಷ್ಟದಿಗ್ಬಂಧನ ಮಾಡಿರುತ್ತಾರಂತೆ. ಅಪ್ಪನ ಪುರಾಣ, ಎಲ್ಲ ನಾಶವಾಗೇಕು. ಬೇರು ಸಹಿತ. ಇಲ್ಲದಿದ್ದರೆ ನಾನು ನಾಶವಾಗುತ್ತೇನೆ. ಅನ್ಯಥಾ ಮಾರ್ಗವಿಲ್ಲ. ಜಗನ್ನಾಥರಾಯರು ಹೊಲೆಯರನ್ನು ಒಳಗೆ ಕರೆದುಕೊಂಡು ಬಂದಾಗ ನಾನು ಕೂಗಿ ಹೇಳುತ್ತೇನೆ: ಕೇಳಿ, ಎಲ್ಲ ನಾಶವಾಯಿತು. ಇನ್ನು ನಾವೆಲ್ಲ ಸ್ವತಂತ್ರರು.

ಹಾರೆಗೋಲಿನಿಂದ ಲಿಂಗದ ಸುತ್ತಲೂ ಅಗೆದ. ಮೈಬೆವರಿತು. ನಂದಾದೀಪವನ್ನು ದೊಡ್ಡದು ಮಾಡಿದ. ಲಿಂಗದ ಬುಡದಲ್ಲಿ ಅದಷ್ಟು ಜಾಗ ಬಿರುಕು ಬಿಟ್ಟಿದೆಯೆಂದು ಗೊತ್ತಿದ್ದದ್ದು ತನಗೆ ಮತ್ತು ಅಪ್ಪನಿಗೆ. ಆದರೆ ನಾಗರಾಜ ಜೋಯಿಸರಿಗೂ ಹೇಗೋ ಗೊತ್ತಾಗಿತ್ತು. ಇಲ್ಲೇ ಇಲ್ಲ ಎಂದು ಅಪ್ಪ ಸಾಧಿಸಿದ್ದ.

ಹಾರೆಗೋಲಿನ ಶಬ್ದ ಎದೆಯ ಮೇಲೆ ಕುಟ್ಟಿದಂತೆ ಭಾಸವಾಯ್ತು. ಅಪ್ಪ ಎದ್ದು ಬಂದು ನೋಡಿದರೆ ಈಗ ಇಲ್ಲೇ ನಾನು ಸಾಯುತ್ತೇನೆ ಅಥವಾ ಅವನನ್ನು ಸಾಯಿಸುತ್ತೇನೆ. ಹಾರೆಗೋಲಿನ ಹೊಡೆತಕ್ಕೆ ಲಿಂಗ ಮುಕ್ಕಾಯ್ತು. ಇನ್ನೇನು ? ಯಾರೇ ಬರಲಿ, ಯಾರೇ ನೋಡಲಿ ಪರವಾಗಿಲ್ಲೆಂದು ಹಾರೆಗೋಲಿಂದ ಲಿಂಗದ ಸುತ್ತ ಅಗೆಯುತ್ತ ಹೋದ.

ಕಾಲಿನ ಮೆಲೆ ಇಲಿಯೊಂದು ಹರಿದು ಹೆದರಿಕೆಯಾಯಿತು. ಅದನ್ನು ಕೊಲ್ಲಲೆಂದು ಹುಡುಕಿದರೆ ಅಭಿಷೇಕದ ನೀರು ಹೋಗುವ ತೂತಿನಿಂದ ಅದು ಮಾಯಾವಾಗಿತ್ತು. ಸಾಯಲಿ, ಸಾಯಲಿ, ಎನ್ನುತ್ತ ಗಣೇಶ ಮೈಮೇಲೆ ಆವೇಶ ಬಂದವನಂತೆ ಅಗೆದ. ಲಿಂಗ ಪೀಠದಿಂದ ಹೊರಗೆ ಬಂತು. ಅಪ್ಪ ಹರವಿದ್ದ ಮಡಿಯಲ್ಲಿ ಅದನ್ನು ಸುತ್ತಿ ಎತ್ತಿಕೊಂಡ. ಅಷ್ಟೇನೂ

ಭಾರವಿಲ್ಲದಿದ್ದರಿಂದ ಹಾರೆಗೋಲಿನ ಸಮೇತ ಹೊರಗೆ ಬಂದು ಗರ್ಭಗುಡಿಯ ಬಾಗಿಲು ಹಾಕಿ ಸೀದ ಹೊಳೆಗೆ ಹೋದ. ಹೊಳೆ ದಂಡೆಯ ಮೇಲೂ ಜನ; ಆದರೆ ಯಾರೂ ತನ್ನ ಗುರ್ತ ಹಿಡಿಯಲಿಲ್ಲ. ಪಾಪನಾಶಿನಿ ಹೊಂಡದಲ್ಲಿ ಲಿಂಗವನ್ನು ಹಾಕಿ ಅಪ್ಪನ ಮಡಿವಸ್ತ್ರವನ್ನೂ ಅಲ್ಲೇ ಎಸೆದು ಹಿಂದಕ್ಕೆ ನಡೆದ.

ಮೈ ಬೆವರಿತ್ತು. ಹಿತ್ತಲಿಂದ ಮನೆಯನ್ನು ಪ್ರವೇಶಿಸುವ ತನಕ ಗಣೇಶನಿಗೆ ಮೈಯಲ್ಲಿ ಪ್ರಜ್ಞೆಯಿರಲಿಲ್ಲ. ಹಿತ್ತಲು ಬಾಗಿಲನ್ನು ನೂಕಿ ಒಳಗೆ ಹೋಗಬೇಕೆಂದು ಹೆಜ್ಜೆಯಿಡುವಷ್ಟರಲ್ಲೆ ಎದುರೊಂದು ವ್ಯಕ್ತಿ ನಿಂತಿದೆಯೆಂದು ಕತ್ತಲಲ್ಲಿ ಅನ್ನಿಸಿ ಎದೆ ಧಸಕ್ಕೆಂದಿತು.

'ಎಲ್ಲಿ ಹೋಗಿದ್ಯೋ ಇಷ್ಟು ಹೊತ್ತು ದರಿದ್ರದ ಶನಿ?' ಎಂದು ಅಪ್ಪ ಬೀಸಿದ ಕೈ ಉರಿಯುತ್ತಿದ್ದ ತನ್ನ ಮುಖದ ಮೇಲೆ ಬಿದ್ದು ತಲೆ ತಿರುಗಿತು. ಉಚ್ಚೆಗೆಂದು ಎದ್ದ ಅಪ್ಪ ಬಹಳ ಹೊತ್ತಿನಿಂದ ತಾನಿಲ್ಲದಿರುವುದನ್ನು ಪತ್ತೆ ಮಾಡಿರಬೇಕು. ಗಣೇಶನಿಗೆ ತಾನೇನು ಮಾಡುತ್ತಿದ್ದೇನೆಂದು ಹೊಳೆಯಲಿಲ್ಲ. ಹಾರೆಗೋಲನ್ನು ಎತ್ತಿ ಎಸೆದ. ಅಪ್ಪನ ದೇಹದ ಯಾವ ಭಾಗದ ಮೇಲೆ ಬಿತ್ತೊ! ಅಯ್ಯೋ ಎಂದು ಅವರು ಕಿರುಚಿಕೊಂಡದ್ದು ಕೇಳಿ ಗಣೇಶ ಓಡಿದ. ಎಲ್ಲಿಗೆ ಹೋಗುತ್ತಿದ್ದೇನೆಂದು ತಿಳಿಯದೆ, ಜಗನ್ನಾಥರಾಯರ ಮನೆಯು ಬಹಳ ದೂರವೆನ್ನಿಸಿದ್ದರಿಂದ ಸೀದಾ ದೇವಸ್ಥಾನಕ್ಕೆ ಓಡಿಹೋಗಿ ಗರ್ಭಗುಡಿ ಹೊಕ್ಕು ಬಾಗಿಲನ್ನು ಭದ್ರಪಡಿಸಿ ನೆಲದ ಮೇಲೆ ಕುಸಿದ. ತನ್ನ ಎದೆ ಹೊಡೆದುಕೊಳ್ಳುವುದು ಕೇಳಿಸುವಂಥ ನಿಶ್ಶಬ್ದ. ಅಪ್ಪ ತನ್ನನ್ನು ಹಿಂಬಾಲಿಸಿರಲಿಲ್ಲ. ಪ್ರಾಯಶಃ ಸತ್ತಿರಲೂಬಹುದು. 'ಅಮ್ಮ' ಎಂದು ದೀರ್ಘ ನಿಟ್ಟುಸಿರೆಳೆದು ಕಣ್ಣು ಮುಚ್ಚಿ ಕಾಲು ಚಾಚಿದ. ನಾಳೆ ಜಗನ್ನಾಥರಾಯರು ಹೊಲೆಯರ ಜೊತೆ ಬರುವ ತನಕ ಇಲ್ಲೆ ಅಡಗಿರುತ್ತೇನೆ ಎಂದು ಬಾಯಿಂದ ಉಸಿರಾಡುತ್ತ ಕಲ್ಲಿನ ನೆಲದ ಮೇಲೆ ಮಲಗಿದ.

----

ಜಾತ್ರೆಯ ಮಾರನೇ ದಿನ ಮಧ್ಯಾಹ್ನ ಜಗನ್ನಾಥ 'ಜಾಗೃತಿ' ಪತ್ರಿಕೆಯ ವಿಶೇಷಾಂಕವನ್ನು ನೋಡುತ್ತ ಕೂತಿದ್ದ :

ವಿಫಲವಾದ ಕ್ರಾಂತಿ.
ಆದರೂ ಧೃಡವಾಗಿ ಉಳಿದ ಜಗನ್ನಾಥರ ಸಂಕಲ್ಪ ಶಕ್ತಿ.

ಮುಂದೆ ಓದುವ ವ್ಯವಧಾನವಿರಲಿಲ್ಲ. ಮನೆಯನ್ನು ಮುತ್ತಿಗೆ ಹಾಕಿದ ಜನ ಕೂಗುತ್ತಲೇ ಇದ್ದರು. ಪೋಲೀಸರಿಗೂ ತಳ್ಳಿ ತಡೆದು ಸೀಟಿ ಊದಿ ಸುಸ್ತಾಗಿರಬೇಕು. ಎಷ್ಟು ಅಸಂಬದ್ಧವಾದ ಘೋಷಣೆಗಳು! 'ಗಣೇಶಭಟ್ಟರಿಗೆ ಜಯವಾಗಲಿ!' 'ನಿರೀಶ್ವರವಾದಿಗೆ ಧಿಕ್ಕಾರ'. ಭಜನೆ ಬೇರೆ –

ಜಯ ಮಂಜುನಾಥ! ಜಯ ಭೂತರಾಯ!
ಜಯ ಗಣೇಶಭಟ್ಟ! ಜಯ ದೇವ ದೇವ!

ಜಗನ್ನಾಥ ಕಿಟಕಿಯಿಂದ ನೋಡಿದ. ಹೊಸ ಮುಖಗಳೇ ಹೆಚ್ಚು. ತಮಾಷೆಯೆಂದರೆ ನಿನ್ನೆ ತಾವು ಉಪಯೋಗಿಸಿದ್ದ ಪೋಸ್ಟರುಗಳನ್ನೆ ಬದಲಾಯಿಸಿ ಬರೆದು ಕೆಲವು ತರುಣರು ಹಿಡಿದು ನಿಂತಿದ್ದರು : 'ದೇವರ ಪಾವಿತ್ರ್ಯ ಕಾಪಾಡಿದ ಗಣೇಶ ಭಟ್ಟರನ್ನು ಹೊರಗೆ ಬಿಡಿ.' ನಗು ಬಂತು. ಪಾಪ – ಅನಂತಕೃಷ್ಣರಿಗೆ ಮಾತಾಡಿ ಮಾತಾಡಿ ಗಂಟಲು ಕಟ್ಟಿತ್ತು. ಈಗ ಶ್ರೀಪತಿರಾಯ ರೊಬ್ಬರೇ ಜನರನ್ನು ಸಮಾಧಾನಪಡಿಸಲು ಹೆಣಗುತ್ತಿದ್ದಾರೆ. ತಾನು ಕೆಳಗಿಳಿದು ಹೋಗುವುದೇ ಸರಿಯೆಂದು ಹೊರಡುತ್ತಿದ್ದಂತೆ ನೀಲಕಂಠಸ್ವಾಮಿ ಆತುರದಿಂದ ಬಂದ:

'ಗಣೇಶನ್ನ ಮನೆಗೆ ಕಳಿಸೋದೇ ಸರಿ ಅನ್ನಿಸತ್ತೆ'.

ನೀಲಕಂಠಸ್ವಾಮಿ ಕೂದಲು ಕಿತ್ತುಕೊಳ್ಳುವುದನ್ನು ನೋಡಿ ಕಷ್ಟವಾಗಿ 'ಕೂತುಕೊಳ್ಳಿ' ಎಂದು ಜಗನ್ನಾಥ ಒತ್ತಾಯ ಮಾಡಿದ. ಅವನು ಕೂತ ಮೇಲೆ ಸಮಾಧಾನದಿಂದ ಹೇಳಿದ :

'ಅದು ಸಾಧ್ಯವೇ ಇಲ್ಲ'.

'ಪ್ರಭು ಏನೋ ಮಸಲತ್ತು ಮಾಡ್ತಿದಾನಂತೆ ಗೊತ್ತ? ಈಗ ಗಣೇಶನ್ನ ಭೂತರಾಯನ ಅವತಾರಾಂತ ಜನ ತಿಳಿದಿರಬಹುದು. ಅದರೆ ಆಮೇಲೆ ಗಣೇಶ ಬುದ್ಧಿ ತಿಳಿದು ಹೇಳಿಕೆ ಕೊಟ್ಟರೆ ಹೇಗೇಂತ ಅವನಿಗೆ ವರಿ ಆಗಿದೆ. ನ್ಯಾಚುರಲಿ. ಅದಕ್ಕೇನೇ ನಮ್ಮ ಪ್ರೇರಣೇಂದ ಅವ ದೇವಸ್ಥಾನದ ಮೇಲೆ ಹಲ್ಲೆ ಮಾಡ್ದ, ಬಂಗಾರ ಕದ್ದ ಅಂತ ಕಂಪ್ಲೆಂಟ್ ಕೊಡಬೇಕೂಂತ ಇದಾನಂತೆ.'

ರಂಗರಾವ್ ಮತ್ತು ಅನಂತಕೃಷ್ಣರೂ ಮೇಲೆ ಬಂದರು. ಕತ್ತಿಗೆ ಸುತ್ತಿದ ಖಾದಿ ಶಲ್ಯವನ್ನು ಜಗ್ಗಿ ಹಿಡಿದ ಅನಂತಕೃಷ್ಣ ಹೇಳಿದರು :

'ನೀವೊಂದು ಹೇಳಿಕೆ ಕೊಟ್ಟುಬಿಡಿ. ಪ್ರಭು ಹೇಳಿಕೆಗಿಂತ ಮುಂಚೆ ನಿಮ್ದು ಬರೋದು ಕ್ಷೇಮ. ಮಂಜುನಾಥನ ಲಿಂಗಾನ್ನ ಪೂಜಾರಿಗಳ ಮಗ ದ್ವೇಷದಲ್ಲಿ ಕಿತ್ತೆಸೆದದ್ದಕ್ಕೂ ನಮ್ಮ ಅಹಿಂಸಾತ್ಮಕ ಚಳುವಳಿಗು ಸಂಬಂಧ ಇಲ್ಲಾಂತ ಹೇಳಿ. ಆಮೇಲೆ ಬೇಕಾದರೆ...'

'ಇಲ್ಲ ಗಣೇಶ ಮಾಡಿದ್ದಕ್ಕೆ ಪರೋಕ್ಷವಾಗಿ ನಾನೇ ಜವಾಬ್ದಾರ'.

ಗಣೇಶನನ್ನು ಭೂತರಾಯನ ಅವತಾರವೆಂದು ತಿಳಿದ ಜನರನ್ನು ಕಿಟಕಿಯಿಂದ ನೋಡುತ್ತ ಜಗನ್ನಾಥ ಹೇಳಿದ. ಈ ಹೊಸ ಆವೇಶಕ್ಕೆ ಯಾರು ಜವಾಬ್ದಾರಿ? ರಂಗರಾವ್ ಒಲಿಸಿಕೊಳ್ಳುವ ಧಾಟಿಯಲ್ಲಿ ಜಗನ್ನಾಥನ ಪಕ್ಕ ಬಂದು ನಿಂತು ಕೇಳಿಕೊಂಡ :

'ಹಾಗಲ್ಲ ಸಾರ್. ಈಗ ಎಲ್ಲ ಹಿಂದೂಗಳನ್ನು ಎದುರು ಹಾಕ್ಕೊಳೋದು ಸರಿಯಾದ ಟ್ಯಾಕ್ಟಿಕ್ ಅಲ್ಲ. ಏನೂ ಬೇಡ – ಹೀಗೆ

ಹೇಳಿಕೆ ಕೊಡಿ. ಗಣೇಶಭಟ್ಟರಿಗೆ ಬುದ್ಧಿಭ್ರಮಣೆಯಾಗಿ ಹೀಗೆ ಮಾಡಿರಬೇಕು ಅಂತ. ಆಗ ಅವರು ಮಾಡಿದ್ದು ತಪ್ಪೂಂತ ನಾವು ಹೇಳಿದ ಹಾಗೂ ಆಗಲ್ಲ; ಸರೀಂತ ಹೇಳಿ ಎಲ್ಲ ಜಾತಿಯವರನ್ನು ಸುಮ್ಮನೇ ಮೈಮೇಲೆ ಹಾಕ್ಕೊಂಡ್ಹಾಗೂ ಆಗಲ್ಲ'.

ಅನಂತಕೃಷ್ಣ ಒಪ್ಪಿದರು:

'ಅಲ್ದೇನೆ ಗಣೇಶನ್ನ ಭೂತರಾಯನ ಅವತಾರ ಅಂತ ತಿಳ್ದಿರೋ ಈ ಮೂಢನಂಬಿಕೆಯ ಜನಕ್ಕೂ ಉತ್ತರ ಹೇಳಿದ ಹಾಗೆ ಆಗತ್ತೆ. ಏನೂ ಇಲ್ಲ – ಬುದ್ಧಿ ಭ್ರಮಣೆಯಾಗಿ ಈತ ಹಾಗೆ ಮಾಡ್ದ ಅಂತ.'

ನೀಲಕಂಠಸ್ವಾಮಿ ವಾದವನ್ನು ಇನ್ನಷ್ಟು ಸೂಕ್ಷ್ಮಗೊಳಿಸಿದ :

'ಗಣೇಶನಿಗೆ ಇದ್ದದ್ದು ದೇವರ ಮೇಲೆ ವೈಯಕ್ತಿಕ ದ್ವೇಷ ; ನಮ್ಮ ಥರದ ಐಡಿಯಾಲಾಜಿಕಲ್ ರೆಬಿಲಿಯನ್ ಅಲ್ಲ. ಆದ್ರಿಂದ ನಾವು ಆತನ ನ್ಯೂರೋಟಿಕ್ ಆಕ್ಷನ್ ಜೊತೆ ಐಡೆಂಟಿಫೈ ಮಾಡಿಕೊಳ್ಳೊಲ್ಲ ಅನ್ನೋದರಲ್ಲಿ ತಪ್ಪಿಲ್ಲ.'

ಅನಂತಕೃಷ್ಣ ಈ ವಾದ ಒಪ್ಪಿ ತಮ್ಮ ಮಾತು ಕೂಡಿಸಿದರು :

'ಆದದ್ದು ಕೂಡಾ ಹಾಗೆ ಅಲ್ವೆ? ನೀವು ಹೇಳಿದ ಮೇಲೆ ಗಣೇಶ ಬಾಗಿಲು ತೆಗ್ದ. ಅವ ನಿಮಗೆ ಏನು ಹೇಳಿದ್ನೋ, ಜನರಿಗೆ ಏನು ಕೇಳಿಸ್ತೊ – ಅಂತೂ ಭೂತರಾಯನೇ ಗಣೇಶನ ಮೈಮೇಲೆ ಬಂದು ಹೀಗೆ ಮಾಡಿಸ್ದ ಅಂತ ಸುದ್ದಿ ಹಬ್ಬಿಬಿಡ್ತು. ಹರಿಜನರು ದೇವಾಲಯ ಪ್ರವೇಶ ಮಾಡಿದಾಗ, ದೇವರು ಒಳಗಿರಲಿಲ್ಲವಾದ್ರಿಂದ, ದೇವರಿಗೆ ಮೈಲಿಗೇನೆ ಆಗ್ಲಿಲ್ಲ ಅಂತ ಹುಚ್ಚು ಜನ ಕುಣಿದಾಡಿಬಿಟ್ರು. ಎಲ್ಲ ನಮ್ಮ ಕೈಮೀರಿಹೋಯ್ತು. ಏನು ಮಾಡಕ್ಕಾಗತ್ತೆ? – ಈ ನೆಲದ ಗುಣಾನೇ ಅಂಥದ್ದು.'

ಜಗನ್ನಾಥ ಸಂಕಟಪಡುತ್ತ ಕಲ್ಪಿಸಿಕೊಂಡ : ದೇವಾಲಯದ ಕಟ್ಟೆಯ ಮೇಲೆ ಒಂದು ರಾಶಿ ಕುಂಕುಮದ ಎದುರು ಮಂಕು ಹಿಡಿದು ಕೂತ ಗಣೇಶ. ಅವನ ರೆಪ್ಪೆಗಳು ಮುಚ್ಚಿ ತೆರೆಯುತ್ತಿರುತ್ತವೆ. ತುಟಿಯ ಮೇಲೆ ಓಡಾಡುತ್ತಿರುವ ನೊಣವನ್ನು ಓಡಿಸಲೂ ಅವರು ಕೈ ಎತ್ತುವುದಿಲ್ಲ. ಮಂಜುನಾಥನನ್ನು ಪೂಜಿಸಿ ಬಂದವರು ಅವನಿಗೆ ಕೈ ಮುಗಿದು ಚಿಟಿಕೆ ಕುಂಕುಮ ತಗೊಂಡು ಹೋಗುತ್ತಾರೆ. ಕಾಲಾನುಕ್ರಮೇಣ ಪಿಳ್ಳನೋ ಅವನ ಮಗನೋ ಮಂತ್ರಿಯಾಗುತ್ತಾನೆ. ಭಾರತೀಪುರದಲ್ಲಿ ತನ್ನ ಫೋಟೋ ಅನಾವರಣ ಮಾಡುತ್ತಾನೆ. ಕ್ರಾಂತಿಯ ಬಗ್ಗೆ ಬರಕೊಂಡು ನಾನೆಲ್ಲೋ ಇರುತ್ತೇನೆ. ದೆಹಲಿಯಲ್ಲಿ, ಪ್ರಾಯಶಃ ಮಾರ್ಗರೆಟ್ ಜೊತೆ. ಮುದಿಯಾದ ಗಣೇಶ ಕಟ್ಟೆಯ ಮೇಲೇ ಕೂತಿರುತ್ತಾನೆ. ಅಥವಾ ಅವನು ಸತ್ತರೆ ಅವನು ಕೂತಿದ್ದ ಮಣೆಗೇ ಪೂಜೆ ಸಲ್ಲುತ್ತದೆ. ನನ್ನ ಹೆಸರಿನಲ್ಲಿ ಬಾಲಿಕಾ ಪಾಠಶಾಲೆ ಕಟ್ಟುತ್ತಾರೆ. ಪ್ರಗತಿಯಾಗುತ್ತ ಆಗುತ್ತ ಗರ್ಭಗುಡಿಯೊಳಗೆ ವಿದ್ಯುದ್ದೀಪಗಳು ಬೆಳಗುತ್ತವೆ. ಪ್ರಭು ನನ್ನನ್ನು ಹೊಗಳಿ ಭಾಷಣ ಮಾಡುತ್ತಾನೆ. ಈಗ ಕೂಗುವ ಜನ ಆಗ ಚಪ್ಪಾಳೆ ತಟ್ಟುತ್ತಾರೆ.

* * *

ರಾಯರು ಎಷ್ಟು ಹೊತ್ತು ಜನರನ್ನು ತಡೆಹಿಡಿದಾರೆಂದು ಆತಂಕವಾಗಿ ಎದ್ದು ನಿಂತ. ನೀಲಕಂಠಸ್ವಾಮಿ 'ಜನ ನಿಮ್ಮನ್ನು ನೋಡಿ ರೊಚ್ಚಿಗೆದ್ದಾರು ಬೇಡ' ಎಂದ. 'ಈ ಜನಕ್ಕೆ ತೀವ್ರವಾದ ರೊಚ್ಚೂ ಸಾಧ್ಯವಿಲ್ಲ' ಎಂದು ಜಗನ್ನಾಥ ಮಹಡಿ ಇಳಿಯುತ್ತಿದ್ದಾಗ ಪೋಲೀಸ್ ಇನ್‌ಸ್ಪೆಕ್ಟರ್ ಬಂದ. ಅವನ ಕೈಯಲ್ಲಿ ಗಣೇಶನ ಅರೆಸ್ಟ್ ವಾರೆಂಟ್ ಇತ್ತು. ದೇವಸ್ಥಾನದ ಮೇಲೆ ಹಲ್ಲೆ ಮಾಡಿ ದೇವರ ಸ್ವತ್ತಾದ ಬಂಗಾರವನ್ನು ಗಣೇಶ ಕದ್ದಿದ್ದಾನೆಂದು ಪ್ರಭು ಕಂಪ್ಲೆಂಟ್ ಕೊಟ್ಟಿದ್ದ. ಪ್ರಭು ನಿಜವಾಗಿಯೂ ಎಷ್ಟು ಘಾಟಿ ಮನುಷ್ಯ – ಮುಖ್ಯವಾಗಿ ಅವನಿಗೆ ಅರ್ಚಕರ ಮಗ ತಮ್ಮ ಬಳಿ ಇರೋದು ಅಪಾಯವೆನ್ನಿಸಿತ್ತು. ಇನ್‌ಸ್ಪೆಕ್ಟರ್‌ಗೌರವದಿಂದ ಗಣೇಶನನ್ನು ಬಿಟ್ಟುಕೊಡುವಂತೆ ಬೇಡಿಕೊಂಡ. ಜಗನ್ನಾಥ ಅವನಿಗೆ ಕೂರಲು ಹೇಳಿ.

'ಗಣೇಶನಿಗೆ ಬುದ್ಧಿಭ್ರಮಣೆಯಾಗಿದೆ' ಎಂದ.

'ಗೊತ್ತು ಸಾರ್. ಆದರೆ ಜನರನ್ನ ಕಂಟ್ರೋಲ್ ಮಾಡೋಕೆ ಆಗ್ತ ಇಲ್ಲ. ನಿಮ್ಮ ಮನೇ ಬಿಟ್ಟು ಅವರು ಕದಲ್ತ ಇಲ್ಲ. ಆಮೇಲಿಂದ ಮುಚ್ಚಳಿಕೆ ಕೊಟ್ಟು ಅವನನ್ನು ಬಿಡಿಸ್ಕೋಬಹುದು. ಆಸ್ಪತ್ರೆಗೆ ಸೇರಿಸಬಹುದು. ಡಿ.ಸಿ.ಸಾಹೇಬ್ರೇ ಖುದ್ದು ಹೀಗೇ ನಿಮಗೆ ತಿಳಿಸಿ ಅಂದಿದಾರೆ.'

ಜಗನ್ನಾಥ ಸುಮ್ಮನಿದ್ದ. ಮಂಕಾಗಿದ್ದ ಗಣೇಶನನ್ನು ಇಬ್ಬರು ಪೊಲೀಸರು ನಡೆಸಿಕೊಂಡು ಬಂದರು. ಅವನಿಗೆ ಮೈಮೇಲೆ ಧ್ಯಾಸವಿದ್ದಂತೆ ಕಾಣಲಿಲ್ಲ. ಪೆಚ್ಚಾಗಿ ನೋಡಿದ್ದನ್ನೆ ನೋಡುತ್ತ ನಡೆದ. ಗಣೇಶ ಕಂಡ ಕೂಡಲೇ ಅವನಿಗೆ ಜಯಕಾರ ಹಾಕುತ್ತ ಜನ ವ್ಯಾನನ್ನು ಸುತ್ತುಗಟ್ಟಿದರು. ಪೊಲೀಸರು ಜನರನ್ನು ತಳ್ಳುತ್ತ ವ್ಯಾನಿಗೆ ದಾರಿ ಮಾಡಿದರು. ವ್ಯಾನು ಹೊರಟದ್ದೇ ಜನರೂ ಅದರ ಹಿಂದೆ ಓಡಿದರು.

ಜಗನ್ನಾಥ ನಿಟ್ಟುಸಿರೆಳೆದು ಒಳಗೆ ಬಂದ. ಜೊತೆಯಲ್ಲೆ ರಾಯರು, ನೀಲಕಂಠಸ್ವಾಮಿ, ಅನಂತಕೃಷ್ಣ ಮೇಲೆ ಬಂದರು. ರಂಗರಾವ್ ಸೋಷಲಿಸ್ಟ್ ಹುಡುಗರ ಜೊತೆ ಓಡಾಡಿ ಅಲ್ಲೊಬ್ಬ ಇಲ್ಲೊಬ್ಬನಂತೆ ಮರಗಳ ಕೆಳಗೆ ನಿಂತವರನ್ನು ಅಟ್ಟಿದ. ಜಾತ್ರೆಗೆಂದು ಬಂದ ಊರ ಹೊರಗಿನವರನ್ನು ಹಿಡಿತದಲ್ಲಿಡುವುದೇ ಹೆಚ್ಚು ಕಷ್ಟವಾಗಿತ್ತು. ಕಾವಲಿದ್ದ ಪೋಲೀಸರಿಗೆ 'ಇಲ್ಲೇ ಇರಿ' ಎಂದು ಹೇಳಿ ರಂಗರಾವ್ ಮೇಲೆ ಬಂದ.

* * *

ಯಾವತ್ತು ನೀನು ಮೈಸೂರಿಗೆ ಹೋಗಬೇಕೆಂದು ಗೋಪಾಲನನ್ನು ಕೇಳಿ ಜಗನ್ನಾಥ ಪಡಸಾಲೆಯಲ್ಲಿ ಅಡ್ಡಾಡಿದ – ಹೊಲೆಯರ ಜೊತೆ ತಾನು ಹಿಂದಿನ ದಿನ ಹೊರಟ ಕ್ಷಣದಿಂದ ಪ್ರತಿಯೊಂದು ಘಳಿಗೆಯನ್ನೂ ನೆನೆದು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತ. ಬೆಳಗಿನ ಝೂವ ಪಿಳ್ಳನ ನೇತೃತ್ವದಲ್ಲಿ ಹತ್ತು ಜನ ಹೊಲೆಯರೂ ಶುಭ್ರವಾದ ಬಿಳಿ ಬಟ್ಟೆ ತೊಟ್ಟು

ಅಂಗಳದಲ್ಲಿ ಸೇರಿದ್ದರು. ಅವರನ್ನು ಮಾತಾಡಿಸಲು ಜಗನ್ನಾಥ ಹತ್ತಿರ ಹೋದ ಕೂಡಲೇ ವಾಸನೆ ಬಂತು. ಧೈರ್ಯಕ್ಕಾಗಿ ಹೊಲೆಯರು ಮೂಗಿನ ತನಕ ಹೆಂಡ ಹೀರಿ ಬಂದಿದ್ದರು. 'ಹೆದರಕೂಡದು' ಎಂದು ಜಗನ್ನಾಥ ಹೇಳಹೋದಾಗ ಪಿಳ್ಳ ಸಹ ವಿಕಾರವಾಗಿ ನಗುತ್ತ 'ಓಹೋ' ಎಂದು ಉಡಾಫೆಯಲ್ಲಿ ಮಾತಾಡಿದ್ದ. ಈ ಸ್ಥಿತಿಯಲ್ಲಿ ಅವರು ಗುಡಿ ಪ್ರವೇಶ ಮಾಡುವುದು ಪ್ರಜ್ಞಾಪೂರ್ವಕವಾದ ಪ್ರತಿಭಟನೆಯಲ್ಲ ಎಂದು ಅನ್ನಿಸಿದರೂ ಇಟ್ಟ ಹೆಜ್ಜೆಯನ್ನು ಹಿಂದಿಡುವುದು ಸಾಧ್ಯವಿಲ್ಲ ಎಂದು ತಾನು ಆಗ ನಿಸ್ಸಹಾಯಕನಾಗಿ ನಿಂತಿದ್ದ. ಬರೀ ಪ್ರೇಕ್ಷಕನಾಗಿಬಿಟ್ಟೆ. ಆಗ ನಾನು ಭಯಪಟ್ಟೆನೆ? ಸಾಮೂಹಿಕ ಕ್ರಿಯೆಯನ್ನು ಪರಿಶುದ್ಧವಾಗಿಡುವುದು ಅಸಾಧ್ಯವೆಂದು ಒಪ್ಪಿಕೊಂಡನೆ? – ಹೀಗೆ ಕೆದಕಿಯೂ ಇನ್ನು ಮುಂದೆ ಪ್ರಯೋಜನವಿಲ್ಲವೆನಿಸಿ ಮಹಡಿ ಹತ್ತಿ ಹೋದ.

ರಾಯರು, ನೀಲಕಂಠಸ್ವಾಮಿ, ಅನಂತಕೃಷ್ಣ, ರಂಗರಾವ್ ಚಾಪೆಯ ಮೇಲೆ ಕೂತು ಗಾಢವಾಗಿ ಚರ್ಚಿಸುತ್ತಿದ್ದರು. ಚಿಕ್ಕ ತಟ್ಟೆಯ ಮೇಲೆ ಲೋಟಗಳಲ್ಲಿ ಕಾಫಿ, ಕೋಡುಬಾಳೆ ತಂದಿಟ್ಟು ಹೋದರು. ಹಿಂದಿನ ದಿನದ ಘಟನೆಗಳನ್ನೆಲ್ಲ ಕೂಲಂಕಷವಾಗಿ ವಿಶ್ಲೇಷಿಸುತ್ತಿದ್ದವರು, ಟಪಾಲು ಬಸ್ಸಿನಲ್ಲಿ ಬೆಂಗಳೂರಿನ ದಿನಪತ್ರಿಕೆ ಬಂದದ್ದನ್ನು ಕಂಡವರೇ ಸುಮ್ಮನಾದರು. ಮೊದಲಿನ ಪೇಜಿನ ಸುದಿಯಾಯಿತೆಂದು ಖುಷಿಗೊಂಡ ನೀಲಕಂಠಸ್ವಾಮಿ ಆತುರದಿಂದ ಶೀರ್ಷಿಕೆ ಓದುತ್ತ 'ಆ ಪಿಆರ್ಟಿ ರಾಸ್ಕರ್ ರಿಯಾಕ್ಷನರಿ. ಸುದ್ದಿನ ಟ್ವಿಸ್ಟ್ ಮಾಡ್ತಾನೆ. ಜಾಗೃತೀಲಿ ಇರೋ ವರದೀನೆ ಚೆನ್ನಾಗಿರತ್ತೆ' ಎಂದು ಗಟ್ಟಿಯಾಗಿ ಓದಲು ಪ್ರಾರಂಭಿಸಿದ :

ಭಾರತೀಪುರದಲ್ಲಿ ವಿಫಲವಾದ ಕ್ರಾಂತಿ
ದೇವರಿಲ್ಲದ ಗುಡಿಗೆ ಹರಿಜನ ಪ್ರವೇಶ
ಹೋರಾಟದಿಂದ ಹಿಮ್ಮೆಟ್ಟುವುದಿಲ್ಲ
-ಜಗನ್ನಾಥ

ದೇವರು ಮಲಿನವಾಗುವುದನ್ನು ಅಂತೂ ಭೂತರಾಯ ತಪ್ಪಿಸಿದ
-ಭಕ್ತವೃಂದ

ಅನಂತಕೃಷ್ಣ ಆತುರದಿಂದ ಪೇಪರ್ ನೋಡಲು ಕತ್ತು ಚಾಚಿ 'ಮುಂದೆ ಓದಿ' ಎಂದರು. ರಾಯರು ಎಲೆಯಡಿಕೆ ಚೀಲ ಬಿಚ್ಚಿ ಕವಳ ಸಿದ್ಧಪಡಿಸುತ್ತ ಆಲಿಸಿದರು. ಜಗನ್ನಾಥನಿಗೆ ಇದ್ದಕ್ಕಿದ್ದಂತೆ ನೆನಪಾಯ್ತು.

'ಹೊಲೇರನ್ನ ಪೊಲೀಸರು ಕಾಯ್ತ ಇದಾರೆ ತಾನೆ?'

'ಹತ್ತು ಹನ್ನೆರಡು ಪೊಲೀಸರು ಕಾವಲಾಗಿದಾರೆ. ಪಿಳ್ಳನ್ನ ನೋಡಿ ಬಂದೆ. ಸಾಯಂಕಾಲ ಮೀಟಿಂಗ್‌ಗೆ ಬರೋಕೆ ಹೇಳಿದೆ.'

ರಂಗರಾವ್ ಉತ್ಸಾಹದಲ್ಲಿ ಹೇಳಿದ. ಈ ಯಾರಿಗೂ ತನ್ನ ಯಾತನೆ ಅರ್ಥವಾಗದು. ಅವಶ್ಯವೂ ಇಲ್ಲ. ಅವರಿಗೆ ಕ್ರಿಯೆಯಲ್ಲಿ

ತೊಡಗಿರೋದೇ ಸುಲಭ. ನೀಲಕಂಠಸ್ವಾಮಿ ಓದುತ್ತಿರೋದನ್ನ ಎಷ್ಟು ತನ್ಮಯರಾಗಿ ಎಲ್ಲರೂ ಆಲಿಸುತ್ತಿದ್ದಾರೆ. ಪೇಪರಿನ ವರದಿಯ ಮೂಲಕ ಮಾತ್ರ ಇವರಿಗೆ ತಾವು ಮಾಡಿದ್ದು ನಿಜವಾಯಿತೆಂಬ ಭ್ರಮೆಯಿರಬಹುದು. ನೀಲಕಂಠಸ್ವಾಮಿ ಖುಷಿಯಾಗಿ ಓದಿದ:

‘ಬಿಸಿಲಿನ ಪೊರಕೆ ಹಿಮವನ್ನು ಗುಡಿಸುವ ಹೊತ್ತು ಭಾರತೀಪುರದಲ್ಲಿ ಬಲು ಸುಂದರ. ನಾನಾ ದೇಶಗಳಿಂದ ಬಂದ ಜನ ರಥೋತ್ಸವಕ್ಕಾಗಿ ಚಳಿಯಲ್ಲಿ ಕಾದು ನಿಂತಿರುವಾಗ ಈ ನಾಟಕ. ರಾಷ್ಟ್ರಪತಿಯನ್ನೆ ಭಕ್ತನನ್ನಾಗಿ ಪಡೆದ ಶ್ರೀ ಮಂಜುನಾಥನಿಗೆ ಭಂಟ ಭೂತರಾಯ. ಇವನ ಅಂಕೆಯ ಲಕ್ಷ್ಮಣ ಗೆರೆಯನ್ನು ಮೀರುವುದು ಹರಿಜನರಿಗೆ ಶಕ್ಯವೋ ಎಂದು ಹೊಳೆಯುವ ಕಣ್ಣುಗಳಲ್ಲಿ ಕಾತರ. ಕಾತರಕ್ಕೂ ಮೀರಿದ ಕುತೂಹಲ.’

ಜಗನ್ನಾಥನಿಗೆ ಕಿರಿಕಿರಿಯಾಯಿತು. ‘ಒಳ್ಳೆಭಾಷೆ’ ಎಂದು ರಂಗರಾವ್ ಮೆಚ್ಚಿದ.

‘It is immoral to write like that’ ಎಂದು ಜಗನ್ನಾಥ ಸಿಗರೇಟ್ ಹಚ್ಚಿ ಕೇಳುತ್ತ ಕೂತ :

‘ಮಂಜುನಾಥ ಮಹಿಮೆಯ ನಾಶಕ್ಕಾಗಿ ಜಗನ್ನಾಥರ ನೇತೃತ್ವದಲ್ಲಿ ಬೆಳಗಿನ ಝಾವ ಹೊರಟ ಶುಭ್ರ ವಸನಧಾರಿ ಹರಿಜನ ಯುವಕರ ಮೆರವಣಿಗೆ ರಥಬೀದಿ ತಲ್ಪಿದಾಗ ಏಳು ಘಂಟೆ. ಹಿಂದಿನಿಂದ ಕಾರು. ಮೈಕಿನಲ್ಲಿ ಜಯಘೋಷ. ‘ಇಂಕ್ವಿಲಾಬ್ ಜಿಂದಾಬಾದ್’; ಜಗನ್ನಾಥ ರಾಯರಿಗೆ ಜಯವಾಗಲಿ’ ; ‘ಭೂತರಾಯನ ರೈತಶೋಷಣೆಗೆ ಧಿಕ್ಕಾರ’; ‘ಮೈಸೋಪಕ್ಕೆ ಜಯವಾಗಲಿ’- ವೇದಘೋಷ ಶತಮಾನಗಳಿಂದ ಮೊಳಗಿದ ಭಾರತೀಪುರದಲ್ಲಿ ಈ ಕ್ರಾಂತಿಘೋಷ’.

ಓದುವಾಗ ನೀಲಕಂಠಸ್ವಾಮಿಯ ಮುಖ ಸಣ್ಣಗಾಗಿ ಧ್ವನಿ ಕುಗ್ಗಿತ್ತು. ತನ್ನ ಹೆಸರಿಗೆ ಜಯಘೋಷ ಕೂಗಿದೊಡನೆಯೇ ನಿನ್ನ ಜಗನ್ನಾಥನಿಗೆ ಎಷ್ಟು ಹೇಸಿಗೆಯಾಗಿತ್ತೆಂದರೆ ಸಾಲು ಬಿಟ್ಟು ಹಿಂದೆ ನಡೆದು ಬಂದು ಕಾರಿನಲ್ಲಿ ಕೂತು ಕೂಗುತ್ತಿದ್ದ ನೀಲಕಂಠಸ್ವಾಮಿಯನ್ನು ತರಾಟೆಗೆ ತೆಗೆದುಕೊಂಡಿದ್ದ. ಮೌನವಾಗಿ ಮೆರವಣಿಗೆಯಾಗಬೇಕೆಂದು ಕಟ್ಟಪ್ಪಣೆ ಮಾಡಿದ್ದ. ಇದರಿಂದ ನೀಲಕಂಠಸ್ವಾಮಿಗಾದ ಅಸಮಾಧಾನ ಈಗಲೂ ಉರಿಯುತ್ತಿದೆಯೆಂಬುದನ್ನು ಗಮನಿಸಿ ಜಗನ್ನಾಥ ಅದನ್ನು ತಾನು ಮರೆತಿದ್ದೇನೆಂದು ಸೂಚಿಸಲು ತಲೆ ತಗ್ಗಿಸಿ ಕೂತ. ನೀಲಕಂಠಸ್ವಾಮಿ ತಡವರಿಸಿದ್ದು ಕ್ಷಣಮಾತ್ರ. ಮುಂದೆ ಓದಿ:

‘ಇಕ್ಕೆಲದಲ್ಲೂ ಪೋಲೀಸರು. ಮೆರವಣಿಗೆಯ ಮಂಚೂಣಿಯಲ್ಲಿ ಎತ್ತರದ ನಿಲುವಿನ, ಲಂಡನ್ನಿನಲ್ಲಿ ಓದಿ ಬಂದ, ಧರ್ಮದರ್ಶಿ ಮನೆತನದ ಜಗನ್ನಾಥರು. ಅವರ ಹಿಂದೆ ಹತ್ತು ಯುವಕ ಹರಿಜನರು. ಅವರ ಹಿಂದೆ ಹಳೆ ಕಾಂಗ್ರೆಸ್ ನಾಯಕ ಶ್ರೀಪತಿರಾಯರು. ಹಿಂದೆ ಸರ್ವೋದಯ ನಾಯಕ ಅನಂತಕೃಷ್ಣರು. ಮೈಸೋಪದ ನಾಯಕ ನೀಲಕಂಠಸ್ವಾಮಿ ಮತ್ತು ಅನುಯಾಯಿಗಳು.’

ರಂಗರಾವ್ ಹೊರತಾಗಿ ಎಲ್ಲರ ಮುಖಗಳೂ ಅರಳಿದುವು. ‘ಕ್ರಿಯಾಪದವೇ ಇಲ್ಲದೆ ಈ ಗದ್ಯ ತುಂಬ ಇರಿಟೇಟ್ ಮಾಡತ್ತೆ’ ಎಂದು ಜಗನ್ನಾಥನನ್ನುದ್ದೇಶಿಸಿ ರಂಗರಾವ್ ಹೇಳಿದ್ದನ್ನ ಅನಂತಕೃಷ್ಣ ಒಪ್ಪಿದರು. ‘ಸಿದ್ಧವನಹಳ್ಳಿಯವರ ಶೈಲೀನ್ನ

ಈಗ ಎಲ್ಲರೂ ದುರುಪಯೋಗ ಮಾಡ್ತಿದರೆ’ ಎಂದರು.

‘ಹೊಲೆಯರಿಗೆ ಮೈತಾಕಿದರೆ ರಥ ಎಳೆಯುವುದು ಸಾಧ್ಯವಿಲ್ಲವಾದ್ದರಿಂದ ರೋಡಿನ ಮಧ್ಯೆ ಜನರಿಂದಲೇ ಜಾಗ. ಸಿಂಗರಿಸಿದ ರಥ ದಾಟಿ ದೇವಸ್ಥಾನದ ಮೆಟ್ಟಲೇರಿದ ಮೆರವಣಿಗೆ. ಎಲ್ಲೆಡೆಯೂ ಗುಜುಗುಜು. ಪೋಲೀಸರು ಜನರನ್ನು ತಳ್ಳುವ ಕೋಲಾಹಲ.

ಹಳ್ಳಿ ಹೆಂಗಸೊಬ್ಬಳು ಆವೇಶದಿಂದ ಕೂಗಿದಳು : ‘ಹೊಲೇರು ಒಳಗೆ ಹೋಗೋದು ಸಾಧ್ಯಾನೇ ಇಲ್ಲ. ಭೂತರಾಯ ಕಾಲು ಹಿಡಿದು ಎಳೀತಾನೆ. ರಕ್ತ ಕಕ್ಕಿಸ್ತಾನೆ.’

ಅಂತೂ ಕ್ರಿಯಾಪದ ಬಂತು ಎಂದು ನಿಟ್ಟುಸಿರೆಳೆದು ಜಗನ್ನಾಥ ಎದ್ದು ತನ್ನ ರೂಮಿಗೆ ಹೋದ. ನೀಲಕಂಠಸ್ವಾಮಿ ಓದುತ್ತಲೇ ಇದ್ದ. ಜಗನ್ನಾಥ ಕಿಟಕಿಯಾಚೆ ನೋಡಿದ. ಹೂಬಿಟ್ಟ ಮಾವಿನಮರ. ನಿರೀಶ್ವರವಾದಿಯನ್ನು ನೋಡುವ ಕುತೂಹಲದಿಂದ ಗುಡ್ಡ ಹತ್ತಿ ಬರುತ್ತಿರುವ ಕೆಲವು ಜನ. ಅವರನ್ನು ಅಟ್ಟುವ ಪೊಲೀಸರು. ಹೀಗೆ ತಾನು ನೋಡುತ್ತ ಈಗ ನಿಂತಿರುವ ಘಳಿಗೆಯನ್ನು ಅವನು ಹಿಂದೆ ನಿರೀಕ್ಷಿಸಿರಲಿಲ್ಲ; ತನ್ನ ಕೈತಪ್ಪಿ ಬೆಳೆದೀತೆಂದು ಊಹಿಸಿದ್ದರೂ ಹೀಗಾಗಬಹುದು ಎಂದಲ್ಲ.

ದೇವಸ್ಥಾನದ ಹೊಸಿಲಿನ ಹತ್ತಿರ ಪಿಳ್ಳ ನಿಂತಿದ್ದ. ಶತಮಾನಗಳನ್ನು ಬದಲಿಸುವ ಹೆಜ್ಜೆಗಾಗಿ ನಾನು ಕಾದೆ. ಹೊರಗಿದ್ದವನು ಒಳಗಗುವ ಒಂದು ಹೆಜ್ಜೆ. ಬೆನ್ನಿನ ಹಿಂದೆ ಸಹಸ್ರಾರು ಕಣ್ಣುಗಳು ಪಿಳ್ಳನನ್ನು ಜಗ್ಗುತ್ತಿದ್ದಾವೆಂಬ ಅರಿವು ತನಗಿತ್ತು. ಆ ಕಣ್ಣುಗಳ ಕ್ರೌರ್ಯ, ಮೌಢ್ಯಗಳನ್ನೆಲ್ಲ ಅಲ್ಲಗಳೆಯುವಂತೆ ನಾನು ಪಿಳ್ಳನನ್ನು ನೋಡಿದೆ. ನೀನೇ ಇಡಬೇಕಾದ ಹೆಜ್ಜೆಯಿದು ಎನ್ನುವುದ ತಿಳಿಸುವಂತೆ ನೋಡಿದೆ. ಆ ಕ್ಷಣದಲ್ಲಿ ವಿಚಿತ್ರವೆಂದರೆ ನನಗೆ ಎಷ್ಟು ಆತಂಕವಿತ್ತೊ, ಅಷ್ಟೇ ಕುತೂಹಲ ಇತ್ತು. ಪಿಳ್ಳ ಸಿದ್ಧನಾಗಿದ್ದಾನೊ ಎಂಬ ಕುತೂಹಲ. ಹೆಂಡದ ಅಮಲು ಇಳಿದಿರಬಹುದು. ಇಷ್ಟು ಕಣ್ಣುಗಳ ಸಾಕ್ಷಿಯಲ್ಲಿ ಈಗ ಪಿಳ್ಳ ಒಂದೇ ಒಂದು ಹೆಜ್ಜೆಯಿಟ್ಟರೆ ಭಾರತೀಪುರ ಹೊಸದೊಂದು ವಾಸ್ತವಕ್ಕೆ ಹೊರಳಿಕೊಂಡೀತು ಎಂದು ಆರ್ತನಾಗಿ ಪಿಳ್ಳನನ್ನು ನೋಡುತ್ತಲೇ ನಿಂತೆ. ನೀನು ಗಟ್ಟಿಯಾಗದೇ ನಾನು ಗಟ್ಟಿಯಾಗಲಾರೆ ಎಂದು ಹೇಳಲು ಪ್ರಯತ್ನಿಸಿದ. ಸಾಕ್ಷಿಯಾಗಿ, ಪಾಲುಗಾರನಾಗಿ, ಸಾಧನವಾಗಿ ಪಿಳ್ಳನ ಕಣ್ಣು ಹುಡುಕುತ್ತ ನಿಂತೆ. ಆದರೆ ಪಿಳ್ಳ ಮುಖ ತಿರುಗಿಸಿ ತನ್ನ ಜೊತೆಗಾರರನ್ನು ನೋಡಿದ. ತನ್ನನ್ನೇ ನೋಡುತ್ತಿದ್ದ ಸಹಸ್ರಾರು ಜನರನ್ನು ನೋಡಿದ. ಹಿಂದೆ ನಿಂತವನಿಗೆ ನೀನು ಮೊದಲು ಒಳಗೆ ಹೋಗು ಎಂದ. ಅವನು ತನ್ನ ಹಿಂದಿದ್ದವನಿಗೆ ಹಾಗೇ ಹೇಳಿದ. ಹೀಗೇ ಒಬ್ಬ ಇನ್ನೊಬ್ಬನಿಗೆ ಹೇಳುತ್ತ ಸಾಲಾಗಿ ನಿಂತಿದ್ದವರು ಗುಂಪಾದರು. ಒಬ್ಬರನ್ನೊಬ್ಬರು ಪುಸಲಾಯಿಸಿಕೊಂಡರು; ಜಗಳ ಪ್ರಾರಂಭಿಸಿದರು.

ಆಗ ತಾನು ಏನು ಮಾಡಬೇಕೆಂದುಕೊಂಡೆ, ಗರಬಡಿದವನಂತೆ ಯಾಕೆ ಸುಮ್ಮನೆ ನಿಂತಿದ್ದೆ ?

ಪಿಆರ್ಟಿಯ ವರದಿಯನ್ನು ನೀಲಕಂಠಸ್ವಾಮಿ ಕಟುವಾಗಿ ಟೀಕಿಸಿದ : ‘ಹೇಗೆ ಸಟಲ್ಲಾಗಿ ಎಕ್ಸಾಜರೇಟ್ ಮಾಡ್ತಿದಾನೆ ಈ ಸನಾತನಿ ನೋಡಿ – “ಮಿಂಚಿನ ವೇಗದಲ್ಲಿ ಜನಸ್ತೋಮದಲ್ಲಿ ಮಹತ್ತರ ಬದಲಾವಣೆ. ಯಾರೋ ಕೂಗಿದರು :

ಮಂಜುನಾಥನಿಗೆ ಜಯವಾಗಲಿ. ಗೋವಿಂದಾನುಗೋವಿಂದ ಗೋವಿಂದ, ಇನ್ನೊಂದು ಕೂಗು; ನುಗ್ಗಿ ಎಳೀರಿ.

"ಹರಿಜನರ ತಲ್ಲಣ ತಿಳಿದು ಕೆಲವರು ಕುಣಿದರು. ಹಲವರು ಅತ್ತರು. ಕೆಲವರು ಭೂತರಾಯ 'ಮೈಮೇಲೆ' ಬಂದಂತೆ ಥತ್ತರ ನಡುಗಿದರು. ಭೂತರಾಯ ಹೊಲೆಯರ ಕಾಲು ಎಳೆದನೆಂದು ಎಲ್ಲೆಡೆಯೂ ಸುದ್ದಿ ಹಬ್ಬಿತ್ತು. ಜನರ ಆನಂದ ಮೇರೆ ಮೀರಿ ಪೋಲೀಸ್ ಪಹರೆಯ ಕಟ್ಟೆಯೊಡೆದು ನುಗ್ಗಿತು."

ಜಗನ್ನಾಥ ವರದಿ ಕೇಳುತ್ತ ನಿಂತ. ನಿಜ – ಆಗ ತಾನು ಕೈಕಟ್ಟಿ ನಿಂತಿದ್ದೆ. ನಾನು ಮಾಡಲಾರದ್ದನ್ನು ನೀಲಕಂಠಸ್ವಾಮಿ ಮಾಡಿದ. ಬುಸುಗುಡುತ್ತ ಪಿಳ್ಳನ ಹತ್ತಿರ ಹೋಗಿ ಅವನ ಕೈ ಹಿಡಿದು ಎಳೆದುಕೊಂಡು ದೇವಸ್ಥಾನದ ಒಳಗೆ ಹೋದ. ಉಳಿದವರು ಹಿಂಬಾಲಿಸಿದರು, ಪ್ರವೇಶ ಶಾಸ್ತ್ರ ಆಗಿಹೋಯ್ತು.

ನೀಲಕಂಠಸ್ವಾಮಿ ಸಿಟ್ಟಿನಿಂದ ಓದುತ್ತಿದ್ದ :

'ಈ ಬಲಾತ್ಕಾರದ ಪ್ರವೇಶವನ್ನು ನೀವು ಒಪ್ಪುತ್ತೀರೋ ಎಂದು ಕೇಳಿದ್ದಕ್ಕೆ, ಸರ್ವೋದಯ ನಾಯಕ ಅನಂತಕೃಷ್ಣರಿಂದ 'ಕೊನೆಯಲ್ಲಿ ಅವರನ್ನು ಬಲಾತ್ಕರಿಸಲಾಯಿತೆ ಎನ್ನುವುದು ಅಭಿಪ್ರಾಯದ ಪ್ರಶ್ನೆ' ಎಂಬ ಉತ್ತರ. 'GOOD'. ಆದರೆ ಎಲ್ಲವನ್ನೂ ನೋಡುತ್ತ ನಿಂತಿದ್ದ ಜಗನ್ನಾಥರಿಂದ ಮಾತ್ರ ನನ್ನ ಪ್ರಶ್ನೆಗೆ ವಿಷಾದಪೂರ್ಣ ಮೌನದ ಪ್ರತಿಕ್ರಿಯೆ. No ಮಿಸ್ಟರ್ ಜಗನ್ನಾಥ್. ಇದನ್ನ ಡಿನೈ ಮಾಡಿ ನೀವೊಂದು ಸ್ಟೇಟ್‌ಮೆಂಟ್ ಕೊಡಬೇಕು.'

'ನನಗೇನು ನಿಜವಾಗಿ ಅನ್ನಿಸುತ್ತದೆ ಎನ್ನೋದು ಮುಖ್ಯವೊ, ನಾನು ನಂಬಿದ ಉದ್ದೇಶದ ಸಾಧನೆ ಹೇಗಾರೂ ಆಗೋದು ಮುಖ್ಯವೋ ಅನ್ನೋದೆ ಈಗ ನನ್ನ ಪ್ರಶ್ನೆ. ಈ ಗೊಂದಲ ತೀರೋ ತನಕ ಏನೂ ಹೇಳಲಾರೆ. ಆದ್ರೆ ಈ ಗೊಂದಲ ತೀರೋದು ಕೂಡ ಆಕ್ಶನ್ ಮುಖಾಂತರವೇ ಹೊರ್ತು ಯೋಚಿಸ್ತ ಕೂರೋದ್ರಿಂದ ಅಲ್ಲ ಅಂತ ನಂಗೆ ಗೊತ್ತಾಗಿದೆ.'

ಜಗನ್ನಾಥ ರೂಮೊಳಗೆ ಹೋಗಿ ಮತ್ತೆ ಕಿಟಕಿಯ ಹತ್ತಿರ ನಿಂತ. ದೂರದಿಂದ ಸುಬ್ರಾಯ ಅಡಿಗರು ಬರುತ್ತಿರುವುದು ಕಾಣಿಸಿತು. ವೇಷ ನೋಡಿ ಅನುಮಾನದಿಂದ ಪೊಲೀಸರು ಅವರನ್ನು ತಡೆದಾರೆಂದು ಜಗನ್ನಾಥ ಕೆಳಗಿಳಿದು ಹೋದ.

ಇಲ್ಲ – ನೀಲಕಂಠಸ್ವಾಮಿ ಮಾಡಿದ್ದನ್ನು ತಾನೂ ಮಾಡುತ್ತಿದ್ದೆನೋ ಏನೊ? ಹಾಗೆ ನೋಡಿದರೆ ತಾನು ಮೊದಲಿನಿಂದ ಮಾಡಿದ್ದಾದರೂ ಇನ್ನೇನು? ತನ್ನ ಕ್ರಿಯೆಯ ಪರಿಣಾಮ ಎಷ್ಟು ಅಸಂಗತವಾದೀತೆಮದು ಊಹಿಸದೇ ಇದ್ದದ್ದೆ ತನ್ನ ಆಲೋಚನಾ ಕ್ರಮದ ಮುಖ್ಯ ದೋಷ.

ಹೊಲೆಯರ ಜೊತೆ ಒಳಗೆ ಹೋದಾಗ ಕಾದಿದ್ದ ದೃಶ್ಯ ವಿಚಿತ್ರವಾಗಿತ್ತು. ಗರ್ಭಗುಡಿಯ ಎದುರು ಪ್ರಭು ಮತ್ತು ಸೀತಾರಾಮಯ್ಯ ಇದ್ದರು. ಸೀತಾರಾಮಯ್ಯನ ತಲೆಗೆ ಬ್ಯಾಂಡೇಜ್ ಹಾಕಿತ್ತು. ಇಬ್ಬರ ಮುಖದ ಮೇಲೆ ಕಂಡ ಉದ್ವೇಗದಿಂದ ಈಗ ತನಗೆ ಹೊಳೆಯುವುದೇನೆಂದರೆ ಬೆಳಗಿನಿಂದ ಅವರು ಗಣೇಶನನ್ನ ಬಾಗಿಲು ತೆಗೆಯಲು ಬೇಡಿ,

ಒದ್ದಾಡಿ ಸೋತಿರಬೇಕು. ಗಣೇಶ ಏನನ್ನೂ ಸ್ಪಷ್ಟವಾಗಿ ಹೇಳಬಲ್ಲ ಸ್ಥಿತಿಯಲ್ಲಿರಲಿಲ್ಲ. 'ಹೊಲೇರು ಒಳಗೆ ಬಂದಿದಾವೆ, ಬಾಗಿಲು ತೆಗೀಬೇಡ' ಎಂದು ಸೀತಾರಾಮಯ್ಯ ರೇಗಿ ಕಿರುಚಿದಾಗ ಏನೋ ನಡೆದಿದೆ ಎಂದು ನನಗೆ ಗುಮಾನಿಯಾಯ್ತು. 'ನಾವೇನು ಮಾಡೋಣ? ದೇವರ ಪ್ರೇರಣೇಂದ ಇವರ ಮಗ ಬಾಗಿಲು ಹಾಕ್ಕೊಂಡು ಕೂತಿದಾನೆ. ನಾವು ಕರೆದ್ರೂ ಬಾಗಿಲು ತೆಗೀತ ಇಲ್ಲ' ಎಂದು ಪ್ರಭು ನಾಟಕವಾಡಿದ.

ಜಗನ್ನಾಥ ಸೀದ ಗರ್ಭಗುಡಿಗೆ ಹೋಗಿ ಬಾಗಿಲನ್ನು ಕುಟ್ಟಿದ. 'ಗಣೇಶ ನಾನು ಜಗನ್ನಾಥ ಬಂದಿರೋದು. ಬಾಗಿಲು ತೆಗಿ ಹೆದರಬೇಡ' ಎಂದ. ಬಾಗಿಲು ತೆರಿಯಿತು. ಗಣೇಶ ಓಲಾಡುತ್ತಾ ಬಂದು ತನ್ನ ಕಾಲಿನ ಕೆಳಗೆ ಕುಸಿದ...

ಸುಬ್ರಾಯ ಅಡಿಗರು ಮುಖದ ಮೇಲೆ ಯಾವ ಭಾವನೆಯೂ ಇಲ್ಲದೆ 'ಚಿಕ್ಕಿಯನ್ನು ನೋಡಲು ಬಂದೆ' ಎಂದರು. 'ಒಳಗಿದ್ದಾರೆ' ಎಂದು ಅವರನ್ನು ಕಳಿಸಿ ಜಗನ್ನಾಥ ಮೇಲೆ ಹತ್ತಿಹೋದ, ಬಿರುಸಿನಿಂದ ಚರ್ಚೆ ನಡೆಯುತ್ತಿತ್ತು. ನೀಲಕಂಠಸ್ವಾಮಿ ಜೋರಾಗಿ ಮಾತಾಡುತ್ತಿದ್ದ.

'ನೋಡಿ, ಹೇಗೆ ಮಾಡಿದಾನೇಂತ? 'ಹರಿಜನರು ಒಳಗೆ ಬರುತ್ತಾರೆಂದು ಮಂಜುನಾಥ ಅಂತರ್ಧಾನನಾಗಿಬಿಟ್ಟ – ಹೀಗೆ ಜನರಲ್ಲೆಲ್ಲ ಸುದ್ದಿ ಹಬ್ಬಿತು. ಲಿಂಗವನ್ನು ಕಿತ್ತೆಸೆದವರು ಪೂಜಾರಿಗಳ ಮಗ ಗಣೇಶಭಟ್ಟರು ಎಂದು ಶ್ರೀ ನೀಲಕಂಠಸ್ವಾಮಿ ಮೈಕಿನಿಂದ ಘೋಷಿಸಿದರು. ಆದರೆ ಭೂತರಾಯ ಶ್ರೀ ಗಣೇಶಭಟ್ಟರಮೈಮೇಲೆ ಅವಾಹಿತನಾಗಿ ಹೊಲೆಯರ ಪ್ರವೇಶದಿಂದ ದೇವಸ್ಥಾನ ಮಲಿನವಾಗದಿರಲೆಂದು ಹಿಂದಿನ ರಾತ್ರೆಯೇ ಮಂಜುನಾಥನನ್ನು ಜಲವಾಸಕ್ಕೆ ಒಯ್ದನೆಂದು ಜನ ಭಾವಿಸಿ ಕುಣಿದಾಡಿದರು. ಭಾರತೀಯನ ದೈವಭಕ್ತಿ ಎಷ್ಟು ಗಾಢವಾದ್ದೆಂದರೆ...' ದೈವಭಕ್ತಿ ಅಂತ ಮಾತ್ರ ಮಾತಾಡ್ತಾನೆ ರಾಸ್ಕಲ್, ಆಗ ನಾನೇನು ಹೇಳ್ದೆ ಅನ್ನೋದನ್ನ ವರದಿ ಮಾಡಿದಾನೇನು? ನಾನು ಹೇಳ್ದೆ : ಗೊಡ್ಡು ಪುರಾಣಕ್ಕೆ ಬಲಿಯಾಗಬೇಡಿ. ಜಗನ್ನಾಥರಾಯರು ಮತ್ತು ಗಣೇಶಭಟ್ಟರು – ಇಬ್ಬರೂ ಬಂಡಾಯಗಾರರು. ಈ ಬಂಡಾಯಾನ್ನ ಪುರಾಣ ಮಾಡಿಬಿಡುವ ಅರ್ಚಕ ಮತ್ತು ವರ್ತಕ ವರ್ಗದವರ ಮೋಸ ಒಂದಲ್ಲ ಒಂದು ದಿನ ವ್ಯರ್ಥವಾಗತ್ತೆ. ಭೂತರಾಯ ಮಾಡ್ತಿರೋ ರೈತ ಶೋಷಣೆ ನಿಲ್ಲಲೇಬೇಕಾಗತ್ತೆ. ಇದು ಕ್ರಾಂತಿಯ ಪ್ರಾರಂಭ ಅಷ್ಟೆ – ಅಂತ. ಒಂದಾದರೂ ನನ್ನ ಮಾತನ್ನ ಇವ ವರದಿ ಮಾಡಿದಾನ? ಗುಂಪಲ್ಲಿದ್ದ ಕೆಲವರು ನನ್ನ ಮಾತನ್ನು ಒಪ್ಪಿದರು ಅನ್ನೋಕೆ ಈ ರಂಗರಾವ್ ಸಾಕ್ಷಿ.'

* * *

ಜಗನ್ನಾಥ ಕೆಳಗಿಳಿದು ಬಂದು ಅಂಗಳದಲ್ಲಿ ಅಡ್ಡಾಡಿದ. ಇನ್ನೇನು ಸ್ವಲ್ಪ ಹೊತ್ತಿಗೇ ಮೀಟಿಂಗಿತ್ತು. ಪಿಳ್ಳ, ಅವನ ಸಂಗಡಿಗರು, ಪ್ರಾಯಶಃ ಉಳಿದ ಹೊಲೆಯರೂ ಬಂದಾರು. ಶೋಷಿತ ವರ್ಗದವರೆಲ್ಲರ ಮೀಟಿಂಗಿದೆ ಎಂದು ರಂಗರಾವ್ ಪೇಪರಿಗೆ ಬರೆದು ಕಳಿಸಿದ್ದ. ಹೊಲೆಯರು ಬರುವ ಮೀಟಿಂಗಿಗೆ ರೈತರೂ ಬರಲು ಇನ್ನೆಷ್ಟೋ ಹೆಣಗಬೇಕು.

ಮೇಲೆ ಸ್ನೇಹಿತರು ಬಿರುಸಾಗಿ ಚರ್ಚಿಸುತ್ತಲೇ ಇದ್ದರು. ಇವತ್ತು ಮೀಟಿಂಗಿನಲ್ಲಿ ಸಂಘಟನೆಯ ಬಗ್ಗೆ ಏನೇನು ತೀರ್ಮಾನಿಸಬೇಕೆಂದು ಚಿಂತಿಸುತ್ತ ಜಗನ್ನಾಥ ಮುಖ ತೊಳೆದು ಬರಲು ಬಚ್ಚಲಿಗೆ ಹೋದ. ಮತ್ತೆ ಮಂಜುನಾಥನನ್ನು ಪ್ರತಿಷ್ಠಾಪಿಸಲು ನಡೆಯುತ್ತಿದ್ದ ಸಿದ್ಧತೆಗಳನ್ನು ಅಡಿಗರು ಚಿಕ್ಕಿಗೆ ವಿವರಿಸುತ್ತಿದ್ದರು.

* * *